# ಕರ್ನಾಟಕ ವಿಧಾನಮಂಡಲ

**ಕರ್ನಾಟಕ ಶಾಸಕಾಂಗ ಪತ್ರಿಕೆ**

**(ತ್ರೈಮಾಸಿಕ ಪತ್ರಿಕೆ)**

**ಅಕ್ಟೋಬರ್–ನವೆಂಬರ್–ಡಿಸೆಂಬರ್ 2020**

**ಸಂಚಿಕೆ–II ಸಂಖ್ಯೆ –4**

**ಪ್ರಕಟಣೆ:**

**ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ,**

**ಕರ್ನಾಟಕ ವಿಧಾನ ಸಭೆ ಸಚಿವಾಲಯ, ವಿಧಾನಸೌಧ,**

**ಬೆಂಗಳೂರು – 560 233.**

## ವಿಶೇಷ ಸೂಚನೆ

ಕರ್ನಾಟಕ ಶಾಸಕಾಂಗ ಪತ್ರಿಕೆಯು ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತಿನ ಸದಸ್ಯರುಗಳ ಪರಾಮರ್ಶೆಗಾಗಿ ಪ್ರಕಟಿಸಲಾಗುತ್ತಿದ್ದು, ಇದು ಆಂತರಿಕ ಪ್ರಕಟಣೆಗೆ ಮಾತ್ರ ಸೀಮಿತವಾಗಿರುತ್ತದೆ.

ಈ ಪತ್ರಿಕೆಯಲ್ಲಿ ಅಳವಡಿಸಲಾಗಿರುವ ಮಾಹಿತಿಗಳು ವಿವಿಧ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳ ಆಧಾರಿತವಾಗಿದ್ದು, ಇದರಲ್ಲಿ ನ್ಯೂನತೆ, ವ್ಯತ್ಯಾಸಗಳಿಂದ ಅಥವಾ ನಿಖರತೆಯ ಕೊರತೆಯಿಂದ ಯಾವುದೇ ವ್ಯಕ್ತಿಗೆ ಉಂಟಾಗಬಹುದಾದ ನಷ್ಟ/ಹಾನಿಗೆ ವಿಧಾನ ಸಭಾ ಸಚಿವಾಲಯವು ಯಾವುದೇ ರೀತಿ ಜವಾಬ್ದಾರವಾಗುವುದಿಲ್ಲ.

# ಮುನ್ನುಡಿ

ಕರ್ನಾಟಕ ವಿಧಾನಮಂಡಲದ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ಉಭಯ ಸದನಗಳ ಮಾನ್ಯ ಸದಸ್ಯರುಗಳ ಉಪಯೋಗಕ್ಕಾಗಿ ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪುಟ – II ರ ನಾಲ್ಕನೇ ಸಂಚಿಕೆಯನ್ನು ಪ್ರಕಟಪಡಿಸುತ್ತಿದೆ.

ತ್ರೈಮಾಸಿಕ ಶಾಸಕಾಂಗ ಪತ್ರಿಕೆಯು ಮುಖ್ಯವಾಗಿ ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳ ಶಾಸಕಾಂಗದ ಸುದ್ದಿಗಳು, ಲೋಕಸಭೆ, ರಾಜ್ಯಸಭೆಗಳ, ಸಂಸದೀಯ ವ್ಯವಹಾರಗಳಿಗೆ ಸಂಬಂಧಿಸಿದ ಪ್ರಮುಖ ಸುದ್ದಿಗಳು, ರಾಜ್ಯಗಳ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹಾಗೂ ಇತರೆ ವಿಷಯಗಳನ್ನೊಳಗೊಂಡಿರುತ್ತದೆ.

ಈ ಸಂಚಿಕೆಯಲ್ಲಿ 2020ನೇ ಸಾಲಿನ ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳ ಅವಧಿಯಲ್ಲಿನ ಪ್ರಮುಖ ಸುದ್ದಿ, ಮಾಧ್ಯಮಗಳಲ್ಲಿ ಪ್ರಕಟವಾದ ದೈನಂದಿನ ಸುದ್ದಿಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಸಂಶೋಧನಾ ಮತ್ತು ಉಲ್ಲೇಖನಾ ವಿಭಾಗವು ಸಿದ್ಧಪಡಿಸಿ ಹೊರತರುತ್ತಿರುವ ಈ ಪತ್ರಿಕೆಯ ಗುಣಮಟ್ಟವನ್ನು ಉನ್ನತೀಕರಿಸಲು ಹಾಗೂ ಹೆಚ್ಚು ವಿಷಯಾಸಕ್ತವಾಗಿಸಲು ಇದರ ಬೆಳವಣಿಗೆಯ ಸುಧಾರಣೆಗೆ ಮಾನ್ಯ ಸದಸ್ಯರುಗಳಿಂದ ಅಮೂಲ್ಯ ಸಲಹೆ ಮತ್ತು ಸೂಚನೆಗಳನ್ನು ಬರಹ ರೂಪದಲ್ಲಿ ಸ್ವೀಕರಿಸಲು ಸದಾ ಸ್ವಾಗತವಿರುತ್ತದೆ.

**ಎಂ.ಕೆ.ವಿಶಾಲಾಕ್ಷಿ**
ಕಾರ್ಯದರ್ಶಿ(ಪ್ರ),
ಕರ್ನಾಟಕ ವಿಧಾನ ಸಭೆ.

ಬೆಂಗಳೂರು
ದಿನಾಂಕ: 31–03–2021

# ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪಾದಕ ವರ್ಗ

## ಕರ್ನಾಟಕ ವಿಧಾನ ಸಭೆ ಸಚಿವಾಲಯ

1. ಶ್ರೀಮತಿ ಎಂ.ಕೆ. ವಿಶಾಲಾಕ್ಷಿ : ಕಾರ್ಯದರ್ಶಿ (ಪ್ರ)
2. ಶ್ರೀಮತಿ ಎಂ. ಮಂಜುಳ : ಜಂಟಿ ನಿರ್ದೇಶಕರು
3. ಶ್ರೀಮತಿ ಜಿ. ಮಮತ : ಸಹಾಯಕ ನಿರ್ದೇಶಕರು

## ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

1. ಶ್ರೀಮತಿ ಕೆ. ಆರ್. ಮಹಾಲಕ್ಷ್ಮಿ : ಕಾರ್ಯದರ್ಶಿ
2. ಶ್ರೀಮತಿ ಎಸ್. ನಿರ್ಮಲ : ಜಂಟಿ ಕಾರ್ಯದರ್ಶಿ

# ಕರ್ನಾಟಕ ಶಾಸಕಾಂಗ ಪತ್ರಿಕೆ

## (ತ್ರೈಮಾಸಿಕ ಪತ್ರಿಕೆ)

## ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ 2020

## ಸಂಪುಟ–II ಸಂಚಿಕೆ – 4

## ಪರಿವಿಡಿ


| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| | **ಭಾಗ–1**<br>**ವಿಧಾನ ಮಂಡಲದ ಸುದ್ದಿಗಳು** | |
| 1 | ಮಾತೃ ಭಾಷೆಯಲ್ಲಿ ಶಿಕ್ಷಣ ಸ್ವಾಗತಾರ್ಹ: ಕಾಗೇರಿ | 1 |
| 2 | ಶಿಕ್ಷಕರ ಪಾಲಿನ ಆಪದ್ಬಾಂಧವ ಹೊರಟ್ಟಿ | 1 |
| 3 | ಶಿಕ್ಷಣದಲ್ಲಿ ಹೊರಟ್ಟಿ ಮಹತ್ಸಾಧನೆ | 2 |
| 4 | ವಿಧಾನ ಮಂಡಲ 9 ಸ್ಥಾಯಿ ಸಮಿತಿಗೆ ಅಧ್ಯಕ್ಷ, ಸದಸ್ಯರ ನೇಮಿಸಿ ಸ್ಪೀಕರ್ ಆದೇಶ | 2–3 |
| 5 | ಇಂದಿನಿಂದ ರಾಜ್ಯಸಭೆಗೆ ನಾಮಪತ್ರ ಸಲ್ಲಿಕೆ : ಡಿಸೆಂಬರ್ 1ಕ್ಕೆ ಮತದಾನ | 3 |
| 6 | ಡಿಸೆಂಬರ್ 7 ರಿಂದ 15ರವರೆಗೆ ರಾಜ್ಯ ವಿಧಾನ ಮಂಡಲ ಅಧಿವೇಶನಕ್ಕೆ ನಿರ್ಧಾರ | 3–4 |
| 7 | ರಾಜ್ಯ ಸಭೆಗೆ ನಾರಾಯಣ್ ಅವಿರೋಧ ಆಯ್ಕೆ | 4 |
| 8 | ಮೇಲ್ಮನೆಯಲ್ಲಿ ಬಿಜೆಪಿ ದೊಡ್ಡಪಕ್ಷ | 4–6 |
| 9 | ನೂತನ ಶಾಸಕರ ಪ್ರಮಾಣ ವಚನ | 6 |
| 10 | ನಾಲ್ಕೇ ದಿನಕ್ಕೆ ಅಧಿವೇಶನ ಮೊಟಕು | 7 |
| 11 | ಜಂಟಿ ಸದನ ಸಮಿತಿಯಿಂದ ತನಿಖೆ | 7 |
| 12 | ಕಲಾಪ ಅನಿರ್ದಿಷ್ಟ ಅವಧಿಗೆ ಮುಂದೂಡಿಕೆ | 8 |
| 13 | ಚುನಾವಣೆ ಮುಂದೂಡಲು ಮಸೂದೆ ಅಸ್ತ್ರ | 8–9 |
| 14 | ಬಿಬಿಎಂಪಿ ವಿಧೇಯಕ–2020 ಅಂಗೀಕಾರ | 10 |
| 15 | ಸಾಂವಿಧಾನಿಕ ಮಹತ್ವ ಅರಿಯಲಿ | 11 |
| 16 | ಬಜೆಟ್ ಜೊತೆಯಲ್ಲೇ ಚಳಿಗಾಲ ಅಧಿವೇಶನ | 11 |
| 17 | ಭಾರತದ ಸಂವಿಧಾನ ಜಗತ್ತಿಗೆ ಮಾದರಿ : ಆನಂದ ಮಾಮನಿ | 12 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 18 | ಸಂಸತ್‌ನಲ್ಲಿ ಸಂವಾದವಿರಲಿ, ವಾದಗಳಲ್ಲ | 12 |
| 19 | ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಸಾಮರಸ್ಯ ಅಗತ್ಯ | 12–17 |
| 20 | ಸಂವಿಧಾನದ ಅಂಗಗಳ ನಡುವೆ ಸಮನ್ವಯ ಕೊರತೆ | 18 |
| 21 | ಅಧಿವೇಶನದಲ್ಲಿ 10 ಮಸೂದೆ ಮಂಡನೆ | 18–34 |
| 22 | 15ನೇ ವಿಧಾನಸಭೆಯ 8ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ | 34–35 |
| 23. | 15ನೇ ವಿಧಾನಸಭೆಯ 8ನೇ ಅಧಿವೇಶನದಲ್ಲಿ ಮಂಡಿಸಲಾದ/ಅಂಗೀಕರಿಸಲಾದ ವಿಧೇಯಕಗಳ ಪಟ್ಟಿ | 36–39 |
| 24. | ವಿಧಾನ ಪರಿಷತ್ತಿನ 142ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ | 40–41 |
| 25. | ವಿಧಾನ ಪರಿಷತ್ತಿನ 142ನೇ ಅಧಿವೇಶನದಲ್ಲಿ ಮಂಡಿಸಲಾದ/ಅಂಗೀಕರಿಸಲಾದ ವಿಧೇಯಕಗಳ ಪಟ್ಟಿ | 42–45 |
| | **ಭಾಗ–2**<br>**ಕೇಂದ್ರ ಸರ್ಕಾರದ ಸುದ್ದಿಗಳು** | |
| 1. | ಸೂರು ಹೊಂದಲು ಹಲವು ದಾರಿ | 46–47 |
| 2. | ಬೆಂಬಲ ಬೆಲೆ ವ್ಯವಸ್ಥೆ ರದ್ದಾಗದು | 47 |
| 3. | ಅಟಲ್ ಸುರಂಗ ಲೋಕಾರ್ಪಣೆ, ಸುಲಲಿತ ಸೇನೆ ಸಾಗಣೆ | 48–49 |
| 4. | ಶಾಲೆ ಆರಂಭಕ್ಕೆ ಹತ್ತು ಸೂತ್ರ ರೂಪಿಸಿದ ಕೇಂದ್ರ ಸರ್ಕಾರ | 49–50 |
| 5. | ಜಿ.ಎಸ್.ಟಿ. ಪರಿಹಾರ ಒಮ್ಮತವಿಲ್ಲ | 50–51 |
| 6. | ಪರಿಸರ ಸ್ನೇಹಿ ವಾಹನಗಳಿಗೆ ಉತ್ತೇಜನ, ಕೇಂದ್ರ ಸರ್ಕಾರದಿಂದ ರಾಜ್ಯಗಳಿಗೆ ನಿರ್ದೇಶನ | 51 |
| 7. | ಉಪನಗರ ರೈಲು ಯೋಜನೆಗೆ ಕೇಂದ್ರ ಒಪ್ಪಿಗೆ | 52–53 |
| 8. | ನರೇಂದ್ರ ಮೋದಿ ಆಡಳಿತಕ್ಕೆ 20ರ ಹರೆಯ | 53–54 |
| 9. | ಕೋವಿಡ್ ವಿರುದ್ಧ ಭಾರತದಲ್ಲಿ ಜನಾಂದೋಲನ : ಪ್ರಧಾನಿ ಮೋದಿ | 54 |
| 10. | ಎಲ್‌ಟಿಸಿ ಬದಲು ನಗದು ವೋಚರ್, ಕೇಂದ್ರದಿಂದ ನೌಕರರಿಗೆ ಹಬ್ಬದ ಬೋನಸ್ | 54–55 |
| 11. | ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರ ಇನ್ನೂ ಕಗ್ಗಂಟು | 55–56 |
| 12. | ರೂ.50ಗೆ ಎಟಿಎಂ ಕಾರ್ಡ್ ರೀತಿಯ ಆಧಾರ್ ಕಾರ್ಡ್ | 56–57 |
| 13. | ಆರ್ಥಿಕತೆಗೆ ಮಿನಿ ಟಾನಿಕ್ | 57–58 |
| 14. | ಜಿಎಸ್‌ಟಿ : ಕೇಂದ್ರದಿಂದ ಸಾಲ | 58 |
| 15. | ಜನೌಷಧಿ ರಫ್ತಿನಲ್ಲಿ ಭಾರತಕ್ಕೆ ಅಗ್ರಸ್ಥಾನ | 58–59 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 16. | ಕಾರ್ಗಿಲ್ : ಝೋಜಿಲಾ ಸುರಂಗ ನಿರ್ಮಾಣಕ್ಕೆ ನಿತಿನ್ ಗಡ್ಕರಿ ಚಾಲನೆ | 58–59 |
| 17. | ಮದುವೆ ಕನಿಷ್ಠ ವಯಸ್ಸು ಪರಿಷ್ಕರಣೆ | 59–60 |
| 18. | ಕೌಶಲ ವೃದ್ಧಿಗೆ ಶಿಕ್ಷಣ ನೀತಿ ಆದ್ಯತೆ : ಪಿ.ಎಂ. | 60–61 |
| 19. | ಪ್ರಧಾನಿ ನರೇಂದ್ರ ಮೋದಿ ಆಶಯ/ಮೈಸೂರು ವಿಶ್ವವಿದ್ಯಾಲಯ 100ನೇ ವಾರ್ಷಿಕ ಘಟಿಕೋತ್ಸವ | 61–62 |
| 20. | ಬೋನಸ್ ಹಬ್ಬ | 62–63 |
| 21. | ಜನ್‌ಧನ್‌ಗೆ ಜೈ ಎಂದ ಜನಸಾಮಾನ್ಯ | 63 |
| 22. | ಇನ್ನೂ ಪ್ರಾದೇಶಿಕ ಭಾಷೆಗಳಲ್ಲೂ ಜೆಇಇ ಮೈನ್ | 64 |
| 23. | ಕೇಂದ್ರದಿಂದಲೇ ಉಚಿತ ಲಸಿಕೆ | 64–66 |
| 24. | 2022ಕ್ಕೆ ಸಿದ್ಧಗೊಳ್ಳಲಿದೆ ಹೊಸ ಸಂಸತ್ ಭವನ | 66 |
| 25. | ಚಕ್ರಬಡ್ಡಿ ಮನ್ನಾ ಸಿಹಿ | 66–68 |
| 26. | ಎಲ್ಲರಿಗೂ ಉಚಿತ ಲಸಿಕೆ | 68–69 |
| 27. | ಎನ್‌ಜಿಓ ಗಳಿಗೆ ಕೇಂದ್ರ ಅಂಕುಶ | 69–70 |
| 28. | ಅಣೆಕಟ್ಟು ನಿರ್ವಹಣೆಗೆ ರೂ.10 ಸಾವಿರ ಕೋಟಿ | 70 |
| 29. | ದಿಲ್ಲಿ : ವಾಯುಮಾಲಿನ್ಯ ಮಾಡಿದ್ರೆ 5 ವರ್ಷ ಜೈಲು, 1 ಕೋಟಿ ದಂಡ | 71 |
| 30. | ಸಾಮಾಜಿಕ ತಾಣಗಳ ಮೇಲೆ ನಿಗಾ ಇಡಿ ರಾಜ್ಯ ಸರ್ಕಾರಗಳಿಗೆ ಕೇಂದ್ರದ ಸೂಚನೆ | 71–72 |
| 31. | ಕೃಷಿ, ಟ್ರ್ಯಾಕ್ಟರ್ ಸಾಲಕ್ಕೆ ಚಕ್ರ ಬಡ್ಡಿ ಮನ್ನಾ ಇಲ್ಲ : ಕೇಂದ್ರ | 72 |
| 32. | ಎಲ್ಲ ಉದ್ಯೋಗಿಗಳಿಗೂ ಎಲ್‌ಟಿಸಿ ನಗದು | 73 |
| 33. | ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಹೊಸ ನಿಯಮ | 73–74 |
| 34. | ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆಯಲು ಕೇಂದ್ರದ ಕ್ರಮ | 74–75 |
| 35. | ದೇಶದ ಮೊದಲ ಸೀಪ್ಲೇನ್‌ಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ | 75–76 |
| 36. | 4 ತಿಂಗಳಿಲ್ಲಿ ರಾಜ್ಯದಲ್ಲಿ 1000 ಜನೌಷಧಿ ಕೇಂದ್ರ | 76–77 |
| 37. | ಇಸ್ರೋದಿಂದ 10 ಉಪಗ್ರಹ ಉಡಾವಣೆ | 77–78 |
| 38. | ಹಡಗು ಸಚಿವಾಲಯಕ್ಕೆ ಹೊಸ ಹೆಸರು | 78 |
| 39. | ಉತ್ಪಾದನೆ ಪ್ರೋತ್ಸಾಹಕ್ಕೆ ರೂ.2 ಲಕ್ಷ ಕೋಟಿ | 78–79 |
| 40. | ಜಾಲತಾಣ, ಒಟಿಟಿಗಳಿಗೆ ಕೇಂದ್ರದ ಮೂಗುದಾರ | 79 |
| 41. | ದೀಪಾವಳಿಗೆ ಆರ್ಥಿಕ ಉಡುಗೊರೆ | 79–80 |
| 42. | ಆಸಿಯಾನ್:ಸಂಪರ್ಕವೃದ್ಧಿಗೆ ಆದ್ಯತೆ | 81 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 43. | ದೀಪಾವಳಿಗೆ ನಿರ್ಮಲಾ ಸೀತಾರಾಮನ್ ಪ್ಯಾಕೇಜ್ | 81–83 |
| 44. | ಆಯುರ್ವೇದ ದಿನಾಚರಣೆ ಸಂದರ್ಭ ವಿಶ್ವಾರೋಗ್ಯ ಸಂಸ್ಥೆ ಘೋಷಣೆ | 83–84 |
| 45. | ಯೋಧರ ಜೊತೆ ದೀಪಾವಳಿ ಆಚರಿಸಿದ ಮೋದಿ | 84–85 |
| 46. | 'ವರ್ಕ್ ಫ್ರಂ ಎನಿವೇರ್' ಗೆ ಶೀಘ್ರವೇ ಅವಕಾಶ | 85–86 |
| 47. | ಸೈಬರ್ ದಾಳಿಯಿಂದ ದೇಶ ರಕ್ಷಿಸುವ ಯೋಧರು ಬೇಕು | 86–88 |
| 48. | 58 ಬಗೆಯ ಶಸ್ತ್ರಚಿಕಿತ್ಸೆ ನಡೆಸಲಷ್ಟೆ ಅನುಮತಿ | 88 |
| 49. | ಪ್ಯಾರಿಸ್ ಒಪ್ಪಂದದ ಗುರಿ ಮೀರಿ ಭಾರತ ಸಾಧನೆ | 88–89 |
| 50. | ಸಂಸದರ ಫ್ಲಾಟ್‌ಗೆ ಮೋದಿ ಚಾಲನೆ | 89–90 |
| 51. | ರಾತ್ರಿ ಕರ್ಫ್ಯೂ ಹೇರಲು ರಾಜ್ಯಗಳಿಗೆ ಅಧಿಕಾರ | 90 |
| 52. | ಒಂದು ದೇಶ ಒಂದು ಚುನಾವಣೆ | 90–91 |
| 53. | ದೆಹಲಿ ಗಡಿಯಲ್ಲೇ ರೈತರ ಹೋರಾಟ | 91–92 |
| 54. | ವ್ಯಾಕ್ಸಿನ್ ಹಬ್‌ನಲ್ಲಿ ಮೋದಿ | 92–93 |
| 55. | ಪ್ರತಿಯೊಬ್ಬ ಭಾರತೀಯರಿಗೂ ಕೊರೋನಾ ಲಸಿಕೆ | 93–94 |
| 56. | ರೈತರ ಜೊತೆಗಿನ ಸಂಧಾನ ವಿಫಲ | 94 |
| 57. | ಶೀಘ್ರವೇ ಕೋವಿಡ್ ಲಸಿಕೆ ಲಭ್ಯ | 94–96 |
| 58. | 3 ವರ್ಷದಲ್ಲಿ ಗ್ರಾಮಗಳಲ್ಲೂ ಸ್ಪೀಡ್ ನೆಟ್ | 96–97 |
| 59. | ಪಿಎಂ ಉಚಿತ ವೈಫೈ ಯೋಜನೆಗೆ ಆಸ್ತು | 97 |
| 60. | ಸಂಸತ್ ದಾಳಿಗೆ 19 ವರ್ಷಪೂರ್ಣ | 97–98 |
| 61. | ಬೆಂಗಳೂರು ಅಂಚೆ ಇಲಾಖೆ ಮತ್ತಷ್ಟು ಹೈಟೆಕ್ | 98 |
| 62. | ಸಂಸತ್ತಿನ ಚಳಿಗಾಲದ ಅಧಿವೇಶನ ರದ್ದು | 98–99 |
| 63. | ಮುಸ್ಲಿಂ ವಿವಿ ಶತಮಾನೋತ್ಸವ ಕಾರ್ಯಕ್ರಮಕ್ಕೆ ಮೋದಿ | 99 |
| 64. | ಕೃಷಿ ಕಾಯ್ದೆಗಳಿಂದ ರೈತರಿಗೆ ಲಾಭ: ಮೋದಿ | 99–100 |
| 65. | ರೈತರಿಗೆ ನಮೋ | 100–101 |
| 66. | ದಯವಿಟ್ಟು ಮಾತುಕತೆಗೆ ಬನ್ನಿ ಕೈ ಮುಗಿದ ಮೋದಿ | 101–102 |
| 67. | ವಿದ್ಯುತ್ ಗ್ರಾಹಕರ ಹಕ್ಕು ರಕ್ಷಣೆಗೆ ಕೇಂದ್ರ ಸರ್ಕಾರದ ನಿಯಮ | 102–103 |
| 68. | ಪ್ರಧಾನಿ ಮೋದಿಗೆ ಅಮೇರಿಕದ ಅತ್ಯುನ್ನತ ಪ್ರಶಸ್ತಿ | 103 |
| 69. | ಎಸ್ಸಿ ವಿದ್ಯಾರ್ಥಿಗಳಿಗೆ ಬಂಪರ್ | 104 |
| 70. | ಎಸ್.ಸಿ. ವಿದ್ಯಾರ್ಥಿ ವೇತನಕ್ಕೆ ರೂ.59,000 ಕೋಟಿ | 104–105 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 71. | 9 ಕೋಟಿ ರೈತರ ಖಾತೆಗೆ ಹಣ | 105–106 |
| 72. | ಆತ್ಮನಿರ್ಭರಕ್ಕೆ ಟಾಗೋರ್ ದೂರದೃಷ್ಟಿ ಸ್ಫೂರ್ತಿ : ಪ್ರಧಾನಿ | 106 |
| 73. | ಸಂಪರ್ಕ ಸೂಪರ್ ಫಾಸ್ಟ್ | 106–107 |
| 74. | ಸಂಧಾನಕ್ಕೆ ರೈತರ ಸಮ್ಮತಿ | 107–108 |
| 75. | ಸರ್ಕಾರಿ ನೌಕರಿಗೆ ಆನ್‌ಲೈನ್ ಪರೀಕ್ಷೆ | 108 |
| 76. | ಚಾಲಕರಹಿತ ಮೆಟ್ರೋ ರೈಲು | 108–109 |
| 77. | ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತ ದಾಪುಗಾಲು | 109 |
| 78. | ತುಮಕೂರು ಕೈಗಾರಿಕಾ ಕಾರಿಡಾರ್‌ಗೆ ಕೇಂದ್ರ ಒಪ್ಪಿಗೆ | 110 |
| | **ಭಾಗ–3** | |
| | **ರಾಜ್ಯ ಸರ್ಕಾರದ ಸುದ್ದಿಗಳು** | |
| 1. | ರಸ್ತೆಗಳ ಅಭಿವೃದ್ಧಿ ನಕ್ಷೆಯಲ್ಲಿ ಪ್ರತ್ಯೇಕ ಬಣ್ಣ | 111 |
| 2. | ಸರ್ಕಾರದಿಂದ ಮೌಲಾನಾ ಆಜಾದ್ ಟ್ರಸ್ಟ್ ರಚನೆ | 111–112 |
| 3. | ಅಕ್ಟೋಬರ್ 5ಕ್ಕೆ ಪಾಲಿಕೆ ಬಜೆಟ್ ಪರಿಷ್ಕರಣೆ ಸಭೆ | 112 |
| 4. | ವಿಧೇಯಕಗಳಿಗೆ ಸುಗ್ರೀವಾಜ್ಞೆ ದಾರಿ | 113 |
| 5. | ಉಪನ್ಯಾಸಕರ ವರ್ಗಾವಣೆ ನಿಯಮಕ್ಕೆ ಒಪ್ಪಿಗೆ | 113–114 |
| 6. | ಮಾಸ್ಕ್ ಹಾಕದಿದ್ರೆ ಬೀಳುತ್ತೆ ಕ್ರಿಮಿನಲ್ ಕೇಸ್ | 114 |
| 7. | ಬೇಕಾಬಿಟ್ಟಿ ಕಸ ವಿಲೇವಾರಿ ಮೇಲೆ ಮಾರ್ಷಲ್ ಗಸ್ತು ಪಡೆ ನಿಗಾ | 114–115 |
| 8. | ಶಾಲೆ ಅಥವಾ ಆನ್‌ಲೈನ್ ಆಯ್ಕೆ ನಿಮ್ಮದೇ | 115 |
| 9. | ಡಿಸೆಂಬರ್‌ಗೆ ಬರಲಿದೆ ಕಾವೇರಿ ನೀರು | 115 |
| 10. | ವಾರ್ಡ್ ಸಂಖ್ಯೆ 250ಕ್ಕೆ ಹೆಚ್ಚಳಕ್ಕೆ ಅಧಿಸೂಚನೆ | 116 |
| 11. | ಶಾಲಾರಂಭಕ್ಕೆ ಮಾರ್ಗಸೂಚಿ | 117 |
| 12. | ಶಾಲಾರಂಭ ಅಧ್ಯಯನಕ್ಕೆ ತಜ್ಞರ ಸಮಿತಿ | 117–118 |
| 13. | ಸುರಕ್ಷತೆಯಲ್ಲಿ ಏರೋ ಇಂಡಿಯಾ ನಡೆಸಲು ಕ್ರಮ | 118 |
| 14. | ಅನ್‌ಲೈನ್‌ನಲ್ಲಿ ಮಾತ್ರ ಪಾಲಿಕೆ ಸೇವೆಗಳು ಲಭ್ಯ | 118–119 |
| 15. | ಹೈಡೆನ್ಸಿಟಿ ಕಾರಿಡಾರ್ ಹೊಣೆ ಬಿಬಿಎಂಪಿಗೆ ವಹಿಸಿ | 119 |
| 16. | ರಸ್ತೆಗುಂಡಿ ಮಾಹಿತಿಗೆ ಪ್ರತ್ಯೇಕ ವೆಬ್ ಆ್ಯಪ್ ಅಭಿವೃದ್ಧಿಗೆ ಸೂಚನೆ | 120 |
| 17. | ಸ್ವಯಂ ಮೌಲ್ಯ ಮಾಪನ ಆಸ್ತಿಗಳ ಪರಿಶೀಲನೆಗೆ ಒತ್ತು | 120–121 |
| 18. | ಬಿಡದಿಯಲ್ಲಿ ತ್ಯಾಜ್ಯ ವಿದ್ಯುತ್ ಯೋಜನೆ | 121 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 19. | ಅನಾಮಧೇಯ ಪತ್ರದ ಆಧಾರದಲ್ಲಿ ತನಿಖೆಯಿಲ್ಲ | 121–122 |
| 20. | ರಾಜ್ಯಕ್ಕೆ ಬರಲಿದೆ ಪಡಿತರ ಎಟಿಎಂ | 122–123 |
| 21. | ವಾರ್ಡ್ ಪುನರ್ ವಿಂಗಡಣೆಗೆ ಸಮಿತಿ | 123 |
| 22. | ನಷ್ಟದ ಅಂದಾಜು ಶೀಘ್ರ | 123–124 |
| 23. | ಅನುಮತಿ ಪಡೆಯದೆ ರಸ್ತೆ ಅಗೆದರೆ ರೂ.25 ಲಕ್ಷ ದಂಡ | 124 |
| 24. | ಜನಪ್ರತಿನಿಧಿಗಳಿಂದ ಸರ್ಕಾರಿ ಶಾಲೆಗಳ ದತ್ತು | 124–125 |
| 25. | ಅಡುಗೆ ಅನಿಲ ಪಡೆಯಲು ಒಟಿಪಿ ಕಡ್ಡಾಯ | 125 |
| 26. | 500 ಸರ್ಕಾರಿ ಹೈಸ್ಕೂಲ್ ಮೇಲ್ದರ್ಜೆಗೆ | 125–126 |
| 27. | ಮನೆ ನಿರ್ಮಾಣಕ್ಕೆ ರೂ.5 ಲಕ್ಷ ಘೋಷಣೆ | 126 |
| 28. | 37 ರೈಲುಗಳು ಇನ್ನು 'ಎಕ್ಸ್‌ಪ್ರೆಸ್' | 127–128 |
| 29. | ಗ್ರಂಥಾಲಯಕ್ಕೆ ಚೇಂಜ್ ಮೇಕರ್ಸ್ ಕೊಡುಗೆ | 128 |
| 30. | ಬ್ಲೇಡ್ ಕಂಪನಿಗಳಿಗೆ ಕಡಿವಾಣ | 128–129 |
| 31. | ಒಣ ಕಸ ಸಂಗ್ರಹಕ್ಕೆ 18 ವಾಹನ | 129 |
| 32. | ಆರೋಗ್ಯ ಕಾರ್ಯಕರ್ತರಿಗೆ ಮೊದಲ ಲಸಿಕೆ | 130 |
| 33. | ನಗರದ 50 ಸ್ಥಳಗಳಲ್ಲಿ ಕಸ ಟ್ರಾನ್ಸ್‌ಫರ್ ಸ್ಟೇಷನ್‌ಗಳ ಸ್ಥಾಪನೆ | 130–131 |
| 34. | ಮಳೆ ಪ್ರದೇಶದಲ್ಲಿ ಸಿಎಂ ಸಿಟಿ ರೌಂಡ್ಸ್ | 131 |
| 35. | ಟಿಇಟಿ ಪ್ರಮಾಣ ಸಿಂಧುತ್ವ ಜೀವಿತಾವಧಿ | 131–132 |
| 36. | 584 ಎಕರೆ ಕೆರೆ ಅಂಗಳ ಭೂಗಳ್ಳರ ಪಾಲು | 132–133 |
| 37. | ಸರಳ ಜಂಬೂಸವಾರಿ | 134 |
| 38. | ಸರ್ಕಾರಿ ನೌಕರರ ಕುಟುಂಬದವರಿಗೆ ನಿರ್ಬಂಧ | 134–135 |
| 39. | ಆನ್‌ಲೈನ್ ಕ್ಲಾಸ್ ಅವಧಿಗೆ ಮಿತಿ | 135–136 |
| 40. | ಕೊರೋನಾ ಹತೋಟಿಗೆ ನವಸೂತ್ರ | 136–137 |
| 41. | ಸೋಂಕಿತರಿಗೂ ಮತದಾನದ ಅವಕಾಶ | 137–138 |
| 42. | ಇಂದಿನಿಂದ ಶಾಲೆಗೆ ಶಿಕ್ಷಕರ ಹಾಜರಿ ಕಡ್ಡಾಯ | 138–139 |
| 43. | ಇನ್ನು ಹೆಣ್ಣುಮಕ್ಕಳಿಗೂ ರಾತ್ರಿ ಪಾಳಿ ಅವಕಾಶ | 139 |
| 44. | ಸಿದ್ಧವಾಗಿದೆ ರೂ.289 ಕೋಟಿ ವೆಚ್ಚದ ಕಾರ್ಯಯೋಜನೆ | 140 |
| 45. | ಶಿಕ್ಷಣ ಆಯೋಗದ ಸ್ಥಾಪನೆಗೆ ಸಲಹೆ 46 | 141 |
| 46. | ಕಾಲೇಜುಗಳ ಆರಂಭಕ್ಕೆ ಮಾರ್ಗಸೂಚಿ | 141–142 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 47. | ಕಸ್ತೂರಿರಂಗನ್ ವರದಿ ಅಧ್ಯಯನಕ್ಕೆ ಸಮಿತಿ | 142–143 |
| 48. | ಇನ್ನು ಸಂಸದೀಯ ಕಾರ್ಯದರ್ಶಿ ಹುದ್ದೆ ಇಲ್ಲ | 143–145 |
| 49. | ರೂ.3,500 ಕೋಟಿ ವೆಚ್ಚಕ್ಕೆ ಅಸ್ತು | 145–146 |
| 50. | ವಿಶ್ವದಲ್ಲೇ ಮೊದಲ ಬಾರಿಗೆ 'ವರ್ಚುವಲ್' ಶೃಂಗಸಭೆ | 146–147 |
| 51. | ಮನೆಯಿಂದಲೇ ಖಾತಾ ನೋಂದಾಯಿಸಿ | 147–148 |
| 52. | ದ್ವಿತೀಯ ಸ್ತರದ ನಗರಗಳ ಐಟಿ ಕಂಪನಿಗಳಿಗೆ ಹೇರಳ ರಿಯಾಯಿತಿ | 148–149 |
| 53. | ವರ್ಚುವಲ್ ಕೃಷಿ ಮೇಳ ಯಶಸ್ವಿ | 149–150 |
| 54. | 31ನೇ ಜಿಲ್ಲೆಗೆ ವಿಜಯ | 150–151 |
| 55. | ಕರ್ನಾಟಕ–ಫಿನ್ಲೆಂಡ್ 2 ಮಹತ್ವದ ಒಪ್ಪಂದ | 151 |
| 56. | ಜೈವಿಕ ಆರ್ಥಿಕತೆ ರೂ.5 ಸಾವಿರ ಕೋಟಿ ಡಾಲರ್ ಗುರಿ | 151–152 |
| 57. | ಕೊರೋನಾ ಲಸಿಕೆಗೆ ಕೇಂದ್ರದಿಂದ ಒಪ್ಪಂದ | 152–153 |
| 58. | ರಾಜ್ಯದಲ್ಲಿ ಸ್ಮಾರ್ಟ್ ಪ್ರೊಡಕ್ಷನ್ ಉತ್ಕೃಷ್ಟತಾ ಕೇಂದ್ರ ಸ್ಥಾಪನೆ | 153 |
| 59. | ಕೃಷಿ ಉತ್ಪನ್ನ ಹೆಚ್ಚಿಸಲು ಬಿಟಿ ಅಗತ್ಯ | 153–154 |
| 60. | ಕಸ ಎತ್ತೋಕೆ ಕಾಸು ಫಿಕ್ಸ್ ಮಾಡಿದ ಬಿಬಿಎಂಪಿ | 154 |
| 61. | 20ಕ್ಕೂ ಹೆಚ್ಚು ನಿಗಮ ಮಂಡಳಿಗಳಿಗೆ ನೇಮಕ | 154–155 |
| 62. | ಸರ್ಕಾರಿ ಶಾಲಾ ದತ್ತು ಪರಿಕಲ್ಪನೆ ದೇಶಕ್ಕೆ ಪ್ರೇರಣೆ | 155–156 |
| 63. | ಪೀಣ್ಯ ಕೈಗಾರಿಕಾ ಪ್ರದೇಶ ಅಭಿವೃದ್ಧಿ | 156–157 |
| 64. | ಭಾಗ್ಯಲಕ್ಷ್ಮಿ ಯೋಜನೆಗೆ ಸರ್ಟಿಫಿಕೇಟ್ ಕಡ್ಡಾಯವಲ್ಲ | 157–158 |
| 65. | ರೂ.2.45 ಕೋಟಿ ನೆರವು ನೀಡಿದ ಮುಖ್ಯಮಂತ್ರಿ | 158–159 |
| 66. | ಕಂಡಲ್ಲಿ ಕಸ ಎಸೆದರೆ ಜೋಕೆ | 159 |
| 67. | ಬಿಬಿಎಂಪಿ ವ್ಯಾಪ್ತಿ 1.ಕಿ.ಮೀ. ಹೆಚ್ಚಳ | 159–161 |
| 68. | ಬಿಬಿಎಂಪಿ ವಿಧೇಯಕಕ್ಕೆ ಸದನ ಒಪ್ಪಿಗೆ | 161–162 |
| | **ಭಾಗ–4** | |
| | **ರಾಜ್ಯ ನೆಲ–ಜಲ–ಭಾಷೆ** | |
| 1. | ಕಾಸರಗೋಡಿನ ಇಕೋ ಬೀಚ್‌ಗೆ ಅಂತರರಾಷ್ಟ್ರೀಯ ಬ್ಲ್ಯೂ ಫ್ಲಾಗ್ ಮಾನ್ಯತೆ | 163 |
| 2. | 19 ಜಿಲ್ಲೆಗಳಿಗೆ ನೆರೆಘಾತ | 163–164 |
| 3. | ಉತ್ತಮ ಆಳ್ವಿಕೆ ರಾಜ್ಯ ಕರ್ನಾಟಕ ನಂ.4 | 164 |
| 4. | ವಿಶ್ವದ ನಂ.1 ಪಟ್ಟಕ್ಕೇರಿದ ಕರ್ನಾಟಕ ಡಿಜಿಟಲ್ ಲೈಬ್ರರಿ | 164–166 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 5. | ಸರಳ ರಾಜ್ಯೋತ್ಸವಕ್ಕೆ ಕನ್ನಡ ಕಂಪು | 166–167 |
| 6. | ರಾಜ್ಯಾದ್ಯಂತ ಸಂಭ್ರಮದ 65ನೇ ರಾಜ್ಯೋತ್ಸವ | 167–168 |
| 7. | 'ಕುವೆಂಪು ಸಮಗ್ರ' ಸಾಹಿತ್ಯ ಸರಣಿ, ಡಿಜಿಟಲ್ ಆವೃತ್ತಿ ಬಿಡುಗಡೆ | 168 |
| 8. | ಕನ್ನಡ ಕಾಯಕ ಲಾಂಛನ ಬಿಡುಗಡೆ | 169 |
| 9. | ಕನ್ನಡ ಕಲಿಸಿ, ಇಲ್ಲ ಬಿಡುಗಡೆಗೊಳಿಸಿ | 169–170 |
| 10. | ಕನ್ನಡ ವರ್ಷ: 19 ಅಂಶ ಜಾರಿ ಕಡ್ಡಾಯ | 170–171 |
| 11. | ರಾಜ್ಯದ ಮಕ್ಕಳ ಬೆನ್ನತ್ತಿದೆ ಅಪೌಷ್ಟಿಕತೆ ಭೂತ | 171–172 |
| | **ಭಾಗ–5** | |
| | **ಚುನಾವಣಾ ಸುದ್ಧಿಗಳು** | |
| 1. | ಆನ್‌ಲೈನ್‌ನಲ್ಲಿ ನಾಮಪತ್ರ ಸಲ್ಲಿಕೆ | 173–174 |
| 2. | ವಿಧಾನ ಪರಿಷತ್ 4 ಸ್ಥಾನಗಳ ಚುನಾವಣೆಗೆ ಅಧಿಸೂಚನೆ ಪ್ರಕಟ | 174 |
| 3. | ಚುನಾವಣಾ ದೂರನ್ನು 24 ತಾಸಲ್ಲಿ ತನಿಖೆ ನಡೆಸಿ | 174–175 |
| 4. | ಶಿಕ್ಷಕರ ಕ್ಷೇತ್ರಕ್ಕೆ ಪ್ರವೀಣಕುಮಾರ್ ಉಮೇದುವಾರಿಕೆ | 175 |
| 5. | ಚುನಾವಣೆ ಸಭೆಗೆ ಅನುಮತಿ | 175–176 |
| 6. | ಚುನಾವಣಾ ಆಯೋಗದ ಸಮ್ಮತಿ | 176 |
| 7. | ಉಪ ಕದನಕ್ಕೆ ಕಂಕಣ | 176–177 |
| 8. | ಉಪ ಚುನಾವಣೆ : ಕೊರೋನಾ ಮಾರ್ಗಸೂಚಿ ಪ್ರಕಟ | 177–178 |
| 9. | ಇಂದು ಪರಿಷತ್ 4 ಕ್ಷೇತ್ರಗಳಿಗೆ ಚುನಾವಣೆ | 178–179 |
| 10. | ಪರಿಷತ್ 4 ಸ್ಥಾನಗಳಿಗೆ ಇಂದು ಮತದಾನ | 179 |
| 11. | ವಿಧಾನ ಪರಿಷತ್ತಿನ ನಾಲ್ಕು ಕ್ಷೇತ್ರಗಳಲ್ಲಿ ವೋಟಿಂಗ್ | 179–180 |
| 12. | ಸೋಂಕಿತರಿಗೂ ಮತದಾನಕ್ಕೆ ಅವಕಾಶ | 180–181 |
| 13. | ಡಿಸೆಂಬರ್ 22, 27ಕ್ಕೆ ಹಳ್ಳಿ ಫೈಟ್ | 181–182 |
| 14. | ಚುನಾವಣಾ ಸಿಬ್ಬಂದಿಗೆ ಸಂಭಾವನೆ ಹೆಚ್ಚಳ | 182 |
| 15. | ಯಾರು ಸ್ಪರ್ಧಿಸಬಹುದು | 183 |
| 16. | ಗ್ರಾಮ ಪಂಚಾಯಿತಿ ಸಮರಕ್ಕೆ ಇಂದಿನಿಂದಲೇ ನಾಮಪತ್ರ | 184 |
| 17. | ಮತದಾನ ವೇತನ ಸಹಿತ ರಜೆ | 184 |
| 18. | 4,377 ಮಂದಿ ಅವಿರೋಧ ಆಯ್ಕೆ | 184–186 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 19. | ಏಕದೇಶ, ಏಕಚುನಾವಣೆಗೆ ಸಿದ್ಧ : ಚುನಾವಣಾ ಆಯೋಗ | 186 |
| | **ಭಾಗ–6**<br>**ಸರ್ವೋಚ್ಚ / ಉಚ್ಚ ನ್ಯಾಯಾಲಯದ ಸುದ್ದಿಗಳು** | |
| 1. | ಬಾಬ್ರಿ ಮಸೀದಿ ಧ್ವಂಸ ಪ್ರಕರಣದ ಸುದೀರ್ಘ ಇತಿಹಾಸಕ್ಕೆ ತೆರೆ | 187–189 |
| 2. | ಪ್ರಾದೇಶಿಕ ಕಚೇರಿಗಳ ಪುನರ್ ರಚನೆಗೆ ಆಕ್ಷೇಪ | 189–190 |
| 3. | 6 ತಿಂಗಳ ಬಡ್ಡಿ ಮನ್ನಾಕ್ಕೆ ಸಿದ್ಧ : ಸುಪ್ರೀಂಕೋರ್ಟ್ | 190 |
| 4. | ಇಎಂಐ ಮುಂದೂಡಿಕೆ ಪಡೆದವರಿಗೆ ಚಕ್ರಬಡ್ಡಿ ಇಲ್ಲ | 191 |
| 5. | ಅಪಘಾತವಾದರೆ ವಿಮೆ ಕಂಪನಿಯೇ ಪರಿಹಾರ ಭರಿಸಬೇಕು : ಹೈಕೋರ್ಟ್ | 192 |
| 6. | ತೃತೀಯ ಲಿಂಗಿಗಳಿಗೆ ಒಬಿಸಿ ಮೀಸಲು : ಸರ್ಕಾರ ಚಿಂತನೆ | 192 |
| 7. | ಜನ ಪ್ರತಿನಿಧಿಗಳ ವಿಚಾರಣೆಗೆ ಹೆಚ್ಚಿನ ಕೋರ್ಟ್ ಸ್ಥಾಪಿಸಿ | 192–193 |
| 8. | ಮಾತೃ ಭಾಷೆಯಲ್ಲೇ ಶಿಕ್ಷಣ : ಸುಪ್ರೀಂ | 193 |
| 9. | ನ್ಯಾಯಾಧೀಶರ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದು | 193–194 |
| 10. | ತೆಲಂಗಾಣದಿಂದ ಕರ್ನಾಟಕಕ್ಕೆ ಕೃಷ್ಣಾಘಾತ | 194–195 |
| 11. | ಅಭಿವ್ಯಕ್ತಿ ಸ್ವಾತಂತ್ರ್ಯದ ದುರುಪಯೋಗ : ಬೇಸರ ಹೊರಹಾಕಿದ ಸುಪ್ರೀಂ | 195 |
| 12. | ಅಪಘಾತ ಪುನರ್ ಸೃಷ್ಟಿಸಿ ಐತಿಹಾಸಿಕ ತೀರ್ಪು | 195–196 |
| 13. | ನ್ಯಾಯಾಂಗ – ಶಾಸಕಾಂಗ ಸಮರ ಮತ್ತೊಂದು ಹಂತಕ್ಕೆ | 196–197 |
| 14. | ಜಾಹೀರಾತು ತೆರಿಗೆ ಬಿಬಿಎಂಪಿಗೆ ವರ್ಗಾಯಿಸಲು ಆದೇಶ | 197 |
| 15. | ವರ್ಷದಲ್ಲಿ 46 ಸುಪ್ರೀಂಕೋರ್ಟ್ ತೀರ್ಪು ಕನ್ನಡಕ್ಕೆ ತರ್ಜುಮೆ | 198 |
| 16. | ಮಾಸ್ಕ್ ಧರಿಸದಿದ್ದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಿ : ಹೈಕೋರ್ಟ್ | 198 |
| 17. | ಪುರಸಭೆ, ಪ.ಪಂ. ಮೀಸಲು ಪಟ್ಟಿಗೆ ಹೈಕೋರ್ಟ್ ಅಸ್ತು | 198–199 |
| 18. | ಮಾಸ್ಕ್ : ವಿಶೇಷ ತಂಡ ರಚನೆಗೆ ನಿರ್ದೇಶನ | 199 |
| 19. | ಅಧಿಕಾರಿಗಳ ತಂಡ ನೇಮಿಸಲು ಆದೇಶ | 200 |
| 20. | ಗುಜರಾತ್ ಹೈಕೋರ್ಟ್ ಕಲಾಪ ನೇರ ಪ್ರಸಾರ | 200 |
| 21. | ಕಲ್ಲಿದ್ದಲು ಹಗರಣ : ಮಾಜಿ ಕೇಂದ್ರ ಸಚಿವ ದಿಲೀಪ್‌ಗೆ ಜೈಲು | 200 |
| 22. | ದೇಶದಲ್ಲಿಲ್ಲದ ಕಾನೂನಿನಡಿ ಮಗನ 'ಪಾಲನೆ ಹಂಚಿಕೆ' | 201 |
| 23. | ಚುನಾವಣಾ ಫಲಿತಾಂಶ ಪ್ರಕಟಿಸುವಂತಿಲ್ಲ : ಸುಪ್ರೀಂ | 201 |
| 24. | ವ್ಯಾಜ್ಯ ನಿರ್ವಹಣೆಗೆ ಸರ್ಕಾರದ ಮಾರ್ಗಸೂಚಿ | 202 |
| 25. | ಹಸಿರು ಪಟಾಕಿಗೆ ಕೋರ್ಟ್ ಅನುಮತಿ | 202–203 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 26. | ಮಾಧ್ಯಮ ವರದಿಗಾರಿಕೆಗೆ ಬ್ರೇಕ್ ಕೇಂದ್ರದ ಸಲಹೆ ಕೇಳಿದ ಕೋರ್ಟ್ | 203 |
| | **ಭಾಗ–7**<br>**ಹೊರ ರಾಜ್ಯಗಳ ಸುದ್ದಿಗಳು** | |
| 1. | ಮತಾಂತರ ನಿಷೇಧ ಸುಗ್ರೀವಾಜ್ಞೆ – ಉತ್ತರ ಪ್ರದೇಶ | 204 |
| 2. | ಸರ್ಕಾರಿ ಶಾಲೆಯಲ್ಲಿ ಕಲಿತವರಿಗೆ ಮೀಸಲು | 205 |
| 3. | ಕೋವಿಡ್ : ರಾಜ್ಯಸಭೆ ಸದಸ್ಯ ನಿಧನ | 205 |
| 4. | ಲವ್ ಜಿಹಾದ್ ಮಟ್ಟಹಾಕುವ ಸಂಕಲ್ಪ | 205–207 |
| 5. | ಜೀನ್ಸ್ ಟೀಶರ್ಟ್ ನಿಷೇಧ | 207 |
| 6. | ಉತ್ತರ ಪ್ರದೇಶಕ್ಕೆ ಲಸಿಕೆಯಲ್ಲಿ ಅಗ್ರಪಾಲು | 207–208 |
| 7. | ರಾಜಸ್ಥಾನ ನಗರ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಕಾಂಗ್ರೆಸ್ ಮೇಲುಗೈ | 208 |
| 8. | ಉಚಿತ ಕೊರೋನಾ ಲಸಿಕೆಗೆ ಬಿಹಾರ ಸಂಪುಟ ಅಸ್ತು | 208 |
| 9. | ಕಾಶ್ಮೀರದಲ್ಲಿ ಮೂರು ಸ್ಥಾನ ಗೆದ್ದ ಕೇಸರಿ ಪಕ್ಷ | 209 |
| 10. | 21 ವರ್ಷದ ವಿದ್ಯಾರ್ಥಿನಿ ತಿರುವನಂತಪುರ ಮೇಯರ್ | 209 |
| 11. | ಮಧ್ಯ ಪ್ರದೇಶದಲ್ಲೂ ಲವ್ ಜಿಹಾದ್ ನಿಷೇಧ | 210 |
| | **ಭಾಗ–8**<br>**ಅಂತರರಾಷ್ಟ್ರೀಯ ಸುದ್ದಿಗಳು** | |
| 1. | ನಾಸಾ ಬಾಹ್ಯಕಾಶ ನೌಕೆಗೆ ಕಲ್ಪನಾ ಚಾವ್ಲಾ ಹೆಸರು | 211 |
| 2. | ಹೆಪಟೈಟಿಸ್ ಸಿ ಶೋಧಕರಿಗೆ ನೊಬೆಲ್ | 211 |
| 3. | ಮಹಿಳಾ ವಿಜ್ಞಾನಿಗಳಿಗೆ ನೊಬೆಲ್ | 211–212 |
| 4. | ಅಮೆರಿಕನ್ ಚುನಾವಣಾ ಕಣ | 212 |
| 5. | ಅಮೆರಿಕದ ಲೂಯಿಸ್‌ಗೆ ನೊಬೆಲ್ ಸಾಹಿತ್ಯ ಪ್ರಶಸ್ತಿ | 212–213 |
| 6. | ವಿಶ್ವ ಆಹಾರ ಕಾರ್ಯಕ್ರಮಕ್ಕೆ ನೊಬೆಲ್ ಶಾಂತಿ ಪುರಸ್ಕಾರ | 213 |
| 7. | ಹಸಿವು ನೀಗಿಸಿದ ಸಂಸ್ಥೆಗೆ ಶಾಂತಿ ಪುರಸ್ಕಾರ | 213–214 |
| 8. | ಗಡಿಯಲ್ಲಿ ನಿಲ್ಲದ ಚೀನಾ ತಂಟೆ | 214 |
| 9. | ಆರೋಗ್ಯ ಸೇತುಗೆ ಡಬ್ಲೂಎಚ್‌ಓ ಪ್ರಶಂಸೆ | 214–215 |
| 10. | ಚುನಾವಣಾ ಕಣದಲ್ಲಿ ಡೊನಾಲ್ಡ್ ಟ್ರಂಪ್‌ಗೆ ಹಿನ್ನಡೆ | 215 |
| 11. | ಅಮೆರಿಕವೇ ಅಗ್ರಗಣ್ಯ | 216 |
| 12. | ದುಬೈ ಕನ್ನಡ ಶಾಲೆಗೆ 310 ಮಕ್ಕಳು ದಾಖಲು | 216–217 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 13. | ಸೇನೆ ವಾಪಸಾತಿಗೆ ಭಾರತ – ಚೀನಾ ಒಪ್ಪಿಗೆ | 217 |
| 14. | ಮಹಾಮಾರಿ ಕೊರೋನಾ ಮತ್ತೆ ಉಲ್ಬಣ, ಯೂರೋಪ್ ತಲ್ಲಣ | 218 |
| 15. | ವೀಸಾ ಮಿತಿ ಸಡಿಲಿಸಿದ ಅಮೆರಿಕ | 218–219 |
| | **ಭಾಗ–9** **ಪ್ರಶಸ್ತಿಗಳು** | |
| 1. | 15 ಪ್ರಶಸ್ತಿಗಳೊಂದಿಗೆ ಕರ್ನಾಟಕಕ್ಕೆ ಅಗ್ರಸ್ಥಾನ | 220 |
| 2. | ಬೆಂಗಳೂರಿನ ಬಾಲಕನಿಗೆ ಅಂತರರಾಷ್ಟ್ರೀಯ ಪ್ರಶಸ್ತಿ | 220 |
| 3. | ಕೆಎಸ್ಆರ್‌ಟಿಸಿಗೆ ಪ್ರಶಸ್ತಿ | 221 |
| 4. | ನರಸಿಂಗ್ ಹುಣಜೆಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ | 221 |
| 5. | ರಾಜ್ಯದ 65 ಸಾಧಕರಿಗೆ ರಾಜ್ಯೋತ್ಸವ ಪಸ್ರಶಸ್ತಿ ಗರಿ | 221 |
| 6. | ರಾಜ್ಯದ ಪ್ರತಿಷ್ಠಿತ ಕ್ರೀಡಾ ಪ್ರಶಸ್ತಿ ಪ್ರದಾನ | 221–222 |
| 7. | 2028 ಒಲಿಂಪಿಕ್ಸ್‌ನಲ್ಲಿ ಕೀರ್ತಿಪಾತಕೆ ಹಾರಿಸಿ : ಸಿಎಂ | 223 |
| 8. | ಸಾಲುಮರದ ತಿಮ್ಮಕ್ಕಳಿಗೆ ಗೌರವ ಡಾಕ್ಟರೇಟ್ | 223–224 |
| 9. | ಕನ್ನಡ ಭಾಷೆಗೂ ತಂತ್ರಜ್ಞಾನದ ವೇಗ | 224 |
| 10. | ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರದಾನ | 225 |
| | **ಭಾಗ–10** **ಶ್ರದ್ಧಾಂಜಲಿ** | |
| 1. | ರಾಮ್ ವಿಲಾಸ್ ಪಾಸ್ವಾನ್, ಕೇಂದ್ರ ಸಚಿವರು | 226 |
| 2. | ಡಾ: ವೈ.ನಾಗಪ್ಪ, ಮಾಜಿ ಸಚಿವರು | 226 |
| 3. | ಬಸವಂತ್ ಐರೋಜಿ ಪಾಟೀಲ್, ಮಾಜಿ ಸದಸ್ಯರು | 226–227 |
| 4. | ಕೆ ಮಲ್ಲಪ್ಪ, ಮಾಜಿ ಸದಸ್ಯರು | 227 |
| 5. | ರತನ್ ಕುಮಾರ್ ಕಟ್ಟೆಮಾರ್, ಮಾಜಿ ಸದಸ್ಯರು | 227 |
| 6. | ಡಾ: ಜಿ.ಎಸ್. ಆಮೂರ, ಕನ್ನಡ ಸಾಹಿತಿ | 227 |
| 7. | ಡಾ: ವಿ.ಎಸ್. ಸೋಂದೆ, ಶಿಕ್ಷಣ ತಜ್ಞ | 228 |
| 8. | ರವಿ ಬೆಳೆಗೆರೆ, ಹಿರಿಯ ಪತ್ರಕರ್ತ | 228 |
| 9. | ಅಹ್ಮದ್ ಪಟೇಲ್, ರಾಜ್ಯ ಸಭಾ ಸದಸ್ಯರು | 228–229 |
| 10. | ಮೃದುಲಾ, ಮಾಜಿ ರಾಜ್ಯಪಾಲೆ | 229 |
| | **ಭಾಗ–11** **ಪ್ರಮುಖ ಲೇಖನಗಳು** | |
| 1. | ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸಿದ ಹೋರಾಟಗಾರ | 230–232 |
| 2. | The Gokak movement and Kannada pride | 233–234 |
| 3. | ಕನ್ನಡ ಕಾಯಕ ವರ್ಷ : ಆಶಯ ಒಳ್ಳೆಯದು, ಅನುಷ್ಠಾನ ಮುಖ್ಯ | 235–236 |
| 4. | 343ನೇ ವಿಧಿ ಬದಲಿಸುವುದೇ ಪರಿಹಾರ | 237–238 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 5. | ಸರ್ಕಾರಿ ನೌಕರರು – ಸಾರ್ವಜನಿಕರ ನಡುವೆ ಸಂವಹನ ಕೊರತೆ ಏಕೆ | 239–241 |
| 6. | ಗಾಂಧೀಜಿಯ ಬೆಳಗಾವಿ ಭೇಟಿ | 242–244 |
| 7. | ಚುನಾವಣಾ ಆಯೋಗಕ್ಕೊಂದು ಕೋವಿಡ್ ಟೆಸ್ಟ್ | 245–248 |
| 8. | ನ್ಯಾಯಾಂಗದ ವಿಡಂಬನೆ ಅವಹೇಳನಕಾರಿ ಆಗದಿರಲಿ | 249–251 |
| 9. | ಮಾನವೀಯತೆ ಸಂವಿಧಾನದ ಆಶಯ | 252–255 |
| 10. | The Bequeathed to us 71 years ago today, the Constitution is India's bedrock of stability and growth | 256–257 |
| 11. | ಸಂವಿಧಾನವೇ ನಮ್ಮ ಪಗ್ರತಿಯ ಬುನಾದಿ | 258–261 |
| 12. | 'ಸಂವಿಧಾನ' ಇದು ಕರ್ತವ್ಯಗಳನ್ನು ಪಾಲಿಸುವ ಸಮಯ | 262–265 |
| 13. | ಸಂವಿಧಾನದ ಬದಲಾವಣೆ ಹೇಗೆ | 266–268 |
| 14. | Democracy as the DNA of our Country | 269–270 |
| 15. | ಭವಿಷ್ಯದ ಅಗತ್ಯಗಳಿಗಾಗಿ ಹೊಸ ಪಾರ್ಲಿಮೆಂಟ್ | 271–273 |
| 16 | ಸಭಾಪತಿ ಪೀಠದ ಗೌರವ ಬಹು ಮುಖ್ಯ | 274–275 |
| 17 | ಅವಿಶ್ವಾಸ ನಿರ್ಣಯಕ್ಕೆ ಮರುಜೀವ | 276–277 |
| 18 | ಮಂಕಾಯಿತೇಕೆ ನಾಡಿನ ಮೇಲ್ಮನೆ | 278–279 |
| 19. | ಮೇಲ್ಮನೆಯ ಆಶಯಗಳಿಗೆ ತಿಲಾಂಜಲಿಯ ಕಾಲ | 280–283 |
| 20. | ರೈತರ ಬಿಕ್ಕಟ್ಟು ಪರಿಹಾರಕ್ಕೆ ಪಂಚಸೂತ್ರ | 284–286 |
| 21. | ಕರ್ನಾಟಕ ವಿಧಾನ ಪರಿಷತ್ತಿನ ರಚನೆ, ಆಶಯ ಹಾಗೂ ಪೀಠದ ಮಹತ್ವ | 287–289 |


ಸೂಚನೆ: – ಇಲ್ಲಿ ಆಯ್ಕೆ ಮಾಡಿರುವ ಲೇಖನಗಳು ಪ್ರಮುಖ ದಿನಪ್ರತಿಕೆಗಳಿಂದ ಆಯ್ದು ಪ್ರಕಟಿಸಲಾಗಿದೆ. ಇಲ್ಲಿನ ಅಭಿಪ್ರಾಯಗಳು ಸಂಪೂರ್ಣ ಲೇಖಕರದ್ದಾಗಿರುತ್ತದೆ.

# ಭಾಗ–1

# ವಿಧಾನ ಮಂಡಲದ ಸುದ್ದಿಗಳು

## 1. ಮಾತೃ ಭಾಷೆಯಲ್ಲಿ ಶಿಕ್ಷಣ ಸ್ವಾಗತಾರ್ಹ: ಕಾಗೇರಿ

ಮಕ್ಕಳಿಗೆ ಮಾತೃ ಭಾಷೆಯಲ್ಲಿ ಶಿಕ್ಷಣ ನೀಡುವುದು ಅಗತ್ಯವೆಂದು ಸುಪ್ರೀಂಕೋರ್ಟ್ ಪ್ರತಿಪಾದಿಸಿರುವುದನ್ನು ವಿಧಾನ ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ, ಕಾಗೇರಿ ಸ್ವಾಗತಿಸಿದ್ದಾರೆ. ಭಾಷೆಯೊಂದಿಗೆ ಸಂಸ್ಕೃತಿಯೂ ಸಮ್ಮಿಳಿತವಾಗಿರುತ್ತದೆ. ಹಾಗಾಗಿ ಮಾತೃಬಾಷೆಯಲ್ಲೇ ಶಿಕ್ಷಣ ಅಗತ್ಯವೆಂಬ ಸುಪ್ರೀಂಕೋರ್ಟ್‌ನ ಅಭಿಪ್ರಾಯ ಸ್ವಾಗತಾರ್ಹ. ಮಾತೃ ಭಾಷೆಯನ್ನು ಮುಂದಿನ ಪೀಳಿಗೆಗೆ ಉಳಿಸಿ, ಬೆಳೆಸಿ, ಕೊಂಡೊಯ್ಯುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಮಾತೃ ಭಾಷೆಯಲ್ಲಿ ಶಿಕ್ಷಣ ಪಡೆಯುವುದು ನಮ್ಮ ಹಕ್ಕಾಗಿದ್ದು, ಸುಪ್ರೀಂಕೋರ್ಟ್ ಈ ನಿಟ್ಟಿನಲ್ಲಿ ಅಭಿಪ್ರಾಯ ವ್ಯಕ್ತಪಡಿಸಿರುವುದು ಉತ್ತಮ ಬೆಳವಣಿಗೆಯಾಗಿದೆ ಎಂದು ಹೇಳಿದ್ದಾರೆ.

ಆಧಾರ: ವಿಜಯವಾಣಿ, ದಿನಾಂಕ:08.10.2020

## 2. ಶಿಕ್ಷಕರ ಪಾಲಿನ ಆಪದ್ಬಾಂಧವ ಹೊರಟ್ಟಿ

ಶಿಕ್ಷಣ ಕ್ಷೇತ್ರದ ಕೊರೋನಾ ವಿರುದ್ಧ ಹೋರಾಟ ಮಾಡುತ್ತ ಬಂದ ಮಾಜಿ ಸಚಿವ ಬಸವರಾಜ ಹೊರಟ್ಟಿ ಅವರು ಶಿಕ್ಷಕರಿಗೆ ಆಪದ್ಬಾಂಧವರಾಗಿದ್ದಾರೆ ಎಂದು ಹಿರಿಯ ಸಾಹಿತಿ ಡಾ: ಸಿದ್ದಲಿಂಗಯ್ಯ ಅಭಿಪ್ರಾಯಪಟ್ಟರು.

ಭಾರತ ಯಾತ್ರ ಕೇಂದ್ರ ಲೋಕನಾಯಕ ಜೆಪಿ ವಿಚಾರ ವೇದಿಕೆ, ಸ್ವಾತಂತ್ರ್ಯ ಸೇನಾನಿ, ಪ್ರಜಾಪ್ರಭುತ್ವ ಸಂರಕ್ಷಕ, ಭಾರತದ ಸಾಕ್ಷಿಪ್ರಜ್ಞೆ ಲೋಕನಾಯಕ ಜಯಪ್ರಕಾಶ್ ನಾರಾಯಣ್ ಅವರ 118ನೇ ದಿನದ ಸವಿನೆನಪು ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯರಾಗಿ ಭಾರತದಲ್ಲೇ ದಾಖಲೆ ಸೃಷ್ಟಿಸಿ 40 ವರ್ಷಗಳನ್ನು ಪೂರೈಸಿರುವ ಹಿರಿಯ ರಾಜಕಾರಣಿ ಬಸವರಾಜ ಹೊರಟ್ಟಿ ಅವರ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

40 ವರ್ಷಗಳ ಅವಧಿಯಲ್ಲಿ ಹೊರಟ್ಟಿ ಅವರು ಸುದೀರ್ಘ ಹೋರಾಟ ಮಾಡುತ್ತಾ ಬಂದಿದ್ದಾರೆ. ಅವರು ಮಾಡದ ಹೋರಾಟವಿಲ್ಲ. ಹೋರಾಟದಲ್ಲಿ ಜಯಶೀಲರಾಗಿದ್ದಾರೆ. ಶಿಕ್ಷಕರ ಹಲವು ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟ ಮಾಡಿದ್ದಾರೆ. ಸಚಿವರಾದ ಅವಧಿಯಲ್ಲಿ ಬಹಳಷ್ಟು ಸುಧಾರಣೆಗಳನ್ನು ತಂದಿದ್ದಾರೆ ಎಂದು ಶ್ಲಾಘಿಸಿದರು.

ಸುದೀರ್ಘ ವರ್ಷ ವಿಧಾನ ಪರಿಷತ್ ಸದಸ್ಯರಾಗಿ ದೇಶದಲ್ಲೇ ದಾಖಲೆ ನಿರ್ಮಿಸಿರುವುದು ಕನ್ನಡಿಗರು ಹೆಮ್ಮೆ ಪಡುವಂತಹ ಸಂಗತಿ. ಅವರು ವಿಧಾನ ಪರಿಷತ್ ಸದಸ್ಯರಾಗಿ 50 ವರ್ಷ ಮುಂದುವರಿಯಲಿ. ಎರಡೂ ಬಾರಿ ಸಚಿವರಾಗಿ, ಸಭಾಪತಿಯಾಗಿ, ವಿಧಾನ ಪರಿಷತ್ ಸದಸ್ಯರಾಗಿ ನಾಡಿನ ಜನರ ಪ್ರೀತಿ ಅಭಿಮಾನಕ್ಕೆ ಪಾತ್ರರಾಗಿದ್ದಾರೆ. ಲಕ್ಷಾಂತರ ಶಿಕ್ಷಕರಿಗೆ ಧೈರ್ಯ ತುಂಬಿದ್ದಾರೆ. ಶಿಕ್ಷಕರಲ್ಲಿ ಹೊರಟ್ಟಿ ಅವರ ಹೆಸರು ಅಚ್ಚಳಿಯದೆ ಉಳಿಯುವಂತಾಗಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಶಿಕ್ಷಕರಿಗೆ ಕೊರೋನಾ ಸಂಕಷ್ಟದಿಂದಾಗಿ ವೇತನವಿಲ್ಲದೆ ಅನ್ಯ ವೃತ್ತಿಯನ್ನು ಮಾಡುವುದನ್ನು ಗಮನಿಸಿದ ಹೊರಟ್ಟಿ ಅವರು ಅವರ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ. ಬಿಸಿಯೂಟವನ್ನು ಪ್ರೌಢಶಾಲೆಗೂ ವಿಸ್ತರಣೆ ಮಾಡಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಬಿಡುವಿಲ್ಲದ ಕಾರ್ಯನಿರ್ವಹಿಸುವ ಅವರು ಅನೇಕ ಸಾಧನೆಗಳನ್ನು ಮಾಡಿದ್ದಾರೆ. ಗ್ರಂಥಪಾಲಕ ಹುದ್ದೆಗಳನ್ನು ಬೋಧಕ ಹುದ್ದೆ ರೀತಿ ಪರಿಗಣಿಸುವಂತೆ ಮಾಡಿದರು. ನಾಡಿನ ಜನರ ಸಮಸ್ಯೆಗಳ ಬಗ್ಗೆ ವಾಸ್ತವಿಕ ಅರಿವುಳ್ಳವರಿಗೆ ಆಕಾರ ಸಿಕ್ಕರೆ ಏನು ಮಾಡುತ್ತಾರೆ ಎಂಬುದಕ್ಕೆ ಹೊರಟ್ಟಿಯವರೆ ನಿದರ್ಶನ ಎಂದು ಅವರ ಸಾಧನೆಗಳನ್ನು ಮುಕ್ತಕಂಠದಿಂದ ಪ್ರಶಂಸಿಸಿದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಮಾಜಿ ಸಭಾಪತಿ ಡಾ.ಬಿ.ಎಲ್. ಶಂಕರ್, ಮಾಜಿ ಸದಸ್ಯ, ಎಂ.ಪಿ.ನಾಡಗೌಡ, ಮಾಜಿ ಶಾಸಕ ಮಧು ಬಂಗಾರಪ್ಪ, ಖ್ಯಾತ ಶಿಕ್ಷಣ ತಜ್ಞ ಡಾ:ಗುರುರಾಜ ಕರಜಗಿ, ರಂಗಕರ್ಮಿ ಕೆ.ವಿ. ನಾಗರಾಜ್ ಸ್ವಾಮಿ ಮತ್ತಿತರ ಗಣ್ಯರು ಪಾಲ್ಗೊಂಡಿದ್ದರು.

**ರಾಜಕೀಯ ಮೌಲ್ಯಗಳ ಹರಿಕಾರ:** ರಾಜಕೀಯ ವ್ಯಕ್ತಿಗಳೆಂದರೆ ವಿಭಿನ್ನವಾದ ಮೌಲ್ಯಗಳು ಇರುತ್ತವೆ. ಆದರೆ ಬಸವರಾಜ ಹೊರಟ್ಟಿ ಅವರು ರಾಜಕೀಯ ಜೀವನದಲ್ಲಿ ಹಲವಾರು ಮಜಲುಗಳನ್ನು ಕಂಡವರು. ರಾಜಕಾರಣಿಯಾಗಿ ಇರಬೇಕಾದ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದರು. ಇದು ಇತರರಿಗೂ ಮಾದರಿಯಾಗಿತ್ತು. ಯಾವುದೇ ಸಮುದಾಯ, ನೊಂದ ವರ್ಗಕ್ಕೆ ಮಿಡಿಯುತ್ತಿದ್ದರು. ಪಕ್ಷದ ಸಿದ್ಧಾಂತಕ್ಕಿಂತ ಪ್ರಜಾಪ್ರಭುತ್ವ ಸಿದ್ಧಾಂತವೇ ಅವರ ಜೀವಾಳ ಎಂದು ಅನೇಕ ಗಣ್ಯರು ಸ್ಮರಿಸಿದರು.

ಆಧಾರ: ವಿಜಯವಾಣಿ, ದಿನಾಂಕ:12.10.2020

## 3. ಶಿಕ್ಷಣದಲ್ಲಿ ಹೊರಟ್ಟಿ ಮಹತ್ಸಾಧನೆ

ರಾಜಕಾರಣಿಯಾಗುವ ಮುನ್ನ ಬಸವರಾಜ ಹೊರಟ್ಟಿ ಒಬ್ಬ ಶಿಕ್ಷಕರು. ಅವರು ಶಿಕ್ಷಣ ಸಚಿವರಾಗಿದ್ದಾಗ ಆ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಗಳನ್ನು ತಂದರು ಎಂದು ಕವಿ ಡಾ:ಸಿದ್ದಲಿಂಗಯ್ಯ ನುಡಿದರು. ಭಾರತ ಯಾತ್ರಾ ಕೇಂದ್ರವು ಜಯಪ್ರಕಾಶ್ ನಾರಾಯಣ್ ಅವರ 118ನೇ ಜನ್ಮದಿನ ಪ್ರಯುಕ್ತ ನಗರದ ಚಿತ್ರಕಲಾ ಪರಿಷತ್ತಿನಲ್ಲಿ ಏರ್ಪಡಿಸಿದ್ದ ಬಸವರಾಜ ಹೊರಟ್ಟಿ ಅವರ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಎಲ್ಲ ಅರೆಕಾಲಿಕ ಉಪನ್ಯಾಸಕರ ಸೇವೆ ಖಾಯಂ, ಖಾಸಗಿ ಶಾಲಾ ಶಿಕ್ಷಕರಿಗೆ ಪ್ರತಿ ತಿಂಗಳು 5ನೇ ತಾರೀಖಿನೊಳಗೆ ವೇತನ ಸಿಗುವ ಆದೇಶ, ಶಿಕ್ಷಕರ ವಯೋಮಿತಿಯನ್ನು 40 ರಿಂದ 45ಕ್ಕೆ ಏರಿಸುವ ನಿರ್ಧಾರ ಸೇರಿದಂತೆ ಹತ್ತು ಹಲವು ಸುಧಾರಣೆಗಳನ್ನು ತಂದರು. ಕಳೆದ ನಾಲ್ಕು ದಶಕಗಳಿಂದಲೂ ವಿಧಾನ ಪರಿಷತ್ ಸದಸ್ಯರಾಗಿರುವ ಬಸವರಾಜ ಹೊರಟ್ಟಿಯವರು ಸದಾ ಹೋರಾಟಗಾರರು ಎಂದು ಬಣ್ಣಿಸಿದರು.

ಶಿಕ್ಷಣ ತಜ್ಞ ಡಾ:ಗುರುರಾಜ ಕರ್ಜಗಿ ಮಾತನಾಡಿ, ಸತತ 40 ವರ್ಷಗಳಿಂದ ರಾಜಕೀಯದಲ್ಲಿರುವ ಬಸವರಾಜ ಹೊರಟ್ಟಿಯವರ ಸೇವೆ ಭಾರತ ರಾಜಕೀಯ ಪಟದಲ್ಲಿ ಎಂದೂ ಮರೆಯಲಾರದ ದೊಡ್ಡ ಅಧ್ಯಾಯ ಎಂದರು.

ಅಭಿನಂದನೆ ಸ್ವೀಕರಿಸಿದ ವಿಧಾನ ಪರಿಷತ್ತಿನ ಹಿರಿಯ ಸದಸ್ಯ ಬಸವರಾಜ ಹೊರಟ್ಟಿ ಮಾತನಾಡಿ ಜೆ.ಪಿ ಕಾಲದಲ್ಲಿ ವಿಧಾನ ಪರಿಷತ್‌ಗೆ ಬರುವಂಥವರಿಗೆ ಸೇವಾ ಮನೋಭಾವವಿತ್ತು. ಆದರೆ, ಇಂದು ಮೇಲ್ಮನೆಗೆ ಬರುವಂಥವರಲ್ಲಿ ಆ ಭಾವನೆ ಕಾಣುತ್ತಿಲ್ಲ. ಇದರಿಂದ ವಿಧಾನ ಪರಿಷತ್ ತನ್ನ ಘನತೆ–ಗೌರವವನ್ನು ಕಳೆದುಕೊಳ್ಳುತ್ತಿದೆ ಎಂಬ ನೋವಿದೆ ಎಂದು ಬೇಸರ ವ್ಯಕ್ತಪಡಿಸಿದರು.

ವಿದ್ಯಾರ್ಥಿ ದೆಸೆಯಿಂದಲೇ ಹಳ್ಳಿಕೇರಿ ಗುದ್ದೆಪ್ಪನವರ ನೇತೃತ್ವದಲ್ಲಿ ನಡೆದ ಹೋರಾಟದಿಂದ ಹಿಡಿದು ಜೆ.ಪಿ ಹೋರಾಟಗಳಲ್ಲಿ ನಾನು ಭಾಗಿಯಾದವನು ಹೋರಾಟವೇ ನನ್ನನ್ನು ಈ ಮಟ್ಟಕ್ಕೆ ತಂದಿದೆ. ಜೆ.ಪಿಯವರ ಜನ್ಮದಿನದಂದು ನನ್ನನ್ನು ಸನ್ಮಾನಿಸಿ ಅಭಿನಂದಿಸಿದುದು ನನ್ನ ಭಾಗ್ಯ ಎಂದು ಸಂತಸಪಟ್ಟರು. ಕಾರ್ಯಕ್ರಮದಲ್ಲಿ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್, ಡಾ.ಎಂ.ಪಿ ನಾಡಗೌಡ, ಮಾಜಿ ಶಾಸಕ ಮಧು ಬಂಗಾರಪ್ಪ ಮತ್ತಿತರರು ಉಪಸ್ಥಿತರಿದ್ದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:12.10.2020

## 4. ವಿಧಾನ ಮಂಡಲ 9 ಸ್ಥಾಯಿ ಸಮಿತಿಗೆ ಅಧ್ಯಕ್ಷ, ಸದಸ್ಯರ ನೇಮಿಸಿ ಸ್ಪೀಕರ್ ಆದೇಶ

ವಿಧಾನ ಮಂಡಲದ ಒಂಭತ್ತು ವಿವಿಧ ಸ್ಥಾಯಿ ಸಮಿತಿಗೆ ಪ್ರಸಕ್ತ (2020–21) ಸಾಲಿನ ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಕ ಮಾಡಿ ವಿಧಾನ ಸಭೆ ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ, ಕಾಗೇರಿ ಆದೇಶ ಹೊರಡಿಸಿದ್ದಾರೆ.

ಸಾರ್ವಜನಿಕ ಲೆಕ್ಕಪತ್ರಗಳ ಸ್ಥಾಯಿ ಸಮಿತಿಗೆ ಶಾಸಕ ರಾಮಲಿಂಗಾರೆಡ್ಡಿ, ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ ಅರವಿಂದ ಲಿಂಬಾವಳಿ, ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ ಎಸ್.ಅಂಗಾರ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಗೆ ದಿನಕರ್ ಕೇಶವ ಶೆಟ್ಟಿ, ಅಧೀನ ಶಾಸನ ರಚನಾ ಸಮಿತಿಗೆ ಎಸ್. ಕುಮಾರ್ ಬಂಗಾರಪ್ಪ, ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಗೆ ಸಾ.ರಾ.ಮಹೇಶ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಗೆ ಕೆ.ಪೂರ್ಣಿಮಾ, ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಗೆ ಜಿ. ಸೋಮಶೇಖರ್ ರೆಡ್ಡಿ ಅವರನ್ನು ನೇಮಕ ಮಾಡಲಾಗಿದೆ.

ವಿಧಾನ ಸಭಾಧ್ಯಕ್ಷರು ಹಾಗೂ ವಿಧಾನ ಪರಿಷತ್‌ನ ಸಭಾಪತಿಗಳು ಸದಸ್ಯರಾಗಿರುವುದರಿಂದ ನಿಯಮಗಳ ಪ್ರಕಾರ ಗ್ರಂಥಾಲಯ ಸಮಿತಿಗೆ ವಿಧಾನ ಪರಿಷತ್ ಸಭಾಪತಿಗಳನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ ಎಂದು ವಿಧಾನ ಸಭೆ ಸಚಿವಾಲಯದ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ತಿಳಿಸಿದ್ದಾರೆ.

**ವಿಧಾನ ಸಭೆಯ ವಿವಿಧ ಸಮಿತಿಗಳು:** ಇನ್ನು ವಿಧಾನ ಸಭೆಯ ಸಮಿತಿಗಳ ಪೈಕಿ ಅಂದಾಜುಗಳ ಸಮಿತಿಗೆ ಅಭಯ ಪಾಟೀಲ್, ಸರ್ಕಾರಿ ಭರವಸೆಗಳ ಸಮಿತಿಗೆ ಕೆ. ರಘುಪತಿ ಭಟ್, ಹಕ್ಕು ಬಾಧ್ಯತೆಗಳ ಸಮಿತಿಗೆ ಬಸನಗೌಡ ಆರ್. ಪಾಟೀಲ್ (ಯತ್ನಾಳ್), ಖಾಸಗಿ ಸದಸ್ಯರ ವಿಧೇಯಕ, ನಿರ್ಣಯಗಳ ಸಮಿತಿ, ಅರ್ಜಿಗಳ ಸಮಿತಿ ಹಾಗೂ ವಸತಿ ಸೌಕರ್ಯ ಸಮಿತಿಗಳಿಗೆ ವಿಶ್ವನಾಥ್ ಮಾಮನಿ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಆಧಾರ: ವಿಜಯವಾಣಿ, ದಿನಾಂಕ:11.11.2020

## 5. ಇಂದಿನಿಂದ ರಾಜ್ಯಸಭೆಗೆ ನಾಮಪತ್ರ ಸಲ್ಲಿಕೆ : ಡಿಸೆಂಬರ್ 1ಕ್ಕೆ ಮತದಾನ

ರಾಜ್ಯ ಸಭಾ ಸದಸ್ಯ ಅಶೋಕ್ ಗಸ್ತಿ ನಿಧನದಿಂದಾಗಿ ತೆರವಾಗಿರುವ ಸ್ಥಾನಕ್ಕೆ ಡಿಸೆಂಬರ್ 1 ರಂದು ಉಪ ಚುನಾವಣೆ ನಡೆಯಲಿದ್ದು. ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಲಿದೆ ಎಂದು ವಿಧಾನ ಸಭೆ ಕಾರ್ಯದರ್ಶಿ ಹಾಗೂ ಚುನಾವಣಾಧಿಕಾರಿ ಎಂ.ಕೆ. ವಿಶಾಲಾಕ್ಷಿ ಹೇಳಿದ್ದಾರೆ.

ವಿಧಾನ ಸೌಧದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು ಚುನಾವಣೆಗೆ ನೋಟಿಫಿಕೇಷನ್ ಹೊರಡಿಸಲಾಗುತ್ತದೆ. ನವೆಂಬರ್ 18ರವರೆಗೆ ನಾಮಪತ್ರಗಳನ್ನು ಸಲ್ಲಿಸಬಹುದಾಗಿದೆ. ನವೆಂಬರ್ 19ರಂದು ನಾಮಪತ್ರ ಪರಿಶೀಲನೆ ನಡೆಯಲಿದೆ. ನವೆಂಬರ್–23ರ ನಾಮಪತ್ರ ವಾಪಸ್ಸು ಪಡೆಯಲು ಕೊನೆ ದಿನ, ಡಿಸೆಂಬರ್–1ಕ್ಕೆ ಉಪ ಚುನಾವಣೆ ನಡೆಯಲಿದೆ. ವಿಧಾನ ಸೌಧದ ಕೊಠಡಿ ಸಂಖ್ಯೆ 106ರಲ್ಲಿ ಬೆಳಿಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ನಡೆಯಲಿದೆ ಎಂದು ತಿಳಿಸಿದರು.

ಆಧಾರ: ಕನ್ನಡಪ್ರಭ ದಿನಾಂಕ:11.11.2020

## 6. ಡಿಸೆಂಬರ್ 7 ರಿಂದ 15ರವರೆಗೆ ರಾಜ್ಯ ವಿಧಾನ ಮಂಡಲ ಅಧಿವೇಶನಕ್ಕೆ ನಿರ್ಧಾರ

ವಿಧಾನ ಮಂಡಲದ ಚಳಿಗಾಲದ ಅಧಿವೇಶನವನ್ನು ಡಿಸೆಂಬರ್ 7 ರಿಂದ 15ರವರೆಗೆ ಬೆಂಗಳೂರಿನಲ್ಲಿ ನಡೆಸಲು ರಾಜ್ಯ ಸಚಿವ ಸಂಪುಟ ಸಭೆ ನಿರ್ಧರಿಸಿದೆ.

ಪ್ರಸಕ್ತ ಸಾಲಿನ ಚಳಿಗಾಲದ ವಿಧಾನಮಂಡಲ ಅಧಿವೇಶನವನ್ನು ಡಿಸೆಂಬರ್ 7 ರಿಂದ 15ರವರೆಗೆ ಬೆಂಗಳೂರಿನಲ್ಲೇ ನಡೆಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ. ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯಬೇಕಾಗಿದ್ದ ಚಳಿಗಾಲದ ಅಧಿವೇಶನ ಈ ಬಾರಿಯೂ ಬೆಂಗಳೂರಿನ ವಿಧಾನ ಸೌಧಕ್ಕೆ ಸ್ಥಳಾಂತರಗೊಂಡಿದೆ. ಸುವರ್ಣ ಸೌಧ ನಿರ್ಮಾಣದ ನಂತರ ಚಳಿಗಾಲದ ಅಧಿವೇಶನ ಬೆಳಗಾವಿಯಲ್ಲಿ ಆಯೋಜಿಸುವುದು ಸಂಪ್ರದಾಯದಂತೆ ನಡೆದುಕೊಂಡು ಬಂದಿತ್ತು. 2019ರಲ್ಲಿ ಬೆಳಗಾವಿ ತೀವ್ರವಾಗಿ ಪ್ರವಾಹಕ್ಕೆ ಒಳಗಾದ ಹಿನ್ನೆಲೆಯಲ್ಲಿ, ಬೆಂಗಳೂರಿನಲ್ಲಿ ಅಧಿವೇಶನ ನಡೆಸಲಾಗಿತ್ತು. ಈಗ ಕೊರೋನಾ

ಹಿನ್ನೆಲೆಯಲ್ಲಿ ಅಧಿವೇಶನವನ್ನು ಬೆಂಗಳೂರಿನಲ್ಲೇ ನಡೆಸಲು ಸರ್ಕಾರ ತೀರ್ಮಾನಿಸಿದೆ. ತನ್ಮೂಲಕ ಸತತ ಎರಡನೇ ವರ್ಷವೂ ಬೆಳಗಾವಿಗೆ ಚಳಿಗಾಲದ ಅಧಿವೇಶನ ಕೈ ತಪ್ಪಿದಂತಾಗಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯು 15 ನಿಮಿಷದಲ್ಲೇ ಮುಗಿದಿದ್ದು, ಚಳಿಗಾಲದ ಅಧಿವೇಶನದ ದಿನಾಂಕ ಹಾಗೂ ಸ್ಥಳ ನಿಗದಿ ಸೇರಿದಂತೆ ಹಲವು ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ.

ಆಧಾರ: ಕನ್ನಡಪ್ರಭ, ದಿನಾಂಕ:19.11.2020

## 7. ರಾಜ್ಯ ಸಭೆಗೆ ನಾರಾಯಣ್ ಅವಿರೋಧ ಆಯ್ಕೆ

**ದಿನಾಂಕ: 23.11.2020ರಂದು ರಾಜ್ಯಸಭಾ ಉಪ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದ ಶ್ರೀ ನಾರಾಯಣ್ ರವರು ಸನ್ಮಾನ್ಯ ಸಭಾಧ್ಯಕ್ಷರವರನ್ನು ಭೇಟಿ ಮಾಡಿದ ಸಂದರ್ಭ.**

ರಾಜ್ಯ ಸಭಾ ಸದಸ್ಯ ಅಶೋಕ್ ಗಸ್ತಿ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ಬಿಜೆಪಿಯಿಂದ ಸ್ಪರ್ಧೆ ಮಾಡಿದ್ದ ಡಾ: ಕೆ. ನಾರಾಯಣ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದು, ವಿಧಾನಸಭೆ ಕಾರ್ಯದರ್ಶಿಗಳಿಂದ ಪ್ರಮಾಣ ಪತ್ರ ಸ್ವೀಕರಿಸಿದರು. ನಾರಾಯಣ್ ಅವರು ವಿಧಾನಸೌಧದಲ್ಲಿ ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಅವರಿಂದ ಕುಟುಂಬ ಸಮೇತರಾಗಿ ಪ್ರಮಾಣ ಪತ್ರ ಸ್ವೀಕರಿಸಿದರು. ಬಳಿಕ ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಅವರನ್ನು ಭೇಟಿ ಮಾಡಿ ಧನ್ಯವಾದ ಅರ್ಪಿಸಿದರು.

ಆಧಾರ: ಕನ್ನಡಪ್ರಭ, ದಿನಾಂಕ:24.11.2020

## 8. ಮೇಲ್ಮನೆಯಲ್ಲಿ ಬಿಜೆಪಿ ದೊಡ್ಡಪಕ್ಷ

ಉಪ ಚುನಾವಣೆಯಲ್ಲಿ ಎರಡು ಸ್ಥಾನ ಗೆದ್ದ ಬಿಜೆಪಿ ಇದೀಗ ವಿಧಾನ ಪರಿಷತ್‌ಗೆ ಶಿಕ್ಷಕರ ಮತ್ತು ಪದವೀಧರ ಕ್ಷೇತ್ರಗಳಿಂದ ನಡೆದ ಚುನಾವಣೆಯಲ್ಲಿ ನಾಲ್ಕು ಸ್ಥಾನಗಳನ್ನು ಗೆದ್ದುಕೊಂಡಿದೆ. ಆ ಮೂಲಕ 75 ಸದಸ್ಯ ಬಲದ ಮೇಲ್ಮನೆಯಲ್ಲಿ 31 ಸ್ಥಾನಗಳೊಂದಿಗೆ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ.

ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದ ಜೆಡಿಎಸ್‌ನಿಂದ ಹೊರಬಂದು ಬಿಜೆಪಿಯಿಂದ ಸ್ಪರ್ಧಿಸಿದ್ದ ಪುಟ್ಟಣ್ಣ ಮೊದಲ ಸುತ್ತಿನ ಆದ್ಯತೆ ಮತಗಳಿಂದಲೇ ಆಯ್ಕೆಯಾಗಿದ್ದಾರೆ. ಆ ಮೂಲಕ ಸತತ ಮೂರನೇ ಬಾರಿಗೆ ಮೇಲ್ಮನೆ ಪ್ರವೇಶ ಪಡೆದಿದ್ದಾರೆ. ಪ್ರತಿ ಸ್ಪರ್ಧಿ ಆಗಿದ್ದ ಜೆಡಿಎಸ್‌ನ ಆರ್.ರಂಗನಾಥ್ ಅವರನ್ನು 2 ಸಾವಿರಕ್ಕೂ ಅಧಿಕ ಮತಗಳಿಂದ ಸೋಲಿಸಿದ್ದಾರೆ. ಇಲ್ಲಿ ಕಾಂಗ್ರೆಸ್ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ.

ಪಶ್ಚಿಮ ಪದವೀಧರ ಕ್ಷೇತ್ರದಿಂದ ಎಸ್.ವಿ. ಸಂಕನೂರು ಭಾರಿ ಅಂತರದಿಂದ ಜಯಗಳಿಸಿದ್ದು, ಕ್ಷೇತ್ರ ಮೂರನೇ ಬಾರಿಗೆ ಬಿಜೆಪಿ ಮಡಿಲಿಗೆ ಬಿದ್ದಿದೆ. ಕಾಂಗ್ರೆಸ್‌ನ ಡಾ: ಕುಬೇರಪ್ಪ 11 ಸಾವಿರಕ್ಕೂ ಹೆಚ್ಚು ಅಂತರದಿಂದ ಪರಾಭವಗೊಂಡಿದ್ದಾರೆ. ಪಕ್ಷೇತರ ಹುರಿಯಾಳು ಬಸವರಾಜ ಗುರಿಕಾರ ತೃತೀಯ ಸ್ಥಾನಿಯಾಗಿದ್ದಾರೆ.

ಇನ್ನು ಆಗ್ನೇಯ ಪದವೀಧರ ಕ್ಷೇತ್ರದಲ್ಲೂ ಬಿಜೆಪಿಯ ಚಿದಾನಂದಗೌಡ ಭರ್ಜರಿ ಗೆಲುವು ದಾಖಲಿಸಿದ್ದಾರೆ. ಬಿಜೆಪಿ ಬಂಡಾಯ ಅಭ್ಯರ್ಥಿ (ಪಕ್ಷೇತರ) ಡಿ.ಟಿ. ಶ್ರೀನಿವಾಸ್ ಪ್ರಬಲ ಪೈಪೋಟಿ ನೀಡಿದ್ದಾರೆ. ಜೆಡಿಎಸ್‌ನ ಚೌಡರೆಡ್ಡಿ 3ನೇ ಸ್ಥಾನ ಹಾಗೂ ಕಾಂಗ್ರೆಸ್‌ನ ರಮೇಶ್‌ಬಾಬು 4ನೇ ಸ್ಥಾನಕ್ಕೆ ತೃಪ್ತಿಪಟ್ಟಿದ್ದಾರೆ.

ಈಶಾನ್ಯ ಶಿಕ್ಷಕರ ಕ್ಷೇತ್ರದಿಂದ ಬಿಜೆಪಿಯ ಶಶಿಲ್ ನಮೋಶಿ ಗೆದ್ದಿದ್ದು, ಕಾಂಗ್ರೆಸ್‌ನ ಶರಣಪ್ಪ ಮಟ್ಟೂರ ಅವರನ್ನು ಸೋಲಿಸಿದ್ದಾರೆ. ಇಲ್ಲಿ ಜೆಡಿಎಸ್ ಅಭ್ಯರ್ಥಿ ತಿಮ್ಮಯ್ಯ ಪುರ್ಲೆ ಮೂರನೇ ಸ್ಥಾನಿಯಾಗಿದ್ದಾರೆ. ಒಟ್ಟಾರೆ ಚುನಾವಣೆ ನಡೆದಿದ್ದ ನಾಲ್ಕು ಕ್ಷೇತ್ರಗಳಲ್ಲಿ ಬಿಜೆಪಿ ಭರ್ಜರಿ ಜಯ ದಾಖಲಿಸಿದೆ.

**ಬೆಂಗಳೂರು ಶಿಕ್ಷಕರ ಕ್ಷೇತ್ರ**

- ಪುಟ್ಟಣ್ಣ – ಬಿಜೆಪಿ 7,335
- ಪ್ರವೀಣ್ ಪೀಟರ್ – ಕಾಂಗ್ರೆಸ್ 782
- ಎ. ಪಿ. ರಂಗನಾಥ್ – ಜೆಡಿಎಸ್ – 5,107

**ಆಗ್ನೇಯ ಪದವೀಧರ ಕ್ಷೇತ್ರ**

- ಚಿದಾನಂದಗೌಡ – ಬಿಜೆಪಿ 24,217
- ಡಿ.ಟಿ ಶ್ರೀನಿವಾಸ – ಪಕ್ಷೇತರ 18,738
- ಚೌಡರೆಡ್ಡಿ ತೊಪಲ್ಲಿ – ಜೆಡಿಎಸ್ 16,539
- ರಮೇಶ್ ಬಾಬು –ಕಾಂಗ್ರೆಸ್ 8,690

**ಪಶ್ಚಿಮ ಪದವೀಧರ ಕ್ಷೇತ್ರ**

- ಎಸ್.ವಿ. ಸಂಕನೂರ – ಬಿಜೆಪಿ 23,857
- ಡಾ: ಕುಬೇರಪ್ಪ – ಕಾಂಗ್ರೆಸ್ 12,448
- ಬಸವರಾಜ ಗುರಿಕಾರ –ಸ್ವತಂತ್ರ 6,188

**ಈಶಾನ್ಯ ಶಿಕ್ಷಕರ ಕ್ಷೇತ್ರ**

- ಶಶಿಲ್ ನಮೋಶಿ – ಬಿಜೆಪಿ 10,212

- ಶರಣಪ್ಪ ಮಟ್ಟೂರ – ಕಾಂಗ್ರೆಸ್ 7,082
- ತಿಮ್ಮಯ್ಯ ಪುರ್ಲೆ – ಜೆಡಿಎಸ್ 3,812

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:12.11.2020

## 9. ನೂತನ ಶಾಸಕರ ಪ್ರಮಾಣ ವಚನ

**ದಿನಾಂಕ: 23.11.2020ರಂದು ವಿಧಾನಸೌಧದ ಕಾನ್ಫರೆನ್ಸ್ ಹಾಲ್‌ನಲ್ಲಿ ಬೆಂಗಳೂರಿನ ರಾಜರಾಜೇಶ್ವರಿನಗರ ಹಾಗೂ ತುಮಕೂರಿನ ಶಿರಾ ಕ್ಷೇತ್ರಗಳಿಗೆ ನಡೆದ ಉಪ ಚುನಾಣೆಯಲ್ಲಿ ಆಯ್ಕೆಯಾದ ಶ್ರೀ ಮುನಿರತ್ನ ಹಾಗೂ ಡಾ: ರಾಜೇಶ್ ಗೌಡ ರವರಿಗೆ ಸನ್ಮಾನ್ಯ ಸಭಾಧ್ಯಕ್ಷರು ಪ್ರಮಾಣವಚನ ಬೋಧಿಸಿ ಶುಭಾಶಯ ಕೋರಿದ ಸಂದರ್ಭ.**

ಶಿರಾ ಮತ್ತು ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಗೆಲುವು ಸಾಧಿಸಿರುವ ಬಿಜೆಪಿಯ ಡಾ: ರಾಜೇಶ್‌ಗೌಡ ಹಾಗೂ ಮುನಿರತ್ನ ಶಾಸಕರಾಗಿ ಸ್ಪೀಕರ್ ಕಾಗೇರಿ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಮುನಿರತ್ನ ಯಡಿಯೂರಪ್ಪ ಪ್ರಚಾರದ ವೇಳೆ ನನಗೆ ಮಂತ್ರಿ ಮಾಡುವ ಭರವಸೆ ನೀಡಿದ್ದಾರೆ. ಈ ಬಗ್ಗೆ ನನಗೆ ವಿಶ್ವಾಸವಿದೆ ಎಂದರು. ಮಿತ್ರಮಂಡಳಿ ಸದಸ್ಯರ ಮಧ್ಯೆ ಬಿರುಕು ಬಿಟ್ಟಿದ್ದೆಯಾ ಎಂಬ ಪ್ರಶ್ನೆಗೆ ನಾನು ಭೈರತಿ ಬಸವರಾಜ್ ಹಾಗೂ ಸೋಮಶೇಖರ್ ಒಟ್ಟಾಗಿಯೇ ಇದ್ದೇವೆ, ಯಾವುದೇ ಬಿರುಕು ಇಲ್ಲ ಎಂದರು. ಇ.ವಿ.ಎಂ ಬಗ್ಗೆ ಅನುಮಾನ ವ್ಯಕ್ತಪಡಿಸಿದ ಸಂಸದ ಡಿ.ಕೆ. ಸುರೇಶ್‌ಗೆ ತಿರುಗೇಟು ನೀಡಿದ ಅವರು 2.5 ಲಕ್ಷ ಮತಗಳ ಅಂತರದಿಂದ ಅವರು ಗೆದ್ದಿದ್ದಾರೆ. ಆಗ ಇವಿಎಂ ಸಮಸ್ಯೆ ಇರಲಿಲ್ಲವೇ ನಾನು ಗೆದ್ದಾಗ ಮಾತ್ರ ಈ ಪ್ರಶ್ನೆ ಉದ್ಭವಿಸುತ್ತದೆಯೇ ಎಂದು ವ್ಯಂಗ್ಯವಾಡಿದರು.

ಆಧಾರ: ವಿಶ್ವವಾಣಿ, ದಿನಾಂಕ:29.11.2020

## 10. ನಾಲ್ಕೇ ದಿನಕ್ಕೆ ಅಧಿವೇಶನ ಮೊಟಕು

ಗ್ರಾಮ ಪಂಚಾಯತಿ ಚುನಾವಣಾ ಕಾವು ಹೆಚ್ಚಾಗುತ್ತಿದ್ದಂತೆ ಇತ್ತ ಸದನವನ್ನು ಮೊಟಕುಗೊಳಿಸಲು ಕಲಾಪ ಸಲಹಾ ಸಮಿತಿಯಲ್ಲಿ ತೀರ್ಮಾನಿಸಲಾಗಿದೆ. ಭೋಜನಾ ವಿರಾಮದ ವೇಳೆ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಗ್ರಾಮ ಪಂಚಾಯಿತಿ ಚುನಾವಣೆ ಇರುವುದರಿಂದ ಅಲ್ಲಿ ಸಿದ್ಧತೆ ನಡೆಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಆದ್ದರಿಂದ ಸದನವನ್ನು ಮೊಟಕುಗೊಳಿಸಬೇಕು ಎಂದು ಉಭಯ ಪಕ್ಷದ ನಾಯಕರ ಮೇಲೆ ಶಾಸಕರು ಒತ್ತಡ ಹೇರಿದ್ದಾರೆ. ಆದ್ದರಿಂದ ಅನಿವಾರ್ಯವಾಗಿ ಸದನವನ್ನು ಮೊಟಕುಗೊಳಿಸಲು ತೀರ್ಮಾನಿಸಲಾಗಿದೆ.

ಚಳಿಗಾಲದ ಅಧಿವೇಶನದ ಆರಂಭದಲ್ಲಿ ಡಿಸೆಂಬರ್ 7 ರಿಂದ 15ರವರೆಗೆ ಅಂದರೆ, ಏಳು ದಿನಗಳ ಕಾಲ ಅಧಿವೇಶನ ನಡೆಸಲು ತೀರ್ಮಾನಿಸಲಾಗಿತ್ತು. ಗ್ರಾಮ ಪಂಚಾಯಿತಿ ಚುನಾವಣೆ ಗಮನದಲ್ಲಿರಿಸಿಕೊಂಡು ನಾಲ್ಕೇ ದಿನಕ್ಕೆ ಮೊಟಕುಗೊಳಿಸಲು ತೀರ್ಮಾನಿಸಲಾಗಿದೆ. ಶಾಸಕರು ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ತೊಡಗಿಸಿಕೊಳ್ಳಬೇಕಾಗಿದ್ದರಿಂದ ಸದನ ಕಲಾಪ ಸಮಿತಿ ಸಭೆಯಲ್ಲಿ ಚರ್ಚಿಸಿ ಅಧಿವೇಶನ ಅಂತ್ಯಗೊಳಿಸಲು ತೀರ್ಮಾನಿಸಿದ್ದೇವೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದರು.

ಆಧಾರ: ವಿಶ್ವವಾಣಿ, ದಿನಾಂಕ:09.12.2020

## 11. ಜಂಟಿ ಸದನ ಸಮಿತಿಯಿಂದ ತನಿಖೆ

ರಾಜ್ಯದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣದಲ್ಲಿ ಭಾರೀ ಅವ್ಯವಹಾರ ನಡೆದಿದ್ದು, ಜಂಟಿ ಸದನ ಸಮಿತಿಯಿಂದ ತನಿಖೆ ನಡೆಸಿ ಎರಡು ತಿಂಗಳಲ್ಲಿ ವರದಿ ಪಡೆದು ಸದನಕ್ಕೆ ಮಂಡಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಮುಖ್ಯಮಂತ್ರಿಯವರು ಘೋಷಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ವೆಂಕಟರೆಡ್ಡಿ ಮುದ್ನಾಳ್ ಪ್ರಸ್ತಾಪಿಸಿದ ವಿಚಾರದ ಚರ್ಚೆಯಲ್ಲಿ ಪಾಲ್ಗೊಂಡು ಆಡಳಿತ ಹಾಗೂ ಪ್ರತಿಪಕ್ಷ ಜೆಡಿಎಸ್ ಸದಸ್ಯರು ಘಟಕ ನಿರ್ಮಾಣದಲ್ಲಿ ಭಾರಿ ಅವ್ಯವಹಾರ ನಡೆದಿದ್ದು, ತನಿಖೆಗೆ ಒತ್ತಾಯಿಸಿದ್ದರಿಂದ ಯಡಿಯೂರಪ್ಪ ತನಿಖೆ ನಡೆಸುವುದಾಗಿ ಪ್ರಕಟಿಸಿದರು. ನಾನು ಕೆಲವೆಡೆ ಭೇಟಿ ನೀಡಿದಾಗ ಶುದ್ಧ ಕುಡಿಯುವ ನೀರಿನ ಘಟಕಗಳು ಹಾಳಾಗಿರುವುದನ್ನು ಕಂಡಿದ್ದೇನೆ. ಎಲ್ಲಿಯೂ ಅವು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಘಟಕ ನಿರ್ಮಾಣಕ್ಕೆ ಒಂದಕ್ಕಿಂತ ನಾಲ್ಕು ಪಟ್ಟು ಹೆಚ್ಚು ವೆಚ್ಚ ಮಾಡಿರುವುದು ಕಾಣುತ್ತಿದೆ. ಇದು ದೊಡ್ಡ ಹಗರಣ ಎರಡು ತಿಂಗಳಲ್ಲಿ ಎಲ್ಲೆಡೆ ಪರಿಶೀಲನೆ ನಡೆಸಿ ಜಂಟಿ ಸದನ ಸಮಿತಿಯಿಂದ ಸಮಗ್ರ ತನಿಖೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದರು.

ಬಿಜೆಪಿಯ ಬಸನಗೌಡ ಪಾಟೀಲ್ ಯತ್ನಾಳ್ ಈ ಘಟಕಗಳ ನಿರ್ಮಾಣದಲ್ಲಿ ಭಾರೀ ಹಗರಣವಾಗಿದೆ. ರೂ.4 ಲಕ್ಷ ವೆಚ್ಚದಲ್ಲಾಗುವ ಘಟಕ ನಿರ್ಮಾಣಕ್ಕೆ ನಾಲ್ಕು ಪಟ್ಟು ಹೆಚ್ಚು ಹಣಕ್ಕೆ ಟೆಂಡರ್ ನೀಡಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಹಗಲು ದರೋಡೆ ನಡೆದಿದೆ. ಶೇ.99ರಷ್ಟು ಘಟಕಗಳು ಸ್ಥಗಿತಗೊಂಡಿವೆ. ಕೆ.ಎಸ್. ಈಶ್ವರಪ್ಪ ಅವರು ಸಚಿವರಾದಾಗ ಈ ಬಗ್ಗೆ ಮಾತನಾಡಿದ್ದರು. ನಂತರ ಯಾಕೆ ಮೌನವಾಗಿದ್ದಾರೋ ಗೊತ್ತಿಲ್ಲ ಎಂದು ಕಾಲೆಳೆದರು. ಇದಕ್ಕೆ ಪ್ರತಿಕ್ರಿಯಿಸಿದ ಕೆ. ಎಸ್. ಈಶ್ವರಪ್ಪ ನಾನಂತೂ ಮೌನವಾಗಿಲ್ಲ. ಪ್ರತಿಷ್ಠಿತ ಹಿಪ್ಸಾಸ್ ಸಂಸ್ಥೆಯಿಂದ ಸರ್ವೇ ನಡೆಸಲಾಗಿದೆ. ಮ್ಯಾಕ್ಸ್ ಆಕ್ವಾ ಏಜೆನ್ಸಿಯ ಎಫ್‌ಎಸ್‌ಡಿ ಮುಟ್ಟುಗೋಲು ಹಾಕಿಕೊಂಡು ಟೆಂಡರ್ ರದ್ದತಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ಸದನ ಸೂಚಿಸಿದಂತೆ ಮುಂದುವರಿಯುತ್ತೇನೆಂದು ಹೇಳಿದರು.

ಆಧಾರ: ವಿಶ್ವವಾಣಿ, ದಿನಾಂಕ:10.12.2020

## 12. ಕಲಾಪ ಅನಿರ್ದಿಷ್ಟ ಅವಧಿಗೆ ಮುಂದೂಡಿಕೆ

ಕೇವಲ ನಾಲ್ಕು ದಿನಗಳು ನಡೆದ ವಿಧಾನಮಂಡಲದ ಚಳಿಗಾಲದ ಅಧಿವೇಶನದ ಕಲಾಪವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಲಾಯಿತು.

ಈ ಬಾರಿ ವಿಧಾನ ಸಭೆಯಲ್ಲಿ ಪ್ರಮುಖವಾಗಿ ಗೋಹತ್ಯೆ ನಿಷೇಧ ಮಸೂದೆ, ಬಿಬಿಎಂಪಿ ತಿದ್ದುಪಡಿ ಮಸೂದೆ ಅಂಗೀಕಾರಗೊಂಡವು. ವಿಧಾನ ಪರಿಷತ್ತಿನಲ್ಲಿ ಎಪಿಎಂಪಿ ತಿದ್ದುಪಡಿ ಮಸೂದೆ ಮತ್ತು ಭೂಸುಧಾರಣಾ ತಿದ್ದುಪಡಿ ಮಸೂದೆಗಳಿಗೆ ಒಪ್ಪಿಗೆ ಸಿಕ್ಕಿತು. ಇವೆರಡಕ್ಕೂ ಜೆಡಿಎಸ್ ಬೆಂಬಲ ವ್ಯಕ್ತಪಡಿಸಿತ್ತು. ಆದರೆ, ಪರಿಷತ್ತಿನಲ್ಲಿ ಗೋಹತ್ಯೆ ನಿಷೇಧ ಮಸೂದೆ ಮಂಡನೆಯಾಗಲಿಲ್ಲ.

ಕಲಾಪ ಅನಿರ್ದಿಷ್ಟ ಅವಧಿಗೆ ಮತ್ತೆ ಮುಂದೂಡಿರುವುದರಿಂದಾಗಿ ಪರಿಷತ್ತಿನಲ್ಲಿ ಈ ಮಸೂದೆಗೆ ಅಂಗೀಕಾರ ಪಡೆಯಲು ಆಗಿಲ್ಲ. ಈಗಿರುವ ದಾರಿ ಎಂದರೆ ಸುಗ್ರೀವಾಜ್ಞೆ ತರುವುದು ಅಥವಾ ರಾಜ್ಯಪಾಲರ ಅನುಮತಿ ಪಡೆದು ವಿಶೇಷ ಅಧಿವೇಶನವನ್ನು ಕರೆದು ಅಂಗೀಕಾರ ಪಡೆಯುವುದು. ಕಲಾಪ ಮುಕ್ತಾಯಗೊಂಡಿರುವುದರಿಂದ ಮತ್ತೆ ವಿಶೇಷ ಅಧಿವೇಶನ ಕರೆಯಲು ರಾಜ್ಯಪಾಲರು ಸಮ್ಮತಿಸಿದರೆ, ಡಿಸೆಂಬರ್ 15ರಂದು ಅಧಿವೇಶನ ನಡೆಸಲು ಸರ್ಕಾರ ಚಿಂತನೆ ನಡೆಸಿದೆ. ಒಂದು ವೇಳೆ ರಾಜ್ಯಪಾಲರು ಒಪ್ಪಿಗೆ ನೀಡದೇ ಇದ್ದರೆ ಸುಗ್ರೀವಾಜ್ಞೆ ಮೂಲಕ ಕಾಯ್ದೆ ಜಾರಿಗೊಳಿಸುವ ಚಿಂತನೆ ಸರ್ಕಾರದ ಮುಂದಿದೆ ಎಂದು ಮೂಲಗಳು ಹೇಳಿವೆ.

ಆಧಾರ: ಪ್ರಜಾವಾಣಿ, ದಿನಾಂಕ:11.12.2020

## 13.ಚುನಾವಣೆ ಮುಂದೂಡಲು ಮಸೂದೆ ಅಸ್ತ್ರ

ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸಲು ಹಾಗೂ ಪಾಲಿಕೆ ವ್ಯಾಪ್ತಿಯನ್ನು ಹಿಗ್ಗಿಸಲು ಅನುವು ಮಾಡುವ ಬಿಬಿಎಂಪಿ ಮಸೂದೆ 2020ಕ್ಕೆ ವಿಧಾನಸಭೆಯಲ್ಲಿ ಒಪ್ಪಿಗೆ ನೀಡಲಾಯಿತು. ಕಾಂಗ್ರೆಸ್ ಹಾಗೂ ಜೆಡಿಎಸ್ ಸದಸ್ಯರ ಗೈರುಹಾಜರಿಯ ಮಧ್ಯೆಯೇ ಮಸೂದೆಯನ್ನು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ಮಂಡಿಸಿದರು.

ಮಾರ್ಚ್‌ನಲ್ಲಿ ನಡೆದ ವಿಧಾನ ಮಂಡಲ ಅಧಿವೇಶನದಲ್ಲಿ ಮಂಡನೆಯಾದ ಮಸೂದೆಗೆ ವಿರೋಧ ವ್ಯಕ್ತವಾದ ಕಾರಣ ಅದರ ವಿಶ್ಲೇಷಣೆಗೆ ಜಂಟಿ ಪರಿಶೀಲನಾ ಸಮಿತಿ ರಚಿಸಲಾಗಿತ್ತು. ಎಸ್.ರಘು ನೇತೃತ್ವದ ಸಮಿತಿಯು ಅಂತಿಮ ವರದಿ ಸಲ್ಲಿಸಿತು.

ಅಂತಿಮ ಮೀಸಲಾತಿ ಪಟ್ಟಿ ಪ್ರಕಟವಾದ ಬಳಿಕ ಪಾಲಿಕೆಯ 198 ವಾರ್ಡ್‌ಗಳಿಗೆ ಆರು ವಾರಗಳಲ್ಲಿ ಚುನಾವಣಾ ಅಧಿಸೂಚನೆ ಪ್ರಕಟಿಸಬೇಕು ಎಂದು ಹೈಕೋರ್ಟ್ ಕಳೆದ ವಾರ ಆದೇಶಿಸಿತ್ತು. ಬಿಬಿಎಂಪಿ ಮಸೂದೆಯನ್ನು ಮುಂದಿಟ್ಟುಕೊಂಡು ಹೈಕೋರ್ಟ್ ಆದೇಶದ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ಜೆ.ಸಿ.ಮಾಧುಸ್ವಾಮಿ, ಬಿಬಿಎಂಪಿ ಗಡಿಯಾಚೆಗೆ ಒಂದು ಕಿ.ಮೀ ಪರಧಿಯೊಳಗೆ ಇರುವ ಗ್ರಾಮ ಪಂಚಾಯಿತಿ, ನಗರ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳನ್ನು ಪಾಲಿಕೆ ವ್ಯಾಪ್ತಿಗೆ ಸೇರಿಸಬಹುದು ಎಂದು ಸಮಿತಿ ಶಿಫಾರಸ್ಸು ಮಾಡಿದೆ. ಇದರಿಂದ ಕೆಲವು ಗೊಂದಲ ಉಂಟಾಗಿದೆ. ಅಗತ್ಯ ಬಿದ್ದರೆ ಹೆಚ್ಚುವರಿಯಾಗಿ 100 ಮೀಟರ್, 300 ಮೀಟರ್, 400 ಮೀಟರ್ ಪ್ರದೇಶವನ್ನು ಸೇರಿಸಲು ಅವಕಾಶ ನೀಡಲಾಗುತ್ತದೆ. ಇದನ್ನು ವಾರ್ಡ್ ಮರುವಿಂಗಡಣೆ ಸಮಿತಿ ನಿರ್ಧರಿಸುತ್ತದೆ. ಬಿಬಿಎಂಪಿ ಗಡಿಯಾಚೆ ಇರುವ ಸ್ಥಳೀಯ ಸಂಸ್ಥೆಗೆ ಸ್ವಯಂ ಪ್ರೇರಿತರಾಗಿ ಪಾಲಿಕೆ ವ್ಯಾಪ್ತಿಗೆ ಸೇರಲು ಅವಕಾಶ ಇದೆ ಎಂದರು.

ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 225 ರಿಂದ 250ರ ವರೆಗೆ ಹೆಚ್ಚಿಸಲು ಪ್ರಸ್ತಾಪಿಸಲಾಗಿತ್ತು. ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಏರಿಸಲಾಗುತ್ತದೆ. ಆ ಸಂಖ್ಯೆಯ ಆಧಾರದಲ್ಲಿ ವಾರ್ಡ್‌ಗಳ ಮರುವಿಂಗಡಣೆ ಮಾಡಲಾಗುತ್ತದೆ. 2–3 ವಿಧಾನ ಸಭಾ ಕ್ಷೇತ್ರಗಳಿಗೆ ವಾರ್ಡ್ ಹಂಚಿ ಹೋಗದಂತೆ ಎಚ್ಚರವಹಿಸಲಾಗುವುದು ಎಂದು ಅವರು ಹೇಳಿದರು. ಬಿಜೆಪಿಯ ಅರವಿಂದ ಲಿಂಬಾವಳಿ ಮಾತನಾಡಿ, 2011ರ ಜನಗಣತಿಗೆ ಅನುಗುಣವಾಗಿ ವಾರ್ಡ್ ಮರುವಿಂಗಡಣೆ ಮಾಡುವುದು ಬೇಡ. ಕಳೆದ 10 ವರ್ಷಗಳಲ್ಲಿ ನಗರದ ಹೊರವಲಯದಲ್ಲಿ ಜನಸಂಖ್ಯೆ ವಿಪರೀತ ಹೆಚ್ಚಾಗಿದೆ. ಬೆಳ್ಳಂದೂರು, ಹೊರಮಾವು ವಾರ್ಡ್‌ಗಳಲ್ಲಿ ಜನಸಂಖ್ಯೆ 1 ಲಕ್ಷಕ್ಕೂ ಹೆಚ್ಚು ಇದೆ. ಮತದಾರರ ಪಟ್ಟಿಯ ಆಧಾರದಲ್ಲಿ ಮರುವಿಂಗಡಣೆ ಮಾಡಬೇಕು ಎಂದು ಸಲಹೆ ನೀಡಿದರು.

ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ ಮತ್ತಿತ್ತರ ಕಡೆಗಳಿಂದ ಪರಿಷತ್ ಸದಸ್ಯರಾಗಿ ಆಯ್ಕೆಯಾದವರಿಗೆ ಪಾಲಿಕೆ ಚುನಾವಣೆಯಲ್ಲಿ ಮತದಾನದ ಹಕ್ಕು ನೀಡಲಾಗುತ್ತಿದೆ. ಇದಕ್ಕೆ ಅವಕಾಶ ನೀಡಬಾರದು ಎಂದು ಅವರು ಆಗ್ರಹಿಸಿದರು.

ಮುನಿರತ್ನ, ಇದೊಂದು ಉತ್ತಮ ಮಸೂದೆ. ಕೆಲವು ವಾರ್ಡ್‌ಗಳಲ್ಲಿ ಮತದಾರರ ಸಂಖ್ಯೆ ಜಾಸ್ತಿ ಇದೆ. ಇನ್ನು ಮುಂದೆ ವಾರ್ಡ್‌ಗಳ ವೈಜ್ಞಾನಿಕ ವಿಂಗಡಣೆ ಆಗಲಿದೆ. ಪಕ್ಷೇತರ ಸದಸ್ಯ ಶರತ್ ಬಚ್ಚೇಗೌಡ, ಶಾಸಕರ ನೇತೃತ್ವದ ಸಮಿತಿ ಹಾಗೂ ವಲಯ ಸಮಿತಿಗಳೆರಡೂ ಅಗತ್ಯ ಇರಲಿಲ್ಲ. ವಲಯ ಸಮಿತಿಗಳ ಸಂಖ್ಯೆಯನ್ನು 4–5 ಕ್ಕೆ ಇಳಿಸಬೇಕು ಎಂದು ಸಲಹೆ ನೀಡಿದರು.

ಮಸೂದೆಯ ಪ್ರಮುಖ ಅಂಶಗಳು

- ಮೇಯರ್ ಹಾಗೂ ಉಪ ಮೇಯರ್ ಅಧಿಕಾರಾವಧಿ 30 ತಿಂಗಳು.
- ಪ್ರಧಾನ ಕಾರ್ಯದರ್ಶಿ ಅಧಿಕಾರಿಯವರನ್ನು ಮುಖ್ಯ ಆಯುಕ್ತರನ್ನಾಗಿ ನೇಮಕ.
- ವಲಯ ಆಯಕ್ತರನ್ನಾಗಿ ಕಾರ್ಯದರ್ಶಿ ದರ್ಜೆಯ ಅಧಿಕಾರಿಗಳ ನೇಮಕ.
- ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ ಸ್ಥಳೀಯ ಶಾಸಕರ ನೇತೃತ್ವದಲ್ಲಿ ಕ್ಷೇತ್ರ ಸಮಾಲೋಚನಾ ಸಮಿತಿಗಳ ಸ್ಥಾಪನೆ. ಪಾಲಿಕೆ ಸದಸ್ಯರ ಜೊತೆಗೆ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಐವರನ್ನು ಸದಸ್ಯರನ್ನಾಗಿ ನಾಮನಿರ್ದೇಶನ. ಇವರ ಅಧಿಕಾರದ ಅವಧಿ 30 ತಿಂಗಳುಗಳು.
- ಪಾಲಿಕೆಯ ಪ್ರತಿಯೊಂದು ವಲಯದಲ್ಲಿ ವಲಯ ಸಮಿತಿಗಳ ಸ್ಥಾಪನೆ, ವಲಯದ ಸದಸ್ಯರೊಬ್ಬರು ಈ ಸಮಿತಿಗೆ ಅಧ್ಯಕ್ಷರು, ವಲಯ ಸಮಿತಿ ಸದಸ್ಯರ ಅಧಿಕಾರದ ಅವಧಿ 1 ವರ್ಷ.
- ಸ್ಥಾಯಿ ಸಮಿತಿಗಳ ಸಂಖ್ಯೆ ಎಂಟಕ್ಕೆ ಇಳಿಕೆ. ಈಗ 12 ಸ್ಥಾಯಿ ಸಮಿತಿಗಳು ಇವೆ.
- ಪ್ರತಿಯೊಂದು ವಾರ್ಡ್‌ಗೆ ವಾರ್ಡ್ ಸಮಿತಿ.
- 60X40 ಅಡಿಗಿಂತ ಹೆಚ್ಚಿನ ವಿಸ್ತೀರ್ಣದ ಮನೆಗಳಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸಿಕೊಳ್ಳುವುದು ಕಡ್ಡಾಯ.
- ಜಿಎಸ್‌ಟಿ ಬಂದ ಬಳಿಕ ಜಾಹೀರಾತು ಹಾಗೂ ಮನರಂಜನಾ ತೆರಿಗೆ ಹಾಕಲು ಅವಕಾಶ ಇರಲಿಲ್ಲ. ಜಾಹೀರಾತು ಹಾಗೂ ಮನರಂಜನಾ ಶುಲ್ಕ ಸಂಗ್ರಹಿಸಲು ಮಸೂದೆಯಲ್ಲಿ ಅನುವು ಮಾಡಿಕೊಡಲಾಗಿದೆ.
- ಆಪಾಯಕಾರಿ ಕ್ವಾರಿಗಳನ್ನು ತಡೆಯಲು ಬಿಬಿಎಂಪಿಗೆ ಅಧಿಕಾರ.

ಆಧಾರ: ಪ್ರಜಾವಾಣಿ, ದಿನಾಂಕ:11.12.2020

## 14. ಬಿಬಿಎಂಪಿ ವಿಧೇಯಕ–2020 ಅಂಗೀಕಾರ

ಬಿಬಿಎಂಪಿ ವ್ಯಾಪ್ತಿ 1 ಕಿ.ಮೀ. ವಿಸ್ತರಣೆ, ವಾರ್ಡ್‌ಗಳ ಸಂಖ್ಯೆ 243ಕ್ಕೆ ಹೆಚ್ಚಳ, ಮೇಯರ್ ಅವಧಿ ಎರಡೂವರೆ ವರ್ಷಕ್ಕೆ ಏರಿಕೆ ಸೇರಿದಂತೆ ಬಿಬಿಎಂಪಿ ಆಡಳಿತ ಸುಧಾರಣೆಗೆ ಹಲವು ಅಂಶಗಳೊಂದಿಗೆ ರೂಪಿಸಲಾಗಿರುವ ಮಹತ್ವದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿಧೇಯಕ–2020 ಅನ್ನು ವಿಧಾನ ಸಭೆ ಪ್ರತಿಪಕ್ಷ ಸದಸ್ಯರ ಅನುಪಸ್ಥಿತಿಯಲ್ಲಿ ಅಂಗೀಕರಿಸಲಾಯಿತು. ಇನ್ನು ವಿಧಾನ ಪರಿಷತ್ತಿನಲ್ಲೂ ವಿಧೇಯಕವನ್ನು ಮಂಡನೆ ಮಾಡಿ ಅನುಮೋದನೆ ಪಡೆಯಲಾಯಿತು.

ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 198 ರಿಂದ 243 ಕ್ಕೆ ಏರಿಕೆ ಮಾಡುವ ನಿಟ್ಟಿನಲ್ಲಿ ಜಂಟಿ ಪರಿಶೀಲನಾ ಸಮಿತಿ ಶಿಫಾರಸ್ಸು ಮಾಡಿ ವರದಿ ಮಂಡನೆ ಮಾಡಿತ್ತು. ಆ ವರದಿಯನ್ನೇ ಆಧರಿಸಿ ಸಿದ್ದಪಡಿಸಿದ 2020ರ ಸಾಲಿನ ಬಿಬಿಎಂಪಿ ವಿಧೇಯಕವನ್ನು ಸದನದಲ್ಲಿ ಮಂಡಿಸಲಾಗಿತ್ತು. ಬೆಂಗಳೂರು ನಗರದಲ್ಲಿ ಉತ್ತಮ ಆಡಳಿತಕ್ಕಾಗಿ ಜಾರಿಗೆ ತಂದಿರುವ ಈ ಮಸೂದೆಗೆ ಅನುಮೋದನೆ ನೀಡುವಂತೆ ಸರ್ಕಾರದ ಪರವಾಗಿ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಸದನದಲ್ಲಿ ಕೋರಿದರು. ಕೆಲ ಬಿಜೆಪಿ ಸದಸ್ಯರ ಸಲಹೆ, ಅಭಿಪ್ರಾಯಗಳನ್ನು ಆಲಿಸಿದ ಬಳಿಕ ಈ ವಿಧೇಯಕವನ್ನು ಪರ್ಯಾಲೋಚಿಸಿ ಧ್ವನಿ ಮೂಲಕ ಅಂಗೀಕರಿಸಲಾಯಿತು.

ವಿಧೇಯಕ ಪರ್ಯಾಲೋಚನೆ ಸೂಚಿಸಿದ ಸಚಿವ ಮಾಧುಸ್ವಾಮಿ, ವಿಧೇಯಕದಲ್ಲಿ ಬಿಬಿಎಂಪಿಯ ವ್ಯಾಪ್ತಿಯನ್ನು 1 ಕಿ.ಮೀ. ವಿಸ್ತರಿಸಲು ಅವಕಾಶ ನೀಡಲಾಗಿದೆ ಈ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳು 1 ಕಿ.ಮೀ. ಮೀರಿ ಇನ್ನೂ ನೂರಿನ್ನೂರು ಮೀಟರ್ ಆಚೆಗೆ ಇದ್ದರೂ ಅದನ್ನು ಪಾಲಿಕೆ ವ್ಯಾಪ್ತಿಗೆ ಸೇರಿಸಲು ತಿರ್ಮಾನಿಸಲಾಗಿದೆ. ಜೊತೆಗೆ ಪ್ರಸ್ತುತ 12 ತಿಂಗಳು ಅಥವಾ 1 ವರ್ಷ ಇರುವ ಬಿಬಿಎಂಪಿ ಮೇಯರ್ ಅವಧಿಯನ್ನು 30 ತಿಂಗಳು ಅಥವಾ ಎರಡೂವರೆ ವರ್ಷಕ್ಕೆ ಏರಿಕೆ ಮಾಡಲಾಗಿದೆ. ಹಾಲಿ ಇರುವ 198 ವಾರ್ಡ್‌ಗಳನ್ನು 243ಕ್ಕೆ ಹೆಚ್ಚಿಸಲಾಗಿದೆ. ಸರ್ಕಾರದ ಕಾರ್ಯದರ್ಶಿ ದರ್ಜೆಯ ಅಧಿಕಾರಿಯನ್ನು ಮುಖ್ಯ ಆಯುಕ್ತರಾಗಿ ನೇಮಕ ಮಾಡಬೇಕು, ಸ್ಥಾಯಿ ಸಮಿತಿ ಸದಸ್ಯರ ಸಂಖ್ಯೆಯನ್ನು 12 ರಿಂದ 15 ಕ್ಕೆ ಏರಿಕೆ ಮಾಡಲು ಅನುಮತಿ ನೀಡಲಾಗಿದೆ ಎಂದು ತಿಳಿಸಿದರು.

ಇದುವರೆಗೆ ಬಿಬಿಎಂಪಿ ಸದಸ್ಯರಾಗಿದ್ದವರು ಶಾಸಕರಾಗಿ, ಸಂಸದರಾಗಿ ಅಥವಾ ಇನ್ನಾವುದೇ ಸ್ಥಳೀಯ ಸಂಸ್ಥೆಗಳ ಸದಸ್ಯರಾಗಿ ಚುನಾಯಿತರಾದರೆ ಎರಡೂ ಕಡೆ ತಮ್ಮ ಸದಸ್ಯತ್ವ ಮುಂದುವರೆಸಲು ಅವಕಾಶ ಇತ್ತು. ಈಗಿನ ಮಸೂದೆಯಲ್ಲಿ ಆ ಅಂಶವನ್ನು ತೆಗೆದುಹಾಕಲಾಗಿದ್ದು, ಬಿಬಿಎಂಪಿ ಸದಸ್ಯರು ಶಾಸಕ, ಸಂಸದ ಸೇರಿ ಮತ್ತೊಂದು ಸಂಸ್ಥೆಯ ಚುನಾಯಿತ ಪ್ರತಿನಿಧಿಯಾಗಿ ಆಯ್ಕೆಯಾದರೆ ಮುಂದಿನ 6 ತಿಂಗಳಲ್ಲಿ ಯಾವುದಾದರೂ ಒಂದು ಸದಸ್ಯ ಸ್ಥಾನವನ್ನು ಮಾತ್ರ ಉಳಿಸಿಕೊಳ್ಳಬೇಕೆಂದು ನಿಯಮ ತರಲಾಗಿದೆ.

ಈಗಿರುವ 8 ವಲಯಗಳನ್ನು 15ಕ್ಕೆ ಹೆಚ್ಚಿಸುವುದು, ಬಿಬಿಎಂಪಿಯ ಕ್ಷೇತ್ರಗಳ ಶಾಸಕರ ಅಧ್ಯಕ್ಷತೆಯಲ್ಲಿ ಸಲಹಾ ಸಮಿತಿ ರಚಿಸುವುದು, ಘನತ್ಯಾಜ್ಯ ನಿರ್ವಹಣಾ ಸೆಸ್, ಕ್ರಿಕೆಟ್ ವೀಕ್ಷಣೆ ಸೇರಿದಂತೆ ಮನೋರಂಜನಾ ಕಾರ್ಯಕ್ರಮಗಳಿಗೆ ಹೆಚ್ಚಿನ ಕರ, ನಗರ ಸಾರಿಗೆ ಕರ ಸಂಗ್ರಹಕ್ಕೆ ಪಾಲಿಕೆಗೆ ಅಧಿಕಾರ, ಜಲ ಸಂರಕ್ಷಣೆ ದೃಷ್ಟಿಯಿಂದ ಪಾಲಿಕೆ ವ್ಯಾಪ್ತಿಯ 40/60 ಅಳತೆಯ ಮನೆಗಳಿಗೆ ಮಳೆ ನೀರು ಕೊಯ್ಲು ಕಡ್ಡಾಯ, ಅಪಾಯಕಾರಿ ಕ್ವಾರಿಗಳನ್ನು ತಡೆಯುವ ಅಧಿಕಾರವನ್ನು ಪಾಲಕೆಗೆ ನೀಡಲಾಗಿ. ಒಟ್ಟಾರೆ ಜನಸಂಖ್ಯೆಗೆ ಅನುಗುಣವಾಗಿ ವಾರ್ಡ್‌ಗಳ ಜನಸಂಖ್ಯೆ ಹೆಚ್ಚಿಸಿ ಪುನರ್ ವಿಂಗಡಣೆ ಮಾಡಿ ಬೆಂಗಳೂರು ನಗರಕ್ಕೆ ಒಳ್ಳೆಯ ಆಡಳಿತ ನಡೆಸುವ ದೃಷ್ಟಿಯಿಂದ ತಂದಿರುವ ಈ ಮಸೂದೆ ಒಪ್ಪಿಗೆ ಕೊಡಲು ಮನವಿ ಮಾಡಿದರು. ನಂತರ ವಿಧೇಯಕವನ್ನು ಸ್ಪೀಕರ್ ಧ್ವನಿ ಮತಕ್ಕೆ ಹಾಕಿದಾಗ ಸದನ ಅನುಮೋದನೆ ನೀಡಿತು.

ಆಧಾರ: ಕನ್ನಡಪ್ರಭ, ದಿನಾಂಕ:11.12.2020

## 15. ಸಾಂವಿಧಾನಿಕ ಮಹತ್ವ ಅರಿಯಲಿ

ಶತಮಾನದ ಇತಿಹಾಸ ಇರುವ ಕರ್ನಾಟಕ ವಿಧಾನ ಪರಿಷತ್ ಸಭಾಪತಿಗಳ ಕಾರ್ಯವೈಖರಿ ಸರಿಯಾಗಿಲ್ಲ. ಅದು ಸಾಂವಿಧಾನಿಕ ಮಹತ್ವ ಪಡೆದ ಗೌರವಯುತ ಹುದ್ದೆ. ಅದರಲ್ಲಿ ಕುಳಿತವರು ಶಿಸ್ತಿನಿಂದ ಇರಬೇಕು. ಈಗಿನ ವ್ಯವಸ್ಥೆ ನೋಡಿದರೆ ರಾಜ್ಯಪಾಲರು ಮಧ್ಯಪ್ರವೇಶ ಮಾಡಬೇಕಾಗಬಹುದು ಎಂದು ವಿಧಾನ ಪರಿಷತ್ ಸದಸ್ಯ ಬಸವರಾಜ ಹೊರಟ್ಟಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ವಿಧಾನ ಪರಿಷತ್ ಸಭಾಪತಿ ಹುದ್ದೆ ಗೌರವಾನ್ವಿತವಾಗಿದ್ದು, ಅದರಲ್ಲಿ ಕುಳಿತು ಕಾರ್ಯನಿರ್ವಹಿಸುವವರು ಸಾಂವಿಧಾನಿಕ ಮಹತ್ವ ಅರಿತು ನಡೆಯಬೇಕು ಎಂದು ಸಭಾಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯಕ್ಕೆ ಸಜ್ಜಾದಾಗ ಸರ್ಕಾರ ಸದನ ನಡೆಯುವುದನ್ನು ಮೊಟಕುಗೊಳಿಸಿದೆ. ಡಿಸೆಂಬರ್ 15ರವರೆಗೂ ಸದನ ನಡೆಯಬೇಕಿತ್ತು. ರಾಜ್ಯದ ಇತಿಹಾಸದಲ್ಲಿಯೇ ಇಂತಹ ಸಾಂವಿಧಾನಕ ಬಿಕ್ಕಟ್ಟು ಉದ್ಭವವಾಗಿರಲಿಲ್ಲ. ಈ ವಿಷಯದಲ್ಲಿ ಸದ್ಯದ ಸಭಾಪತಿಗಳು ಹಂಗಾಮಿಯಾಗಿ ಉಪ ಸಭಾಪತಿಗಳನ್ನು ನೇಮಿಸಿ ತಾವು ಕೆಳಗಿಳಿಯಬಹುದಿತ್ತು. ಒಂದು ವೇಳೆ ಅವಿಶ್ವಾಸ ನಿರ್ಣಯದಲ್ಲಿ ಮರಳಿ ಆ ಪಕ್ಷ ಗೆದ್ದಿದ್ದರೆ ಮತ್ತೆ ಸಭಾಪತಿ ಹುದ್ದೆ ಅಲಂಕರಿಸಬಹುದಿತ್ತು. ಹಿಂದೆ ಶಂಕರಮೂರ್ತಿ ಸಭಾಪತಿಯಾಗಿದ್ದಾಗ ಈ ರೀತಿ ಮಾಡಿ ಮಾದರಿಯಾಗಿದ್ದರು. ಅದನ್ನು ಬಿಟ್ಟು ಸದನ ಮುಂದೂಡಿದ್ದು ಸರಿಯಲ್ಲ ಎಂಬುದು ನನ್ನ ವೈಯಕ್ತಿಕ ವಿಚಾರ ಎಂದರು.

ಆಧಾರ: ಉದಯವಾಣಿ, ದಿನಾಂಕ:12.12.2020

## 16. ಬಜೆಟ್ ಜೊತೆಯಲ್ಲೆ ಚಳಿಗಾಲ ಅಧಿವೇಶನ

ರಾಷ್ಟ್ರರಾಜಧಾನಿಯಲ್ಲಿ ಕೊರೋನಾ ವೈರಸ್ ಪ್ರಕರಣ ಹೆಚ್ಚುತ್ತಿರುವುದರಿಂದ ಈ ಬಾರಿಯ ಸಂಸತ್ತಿನ ಚಳಿಗಾಲದ ಅಧಿವೇಶನ ನಡೆಯುವ ಸಾಧ್ಯತೆ ಕ್ಷೀಣಿಸಿದೆ. ಜನವರಿ ಕೊನೆವಾರದವರೆಗೂ ಅಧಿವೇಶನ ನಡೆಯುವ ಸಂಭ್ಯಾವತೆಯಿಲ್ಲ. ಅಧಿವೇಶನವನ್ನು ಮುಂದಿನ ವರ್ಷಕ್ಕೆ ಮುಂದೂಡಲು ಸರ್ಕಾರ ನಿರ್ಧರಿಸಿದೆ. ಜನವರಿ ಕೊನೆಯ ವಾರದಲ್ಲಿ ಬಜೆಟ್ ಅಧಿವೇಶನದೊಂದಿಗೆ ಜೋಡಿಸುವ ಸಾಧ್ಯತೆಯಿದೆ ಎಂದು ಮೂಲಗಳು ಹೇಳಿವೆ. ಫೆಬ್ರವರಿ 1 ರಂದು ಮುಂಗಡಪತ್ರ ಮಂಡಿಸಲಾಗುತ್ತದೆ.

ಹಲವು ಸಂಸದರು ಹಾಗೂ ಸಿಬ್ಬಂದಿಯಲ್ಲಿ ಕೊರೋನಾ ವೈರಸ್ ಪಾಸಿಟಿವ್ ಕಂಡು ಬಂದಿದ್ದರಿಂದ ಸೆಪ್ಟೆಂಬರ್‌ನಲ್ಲಿ ನಡೆದ ಮಳೆಗಾಲದ ಅಧಿವೇಶನವನ್ನು ಮೊಟಕುಗೊಳಿಸಲಾಗಿತ್ತು. ಈಗ ಬಜೆಟ್ ಅಧಿವೇಶನ ಸಮೀಪಿಸಿದಾಗ ಸಂಸತ್ ಅಧಿವೇಶನ ಆಯೋಜಿಸುವುದು ಸರ್ಕಾರದ ಯೋಜನೆಯಾಗಿದೆ.

**ಮುಂದೂಡಿಕೆ ಇದೇ ಮೊದಲಲ್ಲ:** ಸಂಸತ್ತಿನ ಚಳಿಗಾಲದ ಅಧಿವೇಶನ ವಿಳಂಬವಾಗುತ್ತಿರುವುದು ಇದೇ ಮೊದಲೇನೂ ಅಲ್ಲ. 1952 ಮತ್ತು 2019ರ ನಡುವೆ ರಾಜ್ಯಸಭೆಯ 65 ಚಳಿಗಾಲದ ಅಧಿವೇಶನಗಳು ನಡೆದಿವೆ. ಆ ಪೈಕಿ ಎಂಟು ಡಿಸೆಂಬರ್‌ನಲ್ಲಿ ಆರಂಭವಾಗಿದ್ದವು. 1962 ಮತ್ತು 1963ರಲ್ಲಿ ಡಿಸೆಂಬರ್‌ನಿಂದ ಜನವರಿಗೂ ನಡೆದಿತ್ತು. 1962–63ರಲ್ಲಿ ಚಳಿಗಾಲದ ಅಧಿವೇಶನದ ಮೊದಲ ಭಾಗ 1962ರ ನವೆಂಬರ್ 18 ರಿಂದ ಡಿಸೆಂಬರ್ 12ರವರೆಗೆ ನಡೆದಿತ್ತು. ದ್ವಿತೀಯಾರ್ಧ 1963ರ ಜನವರಿ 21 ರಿಂದ 25ರವರೆಗೆ ನಡೆದಿತ್ತು. ಇದೂ 2003ರಲ್ಲಿ ಪುನರಾವರ್ತನೆಯಾಗಿತ್ತು. ಚಳಿಗಾಲದ ಅಧಿವೇಶನದ ಪ್ರಥಮಾರ್ಧವನ್ನು 2003ರ ಡಿಸೆಂಬರ್ 2 ರಿಂದ 23ರವರೆಗೆ ಮತ್ತು ದ್ವಿತೀಯಾರ್ಧವನ್ನು 2004ರ ಜನವರಿ 30 ರಿಂದ ಫೆಬ್ರವರಿ 5ರವರೆಗೆ ನಡೆಸಲಾಗಿತ್ತು.

ಆಧಾರ: ವಿಜಯವಾಣಿ, ದಿನಾಂಕ:24.12.2020

## 17.ಭಾರತದ ಸಂವಿಧಾನ ಜಗತ್ತಿಗೆ ಮಾದರಿ : ಆನಂದ ಮಾಮನಿ

ಭಾರತವು ಸಾರ್ವಭೌಮತ್ವ ಹೊಂದಿದ ದೇಶವಾಗಿದ್ದು, ಸಂವಿಧಾನ ತಳಹದಿಯ ಮೇಲೆ ನಡೆಯುತ್ತಿದೆ ಎಂದು ವಿಧಾನ ಸಭೆ ಉಪ ಸಭಾಧ್ಯಕ್ಷರಾದ ಆನಂದ ಮಾಮನಿ ತಿಳಿಸಿದ್ದಾರೆ. ವಿಧಾನಸೌಧದಲ್ಲಿ ಹಮ್ಮಿಕೊಂಡಿದ್ದ ಸಂವಿಧಾನ ದಿನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿ. ಸಾಮಾಜಿಕ ನ್ಯಾಯ, ಸರ್ವರಿಗೂ ಸಮಪಾಲು ಸಮಬಾಳು ನಮ್ಮ ಸಂವಿಧಾನದ ಮೂಲ ಆಶಯ ಆ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿಯಿಂದ ಹಿಡಿದು ಸಂಸತ್‌ವರೆಗೆ ಕಾರ್ಯಾನ್ಮುಖರಾಗಿದ್ದೇವೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಚಿವಾಲಯದ ಜಂಟಿ ಕಾರ್ಯದರ್ಶಿ ಮಲ್ಲಪ್ಪ ಕಾಳೆ ಅವರು ಭಾರತದ ಸಂವಿಧಾನ ಪ್ರಸ್ತಾವನೆ ಬೋಧಿಸಿದರು.

ಆಧಾರ: ಉದಯವಾಣಿ, ದಿನಾಂಕ:27.12.2020

## 18. ಸಂಸತ್‌ನಲ್ಲಿ ಸಂವಾದವಿರಲಿ, ವಾದಗಳಲ್ಲ

ಸಂಸತ್‌ನಲ್ಲಿ ಸಂವಾದ ಎಲ್ಲ ವಿವಾದಗಳ ಇತ್ಯರ್ಥಕ್ಕೆ ಬಳಕೆಯಾಗಬೇಕೇ ಹೊರತು, ವಿವಾದಕ್ಕೆ ಎಡೆಮಾಡಿಕೊಡಬಾರದು ಎಂದು ರಾಷ್ಟ್ರಪತಿ ರಾಮ್‌ನಾಥ್ ಕೋವಿಂದ್ ಹೇಳಿದ್ದಾರೆ.

ಗುಜರಾತ್‌ನ ಕೆವಾಡಿಯಾದಲ್ಲಿ ನಡೆಯುತ್ತಿರುವ ವಿಧಾನ ಸಭೆಗಳ ಸಭಾಧ್ಯಕ್ಷರ 80ನೇ ಆಖಿಲ ಭಾರತ ಸಮಾವೇಶವನ್ನು ಉದ್ಘಾಟಿಸಿ ರಾಷ್ಟ್ರಪತಿ ರಾಮ್‌ನಾಥ್ ಕೋವಿಂದ್ ಮಾತನಾಡಿದರು. ಅಧಿವೇಶನದ ಸಂವಾದಗಳನ್ನು ಜನಪ್ರತಿನಿಧಿಗಳು ಸಮಾಜದ ಒಳಿತಿಗಾಗಿ ಹಾಗೂ ಜನ ಸಾಮಾನ್ಯರ ಸಂಕಷ್ಟ ಪರಿಹಾರಕ್ಕಾಗಿ ಬಳಸಿಕೊಳ್ಳಬೇಕು ಎಂದು ಹೇಳಿದರು. ಸಾಮಾಜಿಕ ಮಾಧ್ಯಮಗಳ ಈ ಯುಗದಲ್ಲಿ ಜನಪ್ರತಿನಿಧಿಗಳ ನಡೆ ನುಡಿ ಜನ ಸಾಮಾನ್ಯರನ್ನು ಶೀಘ್ರವಾಗಿ ತಲುಪುತ್ತಿದೆ. ಈ ಆಧುನಿಕ ಯುಗದಲ್ಲಿ ಶಾಸಕರು ಮತ್ತು ಜನರನ್ನು ಪ್ರತಿನಿಧಿಸುವ ಎಲ್ಲ ಸದಸ್ಯರು ತಮ್ಮ ನಡೆ ನುಡಿಯನ್ನು ಶಿಷ್ಟಾಚಾರದೊಂದಿಗೆ ನಿರ್ವಹಿಸುವ ಜವಾಬ್ದಾರಿ ಹೆಚ್ಚಿದೆ ಎಂದು ಹೇಳಿದರು. ಉಪ ರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಮಾತನಾಡಿ, ಕಾರ್ಯಾಂಗ, ಶಾಸಕಾಂಗ ಹಾಗೂ ನ್ಯಾಯಾಂಗಗಳ ನಡುವೆ ಸಮನ್ವಯತೆ ಅತ್ಯಗತ್ಯವಾಗಿದ್ದು, ಪರಮೋಚ್ಚವಾಗಿರುವ ಸಂವಿಧಾನವನ್ನು ಶಾಸಕಾಂಗವು ತನ್ನ ಗಡಿ ದಾಟಿದ್ದು ಇದು ಒಳ್ಳೆಯದಲ್ಲ, ರಾಷ್ಟ್ರಪತಿ, ಉಪ ರಾಷ್ಟ್ರಪತಿ ಮತ್ತು ಪ್ರಧಾನಿ ಆಯ್ಕೆಯನ್ನು 1975ರಲ್ಲಿ ನ್ಯಾಯಾಂಗ ಪರಿಶೀಲನೆಯ ವ್ಯಾಪ್ತಿ ಮೀರಿ 39ನೇ ಸಂವಿಧಾನದ ತಿದ್ದುಪಡಿ ಮಾಡಿದ್ದು ಅದಕ್ಕೆ ಒಂದು ಉದಾಹರಣೆ ಎಂದರು.

ಸಂವಿಧಾನದ ಆಶಯಗಳಿಗೆ ತಕ್ಕಂತೆ ಜನಪ್ರತಿನಿಧಿಗಳು ನಡೆದುಕೊಳ್ಳಬೇಕು. ಸಂವಿಧಾನ ನೀಡಿರುವ ಅವಕಾಶಗಳನ್ನು ಸಮರ್ಪಕವಾಗಿ ಬಳಸಿಕೊಂಡು ಕಾರ್ಯನಿರ್ವಹಿಸಬೇಕು. ದೇಶದ ಜನರ ಹಕ್ಕು ಬಾಧ್ಯತೆ ಸಂರಕ್ಷಿಸುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ.

ಆಧಾರ: ವಿಜಯವಾಣಿ, ದಿನಾಂಕ:26.12.2020

## 19.ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಸಾಮರಸ್ಯ ಅಗತ್ಯ

ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗದ ಮಧ್ಯೆ ಸುಮಧುರ ಬಾಂಧವ್ಯ ಇದ್ದಾಗ ಮಾತ್ರ ಪ್ರಜಾಪ್ರಭುತ್ವ ಹೆಚ್ಚು ಕ್ರಿಯಾಶೀಲವಾಗಿರುತ್ತದೆ ಎಂದು ವಿಧಾನ ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ, ಕಾಗೇರಿ ಹೇಳಿದ್ದಾರೆ.

ಗುಜರಾತಿನ ಕೆವಾಡಿಯಾದಲ್ಲಿ ನಡೆಯುತ್ತಿರುವ ವಿವಿಧ ರಾಜ್ಯಗಳ ವಿಧಾನ ಸಭಾಧ್ಯಕ್ಷರ ಸಮಾವೇಶದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಪ್ರಜಾಪ್ರಭುತ್ವದ ಈ ಮೂರೂ ಅಂಗಗಳ

ಅಧಿಕಾರ ಸಮಾನವಾಗಿರಬೇಕು. ಒಂದು ಅಂಗ ಇನ್ನೊಂದು ಅಂಗದ ಮೇಲೆ ಸವಾರಿ ಮಾಡುವಂತಾಗಬಾರದು. ಪ್ರತಿಯೊಂದು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲೇ ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ದೇಶದ ಮಟ್ಟದಲ್ಲಿ ಸಂಸತ್ತು ರಾಜ್ಯದಲ್ಲಿ ವಿಧಾನಸಭೆ ಶಾಸನ ರಚನೆ ಮಾಡುವ ಅಧಿಕಾರ ಹೊಂದಿರುವಂತೆಯೇ ಕೇಂದ್ರಾಡಳಿತ ಪ್ರದೇಶಗಳಿಗೂ ಶಾಸನ ರಚನೆಯ ಅಧಿಕಾರ ನೀಡಬೇಕು. ಸಂವಿಧಾನದ ದಿನದ ಮೂಲಕ ಕರ್ನಾಟಕದಲ್ಲಿ ಸಂವಿಧಾನದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಮಾಡಿಕೊಂಡು ಬಂದಿದ್ದೇವೆ. ಶಾಲಾ, ಕಾಲೇಜು ಮತ್ತು ಸಂಘ ಸಂಸ್ಥೆಗಳಲ್ಲಿ ಈ ಕುರಿತು ತಿಳುವಳಿಕೆ ಮೂಡಿಸಲಾಗುತ್ತದೆ ಎಂದು ಸಭಾಧ್ಯಕ್ಷರು ಹೇಳಿದರು.

ಆಧಾರ: ಪ್ರಜಾವಾಣಿ, ದಿನಾಂಕ:26.11.2020

**ದಿನಾಂಕ: 25 ಮತ್ತು 26ನೇ ನವೆಂಬರ್ 2020ರ ದಿನಗಳಂದು ಗುಜರಾತ್‌ನ ಕೆವಾಡಿಯಾದಲ್ಲಿ ನಡೆದ 80ನೇ ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ಪಾಲ್ಗೊಂಡ ಸಂದರ್ಭದಲ್ಲಿ ಭಾರತದ ಸನ್ಮಾನ್ಯ ರಾಷ್ಟ್ರಪತಿಗಳು, ಸನ್ಮಾನ್ಯ ಉಪ ರಾಷ್ಟ್ರಪತಿಗಳು, ಸನ್ಮಾನ್ಯ ಲೋಕಸಭಾ ಅಧ್ಯಕ್ಷರು, ಸನ್ಮಾನ್ಯ ಗುಜರಾತ್‌ನ ರಾಜ್ಯಪಾಲರು, ಸನ್ಮಾನ್ಯ ಗುಜರಾತ್‌ನ ಮುಖ್ಯಮಂತ್ರಿಯವರು ಹಾಗೂ ದೇಶದ ಇತರೇ ಪೀಠಾಸೀನಾಧಿಕಾರಿಗಳೊಂದಿಗೆ ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿರವರು.**

**Subject:- "Harmonious Coordination between Legislature, Executive and Judiciary - Key to a Vibrant Democracy**".

******

Hon'ble Chairman of the conference, respected Presiding Officers, Delegates and one and all present here.

First of all, I thank the Hon'ble Chairman for giving me an opportunity to participate in the discussion on **"Harmonious Coordination between Legislature, Executive and Judiciary - Key to a Vibrant Democracy**". As you are aware that our country is not only the largest working parliamentary democracy in the world, but also has the distinction of having lengthiest written Constitution. The salient feature of the Constitution is that the sovereign power of the state is distributed among the three organs of the State namely, The **L**egislature, The **E**xecutive and the Judiciary. This is seen at the federal level and mirrored at the state level through a bicameral or unicameral legislature consisting of the people's direct or indirect representatives, an executive formed out of such representatives and answerable to the legislature and independent judiciary. The principle lying in the parliamentary democracy is that, powers of these three pillars of democracy must be balanced in a way that none should get credens over the other and each should act within the frame work under the Constitution. The Constitution empowers the parliament to make laws for the whole or part of the territory of India and similarly the State legislature**s and Legislatures of Union Territories** are empowered to make laws for whole or part of the State and Union Territories respectively.

The Executive power of the union is co-existence with the power of the parliament and the executive power of the state is co-existence with the power of the legislature within the provisions of the Constitution. The Executive has to act within the purview of laws enacted by the legislature / Parliament.

The Constitution confers power of judicial review of legislature or executive actions or judicial actions or the subordinate judiciary and to annul it, if it is found to be violating any of the Constitutional provisions.

The power of judicial review conferred on the Supreme Court is to interpret the provisions of the Constitution and laws and to strike down any law if it is found to be ultra-vires of the Constitution.

Though primarily courts have no power to legislate, however, in the absence of any law on a particular subject, the decisions of the Supreme Court on that subject operates as a law of the land and are binding on the entire nation. If the executive makes rules or the legislature makes laws, it can be challenged before the courts. But it is not the function of the judiciary to legislate. Therefore, the legislature is vested with the power to legislate, the executive is vested with the power to execute, and the judiciary is vested with the power to interpret and adjudicate the law.

If we analyse our Constitutional provisions, they indicate that none of the above three limbs of the state is supreme or superior to the other. Every limb of the state has to exercise its power and perform its functions within the frame work of the Constitution with utmost efficiency and harmonious coordination which is key to a vibrant democracy. Here I would like to quote the words

of Dr.B.R.Ambedkar, the Chairman of the drafting committee and the main architect of our Constitution, explaining the significance of the restrictive clauses incorporated in the provisions of the Constitution:-

> "The Constitution is a fundamental document. It is a document which defines the position and powers of the three organs of the State- the Executive, the Judiciary and the Legislature. It also defines the powers of the Executive and the powers of the Legislature against the citizens… In fact, the purpose of a Constitution is not merely to create the organs of the State but to limit their authority, because, if no limitation **is** imposed upon the authority of organs, there will be complete tyranny and complete oppression".

The power of the Legislature is also circumscribed by the limitations imposed by various articles of the Constitution as indicated by the words, "**Subject to the provisions of the Constitution**".

The power of judicial Review of executive and the legislative actions is one of the basic structures of the Constitution. Therefore, whenever Executive acts beyond its authority, or the Legislature acts beyond its authority or competence or in violation of specific provisions of the Constitution, and the validity of the same is challenged before the Court by a citizen or any person, it becomes the duty of the Courts, particularly the Supreme Court and the High Courts to decide whether the action or law is constitutional.

In doing so, the Court will be discharging the duties imposed on them by the Constitution. It has to be considered that any interference by the judiciary, with legislative or executive action is not with any intention or desire to establish its supremacy over the other two wings, but to establish the supremacy of the Constitution.

In nutshell the discipline is essential for success of democracy. Mahatma Gandhiji had said:

> " There is no human institution that has its dangers. The greater the institution, the greater the chances of abuse. Democracy is a great institution and, therefore, it is liable to be greatly abused. The remedy, therefore, is not avoidance of democracy, but reduction of possibility of abuse to a minimum".

In order to achieve the dreams of Gandhiji and the framers of our Constitution, all the three organs of the State should function harmoniously within their respective jurisdiction and powers.

Here, I would like to bring to this forum that during the last decade there was judicial activism and there were examples of confrontation between the Legislature – Judiciary and Executive- Judiciary etc. However, now a days the three organs of the State are trying to establish harmonious relationship which is necessary for the vibrant democracy. In this regard, I would like to bring to the notice of the Hon'ble presiding officers that, in case of petitioners approaching the court of law under the Anti-defection law, when the same is pending within the jurisdiction of the presiding officers, the courts are not entertaining the petitions, and the petitioners are being directed to approach the legislature. Thereby the sanctity of the independence of legislature is respected. There are instances in our legislature where the individuals / organizations approaching the court of law with writ petitions and the courts use to issue notices to the presiding officers / secretaries of Legislature for appearing before the court. Here, I suggest that for maintaining the harmonious relationship, whenever the petitions are

filed in the courts, before sending notice to the legislature, they have to seek the opinion of the legislature, if they are not satisfied with the comments, then they may proceed with the petition, and suo-moto of issuing notice to the legislature should be avoided.

The executive should try hard to maintain and to implement the visions of Legislature and also to maintain its accountability to the Legislature with utmost care and diligence so as to achieve the welfare of the State and the Nation as the whole.

I would like to bring to the notice of the Hon'ble delegates that to achieve the above objectives every citizen of the Nation should be aware of the importance of the Constitution. In this regard, I suggested to the Hon'ble Chief Minister of Karnataka to implement the study of Constitution and also for observance of Constitution Day i.e., 26th day of November, every year in each and every school/ colleges including private organizations. I have also made an attempt by sharing an idea of holding a special discussion in our Legislative Assembly and I have received overwhelming support from the Hon'ble Chief Minister/ Hon'ble Chairman Legislative Council. Thus the discussion on Constitution was held in the Assembly/ Council for 8 days during March 2020. Hon'ble Members participated in the discussion with all the preparations. I hope such an attempt may also make our Legislators' fully aware of the provisions of the Constitution and it will be an attempt to achieve the objectives of the Constitution

With these words I conclude and I thank the Chairman of the conference for giving me this opportunity.

Thank you one and all,

Jai Hind, Jai Karnataka.

*****

**"ಸಂವಿಧಾನ ದಿನ"ವಾದ ದಿನಾಂಕ: 26.11.2020ರಂದು ಗುಜರಾತ್‌ನ ಕೆವಾಡಿಯಾದಲ್ಲಿ ನಡೆದ 80ನೇ ಪೀಠಾಸೀನಾಧಿಕಾರಿಗಳ ಸಮ್ಮೇಳನದ ಸಂದರ್ಭದಲ್ಲಿ ಭಾರತದ ಸನ್ಮಾನ್ಯ ರಾಷ್ಟ್ರಪತಿಗಳಾದ ಶ್ರೀ ರಾಮನಾಥ್ ಕೋವಿಂದ್ ರವರು ಲೋಕಸಭಾ ಅಧ್ಯಕ್ಷರು ಸೇರಿದಂತೆ ಇತರ ಪೀಠಾಸೀನಾಧಿಕಾರಿಗಳಿಗೆ ಸಂವಿಧಾನದ ಪ್ರಸ್ತಾವನೆಯನ್ನು ಅನ್‌ಲೈನ್ ಮೂಲಕ ಬೋಧಿಸುತ್ತಿರುವ ಕಾರ್ಯಕ್ರಮದಲ್ಲಿ ಕರ್ನಾಟಕ ವಿಧಾನ ಸಭೆಯ ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿರವರು ಭಾಗವಹಿಸಿದ ಸಂದರ್ಭ.**

**ಗುಜರಾತ್‌ನ ಕೆವಾಡಿಯದಲ್ಲಿ ನಡೆದ 80ನೇ ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ಭಾಗವಹಿಸಿದ ನಂತರದ ಪ್ರವಾಸದ ಭಾಗವಾಗಿ ದಿನಾಂಕ: 27.11.2020 ರಂದು ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿರವರು ಬರೋಡಾದಲ್ಲಿರುವ ಸುಪ್ರಸಿದ್ಧ ಅಮೂಲ್‌ಗೆ ಹಾಗೂ ಅಮೂಲ್‌ನ ಚಾಕೋಲೆಟ್ ಪ್ಲಾಂಟ್‌ಗೆ ಭೇಟಿ ನೀಡಿ ಅಲ್ಲಿನ ಚಾಕೋಲೆಟ್ ಉತ್ಪನ್ನದ ತಯಾರಿಕೆಯನ್ನು ವೀಕ್ಷಿಸಿ ಅಧಿಕಾರಿಗಳೊಂದಿಗೆ ಚರ್ಚಿಸಿದ ಸಂದರ್ಭ**

## 20. ಸಂವಿಧಾನದ ಅಂಗಗಳ ನಡುವೆ ಸಮನ್ವಯ ಕೊರತೆ

ಸಂವಿಧಾನದ ಮೂರು ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ನಡುವೆ ಸಮನ್ವಯತೆ ಅಗತ್ಯ ಎಂದು ವಿಧಾನ ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ, ಕಾಗೇರಿ ತಿಳಿಸಿರುತ್ತಾರೆ.

ಗುಜರಾತ್‌ನಲ್ಲಿ ನಡೆಯುತ್ತಿರುವ ಎರಡು ದಿನಗಳ ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ಪಾಲ್ಗೊಂಡು ಬಲಿಷ್ಠ ಪ್ರಜಾಪ್ರಭುತ್ವಕ್ಕಾಗಿ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳ ನಡುವೆ ಸಮನ್ವಯತೆ ವಿಷಯದ ಮೇಲೆ ಮಾತನಾಡಿದ ಅವರು ಸಂವಿಧಾನದ ಮೂರೂ ಅಂಗಗಳು ಅವುಗಳ ಮಿತಿಯಲ್ಲಿ ಕಾರ್ಯನಿರ್ವಹಿಸಿದರೆ ಪ್ರಜಾಪ್ರಭುತ್ವ ಬಲಗೊಳ್ಳುತ್ತದೆ ಎಂದು ಹೇಳಿದರು.

ಶಾಸಕಾಂಗ ಶಾಸನ ರಚನೆ ಮಾಡಿರುವ, ಕಾರ್ಯಾಂಗ ಅದನ್ನು ಅನುಷ್ಠಾನಗೊಳಿಸುತ್ತದೆ. ನ್ಯಾಯಾಂಗ ಕಾನೂನಿನ ಪಾಲನೆಯಾಗುತ್ತಿದೆಯೋ ಇಲ್ಲವೋ ಎನ್ನುವುದನ್ನು ನೋಡುತ್ತದೆ. ಆದರೆ, ಕೆಲವು ಸಂದರ್ಭದಲ್ಲಿ ನ್ಯಾಯಾಂಗ ಆದೇಶಗಳನ್ನು ಮಾಡುತ್ತದೆ. ಅದನ್ನೇ ಕಾನೂನಾಗಿ ಪಾಲನೆ ಮಾಡಲಾಗುತ್ತಿದೆ. ಕೆಲವು ಸಂದರ್ಭದಲ್ಲಿ ನ್ಯಾಯಾಂಗದ ಹಸ್ತಕ್ಷೇಪದಿಂದ ನ್ಯಾಯಾಂಗ ಹಾಗೂ ಶಾಸಕಾಂಗ, ನ್ಯಾಯಾಂಗ ಹಾಗೂ ಕಾರ್ಯಾಂಗದ ನಡುವೆ ಗೊಂದಲ ಉಂಟಾಗಲು ಕಾರಣವಾಗಿದೆ ಎಂದರು.

ಇತ್ತೀಚೆಗೆ ಸಂವಿಧಾನದ ಮೂರು ಅಂಗಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಲು ಪ್ರಯತ್ನಿಸುತ್ತಿವೆ. ಪಕ್ಷಾಂತರ ನಿಷೇಧ ಕಾಯಿದೆ ವಿಷಯದಲ್ಲಿ ಸಾರ್ವಜನಿಕರು ಕೋರ್ಟ್ ಮೆಟ್ಟಿಲೇರಿದಾಗ ಶಾಸಕಾಂಗದಲ್ಲಿಯೇ ಇತ್ಯರ್ಥ ಪಡಿಸಿಕೊಳ್ಳುವಂತೆ ಕೋರ್ಟ್ ಸೂಚನೆ ನೀಡುತ್ತಿರುವುದರಿಂದ ಶಾಸಕಾಂಗದ ಘನತೆ ಕಾಪಾಡಿದಂತಾಗಿದೆ. ಆದರೆ, ಕೆಲವು ವೈಯಕ್ತಿಕ ವಿಷಯದಲ್ಲಿ ಕೋರ್ಟ್‌ಗಳು ವಿಧಾನ ಸಭೆಯ ಕಾರ್ಯದರ್ಶಿಗಳಿಗೆ ನೋಟಿಸ್ ನೀಡಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಕೋರ್ಟ್‌ಗಳು ಶಾಸಕಾಂಗದ ಅಭಿಪ್ರಾಯ ಪಡೆದು ಮುಂದಿನ ಕ್ರಮ ಕೈಗೊಳ್ಳುವುದು ಉತ್ತಮ ಎಂದು ಸಲಹೆ ನೀಡಿದರು.

ದೇಶದ ಪ್ರತಿಯೊಬ್ಬ ಪ್ರಜೆಯೂ ಸಂವಿಧಾನವನ್ನು ಅರಿಯುವ ಅಗತ್ಯವಿದೆ. ಅದಕ್ಕಾಗಿ ಕರ್ನಾಟಕದಲ್ಲಿ ಪ್ರತಿ ವರ್ಷ ಸಂವಿಧಾನ ದಿನವನ್ನು ಶಾಲಾ ಕಾಲೇಜುಗಳಲ್ಲಿ, ಸಂಘ ಸಂಸ್ಥೆಗಳಲ್ಲಿ ಆಚರಣೆ ಮಾಡಲಾಗುತ್ತಿದೆ. ವಿಧಾನ ಸಭೆಯಲ್ಲಿಯೂ ಸಂವಿಧಾನದ ಕುರಿತು ವಿಸ್ತೃತ ಚರ್ಚೆ ನಡೆಸಲಾಗಿದೆ ಎಂದು ವಿಧಾನ ಸಭಾ ಸಭಾಧ್ಯಕ್ಷರು ಹೇಳಿದ್ದಾರೆ.

ಆಧಾರ: ವಿಶ್ವವಾಣಿ, ದಿನಾಂಕ:27.12.2020

## 21. ಅಧಿವೇಶನದಲ್ಲಿ 10 ಮಸೂದೆ ಮಂಡನೆ

ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿರುವ 'ಒಂದು ದೇಶ, ಒಂದು ಚುನಾವಣೆಗೆ 'ಧ್ವನಿಗೂಡಿಸಿರುವ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಮುಂದಿನ ತಿಂಗಳು 7 ರಿಂದ ಆರಂಭವಾಗುವ ವಿಧಾನಮಂಡಲ ಅಧಿವೇಶನದಲ್ಲಿ ಎರಡು ದಿನಗಳ ಕಾಲ 'ಒಂದು ದೇಶ, ಒಂದು ಚುನಾವಣೆ ವಿಷಯದ ಮೇಲೆ ಚರ್ಚೆಗೆ ಮೀಸಲಿಟ್ಟಿದ್ದಾರೆ.

ವಿಧಾನಮಂಡಲ ಅಧಿವೇಶನವು ಡಿಸೆಂಬರ್ 7 ರಿಂದ 15ರವರೆಗೆ ನಡೆಯಲಿದೆ. ನಾಲ್ಕು ಸುಗ್ರೀವಾಜ್ಞೆಗಳು ಸೇರಿದಂತೆ 10 ವಿಧೇಯಕಗಳು ಮಂಡನೆಯಾಗಲಿವೆ. ಡಿಸೆಂಬರ್ 14 ಮತ್ತು 15ರಂದು ಎರಡು ದಿನಗಳ ಕಾಲ ಒಂದು ದೇಶ ಒಂದು ಚುನಾವಣೆ ಕುರಿತು ಚರ್ಚೆಗೆ ನಿಗದಿ ಮಾಡಲಾಗಿದೆ ಎಂದು ವಿಧಾನ ಸಭಾಧ್ಯಕ್ಷರು ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ನವೆಂಬರ್ 25 ಮತ್ತು 26ರಂದು ಗುಜರಾತಿನ ಕೆವಾಡಿಯಾದಲ್ಲಿ ನಡೆದ ಎರಡು ದಿನಗಳ ಸಭಾಧ್ಯಕ್ಷರ ಸಮ್ಮೇಳನದಲ್ಲಿ ಹಲವು ಉಪಯುಕ್ತ ವಿಚಾರಗಳು

ವ್ಯಕ್ತವಾದವು. ಈ ವೇಳೆ ಒಂದು ದೇಶ ಒಂದು ಚುನಾವಣೆಗೆ ಆದ್ಯತೆ ನೀಡಬೇಕು ಎಂದು ಎಲ್ಲಾ ರಾಜ್ಯಗಳ ಸಭಾಧ್ಯಕ್ಷರಿಗೆ ತಿಳಿಸಿದರು. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯವರು, ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ ಹಚ್.ಡಿ. ಕುಮಾರಸ್ವಾಮಿ ಜೊತೆ ಚರ್ಚೆ ನಡೆಸಲಾಗಿದೆ ಎಂದು ಮಾಹಿತಿ ನೀಡಿದರು.

ಆಧಾರ: ಕನ್ನಡಪ್ರಭ, ದಿನಾಂಕ:29.11.2020

**ಅಕ್ಟೋಬರ್ 02ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಯುವ ಬ್ರಿಗೇಡ್ ಮತ್ತು ಸೋದರಿ ನಿವೇದಿತಾ ಪ್ರತಿಷ್ಠಾನ ಹಾಗೂ ಸ್ವರಾಜ್ಯಕ್ಕೆ ಮುಕ್ಕಾಲ್ನೂರು ಸಂಘಟನೆಗಳು ಗಾಂಧಿ ಜಯಂತಿ ಪ್ರಯುಕ್ತ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ ರವರು ಭಾಗವಹಿಸಿದ ಸಂದರ್ಭ**

ಮಾನ್ಯ ಸಹಕಾರ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಸ್.ಟಿ.ಸೋಮಶೇಖರ್ ರವರು ದಿನಾಂಕ: 13.10.2020ರಂದು ಸನ್ಮಾನ್ಯ ಸಭಾಧ್ಯಕ್ಷರನ್ನು ಭೇಟಿ ಮಾಡಿ ದಸರಾ ಉದ್ಘಾಟನಾ ಕಾರ್ಯಕ್ರಮಕ್ಕೆ ಆಮಂತ್ರಣ ಪತ್ರಿಕೆ ನೀಡಿ ಆಹ್ವಾನಿಸಿದ ಸಂದರ್ಭ.

**ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ ರವರು ದಿನಾಂಕ: 16.10.2020ರಂದು ಬೆಂಗಳೂರಿನ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಗೆ ಭೇಟಿ ನೀಡಿ ತೋಟಗಾರಿಕಾ ವಿಭಾಗದಲ್ಲಿ ಸಂಸ್ಥೆಯ ಚಟುವಟಿಕೆಯನ್ನು ವೀಕ್ಷಿಸಿ ಅಧಿಕಾರಿಗಳೊಂದಿಗೆ ಚರ್ಚಿಸುತ್ತಿರುವ ಸಂದರ್ಭ.**

**ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿರವರು ದಿನಾಂಕ: 17.10.2020ರಂದು ವಿಶ್ವ ಪ್ರಸಿದ್ಧ 'ಮೈಸೂರು ದಸರಾ' ಉತ್ಸವದ ಅಂಗವಾಗಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ಹಾಗೂ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂದರ್ಭ.**

**ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿರವರು ದಿನಾಂಕ: 18.10.2020ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯಲ್ಲಿರುವ ಶ್ರೀ ಸತ್ಯಸಾಯಿ ಆಶ್ರಮದಲ್ಲಿ ನಡೆದ ದಸರಾ ಉತ್ಸವದಲ್ಲಿ ಭಾಗವಹಿಸಿದ ಸಂದರ್ಭ.**

**ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿರವರು ದಿನಾಂಕ: 02.11.2020 ರಂದು ಬೆಂಗಳೂರಿನ ಭಾರತೀಯ ಮಾಪನಶಾಸ್ತ್ರ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿನ ತಾಂತ್ರಿಕ ವ್ಯವಸ್ಥೆಗಳ ಪರಿವೀಕ್ಷಣೆ ನಡೆಸಿ, ಹವಾಮಾನ ಏರಿಳಿತದ ಬಗ್ಗೆ ನಿರ್ದೇಶಕರು ಹಾಗೂ ತಂತ್ರಜ್ಞರೊಂದಿಗೆ ಚರ್ಚಿಸಿದ ಸಂದರ್ಭ.**

**ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿರವರು ದಿನಾಂಕ: 04.11.2020ರಂದು ವಿಧಾನ ಸಭೆ ಸಚಿವಾಲಯದ ಆಡಳಿತಾತ್ಮಕ ಸುಧಾರಣೆ ಕುರಿತಂತೆ ವಿಧಾನಸೌಧದಲ್ಲಿ ಸಚಿವಾಲಯದ ಕಾರ್ಯದರ್ಶಿ ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಚರ್ಚಿಸುತ್ತಿರುವ ಸಂದರ್ಭ.**

**ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿರವರು ದಿನಾಂಕ: 05.11.2020ರಂದು ನಮ್ಮ ರಾಜ್ಯದ ಹೆಮ್ಮೆಯ ಸಂಸ್ಥೆಯಾದ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಒಕ್ಕೂಟಕ್ಕೆ (KMF-ನಂದಿನಿಗೆ) ಭೇಟಿ ನೀಡಿ ಅಲ್ಲಿನ ಉತ್ಪನ್ನಗಳ ತಯಾರಿಕೆಯನ್ನು ವೀಕ್ಷಿಸಿ ಅಧಿಕಾರಿಗಳೊಂದಿಗೆ ಚರ್ಚಿಸುತ್ತಿರುವ ಸಂದರ್ಭ.**

**ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿರವರು ದಿನಾಂಕ: 06.11.2020ರಂದು ನಗರಾಭಿವೃದ್ಧಿ ಸಚಿವರಾದ ಶ್ರೀ ಭೈರತಿ ಬಸವರಾಜು ಹಾಗೂ ತೋಟಗಾರಿಕಾ ಸಚಿವರಾದ ಶ್ರೀ ಕೆ.ಸಿ. ನಾರಾಯಣಗೌಡ ಸಚಿವರೊಂದಿಗೆ ಸಭಾಧ್ಯಕ್ಷರ ಕಛೇರಿಯಲ್ಲಿ ಅಭಿವೃದ್ಧಿ ವಿಷಯಗಳಿಗೆ ಕುರಿತಂತೆ ಚರ್ಚಿಸಿದ ಸಂದರ್ಭ.**

**ವಿಧಾನ ಸಭೆಯ ಎಲ್ಲಾ 2020–21ನೇ ಸಾಲಿನ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳೊಂದಿಗೆ ದಿನಾಂಕ: 02.11.2020ರಂದು ಸನ್ಮಾನ್ಯ ಸಭಾಧ್ಯಕ್ಷರು ಸಭೆ ನಡೆಸಿದರು.**

**ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿರವರು ದಿನಾಂಕ: 25 ಮತ್ತು 26ನೇ ನವೆಂಬರ್ 2020ರ ದಿನಗಳಂದು ಗುಜರಾತ್‌ನ ಕೆವಾಡಿಯದಲ್ಲಿ ನಡೆದ 80ನೇ ಅಖಿಲ ಭಾರತ ಸಮ್ಮೇಳನದಲ್ಲಿ ಭಾಗವಹಿಸಿದ ನಂತರ ದಿನಾಂಕ: 28.11.2020ರಂದು ಬೆಂಗಳೂರಿನ ವಿಧಾನ ಸೌಧದಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಸಂದರ್ಭ.**

**ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿರವರು ದಿನಾಂಕ: 06.12.2020 ರಂದು ಸಂವಿಧಾನ ಶಿಲ್ಪಿ ಭಾರತ ರತ್ನ ಡಾ: ಬಿ.ಆರ್. ಅಂಬೇಡ್ಕರ್‌ರವರ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ವಿಧಾನಸೌಧದಲ್ಲಿ ಡಾ: ಬಿ.ಆರ್. ಅಂಬೇಡ್ಕರ್‌ರವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವವನ್ನು ಸಲ್ಲಿಸಿದರು.**

ದಿನಾಂಕ: 07.12.2020ರಿಂದ ಪ್ರಾರಂಭವಾಗಲಿರುವ ವಿಧಾನ ಸಭೆಯ ಅಧಿವೇಶನದ ಕುರಿತು ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿರವರು ದಿನಾಂಕ: 06.12.2020ರಂದು ಸಭಾಂಗಣವನ್ನು ವೀಕ್ಷಿಸಿ ಅಧಿಕಾರಿಗಳಿಗೆ ಅಧಿವೇಶನದ ಪೂರ್ವ ಸಿದ್ಧತೆಯ ಕುರಿತು ಸಲಹೆ ಸೂಚನೆಗಳನ್ನು ನೀಡುತ್ತಿರುವ ಸಂದರ್ಭ.

ದಿನಾಂಕ: 10.12.2020 ರಂದು ದೆಹಲಿಯಲ್ಲಿ ಸನ್ಮಾನ್ಯ ಪ್ರಧಾನ ಮಂತ್ರಿಯವರು ನೆರವೇರಿಸಿದ ನೂತನ ಸಂಸತ್ ಭವನದ ಅಡಿಗಲ್ಲು ಸಮಾರಂಭದ ಕಾರ್ಯಕ್ರಮವನ್ನು ಅನ್‌ಲೈನ್ ಮೂಲಕ ವಿಧಾನ ಸೌಧದಲ್ಲಿ ಸನ್ಮಾನ್ಯ ಸಭಾಧ್ಯಕ್ಷರ ಕಛೇರಿಯಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಗೋವಿಂದ ಕಾರಜೋಳ ಹಾಗೂ ಮಾನ್ಯ ಸದಸ್ಯರಾದ ಶ್ರೀ ಸಿದ್ದು ಸವದಿರವರುಗಳೊಂದಿಗೆ ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿಯವರು ವೀಕ್ಷಿಸುತ್ತಿರುವ ಸಂದರ್ಭ.

ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿರವರು ದಿನಾಂಕ: **11.12.2020** ರಂದು ವಿಧಾನ ಸೌಧದಲ್ಲಿ ಅಗ್ರಿಕ್ಯೂಲಮ್ ಸಂಸ್ಥೆಯಿಂದ ನಡೆದ "ಭೂ ಸಿರಿ ಮತ್ತು ಭೂ ಮಿತ್ರ" ಯಂತ್ರದ ಲೋಕರ್ಪಣೆ ಕಾರ್ಯಕ್ರಮದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಹಾಗೂ ಮಾನ್ಯ ಕೃಷಿ ಸಚಿವರೊಂದಿಗೆ ಪಾಲ್ಗೊಂಡು ಶುಭ ಕೋರಿದರು.

**ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿರವರು ದಿನಾಂಕ: 12.12.2020 ರಂದು ಸಿದ್ಧ ಸಮಾಧಿ ಯೋಗ ಇದರ ಸಂಸ್ಥಾಪಕರಾಧ ಪೂಜ್ಯ ಗುರೂಜಿ ಋಷಿ ಶ್ರೀ ಪ್ರಭಾಕರಜಿ ಅವರ ಸಂಕಲ್ಪದಂತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿ ಋಷಿ ತಪೋ ಕ್ಷೇತ್ರ ಕನಕಪುರ, ರಾಮನಗರ ಜಿಲ್ಲೆಯಲ್ಲಿ ನಡೆದ ವಿಶ್ವ ಹೃದಯ ಸಮ್ಮೇಳನದಲ್ಲಿ ಪೂಜ್ಯ ಶ್ರೀ ವಿನಯ ಗುರೂಜಿರವರೊಂದಿಗೆ ಭಾಗವಹಿಸಿದ ಸಂದರ್ಭ**

ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿರವರು ದಿನಾಂಕ: 12.12.2020 ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಅತೀಕ್ ಅಹ್ಮದ್‌ರವರೊಂದಿಗೆ ಸನ್ಮಾನ್ಯ ಸಭಾಧ್ಯಕ್ಷರು ಇಲಾಖೆಯ ಕುರಿತಂತೆ ಚರ್ಚಿಸಿದ ಸಂದರ್ಭ.

ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿರವರು ದಿನಾಂಕ: 22.12.2020ರಂದು ಹಿರಿಯ ಮಹಿಳಾ ಪತ್ರಕರ್ತೆಯರೊಂದಿಗೆ ವಿಧಾನ ಸೌಧದ ಮೊದಲನೇ ಮಹಡಿಯಲ್ಲಿರುವ ಸಭಾಧ್ಯಕ್ಷರ ಕಛೇರಿಯಲ್ಲಿ ಚರ್ಚಿಸಿದ ಸಂದರ್ಭ.

**ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿರವರು ದಿನಾಂಕ: 23.12.2020ರಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಡಾ: ಕೆ. ಸುಧಾಕರ್ ರವರೊಂದಿಗೆ ಇಲಾಖೆ ಹಾಗೂ ಇನ್ನಿತರೆ ವಿಷಯಗಳ ಕುರಿತಂತೆ ಚರ್ಚಿಸಿದ ಸಂದರ್ಭ.**

## 22. 15ನೇ ವಿಧಾನ ಸಭೆಯ 8ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

07 ರಿಂದ 10ನೇ ಡಿಸೆಂಬರ್, 2020 ರವರೆಗೆ 4 ದಿನಗಳ ಕಾಲ **19** ಗಂಟೆ **29** ನಿಮಿಷಗಳ ಕಾಲ ಕಾರ್ಯಕಲಾಪ ನಡೆಸಲಾಗಿದೆ.

- ಇತ್ತೀಚೆಗೆ ನಿಧನ ಹೊಂದಿರುವ ಕೇಂದ್ರದ ಹಾಲಿ ಸಚಿವರಾಗಿದ್ದ ಶ್ರೀ ರಾಮ್ ವಿಲಾಸ್ ಪಾಸ್ವಾನ್, ಮಾಜಿ ಸಚಿವರಾಗಿದ್ದ ಡಾ॥ ವೈ.ನಾಗಪ್ಪ, ವಿಧಾನ ಸಭೆಯ ಮಾಜಿ ಸದಸ್ಯರುಗಳಾದ ಶ್ರೀ ಬಸವಂತ ಐರೋಜಿ ಪಾಟೀಲ್, ಶ್ರೀ ಕೆ. ಮಲ್ಲಪ್ಪ, ಶ್ರೀ ರತನ್ ಕುಮಾರ್ ಕಟ್ಟೆಮಾರ್, ಕೇಂದ್ರದ ಮಾಜಿ ಸಚಿವರಾದ ಶ್ರೀ ಜಸ್ವಂತ್ ಸಿಂಗ್, ಸಾಹಿತ್ಯ ವಿಮರ್ಶಕರಾದ ಡಾ॥ ಜಿ.ಎಸ್. ಆಮೂರ, ಸಹಕಾರಿ ಧುರೀಣರಾದ ಡಾ॥ ವಿ.ಎಸ್. ಸೋಂದೆ ಹಾಗೂ ಹಿರಿಯ ಪತ್ರಕರ್ತರಾದ ಶ್ರೀ ರವಿ ಬೆಳಗೆರೆ ಅವರುಗಳಿಗೆ ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿ, ಅಂಗೀಕರಿಸಲಾಗಿದೆ.
- ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಬಗ್ಗೆ ಕಾರ್ಯದರ್ಶಿಯವರ ವರದಿಯನ್ನು ಮಂಡಿಸಲಾಗಿದೆ.
- ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ಸಾಮಾನ್ಯ ಮತ್ತು ಸಾಮಾಜಿಕ ವಲಯದ ವರದಿಯನ್ನು (2020ನೇ ವರ್ಷದ ವರದಿ ಸಂಖ್ಯೆ – 3) ಮತ್ತು ಆರ್ಥಿಕ ಮತ್ತು ರಾಜಸ್ವ ವಲಯಗಳ ವರದಿಯನ್ನು (2020ನೇ ವರ್ಷದ ವರದಿ ಸಂಖ್ಯೆ–4) ಸದನದಲ್ಲಿ ಮಂಡಿಸಲಾಗಿದೆ.

- 2020–21ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿಯನ್ನು ಮಂಡಿಸಲಾಗಿದೆ.
- ಕರ್ನಾಟಕ ವಿಧಾನಮಂಡಲ/ವಿಧಾನಸಭೆಯ ಸಮಿತಿಗಳ ಹಾಗೂ ಜಂಟಿ ಪರಿಶೀಲನಾ ಸಮಿತಿಯ ವರದಿಯು ಸೇರಿದಂತೆ ಒಟ್ಟು **04** ವರದಿಗಳು, **09** ಅಧಿಸೂಚನೆಗಳು, **04** ಅಧ್ಯಾದೇಶಗಳು, **46** ವಾರ್ಷಿಕ ವರದಿಗಳು, **18** ಲೆಕ್ಕಪರಿಶೋಧನಾ ವರದಿ, **02** ಅನುಪಾಲನಾ ವರದಿ ಹಾಗೂ **02** ತಪಾಸಣಾ ವರದಿಗಳನ್ನು ಮಂಡಿಸಲಾಗಿದೆ.
- **03** ಅರ್ಜಿಗಳನ್ನು ಒಪ್ಪಿಸಲಾಗಿದೆ.
- 2020–21ನೇ ಸಾಲಿನ ಪೂರಕ ಅಂದಾಜುಗಳ ಎರಡನೇ ಕಂತಿನ ಬೇಡಿಕೆಗಳನ್ನು ಮತಕ್ಕೆ ಹಾಕಿ ಅಂಗೀಕರಿಸಲಾಗಿದೆ.
- ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿದ್ದ ಎರಡು ವಿಧೇಯಕಗಳು ಹಾಗೂ ಧನವಿನಿಯೋಗ ವಿಧೇಯಕವು ಸೇರಿದಂತೆ ಒಟ್ಟು 08 ವಿಧೇಯಕಗಳನ್ನು ಅಂಗೀಕರಿಸಲಾಯಿತು.
- ನಿಯಮ **60** ರಡಿಯಲ್ಲಿ ನೀಡಿದ್ದ **02** ನಿಲುವಳಿ ಸೂಚನೆಗಳನ್ನು ಪರಿವರ್ತಿಸಿರುವುದನ್ನು ಸೇರಿಸಿ **09** ಸೂಚನೆಗಳನ್ನು ನಿಯಮ 69ರಡಿಯಲ್ಲಿ ಸ್ವೀಕರಿಸಿದ್ದು, **02** ಸೂಚನೆಗಳನ್ನು ಚರ್ಚಿಸಲಾಗಿರುತ್ತದೆ.
- ಒಟ್ಟು **1640** ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಸದನದಲ್ಲಿ ಉತ್ತರಿಸಬೇಕಾಗಿದ್ದ **60** ಪ್ರಶ್ನೆಗಳಿಗೆ ಸಂಪೂರ್ಣವಾಗಿ ಉತ್ತರಿಸಲಾಗಿದೆ. ಲಿಖಿತ ಮೂಲಕ ಉತ್ತರಿಸುವ **600** ಪ್ರಶ್ನೆಗಳ ಉತ್ತರಗಳನ್ನು ಮಂಡಿಸಲಾಗಿದೆ.
- ನಿಯಮ 351 ರಡಿಯಲ್ಲಿ 40 ಸೂಚನೆಗಳನ್ನು ಅಂಗೀಕರಿಸಿದ್ದು, **25** ಸೂಚನೆಗಳ ಉತ್ತರಗಳನ್ನು ಸ್ವೀಕರಿಸಲಾಗಿರುತ್ತದೆ.
- ಗಮನ ಸೆಳೆಯುವ **142** ಸೂಚನೆಗಳ ಪೈಕಿ **03** ಸೂಚನೆಗಳನ್ನು ಚರ್ಚಿಸಲಾಗಿದೆ ಹಾಗೂ **37** ಸೂಚನೆಗಳ ಉತ್ತರಗಳನ್ನು ಮಂಡಿಸಲಾಗಿದೆ. **52** ಸೂಚನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿರುತ್ತದೆ.
- ಶೂನ್ಯ ವೇಳೆ ಅಡಿಯಲ್ಲಿ ಒಟ್ಟು **07** ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಅವುಗಳ ಬಗ್ಗೆ ಸದನದಲ್ಲಿ ಚರ್ಚಿಸಲಾಗಿದೆ.

**ಈ ಅವಧಿಯಲ್ಲಿ ಸದನವು ಶೇಕಡ 90ಕ್ಕಿಂತ ಹೆಚ್ಚಿನ ಕಾರ್ಯಕಲಾಪಗಳನ್ನು ಪೂರ್ಣಗೊಳಿಸಿರುತ್ತದೆ ಎಂಬುದನ್ನು ತಿಳಿಸಲು ಹರ್ಷವಾಗುತ್ತದೆ.**

ಸದನ ನಡೆಸಲು ಸಹಕರಿಸಿದ ಸಭಾ ನಾಯಕರಾದ ಮಾನ್ಯ ಮುಖ್ಯಮಂತ್ರಿಯವರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಸಚಿವ ಸಂಪುಟದ ಸದಸ್ಯರಿಗೆ, ಉಪ ಸಭಾಧ್ಯಕ್ಷರಿಗೆ, ಸರ್ಕಾರಿ ಹಾಗೂ ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ, ಎಲ್ಲಾ ಸದಸ್ಯರುಗಳಿಗೆ, ಮಾಧ್ಯಮ ಪ್ರತಿನಿಧಿಗಳಿಗೆ, ಇಲಾಖಾ ಮುಖ್ಯಸ್ಥರು, ಅಧಿಕಾರಿ–ಸಿಬ್ಬಂದಿಯವರಿಗೆ, ವಿಧಾನಸಭೆ ಸಚಿವಾಲಯದ ಅಧಿಕಾರಿ ಹಾಗೂ ಸಿಬ್ಬಂದಿಯವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

**ಈಗ ರಾಷ್ಟ್ರಗೀತೆಯೊಂದಿಗೆ ಸದನವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡುತ್ತಿದ್ದೇನೆ.**

**23. ದಿನಾಂಕ:07.12.2020 ರಿಂದ 10.12.2020 ರವರೆಗೆ ನಡೆದ 15ನೇ ವಿಧಾನಸಭೆಯ ಎಂಟನೇ ಅಧಿವೇಶನದಲ್ಲಿ ಮಂಡಿಸಲಾದ/ ಅಂಗೀಕರಿಸಲಾದ ವಿಧೇಯಕಗಳ ಪಟ್ಟಿ**

| ಕ್ರ. ಸಂ. Sl. No | ವಿಧೇಯಕಗಳ ಹೆಸರು Name of the Bill | ವಿಧೇಯಕಗಳು | | | | ಷರಾ Remarks |
|---|---|---|---|---|---|---|
| | | ವಿಧಾನಸಭೆ Legislative Assembly | | ವಿಧಾನ ಪರಿಷತ್ತು Legislative Council | | |
| | | ಮಂಡಿಸಿದ ದಿನಾಂಕ Date of Introduction | ಅಂಗೀಕರಿಸಿದ ದಿನಾಂಕ Date of Passing | ಮಂಡಿಸಿದ ದಿನಾಂಕ Date of Introduction | ಅಂಗೀಕರಿಸಿದ ದಿನಾಂಕ Date of Passing | |
| 1 | 2 | 3 | 4 | 5 | 6 | 7 |
| 1 | ಕರ್ನಾಟಕ ಸಂಸದೀಯ ಕಾರ್ಯದರ್ಶಿಗಳ ವೇತನ, ಭತ್ಯೆಗಳು ಮತ್ತು ಸಂಕೀರ್ಣ ಉಪಬಂಧಗಳ (ನಿರಸನಗೊಳಿಸುವ) ವಿಧೇಯಕ, 2020 (2020ರ ವಿ.ಸ.ವಿ.ಸಂಖ್ಯೆ:65)<br>The Karnataka Parliamentary Secretaries Salary, Allowances and Miscellaneous Provisions (Repeal) Bill, 2020 (L.A. Bill No. 65 of 2020) | **08.12.2020** | **09.12.2020** | | **10.12.2020** | |
| 2 | ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕ, 2020 (2020ರ ವಿ.ಸ.ವಿ.ಸಂಖ್ಯೆ:66)<br>The Karnataka Stamp (Second Amendment) Bill, 2020 (L.A. Bill No. 66 of 2020) | **08.12.2020** | **09.12.2020** | | **10.12.2020** | |
| 3 | ಕರ್ನಾಟಕ ಧನವಿನಿಯೋಗ (ಸಂಖ್ಯೆ:4) ವಿಧೇಯಕ, 2020 (2020ರ ವಿ.ಸ.ವಿ.ಸಂಖ್ಯೆ:67)<br>The Karnataka Appropriation (No:4) | **09.12.2020** | **09.12.2020** | | **10.12.2020** | |

| ಕ್ರ ಸಂ. Sl. No | ವಿಧೇಯಕಗಳ ಹೆಸರು Name of the Bill | ವಿಧೇಯಕಗಳು | | | | ಷರಾ Remarks |
|---|---|---|---|---|---|---|
| | | ವಿಧಾನಸಭೆ Legislative Assembly | | ವಿಧಾನ ಪರಿಷತ್ತು Legislative Council | | |
| | | ಮಂಡಿಸಿದ ದಿನಾಂಕ Date of Introduction | ಅಂಗೀಕರಿಸಿದ ದಿನಾಂಕ Date of Passing | ಮಂಡಿಸಿದ ದಿನಾಂಕ Date of Introduction | ಅಂಗೀಕರಿಸಿದ ದಿನಾಂಕ Date of Passing | |
| | Bill, 2020 (L.A. Bill No. 67 of 2020) | | | | | |
| 4 | ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020 (2020ರ ವಿ.ಸ.ವಿ.ಸಂಖ್ಯೆ:68)<br>The Karnataka Shops and Commercial Establishments (Second Amendment) Bill, 2020 (L.A. Bill No. 68 of 2020) | **09.12.2020** | | | | |
| 5 | ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ, 2020 (2020ರ ವಿ.ಸ.ವಿ.ಸಂಖ್ಯೆ:65)<br>The Karnataka Prevention of Slaughter and Preservation of Cattle Bill, 2020 (L.A. Bill No. 69 of 2020) | **09.12.2020** | **09.12.2020** | | | |
| 6 | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ವಿಧೇಯಕ, 2020 (2020ರ ವಿ.ಸ.ವಿ. ಸಂಖ್ಯೆ:39)<br>The Karnataka State Universities and | **23.09.2020** | **09.12.2020** | | **10.12.2020** | |

| ಕ್ರ ಸಂ. Sl. No | ವಿಧೇಯಕಗಳ ಹೆಸರು Name of the Bill | ವಿಧೇಯಕಗಳು | | | | ಷರಾ Remarks |
|---|---|---|---|---|---|---|
| | | ವಿಧಾನಸಭೆ Legislative Assembly | | ವಿಧಾನ ಪರಿಷತ್ತು Legislative Council | | |
| | | ಮಂಡಿಸಿದ ದಿನಾಂಕ Date of Introduction | ಅಂಗೀಕರಿಸಿದ ದಿನಾಂಕ Date of Passing | ಮಂಡಿಸಿದ ದಿನಾಂಕ Date of Introduction | ಅಂಗೀಕರಿಸಿದ ದಿನಾಂಕ Date of Passing | |
| | certain Other Law (Second Amendment) Bill, 2020 (L.A. Bill No. 39 of 2020) | | | | | |
| 7 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿಧೇಯಕ, 2020 (2020ರ ವಿ.ಸ.ವಿ. ಸಂಖ್ಯೆ:26) The Bruhat Bengaluru Mahanagara Palike Bill, 2020 (L.A. Bill No.26 of 2020) | **24.03.2020** | **10.12.2020** | | **10.12.2020** | **ಕರ್ನಾಟಕ ವಿಧಾನಮಂಡಲದ ಜಂಟಿ ಪರಿಶೀಲನಾ ಸಮಿತಿಯು ಮಾಡಿರುವ ಶಿಫಾರಸ್ಸುಗಳಂತೆ ಉಭಯ ಸದನಗಳಲ್ಲಿ ಪರ್ಯಾಲೋಚಿಸಿ ದಿನಾಂಕ:10.12.2020ರಂದು ಅಂಗೀಕರಿಸಲಾಗಿರುತ್ತದೆ.** |

## 23. ವಿಧಾನ ಸಭೆಯಲ್ಲಿ ಪುನರ್ ಪರ್ಯಾಲೋಚನೆಗೊಂಡು ಅಂಗೀಕಾರಗೊಂಡ ವಿಧೇಯಕಗಳು

| ಕ್ರ. ಸಂ. Sl. No | ವಿಧೇಯಕಗಳ ಹೆಸರು Name of the Bill | ವಿಧೇಯಕಗಳು | | | | ಷರಾ Remarks |
|---|---|---|---|---|---|---|
| | | ವಿಧಾನ ಸಭೆ Legislative Assembly | | ವಿಧಾನ ಪರಿಷತ್ತು Legislative Council | | |
| | | ಮಂಡಿಸಿದ ದಿನಾಂಕ Date of Introduction | ಅಂಗೀಕರಿಸಿದ ದಿನಾಂಕ Date of Passing | ಮಂಡಿಸಿದ ದಿನಾಂಕ Date of Introduction | ಅಂಗೀಕರಿಸಿದ ದಿನಾಂಕ Date of Passing | |
| 1 | 2 | 3 | 4 | 5 | 6 | 7 |
| 01 | ಕರ್ನಾಟಕ ಭೂ ಸುಧಾರಣೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020 (2020ರ ವಿ.ಸ.ವಿ.ಸಂಖ್ಯೆ:42) The Karnataka Land Reforms (Second Amendment) Bill, 2020 (L.A. Bill No. 42 of 2020) | **22.09.2020** | **26.09.2020** | ---- | **08.12.2020** | ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತವಾದ ಮತ್ತು ವಿಧಾನ ಪರಿಷತ್ತಿನಲ್ಲಿ ತಿದ್ದುಪಡಿಯೊಂದಿಗೆ ಅಂಗೀಕಾರ ರೂಪದಲ್ಲಿರುವ ಸದರಿ ವಿಧೇಯಕವನ್ನು ವಿಧಾನಸಭೆಯಲ್ಲಿ ದಿನಾಂಕ:09.12.2020 ರಂದು ಪುನರ್ ಪರ್ಯಾಲೋಚಿಸಿ ಅಂಗೀಕರಿಸ ಲಾಯಿತು. |
| 02 | ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2020 (2020ರ ವಿ.ಸ.ವಿ.ಸಂಖ್ಯೆ:55) The Karnataka Agricultural Produce Marketing (Regulation and Development) (Amendment) Bill, 2020 (L.A. Bill No. 55 of 2020) | **23.09.2020** | **26.09.2020** | ---- | **09.12.2020** | ವಿಧಾನಸಭೆಯಿಂದ ಅಂಗೀಕೃತವಾದ ಮತ್ತು ವಿಧಾನ ಪರಿಷತ್ತಿನಲ್ಲಿ ತಿದ್ದುಪಡಿಯೊಂದಿಗೆ ಅಂಗೀಕಾರ ರೂಪದಲ್ಲಿರುವ ಸದರಿ ವಿಧೇಯಕವನ್ನು ವಿಧಾನ ಸಭೆಯಲ್ಲಿ ದಿನಾಂಕ:10.12.2020 ರಂದು ಪುನರ್ ಪರ್ಯಾಲೋಚಿಸಿ ಅಂಗೀಕರಿಸ ಲಾಯಿತು. |

## 24. ವಿಧಾನ ಪರಿಷತ್ತಿನ 142ನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

**ಮಾನ್ಯ ಸಭಾಪತಿಯವರು:**

ವಿಧಾನ ಪರಿಷತ್ತಿನ 142ನೇ ಅಧಿವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನವು ದಿನಾಂಕ:07.12.2020 ರಿಂದ 10.12.2020ರವರೆಗೆ ಒಟ್ಟು 04 ದಿನಗಳು ಅಂದರೆ, 22.25 ಗಂಟೆ ನಡೆಸಲಾಗಿರುತ್ತದೆ.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ 14 ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

ಒಟ್ಟು ಎರಡು ಅರ್ಜಿಗಳನ್ನು ಸದನಕ್ಕೆ ಒಪ್ಪಿಸಲಾಯಿತು.

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಈ ಕೆಳಕಂಡ ವರದಿಗಳನ್ನು ಸದನದ ಮುಂದೆ ಮಂಡಿಸಲಾಯಿತು.

1. ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ಸಾಮಾನ್ಯ ಮತ್ತು ಸಾಮಾಜಿಕ ವಲಯದ ವರದಿ (ಸಂಖ್ಯೆ:3)
2. ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಆರ್ಥಿಕ ಮತ್ತು ರಾಜಸ್ವ ವಲಯದ ಮೇಲಿನ ವರದಿ (ಸಂಖ್ಯೆ–4)

2020–2021ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯ ವಾರ್ಷಿಕ ಪರಿಶೀಲನಾ ವರದಿಯನ್ನು ಸದನಕ್ಕೆ ಒಪ್ಪಿಸಲಾಯಿತು.

**ಹಾಗೂ**

2019–2020ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಅಧೀನ ಶಾಸನ ರಚನಾ ಸಮಿತಿಯ 49ನೇ ವರದಿಯನ್ನು, 2020ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿಧೇಯಕವನ್ನು ಪರಿಶೀಲಿಸಲು ರಚಿಸಲಾಗಿರುವ ಜಂಟಿ ಪರಿಶೀಲನಾ ಸಮಿತಿಯ ವಿಶೇಷ ವರದಿಯನ್ನು ಹಾಗೂ 2019–2020ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಸಭೆಯ ಮುಂದಿಡಲಾದ ಕಾಗದ ಪತ್ರಗಳ 36ನೇ ವರದಿ ಇವುಗಳನ್ನು ಸದನದಲ್ಲಿ ಮಂಡಿಸಲಾಯಿತು.

2020–21ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಕಂತು) ಹಾಗೂ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ 1ನೇ, 2ನೇ ಮತ್ತು 3ನೇ ಪಟ್ಟಿಗಳನ್ನು ಪಟ್ಟಿಗಳನ್ನು ಮಂಡಿಸಲಾಯಿತು.

ಪ್ರಸ್ತುತ ಅಧಿವೇಶನದಲ್ಲಿ 862 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 105 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, ಅವುಗಳ ಪೈಕಿ 27 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು. ಚುಕ್ಕೆ ಗುರುತಿನ 25 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 289 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರವನ್ನು ಮಂಡಿಸಲಾಯಿತು.

ನಿಯಮ 72ರಡಿಯಲ್ಲಿ 72 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 13 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 330ರಡಿಯಲ್ಲಿ 42ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 9 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 59ರ ಅಡಿಯಲ್ಲಿ 01 ಸೂಚನೆಯನ್ನು ಸ್ವೀಕರಿಸಲಾಗಿದ್ದು, ಸದರಿ ಸೂಚನೆಯನ್ನು ನಿಯಮ 68ಕ್ಕೆ ಪರಿವರ್ತಿಸಿ ಚರ್ಚಿಸಲಾಗಿರುತ್ತದೆ.

ನಿಯಮ 58ರ (**ಅರ್ಧಗಂಟೆ ಚರ್ಚೆ**) ಅಡಿಯಲ್ಲಿ ಚರ್ಚಿಸಲು 02 ಸೂಚನೆಗಳನ್ನು ಸ್ವೀಕರಿಸಲಾಗಿರುತ್ತದೆ.

ಶೂನ್ಯ ವೇಳೆಯ ಒಟ್ಟು 09 ಪ್ರಸ್ತಾವಗಳ ಪೈಕಿ 02 ಪ್ರಸ್ತಾವಕ್ಕೆ ಉತ್ತರಿಸಲಾಗಿರುತ್ತದೆ.

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 07 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಸಹಮತಿಯನ್ನು ನೀಡಿರುತ್ತದೆ.

## ಕರ್ನಾಟಕ ವಿಧಾನ ಪರಿಷತ್ತು

**ದಿನಾಂಕ: 15.12.2020ರ ನೂರ ನಲವತ್ತೆರಡನೆಯ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ**

ಸದನವು ಬೆಳಗ್ಗೆ 11.35 ಗಂಟೆಗೆ ಮಾನ್ಯ ಸಭಾಪತಿಯವರ (**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ**) ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ಸದನವನ್ನು ಬೆಳಗ್ಗೆ 11.35 ಗಂಟೆಗೆ ಅನಿರ್ಧಿಷ್ಟಾವಧಿಗೆ ಮುಂದೂಡಲಾಗಿದೆಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

* * * * *

**25. ವಿಧಾನ ಪರಿಷತ್ತಿನ 142ನೇ ಅಧಿವೇಶನದಲ್ಲಿ ವಿಧಾನ ಸಭೆಯಲ್ಲಿ ಅಂಗೀಕೃತಗೊಂಡು ವಿಧಾನ ಪರಿಷತ್ತಿನ ಸಹಮತಿ ಪಡೆದಿರುವ ವಿಧೇಯಕಗಳ ವಿವರ**

| ಕ್ರ ಸಂ | ವಿಧೇಯಕದ ಹೆಸರು | ಪುಸಂ | ವಿ ಸ ಮಂಡಿಸಿರುವ ದಿನಾಂಕ | ವಿ ಸ ಅಂಗೀಕರಿಸಿರುವ ದಿನಾಂಕ | ವಿ ಪ ಮಂಡಿಸಿರುವ ದಿನಾಂಕ | ವಿ ಪ ಅಂಗೀಕರಿಸಿರುವ ದಿನಾಂಕ | ರಾಜ್ಯಪಾಲರು/ ರಾಷ್ಟ್ರಪತಿ ಯವರು ಅಂಗೀಕರಿಸಿರು ವ ದಿನಾಂಕ |
|---|---|---|---|---|---|---|---|
| 1 | (ವಿ.ಸ.42/ 2020) ಕರ್ನಾಟಕ ಭೂ (ತಿದ್ದುಪಡಿ) ವಿಧೇಯಕ, 2020 The Karnataka Land Reforms (Second Amendment) Bill, 2020 | | 26.09.2020 | 26.09.2020 | 08.12.2020 | | |
| 2. | (ವಿ.ಸ.55/ 2020) ಕರ್ನಾಟಕ ಕೃಷಿ ಮಾರುಕಟ್ಟೆ ವ್ಯವಹಾರ (ತಿದ್ದುಪಡಿ) ವಿಧೇಯಕ, 2020 The Karnataka Agricultural Produce (Regulation and Develop ment) (Amend ment) Bill, 2020 | | 26.09.2020 | 26.09.2020 | 09.12.2020 | 09.12.2020 (ತಿದ್ದುಪಡಿ ಯೊಂದಿಗೆ) | |
| 3. | (ವಿ.ಸ.65/ 2020) ಕರ್ನಾಟಕ ಸಂಸದೀಯ ಕಾರ್ಯ ದರ್ಶಿಗಳ ವೇತನ, ಭತ್ಯೆಗಳು ಮತ್ತು | | 09.12.2020 | 09.12.2020 | 10.12.2020 | 10.12.2020 | |

| ಕ್ರ ಸಂ | ವಿಧೇಯಕದ ಹೆಸರು | ಪುಸಂ | ವಿ ಸ ಮಂಡಿಸಿರುವ ದಿನಾಂಕ | ವಿ ಸ ಅಂಗೀಕರಿಸಿರುವ ದಿನಾಂಕ | ವಿ ಪ ಮಂಡಿಸಿರುವ ದಿನಾಂಕ | ವಿ ಪ ಅಂಗೀಕರಿಸಿರುವ ದಿನಾಂಕ | ರಾಜ್ಯಪಾಲರು/ ರಾಷ್ಟ್ರಪತಿ ಯವರು ಅಂಗೀಕರಿಸಿರು ವ ದಿನಾಂಕ |
|---|---|---|---|---|---|---|---|
| | ಸಂಕೀರ್ಣ ಉಪ ಬಂಧಗಳ (ನಿರಸನ ಗೊಳಿಸುವ) ವಿಧೇಯಕ, 2020 The Karnataka Parliamentary Secretaries Salary, Allowances and Miscellaneous Provisions (Repeal) Bill, 2020 | | | | | | |
| 4. | (ವಿ.ಸ.66/ 2020) ಕರ್ನಾಟಕ ಸ್ಟಾಂಪು (ವಿಧೇಯಕ, 2020 The Karnataka Stamp (Second Amendment) Bill,2020 | | 09.12.2020 | 09.12.2020 | | 10.12.2020 | |
| 5 | (ವಿ.ಸ.67/ 2020) ಕರ್ನಾಟಕ ಧನವಿನಿಯೋಗ (ಸಂಖ್ಯೆ.4) ವಿಧೇಯಕ, | | 09.12.2020 | 09.12.2020 | 10.12.2020 | 10.12.2020 | |

| ಕ್ರ ಸಂ | ವಿಧೇಯಕದ ಹೆಸರು | ಪುಸಂ | ವಿ ಸ ಮಂಡಿಸಿರುವ ದಿನಾಂಕ | ವಿ ಸ ಅಂಗೀಕರಿಸಿರುವ ದಿನಾಂಕ | ವಿ ಪ ಮಂಡಿಸಿರುವ ದಿನಾಂಕ | ವಿ ಪ ಅಂಗೀಕರಿಸಿರುವ ದಿನಾಂಕ | ರಾಜ್ಯಪಾಲರು/ ರಾಷ್ಟ್ರಪತಿ ಯವರು ಅಂಗೀಕರಿಸಿರು ವ ದಿನಾಂಕ |
|---|---|---|---|---|---|---|---|
| | 2020<br>The Karnataka<br>Appropriati on (No.4)<br>Bill, 2020 | | | | | | |
| ೬. | (ವಿ.ಸ. 39/2020)<br>ಕರ್ನಾಟಕ ರಾಜ್ಯ ವಿಶ್ವವಿದ್ಯಾ ನಿಲಯಗಳ ಮತ್ತು ಇತರ ಕಾನೂನು (ಎರಡನೇ ತಿದ್ದುಪಡಿ) ತಿದ್ದುಪಡಿ) ವಿಧೇಯಕ, 2020<br>The Karnataka State<br>Universities and Certain Other Law (Second<br>Amend ment) Bill, 2020 | | 09.12.2020 | 09.12.2020 | 10.12.2020 | 10.12.2020 | |
| 7 | (ವಿ.ಸ.26/ 2020)<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿಧೇಯಕ, 2020 | | 10.12.2020 | 10.12.2020 | 10.12.2020 | 10.12.2020 | |

| ಕ್ರ ಸಂ | ವಿಧೇಯಕದ ಹೆಸರು | ಪುಸಂ | ವಿ ಸ ಮಂಡಿಸಿರುವ ದಿನಾಂಕ | ವಿ ಸ ಅಂಗೀಕರಿಸಿರುವ ದಿನಾಂಕ | ವಿ ಪ ಮಂಡಿಸಿರುವ ದಿನಾಂಕ | ವಿ ಪ ಅಂಗೀಕರಿಸಿರುವ ದಿನಾಂಕ | ರಾಜ್ಯಪಾಲರು/ ರಾಷ್ಟ್ರಪತಿ ಯವರು ಅಂಗೀಕರಿಸಿರು ವ ದಿನಾಂಕ |
|---|---|---|---|---|---|---|---|
| | The Bruhat Bengaluru Mahanagara Palike Bill, 2020 | | | | | | |

2 ಬಾಕಿ ಬಿಲ್ಲುಗಳು+ ಉಳಿದ 6 ಬಿಲ್ಲುಗಳು ವಿಧಾನ ಸಭೆಯಿಂದ ಮಂಡನೆಯಾಗಿ, ವಿಧಾನ ಪರಿಷತ್ತಿನಲ್ಲಿ ಅಂಗೀಕೃತವಾದ ಬಿಲ್ಲುಗಳು. ಒಟ್ಟು 7 ಬಿಲ್ಲುಗಳು ..

ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ, 2020

The Karnataka Prevention of Slaughter and Preservation of Cattle Bill, 2020 ಸದರಿ ಬಿಲ್ಲು ಪ್ರಕಟಣೆ ಮಾತ್ರ ಆಗಿರುತ್ತದೆ.

# ಭಾಗ–2

# ಕೇಂದ್ರ ಸರ್ಕಾರದ ಸುದ್ದಿಗಳು

## 1. ಸೂರು ಹೊಂದಲು ಹಲವು ದಾರಿ

ದೀನ ದಲಿತರು, ಅಸಹಾಯಕರು ಆರ್ಥಿಕವಾಗಿ ಹಿಂದುಳಿದವರಿಗಾಗಿ ಮನೆಗಳನ್ನು ನಿರ್ಮಾಣ ಮಾಡಿಕೊಡಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹಲವು ವಸತಿ ಯೋಜನೆಗಳನ್ನು ರೂಪಿಸಿದೆ. ಕನಿಷ್ಠ ಮೂಲ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬರು ಸೂರು ಹೊಂದಲಿ ಎನ್ನುವ ಆಶಯದಿಂದ ಯೋಜನೆಗಳನ್ನು ರೂಪಿಸಲಾಗಿದೆ. ವಸತಿ ದಿನ ಆಕ್ಟೋಬರ್–3ರ ಅಂಗವಾಗಿ ಯೋಜನೆಗಳ ವಿವರಗಳನ್ನು ಇಲ್ಲಿ ನೀಡಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಪಂಚಾಯತಿಗಳ ಮೂಲಕ, ಪಟ್ಟಣ, ನಗರ ಮತ್ತು ಮಹಾನಗರ ಪ್ರದೇಶದಲ್ಲಿ ಪುರಸಭೆ, ನಗರಸಭೆ, ಮಹಾನಗರ ಪಾಲಿಕೆ ಸಹಕಾರದೊಂದಿಗೆ ವಸತಿ ಯೋಜನೆಗಳನ್ನು ಅನುಷ್ಠಾನ ಮಾಡಲಾಗುತ್ತದೆ. ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪಂಚಾಯತಿಯ ಸಿಇಓ ಈ ಯೋಜನೆಗಳ ಮೇಲುಸ್ತುವಾರಿಯಾಗಿರುತ್ತಾರೆ. ಫಲಾನುಭವಿಗಳೇ ಮನೆ ನಿರ್ಮಾಣ ಮಾಡಿಕೊಳ್ಳುವ ಯೋಜನೆಗಳಲ್ಲಿ ಪ್ರತಿ ಮನೆಗೆ ನೀಡಲಾಗುವ ಅನುದಾನವನ್ನು (ತಳಪಾಯ, ತಳಮಟ್ಟ, ಮೇಲ್ಛಾವಣಿ, ಫೈನಲ್) 4 ಹಂತದಲ್ಲಿ ಜೆಪಿಎಸ್ ಮೂಲಕ ಫಲಾನುಭವಿಗಳ ಖಾತೆಗೆ ನೇರವಾಗಿ ಜಮಾ ಮಾಡುವ ವ್ಯವಸ್ಥೆ ಮಾಡಲಾಗಿದೆ.

**ಡಾ: ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ):** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಠ ಪಂಗಡದವರು ಮಾತ್ರ ಈ ಯೋಜನೆ ಫಲಾನುಭವಿಗಳಾಗಲು ಅರ್ಹರು. ರೂ.1.75 ಲಕ್ಷ ಅನುದಾನ ನೆರವು ಈ ಯೋಜನೆಯಲ್ಲಿದ್ದು ನಾಲ್ಕು ಹಂತದಲ್ಲಿ ಹಣ ನೀಡಲಾಗುತ್ತದೆ.

**ಡಾ: ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ) ನಗರ** : ಈ ಯೋಜನೆಯಲ್ಲಿ ರೂ.2.ಲಕ್ಷ ಅನುದಾನ ನೆರವು ಲಭ್ಯವಿದ್ದು, ಫಲಾನುಭವಿಗಳಿಗೆ ನಾಲ್ಕು ಹಂತದಲ್ಲಿ ಹಣ ನೀಡಲಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಮಾತ್ರ ಈ ಯೋಜನೆ ಸೌಲಭ್ಯ ಪಡೆದುಕೊಳ್ಳಬಹುದು.

**ದೇವರಾಜ ಅರಸು ಗ್ರಾಮೀಣ ವಸತಿ ಯೋಜನೆ:** ಈ ಯೋಜನೆ ಸೌಲಭ್ಯ ಪಡೆಯಲು ಗ್ರಾಮೀಣ ಪ್ರದೇಶದ ವಿಧವೆಯರು, ಅಲೆಮಾರಿಗಳು, ಅಂಗವಿಕಲರು, ಎಚ್.ಐ.ವಿ ಸೋಂಕಿತರು, ಕುಷ್ಠರೋಗಿಗಳು, ಮಂಗಳಮುಖಿಯರು, ಲೈಂಗಿಕ ಕಾರ್ಯಕರ್ತೆಯರು, ದೇವದಾಸಿಯರು, ಜೀತ ವಿಮುಕ್ತರು, ಸಫಾಯಿ ಕರ್ಮಚಾರಿಗಳು, ಕುಶಲಕರ್ಮಿಗಳು ಸೇರಿ 14 ವಿಶೇಷ ವರ್ಗದ ಜನರು ಅರ್ಹರು. ಪ್ರತಿ ಮನೆಗೆ ರೂ.1.2ಲಕ್ಷ ಅನುದಾನ ಲಭ್ಯವಿದೆ.

**ನಗರ ವಸತಿ ಯೋಜನೆ:** ಈ ಯೋಜನೆಯಲ್ಲಿ ಪ್ರತಿ ಮನೆಗೆ ರೂ.1.2 ಲಕ್ಷ ಅನುದಾನ ಲಭ್ಯವಿದೆ. ಈ ಯೋಜನೆ ಸೌಲಭ್ಯ ಪಡೆಯಲು ನಗರ ಪ್ರದೇಶಗಳ ವಿಧವೆಯರು, ಅಲೆಮಾರಿಗಳು, ಅಂಗವಿಕಲರು, ಎಚ್.ಐ.ವಿ. ಸೋಂಕಿತರು, ಕುಷ್ಠರೋಗಿಗಳು, ಮಂಗಳಮುಖಿಯರು, ಲೈಂಗಿಕ ಕಾರ್ಯಕರ್ತೆಯರು ದೇವದಾಸಿಯರು, ಜೀತ ವಿಮುಕ್ತರು, ಸಫಾಯಿ ಕರ್ಮಚಾರಿಗಳು ಕುಶಲ ಕರ್ಮಿಗಳು ಸೇರಿ 14 ವಿಶೇಷ ವರ್ಗಗಳು ಅರ್ಹವಾಗಿವೆ.

**ಬಸವ ವಸತಿ ಯೋಜನೆ:** ಗ್ರಾಮೀಣ ಭಾಗದಲ್ಲಿರುವ ಸಾಮಾನ್ಯ ಜನರಿಗಾಗಿ ಈ ಯೋಜನೆ ರೂಪಿಸಲಾಗಿದೆ. ಪ್ರತಿ ಮನೆಗೆ ರೂ.1.2 ಲಕ್ಷ ಅನುದಾನ ಲಭ್ಯವಿದೆ. ಪ್ರತಿ ಕಂತಿನಲ್ಲಿ ತಲಾ ರೂ.30 ಸಾವಿರ ಅನುದಾನದಂತೆ 4 ಕಂತಿನಲ್ಲಿ ಹಣ ನೀಡಲಾಗುತ್ತದೆ. ಮನೆ ಇಲ್ಲದವರು ಯೋಜನೆ ಫಲಾನುಭವಿಗಳಾಗಬಹುದು.

**ಪಿಎಂ ಆವಾಸ್ ಯೋಜನೆ:** ಈ ಯೋಜನೆಗೆ ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಟ ವರ್ಗ ಮತ್ತು ಸಾಮಾನ್ಯ ವರ್ಗದ ಜನರು ಸೇರಿ ಎಲ್ಲರೂ ಅರ್ಹರು. ರೂ.1.2 ಲಕ್ಷ ನೆರವು ನೀಡುವ ಈ ಯೋಜನೆಗೆ ಕೇಂದ್ರ ಸರ್ಕಾರ ಶೇ.60 ಮತ್ತು ರಾಜ್ಯ ಸರ್ಕಾರ ಶೇ.40 ಸಹಭಾಗಿತ್ವದಲ್ಲಿ ಅನುದಾನ ಬಿಡುಗಡೆ ಮಾಡುತ್ತದೆ.

**ವಾಜಪೇಯಿ ನಗರ ವಸತಿ ಯೋಜನೆ:** ಈ ಯೋಜನೆಗೆ ಸಾಮಾನ್ಯ ವರ್ಗ ಸೇರಿ ಎಲ್ಲರೂ ಅರ್ಹರಿದ್ದಾರೆ. ಫಲಾನುಭವಿಗಳಿಗೆ ತಲಾ ರೂ.2 ಲಕ್ಷ ನೆರವು ನೀಡುವ ಈ ಯೋಜನೆಗೆ ಕೇಂದ್ರ ಸರ್ಕಾರ ಶೇ.60 ಮತ್ತು ರಾಜ್ಯ ಸರ್ಕಾರ ಶೇ.40 ಸಹಭಾಗಿತ್ವದಲ್ಲಿ ಅನುದಾನ ಬಿಡುಗಡೆ ಮಾಡುತ್ತದೆ.

ಆಧಾರ: ಕನ್ನಡಪ್ರಭ, ದಿನಾಂಕ:03.10.2020

## 2. ಬೆಂಬಲ ಬೆಲೆ ವ್ಯವಸ್ಥೆ ರದ್ದಾಗದು

ಕೇಂದ್ರ ಸರ್ಕಾರವು ಕೃಷಿ ಸಂಬಂಧಿ ಕಾಯ್ದೆಗಳನ್ನು ತಿದ್ದುಪಡಿ ಮಾಡಿರುವುದರಿಂದ ಈಗ ಇರುವ ಕನಿಷ್ಠ ಬೆಂಬಲ ಬೆಲೆ ವ್ಯವಸ್ಥೆ ರದ್ದಾಗುವುದಿಲ್ಲ. ಅಂತಹ ಯಾವ ಪ್ರಸ್ತಾವವು ಕೇಂದ್ರ ಸರ್ಕಾರದ ಮುಂದಿಲ್ಲ ಎಂದು ಕೇಂದ್ರ ರಾಸಾಯನಿಕಗಳು ಮತ್ತು ರಸಗೊಬ್ಬರ ಖಾತೆ ಸಚಿವ ಡಿ.ವಿ. ಸದಾನಂದ ಗೌಡ ಭರವಸೆ ನೀಡಿದರು.

ವಿಕಾಸಸೌಧದಲ್ಲಿ ರಾಜ್ಯದ ಕೃಷಿ ಸಚಿವ ಬಿ.ಸಿ.ಪಾಟೀಲ್ ಅವರೊಂದಿಗೆ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು 'ಕೃಷಿ ಸಂಬಂಧ ಕಾಯ್ದೆಗಳ ತಿದ್ದುಪಡಿ ವಿರೋಧಿಸುತ್ತಿರುವ ವಿರೋಧ ಪಕ್ಷಗಳು ಬೆಂಬಲ ಬೆಲೆ ವ್ಯವಸ್ಥೆಯನ್ನು ರದ್ದು ಮಾಡಲಾಗುತ್ತಿದೆ ಎಂಬ ಸುಳ್ಳನ್ನು ಹಬ್ಬಿಸುತ್ತಿದ್ದಾರೆ. ಅದರ ಮೂಲಕ ರೈತರನ್ನು ಎತ್ತಿಕಟ್ಟಲು ಯತ್ನಿಸುತ್ತಿದ್ದಾರೆ. ಬೆಂಬಲ ಬೆಲೆ ವ್ಯವಸ್ಥೆ ರದ್ದಾಗುವುದಿಲ್ಲ. ಅದನ್ನು ಮತ್ತಷ್ಟು ಬಲಪಡಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು (ಎಪಿಎಂಸಿ) ರದ್ದು ಮಾಡಲಾಗುತ್ತದೆ ಎಂಬ ಆರೋಪದಲ್ಲೂ ಸತ್ಯಾಂಶವಿಲ್ಲ. ಕಾಯ್ದೆಗಳ ತಿದ್ದುಪಡಿಯಲ್ಲಿ ಎಳ್ಳಷ್ಟು ರೈತ ವಿರೋಧ ಅಂಶಗಳಿಲ್ಲ. ಟೀಕಿಸಲು ಅಸ್ತ್ರಗಳು ದೊರೆಯದ ಕಾರಣದಿಂದ ವಿರೋಧ ಪಕ್ಷಗಳು ಸುಳ್ಳು ಆರೋಪಗಳನ್ನು ಮಾಡುತ್ತಿವೆ. ಎಪಿಎಂಸಿ ಕಾಯ್ದೆ ತಿದ್ದುಪಡಿ ಕುರಿತು 2012ರ ಡಿಸೆಂಬರ್‌ನಲ್ಲಿ ಆಗಿನ ಯುಪಿಎ ಸರ್ಕಾರವೇ ಪ್ರಸ್ತಾಪ ಮಾಡಿತ್ತು ಎಂದು ಹೇಳಿದರು.

ಸಚಿವ ಬಿ.ಸಿ. ಪಾಟೀಲ ಮಾತನಾಡಿ ಈ ಬಾರಿ ವಾಡಿಕೆಯ ಶೇ.104ರಷ್ಟು ಬಿತ್ತನೆಯಾಗಿದೆ. ಇದರಿಂದಾಗಿ ಯೂರಿಯಾ ಗೊಬ್ಬರಕ್ಕೆ ಬೇಡಿಕೆ ಹೆಚ್ಚಿದೆ. ಕೇಂದ್ರ ಸರ್ಕಾರದ ಬೇಡಿಕೆಯಷ್ಟು ಗೊಬ್ಬರ ಒದಗಿಸಿದೆ. ರಾಜ್ಯದ ಯಾವುದೇ ಭಾಗದಲ್ಲೂ ರಸಗೊಬ್ಬರ ಮತ್ತು ಬಿತ್ತನೆ ಬೀಜಗಳ ಕೊರತೆ ಉದ್ಭವಿಸಿಲ್ಲ ಎಂದರು.

**ಕೃಷಿ ಅಭಿವೃದ್ಧಿ ಪೂರಕ:** ರಾಜ್ಯದಲ್ಲಿ ಕೃಷಿಯನ್ನು ಉದ್ದಿಮೆಯ ಸ್ವರೂಪದಲ್ಲಿ ಅಭಿವೃದ್ಧಿಪಡಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಂದಿರುವ ತಿದ್ದುಪಡಿ ಕಾಯ್ದೆಗಳು ಪೂರಕವಾಗಲಿವೆ. ಕೃಷಿ ವಿಜ್ಞಾನ ಪದವೀಧರರಿಗೆ ಹೊಸ ಅವಕಾಶಗಳು ತೆರೆದುಕೊಳ್ಳಲಿವೆ. ಭೂ ಸುಧಾರಣಾ ಕಾಯ್ದೆ ಮತ್ತು ಎಪಿಎಂಸಿ ಕಾಯ್ದೆಗಳ ತಿದ್ದುಪಡಿಯಿಂದ ಕೃಷಿ ಕ್ಷೇತ್ರಕ್ಕೆ ಯಾವುದೇ ರೀತಿಯಲ್ಲೂ ಹಾನಿಯಾಗುವುದಿಲ್ಲ ಎಂದು ಕೃಷಿ ಸಚಿವರು ತಿಳಿಸಿದರು.

ಈ ಕಾಯ್ದೆಗಳ ತಿದ್ದುಪಡಿಗೆ ಕಾಂಗ್ರೆಸ್ ನೇತೃತ್ವದ ಸರ್ಕಾರವೇ ಹಿಂದೆ ಪ್ರಯತ್ನಿಸಿತ್ತು. ಅವರಿಂದ ಸಾಧ್ಯವಾಗದ್ದನ್ನು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಕಾರ್ಯರೂಪಕ್ಕೆ ತಂದಿದೆ. ಇದರಿಂದ ವಿಚಲಿತರಾಗಿರುವ ಕಾಂಗ್ರೆಸ್ ನಾಯಕರು ಸುಳ್ಳು ಆರೋಪಗಳನ್ನು ಮಾಡುತ್ತಿರುವುದು ಹಾಸ್ಯಾಸ್ಪದ ಎಂದು ಪಾಟೀಲರು ಟೀಕಿಸಿದರು.

ಆಧಾರ: ಪ್ರಜಾವಾಣಿ, ದಿನಾಂಕ:03.10.2020

## 3. ಅಟಲ್ ಸುರಂಗ ಲೋಕಾರ್ಪಣೆ, ಸುಲಲಿತ ಸೇನೆ ಸಾಗಣೆ

ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಕನಸಾಗಿದ್ದ ವಿಶ್ವದ ಅತಿ ಉದ್ದದ ಅಟಲ್ ಸುರಂಗ ಮಾರ್ಗವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಲೋಕಾರ್ಪಣೆ ಮಾಡಿದ್ದಾರೆ. ರಕ್ಷಣಾ ದೃಷ್ಟಿಯಿಂದ ವ್ಯೂಹಾತ್ಮಕ ಎನ್ನಿಸಿರುವ ಈ ಸುರಂಗವನ್ನು ಕೋವಿಡ್–19 ಆತಂಕದ ನಡುವೆಯೂ ಪ್ರಧಾನಿ ನರೇಂದ್ರ ಮೋದಿ ಅವರು ರೋಹ್ಟಂಗ್‌ಗೆ ತೆರಳಿ ಉದ್ಘಾಟಿಸಿದ್ದು ವಿಶೇಷ.

ರಕ್ಷಣಾ ದೃಷ್ಟಿಯಿಂದ ವ್ಯೂಹಾತ್ಮಕ ಎನ್ನಿಸಿರುವ ಹಾಗೂ ವಿಶ್ವದ ಅತಿ ಉದ್ದದ ಹೆದ್ದಾರಿ ಸುರಂಗ ಮಾರ್ಗ ಎಂಬ ಹಿರಿಮೆಯ ಅಟಲ್ ಸುರಂಗ ಮಾರ್ಗವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಲೋಕಾರ್ಪಣೆ ಮಾಡಿದರು.

ಹಿಮಾಚಲ ಪ್ರದೇಶದ ಮನಾಲಿ ಮತ್ತು ಕೇಂದ್ರಾಡಳಿತ ಪ್ರದೇಶ ಲಡಾಖ್‌ನಲ್ಲಿರುವ ಲೇಹ್ ನಡುವಿನ ಅಂತರವನ್ನು 46 ಕಿ.ಮೀನಷ್ಟು ಕಡಿಮೆ ಮಾಡುವ ಈ ಸುರಂಗ ಮಾರ್ಗವು ಪ್ರಯಾಣ ಅವಧಿಯನ್ನು 5 ಗಂಟೆಯಷ್ಟು ತಗ್ಗಿಸಲಿದೆ. ಪೂರ್ವ ಲಡಾಖ್‌ನಲ್ಲಿನ ಭಾರತ–ಚೀನಾ ಗಡಿಯಲ್ಲಿ ಸಂಘರ್ಷದ ವಾತಾವರಣ ನಿರ್ಮಾಣವಾಗಿರುವಾಗಲೇ ಪ್ರಧಾನಿ ಈ ಸುರಂಗ ಮಾರ್ಗವನ್ನು ಲೋಕಾರ್ಪಣೆ ಮಾಡಿರುವುದು ವಿಶೇಷ. ಈ ಮಾರ್ಗದಿಂದಾಗಿ ಚೀನಾ ಗಡಿಯಲ್ಲಿ ಸೈನಿಕರ ನಿಯೋಜನೆ, ಶಸ್ತ್ರಾಸ್ತ್ರ ಮತ್ತು ಅಗತ್ಯ ಸಾಮಗ್ರಿಗಳ ರವಾನೆ ಸುಲಭವಾಗಲಿದೆ.

ಕೊರೋನಾ ಸಂಕಷ್ಟದ ಸಮಯದಲ್ಲಿಯೂ ಖುದ್ದು ರೋಹ್ಟಂಗ್ ಪಾಸ್‌ಗೆ ತೆರಳಿ ಸುರಂಗ ಮಾರ್ಗವನ್ನು ಪ್ರಧಾನಿ ದೇಶಕ್ಕೆ ಅರ್ಪಿಸಿದ ಬಳಿಕ ನಡೆದ ಸರಳ ಸಮಾರಂಭದಲ್ಲಿ ಮಾತನಾಡಿದ ಅವರು ರಕ್ಷಣಾ ಹಿತಾಸಕ್ತಿ ವಿಷಯದಲ್ಲಿ ಈ ಹಿಂದಿನ ಮೈತ್ರಿಕೂಟ ಸರ್ಕಾರ ರಾಜಿ ಮಾಡಿಕೊಳ್ಳುವ ಮೂಲಕ ದೇಶಕ್ಕೆ ಅತಿ ದೊಡ್ಡ ದ್ರೋಹ ಎಸಗಿದೆ ಎಂದು ಕಾಂಗ್ರೆಸ್ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದರು. ರಾಷ್ಟ್ರೀಯ ಹಿತಾಸಕ್ತಿ ಮತ್ತು ದೇಶವನ್ನು ರಕ್ಷಿಸುವುದಕ್ಕಿಂತ ನಮಗೆ ಬೇರೇನೂ ಮುಖ್ಯವಲ್ಲ. ಆದರೆ ರಕ್ಷಣಾ ಹಿತಾಸಕ್ತಿಗಳಿಗೆ ಧಕ್ಕೆಯುಂಟಾದ ದಿನಗಳನ್ನು ರಾಷ್ಟ್ರ ಕಂಡಿದೆ ಎಂದು ಪ್ರಧಾನಿ ಹೇಳಿದರು.

ಅಟಲ್ ಸುರಂಗ ಮಾರ್ಗ, ಲಡಾಖ್‌ನ ದೌಲತ್ ಬೇಗ್ ಓಲ್ಡಿ, ವಾಯುನೆಲೆ ನಿರ್ಮಾಣ ತೇಜಸ್ ಯುದ್ಧ ವಿಮಾನಗಳ ಉತ್ಪಾದನೆಯಂತಹ ಹಲವು ರಕ್ಷಣಾ ಯೋಜನೆಗಳ ಅನುಷ್ಠಾನದಲ್ಲಿ ತಮ್ಮ ಸರ್ಕಾರ ತೆಗೆದುಕೊಂಡ ತ್ವರಿತ ಕ್ರಮಗಳ ಬಗ್ಗೆ ಪ್ರಧಾನಿ ಹೆಮ್ಮೆಯಿಂದ ಹೇಳಿಕೊಂಡರು. ನಮ್ಮ ಸರ್ಕಾರ ಬರುವ ಪೂರ್ವದಲ್ಲಿ ಈ ಎಲ್ಲ ಯೋಜನೆಗಳು ವಿಳಂಬಗೊಂಡಿದ್ದವು ಅಥವಾ ಮರತೇ ಹೋಗಿದ್ದವು. ರಕ್ಷಣೆಯಂತಹ ಮಹತ್ವದ ವಿಷಯದಲ್ಲಿ ಅವರು ಅಷ್ಟೊಂದು ಉದಾಸೀನ ತಾಳಿದದ್ದು ಯಾಕೆ. ಇದರ ಹಿಂದೆ ಇದ್ದ ಒತ್ತಡವಾದರು ಏನು ಎಂದು ಪ್ರಶ್ನಿಸಿದರು.

ಗಡಿಯಲ್ಲಿನ ಮೂಲ ಸೌಕರ್ಯ ಬಲಪಡಿಸುವ ವಿಷಯದಲ್ಲಿ ನಮ್ಮ ಸರ್ಕಾರ ಪ್ರಥಮ ಆದ್ಯತೆ ನೀಡಿದೆ. ಗಡಿಗಳು ಸುಭದ್ರವಾಗಿದ್ದರೆ ದೇಶ ಸುಭದ್ರವಾಗಿರಲು ಸಾಧ್ಯ. ಈ ದಿಸೆಯಲ್ಲಿ ಗಡಿ ರಸ್ತೆ ಸುರಂಗ ಮತ್ತು ಸೇತುವೆಗಳ ನಿರ್ಮಾಣಕ್ಕಾಗಿ ನಮ್ಮ ಸರ್ಕಾರ ಹಿಂದೆಂದೂ ಕಾಣದಿರುವ ರೀತಿಯಲ್ಲಿ ದೊಡ್ಡ ಪ್ರಮಾಣದ ಶಕ್ತಿ ವಿನಿಯೋಗಿಸಿ ಕೆಲಸ ಮಾಡಿದೆ ಎಂದು ವಿವರಿಸಿದರು.

ಹಿಂದೆ ಯೋಜನೆಗಳ ಅನುಷ್ಠಾನವು ಹರಸಾಹಸ ಎನಿಸಿದ್ದ ದಿನಗಳಿದ್ದವು. ಅವು ರೂಪುಗೊಂಡ ಹಂತದಲ್ಲಿಯೇ ಉಳಿದು ಕೊಳೆಯುತ್ತಿದ್ದವು. ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗ 2002ರಲ್ಲಿ ಅಟಲ್ ಸುರಂಗ ಸಂಪರ್ಕಿಸುವ ರಸ್ತೆ ಯೋಜನೆಗೆ ಚಾಲನೆ ನೀಡಿದ್ದರು. ಆದರೆ, ಅವರ ನಂತರ ಬಂದ ಸರ್ಕಾರವು ಕಾಮಗಾರಿಯನ್ನು ಮರೆತೇಬಿಟ್ಟಿತು.

2013–14ರವರೆಗೆ ಕೇವಲ 1,300 ಮೀಟರ್ ಉದ್ದದ ಕಾಮಗಾರಿ ಮಾತ್ರ ಮುಗಿದಿತ್ತು. ಅದೇ ವೇಗದಲ್ಲಿ ನಡೆದಿದ್ದರೆ ಈ ಸುರಂಗ ಮಾರ್ಗ 2040ರ ವೇಳೆಗೆ ಮುಗಿಯುತ್ತಿತ್ತು. ಆದರೆ, ಈ ಮಾರ್ಗದ ಮಹತ್ವ ಅರಿತಿದ್ದ ನಮ್ಮ ಸರ್ಕಾರ ಕಾಮಗಾರಿಗೆ ವೇಗ ನೀಡಿತು. ವರ್ಷಕ್ಕೆ 300 ಮೀಟರ್ ನಿಂದ 1400

ಮೀಟರ್‌ಗೆ ಕಾಮಗಾರಿ ವೇಗ ಹೆಚ್ಚಿಸಲಾಯಿತು. ಆ ಮೂಲಕ 2020ರ ವೇಳೆಗೆ ದೊಡ್ಡ ಯೋಜನೆಯೊಂದು ಪೂರ್ಣಗೊಂಡಿತು. ಕೇವಲ ಆರು ವರ್ಷಗಳಲ್ಲಿ ನಮ್ಮ ಸರ್ಕಾರ 26 ವರ್ಷಗಳ ಕೆಲಸ ಮಾಡಿ ಮುಗಿಸಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಅಟಲ್ ಸುರಂಗಕ್ಕೆ ಆದ ಗತಿಯೇ ಅನೇಕ ರಕ್ಷಣಾ ಯೋಜನೆಗಳಿಗೂ ಆಗಿತ್ತು ಎಂದು ವಿಷಾದಿಸಿದರು.

ವಾಜಪೇಯಿ ಸರ್ಕಾರದ ಅವಧಿಯಲ್ಲಿ ಚಾಲನೆ ಪಡೆದ ಬಿಹಾರದ ಕೋಸಿ ಮೆಗಾ ಬ್ರಿಡ್ಜ್ ಯೋಜನೆ ಕೂಡ ಹತ್ತಾರು ವರ್ಷ ವಿಳಂಬಗೊಂಡು ಕಳೆದ ವರ್ಷ ಲೋಕಾರ್ಪಣೆ ಮಾಡಿದ್ದನ್ನು ನಿದರ್ಶನವಾಗಿ ನೀಡಿದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:04.10.2020

## 4. ಶಾಲೆ ಆರಂಭಕ್ಕೆ ಹತ್ತು ಸೂತ್ರ ರೂಪಿಸಿದ ಕೇಂದ್ರ ಸರ್ಕಾರ

ಕೊರೋನಾ ಸೋಂಕು ಹಾವಳಿ ನಡುವೆಯೇ ಅಕ್ಟೋಬರ್ 15ರ ಬಳಿಕ ಎಲ್ಲಾ ಶಾಲಾ ಕಾಲೇಜುಗಳನ್ನು ಹಂತ ಹಂತವಾಗಿ ಪುನರಾರಂಭ ಮಾಡಲು ರಾಜ್ಯ ಸರ್ಕಾರಗಳು ಸಿದ್ಧತೆ ನಡೆಸಿವೆ. ಇದಕ್ಕೆ ಸಂಬಂಧಿಸಿದಂತೆ ಸಮಗ್ರ ಮಾರ್ಗಸೂಚಿ ಹೊರಡಿಸಿರುವ ಕೇಂದ್ರ ಶಿಕ್ಷಣ ಸಚಿವಾಲಯ, ಶಾಲೆ ಆರಂಭದ ಬಳಿಕ ತರಾತುರಿಯಲ್ಲಿ ಪರೀಕ್ಷೆಗಳನ್ನು ನಡೆಸದಿರುವಂತೆ ನಿರ್ದೇಶನ ನೀಡಿದೆ.

ಸೋಂಕು ಹಾವಳಿ ಕಾರಣ ಕಳೆದ ಮೇ ತಿಂಗಳಿಂದ ದೇಶದ ಎಲ್ಲಾ ಶಾಲಾ–ಕಾಲೇಜುಗಳು ಮುಚ್ಚಿದ್ದು, ಶೈಕ್ಷಣಿಕ ವರ್ಷದ ಕ್ಯಾಲೆಂಡರ್ ಏರುಪೇರಾಗಿದೆ. ಇನ್ನಷ್ಟು ವಿಳಂಬ ಮಾಡುವುದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯತ್ತಿನ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ. ಅದನ್ನು ಪರಿಗಣಿಸಿದ ಸರ್ಕಾರ ಅಕ್ಟೋಬರ್ 15ರ ನಂತರ ಹಂತಹಂತವಾಗಿ ಶಾಲೆಗಳನ್ನು ತೆರೆಯಬಹುದು ಎನ್ನುವ ಸಮ್ಮತಿ ನೀಡಿದೆ. ಆದರೆ, ತೆರೆಯಲೇಬೇಕು ಎನ್ನುವ ಕಡ್ಡಾಯ ಇಲ್ಲ. ಶಾಲಾ ಆಡಳಿತ ಮಂಡಳಿಗಳು ಇಚ್ಛಿಸಿದರೆ ಈಗ ನಡೆಯುತ್ತಿರುವ ಆನ್‌ಲೈನ್ ತರಗತಿಗಳನ್ನೇ ಮುಂದುವರಿಸಬಹುದು ಎನ್ನುವ ಆಯ್ಕೆಯನ್ನು ನೀಡಲಾಗಿದೆ

**ಶಾಲೆ ಆರಂಭಕ್ಕೆ ಪಾಲಿಸಬೇಕಾದ ಕಡ್ಡಾಯ ನಿಯಮಗಳು:**

- ಶಾಲೆ ಆವರಣ ಸಂಪೂರ್ಣವಾಗಿ ಸ್ವಚ್ಛಗೊಳಿಸುವುದು. ಸೋಂಕು ನಿವಾರಕ ಸಿಂಪಡಿಸಿ ತರಗತಿ ಕೊಠಡಿಗಳ ಒಳಗೆ ಗಾಳಿ–ಬೆಳಕು ಸರಿಯಾದ ರೀತಿಯಲ್ಲಿ ಇರುವಂತೆ ಎಚ್ಚರ ವಹಿಸಬೇಕು.
- ತುರ್ತು ಸಂದರ್ಭದ ನಿಗಾ ಕ್ರಮಕ್ಕಾಗಿ ಪ್ರತ್ಯೇಕ ತಂಡ ರಚಿಸಬೇಕು. ಸ್ವಚ್ಛತೆ, ಸಾಮಾನ್ಯ ನಿಗಾ ಸೇರಿದಂತೆ ಕೊರೋನಾ ಸಂಬಂಧಿ ಜವಾಬ್ದಾರಿಗಳ ನಿರ್ವಹಣೆಗೆ ತಂಡಗಳನ್ನು ರಚಿಸುವುದು ಕಡ್ಡಾಯ.
- ಪ್ರತಿಯೊಂದು ಶಾಲೆಯೂ ತನ್ನದೇ ಆದ ಕಾರ್ಯನಿರ್ವಹಣಾ ಸೂತ್ರಗಳನ್ನು ರೂಪಿಸಬೇಕು.
- ಶಾಲಾ ಅವಧಿಯಲ್ಲಿ ವಿದ್ಯಾರ್ಥಿಗಳ ನಡುವೆ ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಸೂಕ್ತ ಆಸನ ಏರ್ಪಾಡು ಕಡ್ಡಾಯ.
- ತರಗತಿ ವೇಳೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳು, ಮಾಸ್ಕ್ ಧರಿಸಿರಲೇ ಬೇಕು.
- ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು ಹಾಸ್ಟೆಲ್ ಸಿಬ್ಬಂದಿ ಮತ್ತು ಸಮುದಾಯ ಸದಸ್ಯರಲ್ಲಿ ಸೋಂಕು ಜಾಗೃತಿ ಮೂಡಿಸಬೇಕು.
- ಎಲ್ಲಾ ತರಗತಿಗಳಿಗೆ ಬದಲಾವಣೆ ತಕ್ಕಂತೆ ಶೈಕ್ಷಣಿಕ ಕ್ಯಾಲೆಂಡರ್ ಯೋಜನೆ ರೂಪಿಸಬೇಕು.

- ತರಬೇತಿ ಪಡೆದ ನುರಿತ ಆರೋಗ್ಯ ಸೇವಕ/ದಾದಿ/ವೈದ್ಯರ ಲಭ್ಯತೆಯನ್ನು ಖಚಿತ ಪಡಿಸಿಕೊಳ್ಳಬೇಕು.
- ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗೆ ಹೊಂದಿಕೊಳ್ಳುವ ಹಾಜರಾತಿ ಮತ್ತು ಆನಾರೋಗ್ಯ ರಜೆ ನೀತಿ ರೂಪಿಸಬೇಕು.
- ಶಾಲೆ ಪುನರಾರಂಭದ 2–3 ವಾರಗಳವರೆಗೆ ಪರೀಕ್ಷೆ ಸೇರಿದಂತೆ ಯಾವುದೇ ಮೌಲ್ಯಮಾಪನ ಮಾಡುವಂತಿಲ್ಲ.

ಆಧಾರ: ವಿಜಯ ಕರ್ನಾಟಕ, ದಿನಾಂಕ:06.10.2020

## 5. ಜಿ.ಎಸ್.ಟಿ. ಪರಿಹಾರ ಒಮ್ಮತವಿಲ್ಲ

ಕೊರೋನಾ ಸಂಕಟದಿಂದಾಗಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹದಲ್ಲಿ ಆಗಿರುವ ಕೊರತೆಯನ್ನು ತುಂಬಿಸಲು ಸಾಲ ಮಾಡುವ ವಿಚಾರವಾಗಿ ನಡೆದ 42ನೇ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಒಮ್ಮತಕ್ಕೆ ಬರಲು ಕೇಂದ್ರ ಸರ್ಕಾರ ಮತ್ತು ಹಲವು ರಾಜ್ಯ ಸರ್ಕಾರಗಳು ವಿಫಲವಾದವು. ಕೇಂದ್ರ ಸಲಹೆ ಮಾಡಿರುವ ಪರಿಹಾರ ಮತ್ತು ಸಾಲ ಕುರಿತ ಯೋಜನೆಗೆ ಒಮ್ಮತ ಮೂಡದಿದ್ದರಿಂದ ಆಕ್ಟೋಬರ್ 12 ರಂದು ಮತ್ತೆ ಸಭೆ ನಡೆಸಲು ನಿರ್ಧರಿಸಲಾಗಿದೆ. ಈ ಮಧ್ಯೆ, ಜಿಎಸ್‌ಟಿ, ಸೆಸ್ ಪರಿಹಾರದಲ್ಲಿ ರಾಜ್ಯಗಳಿಗೆ ರೂ.20,000 ಕೋಟಿ ಬಿಡುಗಡೆ ಮಾಡಲಾಗುವುದೆಂದು ಸಭೆಯ ಅಧ್ಯಕ್ಷತೆ ವಹಿಸಿದ್ದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು ಮತ್ತು ಈ ಪರಿಹಾರವನ್ನು 2022ರ ಜೂನ್ ನಂತರವೂ ಮುಂದುವರೆಸಲು ನಿರ್ಧರಿಸಲಾಗಿದೆ ಎಂದರು.

ಜಿಎಸ್‌ಟಿ ಕಾನೂನಿನ ಪ್ರಕಾರ ಕೇಂದ್ರವೇ ರಾಜ್ಯಗಳಿಗೆ ಪೂರ್ಣ ಪರಿಹಾರ ನೀಡಬೇಕೆಂದು ಹತ್ತು ರಾಜ್ಯಗಳು ಆಗ್ರಹಿಸಿವೆ ಎಂದು ಎಡರಂಗ ಅಧಿಕಾರದಲ್ಲಿರುವ ಕೇರಳದ ಹಣಕಾಸು ಸಚಿವ ಥಾಮಸ್ ಇಸಾಕ್ ಸಭೆಯ ನಂತರ ತಿಳಿಸಿದ್ದಾರೆ. ರಾಜ್ಯಗಳ ಬದಲು ಕೇಂದ್ರವೇ ಸಾಲ ಪಡೆಯಬೇಕೆಂದು ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯ ಸರ್ಕಾರಗಳು ವಾದಿಸಿವೆ.

**ಕೇಂದ್ರದ ನಿಲುವು** : ಕೋವಿಡ್–19 ಸಾಂಕ್ರಾಮಿಕತೆಯಿಂದಾಗಿ ರಾಜ್ಯಗಳು ಅನುಭವಿಸಿರುವ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ನಷ್ಟವನ್ನು ಭರಿಸಲು ತಾನು ಬಾಧ್ಯವಲ್ಲ ಎಂದು ಆಗಸ್ಟ್ 27ರಂದು ನಡೆದ ಜಿಎಸ್‌ಟಿ ಮಂಡಳಿಯ 41ನೇ ಸಭೆಯಲ್ಲಿ ಹೇಳಿದ್ದ ಕೇಂದ್ರ ಸರ್ಕಾರ ಎರಡು ಪರ್ಯಾಯ ಆಯ್ಕೆಗಳನ್ನು ನೀಡಿತ್ತು. ರಾಜ್ಯಗಳ ನಷ್ಟವನ್ನು ಕೇಂದ್ರ ತನ್ನ ಖಜಾನೆಯಿಂದ ಅಥವಾ ಸಾಲ ನೀಡುವ ಮೂಲಕ ಸರಿದೂಗಿಸುವ ಅಗತ್ಯವಿಲ್ಲ ಎಂದು ಅಟಾರ್ನಿ ಜನರಲ್ ಸಲಹೆ ನೀಡಿದ್ದರು.

**ರಾಜ್ಯಗಳ ನಿಲುವು:** ವ್ಯಾಟ್‌ನಂಥ ಸ್ಥಳೀಯ ತೆರಿಗೆಗಳನ್ನು ರಾಷ್ಟ್ರವ್ಯಾಪಿ ಜಿಎಸ್‌ಟಿಯಲ್ಲಿ ವಿಲೀನಗೊಳಿಸಲು 2017ರಲ್ಲಿ ರಾಜ್ಯಗಳು ಒಪ್ಪಿಕೊಂಡಿದ್ದವು. ಅದಕ್ಕೆ ಪ್ರತಿಯಾಗಿ ಜಿಎಸ್‌ಟಿ ಅನುಷ್ಠಾನ ಆರಂಭವಾದ ಮೊದಲ ಐದು ವರ್ಷಗಳಲ್ಲಿ ರಾಜ್ಯಗಳು ಅನುಭವಿಸುವ ಅದಾಯ ನಷ್ಟವನ್ನು ಕೇಂದ್ರ ಸರ್ಕಾರ ಭರಿಸಲಿದೆ ಎಂದು ಖಾತರಿ ನೀಡಲಾಗಿತ್ತು. ಈಗ ನಷ್ಟವನ್ನು ಕೇಂದ್ರವೇ ಭರಿಸಬೇಕೆಂಬುದು ಬಹುತೇಕ ವಿರೋಧ ಪಕ್ಷ ಆಡಳಿತ ರಾಜ್ಯ ಸರ್ಕಾರಗಳ ವಾದ.

ಕೊರೋನಾ ಲಾಕ್‌ಡೌನ್‌ನಿಂದಾಗಿ ಆರ್ಥಿಕತೆ ಕುಂಠಿತವಾಗಿರುವುದರಿಂದ ಕಳೆದ ವಿತ್ತ ವರ್ಷದಲ್ಲಿ ರೂ.70,000 ಕೋಟಿ ನಷ್ಟವಾಗಬಹುದೆಂದು ಅಂದಾಜು ಮಾಡಲಾಗಿದೆ. ಈ ಪೈಕಿ ರೂ.97,000 ಕೋಟಿ ಮಾತ್ರವೇ ಜಿಎಸ್‌ಟಿ ಅನುಷ್ಠಾನಕ್ಕೆ ಸಂಬಂಧಿಸಿದ್ದಾಗಿದೆ. ಉಳಿದದ್ದು ಕೊರೋನಾ ವೈರಸ್ ಹಾವಳಿಯಿಂದ ಆರ್ಥಿಕತೆಗೆ ತಟ್ಟಿದ ಹಾನಿಯಿಂದಾದದ್ದು ಎಂದು ಹಣಕಾಸು ಕಾರ್ಯದರ್ಶಿಯು ಆಗಿರುವ ಕಂದಾಯ ಕಾರ್ಯದರ್ಶಿ ಅಜಯ್ ಭೂಷಣ್ ಪಾಂಡೆ ಹೇಳಿದ್ದಾರೆ.

**ಪರ್ಯಾಯಗಳೇನು:**

- ಆರ್.ಬಿ.ಐ.ನೊಂದಿಗೆ ಸಮಾಲೋಚಿಸಿ ಕಡಿಮೆ ಬಡ್ಡಿ ದರದಲ್ಲಿ ರೂ.97,000 ಕೋಟಿ ಸಾಲ ಪಡೆಯಲು ರಾಜ್ಯಗಳಿಗೆ ಕೇಂದ್ರ ಅವಕಾಶ ಕಲ್ಪಿಸುವುದು. ಇದನ್ನು ಸೆಸ್ ಸಂಗ್ರಹದಿಂದ ಐದು ವರ್ಷಗಳ ನಂತರ ಮರುಪಾವತಿ ಮಾಡಬಹುದಾಗಿದೆ.
- ರಾಜ್ಯಗಳು ಎದುರಿಸಲಿರುವ ರೂ.2.35ಲಕ್ಷ ಕೋಟಿ ಪರಿಹಾರದ ಕೊರತೆಯನ್ನು ಸಂಪೂರ್ಣವಾಗಿ ಸಾಲದ ಮೂಲಕ ಭರಿಸಿಕೊಳ್ಳಬಹುದಾಗಿದೆ.

ಆಧಾರ: ವಿಜಯವಾಣಿ, ದಿನಾಂಕ:06.10.2020

## 6. ಪರಿಸರ ಸ್ನೇಹಿ ವಾಹನಗಳಿಗೆ ಉತ್ತೇಜನ ಕೇಂದ್ರ ಸರ್ಕಾರದಿಂದ ರಾಜ್ಯಗಳಿಗೆ ನಿರ್ದೇಶನ

ದೇಶದಲ್ಲಿ ಇಂಧನ ಬಳಕೆ ಪ್ರಮಾಣ ಕಡಿಮೆ ಮಾಡಿ, ಪರಿಸರಸ್ನೇಹಿ ವಾಹನಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರ ಹಲವು ಉಪಕ್ರಮಗಳನ್ನು ಕೈಗೊಂಡಿದೆ. ಮುಂದಿನ ದಿನಗಳಲ್ಲಿ ಸರ್ಕಾರಿ ವಾಹನಗಳನ್ನು ಎಲೆಕ್ಟ್ರಿಕ್ ವಾಹನಗಳನ್ನಾಗಿ ಪರಿವರ್ತಿಸುವ ಚಿಂತನೆ ನಡೆಸುತ್ತಿದೆ.

2030ರಲ್ಲಿ ಭಾರತದ ರಸ್ತೆಗಳಲ್ಲಿ ಎಲೆಕ್ಟ್ರಿಕ್ ವಾಹನಗಳು ಮಾತ್ರ ಓಡಬೇಕು ಎಂಬುದು ಕೇಂದ್ರ ಸರ್ಕಾರದ ಉದ್ದೇಶ ಇದಕ್ಕಾಗಿ ತೆರಿಗೆ ವಿನಾಯಿತಿ ಸೇರಿದಂತೆ ಹಲವು ಮಹತ್ವದ ಕ್ರಮಗಳನ್ನು ಕೈಗೊಂಡು ಎಲೆಕ್ಟ್ರಿಕ್ ವಾಹನಗಳ ಬಳಕೆಗೆ ಉತ್ತೇಜನ ನೀಡಲಾಗುತ್ತಿದೆ. ಕೇಂದ್ರ ಸರ್ಕಾರ ಈ ನಿಟ್ಟಿನಲ್ಲಿ ಎಲ್ಲ ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಿದ್ದು, ಹಂತಹಂತವಾಗಿ ವಾಹನಗಳನ್ನು ಬದಲಾಯಿಸುವಾಗ ಪರಿಸರ ಸ್ನೇಹಿ ವಾಹನ ಖರೀದಿಗೆ ಆದ್ಯತೆ ನೀಡಬೇಕು ಎಂದು ತಿಳಿಸಿದೆ. ಈ ಪ್ರಯೋಗ ಯಶಸ್ವಿಯಾದರೆ ಮುಂದಿನ ದಿನಗಳಲ್ಲಿ ಮೊದಲ ಆದ್ಯತೆಯಾಗಿ ಸಚಿವರು, ಸಂಸದರು, ಹಿರಿಯ ಅಧಿಕಾರಿಗಳ ಬಳಕೆಗೆ ಎಲೆಕ್ಟ್ರಿಕ್ ವಾಹನ ಒದಗಿಸಲಾಗುತ್ತದೆ.

ಕಳೆದ ಹಣಕಾಸು ವರ್ಷದಲ್ಲಿ 3,400 ನಾಲ್ಕು ಚಕ್ರದ ಎಲೆಕ್ಟ್ರಿಕ್ ವಾಹನ ರಸ್ತೆಗೆ ಇಳಿದಿದೆ. ಇವುಗಳಲ್ಲಿ ಸುಮಾರು 1,600 ಎಲೆಕ್ಟ್ರಿಕ್ ವಾಹನ ಸರ್ಕಾರದ ವಿವಿಧ ಇಲಾಖೆಗಳಿಗೆ ಮತ್ತು ಗಣ್ಯ ವ್ಯಕ್ತಿಗಳ ಬಳಕೆಗೆ ಖರೀದಿಸಲಾಗಿದೆ. ಕೇಂದ್ರ ಹಾಗೂ ವಿವಿಧ ರಾಜ್ಯ ಸರ್ಕಾರಗಳ ಸುಮಾರು 150ಕ್ಕೂ ಅಧಿಕ ಇಲಾಖೆಗಳು ಈಗಾಗಲೇ ಎಲೆಕ್ಟ್ರಿಲ್ ವಾಹನ ಬಳಕೆ ಮಾಡುತ್ತಿವೆ ಆದರೆ, ಇದರ ಪ್ರಮಾಣ ಬಹಳ ಕಡಿಮೆ ಇರುವುದರಿಂದ ಮುಂದಿನ ದಿನಗಳಲ್ಲಿ ಎಲೆಕ್ಟ್ರಿಕ್ ವಾಹನಗಳಿಗೆ ಪ್ರಥಮ ಆದ್ಯತೆ ನೀಡುವುದು ಸರ್ಕಾರದ ಉದ್ದೇಶ.

ಪ್ರಸ್ತುತ ಎಲೆಕ್ಟ್ರಿಕ್ ವಾಹನಗಳು ದುಬಾರಿ ಬೆಲೆಯಾಗಿದ್ದು, ಜನಸಾಮಾನ್ಯರ ಕೈಗೆಟುಕದಂತಾಗಿದೆ. ಮಾರುಕಟ್ಟೆಯಲ್ಲಿ ವಿದ್ಯುತ್ ಚಾಲಿತ ವಾಹನ ಮಾರಾಟಕ್ಕೆ ಉತ್ತೇಜನ ನೀಡುವ ಸಲುವಾಗಿ ಸರ್ಕಾರ ತೆರಿಗೆ ವಿನಾಯಿತಿ ಸಹಿತ ಹಲವಾರು ಅನುಕೂಲಗಳನ್ನು ಕಲ್ಪಿಸಿಕೊಟ್ಟಿದೆ. ಗ್ರಾಹಕರಿಗೆ ಈ ಸೌಲಭ್ಯಗಳ ಬಗ್ಗೆ ಸ್ಪಷ್ಟವಾಗಿ ಮನದಟ್ಟಾಗಿ ಇಂಧನ ವಾಹನಗಳಿಂದ ಲಾಭದಾಯಕ ಎಂದು ಕಂಡುಬಂದರೆ ಹೆಚ್ಚಿನ ಗ್ರಾಹಕರು ಮತ್ತು ಸರ್ಕಾರಿ ಇಲಾಖೆಗಳು ಎಲೆಕ್ಟ್ರಿಕ್ ವಾಹನ ಮಾರುಕಟ್ಟೆಯನ್ನೇ ನೆಚ್ಚಿಕೊಳ್ಳಬಹುದು ಎನ್ನುತ್ತಾರೆ.

ಭಾರತದಲ್ಲಿ ವರ್ಷಕ್ಕೆ ಸುಮಾರು 20 ಸಾವಿರದಷ್ಟು ಎಲೆಕ್ಟ್ರಿಕ್ ವಾಹನ ರಸ್ತೆಗಿಳಿಯುತ್ತವೆ. ಆದರೆ, ಅವುಗಳಲ್ಲಿ ನಾಲ್ಕು ಚಕ್ರದ ವಾಹನಗಳ ಸಂಖ್ಯೆ ತೀರಾ ಕಡಿಮೆ ಮಾರಾಟವಾಗುತ್ತಿದೆ. ಕಳೆದ ಆರ್ಥಿಕ ವರ್ಷದಲ್ಲಿ ಮಾರಾಟವಾದ ಕಾರುಗಳ ಸಂಖ್ಯೆ 3,400. ಈ ಸಂಖ್ಯೆಯನ್ನು ಹೆಚ್ಚಳ ಮಾಡುವುದೇ ಸರ್ಕಾರದ ಮುಖ್ಯ ಉದ್ದೇಶ.

ಆಧಾರ: ವಿಜಯ ಕರ್ನಾಟಕ ದಿನಾಂಕ:08.10.2020

## 7. ಉಪನಗರ ರೈಲು ಯೋಜನೆಗೆ ಕೇಂದ್ರ ಒಪ್ಪಿಗೆ

ಉಪನಗರ ರೈಲು ಯೋಜನೆ ಪರಿಷ್ಕೃತ ಡಿಪಿಆರ್‌ಗೆ (ವಿಸ್ತೃತ ಯೋಜನಾ ವರದಿ) ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಆ ಮೂಲಕ ಯೋಜನೆಯ ವೆಚ್ಚ ಕಡಿತ ಮತ್ತು ಖಾಸಗಿ ಸಹಭಾಗಿತ್ವಕ್ಕೆ ಅನುಮೋದನೆ ದೊರೆದಂತಾಗಿದೆ.

2020–21ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಯೋಜನೆ ಅನುಷ್ಠಾನದ ಬಗ್ಗೆ ಘೋಷಣೆ ಮಾಡಲಾಗಿತ್ತು. ನಂತರ ಯೋಜನೆಗೆ ರೈಲ್ವೆ ಮಂಡಳಿಯಿಂದ ಅನುಮೋದನೆ ಅಗತ್ಯವಾಗಿತ್ತು. ಆದರೆ, ಲಾಕ್‌ಡೌನ್‌ನಿಂದಾಗಿ ಯೋಜನೆ ಜಾರಿ ವಿಳಂಬವಾಯಿತು. ಈ ಮಧ್ಯೆಯೇ ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ಸಂಸ್ಥೆ (ಕೆ–ರೈಡ್)ಯೋಜನಾ ವೆಚ್ಚ ಕಡಿತಗೊಳಿಸುವ ವರದಿ ಸಿದ್ಧಪಡಿಸಿ ಕೇಂದ್ರಕ್ಕೆ ಕಳುಹಿಸಿತ್ತು. ಆ ವರದಿಗೆ ಇದೀಗ ಕೇಂದ್ರ ಸಚಿವ ಸಂಪುಟದಿಂದ ಅನುಮೋದನೆ ಸಿಕ್ಕಿದ್ದು, ರಾಜರಾಜೇಶ್ವರಿನಗರ ಉಪ ಚುನಾವಣೆ ನಂತರ ಅಧಿಕೃತ ಘೋಷಣೆ ಮಾಡಲಾಗುತ್ತದೆ.

ಭಾರತೀಯ ರೈಲ್ವೆ ತಾಂತ್ರಿಕ ಮತ್ತು ಆರ್ಥಿಕ ಸೇವೆಯ ಸಂಸ್ಥೆ (ರೈಟ್ಸ್) ಸಿದ್ಧಪಡಿಸಿದ, ಕೆ–ರೈಡ್ ಕೇಂದ್ರಕ್ಕೆ ಸಲ್ಲಿಸಿರುವ ವರದಿ ಅನ್ವಯ ಉಪ ನಗರ ರೈಲು ಯೋಜನೆಗೆ ರೂ.18,621 ಕೋಟಿ ಅವಶ್ಯಕತೆಯಿದೆ ಎಂದು ತಿಳಿಸಲಾಗಿತ್ತು. ನಂತರ ರೂ.2,854 ಕೋಟಿ ಕಡಿತಗೊಳಿಸಿ, ರೂ.15.767 ಕೋಟಿ ಯೋಜನಾ ವೆಚ್ಚದ ವರದಿಯನ್ನು ಕಳುಹಿಸಲಾಗಿತ್ತು. 148 ಕಿ.ಮೀ ಉದ್ದದ ರೈಲು ಮಾರ್ಗದಲ್ಲಿ ಸೇವೆ ನೀಡಲು ಒಟ್ಟು 306 ಹವಾನಿಯಂತ್ರಿತ ಬೋಗಿಗಳ ಅವಶ್ಯಕತೆಯಿದ್ದು. ಆ ಬೋಗಿಗಳನ್ನು ಪಿಪಿಪಿ (ಸಾರ್ವಜನಿಕ ಖಾಸಗಿ ಸಹಭಾಗಿತ್ವ) ಮಾದರಿಯಲ್ಲಿ ಗುತ್ತಿಗೆ ಆಧಾರದಲ್ಲಿ ಪಡೆಯಲಾಗುತ್ತದೆ. ಅದರಿಂದ, ಯೋಜನಾ ವೆಚ್ಚದಲ್ಲಿ ರೂ.2,854 ಕೋಟಿ ಉಳಿತಾಯವಾಗಲಿದೆ ಎಂದು ತಿಳಿಸಲಾಗಿದೆ.

**ಭೂ ಸ್ವಾಧೀನಕ್ಕೆ ಬೇಕು ರೂ.2,129 ಕೋಟಿ:** ಉಪನಗರ ರೈಲು ಯೋಜನೆಗಾಗಿ 355.28 ಹೆಕ್ಟೇರ್ ಜಮೀನು ಅವಶ್ಯಕತೆಯಿದೆ. ಮಾರ್ಗ ನಿರ್ಮಾಣ, ವಿಸ್ತರಣೆ, ನಿಲ್ದಾಣಗಳ ನಿರ್ಮಾಣ ಸೇರಿ ಇನ್ನಿತರ ಕಾರ್ಯಕ್ಕಾಗಿ ಅಷ್ಟು ಪ್ರಮಾಣದ ಭೂಮಿ ವಶಕ್ಕೆ ಪಡೆಯಬೇಕಿದೆ. ಅದರಲ್ಲಿ 250 ಹೆಕ್ಟೇರ್ ಭೂಮಿ ರೈಲ್ವೆ ಇಲಾಖೆಗೆ ಸೇರಿದ್ದಾಗಿದ್ದು, ಉಳಿದದ್ದರಲ್ಲಿ ರಾಜ್ಯ ಸರ್ಕಾರದ 34.69 ಹೆಕ್ಟೇರ್ ಮತ್ತು ಖಾಸಗಿಯವರಿಗೆ ಸೇರಿದ 70.59 ಹೆಕ್ಟೇರ್ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಬೇಕಿದೆ. ಭೂ ಸ್ವಾಧೀನಕ್ಕಾಗಿ ರೂ.2,129 ಕೋಟಿ ಅವಶ್ಯಕತೆಯಿದೆ ಎಂದು ಅಂದಾಜಿಸಲಾಗಿದೆ.

ಯೋಜನಾ ವೆಚ್ಚದ ಶೇ.40 ಅನುದಾನವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಸಮವಾಗಿ ನೀಡುವುದಾಗಿ ಘೋಷಿಸಿವೆ. ಉಳಿಕೆ ಶೇ.60 ಮೊತ್ತಕ್ಕಾಗಿ ಕೆ–ರೈಡ್ ಅಥವಾ ಯೋಜನೆ ಅನುಷ್ಠಾನಕ್ಕಾಗಿ ರೂಪಿಸಲಾಗುವ ವಿಶೇಷ ಉದ್ದೇಶ ವಾಹನ (ಎಸ್‌ಪಿವಿ)ಸಾಲ ಮಾಡಲಿವೆ. ಅದಿಲ್ಲದಿದ್ದರೆ ರೈಲ್ವೆ ಭೂಮಿ ಮತ್ತು ರೈಲು ನಿಲ್ದಾಣಗಳಲ್ಲಿ ವಾಣಿಜ್ಯ ಚಟುವಟಿಕೆ ಮೂಲಕ ಸಂಪನ್ಮೂಲ ಸಂಗ್ರಹಿಸಲು ಕೆ–ರೈಡ್ ಯೋಜನೆ ರೂಪಿಸುತ್ತಿದೆ.

**1983ರಲ್ಲಿ ಮೊದಲ ಪ್ರಸ್ತಾಪ:** ಬೆಂಗಳೂರಿನಲ್ಲಿ ಉಪನಗರ ರೈಲು ಯೋಜನೆ ಜಾರಿ ಕುರಿತು ಮೊದಲು ಪ್ರಸ್ತಾಪವಾಗಿದ್ದು, 1983ರಲ್ಲಿ ದಕ್ಷಿಣ ರೈಲ್ವೆಯ ತಂಡವೊಂದು ಅಧ್ಯಯನ ನಡೆಸಿ 58 ಕಿ.ಮೀ ಉದ್ದದ 3 ವರ್ತುಲ ರೈಲ್ವೆ ವ್ಯವಸ್ಥೆ ಜಾರಿಗೆ ರೈಲ್ವೆ ಇಲಾಖೆಗೆ ಶಿಫಾರಸ್ಸು ಮಾಡಿತ್ತು. ಆಗಿನಿಂದಲೂ ಯೋಜನೆ ಕುರಿತು ಚರ್ಚೆಗಳು ನಡೆದು, ಹಲವು ಅಧ್ಯಯನ ವರದಿ ಸಲ್ಲಿಕೆಯಾಗಿದ್ದವು.

**ಉಪನಗರ ರೈಲು ಯೋಜನೆ ಕಾರಿಡಾರ್‌ಗಳು:**

- ಕೆಎಸ್‌ಆರ್‌ನಿಂದ ದೇವನಹಳ್ಳಿ 41.40 ಕಿ.ಮೀ, 15 ನಿಲ್ದಾಣಗಳು
- ಬೈಯಪ್ಪನಹಳ್ಳಿ ಟರ್ಮಿನಲ್‌ನಿಂದ ಚಿಕ್ಕಬಾಣಾವಾರ 25. ಕಿ.ಮೀ, 14 ನಿಲ್ದಾಣಗಳು

- ಕೆಂಗೇರಿಯಿಂದ ವೈಟ್ ಫೀಲ್ಡ್ 35.53 ಕಿ.ಮೀ, 9 ನಿಲ್ದಾಣಗಳು
- ಹೀಲಲಿಗೆಯಿಂದ ರಾಜಾನುಕುಂಟೆ 46.24 ಕಿ.ಮೀ, 19 ನಿಲ್ದಾಣಗಳು

**ಮೆಮು, ಎಮು ರೈಲುಗಳು:** ಯೋಜನೆ ಜಾರಿ ನಂತರ ಪ್ರತಿದಿನ 25 ಲಕ್ಷಕ್ಕೂ ಹೆಚ್ಚಿನ ಜನರು ರೈಲಿನಲ್ಲಿ ಪ್ರಯಾಣಿಸಲಿದ್ದಾರೆ ಎಂದು ಅಂದಾಜಿಸಲಾಗಿದೆ. ಉಪನಗರ ರೈಲು ಮಾರ್ಗದಲ್ಲಿ 16 ಬೋಗಿಯ ಎಲೆಕ್ಟ್ರಿಕ್ ಮಲ್ಟಿಪಲ್ ಯೂನಿಟ್ ರೈಲು (ಮೆಮು) ಮತ್ತು 9 ಬೋಗಿಯ ಎಲೆಕ್ಟ್ರಿಕ್ ಮಲ್ಟಿಪಲ್ ಯೂನಿಟ್ ರೈಲು (ಎಮು) ರೈಲುಗಳು ಸಂಚರಿಸಲಿವೆ.

ಆಧಾರ: ವಿಜಯವಾಣಿ, ದಿನಾಂಕ:08.10.2020

## 8. ನರೇಂದ್ರ ಮೋದಿ ಆಡಳಿತಕ್ಕೆ 20ರ ಹರೆಯ

ಆಡಳಿತ ಚುಕ್ಕಾಣಿ ಹಿಡಿದ ನರೇಂದ್ರ ಮೋದಿ ಅವರು ತಮ್ಮ ರಾಜಕೀಯ ಜೀವನದಲ್ಲಿ ಸತತ 20ನೇ ವರ್ಷಕ್ಕೆ ಕಾಲಿರಿಸಿರುವ ವಿಶೇಷ ಸಂದರ್ಭದ ಅಂಗವಾಗಿ ಸಂಪುಟ ಸಚಿವರು ಮತ್ತು ಬಿಜೆಪಿ ಮುಖಂಡರು ಪ್ರಧಾನಿ ಅವರಿಗೆ ಅಭಿನಂದನೆ ತಿಳಿಸಿದರು.

ಗುಜರಾತಿನ ಮುಖ್ಯಮಂತ್ರಿಯಾಗಿ 2001ರ ಆಕ್ಟೋಬರ್ 7ರಂದು ಅಧಿಕಾರಕ್ಕೆ ಏರಿದ ಮೋದಿ ಅವರು ಬಳಿಕ ದೇಶದ ಪ್ರಧಾನಿ ಸ್ಥಾನಕ್ಕೆ ಏರಿದರು. ಈ 20 ವರ್ಷಗಳ ಹಾದಿ ಭಾರತೀಯ ರಾಜಕೀಯ ಇತಿಹಾಸದಲ್ಲಿ ವಿಶಿಷ್ಟ ಮೈಲಿಗಲ್ಲು ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ ಮೆಚ್ಚುಗೆ ಸೂಚಿಸಿದ್ದಾರೆ.

2001ರಲ್ಲಿ ಸಿಎಂ ಆಗಿ ಜನರ ಮನಗೆದ್ದ ಮೋದಿ ಅವರು ಕಳೆದ 19 ವರ್ಷಗಳಲ್ಲಿ ಜನಪರ ಆಡಳಿತ ನೀಡಿ ಗುಜರಾತಿನ ಜನರ ಮೆಚ್ಚುಗೆ ಗಳಿಸುವ ಜೊತೆಗೆ ಕಳೆದ ಆರು ವರ್ಷಗಳಿಂದ ದೇಶದ ಜನರ ಹೃದಯದಲ್ಲಿ ಉನ್ನತ ಸ್ಥಾನ ಗಳಿಸಿದ್ದಾರೆ. ಹೆಚ್ಚೆಚ್ಚು ಜಯ ಸಾಧಿಸಿ ಜನಪ್ರಿಯತೆಯ ಉತ್ತುಂಗ ತಲುಪಿದ್ದಾರೆ ಎಂದು ಟ್ವಿಟರ್‌ನಲ್ಲಿ ನಡ್ಡಾ ಹೇಳಿದ್ದಾರೆ.

**6941 ದಿನಗಳ ನಿರಂತರ ಅಧಿಕಾರ :** ಬಿಜೆಪಿ ವಕ್ತಾರ ಸುಧಾಂಶು ತ್ರಿವೇದಿ ಅವರು ಟ್ವೀಟ್ ಮಾಡಿ 6941 ದಿನಗಳನ್ನು ಅಧಿಕಾರದಲ್ಲಿ ಕಳೆದ ಮೋದಿ ಅವರು, ಒಂದೇ ದಿನ ಜನಸೇವೆಗೆ ವಿರಾಮ ನೀಡಿಲ್ಲ. ಸಿಎಂ, ಪಿಎಂ ಆಗಿ ದೇಶದ ಘನತೆ ಹೆಚ್ಚಿಸುತ್ತಿದ್ದಾರೆ ಎಂದು ಶ್ಲಾಘಿಸಿದ್ದಾರೆ.

ಕೇಂದ್ರ ಸಚಿವ ಹರ್‌ದೀಪ್ ಸಿಂಗ್ ಪುರಿ ಅವರು ಪ್ರತಿಕ್ರಿಯಿಸಿ ಪ್ರಜಾಪ್ರಭುತ್ವದ ಮೂಲಕ ಆಯ್ಕೆಯಾಗಿ ಇಷ್ಟು ವರ್ಷ ಅಧಿಕಾರದ ಚುಕ್ಕಾಣಿ ಹಿಡಿದ ವಿಶ್ವದ ಏಕೈಕ ನಾಯಕ ಮೋದಿ ಅವರು ಭಾರತ ಮಾತೆಯ ನಿಸ್ವಾರ್ಥ ಸೇವಕರಾಗಿರುವ ಅವರಿಗೆ ಮತ್ತಷ್ಟು ಶಕ್ತಿ ಸಿಗಲಿ ಎಂದು ಹಾರೈಸಿದ್ದಾರೆ.

**ಮೋದಿ ಹೆಜ್ಜೆಗಳು:**

- 2001 ಆಕ್ಟೋಬರ್ : ಗುಜರಾತಿನ ಸಿಎಂ ಆಗಿ ಪ್ರಮಾಣ ಸ್ವೀಕಾರ
- 2002 ಫೆಬ್ರವರಿ : ರಾಜಕೋಟ್ ಉಪ ಚುನಾವಣೆ ಮೂಲಕ ಗುಜರಾತಿನ ವಿಧಾನಸಭೆಗೆ ಪ್ರವೇಶ
- 2002 ಡಿಸೆಂಬರ್ 22: 182ರಲ್ಲಿ 127 ಸೀಟುಗಳಲ್ಲಿ ಕಮಲ ಅರಳಿಸಿ 2ನೇ ಅವಧಿಗೆ ಗುಜರಾತಿನ ಸಿಎಂ.
- 2007 ಜುಲೈ : ಗುಜರಾತ್ ಸಿಎಂ ಆಗಿ 2,063 ದಿನಗಳ ಪೂರೈಕೆ.

- 2007 ಡಿಸೆಂಬರ್: ವಿಧಾನಸಭೆ ಚುನಾವಣೆಯಲ್ಲಿ 182 ಕ್ಷೇತ್ರಗಳ ಪೈಕಿ 122ರಲ್ಲಿ ಕಮಲ ಅರಳಿಸಿ 3ನೇ ಅವಧಿಗೆ ಸಿಎಂ.
- 2013ರ ಸೆಪ್ಟೆಂಬರ್ 13: 2014ರ ಲೋಕಸಭೆ ಚುನಾವಣೆಗೆ ಬಿಜೆಪಿಯಿಂದ ಪ್ರಧಾನಿ ಅಭ್ಯರ್ಥಿಯಾಗಿ ಮೋದಿ ಹೆಸರು ಘೋಷಣೆ.
- 2014 ಮೇ 26: ಮೊದಲ ಬಾರಿಗೆ ಪ್ರಧಾನಿಯಾಗಿ ಪ್ರಮಾಣ.
- 2014 ಜೂನ್ 5: ಸಂಸದರಾಗಿ ವಾರಣಾಸಿ ಕ್ಷೇತ್ರದಿಂದ ಆಯ್ಕೆ.
- 2019 ಮೇ 30: ಅಭೂತ ಪೂರ್ವ ಜಯದೊಂದಿಗೆ (543 ಕ್ಷೇತ್ರಗಳ ಪೈಕಿ 303ರಲ್ಲಿ ಬಿಜೆಪಿ ಅಭ್ಯರ್ಥಿಗಳಿಗೆ ಜಯ) ಎರಡನೇ ಬಾರಿ ಪ್ರಧಾನಿ ಹುದ್ದೆಗೇರಿದ ಮೋದಿ.

ಆಧಾರ: ವಿಜಯ ಕರ್ನಾಟಕ, ದಿನಾಂಕ:08.10.2020

## 9. ಕೋವಿಡ್ ವಿರುದ್ಧ ಭಾರತದಲ್ಲಿ ಜನಾಂದೋಲನ : ಪ್ರಧಾನಿ ಮೋದಿ

ದೇಶದಲ್ಲಿ ಕೋವಿಡ್–19 ವಿರುದ್ಧದ ಹೋರಾಟದ ಭಾಗವಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಜನ ಅಂದೋಲನ ಅಭಿಯಾನಕ್ಕೆ ಕೇಂದ್ರ ಸರ್ಕಾರ ಚಾಲನೆ ನೀಡಿದೆ. ಆರ್ಥಿಕ ಚಟುವಟಿಕೆಗಳು ಮತ್ತೆ ಗರಿಗೆದರಿವೆ. ಸಾಲು ಹಬ್ಬಗಳು ಬರಲಿವೆ. ಈ ಕಾರಣ, ಜನದಟ್ಟಣೆ ಹೆಚ್ಚಾಗಲಿದ್ದು, ಸಣ್ಣ ಅಜಾಗೃತಿಯು ಸೋಂಕು ಮತ್ತಷ್ಟು ವ್ಯಾಪಿಸಬಹುದಾದ ಕಾರಣ ಈ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ ಎಂದು ಹೇಳಿದೆ.

ಭಾರತದಲ್ಲಿ ಕೋವಿಡ್–19 ವಿರುದ್ಧದ ಹೋರಾಟವು ಜನಾಂದೋಲನವಾಗಿದೆ. ಇದಕ್ಕೆ ಕೋವಿಡ್ ಯೋಧರು ಮತ್ತಷ್ಟು ಬಲ ತುಂಬಿದ್ದಾರೆ. ಸೋಂಕಿನ ವಿರುದ್ಧ ಹೋರಾಡಲು ಎಲ್ಲರೂ ಒಗ್ಗಟ್ಟಾಗಿ ಹೋರಾಡಬೇಕು ಎಂದು ಪ್ರಧಾನಿ ಮೋದಿ ಅವರು ಕರೆ ನೀಡಿದ್ದಾರೆ Unite 2 Fight Corona ಎನ್ನುವ ಹ್ಯಾಶ್‌ಟ್ಯಾಗ್ ಬಳಸಿ ಟ್ವೀಟ್ ಮಾಡಿರುವ ಮೋದಿ, ಮುಖಗವಸು ಧರಿಸಿ, ಕೈಗಳನ್ನು ಆಗಾಗ್ಗೆ ತೊಳೆಯಿರಿ, ಪರಸ್ಪರ ಅಂತರ ಕಾಪಾಡಿಕೊಳ್ಳಿ, ನಾವು ಒಟ್ಟಾಗಿ ಸೋಂಕಿನ ವಿರುದ್ಧ ಹೋರಾಡಿ ಜಯಿಸೋಣ ಎಂದಿದ್ದಾರೆ.

ಆಧಾರ: ಪ್ರಜಾವಾಣಿ, ದಿನಾಂಕ:09.10.2020

## 10.ಎಲ್.ಟಿ.ಸಿ ಬದಲು ನಗದು ವೋಚರ್ ಕೇಂದ್ರದಿಂದ ನೌಕರರಿಗೆ ಹಬ್ಬದ ಬೋನಸ್

ಆರ್ಥಿಕತೆಯಲ್ಲಿ ಬೇಡಿಕೆ ಹೆಚ್ಚಿಸಲು ಹಾಗೂ ಗ್ರಾಹಕರ ಖರ್ಚು ವೃದ್ಧಿಸುವ ಯೋಜನೆಯ ಭಾಗವಾಗಿ ಕೇಂದ್ರ ಸರ್ಕಾರದ ನೌಕರರಿಗೆ ಬಡ್ಡಿ ರಹಿತ ಹಬ್ಬದ ಮುಂಗಡ ಯೋಜನೆಯನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಕಟಿಸಿದ್ದಾರೆ.

ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಸಚಿವೆ ನಿರ್ಮಲಾ ಸೀತಾರಾಮನ್, ಸರ್ಕಾರಿ ಮತ್ತು ಸಂಘಟಿತ ವಲಯದ ನೌಕರರ ಉಳಿತಾಯ ಹೆಚ್ಚಾಗಿದೆ ಎಂಬ ಸೂಚನೆಗಳಿವೆ. ಆದ್ದರಿಂದ ಈ ಬಾರಿ ಕೇಂದ್ರ ಸರ್ಕಾರಿ ಅಧಿಕಾರಿಗಳು, ನೌಕರರಿಗೆ ರೂ.10,000/– ಬಡ್ಡಿ ರಹಿತ ಮುಂಗಡವನ್ನು ನೀಡುತ್ತಿದೆ ಎಂದು ಹೇಳಿದರು. ಬಡ್ಡಿ ರಹಿತ ಹಬ್ಬದ ಮುಂಗಡವನ್ನು ಎಲ್.ಟಿ.ಸಿ.ಗೆ ಬದಲಾಗಿ ನಗದು ವೋಚರ್ ರೂಪದಲ್ಲಿ ರೂ.10,000 ದೊರೆಯಲಿದ್ದು, 2021ರ ಮಾರ್ಚ್ 31ರ ಒಳಗೆ ಪಡೆದುಕೊಂಡು ಬಳಕೆ ಮಾಡಿಕೊಳ್ಳಬಹುದಾಗಿದೆ. ಈ ಹಣ ಮರುಪಾವತಿ 10 ಕಂತುಗಳಲ್ಲಿ ಇರಲಿದ್ದು, ಕೇಂದ್ರ ಸರ್ಕಾರ ಇದಕ್ಕಾಗಿ ರೂ.4,000 ಕೋಟಿ ಖರ್ಚು ಮಾಡುತ್ತಿದೆ ಎಂದು ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ. ಕೇಂದ್ರ ಹಣಕಾಸು ಸಚಿವಾಲಯ ರಾಜ್ಯಗಳಿಗೆ 50 ವರ್ಷಗಳ ಅವಧಿಗೆ ರೂ.12,000 ಕೋಟಿಗಳನ್ನು

ಬಡ್ಡಿ ರಹಿತ ಸಾಲವಾಗಿ ನೀಡುವುದಾಗಿ ಘೋಷಿಸಿದೆ. ಇದರಲ್ಲಿ ರೂ.1,600 ಕೋಟಿಗಳನ್ನು ಉತ್ತರಾಖಂಡ ಮತ್ತು ಹಿಮಾಚಲ ಪ್ರದೇಶಕ್ಕೆ ನೀಡಲಾಗುವುದು. ಉಳಿದ ರಾಜ್ಯಗಳಿಗೆ ರೂ.7,500 ಹಾಗೂ ಪೂರ್ವ ಘೋಷಿತ ರಾಜ್ಯಗಳಿಗೆ ರೂ.2,000 ಕೋಟಿ.

**ಯೋಜನೆಯ ಪ್ರಮುಖಾಂಶಗಳೇನು:–**

- ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನೀಡುವ ರಜೆ ಪ್ರಯಾಣ ರಿಯಾಯಿತಿ (ಎಲ್‌ಟಿಸಿ) ಬದಲಾಗಿ ಈ ವರ್ಷ ಕೇಂದ್ರ ಸರ್ಕಾರಿ ನೌಕರರಿಗೆ ನಗದು ಚೀಟಿ (ಕ್ಯಾಷ್ ವೋಚರ್) ಇದನ್ನು ಆಹಾರೇತರ ಜಿಎಸ್‌ಟಿ ಉತ್ಪನ್ನ ಖರೀದಿಗೆ ಮಾತ್ರ ಖರ್ಚು ಮಾಡಬಹುದು.
- ಜಿಎಸ್‌ಟಿ ನೋಂದಾಯಿತ ಮಳಿಗೆಗಳಿಂದ ಡಿಜಿಟಲ್ ಮೋಡ್‌ನಲ್ಲಿ ಶೇ.12 ರಷ್ಟು ಅಥವಾ ಅದಕ್ಕಿಂತ ಹೆಚ್ಚಿನ ಜಿಎಸ್‌ಟಿ ವಸ್ತುಗಳನ್ನು ಖರೀದಿಸಬಹುದು.
- ಎಲ್.ಟಿ.ಸಿ.ಗೆ ಬದಲಾಗಿ ರೂ.5,675ಕೋಟಿಗಳನ್ನು ಕೇಂದ್ರ ಸರ್ಕಾರ ಪಾವತಿಸಿದರೆ, ರೂ.1,900 ಕೋಟಿಗಳನ್ನು ಕೇಂದ್ರ ಪಿಎಸ್‌ಯು ಮತ್ತು ಸಾರ್ವಜನಿಕ ವಲಯದ ಬ್ಯಾಂಕುಗಳು ಪಾವತಿಸಲಿವೆ.
- ಆರ್ಥಿಕತೆಯನ್ನು ಹೆಚ್ಚಿಸುವ ಉದ್ದೇಶದಿಂದ ಬಂಡವಾಳ ಯೋಜನೆಗಳಿಗಾಗಿ ಖರ್ಚು ಮಾಡಲು ರಾಜ್ಯಗಳಿಗೆ 50 ವರ್ಷಗಳ ಅವಧಿಗೆ ರೂ.12,000 ಕೋಟಿ ಬಡ್ಡಿರಹಿತ ಸಾಲ ಘೋಷಣೆ, ಸಾಲದ ಹಣವನ್ನು ರಾಜ್ಯಗಳು 50 ವರ್ಷಗಳ ನಂತರ ಒಂದೇ ಕಂತಿನಲ್ಲಿ ಪಾವತಿಸಬಹುದಾಗಿದೆ.
- ರೂ.12,000 ಕೋಟಿಗಳಲ್ಲಿ ರೂ.1,600 ಕೋಟಿ ಈಶಾನ್ಯ ರಾಜ್ಯಗಳಿಗೆ ಮತ್ತು ರೂ.900ಕೋಟಿ ಉತ್ತರಖಂಡ ಮತ್ತು ಹಿಮಾಚಲ ಪ್ರದೇಶಕ್ಕೆ, ಉಳಿದ ರಾಜ್ಯಗಳಿಗೆ ರೂ.7,500 ಕೋಟಿ ಹಾಗೂ ಪೂರ್ವ ಘೋಷಿತ ಸುಧಾರಣೆಗಳನ್ನು ಪೂರೈಸುವ ರಾಜ್ಯಗಳಿಗೆ ರೂ.2,000 ಕೋಟಿ.
- ರಾಜ್ಯಗಳು ಸಾಲವನ್ನು ಹೊಸ ಅಥವಾ ಪ್ರಸ್ತುತ ನಡೆಯುತ್ತಿರುವ ಯೋಜನೆಗಳಿಗೆ ಸಂಪೂರ್ಣವಾಗಿ ಖರ್ಚು ಮಾಡಬೇಕು. ಗುತ್ತಿಗೆದಾರರು ಮತ್ತು ಪೂರೈಕೆದಾರರ ಬಿಲ್‌ಗಳನ್ನು 2021ರ ಮಾರ್ಚ್ 31ರ ಒಳಗೆ ಪಾವತಿಸಬೇಕು.
- ಕೇಂದ್ರ ಸರ್ಕಾರದಿಂದ ಹೆಚ್ಚುವರಿ ಬಂಡವಾಳ ವೆಚ್ಚವಾಗಿ ರೂ.25 ಸಾವಿರ ಕೋಟಿ ಘೋಷಣೆ. ಬಜೆಟ್‌ನ ರೂ.4.14 ಲಕ್ಷ ಕೋಟಿಗಳ ಜೊತೆಗೆ ಹೆಚ್ಚುವರಿ ಹಣ. ಇದನ್ನು ರಸ್ತೆಗಳು, ರಕ್ಷಣಾ, ಮೂಲಸೌಕರ್ಯ, ನೀರು ಸರಬರಾಜು ಮತ್ತು ನಗರಾಭಿವೃದ್ಧಿಗೆ ಖರ್ಚು ಮಾಡಬಹುದಾಗಿದೆ.

ಆಧಾರ: ವಿಶ್ವವಾಣಿ, ದಿನಾಂಕ:13.10.2020

## 11. ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರ ಇನ್ನೂ ಕಗ್ಗಂಟು

ರಾಜ್ಯಗಳಿಗೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪರಿಹಾರ ಪಾವತಿ ಕುರಿತಂತೆ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ನಡೆದ 43ನೇ ಸಭೆಯಲ್ಲೂ ಒಮ್ಮತ ಮೂಡಲಿಲ್ಲ. ಸಭೆಯ ನಂತರ ಈ ಕುರಿತು ಮಾತನಾಡಿದ ಸಚಿವೆ ನಿರ್ಮಲಾ, ಬಹುದೀರ್ಘ ಚರ್ಚೆ ನಡೆಯಿತಾದರೂ ಒಮ್ಮತಕ್ಕೆ ಬರಲು ಆಗಲಿಲ್ಲ. ಮುಂದಿನ ಸಭೆಯಲ್ಲಿ ಈ ವಿಷಯ ಚರ್ಚೆ ಆಗಲಿದೆ ಎಂದರು.

ಚರ್ಚೆ ವೇಳೆ ರಾಜ್ಯಗಳಿಂದ ಉಪಯುಕ್ತ ಸಲಹೆಗಳು ಬಂದವು. ಆದರೆ, ರಾಜ್ಯಗಳ ಬೇಡಿಕೆಯನ್ನು ಈಡೇರಿಸುವಷ್ಟು ಜಿ.ಎಸ್.ಟಿ ಸೆಸ್ ಸಂಗ್ರಹವಾಗಿಲ್ಲ ಎಂಬುದು ವಾಸ್ತವ ಎಂದು ಸಚಿವೆ ಹೇಳಿದರು. ವರ್ಚುವಲ್ ಮೂಲಕ ನಡೆದ ಸಭೆಯಲ್ಲಿ ಹಣಕಾಸು ಖಾತೆ ರಾಜ್ಯ ಸಚಿವ ಅನುರಾಗ್

ಠಾಕೂರ್, ಎಲ್ಲ ರಾಜ್ಯ ಸರ್ಕಾರದಿಂದ ಪ್ರತಿನಿಧಿಗಳು ಭಾಗವಹಿಸಿದ್ದರು. ಕಾಂಗ್ರೆಸ್ ಮತ್ತು ಇನ್ನಿತರ ವಿರೋಧ ಪಕ್ಷಗಳ ಆಡಳಿತವಿರುವ 10 ರಾಜ್ಯಗಳು, ಜಿ.ಎಸ್.ಟಿ ಕಾಯ್ದೆ ಪ್ರಕಾರ ರಾಜ್ಯಗಳಿಗೆ ಆಗುವ ನಷ್ಟವನ್ನು ಕೇಂದ್ರವೇ ಭರಿಸಬೇಕು ಎಂದು ಪಟ್ಟು ಹಿಡಿದಿರುವ ಕಾರಣ ಸಭೆ ನಿರ್ಣಯಕ್ಕೆ ಬರಲು ಸಾಧ್ಯವಾಗಲಿಲ್ಲ. ರಾಜಸ್ಥಾನ, ಪಂಜಾಬ್, ಛತ್ತೀಸಗಢ, ಕೇರಳ, ಪಶ್ಚಿಮ ಬಂಗಾಳ, ದೆಹಲಿ, ತೆಲಂಗಾಣ ರಾಜ್ಯಗಳು ಈ ವಿಷಯ ಇತ್ಯರ್ಥಕ್ಕೆ ಸಚಿವ ತಂಡವನ್ನು (ಜಿಓಎಂ) ರಚಿಸಬೇಕು ಎಂದು ಆಗ್ರಹಿಸಿವೆ.

**ಬಾಕಿ ಹಣಕ್ಕೆ ಕರ್ನಾಟಕ ಆಗ್ರಹ:** ಜಿ.ಎಸ್.ಟಿ ನಷ್ಟ ಪರಿಹಾರದ ಬಾಕಿಯನ್ನು ಆಕ್ಟೋಬರ್ 31ರೊಳಗೆ ಬಿಡುಗಡೆ ಮಾಡುವಂತೆ ರಾಜ್ಯ ಸರ್ಕಾರ ಕೇಂದ್ರದ ಮೇಲೆ ಒತ್ತಡ ಹೇರಿದೆ.

ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರು ರಾಜ್ಯವು ತನ್ನ ಯೋಜನಾ ಮತ್ತು ಯೋಜನೇತರ ವೆಚ್ಚಗಳಲ್ಲಿ ಹಣ ತೊಡಗಿಸಲು ಆರ್ಥಿಕ ಸಂಕಷ್ಟ ಎದುರಿಸುತ್ತಿದೆ. ತಕ್ಷಣದಲ್ಲಿ ಅವಶ್ಯಕವಾಗಿರುವ ನಷ್ಟ ಪರಿಹಾರ ಮೊತ್ತದ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿದರು.

ನಷ್ಟ ಪರಿಹಾರ ಸೆಸ್ ಸಂಗ್ರಹಿಸುವ ಅವಧಿಯನ್ನು 2022ರ ನಂತರವು ವಿಸ್ತರಿಸುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿದೆ ಎಂದು ಗೃಹ ಸಚಿವರು ಸಭೆಯ ವಿವರವನ್ನು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದರು.

ನಷ್ಟ ಪರಿಹಾರ ಮುಂದುವರಿಸುವ ವಿಚಾರಕ್ಕೆ ಪೂರಕವಾಗಿ ಅಂದಾಜು ಬೆಳವಣಿಗೆ ದರವನ್ನು ಶೇ.10 ರಿಂದ ಶೇ.7ಕ್ಕೆ ಇಳಿಸುವಲ್ಲಿ ಕೇಂದ್ರ ಸರ್ಕಾರ ಬದ್ಧತೆ ಪ್ರದರ್ಶಿಸಿದೆ. ಇದರಿಂದಾಗಿ ಕರ್ನಾಟಕಕ್ಕೆ ಲಭ್ಯವಿರುವ ಸಾಲ ಸೌಲಭ್ಯದ ಮೊತ್ತವು ರೂ.11,432 ಕೋಟಿಯಿಂದ 12,400 ಕೋಟಿಗೆ ಹೆಚ್ಚಾಗಲಿದೆ ಎಂದು ಗೃಹ ಸಚಿವರು ವಿವರಿಸಿದ್ದಾರೆ.

ಕೊರೋನಾ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯಗಳು ಹಣಾಹಣಿ ಸ್ವಭಾವ ಬದಿಗೊತ್ತಿ ಸಂಕಷ್ಟ ಪರಿಹರಿಸಿಕೊಳ್ಳಲು ಕೈಜೋಡಿಸಬೇಕಾಗಿದೆ ಎಂದು ಅವರು ಹೇಳಿದ್ದಾರೆ. ನಷ್ಟ ಪರಿಹಾರವನ್ನು ಪಡೆಯುವಲ್ಲಿ ಉಂಟಾಗುವ ವಿಳಂಬವು ರಾಜ್ಯಗಳಲ್ಲಿ ಬಹುದೊಡ್ಡ ಆರ್ಥಿಕ ಸಂಕಷ್ಟವನ್ನು ಸೃಷ್ಟಿಸುತ್ತದೆ ಎಂದು ಜಿ.ಎಸ್.ಟಿ ಸಭೆಯಲ್ಲಿ ವ್ಯಕ್ತವಾದ ಕಳವಳವನ್ನು ತಮ್ಮ ಹೇಳಿಕೆಯಲ್ಲಿ ಪ್ರಸ್ತಾಪಿಸಿದ್ದಾರೆ.

ಕರ್ನಾಟಕವು ಕೇಂದ್ರ ನೀಡಿದ ಎರಡು ಆಯ್ಕೆಗಳಲ್ಲಿ ಆಯ್ಕೆ–1ನ್ನು ಆಯ್ದುಕೊಂಡಿದೆ. ಮುಂದೆ ಸಂಗ್ರಹಿಸಲಾಗುವ ಸೆಸ್ ನಿಧಿಯಿಂದ ಅಸಲು ಮತ್ತು ಬಡ್ಡಿಗಳೆರಡರ ಮರುಪಾವತಿ ಮಾಡಲಾಗುವುದರಿಂದ ರಾಜ್ಯಗಳಿಗೆ ಯಾವುದೇ ಹೊರೆ ಉಂಟಾಗುವುದಿಲ್ಲ. ರಾಜ್ಯ ಸರ್ಕಾರ ಜಿ.ಎಸ್.ಟಿ ಪರಿಷತ್ತಿನ ಪ್ರಸ್ತುತ ಸಭೆಯಲ್ಲಿಯೇ ತನಗೆ ಸಾಲ ಪಡೆಯಲು ಅವಕಾಶ ಮಾಡಿಕೊಡಬೇಕೆಂದು ಆಗ್ರಹಿಸಿದೆ.

ಆಧಾರ: ವಿಜಯವಾಣಿ, ದಿನಾಂಕ:13.10.2020

## 12. ರೂ.50ಗೆ ಎಟಿಎಂ ಕಾರ್ಡ್ ರೀತಿಯ ಆಧಾರ್ ಕಾರ್ಡ್

ದೊಡ್ಡ ಗಾತ್ರದ ಆಧಾರ್ ಕಾರ್ಡ್ ನಿಮಗೆ ಕಿರಿಕಿರಿ ಅನ್ನಿಸುತ್ತಿದೆಯೇ ಹಾಗಿದ್ದರೆ ರೂ.50 ನೀಡಿದರೆ ಎಟಿಎಂ ಕಾರ್ಡ್ ಅಥವಾ ಕ್ರೆಡಿಟ್ ಕಾರ್ಡ್ ರೀತಿಯ ಪಾಲಿವಿನೈಲ್ ಕ್ಲೋರೈಡ್ (ಪಿವಿಸಿ) ಆಧಾರ್ ಕಾರ್ಡ್ ಪಡೆದುಕೊಳ್ಳಬಹುದು. ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ (ಯುಐಡಿಎಐ) ಅಧಿಕೃತವಾಗಿ ಈ ರೀತಿಯ ಹೊಸ ಕಾರ್ಡ್ ವಿತರಿಸಲು ಆರಂಭಿಸಿದೆ. ಈ ಕಾರ್ಡ್‌ನ್ನು ಇನ್ನಿತರ ಪ್ಲಾಸ್ಟಿಕ್ ಕಾರ್ಡ್‌ನಂತೆ ಪರ್ಸ್‌ನಲ್ಲಿಟ್ಟುಕೊಳ್ಳಬಹುದು. ಇದನ್ನು ಪಿವಿಸಿ ಆಧಾರ್ ಎಂದು ಕರೆಯಲಾಗುತ್ತದೆ.

ನೋಡಲು ಆಕರ್ಷಕವಾಗಿದೆ, ಹೋಲೋಗ್ರಾಂ ನಕಲುಗೊಳಿಸಲಾಗದ ಕುಸುರಿ ವಿನ್ಯಾಸ, ಘೋಸ್ಟ್ ಇಮೇಜ್ ಹಾಗೂ ಮೈಕ್ರೋ ಅಕ್ಷರಗಳನ್ನು ಹೊಂದಿರುತ್ತದೆ. ಇದು ಸಂಪೂರ್ಣ ವಾಟರ್ ಪ್ರೂಫ್ ಕಾರ್ಡ್ ಆಗಿದ್ದು, ಆಫ್ ಲೈನ್‌ನಲ್ಲೂ ಕಾರ್ಡನ್ನು ಪರಿಶೀಲಿಸಬಹುದು.

**ಪಿವಿಸಿ ಆಧಾರ್ ಪಡೆಯುವುದು ಹೇಗೆ:**

- ಆಧಾರ್ ಸಂಖ್ಯೆ ಹೊಂದಿರುವ ಯಾರು ಬೇಕಾದರೂ residentpvc.uidai.gov.in/order-pvcreprint ಲಿಂಕ್ ಬಳಸಿ ಆನ್ ಲೈನ್‌ನಲ್ಲೇ ಈ ಕಾರ್ಡ್‌ನ್ನು ತರಿಸಿಕೊಳ್ಳಬಹುದು.
- ಮೊದಲಿಗೆ ಲಿಂಕ್ ಮೇಲೆ ಕ್ಲಿಕ್ ಮಾಡಿ, 12 ಅಂಕಿಗಳ ಆಧಾರ್ ಸಂಖ್ಯೆ ಅಥವಾ 16 ಅಂಕಿಗಳ ವರ್ಚುವಲ್ ಐಡಿ ಅಥವಾ 28 ಅಂಕಿಗಳ ಇಐಡಿ ನಮೂದಿಸಬೇಕು.
- ನಂತರ ಕ್ಯಾಪ್ಚಾ ಇಮೇಜ್‌ನಲ್ಲಿ ನೀಡಿದ ಸೆಕ್ಯೂರಿಟಿ ಕೋಡ್ ನಮೂದಿಸಿ ಸೆಂಡ್ ಒಟಿಪಿ ಎಂಬ ಆಪ್ಷನ್ ಕ್ಲಿಕ್ ಮಾಡಬೇಕು. ಆಗ ನೋಂದಾಯಿತ ಮೊಬೈಲ್ ಸಂಖ್ಯೆಗೆ ಒಟಿಪಿ ಬರುತ್ತದೆ. ಅದನ್ನು ನಮೂದಿಸಬೇಕು.
- ನಂತರ ನಿಮ್ಮ ಆಧಾರ್ ಪಿವಿಸಿ ಕಾರ್ಡ್‌ನ ಪ್ರತಿರೂಪ ಕಾಣಿಸುತ್ತದೆ. ಆಗ ಅಲ್ಲೇ ಕೆಳಗಿರುವ ಹಣ ಪಾವತಿ ಆಯ್ಕೆಯನ್ನು ಕ್ಲಿಕ್ ಮಾಡಿ ರೂ.50 ಪಾವತಿಸಬೇಕು.
- ಹಣ ಪಾವತಿಯಾದ ನಂತರ ಐದು ದಿನದೊಳಗೆ ಯುಐಡಿಎಐ ನಿಮ್ಮ ಆಧಾರ್ ಪಿವಿಸಿ ಕಾರ್ಡ್‌ನ್ನು ಪ್ರಿಂಟ್ ಪೋಸ್ಟ್‌ನಲ್ಲಿ ಮನೆಗೆ ಕಳುಹಿಸಲಾಗುತ್ತದೆ.

ಆಧಾರ: ಕನ್ನಡಪ್ರಭ, ದಿನಾಂಕ:13.10.2020

## 13.ಆರ್ಥಿಕತೆಗೆ ಮಿನಿ ಟಾನಿಕ್

ಕೊರೋನಾ ಲಾಕ್‌ಡೌನ್‌ನಿಂದ ತತ್ತರಿಸಿ ನಿಧಾನವಾಗಿ ಚೇತರಿಸಿಕೊಳ್ಳುತ್ತಿರುವ ಆರ್ಥಿಕತೆಗೆ ಮತ್ತಷ್ಟು ಬಲ ತುಂಬಲು ಕೇಂದ್ರ ಸರ್ಕಾರ ರೂ.73,000 ಕೋಟಿ ಮೊತ್ತದ ಪ್ಯಾಕೇಜ್ ಘೋಷಿಸಿದೆ. ಸರ್ಕಾರಿ ನೌಕರರಿಗೆ ರಜೆ ಪ್ರವಾಸ ಭತ್ಯೆ (ಎಲ್‌ಟಿಸಿ)ಗೆ ಬದಲಾಗಿ ನಗದು ಪಾವತಿ, ಸರ್ಕಾರಿ ನೌಕರರಿಗೆ ಬಡ್ಡಿ ರಹಿತ ರೂ.10,000 ಮುಂಗಡ ಸಾಲ, ಮೂಲ ಸೌಕರ್ಯ ವಲಯದಲ್ಲಿ ಹೆಚ್ಚುವರಿ ರೂ.25 ಸಾವಿರ ಕೋಟಿ ಹೂಡಿಕೆ ಮತ್ತು ರಾಜ್ಯಗಳಿಗೆ 50 ವರ್ಷಗಳ ಕಾಲ ಬಡ್ಡಿ ರಹಿತವಾಗಿ ರೂ.12 ಸಾವಿರ ಕೋಟಿ ಸಾಲ ನೀಡುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.

ಕೇಂದ್ರದ ಈ ಪ್ಯಾಕೇಜ್ ಅನ್ನು ಉದ್ಯಮ ವಲಯ ಮುಕ್ತಕಂಠದಿಂದ ಸ್ವಾಗತಿಸಿದೆ. ಮತ್ತೊಂದೆಡೆ ಸೂಕ್ತ ಸಮಯದಲ್ಲಿ ಕೈಗೊಂಡ ಈ ನಿರ್ಧಾರವು, ಆರ್ಥಿಕತೆಯಲ್ಲಿ ಹೊಸ ಬೇಡಿಕೆ ಸೃಷ್ಟಿಗೆ ಕಾರಣವಾಗಲಿದೆ ಎಂದು ಪ್ರಧಾನಿ ಮೋದಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಜನರ ಕೈಗೆ ಅಧಿಕ ಹಣ ನೀಡಿ, ಅವರಿಂದ ವೆಚ್ಚ ಅಧಿಕವಾಗುವಂತೆ ಮಾಡುವ ಮೂಲಕ ಆರ್ಥಿಕತೆಗೆ ಚುರುಕು ನೀಡುವುದು ನಿರ್ಮಲಾ ಘೋಷಣೆಗಳ ಒಟ್ಟಾರೆ ಸಾರಾಂಶ, ಕಳೆದ ಮೇ ತಿಂಗಳಿನಲ್ಲಿ ರೂ. 20 ಲಕ್ಷ ಕೋಟಿ 'ಆತ್ಮನಿರ್ಭರ ಪ್ಯಾಕೇಜ್' ಅನ್ನು ಕೇಂದ್ರ ಪ್ರಕಟಿಸಿತ್ತು.

**ಎಲ್.ಟಿ.ಸಿ ನಗದಿಗೆ :**

- ಶೇ.12 ಅಥವಾ ಅದಕ್ಕಿಂತ ಆಧಿಕ ಜಿಎಸ್‌ಟಿ ಹೊಂದಿರುವ ವಸ್ತು ಖರೀದಿಸಬೇಕು.
- ಜಿಎಸ್‌ಟಿ ನೋಂದಾಯಿತ ವ್ಯಾಪಾರಿಯಿಂದ ಡಿಜಿಟಲ್ ಸ್ವರೂಪದಲ್ಲೇ ಖರೀದಿ
- ಖರೀದಿ ಮೌಲ್ಯವು ಪ್ರಯಾಣ ದರದ 3, ರಜೆ ಪಾವತಿ ಮೊತ್ತದ 1 ಪಟ್ಟು ಅಧಿಕವಾಗಿರಬೇಕು.

**ಹಬ್ಬದ ಮುಂಗಡಕ್ಕೆ :**

- ಎಲ್ಲ ಅಧಿಕಾರಿಗಳು, ಸಿಬ್ಬಂದಿಗಳಿಗೆ ಯೋಜನೆ ಅವಕಾಶ
- ಮುಂಗಡ ಹಣ ಗರಿಷ್ಠ 10 ಕಂತಲ್ಲಿ ಮರುಪಾವತಿ ಕಡ್ಡಾಯ
- ಈ ಸಾಲದ ಹಣಕ್ಕೆ ಯಾವುದೇ ಬಡ್ಡಿ ಇರುವುದಿಲ್ಲ.

**ರಾಜ್ಯಗಳ ಸಾಲಕ್ಕೆ:**

- 2 ಕಂತಲ್ಲಿ ಸಾಲ ನೀಡಿಕೆ, ಮೊದಲ ಕಂತು ಬಳಕೆ ಬಳಿಕ 2ನೇ ಕಂತು ಬಿಡುಗಡೆ
- ಚಾಲ್ತಿ ಮತ್ತು ಹೊಸ ಯೋಜನೆಗಳಿಗೆ ಹಣ ಬಳಕೆಗೆ ಅವಕಾಶ
- 50 ವರ್ಷಗಳ ಬಳಿಕ ಒಂದೇ ಇಡುಗಂಟಲ್ಲಿ ಪೂರ್ಣ ಹಣ ಪಾವತಿ ಕಡ್ಡಾಯ.

ಆಧಾರ: ಕನ್ನಡಪ್ರಭ, ದಿನಾಂಕ:13.10.2020

## 14. ಜಿಎಸ್‌ಟಿ : ಕೇಂದ್ರದಿಂದ ಸಾಲ

ಜಿಎಸ್‌ಟಿ ಸಂಗ್ರಹದಲ್ಲಿ ಆಗಿರುವ ಕೊರತೆಯನ್ನು ಭರ್ತಿ ಮಾಡಿಕೊಡಲು ಕೇಂದ್ರ ಸರ್ಕಾರವು ರಾಜ್ಯಗಳ ಪರವಾಗಿ ಗರಿಷ್ಠ ರೂ.1.1 ಲಕ್ಷ ಕೋಟಿಯವರೆಗೆ ಸಾಲ ಮಾಡಲಿದೆ.

ಜಿಎಸ್‌ಟಿ ಸಂಗ್ರಹದಲ್ಲಿ ಆಗಿರುವ ಅಂದಾಜು ಕೊರತೆ ಭರ್ತಿಗೆ ವಿಶೇಷ ಯೋಜನೆಯ ಮೂಲಕ ಸಾಲ ಮಾಡಲಾಗುವುದು. ಜಿಎಸ್.ಟಿ ಪರಿಹಾರ ಸೆಸ್ ಬಿಡುಗಡೆ ಮಾಡುವ ಬದಲಿಗೆ ಈ ಸಾಲವನ್ನು ರಾಜ್ಯಗಳಿಗೆ ವರ್ಗಾಯಿಸಲಾಗುವುದು ಎಂದು ಕೇಂದ್ರ ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ. ಆದರೆ, ಈ ಸಾಲದ ಅಸಲು ಹಾಗೂ ಸಾಲದ ಮೇಲಿನ ಬಡ್ಡಿಯನ್ನು ಯಾರು ಪಾವತಿಸುತ್ತಾರೆ ಎಂಬ ವಿವರಣೆಯು ಪ್ರಕಟಣೆಯಲ್ಲಿ ಇಲ್ಲ.

ರಾಜ್ಯಗಳ ಪರವಾಗಿ ಕೇಂದ್ರವು ಸಾಲ ಮಾಡುವುದರಿಂದಾಗಿ ಏಕರೂಪದ ಬಡ್ಡಿ ದರಕ್ಕೆ ಸಾಲ ಸಿಗಲಿದೆ. ಈ ಸಾಲದಿಂದ ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯ ಮೇಲೆ ಯಾವ ಪರಿಣಾಮವು ಇರುವುದಿಲ್ಲ ಎಂದು ಹಣಕಾಸು ಸಚಿವಾಲಯ ಹೇಳಿದೆ. ಈ ಮೊತ್ತವನ್ನು ರಾಜ್ಯ ಸರ್ಕಾರಗಳು ತಮ್ಮ ವಿತ್ತೀಯ ಕೊರತೆಯನ್ನು ಸರಿದೂಗಿಸಿಕೊಳ್ಳಲು ಮಾಡುವ ಬಂಡವಾಳ ಸಾಲ ಎಂದೇ ನಮೂದಿಸಲಾಗುತ್ತದೆ ಎಂದು ಸಚಿವಾಲಯ ಹೇಳಿದೆ.

ಜಿಎಸ್‌ಟಿ ವ್ಯವಸ್ಥೆಯಿಂದ ರಾಜ್ಯಗಳಿಗೆ ಆಗುವ ವರಮಾನ ಕೊರತೆಯನ್ನು ಭರ್ತಿ ಮಾಡಿಕೊಡುವ ಹೊಣೆ ಕೇಂದ್ರದ್ದು ಎಂದು ಕಾನೂನು ಹೇಳುತ್ತದೆ ಕೆಲವು ವಸ್ತುಗಳ ಮೇಲೆ ವಿಧಿಸುವ ಸೆಸ್‌ನಿಂದ ಸಂಗ್ರಹವಾಗುವ ಮೊತ್ತವನ್ನು ಬಳಸಿ ರಾಜ್ಯಗಳಿಗೆ ಪರಿಹಾರ ನೀಡಲಾಗುತ್ತದೆ. ಆದರೆ, ಲಾಕ್‌ಡೌನ್ ಪರಿಣಾಮವಾಗಿ ಪರಿಹಾರ ಮೊತ್ತ ವಿತರಿಸಲು ಅಗತ್ಯವಿರುವಷ್ಟು ಸೆಸ್ ಸಂಗ್ರಹವಾಗಿಲ್ಲ.

ವರಮಾನ ಕೊರತೆಯನ್ನು ರಾಜ್ಯಗಳು ಸಾಲದ ರೂಪದಲ್ಲಿ ಭರ್ತಿ ಮಾಡಿಕೊಳ್ಳಬೇಕು ಎಂದು ಕೇಂದ್ರ ಹೇಳಿತ್ತು. ಆದರೆ, ಇದಕ್ಕೆ ಬಿಜೆಪಿಯೇತರ ಪಕ್ಷಗಳ ಆಡಳಿತ ಇರುವ ಕೆಲವು ರಾಜ್ಯಗಳು ಒಪ್ಪಿರಲಿಲ್ಲ.

ಆಧಾರ: ಪ್ರಜಾವಾಣಿ, ದಿನಾಂಕ:16.10.2020

## 15. ಜನೌಷಧಿ ರಫ್ತಿನಲ್ಲಿ ಭಾರತಕ್ಕೆ ಅಗ್ರಸ್ಥಾನ

ಜನೌಷಧಿ ತಯಾರಿಕೆ ಮತ್ತು ರಫ್ತು ವ್ಯವಹಾರದಲ್ಲಿ ಭಾರತ ಅತಿ ದೊಡ್ಡ ರಾಷ್ಟ್ರಗಳಲ್ಲಿ ಒಂದಾಗಿದೆ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವ ಡಿ.ವಿ. ಸದಾನಂದ ಗೌಡ ತಿಳಿಸಿದ್ದಾರೆ.

ಎಫ್.ಐ.ಸಿ.ಸಿ.ಐ ಆಯೋಜಿಸಿದ್ದ ಲೀಡ್ಸ್ 2020 ವೇಳೆ ಲ್ಯಾಟಿನ್ ಅಮೆರಿಕ ಮತ್ತು ಕೆರೇಬಿಯನ್ ವರ್ಚುವಲ್ ಅಧಿವೇಶನ ಉದ್ದೇಶಿಸಿ ಮಾತನಾಡಿದ ಅವರು, ಭಾರತದ ಔಷಧ ವಲಯ 2024ರ ಹೊತ್ತಿಗೆ 65 ಶತಕೋಟಿ ಡಾಲರ್ ಕೈಗಾರಿಕೆಯಾಗಿ ವೃದ್ಧಿಸಬಲ್ಲದ್ದಾಗಿದೆ ಎಂದು ಹೇಳಿದರು.

ಕೊರೋನಾ ಆರಂಭದ ಕಾಲದಲ್ಲಿ ಗಂಭೀರ ಪ್ರಕರಣಗಳ ಚಿಕಿತ್ಸಾ ಶಿಷ್ಟಾಚಾರದಲ್ಲಿ ಎಚ್.ಸಿ.ಕ್ಯು ಮತ್ತು ಅಜಿತ್ರೋಮೈಸಿನ್ ಅನ್ನು ಔಷಧವಾಗಿ ಗುರುತಿಸಲಾಗಿತ್ತು. ಭಾರತ ಈ ಔಷಧಗಳನ್ನು ವಿಶ್ವದ 120ಕ್ಕೂ ಹೆಚ್ಚು ರಾಷ್ಟ್ರಗಳಿಗೆ ಪೂರೈಕೆ ಮಾಡಿತು. ಅಲ್ಲಿಂದ ಭಾರತ ಅತ್ಯಂತ ವಿಶ್ವಾಸಾರ್ಹ ಔಷಧ ಪೂರೈಕೆದಾರರೆಂಬ ಗೌರವಕ್ಕೆ ಪಾತ್ರವಾಯಿತು ಎಂದರು.

ಅಮೆರಿಕ ಮತ್ತು ಯುರೋಪಿನಂತಹ ಉನ್ನತ ಗುಣಮಟ್ಟವನ್ನು ಅನುಸರಿಸುವ ದೇಶಗಳು ಸೇರಿದಂತೆ ವಿವಿಧ ದೇಶಗಳಿಗೆ 20 ಶತಕೋಟಿ ಡಾಲರ್ ಮೌಲ್ಯದ ಔಷಧ ಉತ್ಪನ್ನಗಳ ರಫ್ತು ಹೊಂದಿರುವ ಭಾರತ, ಸಂಯುಕ್ತ ಅಮೆರಿಕ ಸಂಸ್ಥಾನದ ಹೊರಗೆ ಯುಎಸ್–ಎಫ್.ಡಿ.ಎ ಕಂಪ್ಲೈಂಟ್ ಔಷಧ ಘಟಕಗಳನ್ನು ಹೊಂದಿರುವ ಏಕೈಕ ದೇಶವಾಗಿದೆ ಎಂದು ಮಾಹಿತಿ ನೀಡಿದರು. ರಾಸಾಯನಿಕ ಮತ್ತು ಪೆಟ್ರೋರಾಸಾಯನಿಕ ವಲಯದ ಮಾರುಕಟ್ಟೆಯ ಗಾತ್ರ ಭಾರತದಲ್ಲಿ 165 ಶತಕೋಟಿ ಡಾಲರ್ ಆಗಿದ್ದು, ಈ ಗಾತ್ರ 2025ರ ಹೊತ್ತಿಗೆ 300 ಶತಕೋಟಿಗೆ ವೃದ್ಧಿಸುವ ನಿರೀಕ್ಷೆ ಇದೆ ಎಂದರು.

ಔಷಧ ಕ್ಷೇತ್ರದಲ್ಲಿ ಹೂಡಿಕೆ ಮಾಡಲು ಮತ್ತು ಭಾರತದಲ್ಲಿ ಉತ್ಪಾದನಾ ನೆಲೆಯನ್ನು ಸ್ಥಾಪಿಸಲು ಇದು ಬಹಳ ಉತ್ತಮ ಸಮಯ ಎಂದು ಕೇಂದ್ರ ಸಚಿವರು ಹೇಳಿದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:16.10.2020

## 16. ಕಾರ್ಗಿಲ್ : ಝೋಜಿಲಾ ಸುರಂಗ ನಿರ್ಮಾಣಕ್ಕೆ ನಿತಿನ್ ಗಡ್ಕರಿ ಚಾಲನೆ

ಏಷ್ಯಾದ ಅತಿ ಉದ್ದದ 14.15 ಕಿ.ಮೀ ಝೋಜಿಲಾ ಸುರಂಗ ನಿರ್ಮಾಣ ಕಾರ್ಯಕ್ಕೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಖಾತೆ ಸಚಿವ ನಿತಿನ್ ಗಡ್ಕರಿ ಅವರು ಚಾಲನೆ ನೀಡಿದ್ದಾರೆ.

ದೆಹಲಿಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಕಾರ್ಗಿಲ್ ಜಿಲ್ಲೆಯ ಝೋಜಿಲಾದಲ್ಲಿ ಸಾಂಕೇತಿಕ ಸ್ಫೋಟದೊಂದಿಗೆ ಸುರಂಗ ನಿರ್ಮಾಣ ಕಾರ್ಯಕ್ಕೆ ಗಡ್ಕರಿ ಚಾಲನೆ ನೀಡಿದರು. ಈ ಸುರಂಗ ಶ್ರೀನಗರ ಕಣಿವೆ ಮತ್ತು ಲೇಹ್ ನಡುವೆ ಸರ್ವಋತು ಸಂಪರ್ಕವನ್ನು ಒದಗಿಸಲಿದೆ. ಝೋಜಿಲಾದಲ್ಲಿ ಸುರಂಗ ಮಾರ್ಗ ನಿರ್ಮಾಣ ಮಾಡಬೇಕೆಂಬುದು 70 ವರ್ಷಗಳ ಬೇಡಿಕೆಯಾಗಿದೆ. ಇದು ಲಡಾಖ್‌ನ ವಿಶೇಷವಾಗಿ ಕಾರ್ಗಿಲ್ ಕಣಿವೆಗೆ ಸರ್ವಋತು ಸಂಪರ್ಕ ಕಲ್ಪಿಸಲಿದೆ. ಈ ಕನಸು ಸಾಕಾರಗೊಳಿಸುವ ನಿಟ್ಟಿನಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಸುಮಾರು ರೂ.9,000 ಕೋಟಿ ವೆಚ್ಚದಲ್ಲಿ 14.15 ಕಿ.ಮೀ ಉದ್ದದ ಈ ಸುರಂಗ ಮಾರ್ಗ ನಿರ್ಮಾಣ ಯೋಜನೆಯನ್ನು ಕೈಗೆತ್ತಿಗೊಳ್ಳಲಾಗಿದೆ. ಇದು ಲಡಾಖ್ ಪ್ರದೇಶದ ಸಮಗ್ರ ಅಭಿವೃದ್ಧಿಗೆ ಮುನ್ನಡಿ ಬರೆಯಲಿದೆ.

ಶ್ರೀನಗರ ಮತ್ತು ಲೇಹ್ ಅನ್ನು ಡ್ರಾಸ್ ಮತ್ತು ಕಾರ್ಗಿಲ್ ಮೂಲಕ ಸಂಪರ್ಕಿಸುವ ಎನ್.ಎಚ್–1 ರಲ್ಲಿ ನಿರ್ಮಾಣವಾಗುತ್ತಿರುವ ಝೋಜಿಲಾ ಪಾಸ್ (ಪ್ರಸ್ತುತ ವರ್ಷದಲ್ಲಿ ಆರು ತಿಂಗಳು ಮಾತ್ರ ಸಂಚರಿಸಬಹುದು) ಸುಮಾರು 3,000 ಮೀಟರ್ ಎತ್ತರದಲ್ಲಿ 14.15 ಕಿ.ಮೀ ಉದ್ದದ ಸುರಂಗವನ್ನು ಒಳಗೊಂಡಿದೆ.

ಈ ಸುರಂಗ ನಿರ್ಮಾಣವು ಪೂರ್ಣಗೊಂಡ ನಂತರ ಆಧುನಿಕ ಭಾರತದ ಇತಿಹಾಸದಲ್ಲಿ ಒಂದು ಹೆಗ್ಗುರುತಾಗಲಿದೆ. ಲಡಾಖ್, ಗಿಲ್ಗಿಟ್ ಮತ್ತೂ ಬಾಲ್ಟಿಸ್ತಾನ್ ಪ್ರದೇಶಗಳಲ್ಲಿನ ನಮ್ಮ ಗಡಿಯುದ್ದಕ್ಕೂ ಬೃಹತ್ ಮಿಲಿಟರಿ ಚಟುವಟಿಕೆಗಳಿಗೆ ಸಹಾಯವಾಗಲಿದೆ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಸುರಂಗ ನಿರ್ಮಾಣ ಕೈಗೊಳ್ಳಲಾಗಿದೆ ಎಂದು ಸರ್ಕಾರ ಹೇಳಿದೆ.

**ವಿಶೇಷವೇನು:**

- 14.15 ಕಿ.ಮೀ ಉದ್ದ
- ರೂ.9,000 ಕೋಟಿ ವೆಚ್ಚ
- 3 ಗಂಟೆಯಿಂದ ಕೇವಲ 15 ನಿಮಿಷಕ್ಕೆ ಪ್ರಯಾಣ ಅವಧಿ ಇಳಿಕೆ.

ಆಧಾರ: ವಿಶ್ವವಾಣಿ, ದಿನಾಂಕ:16.10.2020

## 17.ಮದುವೆ ಕನಿಷ್ಠ ವಯಸ್ಸು ಪರಿಷ್ಕರಣೆ

ಹೆಣ್ಣುಮಕ್ಕಳ ಮದುವೆಯ ಕನಿಷ್ಠ ವಯೋಮಿತಿಯ ಕುರಿತು ಸರ್ಕಾರ ಶೀಘ್ರದಲ್ಲಿಯೇ ನಿರ್ಧಾರ ಕೈಗೊಳ್ಳಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಆಹಾರ ಮತ್ತು ಕೃಷಿ ಸಂಘಟನೆ (ಎಫ್.ಎ.ಒ)ಯ 75ನೇ ವರ್ಷಾಚರಣೆ ಸ್ಮರಣಾರ್ಥ 75 ರೂಪಾಯಿ ಮುಖಬೆಲೆಯ ವಿಶೇಷ ನಾಣ್ಯ ಬಿಡುಗಡೆ ಮಾಡಿ ಮಾತನಾಡಿದ ಪ್ರಧಾನಿ ನಮ್ಮ ಹೆಣ್ಣುಮಕ್ಕಳ ಮದುವೆಯ ಸರಿಯಾದ ವಯಸ್ಸು ನಿರ್ಧರಿಸಲು ಚರ್ಚೆ ನಡೆಯುತ್ತಿದೆ. ಈ ಕುರಿತು ರಚಿಸಲಾಗಿರುವ ತಜ್ಞರ ಸಮಿತಿಯು ಇನ್ನು ತನ್ನ ನಿರ್ಧಾರವನ್ನು ಏಕೆ ತಿಳಿಸಿಲ್ಲ ಎಂದು ದೇಶಾದ್ಯಂತ ಹೆಣ್ಣುಮಕ್ಕಳು ನನಗೆ ಪತ್ರ ಬರೆದಿದ್ದಾರೆ. ವರದಿ ಬಂದ ಕೂಡಲೇ ಸರ್ಕಾರ ಆ ಬಗ್ಗೆ ನಿರ್ಧಾರ ಕೈಗೊಳ್ಳಲಿದೆ ಎಂದು ಭರವಸೆ ನೀಡಿದರು.

ಹೆಣ್ಣು ಮಕ್ಕಳ ಸಬಲೀಕರಣಕ್ಕೆ ಕಳೆದ ಆರು ವರ್ಷಗಳಿಂದ ಕೈಗೊಂಡ ಮಹತ್ವದ ಹಲವು ಕ್ರಮಗಳ ವಿವರ ನೀಡಿದ ಪ್ರಧಾನಿ, ತಮ್ಮ ಸರ್ಕಾರದ ದಿಟ್ಟ ನಿರ್ಧಾರಗಳಿಂದಾಗಿ ಹೆಣ್ಣುಮಕ್ಕಳು ಶಾಲೆ ಸೇರುವ ಪ್ರಮಾಣ ವರ್ಧಿಸಿದೆ. ಬಾಲಕರಿಗಿಂತ ಬಾಲಕಿಯರ ಶಾಲಾ ದಾಖಲಾತಿ ಪ್ರಮಾಣ ಹೆಚ್ಚಿದೆ. ಇಂತಹದ್ದೊಂದು ಸುಧಾರಣೆಯ ಪವಾಡ ಘಟಿಸಿರುವುದು ದೇಶದಲ್ಲಿ ಇದೇ ಪ್ರಥಮ ಎಂದು ತಿಳಿಸಿದರು.

**ಆರೋಗ್ಯ ರಕ್ಷಣೆಗೆ ಆದ್ಯತೆ:** ಮಹಿಳೆಯರ ಆರೋಗ್ಯ ಮತ್ತು ಸ್ವಚ್ಛತೆ ನಿರ್ವಹಣೆಗಾಗಿ ತಮ್ಮ ಸರ್ಕಾರ ಕೈಗೊಂಡಿರುವ ಸಮಗ್ರ ಕ್ರಮಗಳ ಬಗ್ಗೆಯೂ ಮೋದಿ ಮಾಹಿತಿ ನೀಡಿದರು. ಹೆಣ್ಣುಮಕ್ಕಳ ಯೋಗಕ್ಷೇಮಕ್ಕಾಗಿ ನಾವು ಅಭೂತಪೂರ್ವ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ. ಅಪೌಷ್ಟಿಕತೆ ತೊಲಗಿಸಲು ರಾಷ್ಟ್ರೀಯ ಪೋಷಕಾಂಶ ಆಂದೋಲನ, ಪ್ರತಿ ಮನೆಗೆ ನೀರು ಪೂರೈಸಲು ಜಲ್ ಜೀವನ್ ಮಿಷನ್ ಯೋಜನೆ ಕಾರ್ಯಗತಗೊಳಿಸಿದ್ದೇವೆ. ಒಂದು ರೂ.ಗೆ ಸ್ಯಾನಿಟರಿ ಪ್ಯಾಡ್ ನೀಡುತ್ತಿದ್ದೇವೆ. ಈ ಯೋಜನೆಗಳು ಹೆಣ್ಣುಮಕ್ಕಳ ಸ್ವಚ್ಛತೆ ನಿರ್ವಹಣೆ ಮತ್ತು ಆರೋಗ್ಯ ರಕ್ಷಣೆಯಲ್ಲಿ ಗಣನೀಯ ಪಾತ್ರ ವಹಿಸಿವೆ. ಇದರಿಂದಾಗಿಯೇ ಶಾಲೆಗಳಲ್ಲಿ ಹೆಣ್ಣುಮಕ್ಕಳ ದಾಖಲಾತಿ ಪ್ರಮಾಣ ಹೆಚ್ಚಿದೆ ಎಂದು ವಿವರಿಸಿದರು.

ಕಿರಿಯ ವಯಸ್ಸಿನಲ್ಲಿ ಗರ್ಭಧಾರಣೆ, ಶಿಕ್ಷಣ ಮತ್ತು ತಿಳುವಳಿಕೆ ಕೊರತೆ, ಶುದ್ಧ ಕುಡಿಯುವ ನೀರಿನ ಅಲಭ್ಯತೆ, ಸ್ವಚ್ಛತೆ ಇಲ್ಲದಿರುವುದು ಹೆಣ್ಣುಮಕ್ಕಳಲ್ಲಿ ಅಪೌಷ್ಟಿಕತೆ ಹೆಚ್ಚಲು ಕಾರಣಗಳಾಗಿದ್ದವು. ಈ ಸಮಸ್ಯೆಯ ಮೂಲವನ್ನು ಗುರುತಿಸಿ ಸರ್ಕಾರ ಕ್ರಮ ಕೈಗೊಂಡಿತು. ಇದರಿಂದಾಗಿ ನಮ್ಮ ಪುತ್ರಿಯರ ಶತಮಾನಗಳ ಸಮಸ್ಯೆ ನಿವಾರಣೆಯಾಗಿದೆ ಎಂದು ಪ್ರಧಾನಿ ಹೇಳಿದರು.

ಕಳೆದ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಪ್ರಧಾನಿ ಮೋದಿ ಹೆಣ್ಣು ಮಕ್ಕಳ ಮದುವೆಯ ಕನಿಷ್ಠ ವಯೋಮಿತಿ ಪರಿಷ್ಕರಿಸುವ ಬಗ್ಗೆ ಪ್ರಸ್ತಾಪ ಮಾಡಿದ್ದರು. ಈಗ ಇರುವ ಹೆಣ್ಣುಮಕ್ಕಳ ಮದುವೆಯ ಕನಿಷ್ಠ ವಯೋಮಿತಿಯಲ್ಲಿ ಪರಿಷ್ಕರಣೆ ಮಾಡುವ ಅಗತ್ಯ ಇದ್ದು, ಅದಕ್ಕಾಗಿ ಸೂಕ್ತ ಕಾರ್ಯಪಡೆ ರಚಿಸುವುದಾಗಿ ತಿಳಿಸಿದ್ದರು. ಆ ಬಳಿಕ, ಆಡಿದ ಮಾತಿನಂತೆ ಸಮಿತಿ ರಚಿಸಿ ಅಧ್ಯಯನ ನಡೆಸಲು ನಿರ್ದೇಶನ ನೀಡಿದ್ದರು.

ಆ ಸಮಿತಿಯ ವರದಿ ಈಗ ಅಂತಿಮ ಘಟ್ಟದಲ್ಲಿದ್ದು, ಶೀಘ್ರವೇ ಸರ್ಕಾರಕ್ಕೆ ಸಲ್ಲಿಕೆಯಾಗುವ ನಿರೀಕ್ಷೆ ವ್ಯಕ್ತಪಡಿಸಲಾಗಿದೆ. ಈಗಿನ ನಿಯಮಗಳಂತೆ ಮದುವೆಗೆ ಹೆಣ್ಣುಮಕ್ಕಳ ಕನಿಷ್ಠ ವಯೋಮಿತಿ 18 ವರ್ಷ ಗಂಡು ಮಕ್ಕಳಿಗೆ 21 ವರ್ಷ.

ಆಧಾರ: ವಿಜಯ ಕರ್ನಾಟಕ, ದಿನಾಂಕ:17.10.2020

## 18. ಕೌಶಲ ವೃದ್ಧಿಗೆ ಶಿಕ್ಷಣ ನೀತಿ ಆದ್ಯತೆ : ಪಿ.ಎಂ.

ಕೌಶಲ್ಯ, ಮರು ಕೌಶಲ್ಯ ಮತ್ತು ಕೌಶಲ್ಯ ವೃದ್ಧಿ ಇಂದಿನ ಶಿಕ್ಷಣದ ಅಗತ್ಯವಾಗಿದೆ. ಕೇಂದ್ರ ಸರ್ಕಾರದ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು ಈ ಕುರಿತು ಹೆಚ್ಚಿನ ಆದ್ಯತೆ ನೀಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

ಮೈಸೂರು ವಿವಿಯ ಶತಮಾನದ ಘಟಿಕೋತ್ಸವ ಕಾರ್ಯಕ್ರಮದಲ್ಲಿ ವರ್ಚುವಲ್ ಭಾಷಣ ಮಾಡಿದ ಅವರು ಇಂದಿನ ದಿನಗಳಲ್ಲಿ ಕೌಶಲ್ಯ ವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ವೃತ್ತಿಯ ಸ್ವರೂಪ ಬದಲಿಸಿಕೊಳ್ಳುವ ಅನಿವಾರ್ಯತೆ ಇದ್ದು, ಹೊಸ ಶಿಕ್ಷಣ ನೀತಿಯು ಶಿಕ್ಷಣ ಕ್ಷೇತ್ರದಲ್ಲಿ ಮೂಲಭೂತ ಬದಲಾವಣೆ ತರುವುದಲ್ಲದೆ, ಯುವಕರನ್ನು ಹೆಚ್ಚು ಸ್ಪರ್ಧಾತ್ಮಕವಾಗಿಸುತ್ತದೆ ಎಂದರು.

ವಿದ್ಯಾರ್ಥಿಗಳು ಜಾಗತಿಕ ತಂತ್ರಜ್ಞಾನ ಮತ್ತು ಸ್ಥಳೀಯ ಸಂಸ್ಕೃತಿಯ ಅಧ್ಯಯನದ ಕಡೆಗೂ ಗಮನ ನೀಡಬೇಕು. ಜಾಗತಿಕ ತಂತ್ರಜ್ಞಾನದ ಮೂಲಕ ಸ್ಥಳೀಯ ಉದ್ಯಮವನ್ನು ಅಭಿವೃದ್ಧಿಪಡಿಸುವತ್ತ ಗಮನ ಕೇಂದ್ರೀಕರಿಸಬೇಕು ಎಂದರು.

ಆಧಾರ: ಕನ್ನಡಪ್ರಭ, ದಿನಾಂಕ:20.10.2020

## 19. ಪ್ರಧಾನಿ ನರೇಂದ್ರ ಮೋದಿ ಆಶಯ/ಮೈಸೂರು ವಿಶ್ವವಿದ್ಯಾಲಯ 100ನೇ ವಾರ್ಷಿಕ ಘಟಿಕೋತ್ಸವ

ವಿಶ್ವವಿದ್ಯಾಲಯಗಳಲ್ಲಿ ಪದವಿ ಪಡೆದು ಹೊರ ಬರುತ್ತಿರುವವರು ಕಲಿತ ಶಿಕ್ಷಣವನ್ನು ಸಮಾಜ ಮತ್ತು ದೇಶದ ಏಳಿಗೆಗಾಗಿ ಸಮರ್ಥವಾಗಿ ಬಳಸಿಕೊಳ್ಳಬೇಕು. ಈ ಮೂಲಕ ಮುಂದಿನ ದಶಕವನ್ನು ಭಾರತದ ದಶಕವನ್ನಾಗಿ ವಿಶ್ವ ಗುರುತಿಸುವಂತೆ ಮಾಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮೈಸೂರು ವಿಶ್ವವಿದ್ಯಾಲಯದ ಕಾರ್ಯಸೌಧದಲ್ಲಿ ಆಯೋಜಿಸಿದ್ದ 100ನೇ ಘಟಿಕೋತ್ಸವದಲ್ಲಿ ವರ್ಚುವಲ್ ಕಾರ್ಯಕ್ರಮ ಮೂಲಕ ನವದೆಹಲಿಯಿಂದ ಭಾಷಣ ಮಾಡಿದರು. ವಿವಿಯು ನಿಮಗೆ ಪದವಿಯೊಂದಿಗೆ ದೇಶ, ಸಮಾಜದ ಪರವಾದ ಜವಾಬ್ದಾರಿ ನೀಡುತ್ತಿದೆ. ಈ ದಿನ ಜೀವನದ ಮುಂದಿನ ಹಂತಕ್ಕೆ ಹೊಸ ಸಂಕಲ್ಪದೊಂದಿಗೆ ಹೋಗುವ ದಿನವಾಗಿದ್ದು, ವಿವಿ ಕ್ಯಾಂಪಸ್‌ನಿಂದ ಹೊರಬಂದು ನಿಮ್ಮ ಜೀವನ ಈಗ ವಿಶಾಲ ವಿಶ್ವವಿದ್ಯಾನಿಲಯ ಪ್ರವೇಶಿಸುತ್ತಿವೆ. ನೀವು ಪಡೆದ ಶಿಕ್ಷಣವನ್ನು ಸಮಾಜ ಮತ್ತು ದೇಶದ ಏಳಿಗೆಗಾಗಿ ಬಳಸಿಕೊಳ್ಳಬೇಕು. ಆ ಮೂಲಕ ದೇಶ ಅಭಿವೃದ್ಧಿ ಪಥದಲ್ಲಿ ಸಾಗಿ ಮುಂದಿನ ದಶಕವನ್ನು ಭಾರತದ ದಶಕವೆಂದು ವಿಶ್ವ ತಿರುಗಿ ನೋಡುವಂತೆ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಐದಾರು ವರ್ಷಗಳಲ್ಲಿ ಸಾಕಷ್ಟು ಶೈಕ್ಷಣಿಕ ಸುಧಾರಣೆ ಆಗಿವೆ. ಹಿಂದೆ ದೇಶದಲ್ಲಿದ್ದ 16 ಐಐಟಿ ಸಾಲಿಗೆ ಇನ್ನು 6 ಐಐಟಿ ಸೇರಿಸಲಾಗಿದೆ. ಅದರಲ್ಲಿ ಒಂದು ಧಾರವಾಡದಲ್ಲಿ ಸ್ಥಾಪನೆಯಾಗಿದೆ ಎಂದರು. ಕೃಷಿ ಆಂತರಿಕ್ಷ ಮತ್ತು ರಕ್ಷಣೆ ಮುಂತಾದ ಕ್ಷೇತ್ರಗಳಲ್ಲಿ ಬದಲಾವಣೆಗಳಾಗುತ್ತಿವೆ. ರಾಷ್ಟ್ರೀಯ ಶಿಕ್ಷಣ ನೀತಿಯು ಪ್ರೀ ನರ್ಸರಿಯಿಂದ ಆರಂಭಿಸಿ ಪಿ.ಹೆಚ್.ಡಿ.ವರೆಗೂ ಪೂರ್ತಿ ಬದಲಾವಣೆ ಬರುವ ದೊಡ್ಡ ಅಭಿಯಾನವಾಗಿದೆ. ಯುವ ಜನತೆಯನ್ನು ಹೆಚ್ಚು ಸ್ಪರ್ಧಾತ್ಮಕ ಮಾಡಲು ಈ ನೀತಿ ಸಹಕಾರಿಯಾಗಲಿದ್ದು,

ಪ್ರತಿಯೊಬ್ಬರಲ್ಲಿಯೂ ಕೌಶಲ ಅಭಿವೃದ್ಧಿ ಆಗಬೇಕು. ಮೈಸೂರು ವಿವಿ ಈ ನೀತಿ ಆಳವಡಿಸಿಕೊಳ್ಳಲು ಮುಂದಾಗಬೇಕು ಎಂದು ಸಲಹೆ ನೀಡಿದರು.

**ಕನ್ನಡದಲ್ಲಿ ಶುಭ ಕೋರಿದ ಪ್ರಧಾನಿ:** ಘಟಿಕೋತ್ಸವ ಭಾಷಣದಲ್ಲಿ ಪ್ರಧಾನಿ ಮೋದಿ ಎಲ್ಲರಿಗೂ ನಾಡಹಬ್ಬ ಮೈಸೂರು ದಸರಾದ ಶುಭಾಶಯಗಳು ಎಂದು ಕನ್ನಡದಲ್ಲಿ ಹೇಳುವ ಮೂಲಕ ಶುಭ ಕೋರಿದರು. ಈ ಬಾರಿ ಕೊರೋನಾ ಕಾರಣದಿಂದ ದಸರಾ ಅದ್ದೂರಿಯಾಗಿ ನಡೆಯುತ್ತಿಲ್ಲ. ಜೊತೆಗೆ ನೆರೆಯಿಂದಾಗಿ ಎಲ್ಲರೂ ನಷ್ಟ ಅನುಭವಿಸಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಸೇರಿ ಜನರಿಗೆ ನೆರವಾಗಲು ಎಲ್ಲ ರೀತಿಯ ಪ್ರಯತ್ನ ಪಡುತ್ತಿವೆ. ನಾವು ಜನರೊಂದಿಗಿದ್ದೇವೆ ಎಂದು ಅಭಯ ನೀಡಿದರು.

**ಶಿಕ್ಷಣವೇ ಜೀವನದ ಬೆಳಕು:** ಹಿರಿಯ ಸಾಹಿತಿ ಗೊರೂರು ರಾಮಸ್ವಾಮಿ ಐಯ್ಯಂಗಾರ್ ಅವರ ಘೋಷವಾಕ್ಯ 'ಶಿಕ್ಷಣವೇ ಜೀವನದ ಬೆಳಕು' ಎಂಬುದನ್ನು ಸ್ಮರಿಸಿದ ಮೋದಿ, ಇಂದು ನಮ್ಮ ದೇಶ ಪರಿವರ್ತನೆಯತ್ತ ಹೋಗುತ್ತಿರುವಾಗ ಗೋರೂರರ ಈ ಮಾತು ಸದಾ ಪ್ರಸ್ತುತ. ಈ ಕ್ಯಾಂಪಸ್‌ಗೆ ಕುವೆಂಪು ಅವರು ಮಾನಸಗಂಗೋತ್ರಿ ಎಂದು ಹೆಸರಿಟ್ಟಿದ್ದಾರೆ. ಆ ಹೆಸರಿನಂತೆ ನಮ್ಮ ಮನಸ್ಸಿನ ಯೋಜನೆಗಳು ಸದಾ ಚಲನಶೀಲವಾಗಿರಬೇಕು ಎಂದು ವಿದ್ಯಾರ್ಥಿಗಳಲ್ಲಿ ಹುಮ್ಮಸ್ಸು ತುಂಬಿದರು.

**ನಾಲ್ವಡಿ ಒಡೆಯರ ಸ್ಮರಣೆ ಮಾಡಿದ ಮೋದಿ:** ಪ್ರಾಚೀನ ಭಾರತದ ಸಮೃದ್ಧ ಶಿಕ್ಷಣ ವ್ಯವಸ್ಥೆ ಹಾಗೂ ದೇಶದ ಭವಿಷ್ಯ ರೂಪಿಸುವ ಪ್ರಮುಖ ಶಿಕ್ಷಣ ಕೇಂದ್ರವಾದ ಮೈಸೂರು ವಿಶ್ವವಿದ್ಯಾಲಯ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್ ಎಂ. ವಿಶ್ವೇಶ್ವರಯ್ಯ ಅವರ ದೂರದೃಷ್ಟಿ ಫಲವಾಗಿದೆ ಎಂದು ಪ್ರಧಾನಿ ಬಣ್ಣಿಸಿದರು. 102 ವರ್ಷಗಳ ಹಿಂದೆ ಇದೇ ದಿನ ನಾಲ್ವಡಿ ಅವರು ಮೊದಲ ಘಟಿಕೋತ್ಸವ ಭಾಷಣ ಮಾಡಿದ್ದರು. ಅದರ ನಂತರ ಈ ರತ್ನಗರ್ಭ ಪ್ರಾಂಗಣದಲ್ಲಿ ಇದುವರೆಗೂ ಸರ್ವಪಲ್ಲಿ ರಾಧಕೃಷ್ಣನ್ ಸೇರಿ ಎಷ್ಟೋ ಮಹಾನ್ ವ್ಯಕ್ತಿಗಳು ಪದವಿ ಪಡೆದಿದ್ದಾರೆ. ಪದವಿ ಪಡೆದ ಸಾಕಷ್ಟು ಮಂದಿ ದೇಶಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದು ಸ್ಮರಿಸಿದರು. ಇನ್ಫೋಸಿಸ್ ಫೌಂಡೇಷನ್ ಅಧ್ಯಕ್ಷೆ ಸುಧಾಮೂರ್ತಿ ಅವರಿಗೆ ಅವರ ಅನುಪಸ್ಥಿತಿಯಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ವರ್ಚುವಲ್ ಮೂಲಕ ಬೆಂಗಳೂರಿನಿಂದ ರಾಜ್ಯಪಾಲ ವಜುಭಾಯ್ ವಾಲಾ ಉಪಸ್ಥಿತರಿದ್ದರು. ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥ ನಾರಾಯಣ್, ಕುಲಸಚಿವ ಪ್ರೊ.ಆರ್. ಶಿವಪ್ಪ, ಪರೀಕ್ಷಾಂಗ ಕುಲಸಚಿವ ಪ್ರೊ. ಕೆ.ಎಂ.ಮಹದೇವನ್ ಇತರರು ಇದ್ದರು.

ಖುದ್ದು ನಾನೇ ವಿಶ್ವವಿದ್ಯಾಲಯಕ್ಕೆ ಆಗಮಿಸಿ ಪದವಿ ಪಡೆಯುತ್ತಿರುವವರನ್ನು ಮುಖತ: ಭೇಟಿಯಾಗಿದ್ದರೆ ಚೆನ್ನಾಗಿತ್ತು. ಆದರೆ, ಕೊರೋನಾ ಕಾರಣದಿಂದಾಗಿ ನಾವು ವರ್ಚುವಲ್ ಆಗಿ ಭೇಟಿಯಾಗುತ್ತಿದ್ದೇವೆ. ಘಟಿಕೋತ್ಸವದ ಈ ಸ್ಮರಣೀಯ ಸಮಾರಂಭದ ಸಂದರ್ಭದಲ್ಲಿ ನಿಮಗೆಲ್ಲರಿಗೂ ಅಭಿನಂದನೆಗಳು, ಪದವಿ ಪ್ರಮಾಣಪತ್ರ ಪಡೆಯುತ್ತಿರುವ ಎಲ್ಲರಿಗೂ ಶುಭಾಶಯಗಳು. ಬೋಧಕ ಸಿಬ್ಬಂದಿಗೂ ಶುಭಾಶಯಗಳನ್ನು ಕೋರುತ್ತೇನೆ ಎಂದು ಪ್ರಧಾನಿ ಹೇಳಿದರು.

ಆಧಾರ: ವಿಜಯವಾಣಿ, ದಿನಾಂಕ:20.10.2020

## 20. ಬೋನಸ್ ಹಬ್ಬ

ಹಬ್ಬದ ಋತುವಿನಲ್ಲಿ ಜನರ ಖರ್ಚು ವೆಚ್ಚ ಹೆಚ್ಚಲಿ, ಖರೀದಿ ಮಟ್ಟವು ಸುಧಾರಣೆಯಾಗಲಿ ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರ, ತನ್ನ ವ್ಯಾಪ್ತಿಯಲ್ಲಿ ಬರುವ ಸಿಬ್ಬಂದಿಗೆ ದಸರಾ–ದೀಪಾವಳಿ ಹಬ್ಬದ ಬೋನಸ್ ಘೋಷಣೆ ಮಾಡಿದೆ.

ಕೇಂದ್ರ ಸರ್ಕಾರಿ ನಾನ್ – ಗೆಜೆಟೆಡ್ ಸಿಬ್ಬಂದಿಗೆ ಈ ಬೋನಸ್ ಸಿಗಲಿದೆ. ಒಟ್ಟಾರೆ 30 ಲಕ್ಷ ಮಂದಿಗೆ ಹಬ್ಬದ ಖುಷಿ ದೊರೆಯಲಿದೆ. ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಈ ಬೋನಸ್ ಸಿಬ್ಬಂದಿ ಅಕೌಂಟ್‌ಗೆ ನೇರವಾಗಿ ವರ್ಗಾವಣೆ ಮೂಲಕ ಒಂದೇ

ಕಂತಿನಲ್ಲಿ ಬಂದು ಬೀಳುವ ಸಾಧ್ಯತೆ ಇದೆ. ಕ್ಯಾಬಿನೆಟ್ ಸಭೆ ನಂತರ ಮಾತನಾಡಿದ ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ವಿಜಯದಶಮಿಯೊಳಗೇ ಎಲ್ಲಾ ಸಿಬ್ಬಂದಿಗೂ ಬೋನಸ್ ಸಿಗುವಂತೆ ಮಾಡಲಾಗುವುದು ಎಂದಿದ್ದಾರೆ.

**ಖರೀದಿ ಉತ್ತೇಜನಕ್ಕಾಗಿ ಕ್ರಮ:** ಜನರ ಕೈನಲ್ಲಿ ಹಣ ಓಡಾಡಲಿ ಮತ್ತು ಖರೀದಿ ಸಾಮರ್ಥ್ಯವು ಹೆಚ್ಚಲಿ ಎಂಬ ಕಾರಣದಿಂದ ಕೇಂದ್ರ ಸರ್ಕಾರ ಒಂದರ ಹಿಂದೆ ಒಂದರಂತೆ ಪ್ರೋತ್ಸಾಹಕ ಕ್ರಮ ತೆಗೆದುಕೊಳ್ಳುತ್ತಿದೆ. ಆಕ್ಟೋಬರ್–12ರಂದು ಕೇಂದ್ರ ಸರ್ಕಾರಿ ನೌಕರರಿಗೆ ಸಾಲದ ರೂಪದಲ್ಲಿ ರೂ.10,000 ನೀಡಲು ನಿರ್ಧರಿಸಲಾಗಿತ್ತು. ಅಷ್ಟೇ ಅಲ್ಲ, ಮೂರು ವರ್ಷಗಳ ಎಲ್‌ಟಿಸಿ ಭತ್ಯೆಯನ್ನು ನಗದು ರೂಪದಲ್ಲಿ ನೀಡಿ ಇದನ್ನು ವೆಚ್ಚ ಮಾಡುವವರಿಗೆ ತೆರಿಗೆ ವಿನಾಯಿತಿಯನ್ನು ನೀಡುವ ಬಗ್ಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದರು. ರಾಜ್ಯಗಳು ಹೆಚ್ಚಿನ ವೆಚ್ಚ ಮಾಡಲಿ ಎಂಬ ಉದ್ದೇಶದಿಂದ ರೂ.12 ಸಾವಿರ ಕೋಟಿಗಳನ್ನು 50 ವರ್ಷ ಅವಧಿಗೆ ವಿಶೇಷ ಬಡ್ಡಿರಹಿತ ಸಾಲವನ್ನು ಘೋಷಿಸಲಾಗಿತ್ತು.

ಆಧಾರ: ಉದಯವಾಣಿ, ದಿನಾಂಕ:22.10.2020

## 21. ಜನ್‌ಧನ್‌ಗೆ ಜೈ ಎಂದ ಜನಸಾಮಾನ್ಯ

ನರೇಂದ್ರ ಮೋದಿ ಅವರು ಪ್ರಧಾನಿಯಾಗಿ ಅಧಿಕಾರಿ ಸ್ವೀಕರಿಸಿದ ವರ್ಷದಲ್ಲಿ ಜಾರಿಗೆ ತಂದ ಹಲವಾರು ಮಹತ್ವಾಕಾಂಕ್ಷಿ ಯೋಜನೆಗಳ ಪೈಕಿ ಪ್ರಧಾನಮಂತ್ರಿ ಜನ್ ಧನ್ ಯೋಜನೆ (ಪಿಎಂಜೆಡಿವೈ) ಪ್ರಮುಖವಾದದ್ದು. ಸ್ವಾತಂತ್ರ್ಯ ನಂತರದ 50 ವರ್ಷಗಳ ಬಳಿಕವೂ ವಿಶ್ವದ ಎರಡನೇ ಅತಿ ಹೆಚ್ಚು ಜನಸಂಖ್ಯೆ ಹೊಂದಿದ ರಾಷ್ಟ್ರದ ಮುಕ್ಕಾಲು ಪಾಲು ಜನರ ಬಳಿ ಬ್ಯಾಂಕ್ ಖಾತೆ ಇರಲಿಲ್ಲ. ಮನೆಯಲ್ಲಿ ನಂಬಿಕಸ್ಥರ ಬಳಿಯೇ ತಮ್ಮ ಆದಾಯವನ್ನು ಶೇಖರಿಸಿಟ್ಟು ಕಡೆಗೆ ಅದರ ಸರಿಯಾದ ಲೆಕ್ಕವೇ ಸಿಗದೆ ಮೋಸ ಹೋಗುತ್ತಿದ್ದವರು ಆದೆಷ್ಟೋ ಮಂದಿ. ಬ್ಯಾಂಕಿಂಗ್ ಎಂಬ ಮುಖ್ಯವಾಹಿನಿಯಿಂದ ಮರೆಮಾಚಿದ ಸಣ್ಣ ಹಣದ ಹರಿವು ಕೂಡ ಬ್ಯಾಂಕಿಂಗ್ ಕ್ಷೇತ್ರದಲ್ಲಿ ವಿಲೀನವಾಗಲಿ ಎಂಬ ಸದುದ್ದೇಶದಿಂದ ಆರಂಭಗೊಂಡ ಯೋಜನೆ ಜನ್‌ಧನ್. ಮುಖ್ಯವಾಗಿ ಕಡುಬಡವರಿಗೆ ಕನಿಷ್ಠ ಠೇವಣಿ ಇರಿಸದೆ ಬ್ಯಾಂಕ್ ಖಾತೆ ಹೊಂದುವ ಅವಕಾಶ ಇದರಿಂದ ಲಭ್ಯವಾಯಿತು. ಇದು ಮೋದಿ ಸರ್ಕಾರದ ವಿಶಿಷ್ಟ ಕೊಡುಗೆ ಎನಿಸಿತು. ಅದರ ಅಂಕಿ–ಅಂಶ ಇಲ್ಲಿದೆ.

**63% ಗ್ರಾಮೀಣ ಜನಧನ್ ಖಾತೆದಾರರ ಪ್ರಮಾಣ**

**ಸೌಲಭ್ಯಗಳು:**

- ಉಳಿತಾಯ ಖಾತೆ ತೆರೆಯಲು ಸರಳೀಕೃತ ಕೆವೈಸಿ, ಝೀರೋ ಬ್ಯಾಲೆನ್ಸ್.
- ಖಾತೆದಾರರಿಗೆ ಡೆಬಿಟ್ ಕಾರ್ಡ್ ಜೊತೆಗೆ ರೂ.2 ಲಕ್ಷದವರೆಗೆ ಕವರೇಜ್ ಇರುವ ಉಚಿತ ಅಪಘಾತ ವಿಮೆ.
- ಮೈಕ್ರೋ ವಿಮೆ, ಬಳಕೆ ಓವರ್ ಡ್ರಾಫ್ಟ್ ಮೈಕ್ರೋ – ಪಿಂಚಣಿ ಮತ್ತು ಮೈಕ್ರೋ– ಕ್ರೆಡಿಟ್ ಸೌಲಭ್ಯಗಳು

| ವರ್ಷವಾರು ಖಾತೆ ಹೆಚ್ಚಳ | |
|---|---|
| 2015 | 17.90 ಕೋಟಿ |
| 2016 | 25.10 ಕೋಟಿ |
| 2017 | 30.09 ಕೋಟಿ |
| 2018 | 32.54 ಕೋಟಿ |
| 2019 | 36.79 ಕೋಟಿ |
| 2020 | 40.35 ಕೋಟಿ |

ಆಧಾರ: ವಿಜಯ ಕರ್ನಾಟಕ, ದಿನಾಂಕ:22.10.2020

## 22. ಇನ್ನೂ ಪ್ರಾದೇಶಿಕ ಭಾಷೆಗಳಲ್ಲೂ ಜೆಇಇ ಮೈನ್

ಐಐಟಿ ಮತ್ತು ಇತರ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ತಾಂತ್ರಿಕ ಶಿಕ್ಷಣ ಪಡೆಯಲು ಇರುವ ಜಾಯಿಂಟ್ ಎಂಟ್ರಾನ್ಸ್ ಎಕ್ಸಾಮಿನೇಷನ್ (ಜೆಇಇ)ನ ಪ್ರಧಾನ ಸುತ್ತಿನ ಪರೀಕ್ಷೆಯನ್ನು ಇನ್ನು ಮುಂದೆ ಇನ್ನಷ್ಟು ಪ್ರಾದೇಶಿಕ ಭಾಷೆಗಳಲ್ಲೂ ಬರೆಯಲು ಅನುಮತಿ ಕಲ್ಪಿಸಲಾಗಿದೆ. ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ನಿಶಾಂಕ್ ಈ ಕುರಿತು ಟ್ವೀಟ್ ಮಾಡಿದ್ದಾರೆ.

ಸರ್ಕಾರ ಅಂಗೀಕರಿಸಿದ ಹೊಸ ಶಿಕ್ಷಣ ನೀತಿಯ ಅನ್ವಯ ಈ ನಿರ್ಧಾರಕ್ಕೆ ಬರಲಾಗಿದೆ. ಪ್ರಸ್ತುತ ಹಿಂದಿ, ಇಂಗ್ಲೀಷ್ ಮತ್ತು ಗುಜರಾತಿ ಭಾಷೆಗಳಲ್ಲಿ ಪರೀಕ್ಷೆಗೆ ಅನುಮತಿಯಿದೆ. ಆದರೆ, 2021 ರಿಂದ ಅನ್ವಯವಾಗುವಂತೆ ಜೆಇಇ ಪರೀಕ್ಷೆಗಳನ್ನು ಇನ್ನಷ್ಟು ಪ್ರಾದೇಶಿಕ ಭಾಷೆಗಳಲ್ಲಿ ಬರೆಯಲು ಅವಕಾಶ ನೀಡಲಾಗುತ್ತದೆ ಎಂದು ಸಚಿವ ನಿಶಾಂಕ್ ತಿಳಿಸಿದ್ದಾರೆ. ಆದರೆ, ಯಾವ್ಯಾವ ಭಾಷೆಗಳು ಎಂಬ ಮಾಹಿತಿಯನ್ನು ನೀಡಿಲ್ಲ.

ರಾಜ್ಯಗಳ ಮಟ್ಟದಲ್ಲಿನ ಎಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶ ಪಡೆಯಲು ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಲಾಗುತ್ತದೆ ಎಂದು ಸಚಿವರು ಬರೆದುಕೊಂಡಿದ್ದಾರೆ. ಪ್ರೋಗ್ರಾಮ್ ಫಾರ್ ಇಂಟರ್ ನ್ಯಾಷನಲ್ ಸ್ಟೂಡೆಂಟ್ ಅಸೆಸ್‌ಮೆಂಟ್ (ಪಿಐಎಸ್‌ಎ) ಪರೀಕ್ಷೆಯಲ್ಲಿ ಕೂಡ ಪ್ರಾದೇಶಿಕ ಭಾಷೆಗೆ ಅವಕಾಶ ಕಲ್ಪಿಸಲಾಗುತ್ತದೆ. ಆದೇ ಮಾದರಿಯನ್ನು ಜೆಇಇ ಮೈನ್ ಪರೀಕ್ಷೆಯಲ್ಲಿ ಅಳವಡಿಸಿಕೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ಸೂಚಿಸಿರುವ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಆಧಾರ: ಉದಯವಾಣಿ, ದಿನಾಂಕ:23.10.2020

## 23. ಕೇಂದ್ರದಿಂದಲೇ ಉಚಿತ ಲಸಿಕೆ

ಬಹು ನಿರೀಕ್ಷಿತ ಕೊರೋನಾ ನಿಯಂತ್ರಣ ಲಸಿಕೆ ಲಭ್ಯವಾದ ಕೂಡಲೇ ವಿಶೇಷ ಯೋಜನೆ ಮೂಲಕ ಲಸಿಕೆ ವಿತರಿಸುವುದಾಗಿ ತಿಳಿಸಿರುವ ಕೇಂದ್ರ ಸರ್ಕಾರವು ಈ ಸಂಬಂಧ ಪ್ರತ್ಯೇಕ ಯೋಜನೆ ರೂಪಿಸದಂತೆ ರಾಜ್ಯಗಳಿಗೆ ಸಲಹೆ ಮಾಡಿದೆ.

ಲಸಿಕೆ ಲಭ್ಯವಾಗುತ್ತಿದ್ದಂತೆ ದೇಶದ 130 ಕೋಟಿ ಜನರಿಗೆ ಅದನ್ನು ವಿತರಿಸಲು ಕೋವಿಡ್–19 ಲಸಿಕಾ ಕಾರ್ಯಕ್ರಮ ಎಂಬ ವಿಶೇಷ ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೆ ತರಲಿದೆ. ಕೇಂದ್ರ ಸರ್ಕಾರವೇ ನೇರವಾಗಿ ಲಸಿಕೆಯನ್ನು ಖರೀದಿಸಿ, ಆದ್ಯತಾ ವಲಯಗಳಿಗೆ ಉಚಿತವಾಗಿ ಹಂಚಿಕೆ ಮಾಡಲಿದೆ. ಪ್ರಸ್ತುತ ರಾಜ್ಯ ಹಾಗೂ ಜಿಲ್ಲೆಗಳಲ್ಲಿ ಇರುವ ವ್ಯವಸ್ಥೆ ಮೂಲಕ ಇದರ ಪೂರೈಕೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

**30 ಕೋಟಿ ಆದ್ಯತಾ ಫಲಾನುಭವಿಗಳು:** ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ನೆರವಿನಿಂದ ಸುಮಾರು 30 ಕೋಟಿ ಆದ್ಯತಾ ಫಲಾನುಭವಿಗಳನ್ನು ಗುರುತಿಸುವ ಪ್ರಕ್ರಿಯೆ ಆರಂಭಿಸಿದ್ದು, ಇವರಿಗೆ ಮೊದಲ ಹಂತದಲ್ಲೇ ಲಸಿಕೆ ದೊರೆಯಲಿದೆ.

ವಿಶೇಷ ಕೋವಿಡ್–19 ಲಸಿಕಾ ಕಾರ್ಯಕ್ರಮದ ಜೊತೆಗೆ ಪ್ರಸ್ತುತ ಇರುವ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮವು ಮುಂದುವರಿಯಲಿದೆ. ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ಪ್ರಕ್ರಿಯೆಗಳು ತಂತ್ರಜ್ಞಾನ ಹಾಗೂ ಪೂರೈಕೆ ಜಾಲವನ್ನು ಕೋವಿಡ್–19 ಲಸಿಕೆಗೂ ಬಳಸಿಕೊಳ್ಳಲಾಗುವುದು ಎಂದು ಮೂಲಗಳಿಂದ ತಿಳಿದುಬಂದಿದೆ. ಪ್ರಸ್ತುತ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ಅಡಿಯಲ್ಲಿ ಶಿಶುಗಳು, ಮಕ್ಕಳು ಮತ್ತು ಗರ್ಭಿಣಿಯರಿಗೆ ವಿವಿಧ ರೋಗಗಳಿಂದ ರೋಗ ನಿರೋಧಕ ಶಕ್ತಿ ಪಡೆಯಲು ಸರ್ಕಾರ ಉಚಿತವಾಗಿ ಲಸಿಕೆ ನೀಡುತ್ತಿದೆ.

ಲಸಿಕೆ ನೀಡುವವರಿಗೆ ಆನ್‌ಲೈನ್ ಮೂಲಕ ವಿಶೇಷ ತರಬೇತಿ ನೀಡಲಾಗುವುದು ಎಲೆಕ್ಟ್ರಾನಿಕ್ ವ್ಯಾಕ್ಸಿನ್ ಇಂಟಲಿಜೆನ್ಸ್ ನೆಟವರ್ಕ್ (ಇ-ವಿನ್) ಹೆಸರಿನ ಸಂಪರ್ಕ ಜಾಲವನ್ನು ಸರ್ಕಾರ ರಚಿಸಿದ್ದು, ಇದು ಲಸಿಕೆಯ ದಾಸ್ತಾನು, ಸಂಗ್ರಹ ಲಭ್ಯತೆಗಳ ಬಗ್ಗೆ ರಿಯಲ್ ಟೈಮ್ ಮಾಹಿತಿ ಒದಗಿಸಲಿದೆ. ಕೋವಿಡ್-19 ಲಸಿಕೆ ವಿತರಣೆಗೆ ರಚಿಸಲಾಗಿರುವ ವಿಶೇಷ ಸಮಿತಿಯು ಈಗಾಗಲೇ ದೇಶಾದ್ಯಂತ ಲಸಿಕೆಗಳ ಸಂಗ್ರಹಕ್ಕೆ ಇರುವ ಶೈತ್ಯಾಗಾರಗಳ ಸೌಲಭ್ಯ ಜಾಲವನ್ನು ಗುರುತಿಸಿದೆ.

ಸದ್ಯ ದೇಶದಲ್ಲಿ 'ಸಾರ್ವತ್ರಿಕ ಲಸಿಕೆ ಯೋಜನೆ' ಜಾರಿಯಲ್ಲಿದ್ದು, ಇದರ ಮೂಲಕ ಮಕ್ಕಳ ಹಾಗೂ ಗರ್ಭಿಣಿಯವರಿಗೆ ಉಚಿತ ಲಸಿಕೆ ನೀಡಲಾಗುತ್ತಿದೆ. ಈ ಜಾಲವನ್ನು ಕೊರೋನಾ ಲಸಿಕೆ ಕಾರ್ಯಕ್ರಮಕ್ಕೆ ಸೇರಿಸಿಕೊಳ್ಳಲು ತೀರ್ಮಾನಿಸಲಾಗಿದೆ.

**ಆಧಾರ್ ಕಡ್ಡಾಯ:** ನವೆಂಬರ್ ಅಂತ್ಯದ ವೇಳೆಗೆ ಆದ್ಯತಾ ಗುಂಪನ್ನು ಪಟ್ಟಿ ಮಾಡುವಂತೆ ರಾಜ್ಯಗಳಿಗೆ ಕೋರಲಾಗಿದೆ. ಲಸಿಕೆ ಪಡೆದ ಫಲಾನುಭವಿಗಳ ಸಂಪರ್ಕ ಕಾಯ್ದುಕೊಳ್ಳಲು ಆಧಾರ್ ಸಂಖ್ಯೆಯೊಂದಿಗೆ ಜೋಡಿಸಲು ಸರ್ಕಾರ ನಿರ್ಧರಿಸಿದೆ.

**7 ಲಕ್ಷಕ್ಕಿಂತ ಕಡಿಮೆ ಸಕ್ರಿಯ ಪ್ರಕರಣ:** ದೇಶದಲ್ಲಿ 63 ದಿನಗಳ ಬಳಿಕ ಸಕ್ರಿಯ ಕೊರೋನಾ ಪ್ರಕರಣಗಳ ಸಂಖ್ಯೆ 7 ಲಕ್ಷಕ್ಕಿಂತ ಕಡಿಮೆ ದಾಖಲಾಗಿದೆ. ಆಗಸ್ಟ್ 22 ರಂದು 6,97,330 ಸಕ್ರಿಯ ಪ್ರಕರಣಗಳಿದ್ದವು. 73,979 ಸೋಂಕಿತರು ಗುಣಮುಖರಾಗುವ ಮೂಲಕ ಸಕ್ರಿಯ ಪ್ರಕರಣಗಳ ಸಂಖ್ಯೆ 6,95,509ಕ್ಕೆ ಇಳಿದಿದೆ. ಇನ್ನು 54.3356 ಹೊಸ ಪ್ರಕರಣಗಳು ವರದಿಯಾಗಿವೆ. ದೇಶಾದ್ಯಂತ 690 ಸಾವುಗಳು ವರದಿಯಾಗಿವೆ. ಚೇತರಿಕೆ ಪ್ರಮಾಣ ಶೇ.89.53ಕ್ಕೆ ಏರಿಕೆಯಾಗಿದ್ದರೆ ಸಾವಿನ ಪ್ರಮಾಣವು ಶೇ.1.51ಕ್ಕೆ ಇಳಿಕೆಯಾಗಿದೆ.

**ಸ್ವದೇಶಿ ಲಸಿಕೆ 60% ಪರಿಣಾಮಕಾರಿ:** ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ ಸಹಯೋಗದಲ್ಲಿ ಭಾರತ್ ಬಯೋಟೆಕ್ ಅಭಿವೃದ್ಧಿಪಡಿಸುತ್ತಿರುವ ಲಸಿಕೆ 'ಕೊವ್ಯಾಕ್ಸಿನ್'ನ ಮೂರನೇ ಹಂತದ ಕ್ಲಿನಿಕಲ್ ಟ್ರಯಲ್‌ಗೆ ಡ್ರಗ್ಸ್ ಕಂಟ್ರೋಲರ್ ಜನರಲ್ ಆಫ್ ಇಂಡಿಯಾ (ಡಿಸಿಜಿಐ) ಅವರಿಂದ ಅನುಮೋದನೆ ಲಭಿಸಿದೆ. ನಮ್ಮ ಲಸಿಕೆಯು ಆರಂಭಿಕ ಹಂತದಲ್ಲಿ ಶೇ.60 ರಷ್ಟು ಯಶಸ್ವಿಯಾಗುತ್ತದೆ ಎನ್ನುವ ವಿಶ್ವಾಸವಿದೆ. ಮೂರನೇ ಹಂತದ ಕ್ಲಿನಿಕಲ್ ಟ್ರಯಲ್‌ನ ಮಧ್ಯಂತರ ವರದಿಯು 2021ರ ಏಪ್ರಿಲ್ ಅಥವಾ ಮೇ ವೇಳೆಗೆ ಲಭ್ಯವಾಗಲಿದೆ ಎಂದು ಭಾರತ್ ಬಯೋಟೆಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ಪ್ರಸಾದ್ ತಿಳಿಸಿದೆ. ಲಸಿಕೆ ಅಭಿವೃದ್ಧಿಪಡಿಸುತ್ತಿರುವ ತಂಡದಲ್ಲಿ ಪ್ರಸಾದ್ ಸಹ ಇದ್ದಾರೆ. ವಿಶ್ವ ಆರೋಗ್ಯ ಸಂಸ್ಥೆ ಅಮೆರಿಕದ ಫುಡ್ ಆಂಡ್ ಡ್ರಗ್ ಆಡ್ಮಿನಿಸ್ಟ್ರೇಷನ್ ಹಾಗೂ ಭಾರತದ ಕೇಂದ್ರಿಯ ಔಷಧ ಗುಣಮಟ್ಟ ಸಂಸ್ಥೆ ಮಾನದಂಡಗಳ ಪ್ರಕಾರ ಯಾವುದೇ ಲಸಿಕೆ ಅಥವಾ ಔಷಧ ಶೇ.50 ರಷ್ಟು ಪರಿಣಾಮಕಾರಿಯಾಗಿದ್ದರೆ ವಾಣಿಜ್ಯ ಬಳಕೆಗೆ ಉತ್ಪಾದಿಸಬಹುದಾಗಿದೆ.

**ಯಾರಿಗೆ ಮೊದಲ ಲಸಿಕೆ:** ಕೋವಿಡ್ ಲಸಿಕಾ ಕಾರ್ಯಕ್ರಮಕ್ಕಾಗಿ ಸರ್ಕಾರ ಫಲಾನುಭವಿಗಳನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಿದೆ. ಅವುಗಳ ವಿವರ ಹೀಗಿದೆ

ವರ್ಗ-1: ವೈದ್ಯರು, ಎಂಬಿಬಿಎಸ್ ವಿದ್ಯಾರ್ಥಿಗಳು, ನರ್ಸ್‌ಗಳು, ಆಶಾ ಕಾರ್ಯಕರ್ತೆಯವರು ಸೇರಿ ಸುಮಾರು ಒಂದು ಕೋಟಿ ಆರೋಗ್ಯ ವಲಯದ ವೃತ್ತಿಪರರು ಈ ವರ್ಗದಲ್ಲಿದ್ದಾರೆ.

ವರ್ಗ-2: ಕೊರೋನಾ ಕೆಲಸದಲ್ಲಿ ತೊಡಗಿರುವ ಸ್ಥಳೀಯ ಸಂಸ್ಥೆ ನೌಕರರು, ಪೊಲೀಸ್ ಮತ್ತು ಸೇನಾ ಪಡೆಗಳ ಸಿಬ್ಬಂದಿ ಸೇರಿದಂತೆ ಸುಮಾರು 2 ಕೋಟಿ ಮಂದಿ ಎರಡನೇ ವರ್ಗಕ್ಕೆ ಸೇರಿದ್ದಾರೆ.

ವರ್ಗ-3: 50 ವರ್ಷಕ್ಕೂ ಹೆಚ್ಚು ವಯಸ್ಸಿನ ಸುಮಾರು 26 ಕೋಟಿ ಮಂದಿಯನ್ನು ಗುರುತಿಸಲಾಗಿದೆ.

ವರ್ಗ–4: 50 ವರ್ಷದ ಒಳಗಿನ ಅಂದರೆ, ಇತರೆ ಆರೋಗ್ಯ ಸಮಸ್ಯೆಗಳನ್ನು ಹೊಂದಿರುವ ಜನತೆ ಇಂತಹವರು ಸುಮಾರು 1 ಕೋಟಿ ಜನ ಇರಬಹುದೆಂದು ಅಂದಾಜಿಸಲಾಗಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:24.10.2020

## 24. 2022ಕ್ಕೆ ಸಿದ್ಧಗೊಳ್ಳಲಿದೆ ಹೊಸ ಸಂಸತ್ ಭವನ

ಹೊಸ ಸಂಸತ್ ಭವನದ ಕಾಮಗಾರಿ ಈ ವರ್ಷದ ಡಿಸೆಂಬರ್‌ನಲ್ಲಿ ಆರಂಭವಾಗಲಿದ್ದು, 2022ರ ಅಕ್ಟೋಬರ್ ವೇಳೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಹೊಸ ಭವನದಲ್ಲಿ ಪ್ರತಿ ಸಂಸದರಿಗೂ ಪ್ರತ್ಯೇಕ ಕಚೇರಿ ಇರಲಿದ್ದು, ಕಾಗದ ರಹಿತ ಸಂವಹನಕ್ಕಾಗಿ ಡಿಜಿಟಲ್ ಮೂಲಸೌಕರ್ಯ ಒಳಗೊಂಡಿರಲಿದೆ. ವಿರಾಮದ ಕೈಸಾಲೆ (ಲೌಂಜ್) ಕಾನ್‌ಸ್ಟಿಟ್ಯೂಷನ್ ಹಾಲ್, ಗ್ರಂಥಾಲಯ, ಸಂಸದೀಯ ಸಮಿತಿ ಕೋಣೆಗಳು, ಭೋಜನದ ಹಾಲ್ ಇರಲಿದೆ.

ವಾಯು ಮತ್ತು ಶಬ್ದ ಮಾಲಿನ್ಯ ತಡೆಯುವಂತಹ ತಂತ್ರಜ್ಞಾನ ಬಳಸಿ ಈ ಕಟ್ಟಡ ನಿರ್ಮಾಣವಾಗಲಿದ್ದು, ಭಾರತದ ಪ್ರಜಾತಂತ್ರ ಪರಂಪರೆಯ ದ್ಯೋತಕವಾದ ಕಾನ್‌ಸ್ಟಿಟ್ಯೂಷನ್ ಹಾಲ್ ವಿಸ್ತಾರವಾಗಿರಲಿದೆ. ಸಂವಿಧಾನದ ಮೂಲಪ್ರತಿಯ ಡಿಜಿಟಲ್ ರೂಪದಲ್ಲಿ ಇಲ್ಲಿ ಪ್ರದರ್ಶಿಸಲಾಗುತ್ತದೆ. ಈ ಹಾಲ್ ವೀಕ್ಷಣೆಗೆ ಸಾರ್ವಜನಿಕರಿಗೆ ಅವಕಾಶ ಇರಲಿದೆ. ಹೊಸ ಕಟ್ಟಡದಲ್ಲಿ ಉಭಯ ಸದನಗಳ ಸಭಾಂಗಣ ಇರಲಿದೆ. ಭವಿಷ್ಯದ ದೃಷ್ಟಿಯಿಂದ 888 ಸದಸ್ಯರಿಗೆ ಆಸನ ಕಲ್ಪಿಸುವಷ್ಟು ವಿಶಾಲತೆಯನ್ನು ಲೋಕಸಭೆ ಹೊಂದಲಿದೆ.

ರಾಜ್ಯ ಸಭೆ 384 ಸದಸ್ಯರು ಆಸೀನರಾಗುವಷ್ಟು ದೊಡ್ಡದಾಗಿರಲಿದೆ. ಹಾಲಿ ಲೋಕಸಭೆಯಲ್ಲಿ 543 ಸದಸ್ಯರಿದ್ದು, ರಾಜ್ಯಸಭೆ 245 ಸದಸ್ಯ ಬಲ ಇದೆ. ಹೊಸ ಕಟ್ಟಡ ಕುರಿತು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಪರಿಶೀಲನಾ ಸಭೆ ನಡೆಸಿದ್ದು, ಕಾಮಗಾರಿ ಗುಣಮಟ್ಟದಾಗಿರಬೇಕು ಎಂದು ಸೂಚಿಸಿದ್ದಾರೆ. ಡಿಸೆಂಬರ್‌ನಲ್ಲಿ ಶಿಲಾನ್ಯಾಸ ನಡೆಸಬಹುದು ಎಂದು ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ. ಆದರೆ, ದಿನಾಂಕ ನಿಗದಿಯಾಗಿಲ್ಲ. ರಾಷ್ಟ್ರಪತಿ ರಾಮನಾಥ ಕೋವಿಂದ, ಉಪ ರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು, ಪ್ರಧಾನಿ ನರೇಂದ್ರ ಮೋದಿ ಇನ್ನಿತರ ಗಣ್ಯರನ್ನು ಭೂಮಿಪೂಜೆ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗುವುದು ಎಂದು ಸಚಿವಾಲಯ ತಿಳಿಸಿದೆ.

**ಟಾಟಾ ಪ್ರಾಜೆಕ್ಟ್‌ಗೆ ಗುತ್ತಿಗೆ:** ಹಾಲಿ ಸಂಸತ್ ಭವನದ ಸಮೀಪದಲ್ಲೇ ಹೊಸ ಸಂಸತ್ ಭವನ ನಿರ್ಮಾಣವಾಗಲಿದ್ದು, ಈ ಗುತ್ತಿಗೆಯನ್ನು ಟಾಟಾ ಪ್ರಾಜೆಕ್ಟ್ ಲಿಮಿಟೆಡ್ ಪಡೆದುಕೊಂಡಿದೆ. ರೂ.861.9 ಕೋಟಿ ಅಂದಾಜು ವೆಚ್ಚವಾಗಿದೆ.

**93 ವರ್ಷದ ಹಳೇ ಭವನ:** ಈಗಿರುವ ಸಂಸತ್ ಭವನವು (ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್) ಬ್ರಿಟಿಷರ ಕಾಲದಲ್ಲಿ ನಿರ್ಮಾಣವಾಗಿದೆ. ಈ ಕಟ್ಟಡದ ವಿನ್ಯಾಸವನ್ನು ಎಡ್ವಿನ್ ಲುಟೆಯೆನ್ಸ್ ಮತ್ತು ಹರ್ಬರ್ಟ್ ಬೇಕರ್ ಮಾಡಿದ್ದು, 1921ರಲ್ಲಿ ಕಾಮಗಾರಿ ಆರಂಭವಾಗಿ 1927ಕ್ಕೆ ಮುಗಿಯಿತು. ಇದಕ್ಕೆ ರೂ.83 ಲಕ್ಷ ವೆಚ್ಚವಾಗಿತ್ತು. 1927ರ ಜನವರಿ 18ರಂದು ಈ ಕಟ್ಟಡವನ್ನು ಭಾರತದ ವೈಸ್‌ರಾಯ್ ಲಾರ್ಡ್ ಇರ್ವಿನ್ ಉದ್ಘಾಟಿಸಿದರು. ಮರುದಿನವೇ ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್ ಮೊದಲ ಸಭೆ ನೆಡೆಯಿತು. 1956ರಲ್ಲಿ ಇನ್ನೆರಡು ಅಂತಸ್ತನ್ನು ನಿರ್ಮಿಸಲಾಯಿತು.

ಆಧಾರ: ವಿಜಯವಾಣಿ, ದಿನಾಂಕ:24.10.2020

## 25. ಚಕ್ರಬಡ್ಡಿ ಮನ್ನಾ ಸಿಹಿ

ಕೊರೋನಾ ಕಾಲದಲ್ಲಿ ತೀವ್ರ ಸಂಕಷ್ಟಕ್ಕೀಡಾಗಿದ್ದ ಸಾಲ ಗ್ರಾಹಕರಿಗೆ ಕೇಂದ್ರ ಸರ್ಕಾರ ದಸರಾ ಗಿಫ್ಟ್ ನೀಡಿದೆ. ಸುಪ್ರೀಂಕೋರ್ಟ್‌ಗೆ ಈಗಾಗಲೇ ಹೇಳಿರುವಂತೆ, ರೂ.2 ಕೋಟಿವರೆಗಿನ ಸಾಲಗಳ

ಮೇಲಿನ ಚಕ್ರಬಡ್ಡಿಯನ್ನು ಮನ್ನಾ ಮಾಡುವುದಾಗಿ ಘೋಷಿಸಿದೆ. ಈ ಸಂಬಂಧ ಅಧಿಕೃತವಾಗಿ ಮಾರ್ಗಸೂಚಿ ಬಿಡುಗಡೆ ಮಾಡಿದೆ.

ಅಷ್ಟೇ ಅಲ್ಲ ಈ ಚಕ್ರ ಬಡ್ಡಿ ಸಾಲ ಮನ್ನಾ ಸೌಲಭ್ಯ ನವೆಂಬರ್ 5ರೊಳಗೆ ಎಲ್ಲರಿಗೂ ಸಿಗುವಂತೆ ಮಾಡಲಾಗುತ್ತದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಆದರೆ, ಇದು ಮಾರ್ಚ್‌ನಿಂದ ಆಗಸ್ಟ್ ಅಂತ್ಯದವರೆಗಿನ ಸಾಲದ ಕಂತುಗಳ ಮುಂದೂಡಿಕೆ ಅವಧಿಗೆ ಮಾತ್ರ ಅನ್ವಯವಾಗಲಿದೆ. ಈ ಅವಧಿಯಲ್ಲಿ ಪ್ರತಿ ತಿಂಗಳು ಕಂತನ್ನು ಸಂಪೂರ್ಣವಾಗಿ ಅಥವಾ ಭಾಗಶ:ವಾಗಿ ಕಟ್ಟಿದ ಗ್ರಾಹಕರಿಗೂ ಅನ್ವಯಿಸಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ. ಮೊದಲಿಗೆ ಬ್ಯಾಂಕುಗಳು ಗ್ರಾಹಕರ ಚಕ್ರಬಡ್ಡಿಯನ್ನು ಮನ್ನಾ ಮಾಡಬೇಕು. ನಂತರ, ಕೇಂದ್ರ ಸರ್ಕಾರ ಈ ಹಣವನ್ನು ಆಯಾ ಬ್ಯಾಂಕುಗಳಿಗೆ ತುಂಬಿಕೊಡಲಿದೆ.

**ದೀಪಾವಳಿ ನಿಮ್ಮ ಕೈನಲ್ಲಿ ಎಂದಿದ್ದ ಸುಪ್ರೀಂ:** ಸಾಲ ಮೊರೊಟೋರಿಯಂ ಅವಧಿಯನ್ನು ಸ್ಥಗಿತ ಮಾಡಿದ ನಂತರ ಕೆಲವು ಗ್ರಾಹಕರು, ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು. ಕಂತು ಪಾವತಿ ಮುಂದೂಡಿಕೆ ಅವಧಿಯನ್ನು ಇನ್ನಷ್ಟು ವಿಸ್ತರಣೆ ಮಾಡಬೇಕು ಮತ್ತು ಮೊರೊಟೋರಿಯಂ ಅವಧಿಯಲ್ಲಿ ಚಕ್ರಬಡ್ಡಿಯನ್ನು ಕಡಿತ ಮಾಡಬೇಕು ಎಂದು ಮನವಿ ಮಡಲಾಗಿತ್ತು. ಮೊದಲಿಗೆ ಕೇಂದ್ರ ಸರ್ಕಾರ ಬಡ್ಡಿ ಮನ್ನಾಗೆ ಒಪ್ಪಿರಲಿಲ್ಲ. ಆದರೆ, ಮೊರೊಟೋರಿಯಂ ಅವಧಿಯನ್ನು ಬೇಕಾದರೆ ಬ್ಯಾಂಕುಗಳೇ ಎರಡು ವರ್ಷದವರೆಗೆ ವಿಸ್ತರಣೆ ಮಾಡಿಕೊಳ್ಳಬಹುದು ಎಂದಿತು. ನಂತರದಲ್ಲಿ ಕೇಂದ್ರ ಸರ್ಕಾರ ಚಕ್ರಬಡ್ಡಿ ಮನ್ನಾ ಮಾಡುವ ಬಗ್ಗೆ ಸುಪ್ರೀಂಕೋರ್ಟ್‌ನಲ್ಲಿ ಹೇಳಿತ್ತು. ಆಗ ಸುಪ್ರೀಂಕೋರ್ಟ್ ಗ್ರಾಹಕರ ಸಿಹಿ ದೀಪಾವಳಿ ನಿಮ್ಮ ಕಡೆಯೇ ಇದೆ, ಬೇಗ ನಿರ್ಧಾರ ಕೈಗೊಳ್ಳಿ ಎಂದಿತ್ತು.

**ರೂ.6 ಸಾವಿರ ಕೋಟಿ ಹೊರೆ:** ಈ ಸೌಲಭ್ಯದಿಂದಾಗಿ ಕೇಂದ್ರ ಸರ್ಕಾರದ ಬೊಕ್ಕಸಕ್ಕೆ ಸುಮಾರು ರೂ.5.5 ಸಾವಿರ ಕೋಟಿಯಿಂದ ರೂ.6 ಸಾವಿರ ಕೋಟಿಗಳವರೆಗೆ ಹೊರೆ ಬೀಳಬಹುದು ಎಂದು ಅಂದಾಜಿಸಲಾಗಿದೆ. ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ನಿರ್ಧರಿಸಲಾಗಿತ್ತು. ಈ ಪ್ರಕರಣ ಸುಪ್ರೀಂಕೋರ್ಟ್‌ನಲ್ಲಿ ಇದ್ದುದರಿಂದ ಕೇಂದ್ರ ಸರ್ಕಾರ ಪ್ರಕಟಿಸಿರಲಿಲ್ಲ. ಈಗ ಸುಪ್ರೀಂಕೋರ್ಟ್ ಅನುಮತಿ ಮೇರೆಗೆ ಅಧಿಕೃತವಾಗಿ ಮಾರ್ಗಸೂಚಿ ಹೊರಡಿಸಿದೆ.

**ಫಲಾನುಭವಿಗಳು ಯಾರು:–**

- ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಾಲಗಾರರು
- ಶೈಕ್ಷಣಿಕ ಸಾಲ ಪಡೆದ ಗ್ರಾಹಕರು
- ಮನೆ ನಿರ್ಮಾಣಕ್ಕಾಗಿ ಪಡೆದ ಸಾಲ
- ಗೃಹೋಪಯೋಗಿ ವಸ್ತುಗಳ ಖರೀದಿಗಾಗಿ ಮಾಡಿದ ಸಾಲ
- ವೃತ್ತಿಪರರು ಮಾಡಿರುವ ವೈಯಕ್ತಿಕ ಸಾಲ.
- ವಾಹನಗಳ ಖರೀದಿಗಾಗಿ ಮಾಡಿದ ಸಾಲ.
- ಕ್ರೆಡಿಟ್ ಕಾರ್ಡ್ ಮೇಲಿನ ಬಾಕಿ
- ಬಳಕೆ (ಉಪಭೋಗ) ಸಾಲ ಪಡೆದವರು.

ಗ್ರಾಹಕರು ಪಡೆದ ಸಾಲದ ಮೇಲಿನ ಸರಳ ಬಡ್ಡಿ ಮತ್ತು ಚಕ್ರಬಡ್ಡಿಯನ್ನು ತಾಳೆ ಹಾಕಿ ಇಲ್ಲಿ ವ್ಯತ್ಯಾಸ ಬರುವ ಹಣವನ್ನು ಗ್ರಾಹಕರ ಖಾತೆಗಳಿಗೆ ಬ್ಯಾಂಕು ಮತ್ತು ಹಣಕಾಸು ಸಂಸ್ಥೆಗಳು ವಾಪಸ್ಸು ಹಾಕುತ್ತವೆ. ಈ ಆರು ತಿಂಗಳ ಅವಧಿಯಲ್ಲಿ ಸಾಲ ವಾಪಸ್ಸು ಮಾಡಿದವರಿಗೂ ಅನ್ವಯವಾಗುವಂತೆ

ಮಾಡುವ ಸಲುವಾಗಿ, ಈ ಅವಧಿಯಲ್ಲಿ ಅವರು ಕಟ್ಟಿರುವ ಕಂತಿನ ಹಣವನ್ನು ನಿರ್ಲಕ್ಷ್ಯ ಮಾಡಲಾಗುತ್ತದೆ. ಈ ಮೂಲಕ ಅವರಿಗೂ ಯೋಜನೆಯ ಲಾಭ ಸಿಗುವಂತೆ ಮಾಡಲಾಗುತ್ತದೆ.

**ಎಸ್.ಬಿ.ಐ. ನೋಡಲ್ ಏಜೆನ್ಸಿ:** ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವನ್ನು ನೋಡಲ್ ಏಜೆನ್ಸಿಯನ್ನಾಗಿ ಮಾಡಲಾಗಿದೆ. ಈ ಬ್ಯಾಂಕಿಗೆ ಕೇಂದ್ರ ಸರ್ಕಾರ ಹಣವನ್ನು ಕಳುಹಿಸಲಿದೆ. ಇಲ್ಲಿಂದ ಇತರೆ ಬ್ಯಾಂಕುಗಳು ತಾವು ನೀಡಿದ ಪರಿಹಾರದ ಬಾಬ್ತುವನ್ನು ಪಡೆಯಬಹುದಾಗಿದೆ. ಮೊದಲಿಗೆ ಬ್ಯಾಂಕುಗಳು ತಮ್ಮ ಕ್ಲೇಮ್ ಅನ್ನು ಎಸ್‌ಬಿಐಗೆ ಸಲ್ಲಿಸಬೇಕು. ಇದು ಪರಿಶೀಲನೆ ಮಾಡಿ ಬಳಿಕ ಪರಿಹಾರ ನೀಡಲಿದೆ.

**ಷರತ್ತುಗಳು ಅನ್ವಯ:** ಹಣಕಾಸು ಸಚಿವಾಲಯ ಹೊರಡಿಸಿರುವ ಮಾರ್ಗಸೂಚಿಯಲ್ಲಿ ಯಾರಿಗೆಲ್ಲಾ ಈ ಸೌಲಭ್ಯ ಅನ್ವಯವಾಗಲಿದೆ ಹಾಗೂ ಯಾರಿಗೆ ಅನ್ವಯವಾಗುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿಸಲಾಗಿದೆ. ಜೊತೆಗೆ ರೂ.2 ಕೋಟಿಗಳವರೆಗೆ ಸಾಲ ಪಡೆದವರಿಗಷ್ಟೇ ಈ ಸೌಲಭ್ಯ ಸಿಗಲಿದೆ. ದೊಡ್ಡ ಮಟ್ಟದ ಸಾಲ ಪಡೆದವರಿಗೆ ಅನ್ವಯಿಸುವುದಿಲ್ಲ. ಸಣ್ಣ ಮಟ್ಟದ ಸಾಲ ಗ್ರಾಹಕರನ್ನೇ ಗುರಿಯಾಗಿಸಿ ಈ ಸೌಲಭ್ಯ ನೀಡಲಾಗುತ್ತಿದೆ.

- ಫೆ.29ಕ್ಕೆ ಅನ್ವಯವಾಗುವಂತೆ ಗ್ರಾಹಕರು ಸಾಲದ ಕಂತಿನಿಂದ ತಪ್ಪಿಸಿಕೊಂಡಿರಬಾರದು.
- ಹಣಕಾಸು ಸಂಸ್ಥೆಗಳು ಎಂದರೆ ಬ್ಯಾಂಕುಗಳ ಪಿಎಸ್‌ಬಿ, ಸಹಕಾರಿ ಬ್ಯಾಂಕುಗಳು ಮಾತ್ರ.
- ಮಾರ್ಚ್1 ರಿಂದ ಆಗಸ್ಟ್ 30ರವರೆಗಿನ ಅವಧಿಗೆ ಮಾತ್ರ ಈ ಸೌಲಭ್ಯ ಅನ್ವಯ.
- ನವೆಂಬರ್ 5ರೊಳಗೆ ಬ್ಯಾಂಕುಗಳು ಗ್ರಾಹಕರಿಗೆ ಈ ಯೋಜನೆಯ ಅನುಕೂಲ ಮಾಡಿಕೊಡಬೇಕು.
- ಡಿಸೆಂಬರ್–15ರೊಳಗೆ ಬ್ಯಾಂಕುಗಳು ಕೇಂದ್ರ ಸರ್ಕಾರದಿಂದ ತಾವು ಭರಿಸಿರುವ ಹಣ ಪಡೆಯಬಹುದು.

ಆಧಾರ: ಉದಯವಾಣಿ, ದಿನಾಂಕ:25.10.2020

## 26. ಎಲ್ಲರಿಗೂ ಉಚಿತ ಲಸಿಕೆ

ದೇಶದ ಎಲ್ಲ ನಾಗರಿಕರಿಗೂ ಕೊರೋನಾ ಲಸಿಕೆಯನ್ನು ಉಚಿತವಾಗಿ ವಿತರಿಸಲಾಗುವುದು ಎಂದು ಕೇಂದ್ರ ಪಶುಸಂಗೋಪನೆ ಖಾತೆ ಸಹಾಯಕ ಸಚಿವ ಪ್ರತಾಪ್ ಸಾರಂಗಿ ಘೋಷಿಸಿದ್ದಾರೆ.

ಬಿಹಾರ ವಿಧಾನಸಭೆ ಚುನಾವಣಾ ಪ್ರಣಾಳಿಕೆಯಲ್ಲಿ ಬಿಜೆಪಿ, ರಾಜ್ಯದ ಜನರಿಗೆ ಉಚಿತ ಲಸಿಕೆ ನೀಡುವುದಾಗಿ ಆಶ್ವಾಸನೆ ನೀಡಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾದ ಹಿನ್ನೆಲೆಯಲ್ಲಿ ಈ ಹೇಳಿಕೆ ಮಹತ್ವ ಪಡೆದಿದೆ.

ಬಿಜೆಪಿಯ ಲಸಿಕೆ ಆಶ್ವಾಸನೆ ವಿವಾದ ಸೃಷ್ಟಿಸಿದ ಬೆನ್ನಲ್ಲೇ ಒಡಿಶಾದಲ್ಲಿ ಮಾತನಾಡಿದ ಸಚಿವ ಸಾರಂಗಿ, ದೇಶವಾಸಿಗಳೆಲ್ಲರಿಗೂ ಉಚಿತ ಲಸಿಕೆ ಒದಗಿಸುವುದಾಗಿ ಪ್ರಧಾನಿ ಮೋದಿಯವರೇ ಭರವಸೆ ನೀಡಿದ್ದಾರೆ. ಅಲ್ಲದೆ, ಪ್ರತಿಯೊಬ್ಬ ವ್ಯಕ್ತಿಗೆ ಲಸಿಕೆ ವಿತರಿಸಲು ತಲಾ ರೂ.500 ವೆಚ್ಚವಾಗಲಿದೆ. ಲಸಿಕೆ ಎಲ್ಲರಿಗೂ ಉಚಿತವಾಗಿ ಸಿಗುವುದು ಖಚಿತ ಎಂದು ತಿಳಿಸಿದ್ದಾರೆ.

**ದೈನಂದಿನ ಸೋಂಕಿತರ ಸಂಖ್ಯೆ ಇಳಿಕೆ:** 24 ಗಂಟೆಗಳಲ್ಲಿ ದೇಶಾದ್ಯಂತ 45,148 ಪ್ರಕರಣ ಪತ್ತೆಯಾಗಿದ್ದು, 480 ಮಂದಿ ಸಾವಿಗೀಡಾಗಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

**ಮರಣ ಪ್ರಮಾಣ ಇಳಿಕೆ:** ಸಮಾಧಾನಕರ ಸಂಗತಿಯೆಂದರೆ ದೇಶದಲ್ಲಿ ಕೊರೋನಾ ಸೋಂಕಿನ ಸಂಖ್ಯೆಯೊಂದಿಗೆ ಮರಣ ಪ್ರಮಾಣವು ಇಳಿಕೆಯಾಗುತ್ತಿದೆ. ಮಾರ್ಚ್ 22ರ ಬಳಿಕ ಇದೇ ಮೊದಲ

ಬಾರಿ ಮರಣ ಪ್ರಮಾಣ ಕನಿಷ್ಠ ಮಟ್ಟಕ್ಕಿಳಿದಿದ್ದು, ಈಗ ಶೇ.1.50ಕ್ಕೆ ತಲುಪಿದೆ. ಕೇರಳ, ರಾಜಸ್ಥಾನ ಮತ್ತು ಆಂಧ್ರ ಸೇರಿ 14 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ಮರಣ ಪ್ರಮಾಣ ಶೇ.1ಕ್ಕಿಂತಲೂ ಕಡಿಮೆಯಿದೆ ಎಂದು ಆರೋಗ್ಯ ಇಲಾಖೆ ಹೇಳಿದೆ.

ಆಧಾರ: ಉದಯವಾಣಿ, ದಿನಾಂಕ:27.10.2020

## 27. ಎನ್‌ಜಿಓ ಗಳಿಗೆ ಕೇಂದ್ರ ಅಂಕುಶ

ವಿದೇಶದಿಂದ ಕೋಟ್ಯಂತರ ರೂಪಾಯಿ ದೇಣಿಗೆ ಪಡೆದು ರಾಷ್ಟ್ರವಿರೋಧಿ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಾ ರಾಷ್ಟ್ರದ ಭದ್ರತೆಗೆ ಕಂಟಕವಾಗಿರುವ ದೇಶದ ಸಾವಿರಾರು ಎನ್‌ಜಿಓಗಳಿಗೆ ರಾಷ್ಟ್ರೀಯ ತನಿಖಾ ದಳದ (ಎನ್‌ಎಐಎ) ತಂಡವು ಬಿಸಿ ಮುಟ್ಟಿಸಿದ್ದು, ಸರ್ಕಾರದ ನಿಯಮಾವಳಿಗಳನ್ನು ಉಲ್ಲಂಘಿಸಿ ವಿದೇಶದಿಂದ ಯಾವುದೇ ದೇಣಿಗೆ ಸ್ವೀಕರಿಸದಂತೆ ರಾಜ್ಯದ 1444 ಎನ್‌ಜಿಓಗಳಿಗೆ ಕೇಂದ್ರ ಸರ್ಕಾರ ನಿರ್ಬಂಧ ವಿಧಿಸಿದೆ.

ಧಾರ್ಮಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳ ಸುಧಾರಣೆ ಉದ್ದೇಶಕ್ಕೆ ಸರ್ಕಾರೇತರ ಸ್ವಯಂಸೇವಾ ಸಂಸ್ಥೆಗಳು (ಎನ್‌ಜಿಓ) ಸ್ಥಾಪನೆಗೊಳ್ಳುತ್ತಿದೆ. ಕೆಲ ಎನ್‌ಜಿಓಗಳು ನೋಂದಣಿ ಮತ್ತು ಪೂರ್ವ ಅನುಮತಿ ವಿದೇಶಿ ಕೊಡುಗೆ ನಿಯಂತ್ರಣ ಕಾಯ್ದೆ–2010ರಡಿ (ಎಫ್‌ಸಿಆರ್‌ಎ) ನೋಂದಣಿ ಮಾಡಿಕೊಂಡು ವಿದೇಶದಿಂದ ದೇಣಿಗೆ ಪಡೆದು ದೇಶ ವಿರೋಧಿ ಚಟುವಟಿಕೆಗೆ ಬಳಸುತ್ತಿದ್ದು, ರಾಷ್ಟ್ರದ ಭದ್ರತೆಗೆ ಕಂಟಕವಾಗಿವೆ. ಇಂತಹ ಎನ್‌ಜಿಓಗಳ ಮೇಲೆ ಎನ್‌ಐಎ ಕಣ್ಣಿಟ್ಟಿದ್ದು, ಬೆಂಗಳೂರು ಸೇರಿ ದೇಶಾದ್ಯಂತ ಅನೇಕ ಕಡೆ ದಾಳಿ ನಡೆಸಿ ನಿಯಮಾವಳಿ ಉಲ್ಲಂಘಿಸಿದ ಎನ್‌ಜಿಓಗಳಿಗೆ ನಿರ್ಬಂಧ ವಿಧಿಸಿದೆ.

ದೇಶದಲ್ಲಿ 49,861 ಎನ್‌ಜಿಓಗಳು ಎಫ್‌ಸಿಆರ್‌ಎ ಕಾಯ್ದೆಯಡಿ ನೋಂದಣಿ ಮಾಡಿಕೊಂಡಿವೆ. ಇದರ ಪೈಕಿ 22,420 ಎನ್‌ಜಿಓಗಳ ದೇಣಿಗೆ ದುರ್ಬಳಕೆ, ಉಗ್ರ ಚಟುವಟಿಕೆಗೆ ಪ್ರೋತ್ಸಾಹ, ವಾರ್ಷಿಕ ಲೆಕ್ಕಪತ್ರ ಸಲ್ಲಿಕೆ ಮಾಡದೆ ಇರುವುದು ಇನ್ನಿತರ ಆರೋಪದಿಂದ ವಿದೇಶಿ ದೇಣಿಗೆ ಪಡೆಯದಂತೆ ನಿರ್ಬಂಧಕ್ಕೆ ಒಳಗಾಗಿವೆ. 6,767 ಎನ್‌ಜಿಓಗಳು ನವೀಕರಣ ಮಾಡಿಕೊಳ್ಳದೆ ನಿಷ್ಕ್ರೀಯಗೊಂಡಿವೆ. 22,420 ಎನ್‌ಜಿಓಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. ದೇಶದ ವಿವಿಧ ರಾಜ್ಯಗಳ ಹೋಲಿಕೆಯಲ್ಲಿ ಕರ್ನಾಟಕದಲ್ಲಿ ಸಾಕಷ್ಟು ಎನ್‌ಜಿಓಗಳು ನೋಂದಣಿಯಾಗಿರುವ 3,652 ಎನ್‌ಜಿಓಗಳ ಪೈಕಿ 1,444 ನ್ನು ನಿರ್ಬಂಧಿಸಲಾಗಿದೆ ಎಂದು ಎಫ್‌ಸಿಆರ್‌ಎ ಮಾಹಿತಿ ನೀಡಿದೆ. ವಿದೇಶದಿಂದ ದೇಣಿಗೆ ಪಡೆಯಲು ಪೂರ್ವಾನುಮತಿ ಕಡ್ಡಾಯ. ಖರ್ಚು ವೆಚ್ಚಗಳ ಕುರಿತು ರಸೀದಿ ಸಮೇತವಾಗಿ ಅನ್‌ಲೈನ್‌ನಲ್ಲಿ ರಿಟರ್ನ್ಸ್ ಸಲ್ಲಿಸಬೇಕು. ಕೆಲ ಎನ್‌ಜಿಓಗಳು ವಿದೇಶಿ ದೇಣಿಗೆಯಿಂದಲೇ ಖಜಾನೆ ತುಂಬಿಸಿಕೊಳ್ಳುತ್ತಿವೆಯಾದರೂ ರಾಷ್ಟ್ರದ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳ ಸುಧಾರಣೆಗೆ ಬಳಸುತ್ತಿಲ್ಲ. ಬದಲಿಗೆ ಅವುಗಳ ವಿರುದ್ಧವಾಗಿ ಪ್ರಸಾರ ಹಾಗೂ ದೇಶದ ಕಾನೂನು ಉಲ್ಲಂಘನೆಗೆ ಪ್ರಚೋದನೆ ನೀಡುತ್ತಿವೆ.

ಇತ್ತೀಚೆಗೆ ಭಯೋತ್ಪಾದಕ ಚಟುವಟಿಕೆಗಳಿಗೂ ವಿದೇಶೀ ದೇಣಿಗೆ ಬಳಕೆ ಆಗುತ್ತಿರುವುದು ರಾಷ್ಟ್ರೀಯ ತನಿಖಾ ದಳದ (ಎಎನ್‌ಐಎ) ತನಿಖೆಯಿಂದ ಬಹಿರಂಗವಾಗಿದೆ. ಎನ್‌ಜಿಓಗಳಿಗೆ ದೇಣಿಗೆ ನೀಡುವ ವಿದೇಶಿ ಸಂಘ ಸಂಸ್ಥೆಗಳ ಉದ್ದೇಶವೆ ಭಾರತದ ತದ್ವಿರುದ್ಧವಾಗು ಇರುತ್ತದೆ. ದೇಶದ ಸಂಸ್ಕೃತಿ ಕಾನೂನು ಸುವ್ಯವಸ್ಥೆ, ಧಾರ್ಮಿಕತೆ ಮೇಲೆ ಶೀತಲ ಸಮರಕ್ಕೆ ಕುಮ್ಮಕ್ಕೂ ನೀಡಿರುತ್ತದೆ. ಎನ್‌ಐಎ ನಡೆಸಿರುವ ಹಲವಾರು ಪ್ರಕರಣಗಳ ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಇತ್ತೀಚೆಗೆ ಗ್ರೀನ್ ಪೀಸ್, ಆಮ್ನೆಸ್ಟಿ ವಿರುದ್ಧವೂ ಕೇಂದ್ರ ಗೃಹ ಇಲಾಖೆ ಕ್ರಮ ತೆಗೆದುಕೊಂಡಿದೆ. ಶಂಕಿತ ಉಗ್ರರಿಗೆ ಹಣ ಪೂರೈಕೆ ಆರೋಪದ ಮೇಲೆ ಜಮ್ಮು ಕಾಶ್ಮೀರ ಕೊಯಲಿಷನ್ ಆಫ್ ಸಿವಿಲ್ ಸೊಸೈಟಿಗೆ ಸೇರಿದ ಮುಖಂಡರ ಕಛೇರಿ, ಮನೆಗಳ ಮೇಲೆ ಬೆಂಗಳೂರು, ಕಾಶ್ಮೀರ, ದೆಹಲಿ ಸೇರಿ ದೇಶದ ವಿವಿಧೆಡೆ ಎನ್‌ಐಎ ಕಾರ್ಯಾಚರಣೆ

ನಡೆಸಿದೆ. ವಿದೇಶಿ ದೇಣಿಗೆ ದುರ್ಬಳಕೆ ಸಂಬಂಧ ಹಲವು ದಾಖಲೆಗಳನ್ನು ಜಪ್ತಿ ಮಾಡಿರುವುದು ತಿಳಿದುಬಂದಿದೆ.

**ಸಾವಿರಾರು ಕೋಟಿ ರೂ. ದೇಣಿಗೆ:** ವರ್ಷದಿಂದ ವರ್ಷಕ್ಕೆ ಎನ್‌ಜಿಓಗಳಿಗೆ ಸಾವಿರಾರು ಕೋಟಿ ದೇಣಿಗೆ ಹರಿದು ಬರುತ್ತಿದೆ. 2016–17ನೇ ಸಾಲಿನಲ್ಲಿ ರೂ.18,337 ಕೋಟಿ, 2017–18ರಲ್ಲಿ ರೂ.19,764 ಕೋಟಿ, 2018–19 ರಲ್ಲಿ ರೂ.20,011 ಕೋಟಿ ಎನ್‌ಜಿಓ ಖಜಾನೆಗೆ ತುಂಬಿದೆ ಎಂದು ಗೃಹ ಇಲಾಖೆ ಮೂಲಗಳಿಂದ ತಿಳಿದುಬಂದಿದೆ.

**ವಿದೇಶಿ ದೇಣಿಗೆ ನಿರ್ಬಂಧಕ್ಕೆ ಒಳಗಾದ ಪಟ್ಟಿ**

| ವರ್ಷ | ಧಾರ್ಮಿಕ | ಸಾಂಸ್ಕೃತಿಕ | ಶಿಕ್ಷಣ | ಒಟ್ಟು |
|---|---|---|---|---|
| 2017 | 627 | 1817 | 3316 | 4866 |
| 2018 | – | – | 01 | 01 |
| 2019 | 273 | 714 | 1297 | 1809 |

ಆಧಾರ: ವಿಜಯವಾಣಿ, ದಿನಾಂಕ:30.10.2020

## 28. ಅಣೆಕಟ್ಟು ನಿರ್ವಹಣೆಗೆ ರೂ.10 ಸಾವಿರ ಕೋಟಿ

ಹತ್ತೊಂಭತ್ತು ರಾಜ್ಯಗಳಲ್ಲಿರುವ 736 ಅಣೆಕಟ್ಟುಗಳನ್ನು ಮುಂದಿನ ಹತ್ತು ವರ್ಷಗಳ ಕಾಲ ನಿರ್ವಹಿಸಲು ರೂ.10,211 ಕೋಟಿಗಳ ಯೋಜನೆಗೆ ಕೇಂದ್ರ ಸಂಪುಟ ಅನುಮೋದನೆ ನೀಡಿದೆ. ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಲಶಕ್ತಿ ಖಾತೆ ಸಚಿವ ಗಜೇಂದ್ರ ಸಿಂಗ್ ಚೌಹಾಣ್ ಈ ಮಾಹಿತಿ ನೀಡಿದ್ದಾರೆ. ಎರಡು ಹಂತಗಳಲ್ಲಿ ಯೋಜನೆ ಜಾರಿ ಮಾಡಲಾಗುತ್ತದೆ ಎಂದು ಹೇಳಿದ ಚೌಹಾಣ್ ಮೊದಲ ಆರು ವರ್ಷಗಳು ಅಂದರೆ ಏಪ್ರಿಲ್ 2021ರಿಂದ ಮಾರ್ಚ್ 2031ರವರೆಗೆ. ಮೊದಲ ಹಂತದ ಯೋಜನೆ 2012ರಲ್ಲಿ ಶುರುವಾಗಿ ಹಾಲಿ ವರ್ಷ ಮುಕ್ತಾಯಗೊಂಡಿದೆ. ಈ ಅವಧಿಯಲ್ಲಿ ಏಳು ರಾಜ್ಯಗಳ 223 ಅಣೆಕಟ್ಟುಗಳ ನಿರ್ವಹಣೆ ಮತ್ತು ಇತರ ಕಾಪಿಡುವಿಕೆ ಕ್ರಮ ಕೈಗೊಳ್ಳಲಾಗಿತ್ತು ಎಂದು ಹೇಳಿದ್ದಾರೆ.

ಯೋಜನೆಯ ಒಟ್ಟು ಮೊತ್ತದ ಶೇ.80 ರಷ್ಟು ಮೊತ್ತವನ್ನು ವಿಶ್ವಬ್ಯಾಂಕ್, ಉಳಿದ ಶೇ.20ರಷ್ಟು ಮೊತ್ತವನ್ನು ಮತ್ತೊಂದು ಸಂಸ್ಥೆ ಭರಿಸಲಿದೆ. ರೂ.7 ಸಾವಿರ ಕೋಟಿ ಮೊತ್ತವನ್ನು ವಿಶ್ವಬ್ಯಾಂಕ್ ಮತ್ತು ಉಳಿದ ರೂ.3,211 ಕೋಟಿ ಮೊತ್ತವನ್ನು ಯೋಜನೆ ಜಾರಿ ಸಂಸ್ಥೆಗಳು ಭರಿಸಲಿವೆ. ಇದರ ಜೊತೆಗೆ ಒಟ್ಟು ಯೋಜನೆಯ ಮೊತ್ತದ ಪೈಕಿ ಶೇ.4ನ್ನು ಪ್ರವಾಸೋದ್ಯಮ ಅಭಿವೃದ್ಧಿ ಚಟುವಟಿಕೆಗಳಿಗೆ ಬಳಸುವ ಬಗ್ಗೆಯೂ ಪ್ರಧಾನಿ ಸಮ್ಮತಿ ಸೂಚಿಸಿರುತ್ತಾರೆ. ದೇಶದಲ್ಲಿ ಅಣೆಕಟ್ಟುಗಳು ನಿರ್ಮಾಣ ಹಂತದಲ್ಲಿವೆ ಎಂದು ಸಚಿವರು ಹೇಳಿದರು.

**ಇಥೆನಾಲ್ ದರ ಹೆಚ್ಚಳ:** ಮತ್ತೊಂದು ಮಹತ್ವದ ನಿರ್ಣಯದಲ್ಲಿ ಆರ್ಥಿಕ ವ್ಯವಹಾರಗಳಿಗಾಗಿನ ಕೇಂದ್ರ ಸಂಪುಟ ಸಮಿತಿ ಇಥೆನಾಲ್ ದರವನ್ನು ಪ್ರತಿ ಲೀಟರ್‌ಗೆ ರೂ.3,34 ಹೆಚ್ಚಿಸಲು ಅನುಮತಿ ನೀಡಿದೆ. ಕಬ್ಬಿನ ಹಾಲಿನಿಂದ ತೆಗೆಯುವ ಪ್ರತಿ ಲೀಟರ್ ಇಥೆನಾಲ್‌ಗೆ ಸದ್ಯ ರೂ.59.27 ಇದೆ. ದರ ಹೆಚ್ಚಳದ ಬಳಿಕ ರೂ.62.65ಗೆ ಆಗಲಿದೆ. ಡಿಸೆಂಬರ್‌ನಿಂದ ಹೊಸ ದರ ಜಾರಿಗೆ ಬರಲಿದೆ. ಮೊಲೇಸಸ್ ನಿಂದ ಪಡೆಯಲಾಗುವ ಇಥೆನಾಲ್ ದರವನ್ನು ಹಾಲಿ ರೂ.43.75 ರೂಪಾಯಿಗಳಿಂದ ರೂ.45.69ಕ್ಕೆ ಪರಿಷ್ಕರಿಸಲಾಗಿದೆ.

ಆಧಾರ: ಉದಯವಾಣಿ, ದಿನಾಂಕ:30.10.2020

## 29. ದಿಲ್ಲಿ: ವಾಯುಮಾಲಿನ್ಯ ಮಾಡಿದ್ರೆ 5 ವರ್ಷ ಜೈಲು, 1 ಕೋಟಿ ದಂಡ

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ವಾಯುಮಾಲಿನ್ಯ ಉಂಟು ಮಾಡಿದರೆ 5 ವರ್ಷದವರೆಗೆ ಜೈಲು ಶಿಕ್ಷೆ ಹಾಗೂ ರೂ.1 ಕೋಟಿ ವರೆಗೆ ದಂಡ ವಿಧಿಸುವ ಕಠಿಣ ಕಾನೂನನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದೆ. ಈ ಕುರಿತು ರಾಷ್ಟ್ರಪತಿಗಳ ಅಂಕಿತ ಪಡೆದು ಸುಗ್ರೀವಾಜ್ಞೆ ಹೊರಡಿಸಲಾಗಿದೆ.

ಸುಗ್ರೀವಾಜ್ಞೆಯ ಅನ್ವಯ ರಾಷ್ಟ್ರ ರಾಜಧಾನಿ ಪ್ರದೇಶ (ಎನ್‌ಸಿಆರ್) ಹಾಗೂ ಅಕ್ಕಪಕ್ಕದ ದೆಹಲಿ, ಹರಿಯಾಣ, ಪಂಜಾಬ್, ಉತ್ತರ ಪ್ರದೇಶ ಮತ್ತು ರಾಜಸ್ಥಾನಕ್ಕೆ ಅನ್ವಯಿಸುವಂತೆ ವಾಯು ಗುಣಮಟ್ಟ ನಿರ್ವಹಣೆ ಆಯೋಗ ಸ್ಥಾಪನೆ ಮಾಡಲಾಗುತ್ತದೆ. ಇದರಲ್ಲಿ 18 ಸದಸ್ಯರಿರುತ್ತಾರೆ. ಈ ಆಯೋಗವು ದೆಹಲಿ ಹಾಗೂ ಅಕ್ಕಪಕ್ಕದ ರಾಜ್ಯಗಳಲ್ಲಿ ಬೆಳೆಯ ಕೂಳೆ ಸುಡುವುದು, ವಾಹನದಿಂದ ಉಂಟಾಗುವ ಮಾಲಿನ್ಯ, ಧೂಳಿನ ಮಾಲಿನ್ಯ ದೆಹಲಿ–ಎನ್‌ಸಿಆರ್ ಪ್ರದೇಶದಲ್ಲಿ ವಾಯು ಗುಣಮಟ್ಟವನ್ನು ಹಾಳುಗೆಡುವ ಎಲ್ಲಾ ಸಂಗತಿಗಳ ವಿರುದ್ಧ ಕ್ರಮ ಕೈಗೊಳ್ಳುವ ಅಧಿಕಾರ ಹೊಂದಿದೆ.

ಆಯೋಗವು ಪ್ರತಿ ವರ್ಷ ಸಂಸತ್ತಿಗೆ ತನ್ನ ವರದಿ ನೀಡಬೇಕು. ವಾಯುಮಾಲಿನ್ಯ ಉಂಟು ಮಾಡುವ ಯಾವುದೇ ಪ್ರದೇಶ, ಘಟಕ ಅಥವಾ ಕಟ್ಟಡಗಳಲ್ಲಿ ಶೋಧ ನಡೆಸಿ ಅವುಗಳನ್ನು ಮುಚ್ಚಲು ಅಥವಾ ಅವುಗಳಿಗೆ ನೀರು ಹಾಗೂ ವಿದ್ಯುತ್ ಸರಬರಾಜು ನಿಲ್ಲಿಸುವ ಅಧಿಕಾರ ಆಯೋಗಕ್ಕೆ ಇರಲಿದೆ. ವಾಯು ಗುಣಮಟ್ಟ ನಿರ್ವಹಣೆ ಆಯೋಗವು ದಾಖಲಿಸುವ ಪ್ರಕರಣಗಳನ್ನು ಸುಪ್ರೀಂಕೋರ್ಟ್‌ನ ಹಸಿರು ಪೀಠ ಮಾತ್ರ ವಿಚಾರಣೆ ನಡೆಸಬೇಕು. ಈ ಕುರಿತು ರಾಜ್ಯಗಳ ಜೊತೆ ಯಾವುದೇ ವಿವಾದ ಏರ್ಪಟ್ಟರೂ ಆಯೋಗದ ಆದೇಶವೇ ಅಂತಿಮವಾಗಿರುತ್ತದೆ. ಆಯೋಗ ಹೊರಡಿಸುವ ಆದೇಶವನ್ನು ಉಲ್ಲಂಘಿಸುವವರಿಗೆ 5 ವರ್ಷದವರೆಗೆ ಜೈಲು ಶಿಕ್ಷೆ ಹಾಗೂ ರೂ.1 ಕೋಟಿವರೆಗೆ ದಂಡ ವಿಧಿಸಬಹುದು. ಈ ಆಯೋಗದ ರಚನೆಯೊಂದಿಗೆ ಹಿಂದೆ ಸುಪ್ರೀಂಕೋರ್ಟ್‌ನಿಂದ ನೇಮಕವಾಗಿದ್ದ ಇಪಿಸಿಎ ಸೇರಿದಂತೆ ದೆಹಲಿಯ ವಾಯುಮಾಲಿನ್ಯ ನಿಯಂತ್ರಣದ ಉದ್ದೇಶಕ್ಕಾಗಿ ಸ್ಥಾಪನೆಯಾದ ಎಲ್ಲಾ ಆಯೋಗ ಅಥವಾ ಏಜೆನ್ಸಿಗಳು ತಮ್ಮ ಕಾರ್ಯ ಸ್ಥಗಿತಗೊಳಿಸಲಿವೆ.

ಆಧಾರ: ಕನ್ನಡಪ್ರಭ, ದಿನಾಂಕ:30.10.2020

## 30. ಸಾಮಾಜಿಕ ತಾಣಗಳ ಮೇಲೆ ನಿಗಾ ಇಡಿ ರಾಜ್ಯ ಸರ್ಕಾರಗಳಿಗೆ ಕೇಂದ್ರದ ಸೂಚನೆ

ಕೊರೋನಾ ಲಸಿಕೆ ಸಂಬಂಧ ಇನ್ನು ಪ್ರಯೋಗ ನಡೆಯುತ್ತಿರುವಾಗಲೇ ಅದರ ವಿತರಣೆಗೂ ಕೇಂದ್ರ ಸರ್ಕಾರ ಭರದ ಸಿದ್ಧತೆ ಮಾಡಿಕೊಳ್ಳುತ್ತಿದೆ. ಲಸಿಕೆ ಬಗ್ಗೆ ಯಾವುದೇ ವದಂತಿಗಳು ಹರಡದಂತೆ ಸಾಮಾಜಿಕ ತಾಣಗಳ ಮೇಲೆ ನಿಗಾ ಇಡುವಂತೆಯೂ ಕೇಂದ್ರ ಸರ್ಕಾರ, ರಾಜ್ಯಗಳಿಗೆ ಸೂಚನೆ ನೀಡಿದೆ.

ಕೊರೋನಾ ಲಸಿಕೆ ವಿತರಣೆ ಸಂಬಂಧ ಸಮನ್ವಯ ಸಮಿತಿಗಳನ್ನು ರಚಿಸುವಂತೆಯೂ ರಾಜ್ಯಗಳಿಗೆ ಹೇಳಿದೆ. ಅಂದರೆ, ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ರಾಜ್ಯ ಪರಿಶೀಲನಾ ಸಮಿತಿ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಥವಾ ಆರೋಗ್ಯ ಇಲಾಖೆ ಕಾರ್ಯದರ್ಶಿ ನೇತೃತ್ವದಲ್ಲಿ ರಾಜ್ಯ ಕಾರ್ಯಪಡೆ, ಜಿಲ್ಲಾಧಿಕಾರಿ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಕಾರ್ಯಪಡೆಗಳನ್ನು ರಚಿಸುವಂತೆ ಹೇಳಿದೆ. ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ಬರೆಯಲಾಗಿದೆ.

ಒಮ್ಮೆ ಲಸಿಕೆ ಲಭ್ಯವಾದ ನಂತರ ಇದನ್ನು ಎಲ್ಲರಿಗೂ ವಿತರಣೆ ಮಾಡಲು ವರ್ಷವೇ ಹಿಡಿಯಬಹುದು. ಇದನ್ನು ಸಮರ್ಪಕವಾಗಿ ವಿತರಿಸುವ ಸಲುವಾಗಿ ಸಮನ್ವಯ ಸಮಿತಿಗಳನ್ನು ರಚಿಸಬೇಕು. ಲಸಿಕೆಯನ್ನು ಆರೋಗ್ಯ ಕಾರ್ಯಕರ್ತರಿಗೆ ನೀಡುವ ಮೂಲಕ ಈ ವಿತರಣಾ ಕಾರ್ಯವನ್ನು ಆರಂಭಿಸಲಾಗುತ್ತದೆ. ವಿತರಣೆಗೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲು ಮತ್ತು ಮೇಲುಸ್ತುವಾರಿ ವಹಿಸಲು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಸಮಿತಿಗಳನ್ನು ರಚಿಸಬೇಕು ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಹೇಳಿದ್ದಾರೆ.

ಸಾಮಾಜಿಕ ಜಾಲತಾಣಗಳ ಮೇಲೆ ನಿಗಾ ಇಡಬೇಕು. ಯಾವುದೇ ಕಾರಣಕ್ಕೂ ಲಸಿಕೆ ಬಗ್ಗೆ ತಪ್ಪು ಸಂದೇಶಗಳು ಹರಡುವುದಕ್ಕೆ ಬಿಡಬಾರದು. ವದಂತಿಗಳಿಂದ ಸಮುದಾಯಗಳು ಲಸಿಕೆಯನ್ನು ಒಪ್ಪಿಕೊಳ್ಳುವುದು ಕಷ್ಟವಾಗಲಿದೆ ಎಂದು ಅವರು ಎಚ್ಚರಿಸಿದ್ದಾರೆ. ಈ ಬಗ್ಗೆ ಕೇಂದ್ರದಿಂದ ಪತ್ರ ಬಂದಿರುವುದಾಗಿ ಕರ್ನಾಟಕ ಮುಖ್ಯ ಕಾರ್ಯದರ್ಶಿ ಹೇಳಿದ್ದಾರೆ.

**ಹಂಚಿಕೆ ಹೇಗೆ:** ಒಮ್ಮೆ ಕೊರೋನಾ ಲಸಿಕೆ ಸಿಕ್ಕ ಮೇಲೆ ಎಲ್ಲರಿಗೂ ತಲುಪುವಂತೆ ಮಾಡುವುದು ಹೇಗೆ ಎಂಬ ಬಗ್ಗೆ ಈಗಾಗಲೇ ಸಿದ್ಧತೆಗಳು ಶುರುವಾಗಿವೆ. ಇಡೀ ವಿತರಣಾ ವ್ಯವಸ್ಥೆಯಲ್ಲಿ ಗಮನಾರ್ಹ ಪಾತ್ರ ವಹಿಸುವುದು ಶೀತಲ ಸಂಗ್ರಹಾಗಾರಗಳು ಇಲ್ಲಿಂದಲೇ ಎಲ್ಲರಿಗೂ ಲಸಿಕೆ ತಲುಪಬೇಕು.

**ಪೂರೈಕೆ ಹಂತಗಳು:**

- ಲಸಿಕೆ ಉತ್ಪಾದಕರು
- ಕಂಪನಿಗಳ ಪ್ರಯೋಗಾಲಯಗಳು
- ವಿತರಣಾಗಾರರು
- ಆಸ್ಪತ್ರೆಗಳು / ಕ್ಲಿನಿಕ್‌ಗಳು
- ಫಲಾನುಭವಿಗಳು
- ಸ್ಥಳೀಯ ಏರ್‌ಪೋರ್ಟ್‌ಗಳಿಗೆ ರವಾನೆ.
- ಸಾರ್ವಜನಿಕ ಆರೋಗ್ಯ ಲಸಿಕೆ ಪೂರೈಕೆ ವ್ಯವಸ್ಥೆ
- ರಾಜ್ಯ/ಪ್ರಾದೇಶಿಕ ವಿಭಾಗೀಯ ಮೆಡಿಕಲ್ ಕೇಂದ್ರಗಳು
- ಜಿಲ್ಲಾ ಕೇಂದ್ರಗಳು
- ಸಮುದಾಯ ಆರೋಗ್ಯ ಕೇಂದ್ರಗಳು / ಪ್ರಾಥಮಿಕ ಆರೋಗ್ಯ ಕೇಂದ್ರಗಳು
- ಫಲಾನುಭವಿಗಳು.

ಆಧಾರ: ಉದಯವಾಣಿ, ದಿನಾಂಕ:30.10.2020

## 31. ಕೃಷಿ, ಟ್ರ್ಯಾಕ್ಟರ್ ಸಾಲಕ್ಕೆ ಚಕ್ರ ಬಡ್ಡಿ ಮನ್ನಾ ಇಲ್ಲ : ಕೇಂದ್ರ

ಕೇಂದ್ರ ಸರ್ಕಾರ ಕಳೆದ ವಾರ ಘೋಷಿಸಿರುವ ಮುಂದೂಡಿಕೆ ಆಗಿರುವ ಸಾಲದ ಕಂತುಗಳ ಮೇಲಿನ ಚಕ್ರ ಬಡ್ಡಿ ಮನ್ನಾ ಯೋಜನೆ, ಕೃಷಿ ಮತ್ತು ಕೃಷಿ ಸಂಬಂಧಿತ ಸಾಲಗಳಿಗೆ ಅನ್ವಯ ಆಗುವುದಿಲ್ಲ ಎಂದು ಹಣಕಾಸು ಸಚಿವಾಲಯ ಸ್ಪಷ್ಟನೆ ನೀಡಿದೆ.

ಚಕ್ರ ಬಡ್ಡಿಗೆ ಪರಿಹಾರ ನೀಡುವ ಯೋಜನೆಗೆ ಸಂಬಂಧಿಸಿದಂತೆ ಪ್ರಶ್ನೋತ್ತರ ಮಾಲಿಕೆಯನ್ನು ಬಿಡುಗಡೆ ಮಾಡಲಾಗಿದ್ದು, ಎಂಎಸ್‌ಎಂಇ ಸಾಲ, ಶಿಕ್ಷಣ, ಗೃಹಪಹೋಗಿ ವಸ್ತುಗಳ ಖರೀದಿ, ವೈಯಕ್ತಿಕ ವೃತ್ತಿಪರ ಮತ್ತು ಬಳಕೆಗೆ ಸಂಬಂಧಿಸಿದ ಸಾಲಗಳಿಗೆ ಚಕ್ರ ಬಡ್ಡಿ ಮನ್ನಾ ಅನ್ವಯ ಆಗಲಿದೆ.

ಬಾಕಿ ಉಳಿಸಿಕೊಂಡಿರುವ ಕ್ರೆಡಿಟ್ ಕಾರ್ಡ್ ಪಾವತಿಯನ್ನು ಯೋಜನೆಗೆ ಪರಿಗಣಿಸಲಾಗಿದೆ. ಆದರೆ, ಬೆಳೆ ಸಾಲ, ಟ್ರ್ಯಾಕ್ಟರ್ ಖರೀದಿ ಸಾಲ ಹಾಗೂ ಕೃಷಿ ಸಂಬಂಧಿತ ಚಟುವಟಿಕೆಗಳ ಮೇಲಿನ ಸಾಲವನ್ನು ಚಕ್ರ ಬಡ್ಡಿ ಮನ್ನಾ ಯೋಜನೆಗೆ ಪರಿಗಣಿಸಲಾಗಿಲ್ಲ ಎಂದು ಹಣಕಾಸು ಸಚಿವಾಲಯ ಬಿಡುಗಡೆ ಮಾಡಿರುವ ಪ್ರಶ್ನೋತ್ತರದಲ್ಲಿ ತಿಳಿಸಲಾಗಿದೆ.

ಆಧಾರ: ಕನ್ನಡಪ್ರಭ, ದಿನಾಂಕ:31.10.2020

## 32. ಎಲ್ಲ ಉದ್ಯೋಗಿಗಳಿಗೂ ಎಲ್‌ಟಿಸಿ ನಗದು

ಜನರ ಕೈಯಲ್ಲಿ ಹಣ ಹರಿದಾಡಿಸಬೇಕು. ಈ ಮೂಲಕ ಅವರ ಖರೀದಿ ಸಾಮರ್ಥ್ಯ ಹೆಚ್ಚಳ ಮಾಡಬೇಕು ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರ ತನ್ನ ವ್ಯಾಪ್ತಿಯ ನೌಕರರಿಗೆ ಘೋಷಿಸಿದ್ದ ಪ್ರವಾಸಿ ರಜೆ ವಿನಾಯಿತಿ (ಎಲ್‌ಟಿಸಿ) ಸೌಲಭ್ಯವನ್ನು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿರುವ ಎಲ್ಲ ಉದ್ಯೋಗಿಗಳಿಗೂ ವಿಸ್ತರಿಸಿದೆ.

ಇದು ಸರ್ಕಾರಿ ಉದ್ಯೋಗದಲ್ಲಿರುವವರಿಗಷ್ಟೇ ಅಲ್ಲ ಖಾಸಗಿ ಉದ್ಯೋಗಿಗಳಿಗೂ ಅನ್ವಯವಾಗಲಿದೆ ಎಂದು ತಿಳಿಸಿದೆ. ಹಣಕಾಸು ಸಚಿವಾಲಯದ ಹೇಳಿಕೆ ಪ್ರಕಾರ ಎಲ್‌ಟಿಸಿ ನಗದು ಮೇಲಿನ ತೆರಿಗೆ ವಿನಾಯ್ತಿತಿಯು ಕೇಂದ್ರ ಸರ್ಕಾರೇತರ ಉದ್ಯೋಗಿಗಳಿಗೆ ಅನ್ವಯವಾಗಲಿದೆ.

ಎಲ್‌ಟಿಸಿಯ ಅಡಿಯಲ್ಲಿ ಪ್ರವಾಸಕ್ಕೆ ಹೋಗದಿದ್ದರೂ 3 ತಿಂಗಳ ಭತ್ಯೆ ನಗದು ರೂಪದಲ್ಲಿ ಪಡೆಯಲು ಅವಕಾಶ ನೀಡಲಾಗಿತ್ತು. ಈ ಹಣಕ್ಕೆ ತೆರಿಗೆಯಿಂದ ವಿನಾಯ್ತಿ ಕೊಡಲಾಗಿತ್ತು. ಇದರ ಪ್ರಮುಖ ಉದ್ದೇಶವೇ ವೇತನದಾರರಲ್ಲಿ ಖರೀದಿ ಸಾಮರ್ಥ್ಯ ಹೆಚ್ಚಲಿ ಎಂಬುದಾಗಿತ್ತು. ಗ್ರಾಹಕರ ಖರೀದಿ ಸಾಮರ್ಥ್ಯ ಹೆಚ್ಚಿದಲ್ಲಿ ಆರ್ಥಿಕತೆಯೂ ಬೇಗನೆ ಚೇತರಿಸಿಕೊಳ್ಳಲಿದೆ ಎಂಬ ಉದ್ದೇಶವಿತ್ತು.

ಈ ಯೋಜನೆ ಅಡಿಯಲ್ಲಿ ಪ್ರತಿ ನೌಕರನಿಗೆ ಗರಿಷ್ಠ ರೂ.36 ಸಾವಿರಗಳವರೆಗೆ ನಗದು ಭತ್ಯೆ ಸಿಗಲಿದೆ. ಈ ಯೋಜನೆ 2018–19ನೇ ಸಾಲಿನಿಂದಲೇ ಅನ್ವಯವಾಗಲಿದೆ. ಜೊತೆಗೆ ಈ ಎಲ್‌ಟಿಸಿ ನಗದಿಗೆ ಯಾವುದೇ ತೆರಿಗೆ ಇರುವುದಿಲ್ಲ. ಇದಕ್ಕೆ ಷರತ್ತುಗಳು ಅನ್ವಯಿಸಲಿವೆ. ತಾವು ಪಡೆಯುವ ಎಲ್‌ಟಿಸಿ ನಗದಿನ ಮೂರು ಪಟ್ಟು ಹೆಚ್ಚು ಹಣವನ್ನು ಸರಕು ಮತ್ತು ಸೇವೆಗಳ ಖರೀದಿಗೆ ವೆಚ್ಚ ಮಾಡಿದರೆ ಇದರ ಮೇಲಿನ ಶೇ.12 ರಷ್ಟು ಜಿ.ಎಸ್.ಟಿ ಹಣದಿಂದ ವಿನಾಯಿತಿ ದೊರೆಯುತ್ತದೆ.

ನಾಲ್ಕು ಮಂದಿಯ ಕುಟುಂಬವೊಂದು ರೂ.1.44 ಲಕ್ಷದಷ್ಟು ಎಲ್‌ಟಿಸಿ ನಗದು ಪಡೆಯಬಹುದು. ಆಗ ಆ ಕುಟುಂಬ ಕಾರು, ಫ್ರಿಡ್ಜ್ ಅಥವಾ ಲ್ಯಾಪ್‌ಟಾಪ್ ಸೇರಿದಂತೆ ಯಾವುದೇ ವಸ್ತು ಖರೀದಿಸಲು ರೂ.4.32 ಲಕ್ಷ ವೆಚ್ಚ ಮಾಡಬೇಕು. ಆಗ ಈ ಕುಟುಂಬಕ್ಕೆ ರೂ.43.200 ತೆರಿಗೆ ವಿನಾಯಿತಿ ದೊರೆಯಲಿದೆ.

**ಕಡಿಮೆ ವೆಚ್ಚಕ್ಕೆ ಸಿಗದು ತೆರಿಗೆ ವಿನಾಯಿತಿ:** ಕೇಂದ್ರ ಸರ್ಕಾರದ ನಿಯಮಾವಳಿಗಳ ಪ್ರಕಾರ, ಎಲ್‌ಟಿಸಿ ಹಣದ ಮೂರು ಪಟ್ಟುವಿನಷ್ಟು ಹಣವನ್ನು ನೌಕರರು ವೆಚ್ಚ ಮಾಡಲೇ ಬೇಕು. ಒಂದು ವೇಳೆ ಇದಕ್ಕಿಂತ ಕಡಿಮೆ ಹಣ ವೆಚ್ಚ ಮಾಡಿದರೆ, ಪೂರ್ಣ ಎಲ್‌ಟಿಸಿಯು ಸಿಗುವುದಿಲ್ಲ. ತೆರಿಗೆ ವಿನಾಯಿತಿಯು ಎಷ್ಟು ವೆಚ್ಚ ಮಾಡಿರುತ್ತಾರೋ ಅಷ್ಟಕ್ಕೆ ಮಾತ್ರ ಸಿಗಲಿದೆ.

ಆಧಾರ: ಉದಯವಾಣಿ, ದಿನಾಂಕ:31.10.2020

## 33. ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಹೊಸ ನಿಯಮ

ವೈದ್ಯಕೀಯ ಶಿಕ್ಷಣದಲ್ಲಿ ಮಹತ್ವದ ಸುಧಾರಣೆ ಕ್ರಮಗಳನ್ನು ಕೈಗೊಂಡಿರುವ ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಪರಿಷ್ಕೃತ ನಿಯಮಾವಳಿಗಳನ್ನು ಪ್ರಕಟಿಸಿದೆ.

ಎಂಬಿಬಿಎಸ್ ಪ್ರವೇಶಕ್ಕೆ ಕನಿಷ್ಠ ವಾರ್ಷಿಕ ಅಗತ್ಯತೆಗಳ ನಿಯಮಗಳು 2020 ಹೆಸರಿನಲ್ಲಿ ಅಧಿಸೂಚನೆ ಹೊರಡಿಸಿದೆ. ಈ ಹಿಂದಿನ ಭಾರತೀಯ ವೈದ್ಯಕೀಯ ಮಂಡಳಿ (ಎಂಸಿಐ) ಹೊರಡಿಸಿದ್ದ ವೈದ್ಯಕೀಯ ಕಾಲೇಜುಗಳ ಕನಿಷ್ಠ ಮಾನದಂಡ ನಿಯಮಾವಳಿ 1999 ಬದಲಾಗಿ ಹೊಸ ನಿಯಮಗಳು ಜಾರಿಗೆ ಬರಲಿವೆ. ಹೊಸ ನಿಯಮಾವಳಿಗಳನ್ನು ವೈದ್ಯಕೀಯ ಕಾಲೇಜುಗಳು 2021–22ನೇ ಶೈಕ್ಷಣಿಕ ವರ್ಷದ ಪ್ರವೇಶ ಪ್ರಕ್ರಿಯೆ ಮತ್ತು ಮುಂದೆ ಸ್ಥಾಪನೆಯಾಗಲಿರುವ ಎಲ್ಲ ವೈದ್ಯಕೀಯ ಕಾಲೇಜುಗಳಿಗೂ ಅನ್ವಯವಾಗಲಿವೆ. ಹೊಸ ನಿಯಮಾವಳಿಗಳನ್ನು, ಸಂಸ್ಥೆಗಳ ಕಾರ್ಯ ನಿರ್ವಹಣಾ ಅಗತ್ಯತೆಗಳನ್ನು

ಗಮನದಲ್ಲಿಟ್ಟುಕೊಂಡು ರೂಪಿಸಲಾಗಿದೆ. ಅದರಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಗರಿಷ್ಠ ಪ್ರಮಾಣದಲ್ಲಿ ಮತ್ತು ಸರಳವಾಗಿ ಬಳಸಿಕೊಳ್ಳುವುದು, ಆಧುನಿಕ ಶೈಕ್ಷಣಿಕ ಸಂಪನ್ಮೂಲ ಸಾಮಗ್ರಿಗಳನ್ನು ಬಳಸಿಕೊಂಡು, ಒಂದೊಮ್ಮೆ ಸಂಪನ್ಮೂಲ ಕೊರತೆಯಿರುವ ಸಂದರ್ಭಗಳಲ್ಲೂ ಗುಣಮಟ್ಟದ ಶಿಕ್ಷಣ ನೀಡುವ ಕ್ರಮಗಳ ಕುರಿತು ಒತ್ತು ನೀಡಲಾಗಿದೆ ಎಂದು ಆಯೋಗವು ತಿಳಿಸಿದೆ.

**ಪ್ರಮುಖ ಬದಲಾವಣೆಗಳೇನು:** ಹೊಸ ನಿಯಮಾವಳಿಯಲ್ಲಿ ವೈದ್ಯಕೀಯ ಕಾಲೇಜುಗಳು ಹಾಗೂ ಮಾನ್ಯತೆ ಪಡೆದಿರುವ ತರಬೇತಿ ಆಸ್ಪತ್ರೆಗಳ ಸ್ಥಾಪನೆಗೆ ನಿಗದಿಪಡಿಸಲಾಗಿದ್ದ ಭೂಮಿಯ ಅಗತ್ಯ ಪ್ರಮಾಣವನ್ನು ತೆಗೆದು ಹಾಕಲಾಗಿದೆ. ಜೊತೆಗೆ, ವೈದ್ಯಕೀಯ ಶಿಕ್ಷಣ ಸಂಸ್ಥೆಯೊಂದು ಎಲ್ಲ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಹೊಂದಿರಬೇಕಾದ ಅಗತ್ಯ ಪ್ರದೇಶಗಳನ್ನು ಗುರುತಿಸಿದೆ. ಗ್ರಂಥಾಲಯಕ್ಕೆ ಬೇಕಾದ ಸ್ಥಳಾವಕಾಶ ಮತ್ತು ಪುಸ್ತಕಗಳನ್ನು ಹಾಗೂ ಜರ್ನಲ್‌ಗಳ ಸಂಖ್ಯೆಯನ್ನು ಗಣನೀಯವಾಗಿ ಇಳಿಕೆ ಮಾಡಲಾಗಿದೆ. ಲಭ್ಯವಿರುವ ಎಲ್ಲ ಬೋಧನಾ ಸ್ಥಳಗಳು. ಇ–ಕಲಿಕೆ ಮತ್ತು ಡಿಜಿಟಲ್‌ಗೆ ಸಂಯೋಜನೆಗೊಂಡಿರಬೇಕು ಎಂದು ಸೂಚಿಸಲಾಗಿದೆ. ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಸುಸಜ್ಜಿತ ಕೌಶಲ್ಯ ಪ್ರಯೋಗಾಲಯ ಮತ್ತು ಬೋಧಕರಿಗೆ ತರಬೇತಿ ನೀಡಲು ವೈದ್ಯಕೀಯ ಶಿಕ್ಷಣ ಘಟಕ ಸ್ಥಾಪನೆಯನ್ನು ಪ್ರಸ್ತಾಪಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ಸ್ಥಾನಿಕ ವೈದ್ಯರ ಮೇಲೆ ಇತ್ತಡ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿ ಆಪ್ತ ಸಮಾಲೋಚನಾ ಸೇವೆಗಳನ್ನು ಕಡ್ಡಾಯಗೊಳಿಸಲಾಗಿದೆ. ಅತಿಥಿ ಬೋಧಕರ ಸೇವೆ ಬಳಸಿಕೊಳ್ಳಲು ಅವಕಾಶ ನೀಡಲಾಗಿದೆ.

ಹೊಸ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿರುವ 300 ಹಾಸಿಗೆಗಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯು ಎರಡು ವರ್ಷಗಳ ಅವಧಿಗೆ ಲಭ್ಯವಿರುವಂತೆ ನೋಡಿಕೊಳ್ಳಬೇಕು ಎಂದು ಹೊಸ ನಿಯಮಾವಳಿಯಲ್ಲಿ ಸ್ಪಷ್ಟಪಡಿಸಲಾಗಿದೆ. ಈ ಮೊದಲಿನ ನಿಯಮಾವಳಿಯಲ್ಲಿ ಆಸ್ಪತ್ರೆ ಕಾರ್ಯನಿರ್ವಹಣೆ ಅವಧಿಯನ್ನು ನಿಗದಿಪಡಿಸಿರಲಿಲ್ಲ. ಬೋಧನಾ ಹಾಸಿಗೆ ಅಗತ್ಯವನ್ನು ಶೇ.10 ರಷ್ಟು ಕಡಿಮೆ ಮಾಡಲಾಗಿದೆ. ವೈದ್ಯಕೀಯ ಕಾಲೇಜು ಆಸ್ಪತ್ರೆಗಳು ತುರ್ತು ವೈದ್ಯಕೀಯ ವಿಭಾಗ ಹೊಂದುವುದು ಮತ್ತು ಅಲ್ಲಿ ಗಾಯಾಳುಗಳಿಗೆ ಸ್ಪಂದಿಸುವ ತರಬೇತಿ ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:01.11.2020

## 34. ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆಯಲು ಕೇಂದ್ರದ ಕ್ರಮ

ಕೆಲಸದ ಸ್ಥಳಗಳು ಕಛೇರಿಗಳಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ನೀಡಿದರೆ ಅಂತಹ ನೌಕರರ ಬೋನಸ್‌ಗೆ ಇನ್ನು ಮುಂದೆ ಕತ್ತರಿ ಬೀಳಲಿದೆ. ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ತಡೆಯಲು ಕೇಂದ್ರ ಸರ್ಕಾರ ಇಂತಹ ವಿನೂತನ ಕ್ರಮಕ್ಕೆ ಮುಂದಾಗಿದೆ. ಸರ್ಕಾರಿ ಮತ್ತು ಖಾಸಗಿ ನೌಕರರಿಬ್ಬರಿಗೂ ಇದು ಅನ್ವಯವಾಗಲಿದೆ.

ನೌಕರರ ಸಂಬಳ–ಸವಲತ್ತುಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ರೂಪಿಸುತ್ತಿರುವ 'ಕೋಡ್ ಆನ್ ವೇಜಸ್'ನಲ್ಲಿ ಈ ಹೊಸ ನಿಯಮಗಳನ್ನು ಸೇರಿಸಲಾಗಿದೆ. ಪ್ರಸ್ತುತ ಜಾರಿಯಲ್ಲಿರುವ ಬೋನಸ್ ಪಾವತಿ ಕಾಯಿದೆ–1965ರ ಸ್ಥಾನವನ್ನು 'ಕೋಡ್ ಆನ್ ವೇಜಸ್' ತುಂಬಲಿದೆ. ಹೊಸ ನಿಯಮಗಳ ಪ್ರಕಾರ ಆರೋಪಿಯು ಲೈಂಗಿಕ ದೌರ್ಜನ್ಯ ನೀಡಿದ್ದು ಸಾಬೀತಾದರೆ ಅಂಥವರ ಬೋನಸ್ ಅನ್ನು ತಡೆಹಿಡಿಯಲು ಆಡಳಿತ ಮಂಡಳಿಗೆ ಅಧಿಕಾರ ದೊರೆಯಲಿದೆ.

**ಸಮಿತಿ ನಿರ್ಣಯವೇ ಫೈನಲ್:** ಲೈಂಗಿಕ ಕಿರುಕುಳ ತಡೆ ಕಾನೂನಿನ ಮಾರ್ಗಸೂಚಿಗಳ ಪ್ರಕಾರ, ಎಲ್ಲ ಸಂಸ್ಥೆಗಳು ಕೆಲಸದ ಸ್ಥಳದಲ್ಲಿ ಲೈಂಗಿಕ ಕುರುಕುಳ ಪ್ರಕರಣಗಳ ವಿಚಾರಣೆಗಾಗಿ 'ಆಂತರಿಕ ದೂರು ಸಮಿತಿಗಳನ್ನು' (ಐಸಿಸಿ) ರಚಿಸಬೇಕು. ವಿಚಾರಣೆ ನಡೆಸಿ, ಆರೋಪಿಯನ್ನು ದೋಷಿ ಎಂದು ನಿರ್ಣಯಿಸುವ ಅಧಿಕಾರ ಈ ಸಮಿತಿಗೆ ಇರುತ್ತದೆ. ಈ ಸಮಿತಿಯು ಆರೋಪವನ್ನು ಎತ್ತಿ ಹಿಡಿದರೆ,

ಅಪರಾಧ ಸಾಬೀತಾದಂತೆ, ತಪ್ಪಿತಸ್ಥ ನೌಕರನ ವಿರುದ್ಧ ಕ್ರಮ ಜರುಗಿಸುವಂತೆ ಆಡಳಿತ ಮಂಡಳಿಗೆ ಸಮಿತಿಯು ಸೂಚಿಸಬಹುದು. ಪ್ರಕರಣವನ್ನು ಪೊಲೀಸ್ ಠಾಣೆಯವರೆಗೂ ಸಮಿತಿಯು ಕೊಂಡೊಯ್ಯಬಹುದು.

**ಯಾವುದೆಲ್ಲಾ ಲೈಂಗಿಕ ಕಿರುಕುಳ:** ದೈಹಿಕ ಸ್ಪರ್ಶ, ಲೈಂಗಿಕತೆಗೆ ಒತ್ತಾಯ, ಪೋಲಿ ಭಾಷೆ ಬಳಕೆ, ಆಶ್ಲೀಲ ದೃಶ್ಯಗಳನ್ನು ತೋರಿಸುವುದು. ಅಸಭ್ಯ ಸನ್ನೆ ಹಾಗೂ ಇತರೆ ಯಾವುದೇ ಅಸಭ್ಯ ವರ್ತನೆಯನ್ನು ಈ ನಿಯಮಗಳ ಅಡಿಯಲ್ಲಿ ಲೈಂಗಿಕ ಕಿರುಕುಳ ಎಂದು ಪರಿಗಣಿಸಲಾಗುತ್ತದೆ.

**ಕೆಲಸದ ಸ್ಥಳದ ಹೊರಗೂ ಅನ್ವಯ:** ಪ್ರಸ್ತುತ ಬೋನಸ್ ಪಾವತಿ ಕಾಯಿದೆ–1956ರ ಪ್ರಕಾರ ವಂಚನೆ, ಹಿಂಸಾತ್ಮಕ ವರ್ತನೆ, ಕಳವು ಅಥವಾ ವಿಧ್ವಂಸಕ ಕೃತ್ಯದ ಅರೋಪದಡಿ ಅಮಾನತ್ತುಗೊಂಡ ನೌಕರರಿಗೆ ಮಾತ್ರ ಬೋನಸ್ ತಡೆಹಿಡಿಯಬಹುದಾಗಿದೆ. ಇನ್ನು ಮುಂದೆ ಲೈಂಗಿಕ ಕಿರುಕುಳ ನೀಡುವವರಿಗೂ ಇದು ಅನ್ವಯವಾಗಲಿದೆ. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಕಾನೂನು (ಪಿಒಎಸ್‌ಎಚ್) ಜಾರಿಗೆ ತರಲಾಗಿದೆ. ಬೋನಸ್ ಕಡಿತ ನಿಯಮವು ಕೆಲಸದ ಸ್ಥಳದಿಂದ ಹೊರಗೆ ಮಹಿಳೆಯರಿಗೆ ಕಿರುಕುಳ ನೀಡಿದವರಿಗೂ ಅನ್ವಯಿಸುತ್ತದೆ ಎಂದು ಹೇಳಲಾಗುತ್ತಿದೆಯಾದರೂ, ಅಧಿಸೂಚನೆ ಹೊರಬಿದ್ದ ಬಳಿಕವಷ್ಟೇ ಇದು ಸ್ಪಷ್ಟವಾಗಲಿದೆ.

ಬೋನಸ್ ಪಾವತಿ ಕಾಯಿದೆಯಡಿ ನೌಕರರು ಆ ವರ್ಷ ಗಳಿಸುವ ಸಂಬಳದ ಕನಿಷ್ಠ ಶೇ.8.33 ರಷ್ಟು ಮತ್ತು ಗರಿಷ್ಠ ಶೇ.20 ರಷ್ಟನ್ನು ಬೋನಸ್ ಅಥವಾ ಅದಕ್ಕಿಂತ ಕಡಿಮೆ ಸಂಬಳ ಪಡೆಯುತ್ತಿರುವ ಎಲ್ಲರೂ ಇದಕ್ಕೆ ಅರ್ಹರಾಗಿರುತ್ತಾರೆ. 10ಕ್ಕಿಂತ ಹೆಚ್ಚು ನೌಕರರಿರುವ ಕಾರ್ಖಾನೆಗಳು, 20ಕ್ಕೂ ಹೆಚ್ಚು ಸಿಬ್ಬಂದಿಯಿರುವ ಸಂಸ್ಥೆಗಳು ಬೋನಸ್ ನೀಡಬೇಕು.

ಆಧಾರ:ವಿಜಯ ಕರ್ನಾಟಕ, ದಿನಾಂಕ:01.11.2020.

## 35. ದೇಶದ ಮೊದಲ ಸೀಪ್ಲೇನ್‌ಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ

ರಾಷ್ಟ್ರೀಯ ಏಕತಾ ದಿನಾಚರಣೆ ಪ್ರಯುಕ್ತ ಪ್ರಧಾನಿ ನರೇಂದ್ರ ಮೋದಿ ದೇಶದ ಮೊದಲ ಸೀಪ್ಲೇನ್ ಸೇವೆಗೆ ಚಾಲನೆ ನೀಡಿದ್ದಾರೆ. ಏಕತಾ ಪ್ರತಿಮೆ ಸಮೀಪದ ಕೆವಾಡಿಯಾ ಮತ್ತು ಸಬರಮತಿ ನಡುವೆ ಈ ವಿಮಾನ ಸಂಚರಿಸಲಿದೆ. ಡಬಲ್ ಇಂಜಿನ್‌ನ ಈ ಸೀಪ್ಲೇನ್‌ನಲ್ಲಿ ಮೋದಿ ಕೆವಾಡಿಯಾದಿಂದ ಸಬರಮತಿಗೆ ಪ್ರಯಾಣಿಸಿದರು. ಇದಕ್ಕೂ ಮುನ್ನ, ಸರ್ದಾರ್ ಪಟೇಲರ 182 ಮೀಟರ್ ಎತ್ತರದ ಬೃಹತ್ ಏಕತಾ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ನಮಿಸಿದರು.

ಕೆವಾಡಿಯಾ ಮತ್ತು ಸಬರಮತಿ ನಡುವೆ ಸುಮಾರು 200 ಕಿ.ಮೀ ಅಂತರವಿದ್ದು,. ರಸ್ತೆ ಮೂಲಕ ಈ ದೂರವನ್ನು ಕ್ರಮಿಸಲು ಕನಿಷ್ಠ 2 ತಾಸು ಬೇಕಾಗುತ್ತದೆ. ಸೀಪ್ಲೇನ್ ಸೇವೆಯಿಂದ ಈ ಅಂತರ 45 ನಿಮಿಷಗಳಿಗೆ ತಗ್ಗಲಿದೆ. 19 ಆಸನಗಳ ಸೀಪ್ಲೇನ್ ಪ್ರಯಾಣಕ್ಕೆ ಉಡಾನ್ ಯೋಜನೆಯಡಿ ರೂ.1,500 ಟಿಕೇಟ್ ದರ ನಿಗದಿಪಡಿಸಲಾಗಿದೆ. ಕೆವಾಡಿಯಾದಲ್ಲಿ ವಿಮಾನ ನಿಲ್ದಾಣವಿಲ್ಲವಾದರೂ ಸರ್ದಾರ್ ಸರೋವರ ಅಣೆಕಟ್ಟಿನಲ್ಲಿ ನೀರು ವರ್ಷದ ಬಹುಕಾಲ ಇರುವುದರಿಂದ ಸೀಪ್ಲೇನ್ ವ್ಯವಸ್ಥೆ ಪ್ರಾರಂಭಿಸಲಾಗಿದೆ. ಅಣೆಕಟ್ಟಿನ ಪಾಂಡ್–3 ಬಳಿ ಏರೋಡ್ರೋಮ್ ಸ್ಥಾಪಿಸಲಾಗಿದೆ. ಸೀಪ್ಲೇನ್‌ನ ಸಂಪೂರ್ಣ ನಿರ್ವಹಣೆ ಸ್ಪೈಸ್‌ಜೆಟ್‌ನ ಒಡೆತನದಲ್ಲಿದ್ದು, ಪ್ರತಿ ದಿನ ಎರಡು ವಿಮಾನಗಳು ಸಂಚರಿಸಲಿದೆ. ಟಿಕೆಟ್ ಬುಕಿಂಗ್ www.spiceshuttle.com ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

ಮಾಜಿ ಉಪ ಪ್ರಧಾನಮಂತ್ರಿ ಸರ್ದಾರ್ ವಲ್ಲಭಭಾಯಿ ಪಟೇಲರ ಜನ್ಮ ದಿನಾಚರಣೆ ನಿಮಿತ್ತ ರಾಷ್ಟ್ರೀಯ ಏಕತಾ ದಿನ ಆಚರಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಹಲವು ಕಾರ್ಯಕ್ರಮಗಳಿಗೆ ಚಾಲನೆ ನೀಡಿದ್ದಾರೆ. ಆಯುರ್ವೇದ ಗಿಡ ಮೂಲಿಕೆಗಳ ಬಗ್ಗೆ ಅರಿವು ಮೂಡಿಸಲು 17 ಎಕರೆ ಜಾಗದಲ್ಲಿ ನಿರ್ಮಿಸಲಾಗಿರುವ ಆರೋಗ್ಯ ವನ ಸೇರಿ ಹಲವು ಯೋಜನೆಗಳನ್ನು ಮೋದಿ

ಉದ್ಘಾಟಿಸಿದ್ದರು. ಜಂಗಲ್ ಸಫಾರಿ ಪಾರ್ಕ್, ಏಕ್ತಾ ಮಾಲ್, ಬೋಟ್ ರೈಡ್, ಮಕ್ಕಳ ನ್ಯೂಟ್ರಿಷನ್ ಪಾರ್ಕ್ ಸೇರಿ ಅನೇಕ ಯೋಜನೆಗಳನ್ನು ಕೆವಾಡಿಯಾದಲ್ಲಿ ಪ್ರಾರಂಭಿಸಲಾಗಿದೆ.

ಕೇಂದ್ರ ಸಶಸ್ತ್ರ ಪಡೆ ಮತ್ತು ಗುಜರಾತ್ ಪೊಲೀಸರ ಪೆರೇಡ್ ವೀಕ್ಷಣೆ ಬಳಿಕ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಪುಲ್ವಮಾ ದಾಳಿ ಕುರಿತು ವಿಪಕ್ಷಗಳು ಮಾಡಿದ ಆರೋಪಗಳ ಬಗ್ಗೆ ತೀವ್ರ ಕಿಡಿಕಾರಿದರು. ಅಧಿಕಾರಿಗಳ ಪೆರೇಡ್ ನೋಡುವಾಗ ನನ್ನ ಮನಸ್ಸಿನಲ್ಲಿ ಪುಲ್ವಮಾ ದಾಳಿಯ ಚಿತ್ರ ಮೂಡಿತು. ಆ ಘಟನೆಯನ್ನು ಎಂದಿಗೂ ಮರೆಯಲಾಗುವುದಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಕೆಲವರು ದು:ಖಿತರಾಗಿರಲಿಲ್ಲ. ಸ್ವಾರ್ಥದ ರಾಜಕೀಯ ಲಾಭ ಹುಡುಕುತ್ತಿದ್ದರು. ಪುಲ್ವಾಮಾ ದಾಳಿ ಬಗ್ಗೆ ಪಾಕಿಸ್ತಾನ ಸಂಸತ್‌ನಲ್ಲಿ ಸತ್ಯ ಹೊರಬಿದ್ದಿದ್ದು, ಇದರಿಂದ ನಮ್ಮ ವೀರ ಯೋಧರ ತ್ಯಾಗವನ್ನು ಪ್ರಶ್ನಿಸಿದವರ ನಿಜವಾದ ಮುಖ ಬಹಿರಂಗವಾಗಿದೆ ಎಂದು ಮೋದಿ ಹೇಳಿದರು.

ಜಮ್ಮು ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದುಪಡಿಸುವುದು ಸರ್ದಾರ್ ಪಟೇಲರ ಕನಸಾಗಿತ್ತು. ಇಂದು ಅದು ಈಡೇರಿದೆ. ರಾಮಮಂದಿರದ ನಿರ್ಮಾಣವನ್ನು ದೇಶ ನೋಡುತ್ತಿದೆ. ಕಾಶ್ಮೀರ ಈಗ ಅಭಿವೃದ್ಧಿಯ ಹಾದಿಯಲ್ಲಿದೆ. ಭಯೋತ್ಪಾದನೆ ವಿರುದ್ಧ ವಿಶ್ವದ ಎಲ್ಲಾ ರಾಷ್ಟ್ರಗಳು ಒಂದಾಗಬೇಕಿದೆ ಎಂದರು.

**ವೈಶಿಷ್ಟ್ಯ:**

- ಕೆವಾಡಿಯಾ–ಸಬರಮತಿ ನದಿ ನಡುವೆ ಸಂಚಾರ
- 200 ಕಿ.ಮೀ ಅಂತರ 45 ನಿಮಿಷದಲ್ಲಿ ಪ್ರಯಾಣ
- 19 ಆಸನ ವ್ಯವಸ್ಥೆ
- ವಿಮಾನದ ತೂಕ 3,377 ಕೆ.ಜಿ.
- ತಲಾ ರೂ.1,500 ಟಿಕೆಟ್ ದರ
- ಇಂಧನ ಸಾಮರ್ಥ್ಯ 1,419 ಲೀಟರ್
- 5,670 ಕೆ.ಜಿ ತೂಕ ತಡೆದುಕೊಳ್ಳುವ ಸಾಮರ್ಥ್ಯ

**ಗಣ್ಯರಿಂದ ಪಟೇಲರಿಗೆ ನಮನ:** ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ 145ನೇ ಜನ್ಮ ದಿನಾವರಣೆ ನಿಮಿತ್ತ ರಾಷ್ಟ್ರಪತಿ ರಾಮನಾಥ ಕೋವಿಂದ, ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು, ಗೃಹ ಸಚಿವ ಅಮಿತ್ ಶಾ ಸೇರಿ ದೇಶದ ಅನೇಕ ಗಣ್ಯರು ನಮನ ಸಲ್ಲಿಸಿದ್ದಾರೆ.

ಆಧಾರ: ಕನ್ನಡ ಪ್ರಭ, ದಿನಾಂಕ:01.11.2020

## 36. 4 ತಿಂಗಳಿಲ್ಲಿ ರಾಜ್ಯದಲ್ಲಿ 1000 ಜನೌಷಧಿ ಕೇಂದ್ರ

ರಾಜ್ಯದ ಬಡ ಜನತೆಗೆ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಔಷಧ ಒದಗಿಸಲು 2021ರ ಮಾರ್ಚ್ ಅಂತ್ಯದ ವೇಳೆಗೆ ರಾಜ್ಯದ ವಿವಿಧ ಭಾಗಗಳಲ್ಲಿ ಒಂದು ಸಾವಿರ ಜನರಿಕ್ ಔಷಧ ಘಟಕ ಪ್ರಾರಂಭಿಸಲಾಗುವುದು ಎಂದು ಕೇಂದ್ರ ರಾಸಾಯನಿಕ ಹಾಗೂ ರಸಗೊಬ್ಬರ ಸಚಿವ ಡಿ.ವಿ. ಸದಾನಂದಗೌಡ ತಿಳಿಸಿದ್ದಾರೆ.

ಹುಬ್ಬಳ್ಳಿಯ ಸಹಕಾರ ಮಹಾಮಂಡಲ ಕಚೇರಿಯಲ್ಲಿ ನೂತನವಾಗಿ ಪ್ರಾರಂಭವಾದ ಜನೌಷಧ ಕೇಂದ್ರವನ್ನು ಬೆಂಗಳೂರಿನಿಂದ ಆನ್‌ಲೈನ್ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು. ದೇಶದಲ್ಲಿ 2018ರಲ್ಲಿ ನಡೆದ ಸಮೀಕ್ಷೆ ಪ್ರಕಾರ ಜನತೆ ದುಡಿಮೆಯಲ್ಲಿ ಶೇ.15 ರಿಂದ ಶೇ.30ರವರೆಗೂ ಆರೋಗ್ಯಕ್ಕಾಗಿ

ವೆಚ್ಚ ಮಾಡುತ್ತಿರುವ ಅಂಶ ಗೊತ್ತಾಗಿದೆ. ಜನೌಷಧ ಮೂಲಕ ಜನರಿಗೆ ಶೇ.10 ರಿಂದ ಶೇ.90ರವರೆಗೆ ರಿಯಾಯಿತಿ ದರದಲ್ಲಿ ಗುಣಮಟ್ಟದ ಔಷಧಗಳು ಲಭ್ಯವಾಗುತ್ತಿದ್ದು, ಕಡಿಮೆ ವೆಚ್ಚದಲ್ಲಿ ಆರೋಗ್ಯ ಸುಧಾರಿಸಿಕೊಳ್ಳಬಹುದಾಗಿದೆ. ಈವರೆಗೆ ದೇಶದಲ್ಲಿ 6,635 ಜೆನರಿಕ್ ಔಷಧ ಕೇಂದ್ರವಿದ್ದು, ಕರ್ನಾಟಕದಲ್ಲಿಯೇ 716 ಕೇಂದ್ರಗಳಿವೆ. ರಾಜ್ಯದಲ್ಲಿ ಇನ್ನು 300 ಕೇಂದ್ರಗಳ ಸ್ಥಾಪನೆಗೆ ಅರ್ಜಿ ಸಲ್ಲಿಸಲಾಗಿದೆ. ಅದನ್ನು ಪರಿಶೀಲಿಸಲಾಗುತ್ತಿದ್ದು, ಮುಂದಿನ ಮಾರ್ಚ್ ವೇಳೆಗೆ ರಾಜ್ಯದಲ್ಲಿ 1 ಸಾವಿರ ಜನೌಷಧ ಕೇಂದ್ರ ತೆರೆಯುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

ಜನೌಷಧ ಕೇಂದ್ರಗಳಲ್ಲಿ 1,290 ಔಷಧಗಳಿವೆ. 160 ವೈದ್ಯಕೀಯ ಉಪಕರಣಗಳನ್ನು ಒದಗಿಸುತ್ತಿದ್ದು, ದೇಶದ ಜನರ ಆರೋಗ್ಯ ಕಾಪಾಡಲು ಆಯುಷ್ಮಾನ್ ಭಾರತ್ ಯೋಜನೆ ಜಾರಿಗೊಳಿಸಲಾಗಿದೆ. ಆ ಮೂಲಕ ರೂ.10 ಕೋಟಿಗೂ ಹೆಚ್ಚಿನ ಜನರಿಗೆ ವೈದ್ಯಕೀಯ ಸೇವೆ ಸಿಗುತ್ತಿದೆ ಎಂದರು.

**ಖಾಸಗಿ ಆಸ್ಪತ್ರೆಯಲ್ಲಿ ಜನೌಷಧ** : ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲೂ ಜನೌಷಧ ಬಳಕೆಗೆ ಮತ್ತು ರೋಗಿಗಳಿಗೆ ಶಿಫಾರಸ್ಸು ಮಾಡಲು ರಾಜ್ಯ ಆರೋಗ್ಯ ಇಲಾಖೆ ಜೊತೆ ಮಾತುಕತೆ ನಡೆಸಲಾಗುತ್ತಿದೆ. ಅದೇ ರೀತಿ ಖಾಸಗಿ ಆಸ್ಪತ್ರೆಗಳು ರೋಗಿಗಳಿಗೆ ದುಬಾರಿ ಔಷಧಿಗಳನ್ನು ನೀಡದೆ, ಜನೌಷಧ ನೀಡಲು ಮನವಿ ಮಾಡಿಕೊಳ್ಳಲಾಗುತ್ತಿದೆ. ಈ ಕುರಿತು ಮೆಡಿಕಲ್ ಕೌನ್ಸಿಲ್‌ಗೆ ಪತ್ರ ಬರೆಯಲಾಗುವುದು ಎಂದು ಸದಾನಂದಗೌಡ ಹೇಳಿದ್ದಾರೆ.

ಆಧಾರ: ಕನ್ನಡಪ್ರಭ, ದಿನಾಂಕ:07.11.2020.

## 37. ಇಸ್ರೊದಿಂದ 10 ಉಪಗ್ರಹ ಉಡಾವಣೆ

ಸುಮಾರು ಎಂಟು ತಿಂಗಳ ಬಳಿಕ ಉಪಗ್ರಹಗಳ ಉಡಾವಣೆಗೆ ಮತ್ತೆ ಚಾಲನೆ ನೀಡಿರುವ ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ (ಇಸ್ರೊ)ಯು ಹತ್ತು ಉಪಗ್ರಹಗಳ ಉಡಾವಣೆಯನ್ನು ಯಶಸ್ವಿಯಾಗಿ ನೆರವೇರಿಸಿದೆ. ಶ್ರೀಹರಿಕೋಟದ ಸತೀಶ್ ಧವನ್ ಕೇಂದ್ರದಿಂದ ಭಾರತದ ಭೂ ಪರಿವೀಕ್ಷಣಾ ಉಪಗ್ರಹ (ಇಒಎಸ್–01) ಮತ್ತು ಒಂಭತ್ತು ವಿದೇಶಿ ಉಪಗ್ರಹಗಳನ್ನು ಹೊತ್ತ ಪಿಎಸ್‌ಎಲ್ ವಿ–ಸಿ49 ರಾಕೇಟ್ ಯಶಸ್ವಿಯಾಗಿ ನಭಕ್ಕೆ ನಡೆಯಿತು. ವಿದೇಶಿ ಉಪಗ್ರಹಗಳ ಪೈಕಿ ಅಮೆರಿಕದ 4, ಲುಕ್ಸೆಂಬರ್ಗ್‌ನ 4 ಮತ್ತು ಲಿಥುಯೆನಿಯಾದ 1 ಉಪಗ್ರಹಗಳಿವೆ. ಎಲ್ಲ ಉಪಗ್ರಹಗಳು ನಿಗದಿಯಂತೆ ಕಕ್ಷೆ ಸೇರಿವೆ ಎಂದು ಇಸ್ರೊ ಪ್ರಕಟಣೆಯಲ್ಲಿ ತಿಳಿಸಿದೆ.

ಮೊದಲು ಉಡಾವಣೆಯ ಸಮಯ 3.02ಕ್ಕೆ ನಿಗದಿಯಾಗಿತ್ತು. ತಾಂತ್ರಿಕ ಕಾರಣಗಳಿಂದಾಗಿ 10 ನಿಮಿಷ ತಡವಾಗಿ ಉಡಾವಣೆ ನಡೆಸಲಾಗಿದೆ. ಭೂಮಿಯ ಮೇಲೆ ನಿಗಾ ಇರಿಸುವ ಇಒಎಸ್–01 ನಿಂದಾಗಿ ದೇಶದ ಕೃಷಿ, ಅರಣ್ಯ ಮತ್ತು ವಿಪತ್ತು ನಿರ್ವಹಣಾ ಕ್ಷೇತ್ರಗಳಿಗೆ ತುಂಬ ನೆರವು ಸಿಗಲಿದೆ ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

**51 ಮಿಷನ್ ಪೂರೈಕೆ:** 1994ರ ಆಕ್ಟೋಬರ್‌ನಲ್ಲಿ ತನ್ನ ಮೊದಲ ಯಶಸ್ವಿ ಉಡಾವಣೆ ನಡೆಸಿದ್ದ ದೇಶಿಯ ನಿರ್ಮಿತ ರಾಕೆಟ್ ಪೋಲಾರ್ ಸ್ಯಾಟಲೈಟ್ ಲಾಂಚ್ ವೆಹಿಕಲ್ (ಪಿಎಸ್‌ಎಲ್‌ವಿ) ಈ ಬಾರಿ ತನ್ನ 51ನೇ ಯೋಜನೆಯಲ್ಲೂ ಯಶಸ್ಸು ಸಾಧಿಸಿದೆ. 1994 ರಿಂದ 2017ರವರೆಗೆ ಒಟ್ಟು 48 ಭಾರತೀಯ ಉಪಗ್ರಹಗಳು ಮತ್ತು 209 ವಿದೇಶಿ ಒಪ್ಪಂದದ ಉಪಗ್ರಹಗಳನ್ನು ಸುರಕ್ಷಿತವಾಗಿ ಬಾಹ್ಯಾಕಾಶಕ್ಕೆ ಸೇರಿಸಿದ ಕೀರ್ತಿ ಪಿಎಸ್‌ಎಲ್‌ವಿಯದ್ದಾಗಿದೆ. ಚಂದ್ರಯಾನ–1 ಹಾಗೂ ಮಾರ್ಸ್ ಆರ್ಬಿಟರ್ ಗಗನನೌಕೆ ಯೋಜನೆಗಳಲ್ಲೂ ಇದರ ಪಾತ್ರ ಮಹತ್ವದಾಗಿದೆ.

**ಪ್ರಧಾನಿ ಅಭಿನಂದನೆ:** ಉಪಗ್ರಹಗಳ ಯಶಸ್ವಿ ಉಡಾವಣೆಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಇಸ್ರೊ ವಿಜ್ಞಾನಿಗಳನ್ನು ಅಭಿನಂದಿಸಿದ್ದಾರೆ. ಕೊರೋನಾ ಸಂಕಷ್ಟದ ಸಮಯದಲ್ಲಿಯೂ ಹಲವು

ಅಡೆತಡೆಗಳನ್ನು ದಾಟಿ ವಿಜ್ಞಾನಿಗಳು ಉಪಗ್ರಹ ಉಡಾವಣೆಯನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ ಎಂದು ಪ್ರಧಾನಿ ಶ್ಲಾಘಿಸಿದ್ದಾರೆ.

ಆಧಾರ: ವಿಜಯಕರ್ನಾಟಕ, ದಿನಾಂಕ:08.11.2020.

## 38. ಹಡಗು ಸಚಿವಾಲಯಕ್ಕೆ ಹೊಸ ಹೆಸರು

ಕೇಂದ್ರ ಹಡಗು ಸಚಿವಾಲಯದ ಹೆಸರು ಬದಲಾವಣೆ ಮಾಡಿ ವ್ಯಾಪ್ತಿ ವಿಸ್ತರಿಸಲಾಗುತ್ತದೆ. ಇದಕ್ಕೆ ಬಂದರು ಹಡಗು ಹಾಗೂ ಜಲ ಸಾರಿಗೆ ಇಲಾಖೆ ಎಂದು ಮರು ನಾಮಕರಣ ಮಾಡಲಾಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ.

ಗುಜರಾತ್‌ನ ಸೂರತ್ ಬಳಿಯ ಹಜಿರಾ ಹಾಗೂ ಭಾವನಗರ ಜಿಲ್ಲೆಯ ಘೋಘಾ ನಡುವಿನ ರೋ–ಪ್ಯಾಕ್ಸ್ (ರೋ ರೋ) ಸರಕು ಸಾಗಣೆ ಮತ್ತು ಪ್ರಯಾಣಿಕರ ಹಡಗು ಸೇವೆಗೆ ದಿಲ್ಲಿಯಿಂದಲೇ ವಿಡಿಯೋ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು. ದೇಶದ ಸಮುದ್ರ ಮಾರ್ಗವು ಆತ್ಮನಿರ್ಭರ ಭಾರತ ನಿರ್ಮಾಣದಲ್ಲಿ ಪ್ರಮುಖ ಭಾಗವಾಗಿದೆ. ಹಡಗು ಬಂದರುಗಳನ್ನು ನೋಡಿಕೊಳ್ಳುತ್ತದೆ. ಅದಕ್ಕೆಂದೇ ಹಡಗು ಸಚಿವಾಲಯದ ಮರುನಾಮಕರಣ ಮಾಡಲಾಗಿದೆ ಎಂದರು.

**ನಿತ್ಯ 9000 ಲೀಟರ್ ಇಂಧನ ಉಳಿಸುವ ರೋಪ್ಯಾಕ್ಸ್ :** ಹಜಿರಾ ಹಾಗೂ ಘೋಘಾ ನಡುವೆ ರಸ್ತೆ ಮೂಲಕ ಸಾಗಬೇಕು ಎಂದರೆ 375 ಕಿ.ಮೀ ನಷ್ಟು ಸಾಗಬೇಕು. ಆದರೆ ಈಗ ಸಮುದ್ರ ಮಾರ್ಗದಲ್ಲಿ ಸಾರಿಗೆ ಸೇವೆಯಿಂದ ಉಭಯ ಊರುಗಳ ನಡುವಿನ ಅಂತರ ಕೇವಲ 90 ಕಿ.ಮೀ.ಗೆ ಕುಗ್ಗಲಿದೆ. ಇದರಿಂದ 280 ಕಿ.ಮೀ. ನಷ್ಟು ಸಂಚಾರ ಹಾಗೂ ನಿತ್ಯ 9 ಸಾವಿರ ಲೀಟರ್ ಇಂಧನ ಉಳಿತಾಯವಾಗಲಿದೆ. ಜೊತೆಗೆ ಪ್ರಯಾಣದ ಅವಧಿಯೂ ಕೇವಲ 4 ಗಂಟೆಗೆ ತಗ್ಗಲಿದೆ ಎಂದು ಮೋದಿ ಹೇಳಿದರು.

**ಅಪಾರ ಸಾಮರ್ಥ್ಯದ ರೋಪ್ಯಾಕ್ಸ್ ಹಡಗು:** ಸಮುದ್ರ ಮಾರ್ಗದಲ್ಲಿ ರೋಪ್ಯಾಕ್ಸ್ ಫೆರ್ರಿ ಹಡಗು ವೊಯೋಜ್ ಸಿಂಘನಿ, ಘೋಘಾ ಹಾಗೂ ಹಜಿರಾ ನಡುವೆ ದಿನಕ್ಕೆ 3 ಟ್ರಿಪ್ ಸಂಚರಿಸಲಿದೆ. ಇದು ಮೂರು ಅಂತಸ್ತಿನ ಹಡಗು. ಹಡಗಿನಲ್ಲಿ ಸರಕು ತುಂಬಿದ ಲಾರಿಗಳು, ಕಾರುಗಳು ಹಾಗೂ ಪ್ರಯಾಣಿಕರಿಗೆ ಒಂದೊಂದು ಅಂತಸ್ತಿನಲ್ಲಿ ಅವಕಾಶ ಕಲ್ಪಿಸಲಾಗುತ್ತದೆ.

ಆಧಾರ: ಕನ್ನಡಪ್ರಭ, ದಿನಾಂಕ:09.11.2020

## 39. ಉತ್ಪಾದನೆ ಪ್ರೋತ್ಸಾಹಕ್ಕೆ ರೂ.2 ಲಕ್ಷ ಕೋಟಿ

ದೇಶಿಯವಾಗಿ ಉತ್ಪಾದನೆ ಹೆಚ್ಚಳ, ಆಮದು ಪ್ರಮಾಣದಲ್ಲಿ ಕಡಿತ. ಉದ್ಯೋಗ ಸೃಷ್ಟಿ, ಆರ್ಥಿಕ ಚೇತರಿಕೆಯನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರ ಉತ್ಪಾದನಾ ಸಂಪರ್ಕಿತ ಪ್ರೋತ್ಸಾಹ ಯೋಜನೆಯನ್ನು ಘೋಷಿಸಿದೆ. ಐದು ವರ್ಷಗಳ ಅವಧಿಗೆ ರೂ.2 ಲಕ್ಷ ಕೋಟಿ ವೆಚ್ಚ ಮಾಡುವ ಗುರಿಯೊಂದಿಗೆ ಈ ಯೋಜನೆ ಪ್ರಕಟಿಸಲಾಗಿದೆ.

ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಪ್ರಮುಖ 10 ಆದ್ಯತಾ ವಲಯಗಳನ್ನು ಆರಿಸಿಕೊಂಡು ಇವುಗಳಿಗೆ ಪ್ರೋತ್ಸಾಹ ನೀಡಲು ನಿರ್ಧರಿಸಲಾಗಿದೆ.

ಉತ್ಪಾದನಾ ಸಂಪರ್ಕಿತ ಪ್ರೋತ್ಸಾಹ ಯೋಜನೆಯ ಪ್ರಮುಖ ಉದ್ದೇಶವೇ ಕೈಗಾರಿಕೆಗಳಲ್ಲಿ ಉತ್ಪಾದನೆ ಹೆಚ್ಚಿಸುವುದಾಗಿದೆ ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಹೇಳಿದ್ದಾರೆ ಇದು ಪಂಚವಾರ್ಷಿಕ ಯೋಜನೆಯಾಗಿದ್ದು, ಜಾಗತಿಕವಾಗಿ ಭಾರತೀಯ ಉದ್ದಿಮೆಗಳು ಸ್ಪರ್ಧೆ ನೀಡಲಿ ಎಂಬ

ಉದ್ದೇಶದಿಂದ ರೂಪಿಸಲಾಗಿದೆ ಎಂದರು. ಇಡೀ ಯೋಜನೆಯ ಬಗ್ಗೆ ವಿವರ ಕೊಟ್ಟ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಆತ್ಮನಿರ್ಭರ ಭಾರತದ ಉದ್ದೇಶವನ್ನು ಸಫಲಗೊಳಿಸಲು ಇದನ್ನು ರೂಪಿಸಲಾಗಿದೆ ಎಂದರು. ಇದೇ ಸಭೆಯಲ್ಲಿ ನೌಕಾಯಾನ ಸಚಿವಾಲಯವನ್ನು ಬಂದರು ನೌಕಾಯಾನ ಮತ್ತು ಜಲಸಾರಿಗೆ ಖಾತೆ ಎಂದು ಪುನರ್ ನಾಮಕರಣ ಮಾಡುವ ಬಗ್ಗೆಯೂ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ವಿವರ ನೀಡಿದರು.

ಆಧಾರ: ಉದಯವಾಣಿ,ದಿನಾಂಕ:12.11.2020.

## 40. ಜಾಲತಾಣ, ಒಟಿಟಿಗಳಿಗೆ ಕೇಂದ್ರದ ಮೂಗುದಾರ

ಇದುವರೆಗೆ ಸರ್ಕಾರದ ಯಾವುದೇ ನಿಯಂತ್ರಣಕ್ಕೆ ಒಳಪಡದ ನೆಟ್‌ಫ್ಲಿಕ್, ಆಮೆಜಾನ್, ಪ್ರೈಮ್, ಡಿಸ್ನಿ+ಹಾಟ್‌ಸ್ಟಾರ್‌ನಂತಹ ಒಟಿಟಿ ಸೇವೆಗಳು ಆನ್‌ಲೈನ್ ಸುದ್ದಿ ಮಾಧ್ಯಮಗಳು ಸಾಮಾಜಿಕ ಜಾಲತಾಣಗಳನ್ನು ವಾರ್ತಾ ಮತ್ತು ಪ್ರಸಾರ ಸಚಿವಾಲಯದ ವ್ಯಾಪ್ತಿಗೆ ತಂದು ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಇದರಿಂದಾಗಿ ಇವುಗಳು ಇನ್ನು ಮುಂದೆ ಕೇಂದ್ರ ಸರ್ಕಾರದ ನೀತಿ ನಿಯಂತ್ರಣಗಳಿಗೆ ಒಳಪಡಲಿದೆ.

ರಾಷ್ಟ್ರಪತಿಗಳ ಸಹಿ ಪಡೆದು ಕೇಂದ್ರ ಸರ್ಕಾರ ಹೊರಡಿಸಿರುವ ಅಧಿಸೂಚನೆ ಅನ್ವಯ ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಟ್ವಿಟರ್‌ನಂಥ ಸಾಮಾಜಿಕ ಜಾಲತಾಣಗಳು ನೆಟ್‌ಫ್ಲಿಕ್ ಹಾಟ್ ಸ್ಟಾರ್, ಆಮೆಜಾನ್ ಪ್ರೈಮ್ ನಂತ ಇಟಿಟಿ ವೇದಿಕೆಗಳು, ಆನ್‌ಲೈನ್‌ನಲ್ಲಿ ಸುದ್ದಿ ನೀಡುವ ಮಾಧ್ಯಮಗಳು, ಪ್ರಚಲಿತ ವಿದ್ಯಮಾನದ ಸೇವೆ ನೀಡುವ ವೇದಿಕೆಗಳು ಕೇಂದ್ರ ವಾರ್ತಾ ಪ್ರಸಾರ ಸಚಿವಾಲಯದ ವ್ಯಾಪ್ತಿಗೆ ಒಳಪಡಲಿದೆ.

ಪ್ರಸಕ್ತ ಚಲನಚಿತ್ರಗಳ ಮೇಲೆ ಕಣ್ಗಾವಲಿಗೆ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ, ಸುದ್ದಿ ವಾಹಿನಿಗಳ ಮೇಲೆ ಕಣ್ಗಾವಲಿಗೆ ನ್ಯೂಸ್ ಬ್ರಾಡ್‌ಕಾಸ್ಟರ್ಸ್, ಅಸೋಸಿಯೇಷನ್ ಮತ್ತು ಜಾಹೀರಾತುಗಳ ಮೇಲೆ ಕಣ್ಗಾವಲಿಗೆ ಜಾಹೀರಾತು ಗುಣಮಟ್ಟ ಮಂಡಳಿ ಇವೆ. ಈ ಡಿಜಿಟಲ್ ಮಾಧ್ಯಮಗಳ ಮೇಲೆ ಕಣ್ಗಾವಲು ಇಡಲು ಯಾವುದೇ ಸ್ವಾಯತ್ತ ಸಂಸ್ಥೆಗಳು ಇರಲಿಲ್ಲ. ಇಂಥ ಡಿಜಿಟಲ್ ಮಾಧ್ಯಮಗಳಲ್ಲಿ ಪ್ರಸಾರವಾಗುವ ಸುದ್ದಿಗಳು. ಚಲನಚಿತ್ರಗಳು ಸಾಕಷ್ಟು ವಿವಾದಕ್ಕೆ ಕಾರಣವಾಗಿದ್ದವು. ಬಹಳಷ್ಟು ಪ್ರಕರಣಗಳು ಕೋರ್ಟ್ ಮೆಟ್ಟಿಲು ಕೂಡ ಏರಿದ್ದವು. ಇದರ ಬೆನ್ನಲ್ಲೇ ಇವುಗಳ ಮೇಲೆ ನಿಯಂತ್ರಣ ಕೋರಿ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಕೆಯಾಗಿತ್ತು.

ಒಟಿಟಿ ಡಿಜಿಟಲ್ ಮಾಧ್ಯಮ ಜಾಲತಾಣಗಳ ನಿಯಂತ್ರಣಕ್ಕೆ ದೇಶದಲ್ಲಿ ಯಾವುದೇ ಕಾನೂನು ಅಥವಾ ಸಂಸ್ಥೆ ಇರಲಿಲ್ಲ. ಸೆನ್ಸಾರ್ ಇಲ್ಲದೇ ಇವುಗಳಲ್ಲಿ ಮಾಹಿತಿಗಳು ಪ್ರಸಾರವಾಗುತ್ತಿವೆ. ಇದರ ಬಗ್ಗೆ ಹಲವಾರು ದೂರುಗಳು ಬಂದಿತ್ತು. ವಾರ್ತಾ ಮತ್ತು ಪ್ರಸಾರ ಸಚಿವಾಲಯದ ನೀತಿ ನಿಯಂತ್ರಣಗಳಿಗೆ ಇವುಗಳು ಬದ್ಧವಾಗಿರಬೇಕಾಗುತ್ತದೆ.

ಆಧಾರ: ಕನ್ನಡಪ್ರಭ, ದಿನಾಂಕ:12.11.2020

## 41. ದೀಪಾವಳಿಗೆ ಆರ್ಥಿಕ ಉಡುಗೊರೆ

ಕೊರೋನಾ ಮಹಾಮಾರಿಯ ಆಘಾತದಿಂದ ತತ್ತರಿಸಿರುವ ಆರ್ಥಿಕತೆ ಸುಧಾರಣೆಗಾಗಿ ಮತ್ತೊಂದು ಮಹತ್ವದ ಹೆಜ್ಜೆ ಇರಿಸಿರುವ ಕೇಂದ್ರ ಸರ್ಕಾರ ಆತ್ಮನಿರ್ಭರ ಭಾರತ್ 3.0 ಪ್ಯಾಕೇಜ್‌ನಡಿ 12 ಉಪಕ್ರಮಗಳನ್ನು ಘೋಷಿಸಿದೆ. ಬಡವರು, ಕೃಷಿಕರು, ವ್ಯಾಪಾರಿಗಳು ಸಾಮಾನ್ಯ ಜನರ ಬದುಕಿಗೆ ಆಧರಿಸುವ ಈ ಕೊಡುಗೆ ಕೇಂದ್ರ ಸರ್ಕಾರದ ದೀಪಾವಳಿ ಕೊಡುಗೆ ಎಂದೇ ವಿಶ್ಲೇಷಿಸಲಾಗುತ್ತಿದೆ. ರೂ.2.65 ಲಕ್ಷ ಕೋಟಿ ಮೊತ್ತದ ಈ ಪ್ಯಾಕೇಜ್ (ಈ ಹಿಂದಿನ 2 ಪ್ಯಾಕೇಜ್ ಒಳಗೊಂಡು) ಒಟ್ಟು ದೇಶೀಯ ಉತ್ಪನ್ನದ (ಜಿಡಿಪಿ) ಶೇ.15ರಷ್ಟಾಗಿದೆ ಎಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್

ಪ್ರಕಟಿಸಿದ್ದಾರೆ. ಘೋಷಿತ 12 ಉಪಕ್ರಮಗಳಲ್ಲಿ ಕೆಲವು ಹೊಸತಾಗಿದ್ದರೆ, ಹಲವು ವಿಸ್ತರಣೆಗೊಂಡಿದ್ದಾಗಿದೆ. ಹೆಚ್ಚುವರಿಯಾಗಿ ಘೋಷಣೆಯಾಗಿದ್ದೂ ಇದರಲ್ಲಿದೆ.

**ಉಪಕ್ರಮಗಳ ಮಾಹಿತಿ:**

- ಆತ್ಮನಿರ್ಭರ ಭಾರತ್ ರೋಜ್ಗಾರ್ ಯೋಜನೆ
- ತುರ್ತು ಕ್ರೆಡಿಟ್ ಲೈನ್ ಸಾಲ ಯೋಜನೆ
- ಉತ್ಪಾದಕ ವಲಯಕ್ಕೆ ಉತ್ತೇಜನ
- ಪ್ರಧಾನಮಂತ್ರಿ ಅವಾಸ್ ಯೋಜನೆ – ನಗರ (ಪಿಎಂಎವೈ)
- ಸರ್ಕಾರಿ ಟೆಂಡರ್ ಅರ್ನೆಸ್ಟ್ ಮನಿ ಡಿಪಾಸಿಟ್ ಭದ್ರತೆ ಸಡಿಲ
- ರಿಯಲ್ ಎಸ್ಟೇಟ್ ಉದ್ಯಮಕ್ಕೆ ತೆರಿಗೆ ವಿನಾಯಿತಿ ಉತ್ತೇಜನ
- ಎನ್‌ಐಐಎಫ್ ಸಾಲ ವೇದಿಕೆಗೆ ರೂ.1.10 ಲಕ್ಷ ಕೋಟಿ
- ಕೃಷಿ ಕ್ಷೇತ್ರಕ್ಕೆ ಪ್ರೋತ್ಸಾಹ ವಿಸ್ತರಣೆ
- ಎಕ್ಸಿಮ್ ಬ್ಯಾಂಕ್‌ಗೆ ಅನುದಾನ ಬಿಡುಗಡೆ
- ಬಂಡವಾಳ ಮತ್ತು ಕೈಗಾರಿಕಾ ವೆಚ್ಚಕ್ಕೆ ಹೆಚ್ಚುವರಿ ನೆರವು
- ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಯೋಜನೆಗೆ ಹೆಚ್ಚುವರಿ ಅನುದಾನ ಪ್ರಕಟ
- ಕೊರೋನಾ ಲಸಿಕೆ ಆವಿಷ್ಕಾರಕ್ಕೆ ರೂ.900 ಕೋಟಿ.

**ಕೇಂದ್ರದ ಪ್ಯಾಕೇಜ್‌ನಲ್ಲಿ ಯಾರಿಗೆ ಏನು:**

- ಉದ್ಯೋಗಿಗಳು–ಉದ್ಯೋಗ ಸೃಷ್ಟಿಗಾಗಿ ಸಬ್ಸಿಡಿ ಕೊಡುಗೆ.
- ವ್ಯಾಪಾರಿಗಳು–ಹಲವು ಸಾಲ ಯೋಜನೆಗಳು.
- ಕೈಗಾರಿಕೆಗಳು–10 ಕೈಗಾರಿಕಾ ವಲಯಗಳಿಗೆ ರೂ.1.46 ಲಕ್ಷ ಕೋಟಿ.
- ಸಾಮಾನ್ಯರು – 12 ಲಕ್ಷ ಮನೆಗಳ ನಿರ್ಮಾಣಕ್ಕೆ ನೆರವು.
- ಉದ್ಯಮ – ಮನೆ ಅಭಿವೃದ್ಧಿ, ಖರೀದಿಗೆ ಆದಾಯ ತೆರಿಗೆ ಪರಿಹಾರ.
- ಕೃಷಿಕರು–ರಸಗೊಬ್ಬರ ಖರೀದಿಗಾಗಿ ರೈತರಿಗೆ ಆರ್ಥಿಕ ನೆರವು.
- ಸಣ್ಣ ವರ್ತಕರು–ಸ್ವನಿಧಿ ಅನ್ವಯ ರೂ.14 ಲಕ್ಷ ಕೋಟಿ ಸಾಲ.

ಆತ್ಮನಿರ್ಭರ 3.0 ಸಮಾಜದ ಎಲ್ಲ ವರ್ಗಕ್ಕೂ ಸಹಾಯ ಮಾಡುವ ನಿಟ್ಟಿನಲ್ಲಿ ಕೇಂದ್ರದ ಮುಂದುವರಿದ ಪ್ರಯತ್ನವಾಗಿದೆ. ಘೋಷಿತ ಉಪಕ್ರಮಗಳು ದೇಶದಲ್ಲಿ ಉದ್ಯೋಗ ಸೃಷ್ಟಿ, ಉತ್ಪಾದನೆ ಹೆಚ್ಚಳ, ರಿಯಲ್ ಎಸ್ಟೇಟ್ ಕ್ಷೇತ್ರದ ಸುಧಾರಣೆ ಜೊತೆಗೆ ರೈತರ ಕಲ್ಯಾಣಕ್ಕೆ ನೆರವಾಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಆಧಾರ:ವಿಜಯವಾಣಿ, ದಿನಾಂಕ:13.11.2020

## 42. ಆಸಿಯಾನ್ : ಸಂಪರ್ಕವೃದ್ಧಿಗೆ ಆದ್ಯತೆ

ಆಸಿಯಾನ್ ದೇಶಗಳ ಜೊತೆ ಸಾಮಾಜಿಕ, ಹಣಕಾಸು ಡಿಜಿಟಲ್ ಒಳಗೊಂಡಂತೆ ಎಲ್ಲ ರೀತಿಯ ಸಂಪರ್ಕ ವೃದ್ಧಿಗೆ ಭಾರತ ಆದ್ಯತೆ ನೀಡಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ. ಆಸಿಯಾನ್ ದೇಶಗಳ ವರ್ಚುವಲ್ ಸಮಾವೇಶದಲ್ಲಿ ಪ್ರಧಾನಿ ಮಾತನಾಡಿದರು. ಈ ಪ್ರದೇಶದ ಭದ್ರತೆ ಮತ್ತು ಅಭಿವೃದ್ಧಿಗೆ ಕಾರಣವಾಗುವ ರೀತಿಯಲ್ಲಿ ಎಲ್ಲ ದೇಶಗಳನ್ನು ಆಸಿಯಾನ್ ಒಕ್ಕೂಟವು ಒಗ್ಗೂಡಿಸಿಕೊಂಡು ಹೋಗಬೇಕಾದ ಅಗತ್ಯ ಇದೆ ಎಂದು ಮೋದಿ ಅವರು ಹೇಳಿದರು.

ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶದ ಬಗ್ಗೆ ಭಾರತ ಹಾಗೂ ಆಸಿಯಾನ್‌ನ ದೃಷ್ಟಿಕೋನ ಹಾಗೂ ಒಳನೋಟಗಳಲ್ಲಿ ಸಾಮ್ಯ ಇದೆ. ಆಸಿಯಾನ್ ದೇಶಗಳು ಹಾಗೂ ಭಾರತದ ನಡುವೆ ಭೌತಿಕ ಆರ್ಥಿಕ, ಸಾಮಾಜಿಕ ಸಾಗರೋತ್ತರ ಸಂಪರ್ಕ ಆದ್ಯತೆ ಪಡೆದಿದ್ದು. ಈ ದಿಸೆಯಲ್ಲಿ ಕೆಲವು ವರ್ಷಗಳಿಂದ ನಾವು ಇನ್ನಷ್ಟು ಹತ್ತಿರವಾಗಿದ್ದೇವೆ ಎಂದು ಮೋದಿ ಅಭಿಪ್ರಾಯಪಟ್ಟರು.

ಆಗ್ನೇಯ ಏಷ್ಯಾ ದೇಶಗಳ ಸಂಘಟನೆ (ಆಸಿಯಾನ್) ಪ್ರಾದೇಶಿಕವಾಗಿ ಅತ್ಯಂತ ಪ್ರಭಾವಿ ಸಂಘಟನೆಗಳಲ್ಲಿ ಒಂದೆನಿಸಿದ್ದು, ಭಾರತ, ಅಮೆರಿಕ, ಜಪಾನ್, ಚೀನಾ ಹಾಗೂ ಆಸ್ಟ್ರೇಲಿಯಾಗಳ ಜೊತೆ ನಿಕಟ ಸಂಪರ್ಕ ಹೊಂದಿದೆ. ಪೂರ್ವ ಲಡಾಖ್ ಹಾಗೂ ವಿವಾದಿತ ದಕ್ಷಿಣ ಚೀನಾ ಸಮುದ್ರದಲ್ಲಿ ಚೀನಾ ದೇಶವು ಆಕ್ರಮಣಕಾರಿ ನಿಲುವು ತಳೆದಿರುವ ಮಧ್ಯೆಯೇ ಸಮಾವೇಶ ನಡೆದಿದೆ. ಚೀನಾ ಜೊತೆ ಹಲವು ದೇಶಗಳು ಭೌಗೋಳಿಕ ಸಂಘರ್ಷ ಎದುರಿಸುತ್ತಿವೆ. 10 ದೇಶಗಳ ಆಸಿಯಾನ್ ಕೂಟದಲ್ಲಿ ಇಂಡೊನೇಷ್ಯಾ, ಮಲೇಷ್ಯಾ, ಫಿಲಿಪ್ಪೀನ್ಸ್, ಸಿಂಗಪುರ, ಥಾಯ್ಲೆಂಡ್, ಬ್ರೂನೆ, ವಿಯೆಟ್ನಾಂ ಲಾವೋಸ್, ಮ್ಯಾನ್ಮಾರ್ ಹಾಗೂ ಕಾಂಬೋಡಿಯಾ ಇದೆ.

**ಜಲ ಮಾರ್ಗ ಸ್ಥಿರತೆ ಕುರಿತು ಚರ್ಚೆ:** ದಕ್ಷಿಣ ಚೀನಾ ಸಮುದ್ರದ ಸದ್ಯದ ಸ್ಥಿತಿಗತಿಗಳ ಕುರಿತು ಭಾರತ–ಆಸಿಯಾನ್ ದೇಶಗಳು ಚರ್ಚೆ ನಡೆಸಿದವು. ಈ ಭಾಗದಲ್ಲಿ ಶಾಂತಿ, ಸ್ಥಿರತೆ, ಸುರಕ್ಷತೆ ಹಾಗೂ ಭದ್ರತೆ ಕಾಯ್ದುಕೊಳ್ಳುವ ಅಗತ್ಯವನ್ನು ಪರ್ಯಾಲೋಚಿಸಿದವು. ಫೆಸಿಫಿಕ್ ಸಾಗರದಲ್ಲಿ ಮುಕ್ತ ಸಾರಿಗೆ ಬಗ್ಗೆಯೂ ಚರ್ಚೆ ನಡೆಯಿತು. ದಕ್ಷಿಣ ಚೀನಾ ಸಮುದ್ರದಲ್ಲಿ ಚೀನಾದ ಅತಿಕ್ರಮಣಕಾರಿ ವರ್ತನೆಯ ನಡುವೆಯೇ ಈ ಚರ್ಚೆ ಮಹತ್ವ ಪಡೆದಿದೆ.

ಪ್ರಧಾನಿ ಮೋದಿ ಅವರು ಕೋವಿಡ್ ಆಸಿಯಾನ್ ನಿಧಿಗೆ ಸುಮಾರು ರೂ.7.5 ಕೋಟಿ ದೇಣಿಗೆ ಘೋಷಿಸಿದರು. ಸಾಂಕ್ರಾಮಿಕ ರೋಗದ ವಿರುದ್ಧದ ಹೋರಾಟದಲ್ಲಿ ಒಗ್ಗಟ್ಟಿನ ಯತ್ನಕ್ಕೆ ಕರೆ ನೀಡಿದರು.

ಆಧಾರ: ಪ್ರಜಾವಾಣಿ, ದಿನಾಂಕ:13.11.2020

## 43. ದೀಪಾವಳಿಗೆ ನಿರ್ಮಲಾ ಸೀತಾರಾಮನ್ ಪ್ಯಾಕೇಜ್

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ದೇಶದ ಜನತೆಗೆ ದೀಪಾವಳಿಗೆ ಹಲವು ಕೊಡುಗೆಗಳನ್ನು ಪ್ರಕಟಿಸಿದ್ದಾರೆ. ಕೋವಿಡ್ 19 ಪಿಡುಗಿನಿಂದ ಸಂಕಷ್ಟಕ್ಕೊಳ್ಳಗಾಗಿರುವ ಆನೇಕ ಕ್ಷೇತ್ರಗಳ ಪುನಶ್ಚೇತನಕ್ಕೆ ಹಲವು ಕ್ರಮಗಳನ್ನು ಘೋಷಿಸಿದ್ದಾರೆ. ಆತ್ಮನಿರ್ಭರ್ ಭಾರತ್ 3.0 ಯೋಜನೆಯಡಿ ಒಟ್ಟು ರೂ.2.65ಲಕ್ಷ ಕೋಟಿ ಪ್ಯಾಕೇಜ್‌ನ್ನು ಪತ್ರಿಕಾಗೋಷ್ಠಿಯಲ್ಲಿ ನಿರ್ಮಲಾ ಸೀತಾರಾಮನ್ ಅನಾವರಣಗೊಳಿಸಿದರು.

ದೇಶದ ಅರ್ಥವ್ಯವಸ್ಥೆಯನ್ನು ಸುಧಾರಿಸಲು 12 ಕ್ರಮಗಳು ಈ ಪ್ಯಾಕೇಜ್‌ನಲ್ಲಿ ಸೇರಿವೆ. ಕಳೆದ ಮಾರ್ಚ್ ತಿಂಗಳಿನಿಂದ ಸೆಪ್ಟೆಂಬರ್‌ವರೆಗೆ ಉದ್ಯೋಗ ಕಳೆದುಕೊಂಡ ಉದ್ಯೋಗಿಗಳಿಗೆ ಇಪಿಎಫ್ ಸೌಲಭ್ಯ ಸಿಗಲಿದೆ. ಆತ್ಮನಿರ್ಭರ್ ಭಾರತ್ 3.0 ಆಡಿಯಲ್ಲಿ ಮಾಡಿದ 12 ಪ್ರಕಟಣೆಗಳ ಭಾಗವಾಗಿ ಸರ್ಕಾರವು ನೀಡುತ್ತಿರುವ ಪ್ಯಾಕೇಜ್ ಗಾತ್ರವೂ 2.65 ಲಕ್ಷ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

**ಯಾರಿಗೆ ಸಿಗಲಿದೆ ಲಾಭ:**

- ಇಪಿಎಫ್‌ಓ ನೋಂದಣಿದಾರರ ಆಧಾರ್ ಸಂಖ್ಯೆಗೆ ಲಿಂಕ್ ಆದವರಿಗೆ ಸಿಗಲಿದೆ.
- ಶೇ.65 ಸಾಮಾನ್ಯ ವೃತ್ತಿದಾರರಿಗೆ ನೆರವು ಸಿಗಲಿದೆ.
- ತುರ್ತು ಸಾಲ ಸೌಲಭ್ಯವನ್ನು ಯಾವುದೇ ಅಡಮಾನ ಇಲ್ಲದೆ ಸಾಲವು ರೂ.3 ಲಕ್ಷದವರೆಗೂ ನೀಡಲಾಗುತ್ತದೆ. ಇದನ್ನು ಮಾರ್ಚ್ 31ರವರೆಗೆ ವಿಸ್ತರಿಸಲಾಗಿದೆ.
- ಹೆಚ್ಚುವರಿ ಸಾಲ ಸೌಲಭ್ಯವನ್ನು 26 ಪ್ರಮುಖ ವಲಯಗಳಿಗೆ ನೀಡಲಾಗಿದೆ. ಇವುಗಳನ್ನು ಕೆ.ವಿ. ಕಾಮತ್ ಸಮಿತಿಯು ಗುರುತಿಸಿರುತ್ತದೆ.
- ನಗರ ಪ್ರದೇಶಗಳಲ್ಲಿ ಮನೆ ಕಟ್ಟುವವರಿಗೆ ಒಟ್ಟು ರೂ.18,000 ಕೋಟಿ ಪ್ಯಾಕೇಜ್ ನೀಡಲಾಗುವುದು. ಈ ಯೋಜನೆಯಡಿ 12 ಲಕ್ಷ ಮನೆಗಳನ್ನು ಕೆಡವಿ, ಹೊಸದಾಗಿ ಕಟ್ಟುವವರಿಗೆ ನೀಡಲಾಗುವುದು. ಇದು 78 ಲಕ್ಷ ಹೊಸ ಉದ್ಯೋಗಗಳನ್ನು ಸೃಷ್ಟಿಸುವುದು. 25 ಟನ್‌ಗಳಷ್ಟು ಸ್ಟೀಲ್ ಮತ್ತು 131 ಲಕ್ಷ ಟನ್‌ಗಳಷ್ಟು ಸಿಮೆಂಟ್‌ಗೆ ಬೇಡಿಕೆ ಬರುತ್ತದೆ.
- ನಿರ್ಮಾಣ ವಲಯಕ್ಕೆ ಆದ್ಯತೆ.
- ಸದ್ಯ ಯಾವುದೇ ವಿವಾದವಿಲ್ಲದೆ ಚಾಲ್ತಿಯಲ್ಲಿರುವ ಕಾಮಗಾರಿ ಗುತ್ತಿಗೆಗಳಿಗೆ ಅನ್ವಯವಾಗುವಂತೆ ಭದ್ರತಾ ಠೇವಣಿಯನ್ನು ಈಗಿನ ಶೇ.5–10 ರಿಂದ ಶೇ.3ಕ್ಕೆ ಇಳಿಸಲಾಗುವುದು.
- ಹೊಸಮನೆಗಳನ್ನು ಕೊಳ್ಳುವವರಿಗೆ ತೆರಿಗೆ ವಿನಾಯಿತಿ .
- ರಾಷ್ಟ್ರೀಯ ಹೂಡಿಕೆ ಮತ್ತು ಮೂಲಸೌಲಭ್ಯ ನಿಧಿಯು ವೇದಿಕೆಯನ್ನು ನಿರ್ಮಿಸಿದ್ದು, ರೂ.1.1 ಲಕ್ಷ ಕೋಟಿಗಳನ್ನು ಮೀಸಲಿರಿಸಿದೆ. ಸರ್ಕಾರವು ರೂ.6,000 ಕೋಟಿಗಳನ್ನು ಈಕ್ವಿಟಿಯಾಗಿ ಹೂಡಿಕೆ ಮಾಡಲಿದೆ ಮತ್ತು ಉಳಿದ ಹಣವನ್ನು ಖಾಸಗಿ ಹೂಡಿಕೆದಾರರಿಂದ ನಿರೀಕ್ಷಿಸಲಾಗಿದೆ.
- ಇಪಿಎಫ್‌ಓದಲ್ಲಿ ನೋಂದಣಿಯಾಗಿರುವ ಸಂಸ್ಥೆಗಳಲ್ಲಿ 15,000ಕ್ಕಿಂತ ಕಡಿಮೆ ಸಂಬಳಕ್ಕೆ ಹೊಸದಾಗಿ ಸೇರ್ಪಡೆಯಾಗುವ ಉದ್ಯೋಗಗಳಿಗೆ ಈ ಸೌಲಭ್ಯ.
- ರೂ.15,000ಕ್ಕಿಂತ ಕಡಿಮೆ ಸಂಬಳ ಇದ್ದು, ಕೊರೋನಾ ಕಾಲದಲ್ಲಿ ಮಾರ್ಚ್ 1 ರಿಂದ ಸೆಪ್ಟೆಂಬರ್ 30ರ ನಡುವೆ ಉದ್ಯೋಗ ಕಳೆದುಕೊಂಡು, ಆಗಸ್ಟ್ 1ರ ನಂತರ ಮತ್ತೆ ಉದ್ಯೋಗಕ್ಕೆ ಸೇರಿಕೊಂಡ ಉದ್ಯೋಗಿಗಳಿಗೂ ಈ ನೆರವು.
- ಇಪಿಎಫ್‌ಓನಲ್ಲಿ ನೋಂದಣಿಯಾಗಿರುವ ಕಂಪನಿಗಳಲ್ಲಿ ಸೆಪ್ಟೆಂಬರ್‌ನಲ್ಲಿ 50ಕ್ಕಿಂತ ಕಡಿಮೆ ಉದ್ಯೋಗಿಗಳಿದ್ದರೆ ಆ ಕಂಪನಿಗಳಲ್ಲಿ ಇಬ್ಬರು ಹೊಸ ಉದ್ಯೋಗಿಗಳ ನೇಮಕವಾಗಿರಬೇಕು.
- 50ಕ್ಕಿಂತ ಹೆಚ್ಚಿನ ಉದ್ಯೋಗಿಗಳಿದ್ದರೆ ಕನಿಷ್ಠ ಐವರು ಹೊಸ ನೌಕರರಿಗೆ ಕಂಪನಿ ಉದ್ಯೋಗ ನೀಡಬೇಕು. ಈ ಷರತ್ತು ಪೂರೈಸಿದರೆ ನೋಂದಾಯಿತ ಕಂಪನಿಗಳ ಎಲ್ಲ ನೌಕರರಿಗೆ ಸಬ್ಸಿಡಿ ಸೌಲಭ್ಯ.
- 1000 ಉದ್ಯೋಗಿಗಳಿರುವ ಕಂಪನಿಗಳಿಗೆ, ಉದ್ಯೋಗಿಗಳ ಪಿಎಫ್ ಪಾಲು ಶೇ.12 ಹಾಗೂ ಉದ್ಯೋಗದಾತರ ಪಾಲು ಶೇ.12ರಷ್ಟನ್ನು ಕೇಂದ್ರ ಸರ್ಕಾರ ನೀಡಲಿದೆ.

- 1000ಕ್ಕಿಂತ ಹೆಚ್ಚಿನ ಉದ್ಯೋಗಿಗಳನ್ನು ನೇಮಿಸಿಕೊಂಡ ಸಂಸ್ಥೆಗಳಿಗೆ ಉದ್ಯೋಗಿಗಳ ಪಿಎಫ್ ಪಾಲು ಶೇ.12ನ್ನು ಸರ್ಕಾರ ನೀಡಲಿದೆ. ಉದ್ಯೋಗಿಯ ಇಪಿಎಫ್ಓ ಖಾತೆಗೆ ಜಮೆ.
- ಇದು ಆಕ್ಟೋಬರ್ 1 ರಿಂದ ಜಾರಿಗೆ ಬರಲಿದೆ.

ಆಧಾರ: ವಿಶ್ವವಾಣಿ,ದಿನಾಂಕ:13.11.2020

## 44. ಆಯುರ್ವೇದ ದಿನಾಚರಣೆ ಸಂದರ್ಭ ವಿಶ್ವಾರೋಗ್ಯ ಸಂಸ್ಥೆ ಘೋಷಣೆ

ಭಾರತದಲ್ಲಿ ಜಾಗತಿಕ ಪಾರಂಪರಿಕ ಔಷಧೀಯ ಕೇಂದ್ರವನ್ನು ಸ್ಥಾಪಿಸುವುದಾಗಿ ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ. 5ನೇ ಆಯುರ್ವೇದ ದಿನದ ಅಂಗವಾಗಿ ಜೈಪುರ ಮತ್ತು ಜಾಮ್‌ನಗರದಲ್ಲಿ ಎರಡು ಆಯುರ್ವೇದ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳಿಗೆ ನರೇಂದ್ರ ಮೋದಿ ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ಶಿಲಾನ್ಯಾಸ ಮಾಡಿರುವ ಕಾರ್ಯಕ್ರಮದಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಮಹಾನಿರ್ದೇಶಕ ಟೆಡ್ರೊಸ್ ಅಧಾನೊಮ್ ಗೆಬ್ರೆಯೆಸ್ ಅವರು ವಿಡಿಯೋ ಮೂಲಕ ಈ ವಿಷಯವನ್ನು ತಿಳಿಸಿದ್ದಾರೆ.

ಪಾರಂಪರಿಕ ಹಾಗೂ ಪೂರಕ ಔಷಧಗಳ ಬಗ್ಗೆ ಸಂಶೋಧನೆ, ತರಬೇತಿ ಮತ್ತು ಅರಿವು ಮೂಡಿಸುವುದಕ್ಕಾಗಿ ಜಾಗತಿಕ ಪಾರಂಪರಿಕ ಔಷಧೀಯ ಕೇಂದ್ರವನ್ನು ತೆರೆಯಲು ನಾವು ಭಾರತವನ್ನು ಆಯ್ಕೆ ಮಾಡಿಕೊಂಡಿರುವುದು ಸಂತೋಷದ ವಿಷಯವಾಗಿದೆ ಎಂದು ಗೆಬ್ರೆಯೆಸ್ ಹೇಳಿದ್ದಾರೆ. ಈ ಹೊಸ ಔಷಧ ಕೇಂದ್ರವು 2014–2023ರ ಅವಧಿಯಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಅನುಷ್ಠಾನಗೊಳಿಸಲಿರುವ ಸಾಂಪ್ರದಾಯಿಕ ಔಷಧಗಳನ್ನು ಬೆಂಬಲಿಸಲಿದೆ. ಜೊತೆಗೆ ನೀತಿಗಳನ್ನು ರೂಪಿಸುವುದು, ಕ್ರಿಯಾ ಯೋಜನೆ ಸಿದ್ಧಗೊಳಿಸುವುದು ಸೇರಿದಂತೆ ವಿವಿಧ ಹಂತಗಳಲ್ಲಿ ಈ ಕೇಂದ್ರ ನೆರವು ನೀಡಲಿದೆ ಎಂದು ಅವರು ತಿಳಿಸಿದರು. ಇನ್ನು ವಿಶ್ವ ಸಂಸ್ಥೆಯ ಈ ಕ್ರಮವನ್ನು ಸ್ವಾಗತಿಸಿರುವ ಪ್ರಧಾನಿ ಮೋದಿ, ವಿಶ್ವಸಂಸ್ಥೆ ಇಂಥ ಕಾರ್ಯಗಳ ಮೂಲಕ ಜಾಗತಿಕ ಕಲ್ಯಾಣ ಕೇಂದ್ರವಾದರೆ, ಭಾರತವು ವಿಶ್ವದ ಔಷಧಾಲಯವಾಗಿ ರೂಪುಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜಾಮ್‌ನಗರದ ವಿಶ್ವವಿದ್ಯಾಲಯದ ಅವರಣದಲ್ಲಿರುವ ನಾಲ್ಕು ಸಂಸ್ಥೆಗಳಾದ ಆಯುರ್ವೇದ ಸ್ನಾತಕೋತ್ತರ ಬೋಧನೆ ಮತ್ತು ಸಂಶೋಧನಾ ಸಂಸ್ಥೆ, ಶ್ರೀ ಗುಲಾಬ್ ಕುನ್ವರ್ಬಾ ಆಯುರ್ವೇದ ಮಹಾವಿದ್ಯಾಲಯ, ಆಯುರ್ವೇದ ಔಷಧ ವಿಜ್ಞಾನ ಸಂಸ್ಥೆ ಮತ್ತು ಮಹರ್ಷಿ ಪತಂಜಲಿ ಇನ್ಸ್ಟಿಟ್ಯೂಟ್ ಫಾರ್ ಯೋಗ ನ್ಯಾಚುರೊಪತಿ ಶಿಕ್ಷಣ ಮತ್ತು ಸಂಶೋಧನೆ ಸಂಸ್ಥೆಗಳನ್ನು ವಿಲೀನಗೊಳಿಸಿ ಐಟಿಆರ್‌ಎ ರಚಿಸಲಾಗಿದೆ.

**ಆಯುರ್ವೇದ ಉತ್ಪನ್ನಗಳಿಗೆ ಭಾರಿ ಬೇಡಿಕೆ:** ಆಯುರ್ವೇದ ಮತ್ತು ಆಲೋಪತಿ ಪದ್ಧತಿಗಳು ಜಗತ್ತಿನಲ್ಲಿ ಹೆಚ್ಚು ಪ್ರಾಮುಖ್ಯ ಪಡೆಯುತ್ತಿದೆ. ವೈದ್ಯಕೀಯ ಜಗತ್ತಿನಲ್ಲಿ ಆಯುರ್ವೇದ ಪ್ರಮುಖ ಪಾತ್ರವಹಿಸುತ್ತದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಎರಡು ಆಯುರ್ವೇದ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗೆ ಶಿಲಾನ್ಯಾಸ ಮಾಡಿ ಮಾತನಾಡಿದ ಅವರು ಆಯುರ್ವೇದ ಉತ್ಪನ್ನಗಳಿಗೆ ಭಾರಿ ಬೇಡಿಕೆ ಬಂದಿದೆ. ಅರಿಶಿನ ಮತ್ತು ಆಯುರ್ವೇದ ಉತ್ಪನ್ನಗಳಂತಹ ಭಾರತದಿಂದ ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಉತ್ಪನ್ನಗಳ ಬೇಡಿಕೆ ಜಾಗತಿಕ ಮಟ್ಟದಲ್ಲಿ ಹೆಚ್ಚಿದೆ. ನಮ್ಮ ದೇಶವು ತುಂಬಾ ಜನಸಂಖ್ಯೆ ಹೊಂದಿದ್ದರೂ, ಪ್ರತಿ ಮನೆಯು ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಅರಿಶಿನ ಹಾಲು, ಅಶ್ವಗಂಧ ಗಿಡಮೂಲಿಕೆ ಕಾಢಾ ಮುಂತಾದವನ್ನು ಹೆಚ್ಚಾಗಿ ಸೇವಿಸುತ್ತಿರುವುದರಿಂದ ಕೊರೋನಾ ನಿಯಂತ್ರಣದಲ್ಲಿದೆ ಎಂದಿದ್ದಾರೆ.

**ಪ್ರಮುಖಾಂಶಗಳು:**

- ಡಬ್ಲೂಎಚ್‌ಓ ಗ್ಲೋಬಲ್ ಸೆಂಟರ್ ಭಾರತದಲ್ಲಿನ ಸಾಂಪ್ರದಾಯಿಕ, ಆಯುರ್ವೇದ ಔಷಧಗಳ ಮೇಲೆ ಸಂಶೋಧನೆಯನ್ನು ಬಲವರ್ಧಿಸುತ್ತದೆ.
- ಸಾಂಪ್ರದಾಯಿಕ ಔಷಧ ಕೇಂದ್ರ ಸ್ಥಾಪನೆಗೆ ವಿಶ್ವ ಆರೋಗ್ಯ ಸಂಸ್ಥೆ ಭಾರತವನ್ನು ಆಯ್ಕೆ ಮಾಡಿಕೊಂಡಿದ್ದು ಹೆಮ್ಮೆಯ ಸಂಗತಿ.
- ಭಾರತದಲ್ಲಿ ತಲೆ ಎತ್ತಲಿರುವ ಸಾಂಪ್ರದಾಯಿಕ ಔಷಧ ಕೇಂದ್ರ ಜಾಗತಿಕ ಮಟ್ಟದಲ್ಲಿ ದೊಡ್ಡ ಕೇಂದ್ರವಾಗಿ ಬೆಳೆಯಲಿದೆ.
- ಪ್ರಾಚೀನ ವೈದ್ಯಕೀಯ ವಿಜ್ಞಾನ ಮತ್ತು ಜ್ಞಾನ ಹಾಗೂ 21ನೇ ಶತಮಾನದ ಆಧುನಿಕ ವಿಜ್ಞಾನದಿಂದ ಪಡೆದ ಮಾಹಿತಿಯನ್ನು ಸಂಯೋಜಿಸಿದೆ.

ಆಧಾರ: ವಿಶ್ವವಾಣಿ, ದಿನಾಂಕ:14.11.2020

## 45. ಯೋಧರ ಜೊತೆ ದೀಪಾವಳಿ ಆಚರಿಸಿದ ಮೋದಿ

ರಾಜಸ್ಥಾನದ ಲಾಂಗೇವಾಲಾದಲ್ಲಿ ಯೋಧರೊಂದಿಗೆ ದೀಪಾವಳಿ ಆಚರಿಸಿದ ಪ್ರಧಾನಿ ಅವರು ಸೇನೆಯ ಸಾಧನೆಗಳನ್ನು ಕೊಂಡಾಡಿದರು. ಇಡೀ ಜಗತ್ತು ವಿಸ್ತರಣಾವಾದಿಗಳಿಂದಾಗಿ ತೊಂದರೆ ಅನುಭವಿಸುತ್ತಿದೆ. ಈ ವಿಸ್ತರಣಾವಾದವು ಅವರ ವಿಕೃತ ಮನಸ್ಥಿತಿಯನ್ನು ತೋರುತ್ತದೆ ಎಂದು ನೆರೆಯ ಚೀನಾಗೆ ಟಾಂಗ್ ಕೊಟ್ಟರು.

2014ರಲ್ಲಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಾಗಿನಿಂದಲೂ ಮೋದಿ ಅವರು, ದೀಪಾವಳಿ ವೇಳೆ ಯೋಧರೊಂದಿಗೆ ಹಬ್ಬ ಆಚರಿಸಿಕೊಂಡು ಬರುತ್ತಿದ್ದಾರೆ. ಪ್ರತಿ ವರ್ಷವು ಒಂದೊಂದು ಮುಂಚೂಣಿ ನೆಲೆಯಲ್ಲಿ ದೀಪಾವಳಿ ಆಚರಿಸುವುದು ವಿಶೇಷ. ಈ ವರ್ಷ ರಾಜಸ್ಥಾನದ ಲಾಂಗೇವಾಲಾದ ಮುಂಚೂಣಿ ನೆಲೆಗೆ ಭೇಟಿ ನೀಡಿದ ಪ್ರಧಾನಿ ಯೋಧರ ಜೊತೆ ಹಬ್ಬ ಆಚರಿಸಿ ಅವರ ಸಂಭ್ರಮಕ್ಕೆ ಜೊತೆಯಾದರು. ಈ ಸಂದರ್ಭದಲ್ಲಿ ಮಾತಮಾಡಿದ ಅವರು ಇದೇ ಪಶ್ಚಿಮ ಮುಂಚೂಣಿ ನೆಲೆಯಿಂದ 1971ರಲ್ಲಿ ಪಾಕಿಸ್ತಾನವನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದ ಭಾರತೀಯ ಸೇನೆಯ ಯೋಧರ ಸಾಧನೆ ಬಗ್ಗೆ ಸ್ಮರಿಸಿದರು.

ವಿಸ್ತರಣಾವಾದಿಗಳಿಗೆ ನೇರವಾಗಿ ಎಚ್ಚರಿಕೆ ಕೊಟ್ಟ ಪ್ರಧಾನಿ ಮೋದಿ ಜಗತ್ತು ಇವರಿಂದಲೇ ತೊಂದರೆ ಅನುಭವಿಸುತ್ತಿದೆ ಎಂದರು. ಅಷ್ಟೇ ಅಲ್ಲ. ವಿಸ್ತರಣಾವಾದವು 18 ಶತಮಾನದಲ್ಲಿ ಕಾಣಿಸಿಕೊಂಡ ವಿಕೃತ ಮನಸ್ಥಿತಿಯಾಗಿದೆ ಎಂದು ಹೇಳಿದರು. ಈ ಮೂಲಕ ಚೀನಾ ಹೆಸರೆತ್ತದೇ ಅದರ ವಿರುದ್ಧ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು. ಭಾರತವು ಈ ವಿಸ್ತರಣಾವಾದದ ವಿರುದ್ಧ ಹಿಂದಿನಿಂದಲೂ ಧ್ವನಿ ಎತ್ತಿಕೊಂಡೇ ಬಂದಿದೆ ಎಂದು ತಿಳಿಸಿದರು.

ಇನ್ನು ಪಾಕಿಸ್ತಾನದ ವಿರುದ್ಧವು ಪ್ರಧಾನಿ ನರೇಂದ್ರ ಮೋದಿ ಗುಡುಗಿದರು. ಭಾರತೀಯ ಯೋಧರು ಉಗ್ರರಿಗೆ ಬೆಂಬಲ ಕೊಡುತ್ತಿರುವವರ ವಿರುದ್ಧ ತಕ್ಕ ಶಾಸ್ತಿಯನ್ನೇ ನೀಡುತ್ತಾ ಬಂದಿದ್ದಾರೆ. ಈ ಪ್ರಾಯೋಜಕತ್ವ ನೀಡುತ್ತಿರುವ ದೇಶದಲ್ಲೇ ಪಾಠ ಕಲಿಸಿದ್ದಾರೆ ಎಂದು ಹೇಳುವ ಮೂಲಕ ಸರ್ಜಿಕಲ್ ಸ್ಟ್ರೈಕ್ ಮತ್ತು ವಾಯು ದಾಳಿಯನ್ನು ನೆನಪಿಸಿದರು.

ನಮ್ಮ ಗಡಿ ಕಾಯುವ ವಿಚಾರದಲ್ಲಿ ಭಾರತ ಎಂದಿಗೂ ರಾಜಿಯಾಗುವುದಿಲ್ಲ ಎಂಬುದನ್ನು ಇಡೀ ಜಗತ್ತು ನೋಡಿದೆ. ನಮ್ಮ ಯೋಧರು ಗಡಿಯಲ್ಲಿ ಉತ್ತಮ ರೀತಿಯಲ್ಲೇ ಹೋರಾಡಿ ಭಾರತದ ನೆಲ ಉಳಿಸಿಕೊಂಡಿದ್ದಾರೆ. ನಾವು ತೃಣಮಾತ್ರದ ವಿಚಾರದಲ್ಲೂ ರಾಜಿಯಾಗುವುದಿಲ್ಲ ಎಂಬುದು ಜಗತ್ತಿಗೆ ಗೊತ್ತಾಗಿದೆ ಎಂದು ಹೇಳಿದರು.

**ಯೋಧರು ಭಾರತದ ಹೆಮ್ಮೆ:** ನಮ್ಮ ದೇಶವನ್ನು ಕಾಯುತ್ತಿರುವ ಯೋಧರ ಬೆನ್ನಿಗೆ 130 ಕೋಟಿ ಜನ ನಿಂತಿದ್ದಾರೆ. ಅಷ್ಟೇ ಅಲ್ಲ ಯೋಧರ ಸಾಮರ್ಥ್ಯವನ್ನು ಇಡೀ ದೇಶದ ಜನ ಕೊಂಡಾಡಿದ್ದಾರೆ. ಮರುಭೂಮಿ, ಅರಣ್ಯ ಅಥವಾ ಆಳಸಮುದ್ರದಲ್ಲೂ ಯಶಸ್ವಿಯಾಗಿ ಹೋರಾಟ ನಡೆಸುವ ಸಾಮರ್ಥ್ಯ ಹೊಂದಿರುವ ನಮ್ಮ ಯೋಧರು ದೇಶವಾಸಿಗಳ ಹೆಮ್ಮೆಯಾಗಿದ್ದಾರೆ ಎಂದು ಮೋದಿ ಹೇಳಿದರು. ಪ್ರತಿ ವರ್ಷವು ದೀಪಾವಳಿ ದಿನ ಯೋಧರಲ್ಲಿಗೆ ಬರಬೇಕು, ಅವರ ಜೊತೆ ಹಬ್ಬ ಮಾಡಬೇಕು, ಆಗಷ್ಟೇ ನನ್ನ ಹಬ್ಬದ ಸಂಭ್ರಮ ಸಂಪೂರ್ಣವಾದಂತಾಗುತ್ತದೆ ಎಂದು ಮೋದಿ ಇದೇ ಸಂದರ್ಭದಲ್ಲಿ ಹೇಳಿದರು. ಯೋಧರೊಂದಿಗೆ ಹೆಚ್ಚು ಹೊತ್ತು ಕಾಲ ಕಳೆದಷ್ಟೂ ದೇಶದ ಸೇವೆ ಮಾಡುವ ಶಕ್ತಿ ಹೆಚ್ಚಾಗುತ್ತದೆ ಎಂದರು. ನಿಮ್ಮ ಬಲಿದಾನವು ದೇಶಕ್ಕೆ ಶಿಸ್ತು ಮತ್ತು ಸೇವೆಯನ್ನು ಕಲಿಸಿದೆ ಎಂದು ಶ್ಲಾಘಿಸಿದರು. ಇದರ ಜೊತೆಗೆ ಎಲ್ಲಾ ಯೋಧರು ಇಂಗ್ಲೀಷ್, ಹಿಂದಿ ಮಾತೃಭಾಷೆ ಜೊತೆಗೆ ಮತ್ತೊಂದು ಭಾಷೆ ಕಲಿಯಬೇಕು ಎಂದು ಕರೆ ನೀಡಿದರು.

**ಲಾಂಗೇವಾಲಾದ ಮಹತ್ವ:** 1971ರಲ್ಲಿ ನಡೆದ ಯುದ್ದದ ವೇಳೆ ಭಾರತ ಪಾಕಿಸ್ತಾನವನ್ನು ಈ ಸ್ಥಳದಲ್ಲಿ ಮಣಿಸಿತ್ತು. ಪ್ರಮುಖ ಯುದ್ಧ ಪೂರ್ವ ವಲಯದಲ್ಲಿ ನಡೆದರೂ, ಪಾಕಿಸ್ತಾನದ ಈ ಪಶ್ಚಿಮ ಮುಂಚೂಣಿ ನೆಲೆಯತ್ತಲೂ ಧಾವಿಸಿ ಬಂದಿತ್ತು. ಇಲ್ಲಿ ಭಾರತೀಯ ಸೇನೆ ವಾಯುದಾಳಿ ಮೂಲಕ ಪಾಕಿಸ್ತಾನವನ್ನು ಚೆಲ್ಲಾಪಿಲ್ಲಿ ಮಾಡಿತ್ತು. ಈ ಬಗ್ಗೆಯೂ ನೆನಪಿಸಿಕೊಂಡ ಪ್ರಧಾನಿ ಮೋದಿ, ಅಂದು ಬಾಂಗ್ಲಾದೇಶೀಯರು ಪಾಕಿಸ್ತಾನದ ಕಿರುಕುಳದಿಂದಾಗಿ ಬಸವಳಿದಿದ್ದರು. ನಮ್ಮ ವೀರ ಯೋಧರು, ಪಾಕಿಸ್ತಾನಕ್ಕೆ ತಕ್ಕ ಪಾಠ ಕಲಿಸಿ ಬಾಂಗ್ಲಾದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು ಎಂದರು. 1971ರ ಯುದ್ಧದ ವೀರ ಯೋಧ ಬ್ರಿಗೇಡಿಯರ್ ಕುಲ್ದೀಪ್ ಸಿಂಗ್ ಚಾಂದ್ ಪುರಿ ಅವರ ಬಲಿದಾನವನ್ನು ನೆನಪಿಸಿಕೊಂಡರು. ಕುಲ್ದೀಪ್ ಸಿಂಗ್ ಚಾಂದ್ ಪುರಿ ಅವರನ್ನು ರಾಷ್ಟ್ರದೀಪ ಎಂದು ಕರೆದರು. ಈ ಯುದ್ಧ ನಡೆದು 2021ಕ್ಕೆ 50 ವರ್ಷಗಳಾಗಲಿವೆ ಎಂಬುದನ್ನು ಮೋದಿ ನೆನಪು ಮಾಡಿದರು.

ಆಧಾರ: ಉದಯವಾಣಿ, ದಿನಾಂಕ:15.11.2020

## 46. 'ವರ್ಕ್ ಫ್ರಂ ಎನಿವೇರ್' ಗೆ ಶೀಘ್ರವೇ ಅವಕಾಶ

ಐಟಿ ಮತ್ತು ಸಂಬಂಧಿತ ಕ್ಷೇತ್ರಗಳಿಗೆ ವರ್ಕ್ ಫ್ರಮ್ ಹೋಂ ಮಾತ್ರವಲ್ಲ ವರ್ಕ್ ಫ್ರಂ ಎನಿವೇರ್‌ಗೆ (ಮನೆಯಿಂದ ಅಲ್ಲದೇ ಎಲ್ಲಿಂದಲಾದರೂ ಕೆಲಸ ಮಾಡುವುದು) ಅನುಕೂಲ ಕಲ್ಪಿಸಲು ಕಾನೂನು ಜಾರಿಗೆ ತರಲಾಗುವುದು ಎಂದು ಕೇಂದ್ರ ಕಾನೂನು ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ರವಿಶಂಕರ್ ಪ್ರಸಾದ್ ಹೇಳಿದರು.

23ನೇ 'ಬೆಂಗಳೂರು ತಂತ್ರಜ್ಞಾನ' ಶೃಂಗದಲ್ಲಿ ಮಾತನಾಡಿದ ಅವರು ಲಾಕ್‌ಡೌನ್ ಸಂದರ್ಭದಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಉದ್ಯೋಗಿಗಳು ಮನೆಯಿಂದಲೇ ಶೇ.7 ರಷ್ಟು ಅಭಿವೃದ್ಧಿಯನ್ನು ಸಾಧಿಸಿ ತೋರಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಎಲ್ಲಿಂದಲಾದರೂ ಕೆಲಸ ಮಾಡುವ (ವರ್ಕ್ ಫ್ರಂ ಎನಿವೇರ್) ಸಂಬಂಧ ಕಾರ್ಮಿಕ ಕಾಯ್ದೆಗೆ ತಿದ್ದುಪಡಿ ತರಲು ಉದ್ದೇಶಿಸಲಾಗಿದೆ ಚೀನಾ ಬಗ್ಗೆ ಅಸಮಾಧಾನಗೊಂಡಿರುವ ಕೆಲವು ಮೊಬೈಲ್ ಕಂಪನಿಗಳು ಭಾರತದಲ್ಲಿ ಬಂಡವಾಳ ಹೂಡಿಕೆ ಮಾಡುತ್ತಿವೆ. ಸುಮಾರು ರೂ.11 ಲಕ್ಷ ಕೋಟಿ ಬಂಡವಾಳ ಹೂಡಿಕೆಯಾಗಲಿದೆ. ಇಲ್ಲಿ ತಯಾರಾಗುವ ಮೊಬೈಲ್‌ಗಳ ಪೈಕಿ ರೂ.7ಲಕ್ಷದಷ್ಟು ಸೆಟ್‌ಗಳು ಭಾರತೀಯ ಮಾರುಕಟ್ಟೆಯನ್ನು ಪ್ರವೇಶಿಸಿದರೆ ಉಳಿದ ಸುಮಾರು 5 ಲಕ್ಷ ಮೊಬೈಲ್ ಸೆಟ್‌ಗಳು ರಫ್ತು ಆಗಲಿವೆ ಎಂದು ಹೇಳಿದರು.

ದತ್ತಾಂಶ ಕ್ಷೇತ್ರದಲ್ಲಿ ಸಾಕಷ್ಟು ಅವಕಾಶಗಳು ಸೃಷ್ಟಿಯಾಗಿವೆ. ಸದ್ಯವೇ ದತ್ತಾಂಶ ರಕ್ಷಣಾ ಕಾನೂನು ಜಾರಿಗೆ ತರಲಾಗುವುದು. ಕರ್ನಾಟಕ ದತ್ತಾಂಶ ಆರ್ಥಿಕತೆಗೆ ಹೆಚ್ಚಿನ ಒತ್ತು ನೀಡಿದರೆ. ಐಟಿ ಕ್ಷೇತ್ರದಂತೆ ಬೃಹತ್ ಆಗಿ ಬೆಳೆಯಲು ಕರ್ನಾಟಕಕ್ಕೆ ಅವಕಾಶವಿದೆ. ಡಿಜಿಟಲ್ ತಾಂತ್ರಿಕತೆಯ ಬೆಳವಣಿಗೆಗೆ ಪೂರಕವಾಗಿ ಮೂಲಸೌಕರ್ಯ ಕಲ್ಪಿಸಲು ಒತ್ತು ನೀಡಿರುವ ಕೇಂದ್ರ ಸರ್ಕಾರವು 1000 ದಿನಗಳಲ್ಲಿ 6

ಲಕ್ಷ ಕಿ.ಮೀ. ಉದ್ದದಷ್ಟು ಆಪ್ಟಿಕ್ ಫೈಬರ್ ಕೇಬಲ್ ಜಾಲ ನಿರ್ಮಿಸಲು ಯೋಜನೆ ಹಾಕಿಕೊಂಡಿದೆ ಎಂದು ಅವರು ಹೇಳಿದರು.

**60 ಲಕ್ಷ ಉದ್ಯೋಗದ ಗುರಿ:** ಐಟಿ ಕ್ಷೇತ್ರದಲ್ಲಿ ಮುಂದಿನ 5 ವರ್ಷಗಳಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ 60 ಲಕ್ಷ ಉದ್ಯೋಗ ಸೃಷ್ಟಿಸುವ ಗುರಿಯನ್ನು ಹಾಕಿಕೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಅವರು ಹೇಳಿದರು.

**ರೂ.30 ಸಾವಿರ ಕೋಟಿ ಡಿಜಿಟಲ್ ಆರ್ಥಿಕತೆ:** ಮುಂದಿನ 5 ವರ್ಷಗಳಲ್ಲಿ ರೂ.30 ಸಾವಿರ ಕೋಟಿ ಡಿಜಿಟಲ್ ಆರ್ಥಿಕತೆಯ ಗುರಿ ಹಾಕಿಕೊಳ್ಳಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಾ:ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಸದ್ಯಕ್ಕೆ ರೂ.5,200 ಕೋಟಿ ಡಿಜಿಟಲ್ ಆರ್ಥಿಕತೆ ಗುರಿಯನ್ನು ರಾಜ್ಯವು ದಾಟಿವೆ. ಮುಂದಿನ ಐದು ವರ್ಷಗಳಲ್ಲಿ ರೂ.30 ಸಾವಿರ ಕೋಟಿ ಗುರಿಯನ್ನು ಮುಟ್ಟಲು ಎಲ್ಲ ರೀತಿಯ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಪ್ರಧಾನ ಮಂತ್ರಿ ಮೋದಿಯವರು ನಿಗದಿಪಡಿಸಿರುವ ರೂ.1 ಲಕ್ಷ ಕೋಟಿ ಡಿಜಿಟಲ್ ಆರ್ಥಿಕತೆ ಗುರಿಗೆ ಹೆಚ್ಚಿನ ಕೊಡುಗೆ ನೀಡಲು ಕರ್ನಾಟಕ ಸನ್ನದ್ಧವಾಗಿದೆ. ಈ ನಿಟ್ಟಿನಲ್ಲಿ ಐಟಿ–ಬಿಟಿ ಸೇರಿದಂತೆ ಸರ್ವ ಕ್ಷೇತ್ರಗಳಲ್ಲೂ ಸುಧಾರಣೆಗಳನ್ನು ತರಲಾಗಿದೆ ಎಂದು ಹೇಳಿದರು.

ಆಧಾರ:ಪ್ರಜಾವಾಣಿ, ದಿನಾಂಕ:20.11.2020

## 47. ಸೈಬರ್ ದಾಳಿಯಿಂದ ದೇಶ ರಕ್ಷಿಸುವ ಯೋಧರು ಬೇಕು

ತಂತ್ರಜ್ಞಾನ ಬಳಕೆ ಹೆಚ್ಚಳದೊಂದಿಗೆ ದತ್ತಾಂಶ ಸಂರಕ್ಷಣೆ ಮತ್ತು ಸೈಬರ್ ಸುರಕ್ಷತೆ ದೇಶದ ಮುಂದಿನ ಅತಿ ದೊಡ್ಡ ಸವಾಲು. ಸೈಬರ್ ದಾಳಿ ಹಾಗೂ ವೈರಸ್ ಹಾವಳಿಯಿಂದ ದೇಶವನ್ನು ರಕ್ಷಿಸುವ ಯೋಧರು ನಮಗಿಂದು ಬೇಕಾಗಿದ್ದಾರೆ. ದೇಶದ ಪ್ರತಿಭಾವಂತ ಯುವ ಸಮೂಹ ಈ ದಿಸೆಯಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

ಬೆಂಗಳೂರಿನಲ್ಲಿ ಆರಂಭವಾದ ಮೂರು ದಿನಗಳ 23ನೇ ಬೆಂಗಳೂರು ಟೆಕ್ 2020 ಶೃಂಗಸಭೆಯನ್ನು ದೆಹಲಿಯಿಂದಲೇ ವರ್ಚುವಲ್ ಮಾಧ್ಯಮದ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು ಭಾರತ ವಿಶ್ವದ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಿರುವಂತೆಯೇ ಅತಿ ದೊಡ್ಡ ಆನ್‌ಲೈನ್ ಮಾರುಕಟ್ಟೆಯೂ ಆಗಿದೆ. ಇದು ಕೋಟ್ಯಂತರ ರೂಪಾಯಿ ಮೌಲ್ಯದ ವಹಿವಾಟು ಆನ್‌ಲೈನ್‌ನಲ್ಲಿ ನಡೆದಿದೆ. ಇದರಿಂದಾಗಿ ಸೈಬರ್ ದಾಳಿಯ ಆತಂಕವು ಹೆಚ್ಚಾಗುತ್ತಿದೆ. ಇದನ್ನು ನಿಯಂತ್ರಿಸುವ ಉಪಕ್ರಮಗಳನ್ನು ರೂಪಿಸುವ ದಿಸೆಯಲ್ಲಿ ಯುವ ಮಿದುಳುಗಳು ಕಾರ್ಯ ತತ್ಪರರಾಗಬೇಕು ಎಂದರು.

ಕೈಗಾರಿಕೆ ಯುಗದ ಸಾಧನೆಗಳು ಮುಗಿದಿವೆ. ಈಗ ಮಾಹಿತಿ ಯುಗದ ಮಧ್ಯದಲ್ಲಿ ಇದ್ದೇವೆ. ಕೈಗಾರಿಕೆಗಳು ಕಚ್ಚಾ ವಸ್ತುಗಳು ಸೇರಿದಂತೆ ಅನೇಕ ಅಂಶಗಳ ಮೇಲೆ ಆಧಾರಿತವಾಗಿದ್ದವು. ತಂತ್ರಜ್ಞಾನ ಯುಗವು ಸಂಪೂರ್ಣವಾಗಿ ಮಾಹಿತಿ ಅವಲಂಬಿಸಿದೆ. ಈ ಮಾಹಿತಿ ಸ್ಫೋಟದಿಂದಾಗಿ ಪ್ರತಿಭಾವಂತರು ಹಲವು ಆಯಾಮಗಳಲ್ಲಿ ಬೆಳೆಯಲು ವಿಫುಲ ಅವಕಾಶವಿದೆ. ಯಾರೂ ಬೇಕಾದರೂ ಯಾವುದೇ ಸಮಯದಲ್ಲಿ ಮಾರುಕಟ್ಟೆಯಲ್ಲಿ ಇರುವ ಸಮೀಕರಣಗಳನ್ನು ಮುರಿಯುವ ಮುಕ್ತ ಅವಕಾಶ ಮಾಹಿತಿ ತಂತ್ರಜ್ಞಾನ ಒದಗಿಸಿದೆ. ಇದನ್ನು ಯುವ ಸಮೂಹ ಬಳಸಿಕೊಳ್ಳಬೇಕು ಎಂದರು.

ಭಾರತವು ಮಾಹಿತಿ ಯುಗದಲ್ಲಿ ಮಹತ್ತರ ಸಾಧನೆ ತೋರುವ ವಿಶಿಷ್ಟ ಅವಕಾಶ ಹೊಂದಿದೆ. ಕೌಶಲ್ಯ ಜ್ಞಾನ ಹಾಗೂ ಬುದ್ಧಿ ಮತ್ತೆ ಹೊಂದಿರುವ ಯುವ ಸಮೂಹ ಹಾಗೂ ಅಷ್ಟೇ ವಿಶಾಲ ಮಾರುಕಟ್ಟೆಯನ್ನು ಹೊಂದಿದೆ. ಇದಕ್ಕೆ ಪೂರಕವಾಗಿ ಸ್ಥಳೀಯ ತಂತ್ರಜ್ಞಾನ ರೂಪುಗೊಳ್ಳುತ್ತಿರುವುದು ಉತ್ತಮ ಸಾಧನೆ. ಈ ಸ್ಥಳೀಯ ತಂತ್ರಜ್ಞಾನಗಳು ಜಾಗತಿಕ ಮಟ್ಟಕ್ಕೆ ಏರುವ ಸಾಮರ್ಥ್ಯ ಹೊಂದಿದೆ.

ದೇಶಿಯ ತಂತ್ರ ಜ್ಞಾನಗಳನ್ನು ಜಾಗತಿಕ ಮಟ್ಟದಲ್ಲಿ ತೆಗೆದುಕೊಂಡು ಹೋಗುವ ಸಮಯ ಈಗ ಬಂದಿದೆ ಎಂದು ಹೇಳಿದರು.

ಮಾಹಿತಿ ತಂತ್ರಜ್ಞಾನ ಕ್ಷೇತ್ರ ಮಾತ್ರವಲ್ಲದೆ, ಜೈವಿಕ ವಿಜ್ಞಾನ ಎಂಜಿನಿಯರಿಂಗ್ ಮುಂತಾದ ಕ್ಷೇತ್ರಗಳಲ್ಲೂ ಯುವ ಸಮೂಹ ನವೀನ ಆವಿಷ್ಕಾರಗಳನ್ನು ಮಾಡುವ ಮೂಲಕ ಈ ಎಲ್ಲಾ ಕ್ಷೇತ್ರಗಳಲ್ಲೂ ಭಾರತ ಮುಂಚೂಣಿ ರಾಷ್ಟ್ರವಾಗುವಂತೆ ಮಾಡಬೇಕು ಎಂದರು.

**ಜೀವನ ವಿಧಾನ:** ಸರ್ಕಾರ ರೂಪಿಸಿದ ಡಿಜಿಟಲ್ ಇಂಡಿಯಾ ಕೇವಲ ಸರ್ಕಾರದ ಒಂದು ಕಾರ್ಯಕ್ರಮವಲ್ಲ, ಅದೊಂದು ಜೀವನ ಕ್ರಮ. ಬಡವರು, ಸಮಾಜದ ಅಂಚಿನಲ್ಲಿ ಇರುವರು ಹಾಗೂ ಸರ್ಕಾರದಲ್ಲಿ ಇರುವವರಿಗೆ ಇದರಿಂದ ಹೆಚ್ಚು ಅನುಕೂಲವಾಗಿದೆ. ಭಾರತವು ಮಾನವ ಕೇಂದ್ರೀತ ಅಭಿವೃದ್ಧಿ ಸಾಧಿಸುವ ದಿಸೆಯಲ್ಲಿ ಹೆಜ್ಜೆ ಹಾಕಿದೆ ಎಂಬುದು ಇದರಿಂದ ಸಾಬೀತಾಗಿದೆ. ತಂತ್ರಜ್ಞಾನ ಬಳಕೆಯಿಂದ ದೇಶದ ನಾಗರಿಕರ ಜೀವನದ ಗುಣಮಟ್ಟ ಸಾಕಷ್ಟು ಸುಧಾರಿಸಿದೆ.

ಸರ್ಕಾರ ಕೇವಲ ಡಿಜಿಟಲ್ ಮತ್ತು ತಂತ್ರಜ್ಞಾನಗಳ ಮಾರುಕಟ್ಟೆಯನ್ನು ಮಾತ್ರ ಸೃಷ್ಟಿಸಿಲ್ಲ, ಅದನ್ನು ಎಲ್ಲ ಯೋಜನೆಗಳ ಪ್ರಮುಖ ಭಾಗವಾಗಿ ಮಾಡಿದೆ. ತಂತ್ರಜ್ಞಾನ ಮೊದಲು ಎಂಬುದು ಸರ್ಕಾರದ ನೀತಿ. ತಂತ್ರಜ್ಞಾನದ ಬಳಕೆಯಿಂದ ಕೋವಿಡ್ ಸಂಕಷ್ಟ ವೇಳೆ ಲಕ್ಷಾಂತರ ರೈತರು ಕೇವಲ ಒಂದೇ ಕ್ಲಿಕ್‌ನಲ್ಲಿ ಹಣಕಾಸು ನೆರವು ಪಡೆದರು. ವಿಶ್ವದ ಅತಿ ದೊಡ್ಡ ಆರೋಗ್ಯ ಯೋಜನೆಯಾದ ಆಯುಷ್ಮಾನ ಭಾರತ್‌ವನ್ನು ಯಶಸ್ವಿಯಾಗಿ ನಿರ್ವಹಿಸಲಾಗುತ್ತಿದೆ. ದೇಶದ ನಾಗರಿಕ ಯಾವುದೇ ಮೂಲೆಯಲ್ಲಿ ಕೈಗೆಟುಕುವ ರೀತಿಯಲ್ಲಿ ಚಿಕಿತ್ಸೆ ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ವಿವರಿಸಿದರು.

ಸೇವೆಗಳು ಉತ್ತಮವಾಗಿ ಸಿಗಬೇಕು ಹಾಗೂ ಪಾರದರ್ಶಕ ಮತ್ತು ದಕ್ಷತೆಯಿಂದ ಕೂಡಿರಲು ದತ್ತಾಂಶ ವಿಶ್ಲೇಷಣೆಗಳನ್ನು ಸರ್ಕಾರ ಬಳಸಿಕೊಂಡಿದೆ. ಸರ್ಕಾರದ ಯೋಜನೆಗಳು ಕಡತಗಳನ್ನು ಮೀರಿ, ಜನಜೀವನವನ್ನು ಇಷ್ಟೊಂದು ತ್ವರಿತ ಗತಿಯಲ್ಲಿ ಬದಲಾವಣೆಯಾಗಲು ತಂತ್ರಜ್ಞಾನವೇ ಪ್ರಮುಖ ಕಾರಣವಾಗಿದೆ ಎಂದ ಅವರು ತಂತ್ರಜ್ಞಾನದ ಕಾರಣದಿಂದಾಗಿ ಎಲ್ಲರಿಗೂ ವಿದ್ಯುತ್ ಒದಗಿಸಲು ಸಾಧ್ಯವಾಗಿದೆ. ಟೋಲ್ ಬೂತ್‌ಗಳನ್ನು ವೇಗವಾಗಿ ದಾಟುತ್ತಿದ್ದೇವೆ ಎಂದು ಹೇಳಿದರು.

ತಂತ್ರಜ್ಞಾನದ ಪರಿಣಾಮ ಮನೆಯಿಂದ ಕೆಲಸ ಮಾಡುವುದು ಬದಲಾಗಿ ಎಲ್ಲಿಂದಾದರೂ ಕೆಲಸ ಮಾಡುವುದು ಹೊಸ ರೂಢಿಯಾಗಿದೆ. ಬಹುಶ: ಇದು ಮುಂದುವರೆಯಲಿದೆ. ಶಿಕ್ಷಣ, ಆರೋಗ್ಯ, ಶಾಪಿಂಗ್ ಇತ್ಯಾದಿ ಕೇಂದ್ರಗಳಲ್ಲಿ ಹೆಚ್ಚಿನ ಪ್ರಮಾಣದ ತಂತ್ರಜ್ಞಾನ ಅಳವಡಿಕೆಯಾಗಿದೆ ಎಂದ ಪ್ರಧಾನಿ ಮೋದಿ, ಕೇಂದ್ರ ಸರ್ಕಾರ ಯುಪಿಐ, ನ್ಯಾಷನಲ್ ಡಿಜಿಟಲ್ ಹೆಲ್ತ್ ಮಿಷನ್, ಸ್ವಾಮಿತ್ವ ಯೋಜನೆಗಳಿಗೆ ತಂತ್ರಜ್ಞಾನದ ತಳಹದಿ ಇದೆ. ರಕ್ಷಣಾ ಕ್ಷೇತ್ರದ ಬೆಳವಣಿಗೆಯಲ್ಲಿ ತಂತ್ರಜ್ಞಾನ ಮಹತ್ವದ ಪಾತ್ರ ವಹಿಸಿದೆ ಎಂದರು.

ವರ್ಚುವಲ್ ಮೂಲಕ ಉದ್ಘಾಟನೆ, ಗೋಷ್ಠಿ: ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಶೃಂಗಸಭೆಯನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ದೆಹಲಿಯಿಂದಲೇ ವರ್ಚುವಲ್ ಮಾಧ್ಯಮದ ಮೂಲಕ ಉದ್ಘಾಟಿಸಿದರು. ಮುಖ್ಯಮಂತ್ರಿ ಬಿ ಎಸ್. ಯಡಿಯೂರಪ್ಪ, ಉಪ ಮುಖ್ಯಮಂತ್ರಿ ಹಾಗೂ ಐಟಿ ಬಿಟಿ ಸಚಿವ ಡಾ: ಸಿ.ಎನ್. ಅಶ್ವಥ್‌ನಾರಾಯಣ, ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್, ಸಚಿವ ನಾರಾಯಣಗೌಡ ಅವರು ಸಾಂಪ್ರದಾಯಕವಾಗಿ ಜ್ಯೋತಿ ಬೆಳಗುವ ಮೂಲಕ ಚಾಲನೆ ನೀಡಿದರು.

ಕೇಂದ್ರ ಐಟಿ ಮತ್ತು ಸಂವಹನ ಸಚಿವ ರವಿಶಂಕರ್ ಪ್ರಸಾದ್ ಆಸ್ಟ್ರೇಲಿಯ ಪ್ರಧಾನಿ ಸ್ಕಾಟ್ ಮ್ಯಾರಿಸನ್ ಸ್ವೀಸ್, ದೇಶದ ಉಪ ರಾಷ್ಟ್ರಪತಿ ಅವರು ಸಹ ವರ್ಚುವಲ್ ಮಾಧ್ಯಮ ಮೂಲಕ

ಮಾತನಾಡಿದರು. ನಂತರ ನಡೆದ ವಿವಿಧ ಗೋಷ್ಠಿಗಳು ವರ್ಚುವಲ್ ಮಾಧ್ಯಮಗಳ ಮೂಲಕ ನಡೆದದ್ದು ವಿಶೇಷವಾಗಿತ್ತು.

ಆಧಾರ: ಕನ್ನಡಪ್ರಭ, ದಿನಾಂಕ:20.11.2020

## 48. 58 ಬಗೆಯ ಶಸ್ತ್ರಚಿಕಿತ್ಸೆ ನಡೆಸಲಷ್ಟೆ ಅನುಮತಿ

ಸ್ನಾತಕೋತ್ತರ ಪದವಿ ಪಡೆದ ಆಯುರ್ವೇದ ವೈದ್ಯರಿಗೆ ಎಲ್ಲ ರೀತಿಯ ಶಸ್ತ್ರಚಿಕಿತ್ಸೆಗೆ ಅನುಮತಿ ನೀಡಿಲ್ಲ. 58 ಬಗೆಯ ನಿರ್ದಿಷ್ಟ ಶಸ್ತ್ರಚಿಕಿತ್ಸೆ ನಡೆಲು ಸೂಕ್ತ ತರಬೇತಿ ಪಡೆದ ನಂತರವೇ ಒಪ್ಪಿಗೆ ನೀಡಲಾಗುತ್ತದೆ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ.

ಆಯುರ್ವೇದ ವೈದ್ಯರು ಕೂಡ ಆಲೋಪಥಿಯ ವೈದ್ಯರಂತೆ ಶಸ್ತ್ರಚಿಕಿತ್ಸೆ ನಡೆಸಬಹುದು ಎಂದು ಕೇಂದ್ರ ಸರ್ಕಾರ (ಭಾರತೀಯ ವೈದ್ಯಪದ್ಧತಿಯ ಕೇಂದ್ರೀಯ ಮಂಡಳಿ–ಸಿಸಿಐಎಂ) ಇತ್ತಿಚೆಗೆ ಸುತ್ತೋಲೆ ಹೊರಡಿಸಿತ್ತು. ಇದನ್ನು ಭಾರತೀಯ ವೈದ್ಯರ ಆಸೋಸಿಯೇಷನ್ (ಐಎಂಎ) ಪ್ರಬಲವಾಗಿ ವಿರೋಧಿಸಿದ ಬೆನ್ನಿಗೆ ಈ ಸ್ಪಷ್ಟನೆ ನೀಡಲಾಗಿದೆ.

ಆಯುರ್ವೇದದ ಸ್ನಾತಕೋತ್ತರ ವ್ಯಾಸಂಗದಲ್ಲಿನ ಶಲ್ಯ ಮತ್ತು ಶಾಲಾಕ್ಯ ಚಿಕಿತ್ಸೆಯಲ್ಲಿ ಉಲ್ಲೇಖಿತವಾಗಿರುವ ಶಸ್ತ್ರಚಿಕಿತ್ಸೆಗಷ್ಟೆ ಅನುಮತಿ ನೀಡಲಾಗಿದೆ. ಆದರೆ, ಈ ರೀತಿಯ ಆಪರೇಷನ್ ನಡೆಸುವುದಕ್ಕೂ ಮುನ್ನ ಪ್ರಾಯೋಗಿಕ ತರಬೇತಿ ಪಡೆದುಕೊಳ್ಳುವುದು ಅವಶ್ಯಕ ಎಂದು ಅಧಿಸೂಚನೆಯಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

**ಎರಡು ವರ್ಗದ ಶಸ್ತ್ರಚಿಕಿತ್ಸೆ:** ಸ್ನಾತಕೋತ್ತರ ವ್ಯಾಸಂಗದಲ್ಲಿ ಎರಡು ವರ್ಗದ ಶಸ್ತ್ರಚಿಕಿತ್ಸೆಯನ್ನು ಕಲ್ಪಿಸಲಾಗುತ್ತದೆ ಎಂಎಸ್ (ಆಯುರ್ವೇದ) ಶಲ್ಯ ತಂತ್ರ ಅಂದರೆ ಸಾಮಾನ್ಯ ಶಸ್ತ್ರಚಿಕಿತ್ಸೆ ಹಾಗೂ ಎಂಎಸ್ (ಆಯುರ್ವೇದ) ಶಾಲಾಕ್ಯ ತಂತ್ರ (ಕಣ್ಣು, ಕಿವಿ, ಮೂಗು, ಗಂಟಲು, ತಲೆ, ಮೂಳೆ ಮತ್ತು ಹಲ್ಲಿಗೆ ಸಂಬಂಧಿಸಿದ ಶಸ್ತ್ರಚಿಕಿತ್ಸೆ). 2016ರ ಅಧಿಸೂಚನೆಯಲ್ಲಿ ಉಲ್ಲೇಖಿಸಿದ್ದ ಆಯುರ್ವೇದ ವೈದ್ಯರು ನಡೆಸುವ ಶಸ್ತ್ರಚಿಕಿತ್ಸೆ ಕುರಿತ ಕೆಲವು ಸ್ಪಷ್ಟನೆಯನ್ನು ಈ ಅಧಿಸೂಚನೆಯಲ್ಲಿ ನೀಡಲಾಗಿದೆ ಎಂದು ಸಚಿವಾಲಯ ಹೇಳಿದೆ.

**ಐಎಂಎ ಖಂಡನೆ:** ಮೂಳೆ, ಕಣ್ಣು, ಕಿವಿ ಮತ್ತು ಮೂಗು ಹಲ್ಲಿನ ಸಾಮಾನ್ಯ ಶಸ್ತ್ರಚಿಕಿತ್ಸೆಗಳನ್ನು ಆರ್ಯುವೇದದ ವೈದ್ಯರು ನಡೆಸಬಹುದಾಗಿದೆ ಎಂದು ಭಾರತೀಯ ವೈದ್ಯ ಪದ್ಧತಿಯ ಕೇಂದ್ರೀಯ ಮಂಡಳಿಯು (ಸಿಸಿಐಎಂ) ನಿರ್ಧಾರವನ್ನು ಐಎಂಎ ತೀವ್ರವಾಗಿ ಖಂಡಿಸಿದೆ.

ಆಧಾರ:ವಿಜಯವಾಣಿ, ದಿನಾಂಕ:23.11.2020

## 49. ಪ್ಯಾರಿಸ್ ಒಪ್ಪಂದದ ಗುರಿ ಮೀರಿ ಭಾರತ ಸಾಧನೆ

ಜಾಗತಿಕ ತಾಪಮಾನ ಏರಿಕೆ ತಡೆಯುವ ದಿಸೆಯಲ್ಲಿ ಪ್ಯಾರಿಸ್ ಒಪ್ಪಂದ ನಿಗದಿ ಪಡಿಸಿದ್ದ ಸುಧಾರಣೆಯ ಗುರಿಯನ್ನು ದಾಟಿ ಭಾರತ ಅತ್ಯುತ್ತಮ ಕೆಲಸಗಳನ್ನು ಮಾಡಿದೆ. ಹವಾಮಾನ ವೈಪರೀತ್ಯ ತಡೆಗೆ ಶ್ರಮಿಸುವುದು ಯಾವುದೇ ಒಂದು ದೇಶದ ಜವಾಬ್ದಾರಿಯಲ್ಲ. ಅದು ಎಲ್ಲರ ಹೆಗಲ ಮೇಲಿರುವ ಸಂಘಟಿತ ಹೊಣೆಗಾರಿಕೆ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

ಜಿ 20 ವರ್ಚುವಲ್ ಶೃಂಗಸಭೆ ಉದ್ದೇಶಿಸಿ ಮಾತನಾಡಿದ ಅವರು ಮಾಲಿನ್ಯದಿಂದಾಗಿ ಪರಿಸರದ ಮೇಲೆ ತೀವ್ರ ಒತ್ತಡ ಸೃಷ್ಟಿಯಾಗಿದೆ. ಈ ವಿಷಯದಲ್ಲಿ ಯಾರು ಕೂಡ ಉದಾಸೀನ ಮಾಡುವಂತಿಲ್ಲ. ಆದ್ಯತೆಯ ಮೇರೆಗೆ ಹವಾಮಾನ ಬದಲಾವಣೆ ತಡೆ ಕ್ರಮಗಳು ಜರುಗಬೇಕಿದೆ. ಈ ನಿಟ್ಟಿನಲ್ಲಿ ಭಾರತ ಮಹತ್ವದ ಹೆಜ್ಜೆಗಳನ್ನು ಇರಿಸಿದೆ ಎಂದರು.

ಮನುಕುಲದ ಸಮಗ್ರ ಏಳಿಗೆ ಸಾಧ್ಯವಾಗಬೇಕಾದರೆ ಪ್ರತಿಯೊಬ್ಬ ಮನುಷ್ಯನು ಸಮೃದ್ಧಿ ಹೊಂದುವ ಅಗತ್ಯ ಇದೆ. ಪರಿಸರದ ಜೊತೆ ಸೌಹಾರ್ದತೆಯಿಂದ ಬದುಕಲು ನೆರವಾಗುವ ಸಾಂಪ್ರದಾಯಿಕ ಮೌಲ್ಯಗಳು ಭಾರತದ ಜೀವಾಳ. ಈ ದಿಸೆಯಲ್ಲಿ ದೇಶ ಕಡಿಮೆ ಇಂಗಾಲ ಮತ್ತು ಹವಾಮಾನ ಸ್ಥಿತಿಸಾಪಕ ಅಭಿವೃದ್ಧಿ ಪದ್ಧತಿಗಳನ್ನು ಅಳವಡಿಸಿಕೊಂಡಿದೆ. ಭಾರತವು ಪ್ಯಾರಿಸ್ ಒಪ್ಪಂದದ ಗುರಿಗಳನ್ನು ಪೂರೈಸುವುದು ಮಾತ್ರವಲ್ಲದೆ ಅವುಗಳನ್ನು ಮೀರಿ ಮುಂದೆ ಸಾಗಿದೆ ಹವಾಮಾನ ಬದಲಾವಣೆಯಿಂದ ಬರಡಾಗಿರುವ ಭಾರತದ 26 ದಶಲಕ್ಷ ಹೆಕ್ಟೇರ್ ಭೂಮಿಯನ್ನು ಮರುಫಲವತ್ತುಗೊಳಿಸುವ ಕಾರ್ಯ ನಡೆದಿದೆ. 2030ರ ವೇಳೆಗೆ ಇಷ್ಟು ಭೂಮಿಯನ್ನು ನಾವು ಕೃಷಿ ಯೋಗ್ಯಗೊಳಿಸುತ್ತೇವೆ. ಅವರ್ತನಾಶೀಲ ಆರ್ಥಿಕತೆಗೆ ನಾವು ಬೆಂಬಲ ನೀಡುತ್ತೇವೆ ಎಂದು ಪ್ರಧಾನಿ ಘೋಷಿಸಿದರು.

ಈ ವರ್ಷದ ಜಿ 20 ಶೃಂಗಸಭೆಯ ಅತಿಥ್ಯವನ್ನು ಸೌದಿ ಅರೇಬಿಯಾ ವಹಿಸಿದ್ದು, ಅಮೆರಿಕ, ಚೀನಾ, ಭಾರತ, ಟರ್ಕಿ, ಫ್ರಾನ್ಸ್, ಇಂಗ್ಲೆಂಡ್ ಮತ್ತು ಬ್ರೆಜಿಲ್ ಸೇರಿದಂತೆ ಹಲವು ಪ್ರಬಲ ದೇಶಗಳ ದಿಗ್ಗಜರನ್ನು ಒಂದು ವೇದಿಕೆಗೆ ಕರೆತರಲಾಗಿದೆ. ಜಾಗತಿಕ ತಾಪಮಾನ ಏರಿಕೆ ಸರಾಸರಿಯನ್ನು 2 ಡಿಗ್ರಿ ಸೆಲ್ಸಿಯಸ್ ಮೀರದಂತೆ ನೋಡಿಕೊಳ್ಳುವುದು ಪ್ಯಾರಿಸ್ ಒಪ್ಪಂದದ ಪ್ರಧಾನ ಗುರಿಯಾಗಿದೆ. ಹಸಿರು ಅನಿಲ ಪರಿಣಾಮ ತಡೆಯುವುದು ಸೇರಿದಂತೆ ಹಲವು ಸುಧಾರಣಾ ನಿರ್ಣಯಗಳನ್ನು ಈ ಒಪ್ಪಂದ ಕೈಗೊಂಡಿದೆ.

**ಸೌರ ಒಕ್ಕೂಟದ ಸಾಧನೆ:** ಪರಿಸರದ ಮೇಲಿನ ಒತ್ತಡ ತಗ್ಗಿಸುವ ದಿಸೆಯಲ್ಲಿ ಅಂತರರಾಷ್ಟ್ರೀಯ ಸೌರ ಒಕ್ಕೂಟ (ಐಎಸ್ಎ) ಮಹತ್ವದ ಪಾತ್ರ ನಿರ್ವಹಿಸುತ್ತಿದೆ. ಅಂತರರಾಷ್ಟ್ರೀಯ ಸಂಘಟನೆಗಳ ಪೈಕಿ ಇದು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಸಂಘಟನೆ, ಪರಿಸರ ಸೇರುತ್ತಿರುವ ಇಂಗಾಲ ನಿಯಂತ್ರಿಸುವಲ್ಲಿ ಎಎಸ್ಎ ಎಲ್ಲರೂ ಮೆಚ್ಚುವ ಕೆಲಸ ಮಾಡುತ್ತಿದೆ ಎಂದು ಪ್ರಧಾನಿ ಮೋದಿ ಬಣ್ಣಿಸಿದರು.

ಶೃಂಗದ ಮೊದಲ ದಿನ ಮಾತನಾಡಿದ್ದ ಪ್ರಧಾನಿಯವರು ಕೋವಿಡ್ ನಂತರದ ಜಾಗತಿಕ ಅಭಿವೃದ್ಧಿ ಸೂಚ್ಯಂಕ ನಿಗದಿಪಡಿಸಲು ಹೊಸ ಮಾನದಂಡಗಳನ್ನು ರೂಪಿಸಬೇಕಾದ ಅಗತ್ಯವಿದೆ ಎಂದು ಪ್ರತಿಪಾದಿಸಿದ್ದರು. ಪ್ರತಿಭಾವಂತರಿಗೆ ಅವಕಾಶ ಸೃಷ್ಟಿಗೆ ಆದ್ಯತೆ, ಸಮಾಜದ ಎಲ್ಲರಿಗೂ ತಂತ್ರಜ್ಞಾನದ ಲಭ್ಯತೆ ಮೂಲಕ ಎಲ್ಲಾ ದೇಶಗಳು ಕೊರೋನಾ ಸಂಕಷ್ಟದಿಂದ ಬೇಗ ಚೇತರಿಸಿಕೊಳ್ಳಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:23.11.2020

## 50. ಸಂಸದರ ಫ್ಲಾಟ್‌ಗೆ ಮೋದಿ ಚಾಲನೆ

ದೆಹಲಿಯಲ್ಲಿ 80 ವರ್ಷ ಹಳೆ ಬಂಗಲೆಗಳಿದ್ದ ಜಾಗದಲ್ಲಿ ಸಂಸದರಿಗಾಗಿ ನೂತನವಾಗಿ ನಿರ್ಮಿಸಲಾದ 76 ಫ್ಲಾಟ್‌ಗಳನ್ನು ಒಳಗೊಂಡ ಬಹುಮಹಡಿ ಕಟ್ಟಡದ ಉದ್ಘಾಟನೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ನೆರವೇರಿಸಿದರು. ಅನ್‌ಲೈನ್ ಮೂಲಕ ನಡೆದ ಈ ಉದ್ಘಾಟನೆ ಕಾರ್ಯಕ್ರಮಮದಲ್ಲಿ ಲೋಕಸಭೆ ಸ್ಪೀಕರ್ ಓಂ ಬಿರ್ಲಾ, ಸಂಸದೀಯ ಖಾತೆ ಸಚಿವ ಪ್ರಹ್ಲಾದ್ ಜೋಶಿ ಸಹ ಭಾಗವಹಿಸಿದರು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಮೋದಿ, ಹೊಸ ಕಟ್ಟಡ ನಿರ್ಮಾಣದ ವೇಳೆ ಎಲ್ಲಾ ಪರಿಸರ ಸ್ನೇಹಿ ತಂತ್ರಜ್ಞಾನ ಬಳಸಲಾಗಿದೆ. ಯೋಜನಾ ವೆಚ್ಚಕ್ಕಿಂತ ಶೇ.14 ರಷ್ಟು ಕಡಿಮೆ ವೆಚ್ಚದಲ್ಲಿ ನಿರ್ಮಾಣ ಪೂರ್ಣಗೊಂಡಿದೆ. ಕೋವಿಡ್ ಸಮಸ್ಯೆಗಳ ಹೊರತಾಗಿಯೂ ನಿಗದಿತ ಕಾಲಮಿತಿಯಲ್ಲಿ ಯೋಜನೆ ಪೂರ್ಣಗೊಂಡಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ದಿಲ್ಲಿಯಲ್ಲಿ ಕೇವಲ ಸಂಸದರ ನಿವಾಸವಷ್ಟೇ ಅಲ್ಲದೆ ಹಲವು ಯೋಜನೆಗಳು ಹಲವು ವರ್ಷಗಳ ಕಾಲ ನೆನೆಗುದಿಗೆ ಬಿದ್ದದ್ದವು. ಆದರೆ ತಮ್ಮ ಸರ್ಕಾರ ಜಾರಿಗೆ ಬಂದ ಬಳಿಕ 23 ವರ್ಷಗಳ ಕಾಲ ನೆನೆಗುದಿಗೆ ಬಿದ್ದದ್ದ ಆಂಬೇಡ್ಕರ್ ಆಂತರರಾಷ್ಟ್ರೀಯ ಕೇಂದ್ರ, ರಾಷ್ಟ್ರೀಯ ಯುದ್ಧ ಸ್ಮಾರಕ, ಕೇಂದ್ರೀಯ ಮಾಹಿತಿ ಆಯೋಗಕ್ಕೆ ಹೊಸ ಕಟ್ಟಡ ಸೇರಿದಂತೆ ಇನ್ನಿತರ ಯೋಜನೆಗಳನ್ನು ನಿರ್ದಿಷ್ಟ ಕಾಲಾವಧಿಯಲ್ಲಿ ಪೂರ್ಣಗೊಳಿಸಲಾಗುತ್ತಿದೆ ಎಂದರು ಪ್ರಧಾನಿ ನರೇಂದ್ರ ಮೋದಿ.

ಆಧಾರ: ಕನ್ನಡಪ್ರಭ, ದಿನಾಂಕ:24.11.2020

## 51. ರಾತ್ರಿ ಕರ್ಫ್ಯೂ ಹೇರಲು ರಾಜ್ಯಗಳಿಗೆ ಅಧಿಕಾರ

ದೇಶಾದ್ಯಂತ ಹಲವು ರಾಜ್ಯಗಳಲ್ಲಿ ಹೊಸದಾಗಿ ಭಾರಿ ಪ್ರಮಾಣದ ಕೊರೋನಾ ಪ್ರಕರಣಗಳು ದಾಖಲಾಗುತ್ತಿರುವ ಬೆನ್ನಲ್ಲೇ ಸೋಂಕು ನಿಯಂತ್ರಣದ ನಿಟ್ಟಿನಲ್ಲಿ ಕೇಂದ್ರ ಗೃಹ ಸಚಿವಾಲಯ ಹೊಸ ಮಾರ್ಗಸೂಚಿ ಬಿಡುಗಡೆ ಮಾಡಿದೆ. ಅದರನ್ವಯ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ರಾತ್ರಿ ಕರ್ಫ್ಯೂದಂತಹ ಸ್ಥಳೀಯ ನಿರ್ಬಂಧ ಹೇರಲು ಅವಕಾಶ ಮಾಡಿಕೊಟ್ಟಿದೆ. ಆದರೆ ಕಂಟೈನ್ಮೆಂಟ್ ಹೊರತುಪಡಿಸಿದ ಪ್ರದೇಶಗಳಲ್ಲಿ ಲಾಕ್‌ಡೌನ್ ಕ್ರಮ ಜಾರಿಗೂ ಮುನ್ನ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯುವುದು ಕಡ್ಡಾಯ ಎಂದು ಸ್ಪಷ್ಟಪಡಿಸಿದೆ.

ಡಿಸೆಂಬರ್ ತಿಂಗಳಿಗೆ ನಿಗಾ, ನಿಯಂತ್ರಣ ಮತ್ತು ಎಚ್ಚರಿಕೆಗಾಗಿ ಮಾರ್ಗಸೂಚಿ ಬಿಡುಗಡೆ ಮಾಡಲಾಗಿದೆ ಎಂದು ಹೇಳಿರುವ ಗೃಹ ಸಚಿವಾಲಯ, ಇದರ ಮುಖ್ಯ ಉದ್ದೇಶ, ದೇಶದಲ್ಲಿ ಈಗಾಗಲೇ ಹಂತಹಂತವಾಗಿ ಇಳಿಕೆಯಾಗುತ್ತಿರುವ ಸೋಂಕಿನ ಪ್ರಮಾಣದ ಗತಿಯನ್ನು ಮುಂದುವರೆಸಿಕೊಂಡು ಹೋಗುವುದಾಗಿದೆ ಎಂದು ಹೇಳಿದೆ. ಇತ್ತೀಚಿನ ಹಬ್ಬದ ದಿನಗಳು ಹಾಗೂ ಚಳಿಗಾಲದ ಅವಧಿಯಲ್ಲಿ ದೇಶದ ಹಲವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಹೊಸ ಪ್ರಕರಣಗಳಲ್ಲಿ ಏರಿಕೆ ಕಂಡು ಬಂದಿದ್ದು, ಈ ಪಿಡುಗಿನಿಂದ ಹೊರಬರಲು ಎಚ್ಚರಿಕೆ ವಹಿಸಬೇಕಾದ ಮತ್ತು ನಿರ್ಬಂಧ ಕ್ರಮಗಳನ್ನು ಅತ್ಯಂತ ಕಟ್ಟುನಿಟ್ಟಾಗಿ ಪಾಲಿಸಬೇಕಾದ ಆಗತ್ಯವಿದೆ ಎಂದು ಗೃಹ ಸಚಿವಾಲಯ ಸೂಚಿಸಿದೆ.

**ಮಾರ್ಗಸೂಚಿಯಲ್ಲಿ ಏನೇನಿದೆ:**

- ಕಂಟೈನ್ಮೆಂಟ್ ಪ್ರದೇಶ ಹೊರತುಪಡಿಸಿ ಉಳಿದೆಲ್ಲಾ ಪ್ರದೇಶಗಳಲ್ಲಿ ಕೆಲವೊಂದು ನಿರ್ಬಂಧ ಹೊರತುಪಡಿಸಿ ಉಳಿದೆಲ್ಲಾ ಚಟುವಟಿಕೆಗಳಿಗೆ ಅವಕಾಶ ಇದೆ.
- ಕಾರ್ಯಕ್ರಮಗಳಲ್ಲಿ ಗರಿಷ್ಠ 200 ಜನರಿಗೆ ಅವಕಾಶ. ಇದನ್ನು ಸ್ಥಳೀಯ ಪರಿಸ್ಥಿತಿ ಗಮನಿಸಿ 100ಕ್ಕೆ ಇಳಿಸಬಹುದು.
- ಅಂತರರಾಜ್ಯ ವಾಹನ, ಜನರ ಸಂಚಾರಕ್ಕೆ ಯಾವುದೇ ನಿರ್ಬಂಧ ಇಲ್ಲ ಕಛೇರಿ ನಗರಗಳಲ್ಲಿ ಸಾಮಾಜಿಕ ಅಂತರ ನಿಯಮಗಳ ಮುಂದುವರಿಕೆ.

**ಡೆಹ್ರಾಡೂನ್‌ನಲ್ಲಿ ಸಂಡೇ ಲಾಕ್ ಡೌನ್**:ಕೊರೋನಾ ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಏರಿಕೆ ಆಗುತ್ತಿರುವ ಹಿನ್ನೆಲೆಯಲ್ಲಿ ಉತ್ತರಾಖಂಡದ ಡೆಹ್ರಾಡೂನ್ ಜಿಲ್ಲೆಯಲ್ಲಿ ಮತ್ತೆ ಲಾಕ್‌ಡೌನ್ ಅನ್ನು ಜಾರಿ ಮಾಡಲು ನಿರ್ಧರಿಸಲಾಗಿದೆ. ಔಷಧ, ಹಣ್ಣು, ತರಕಾರಿ ಹಾಗೂ ಹಾಲು ಮಾತ್ರ ಲಭ್ಯ ಇರಲಿದೆ.

ಆಧಾರ: ಕನ್ನಡಪ್ರಭ ದಿನಾಂಕ:26.11.2020

## 52. ಒಂದು ದೇಶ, ಒಂದು ಚುನಾವಣೆ

'ಒಂದು ದೇಶ, ಒಂದು ಚುನಾವಣೆ' ಸಾಧ್ಯತೆ ಸಾಕಾರಗೊಳ್ಳಬೇಕು ಎಂದು ಪುನರುಚ್ಚರಿಸಿರುವ ಪ್ರಧಾನಿ ನರೇಂದ್ರ ಮೋದಿ. ಪ್ರತಿ ವಿವಿಧ ಸ್ಥಳಗಳಲ್ಲಿ ಚುನಾವಣೆಗಳು ನಡೆಯುತ್ತಿರುತ್ತವೆ. ಇದರಿಂದ

ಅಭಿವೃದ್ಧಿ ಚಟುವಟಿಕೆಗಳು ಕುಂಠಿತಗೊಳ್ಳುತ್ತಿವೆ ದೇಶಕ್ಕೊಂದೇ ಚುನಾವಣೆ ಎಂಬ ಬಗ್ಗೆ ಆಳವಾದ ಅಧ್ಯಯನ ಮತ್ತು ಚರ್ಚೆ ನಡೆಸಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

ಗುಜರಾತ್‌ನ ನರ್ಮದಾ ಜಿಲ್ಲೆಯಲ್ಲಿರುವ ಕೆವಾಡಿಯಾದಲ್ಲಿ ನಡೆದ ಅಖಿಲ ಭಾರತ ವಿಧಾನ ಸಭೆಗಳ ಸ್ಪೀಕರ್ ಮತ್ತು ವಿಧಾನ ಪರಿಷತ್ ಸಭಾಪತಿಗಳ ಸಮ್ಮೇಳನ ಸಮಾರಂಭದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತನಾಡಿದರು. ಲೋಕಸಭೆ, ವಿಧಾನ ಸಭೆ ಮತ್ತು ಪಂಚಾಯತ್ ಚುನಾವಣೆಗಳಿಗೆ ಒಂದೇ ಮತದಾರ ಪಟ್ಟಿ ಇರಬೇಕು. ಪ್ರತ್ಯೇಕ ಪಟ್ಟಿಗಳಿಂದ ಸಂಪನ್ಮೂಲ ಪೋಲಾಗುತ್ತಿದೆ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಸಮನ್ವಯದಿಂದ ಕೆಲಸ ಮಾಡಿ, ಪ್ರತಿ ನಿರ್ಧಾರಕ್ಕೂ ರಾಷ್ಟ್ರೀಯ ಹಿತಾಸಕ್ತಿಯೇ ಆಧಾರವಾಗಬೇಕು ಎಂದು ಪ್ರತಿಪಾದಿಸಿದರು.

ಅಸ್ಪೃಶ್ಯತೆಯ ರಾಜಕಾರಣಕ್ಕೆ ಈಗ ಸ್ಥಾನವಿಲ್ಲ. ಬಿಜೆಪಿ ಅಥವಾ ಜನಸಂಘದ ಹಿನ್ನೆಲೆಯಿಲ್ಲದಿದ್ದರೂ ಸರ್ದಾರ್ ವಲ್ಲಭಬಾಯಿ ಪಟೇಲರ ಏಕತೆಯ ಪ್ರತಿಮೆಯನ್ನು ನಾವು ನಿರ್ಮಾಣ ಮಾಡಿದೆವು. 21ನೇ ಶತಮಾನದಲ್ಲಿ ಸವಾಲುಗಳನ್ನು ಎದುರಿಸಲು ಸಂವಿಧಾನವೇ ನಮಗೆ ಬೆಳಕಾಗಿದೆ. ಈ ಸಂವಿಧಾನದ ಬಗ್ಗೆ ತಿಳಿದುಕೊಳ್ಳುವ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದರು. 1921 ರಿಂದ ಪ್ರತಿ ವರ್ಷ ಅಖಿಲ ಭಾರತ ವಿಧಾನ ಸಭೆಗಳ ಸ್ಪೀಕರ್ ಮತ್ತು ವಿಧಾನ ಪರಿಷತ್ ಸಭಾಪತಿಗಳ ಸಮ್ಮೇಳನ ನಡೆಯುತ್ತಿದೆ. ಶಾಸಕಾಂಗ–ಕಾರ್ಯಾಂಗ–ನ್ಯಾಯಾಂಗದ ನಡುವಿನ ಸಾಮರಸ್ಯದ ಸಮನ್ವಯ ಇದು ಸಮಗ್ರ ಪ್ರಜಾಪ್ರಭುತ್ವದ ಬಹುಮುಖ್ಯ ಭಾಗ ಎಂಬ ವಿಷಯದ ಮೇಲೆ ಸಮ್ಮೇಳನ ಜರುಗಿತ್ತು.

ಸಂವಿಧಾನ ದಿನದ ಹಿನ್ನೆಲೆಯಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ ಅವರು ಸಂವಿಧಾನದ ಪೀಠಿಕೆಯ ಭಾಗವನ್ನು ಓದಿದರು. ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಆಯೋಜಿಸಿದ್ದ ಲೈವ್ ಕಾರ್ಯಕ್ರಮದಲ್ಲಿ ಭಾಗಿಯಾದ ಸಾವಿರಾರು ಜನರು ಕೂಡ ರಾಷ್ಟ್ರಪತಿಗಳೊಂದಿಗೆ ಸಂವಿಧಾನದ ಪೀಠಿಕೆಯನ್ನು ಓದಿದರು.

ಆಧಾರ: ವಿಜಯವಾಣಿ, ದಿನಾಂಕ:27.11.2020

## 53. ದೆಹಲಿ ಗಡಿಯಲ್ಲೇ ರೈತರ ಹೋರಾಟ

ಕೇಂದ್ರ ಸರ್ಕಾರದ ಕೃಷಿ ಕಾಯ್ದೆ ವಿರೋಧಿಸಿ ದೆಹಲಿ ಚಲೋ ಕೈಗೊಂಡಿರುವ ಪಂಜಾಬ್ ಹಾಗೂ ಹರಿಯಾಣ ರೈತರು ದೆಹಲಿ ಗಡಿಯಲ್ಲೇ ತಮ್ಮ ಹೋರಾಟ ಮುಂದುವರೆಸಿದ್ದಾರೆ. ಹೆದ್ದಾರಿ ಬದಲು ಉತ್ತರ ದೆಹಲಿಯ ಬುರಾರಿ ಮೈದಾನದಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುವ ಪ್ರಸ್ತಾಪವನ್ನು ಕೇಂದ್ರ ಸರ್ಕಾರ ಮುಂದಿಟ್ಟಿದೆಯಾದರೂ, ಆ ಬಗ್ಗೆ ರೈತ ಮುಖಂಡರು ಇನ್ನೂ ಯಾವುದೇ ನಿರ್ಧಾರ ಕೈಗೊಂಡಿಲ್ಲ.

ಟಿಕ್ರಿ, ಸಿಂಘು ಗಡಿ ಪ್ರದೇಶದಲ್ಲೇ ಭಾರೀ ಪ್ರಮಾಣದಲ್ಲಿ ಬೀಡುಬಿಟ್ಟಿರುವ ರೈತರು ದೆಹಲಿ ಹೃದಯ ಭಾಗದಲ್ಲಿರುವ ಜಂತರ್ ಮಂತರ್ ಹಾಗೂ ಸಂಸತ್ ಭವನದ ಎದುರು ಪ್ರತಿಭಟನೆಗೆ ಅವಕಾಶ ನೀಡಬೇಕು ಎಂಬ ಬೇಡಿಕೆಗೆ ಅಂಟಿಕೊಂಡಿದ್ದಾರೆ. ಈ ನಡುವೆ ಟ್ರ್ಯಾಕ್ಟರ್‌ಗಳು ಬಸ್‌ಗಳು ಮತ್ತು ಇತರ ವಾಹನಗಳಲ್ಲಿ 1 ಲಕ್ಷಕ್ಕೂ ಅಧಿಕ ರೈತರು ದೆಹಲಿಯತ್ತ ಆಗಮಿಸುತ್ತಿದ್ದಾರೆ ಎಂದು ಭಾರತೀಯ ಕಿಸಾನ್ ಯೂನಿಯನ್ ಹೇಳಿಕೊಂಡಿದೆ. ಹೋರಾಟ ಮತ್ತಷ್ಟು ತೀವ್ರಗೊಳ್ಳುವ ಸಾಧ್ಯತೆ ಇದೆ. ಇದಕ್ಕೆ ಪೂರಕವೆಂಬಂತೆ ಕೇಂದ್ರ ದೆಹಲಿಯನ್ನು ತಲುಪುವವರೆಗೂ ವಿರಮಿಸುವುದಿಲ್ಲ. ನಮ್ಮ ಬಳಿ ಆರು ತಿಂಗಳಿಗೆ ಆಗುವಷ್ಟು ಆಹಾರ ಧಾನ್ಯಗಳ ಸಂಗ್ರಹ ಇದ್ದು, ಕೇಂದ್ರ ಸರ್ಕಾರ ನೂತನ ಕೃಷಿ ಕಾಯ್ದೆಯನ್ನು ರದ್ದುಗೊಳಿಸುವವರೆಗೂ ಪ್ರತಿಭಟನೆಯಿಂದ ಹಿಂದೆ ಸರಿಯುವುದಿಲ್ಲ ಎಂದು ಪಟ್ಟುಹಿಡಿಯುವ ಮೂಲಕ ರೈತರು ತಮ್ಮ ನಿರ್ಧಾರ ಅಚಲ ಎಂದು ಸಾರಿದ್ದಾರೆ.

ಕಲ್ಲುತೂರಾಟ, ಲಘು ಲಾಠಿ ಪ್ರಹಾರದ ಘಟನೆಗೆ ಹೋಲಿಸಿದರೆ ಹೋರಾಟ ಬಹುತೇಕ ಶಾಂತಿಯುತವಾಗಿತ್ತು.

**ಪ್ರತಿಭಟನೆ ಬಿಡಿ, ಚರ್ಚೆಗೆ ಬನ್ನಿ:** ಸರ್ಕಾರ ರೈತರ ಜೊತೆ ಮಾತುಕತೆಗೆ ಸಿದ್ಧವಿದೆ. ಸಂಘಟನೆಯನ್ನು ಬಿಟ್ಟು ಮಾತುಕತೆಗೆ ಬಯಸಿದರೆ ಮರುದಿನವೇ ಬೇಡಿಕೆ ಈಡೇರಿಸಲು ಸರ್ಕಾರ ಯತ್ನಿಸಲಿದೆ ಎಂದು ಅಮಿತ್ ಶಾ ಕೇಂದ್ರ ಗೃಹ ಸಚಿವರು ಹೇಳಿದರು.

ಆಧಾರ: ಕನ್ನಡಪ್ರಭ, ದಿನಾಂಕ:29.11.2020

## 54. ವ್ಯಾಕ್ಸಿನ್ ಹಬ್‌ನಲ್ಲಿ ಮೋದಿ

ಆಪರೇಷನ್ ಲಸಿಕೆಗೆ ದೇಶ ಸನ್ನದ್ಧವಾಗುತ್ತಿರುವಂತೆಯೇ, ಪ್ರಧಾನಿ ನರೇಂದ್ರ ಮೋದಿಯವರು ದೇಶದ ಪ್ರಮುಖ ವ್ಯಾಕ್ಸಿನ್ ಹಬ್‌ಗಳಿಗೆ ಭೇಟಿ ನೀಡಿ ಲಸಿಕೆ ಅಭಿವೃದ್ಧಿ ಪ್ರಕ್ರಿಯೆಯನ್ನು ಖುದ್ದಾಗಿ ಪರಿಶೀಲಿಸಿದ್ದಾರೆ. ಪಿಪಿಇ ಕಿಟ್ ಧರಿಸಿ, ಅಹಮದಾಬಾದ್, ಹೈದರಾಬಾದ್ ಹಾಗೂ ಪುಣೆಯ ಲಸಿಕೆ ಅಭಿವೃದ್ಧಿ ಘಟಕಗಳಿಗೆ ತೆರಳಿದ ಮೋದಿ, ವ್ಯಾಕ್ಸಿನ್ ಉತ್ಪತ್ತಿ, ವಿತರಣೆಯ ಸವಾಲುಗಳು ಹಾಗೂ ದೇಶವಾಸಿಗಳಿಗೆ ಲಸಿಕೆ ತಲುಪಿಸುವ ಮಾರ್ಗಸೂಚಿಗಳು ಕುರಿತು ವಿಜ್ಞಾನಿಗಳು ಹಾಗೂ ಪ್ರಮುಖರೊಂದಿಗೆ ಚರ್ಚಿಸಿದ್ದಾರೆ.

**ಝೈಡಸ್ ಕ್ಯಾಡಿಲಾ:**

- ಗುಜರಾತ್‌ನ ಅಹಮದಾಬಾದ್‌ನಿಂದ 20. ಕಿ.ಮೀ.ದೂರದಲ್ಲಿದೆ.
- ಇಲ್ಲಿ ಸ್ವದೇಶಿ ಡಿಎನ್‌ಎ ಆಧಾರಿತ ಲಸಿಕೆಯ ಪ್ರಯೋಗ ಆಗಸ್ಟ್‌ನಿಂದ ಝೈಕೋವ್–ಡಿ ಲಸಿಕೆಯ 2ನೇ ಹಂತದ ಪ್ರಯೋಗ ಆರಂಭ.
- 2021 ರ ಮಾರ್ಚ್‌ನಲ್ಲಿ ಪ್ರಯೋಗ ಪೂರ್ಣ ವರ್ಷಕ್ಕೆ 10 ಕೋಟಿ ಡೋಸ್ ಉತ್ಪಾದನೆ.

1 ಗಂಟೆ ಕಾಲ ಸ್ಥಾವರದಲ್ಲಿ ಕಾಲ ಕಳೆದ ಮೋದಿ, ಕಂಪನಿಯ ಪ್ರಮುಖರೊಂದಿಗೆ ಚರ್ಚೆ ನಡೆಸಿದ್ದಾರೆ. ಲಸಿಕೆ ಅಭಿವೃದ್ಧಿ ಪ್ರಕ್ರಿಯೆ ಕುರಿತು ಪ್ರಧಾನಿಗೆ ಮಾಹಿತಿ ನೀಡಲಾಯಿತು. ವಿಜ್ಞಾನಿಗಳೊಂದಿಗೂ ಸಂವಾದ ನಡೆಸಿದ ಮೋದಿ, ನಿಮಗೆ ಸರ್ಕಾರ ಯಾವತ್ತಿಗೂ ಬೆಂಬಲ ನೀಡಲಿದೆ ಎಂದು ಭರವಸೆ ನೀಡಿದ್ದಾರೆ.

**ಭಾರತ್ ಬಯೋಟೆಕ್**

- ಹೈದರಾಬಾದ್‌ನಿಂದ 50 ಕಿ.ಮೀ ದೂರದಲ್ಲಿದೆ ಈ ಸಂಸ್ಥೆ.
- ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆ ಮತ್ತು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ ಸಹಭಾಗಿತ್ವದಲ್ಲಿ ಲಸಿಕೆ ಅಭಿವೃದ್ಧಿ.
- ಮಾನವನ ಮೇಲೆ 3ನೇ ಹಂತದ ಪ್ರಯೋಗದಲ್ಲಿರುವ ಕೊವ್ಯಾಕ್ಸಿನ್.

**ವಿಜ್ಞಾನಿಗಳಿಗೆ ಅಭಿನಂದನೆ:** 1 ಗಂಟೆ ಕಾಲ ಸ್ಥಾವರದಲ್ಲಿ ಮೋದಿ ಅವರು ಸಂಸ್ಥೆಯ ಮುಖ್ಯಸ್ಥ ಎಂ.ಡಿ ಕೃಷ್ಣ ಎಲ್ಲ ವಿಜ್ಞಾನಿಗಳು ಹಾಗೂ ಅಧಿಕಾರಿಗಳ ಜೊತೆ ಮಾತುಕತೆ ನಡೆಸಿದರು. ಪ್ರಯೋಗದಲ್ಲಿ ಆಗಿರುವ ಯಶಸ್ಸಿಗಾಗಿ ವಿಜ್ಞಾನಿಗಳಿಗೆ ಅಭಿನಂದನೆ ಸಲ್ಲಿಸಿದರು. ಸ್ಥಾವರದ ಹೊರಬಂದು ಅಲ್ಲಿ ನೆರೆದಿದ್ದ ಜನರತ್ತ ಕೈಬೀಸಿದರು.

**ಸೀರಮ್ ಸಂಸ್ಥೆ:**

- ಪುಣೆಯಲ್ಲಿರುವ ಜಗತ್ತಿನ ಅತಿದೊಡ್ಡ ಲಸಿಕೆ ಉತ್ಪಾದಕ ಸಂಸ್ಥೆ.
- ಫಾರ್ಮಾ ದೈತ್ಯ ಆಸ್ಟ್ರಜೆನೆಕಾ ಮತ್ತು ಆಕ್ಸ್‌ಫರ್ಡ್ ವಿವಿಯ ಸಹಭಾಗಿತ್ವದಲ್ಲಿ ಸೀರಂ ಇನ್‌ಸ್ಟಿಟ್ಯೂಟ್‌ನಿಂದ ಕೋವಿಶೀಲ್ಡ್ ಲಸಿಕೆ ಅಭಿವೃದ್ಧಿ.

➢ 1600 ಭಾರತೀಯರ ಮೇಲೆ ಕೋವಿಶೀಲ್ಡ್‌ನ ಮೂರನೇ ಹಂತದ ಪ್ರಯೋಗ.

**ಉತ್ಪಾದನೆ –ವಿತರಣೆ ಪರಿಶೀಲನೆ:** ಸಂಜೆ 4.30 ಪುಣೆ ತಲುಪಿದ ಮೋದಿ ಸೀರಂ ಇನ್ಸಸ್ಟಿಟ್ಯೂಟ್‌ನ ಸ್ಥಾವರದೊಳಗೆ ಒಂದು ಸುತ್ತು ಹಾಕಿ ಲಸಿಕೆ ಅಭಿವೃದ್ಧಿ ಪ್ರಕ್ರಿಯೆಯ ಪರಿಶೀಲನೆ ನಡೆಸಿದರು. ಕೋವಿಶೀಲ್ಡ್ ಲಸಿಕೆಯ ಬಿಡುಗಡೆ, ಉತ್ಪಾದನೆ ಮತ್ತು ವಿತರಣಾ ವಿಧಾನಗಳು ಕುರಿತು ಮಾಹಿತಿ ಪಡೆದರು.

ಆಧಾರ: ಉದಯವಾಣಿ, ದಿನಾಂಕ:29.11.2020

## 55. ಪ್ರತಿಯೊಬ್ಬ ಭಾರತೀಯರಿಗೂ ಕೊರೋನಾ ಲಸಿಕೆ

ಕೊರೋನಾ ಸಂಕಷ್ಟದಿಂದ ದೇಶಾದ್ಯಂತ ನಾಗರಿಕರು ತೊಂದರೆಗೆ ಈಡಾಗಿದ್ದಾರೆ. ಈ ಸಂದರ್ಭದಲ್ಲಿ ಎಲ್ಲ ಭಾರತೀಯರಿಗೂ ಕೊರೋನಾ ಲಸಿಕೆ ನೀಡಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದ್ದಾರೆ.

ಸರ್ಕಾರ ಹಾಗೂ ಸಾರ್ವಜನಿಕರು ಒಗ್ಗೂಡಿ ಸಂಕಷ್ಟದ ವಿರುದ್ಧ ಹೋರಾಡುತ್ತಿದ್ದು, ಕೊರೋನಾದಿಂದ ಉಂಟಾದ ನಷ್ಟ ಭರಿಸಲು ಮುಂದಿನ ವರ್ಷ ಹಲವು ಪರಿಣಮಕಾರಿ ಕ್ರಮಗಳನ್ನು ಕೈಗೊಳ್ಳಲಾಗುವುದು. ನಾನು ಎಲ್ಲ ಭಾರತೀಯರಿಗೆ ಭರವಸೆ ನೀಡುತ್ತೇನೆ.

ಕೊರೋನಾ ಲಸಿಕೆ ಯಾವಾಗ ಲಭ್ಯವಾದಾಗ ಎಲ್ಲರಿಗೂ ಲಸಿಕೆ ನೀಡಲಾಗುವುದು ಎಂದು ಇಂಗ್ಲೀಷ್ ದೈನಿಕವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ. ಆರಂಭದಲ್ಲಿ ನಾವು ದುರ್ಬಲ ಮತ್ತು ಮುಂಚೂಣಿ ಕಾರ್ಮಿಕರನ್ನು ರಕ್ಷಿಸುವತ್ತ ಗಮನ ಹರಿಸಲಾಗುತ್ತದೆ. ಇದಕ್ಕಾಗಿ ತಜ್ಞರ ತಂಡವನ್ನು ರಚಿಸಲಾಗಿದೆ. 28,000 ಕ್ಕಿಂತಲೂ ಹೆಚ್ಚು ಕೋಲ್ಡ್ ಚೈನ್ ಪಾಯಿಂಟ್‌ಗಳ ಮೂಲಕ ಸಂಗ್ರಹಿಸಿ ವಿತರಣೆ ಮಾಡಲಾಗುತ್ತದೆ. ಲಸಿಕೆ ಅಭಿವೃದ್ಧಿ ಇನ್ನು ಪ್ರಗತಿಯಲ್ಲಿದೆ ಎಂಬುದನ್ನು ನಾವು ಅರಿತುಕೊಳ್ಳಬೇಕು. ಪ್ರಯೋಗಗಳು ನಡೆಯುತ್ತಿವೆ ಹೇಗೆ ನಿರ್ವಹಿಸಬೇಕು ಇತ್ಯಾದಿ ಬಗ್ಗೆ ತಜ್ಞರು ಅಂತಿಮಗೊಳಿಸಿದ ನಂತರ ಲಸಿಕೆಯನ್ನು ನಾಗರಿಕರಿಗೆ ನೀಡುವ ವಿಧಾನಕ್ಕೂ ಮಾರ್ಗದರ್ಶನ ದೊರೆಯಲಿದೆ ಎಂದು ತಿಳಿಸಿದ್ದಾರೆ.

ಲಸಿಕೆ ವಿತರಣೆಯನ್ನು ವ್ಯವಸ್ಥಿತ ಮತ್ತು ಜವಾಬ್ದಾರಿಯುತ ರೀತಿಯಲ್ಲಿ ಮಾಡಲಾಗುತ್ತದೆ. ರಾಜ್ಯ, ಜಿಲ್ಲಾ ಮತ್ತು ಸ್ಥಳೀಯ ಮಟ್ಟದಲ್ಲಿ ಸಮರ್ಪಿತ ತಂಡಗಳು ಕಾರ್ಯನಿರ್ವಹಿಸಲಿವೆ. ಫಲಾನುಭವಿಗಳನ್ನು ದಾಖಲಿಸಲು, ಟ್ರ್ಯಾಕ್ ಮಾಡಲು ಮತ್ತು ತಲುಪಲು ಡಿಜಿಟಲ್ ವೇದಿಕೆಯನ್ನು ಸಹ ಸಿದ್ಧಪಡಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಕೊರೋನಾ ಸಂಕಷ್ಟದ ನಡುವೆಯೂ 2024ರ ವೇಳೆಗೆ ಭಾರತ 5 ಟ್ರಿಲಿಯನ್ ಡಾಲರ್ ಆರ್ಥಿಕತೆಯ ರಾಷ್ಟ್ರವಾಗುವ ವಿಶ್ವಾಸವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಒಟ್ಟಾರೆ ವಿಶಾಲ ಆರ್ಥಿಕ ಸುಸ್ಥಿರತೆ ಖಾತ್ರಿ ಪಡಿಸುವುದರ ಜೊತೆಗೆ ಸಕಾಲದಲ್ಲಿ ಆರ್ಥಿಕತೆಯನ್ನು ಉತ್ತೇಜಿಸಲು ಎಲ್ಲ ಕ್ರಮ ಕೈಗೊಳ್ಳಲಾಗುವುದು. ಎನ್‌ಡಿಎ ಸರ್ಕಾರವು ಸಕಾಲದಲ್ಲಿ ಗುರಿ ತಲುಪುವ ದಾಖಲೆ ಹೊಂದಿದ್ದು, ಇದೇ ಹಾದಿಯಲ್ಲಿ ಸಾಗಿದರೆ 5 ಟ್ರಿಲಿಯನ್ ಆರ್ಥಿಕತೆಯ ಗುರಿಯನ್ನು ತಲುಪಲಾಗುವುದು ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

**ಪ್ರಮುಖಾಂಶಗಳು:**

➢ ಆತ್ಮವಿಶ್ವಾಸಕ್ಕೆ ಅವಕಾಶವಿಲ್ಲ. ಮಾಸ್ಕ್ ಧರಿಸುವುದು, ಕೈತೊಳೆಯುವುದು, ಸಾಮಾಜಿಕ ಅಂತರ ಮುಂತಾದ ಮುನ್ನೆಚ್ಚರಿಕೆಗಳು ಕೊರೋನಾ ತಡೆಗಿರುವ ಒಂದೇ ಮಾರ್ಗ. ಜಬ್‌ತಕ್ ದವಾಯಿ ನಹೀ, ತಬ್ ತಕ್ ಢಿಲಾಯಿ ನಹೀ.

➢ ಸಮಯೋಚಿತ ಲಾಕ್‌ಡೌನ್ ಹಾಗೂ ಆನ್‌ಲಾಕ್ ಸಾಕಷ್ಟು ಜೀವಹಾನಿ ತಪ್ಪಿಸಿದ್ದೇವೆ.

- ನಮ್ಮ ದೇಶದ ಆರ್ಥಿಕತೆಯ ಹೆಚ್ಚಿನ ಭಾಗವು ಮತ್ತೆ ಪಥಕ್ಕೆ ಬರುತ್ತಿದೆ. ಇದನ್ನು ಆಗಸ್ಟ್ ಮತ್ತು ಸೆಪ್ಟೆಂಬರ್ ಅಂಕಿ ಅಂಶ ಸೂಚಿಸುತ್ತದೆ.
- ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಂದು ತಂಡವಾಗಿ, ಸಾರ್ವಜನಿಕ ಮತ್ತು ಖಾಸಗಿ ವಲಯಗಳು ಒಗ್ಗೂಡಿ ಎಲ್ಲ ಸಚಿವಾಲಯಗಳು ಜವಾಬ್ದಾರಿಯುತವಾಗಿ ಕೊರೋನಾ ನಿಗ್ರಹಕ್ಕೆ ಪರಿಣಾಮಕಾರಿ ಹೋರಾಟ ನಡೆಸಿವೆ.
- ಕಾರ್ಪೋರೇಟ್ ವಲಯಕ್ಕೆ ಆರ್ಥಿಕ ಪ್ಯಾಕೇಜ್ ಬಿಡುಗಡೆ ಮಾಡುವಂತೆ ಒತ್ತಾಯ ಕೇಳಿಬಂದಾಗಲೂ, ನಾವು ಬಡವರು, ವಲಸಿಗರು, ರೈತರ ಸಂಕಷ್ಟ ನಿವಾರಿಸಲು ಪ್ರಧಾನ ಮಂತ್ರಿ ಗರಿಬ್ ಕಲ್ಯಾಣ್ ಪ್ಯಾಕೇಜ್ ಘೋಷಿಸಿದ್ದೇವೆ.
- ಭಾರತೀಯ ಆರ್ಥಿಕತೆಯು ಈಗಾಗಲೇ ನಿರೀಕ್ಷೆಗಿಂತ ವೇಗವಾಗಿ ಪ್ರಗತಿ ಪಥದಲ್ಲಿ ಸಾಗುತ್ತಿದೆ. ನಮ್ಮ ಪ್ರಯತ್ನಗಳು ಫಲ ನೀಡುತ್ತಿವೆ. ಕಲ್ಲಿದ್ದಲು, ಕೃಷಿ, ಕಾರ್ಮಿಕ, ರಕ್ಷಣಾ, ನಾಗರಿಕ ವಿಮಾನಯಾನ ಕ್ಷೇತ್ರಗಳಲ್ಲಿ ಸುಧಾರಣೆಯಾಗಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:30.11.2020

## 56. ರೈತರ ಜೊತೆಗಿನ ಸಂಧಾನ ವಿಫಲ

ನೂತನ ಕೃಷಿ ನೀತಿ ವಿರುದ್ಧ ಸಿಡಿದೆದ್ದಿರುವ ರೈತರ ಸಮಸ್ಯೆ ಹಾಗೂ ಬೇಡಿಕೆಗಳನ್ನು ಪರಿಶೀಲಿಸುವುದಕ್ಕಾಗಿ ಸಮಿತಿ ರಚಿಸುವ ಕೇಂದ್ರ ಸರ್ಕಾರದ ಪ್ರಸ್ತಾಪವನ್ನು ರೈತ ಪ್ರತಿನಿಧಿಗಳು ತಿರಸ್ಕರಿಸಿದ್ದಾರೆ. ಇದರಿಂದಾಗಿ ಮೂವರು ಕೇಂದ್ರ ಸಚಿವರ ಸಮ್ಮುಖದಲ್ಲಿ ನಡೆದ ಸಂಧಾನ ಸಭೆ ಯಾವುದೇ ತೀರ್ಮಾನ ಕೈಗೊಳ್ಳಲಾಗದೆ ಅಂತ್ಯವಾಯಿತು. ಕೇಂದ್ರ ಸರ್ಕಾರ ಮತ್ತೊಂದು ಸುತ್ತಿನ ಸಭೆಯ ಪ್ರಸ್ತಾಪ ಮಾಡಿದೆ. ಸಭೆಯಲ್ಲಿ ಪಾಲ್ಗೊಂಡಿದ್ದ 35 ಪ್ರತಿಭಟನಾ ನಿರತ ಸಂಘಟನೆಗಳ ಪ್ರತಿನಿಧಿಗಳು ಸರ್ಕಾರದ ಆಹ್ವಾನವನ್ನು ಸ್ಪಷ್ಟವಾಗಿ ತಿರಸ್ಕರಿಸಿದರು. ನವೆಂಬರ್ 13 ರಂದು ನಡೆದಿದ್ದ ಸಭೆಯಲ್ಲೂ ಯಾವುದೇ ತೀರ್ಮಾನ ಕೈಗೊಳ್ಳಲಾಗಿರಲಿಲ್ಲ.

**ರೈತರ ಬೇಡಿಕೆಗಳು:** ಅನ್ನದಾತರ ಹಿತಾಸಕ್ತಿಗೆ ವಿರುದ್ಧವಾಗಿ ಜಾರಿಯಾಗಿರುವ 3 ನೂತನ ಕಾಯ್ದೆಗಳನ್ನು ರದ್ದುಪಡಿಸಬೇಕು.

**ಸರ್ಕಾರದ ವಾದ:** ಹೊಸ ಕಾನೂನುಗಳು ರೈತರಿಗೆ ಉತ್ತಮ ಅವಕಾಶ ಸೃಷ್ಟಿಸುತ್ತದೆ. ಕೃಷಿಯಲ್ಲಿ ಹೊಸ ತಂತ್ರಜ್ಞಾನ ಅಳವಡಿಕೆಗೆ ಅನುವಾಗುತ್ತದೆ.

ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್, ರೈಲ್ವೆ ಮತ್ತು ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಮತ್ತು ಸಹಾಯಕ ಸಚಿವ ಸೋಮ್ ಪ್ರಕಾಶ್ ಸಭೆಯಲ್ಲಿ ಉಪಸ್ಥಿತರಿದ್ದರು.

ಆಧಾರ: ವಿಜಯವಾಣಿ, ದಿನಾಂಕ:02.12.2020.

## 57. ಶೀಘ್ರವೇ ಕೋವಿಡ್ ಲಸಿಕೆ ಲಭ್ಯ

ಕೋವಿಡ್–19 ನಿರೋಧಕ ಲಸಿಕೆಗೆ ಇನ್ನು ದೀರ್ಘ ಸಮಯ ಕಾಯುವ ಅಗತ್ಯವಿಲ್ಲ ಕೆಲವೇ ವಾರಗಳಲ್ಲಿ ಇದು ಸಿದ್ಧವಾಗಬಹುದಾಗಿದ್ದು, ವಿಜ್ಞಾನಿಗಳು ಒಪ್ಪಿಗೆ ನೀಡಿದ ತಕ್ಷಣ ದೇಶಾದ್ಯಂತ ಲಸಿಕಾ ಅಭಿಯಾನ ಶುರುವಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸರ್ವಪಕ್ಷ ಸಭೆಯಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಈ ಮೂಲಕ ಇನ್ನು ಕೆಲವೇ ವಾರಗಳಲ್ಲಿ ಲಸಿಕೆ ಸಾರ್ವಜನಿಕ ಬಳಕೆಗೆ ಲಭ್ಯವಾಗುವ ಸುಳಿವು ನೀಡಿದರು.

ಕೋವಿಡ್ ಕುರಿತು ಎರಡನೇ ವರ್ಚುವಲ್ ಸರ್ವಪಕ್ಷ ಸಭೆ ನಡೆಸಿದ ಮೋದಿ ಅವರು ದೇಶವು ಕೊರೋನಾ ನಿಯಂತ್ರಣ ವಿಚಾರದಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗಿಂತಲೂ ಉತ್ತಮ ಸಾಧನೆ ಮಾಡಿದೆ. ಲಸಿಕೆ ಅಭಿವೃದ್ಧಿಯಲ್ಲಿ ವಿಜ್ಞಾನಿಗಳ ಶ್ರಮ ಅನುಪಮವಾದುದು. ಮೂರು ದೇಶೀಯ ಹಾಗೂ ಐದು ವಿದೇಶಿ ಲಸಿಕೆಗಳು ಬಹುತೇಕ ಅಂತಿಮ ಹಂತದ ಪ್ರಯೋಗದಲ್ಲಿದ್ದು, ಕೆಲವೇ ವಾರಗಳಲ್ಲಿ ಅಗ್ಗದ ಮತ್ತು ಸುರಕ್ಷಿತ ಲಸಿಕೆ ಸಿಗುವ ವಿಶ್ವಾಸ ತಜ್ಞರಿಂದ ವ್ಯಕ್ತವಾಗಿದೆ. ವಿಜ್ಞಾನಿಗಳ ಒಪ್ಪಿಗೆ ದೊರೆತ ಬಳಿಕ ಎಲ್ಲ ಲಸಿಕೆಗಳನ್ನು ಭಾರತದಲ್ಲಿಯೇ ಉತ್ಪಾದಿಸಲು ತಯಾರಿ ನಡೆಸಿದೆ. ವಿಶ್ವದಲ್ಲಿಯೇ ಅತ್ಯಂತ ಪರಿಣಿತ ವಿತರಣಾ ಜಾಲವನ್ನು ಭಾರತ ಹೊಂದಿದ್ದು, ಇದನ್ನು ಲಸಿಕೆ ವಿತರಣೆಗೆ ಬಳಸಿಕೊಳ್ಳಲಾಗುವುದು ಎಂದು ಮಾಹಿತಿ ನೀಡಿದರು.

ಹೈದರಾಬಾದ್, ಪುಣೆ, ಅಹಮದಾಬಾದ್‌ನ ಔಷಧ ತಯಾರಿಕಾ ಕಂಪನಿಗಳಿಗೆ ಇತ್ತಿಚೆಗೆ ಭೇಟಿ ಕೊಟ್ಟಿದ್ದನ್ನು ಪ್ರಸ್ತಾಪಿಸಿದ ಪ್ರಧಾನಿ, ಸದ್ಯದಲ್ಲೇ ಲಸಿಕೆ ಹೊರಬರುವ ಬಗ್ಗೆ ವಿಜ್ಞಾನಿಗಳಲ್ಲಿ ಅದಮ್ಯ ವಿಶ್ವಾಸವಿದೆ. ಇಡೀ ವಿಶ್ವವೇ ಅಗ್ಗದ ಮತ್ತು ಸುರಕ್ಷಿತ ಲಸಿಕೆಗಾಗಿ ಭಾರತದ ಕಡೆ ನೋಡುತ್ತಿದೆ. ಮೊದಲ ಹಂತದಲ್ಲಿ ಯಾರಿಗೆ ಲಸಿಕೆ ನೀಡಬೇಕು ಹಾಗೂ ಲಸಿಕೆಯ ಬೆಲೆ ನಿರ್ಧರಿಸುವ ಬಗ್ಗೆ ರಾಜ್ಯ ಸರ್ಕಾರಗಳ ಜೊತೆ ಚರ್ಚೆ ನಡೆಸಲಾಗುತ್ತಿದೆ ಎಂದರು.

**ಪ್ರತಿಪಕ್ಷಗಳ ಸಲಹೆಗೆ ಆಹ್ವಾನ:** ಸಭೆಯಲ್ಲಿ ಪ್ರಧಾನಿ ಲಸಿಕೆ ವಿಚಾರದಲ್ಲಿ ಪ್ರತಿಪಕ್ಷಗಳಿಂದ ಸಲಹೆಗಳನ್ನು ಕೋರಿದರು. ಲಿಖಿತ ರೂಪದಲ್ಲಿ ನಿಮ್ಮ ಸಲಹೆಗಳನ್ನು ತಿಳಿಸಿ ಅದನ್ನು ಗಂಭೀರವಾಗಿ ಪರಿಗಣಿಸಿ ಕಾರ್ಯರೂಪಕ್ಕೆ ತರಲು ಪ್ರಯತ್ನಿಸಲಾಗುವುದು ಎಂದರು. ಸಭೆಯಲ್ಲಿ ಕಾಂಗ್ರೆಸ್‌ನ ಅಧೀರ್ ರಂಜನ್ ಚೌಧರಿ ಮತ್ತು ಗುಲಾಂ ನಬಿ ಆಜಾದ್, ಎನ್‌ಸಿಪಿಯ ಶರದ್ ಪವಾರ್, ಟಿಎಂಸಿಯ ಸುದೀಪ್ ಬಂಡೋಪಾಧ್ಯಾಯ, ಎಸ್‌ಪಿಯ ರಾಮ್ ಗೋಪಾಲ್ ಯಾದವ್ ಸೇರಿ 13 ಪಕ್ಷಗಳ ನಾಯಕರು ಹಾಗೂ ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ, ರಾಜನಾಥ್ ಸಿಂಗ್, ಅಮಿತ್ ಶಾ, ಹರ್ಷವರ್ಧನ್ ಭಾಗವಹಿಸಿದ್ದರು.

**ಭಾರತದಿಂದಲೇ ಹೆಚ್ಚು ಬೇಡಿಕೆ:** ಲಸಿಕಾ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿರುವ ಔಷಧ ಕಂಪನಿಗಳ ಜೊತೆ ಈಗಾಗಲೇ ಭಾರತವು 50 ಕೋಟಿ ಡೋಸ್‌ಗಳಷ್ಟು ಲಸಿಕೆಗೆ ಫ್ರೀ ರಿಲೀಸ್ ಆರ್ಡರ್ ಒಪ್ಪಂದ ಮಾಡಿಕೊಂಡಿದೆ.

ಬ್ರಿಟನ್‌ನ ಆಸ್ಟ್ರಾಜೆನಿಕಾ, ಅಮೆರಿಕದ ನೊವಾವ್ಯಾಕ್ಸ್, ರಷ್ಯಾದ ಗಾಮೆಲಿಯಾ ರೀಸರ್ಚ್ ಇನ್‌ಸ್ಟಿಟ್ಯೂಟ್ ಜೊತೆ ಭಾರತ ಒಪ್ಪಂದ ಮಾಡಿಕೊಂಡಿದೆ. ಇಷ್ಟು ಲಸಿಕೆಯನ್ನು 80 ಕೋಟಿ ಜನರಿಗೆ ನೀಡಬಹುದು. ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಜನರಿಗೆ ಲಸಿಕೆ ನೀಡಿದರೆ, ಅದರಿಂದ ಜನರು ರೋಗ ನಿರೋಧಕ ಶಕ್ತಿ ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಆರೋಗ್ಯ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಕೋವಿಡ್ ಲಸಿಕೆ ಸಂಗ್ರಹ ಮತ್ತು ವಿತರಣೆ ಸಂಬಂಧ ಕೋಲ್ಡ್ ಸ್ಟೋರೇಜ್ ಸ್ಥಾಪಿಸಲು ಕೇಂದ್ರ ಸರ್ಕಾರ ಲಕ್ಸಂಬರ್ಗ್ ಸರ್ಕಾರದ ಜೊತೆ ಮಾತುಕತೆ ನಡೆಸುತ್ತಿದೆ. ಲಕ್ಸಂಬರ್ಗ್‌ನಲ್ಲಿ ಕೇಂದ್ರ ಕಛೇರಿ ಹೊಂದಿರುವ ಬಿ ಮೆಡಿಕಲ್ ಸಿಸ್ಟಮ್ಸ್ ಸಂಸ್ಥೆಯ ಇಬ್ಬರು ಅಧಿಕಾರಿಗಳು ಭಾರತಕ್ಕೆ ಆಗಮಿಸುತ್ತಿದ್ದು, ಆರೋಗ್ಯ ಸಚಿವಾಲಯದ ಅಧಿಕಾರಿಗಳ ಜೊತೆ ಚರ್ಚೆ ನಡೆಸಲಿದ್ದಾರೆ. ಬಿ ಮೆಡಿಕಲ್ ಸಿಸ್ಟಮ್ಸ್ ಕಂಪನಿಯ ಸಿಇಓ ಲಕ್ ಪ್ರೋವೊಸ್ಟ್ ಮತ್ತು ಡೆಪ್ಯೂಟಿ ಸಿಇಓ ಜೇಸಲ್ ಜೋಶಿ ಅವರು ಕೊರೋನಾ ಲಸಿಕೆಗಳ ಸರಬರಾಜಿಗೆ ರೆಫಿಜರೇಟೇಡ್ ಬಾಕ್ಸ್ ಮತ್ತು ಫ್ರೀಜರ್‌ಗಳನ್ನು ಆಮದು ಮಾಡುವ ಹಾಗೂ ಕೋಲ್ಡ್ ಸ್ಟೋರೇಜ್ ಸ್ಥಾಪಿಸುವ ಕುರಿತು ಸರ್ಕಾರ ಹಾಗೂ ಪ್ರಮುಖ ಔಷಧ ತಯಾರಿಕಾ ಕಂಪನಿಗಳ ಜೊತೆ ಚರ್ಚೆ ನಡೆಸಲಿದ್ದಾರೆ.

**ಆರೋಗ್ಯ ಕಾರ್ಯಕರ್ತರಿಗೆ ಆದ್ಯತೆ :** ಲಸಿಕೆ ಲಭ್ಯವಾದ ತಕ್ಷಣ ಮೊದಲಿಗೆ ಕೊರೋನಾ ಪೀಡಿತರಿಗೆ ಮತ್ತು ಸರ್ಕಾರಿ, ಖಾಸಗಿ ಕ್ಷೇತ್ರದ ಒಂದು ಕೋಟಿ ಆರೋಗ್ಯ ಕಾರ್ಯಕರ್ತರಿಗೆ ನೀಡಲಾಗುವುದು. ನಂತರದಲ್ಲಿ ಎರಡು ಕೋಟಿ ಮುಂಚೂಣಿ ಹೋರಾಟಗಾರರಿಗೆ (ಪೊಲೀಸರು, ಯೋಧರು, ಪೌರ ಕಾರ್ಮಿಕರು ಇತ್ಯಾದಿ) ನೀಡಲಾಗುವುದು ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ಸರ್ವಪಕ್ಷ ಸಭೆ ಬಳಿಕ ತಿಳಿಸಿದರು. ಸಾಮಾನ್ಯ ನಾಗರಿಕರಿಗೆ ಲಸಿಕೆ ಸಿಗುವುದು ಸ್ವಲ್ಪ ತಡವಾಗಲಿದೆ ಎಂಬುದು ಅವರ ಮಾತಿನಲ್ಲಿ ವ್ಯಕ್ತವಾಗಿದೆ.

**ಸಾಫ್ಟ್‌ವೇರ್ ಅಭಿವೃದ್ಧಿ:** ಕೋವಿಡ್–19 ಲಸಿಕೆ ಸಂಗ್ರಹ ಮತ್ತು ವಿತರಣೆ ಮೇಲ್ವಿಚಾರಣೆಗೆ ಈಗಾಗಲೇ ಕೋ–ವಿನ್ ಎಂಬ ಸಾಫ್ಟ್‌ವೇರ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಇದು ಲಸಿಕಾ ಅಭಿಯಾನದ ಕುರಿತು ರಿಯಲ್ ಟೈಮ್ ಮಾಹಿತಿ ನೀಡಲಿದೆ. ಸಂಗ್ರಹ ವಿತರಣಾ ಜಾಲ, ಲಸಿಕೆ ಹಾಕಿಸಿಕೊಂಡ ವ್ಯಕ್ತಿಗಳ ಬಗ್ಗೆ ಇದು ಮಾಹಿತಿ ನೀಡಲಿದೆ. ರಾಜ್ಯ ಮತ್ತು ಕೇಂದ್ರದ ಪ್ರತಿನಿಧಿಗಳಿರುವ 'ನ್ಯಾಷನಲ್ ಎಕ್ಸ್‌ಪರ್ಟ್' ಗ್ರೂಪ್ ಅಭಿಯಾನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಿದೆ ಎಂದು ಪ್ರಧಾನಿ ಸಭೆಗೆ ತಿಳಿಸಿದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:05.12.2020.

## 58. 3 ವರ್ಷದಲ್ಲಿ ಗ್ರಾಮಗಳಲ್ಲೂ ಸ್ಪೀಡ್ ನೆಟ್

ಮುಂದಿನ ಮೂರು ವರ್ಷದೊಳಗೆ ಭಾರತ ಎಲ್ಲ ಗ್ರಾಮಗಳಿಗೂ ಹೈಸ್ಪೀಡ್ ಇಂಟರ್ ನೆಟ್ ಸಂಪರ್ಕ ಕಲ್ಪಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

'ಇಂಡಿಯಾ ಮೊಬೈಲ್ ಕಾಂಗ್ರೆಸ್–2020' ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು ಸರ್ಕಾರವು ಮಾಹಿತಿ ತಂತ್ರಜ್ಞಾನ ಹಾಗೂ ಟೆಲಿಕಾಂ ಕ್ಷೇತ್ರದಲ್ಲಿ ಪೂರ್ಣ ಪ್ರಮಾಣದ ಸಾಧ್ಯತೆಗಳನ್ನು ಬಳಸಿಕೊಂಡು ಮುಂಬರುವ ತಂತ್ರಜ್ಞಾನ ಕ್ರಾಂತಿಗೆ ಸಜ್ಜಾಗುತ್ತಿದೆ. ದೇಶದಲ್ಲಿ ಡಿಜಿಟಲ್ ಸಾಮರ್ಥ್ಯ ಹೆಚ್ಚಾಗಿದೆ. ಮೊಬೈಲ್ ತಂತ್ರಜ್ಞಾನದಿಂದಾಗಿ ಸಮಾಜದ ಬಡವರು ಹಾಗೂ ದುರ್ಬಲ ವರ್ಗಗಳಿಗೆ ಕೋವಿಡ್–19 ಸಾಂಕ್ರಾಮಿಕ ಸಂದರ್ಭದಲ್ಲಿ ನೆರವು ಕಲ್ಪಿಸಲು ಸಾಧ್ಯವಾಯಿತು.

ಕೋಟ್ಯಂತರ ಭಾರತೀಯರಿಗೆ ಬಿಲಿಯನ್ ಡಾಲರ್ ಮೌಲ್ಯದ ಪ್ರಯೋಜನಗಳನ್ನು ಕಲ್ಪಿಸಲಾಗಿದೆ. ಮೊಬೈಲ್ ತಂತ್ರಜ್ಞಾನದ ನೆರವಿನಿಂದ ಕೋಟ್ಯಂತರ ರೂಪಾಯಿ ನಗದು ರಹಿತ ವಹಿವಾಟು ನಡೆಸಲಾಗಿದೆ ಎಂದರು.

ಮೊಬೈಲ್ ಫೋನ್ ತಯಾರಿಕೆಯಲ್ಲಿ ಭಾರತ ಸಾಕಷ್ಟು ಯಶಸ್ಸು ಸಾಧಿಸಿದ್ದು, ಜಗತ್ತಿನ ಅತ್ಯಂತ ಪ್ರಮುಖ ತಯಾರಿಕಾ ಕೇಂದ್ರವಾಗಿ ಹೊರಹೊಮ್ಮಿದೆ. ದೇಶದ ಪ್ರತಿಯೊಂದು ಗ್ರಾಮಕ್ಕೂ ಹೈಸ್ಪೀಡ್ ಫೈಬರ್ ಆಪ್ಟಿಕಲ್ ಕೇಬಲ್ ಸಂಪರ್ಕವನ್ನು ಕಲ್ಪಿಸಲು ಸರ್ಕಾರ ಕಾರ್ಯಪ್ರವೃತ್ತವಾಗಿದೆ. ಭಾರತವು ನೂರು ಕೋಟಿ ಮೊಬೈಲ್ ಬಳಕೆದಾರರು 75 ಕೋಟಿ ಇಂಟರ್‌ನೆಟ್ ಬಳಕೆದಾರರನ್ನು ಹೊಂದಿದೆ. ಇಂಟರ್‌ನೆಟ್ ಬಳಕೆದಾರರ ಅರ್ಧದಷ್ಟು ಮಂದಿ 4 ವರ್ಷಗಳಲ್ಲಿ ಸೇರ್ಪಡೆಗೊಂಡಿದ್ದಾರೆ ಎಂದರು.

**ನುರಿತ ಉದ್ಯೋಗಿಗಳ ದೇಶ:** ಕೋವಿಡ್ ನಂತರದ ಜಗತ್ತಿನಲ್ಲಿ ಸವಾಲುಗಳನ್ನು ನಿವಾರಿಸುವ ಮತ್ತು ಪ್ರತಿಭಾವಂತರ ಪ್ರೋತ್ಸಾಹಿಸುವ ಪ್ರವೃತ್ತಿಯ ಬಿಸಿನೆಸ್‌ಗೆ ಸಂಬಂಧಿಸಿದಂತೆ ನಿರ್ಣಾಯಕವಾಗಲಿದೆ. ಭಾರತವು ನುರಿತ ಉದ್ಯೋಗಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿ, ಅನುಕೂಲಕರ ಸ್ಥಾನದಲ್ಲಿದೆ ಎಂದು ಪ್ರಧಾನಿ ಹೇಳಿದರು. ಹೈದರಾಬಾದ್‌ನಲ್ಲಿನ ಟಿಐಎ ಜಾಗತಿಕ ಶೃಂಗಸಭೆಯನ್ನು (ಟಿಜಿಎಸ್) ಉದ್ದೇಶಿಸಿದ ಲಿಖಿತ ಭಾಷಣದಲ್ಲಿ ಈ ಅಂಶವನ್ನು ಹೇಳಲಾಗಿದೆ.

**ಮುಂದಿನ ವರ್ಷ ಜಿಯೋ 5ಜಿ ಶುರು:** 2021ರ ದ್ವಿತೀಯಾರ್ಧದಲ್ಲಿ ರಿಲಯನ್ಸ್ ಜಿಯೊ 5ಜಿ ಸೇವೆ ಆರಂಭವಾಗಲಿದೆ ಎಂದು ಅಧ್ಯಕ್ಷೆ ಮುಕೇಶ್ ಅಂಬಾನಿ ಅವರು ಮೊಬೈಲ್ ಕಾಂಗ್ರೆಸ್‌ನಲ್ಲಿ

ಹೇಳಿದ್ದಾರೆ. ರಿಲಯನ್ಸ್ ಜಿಯೊ ತನ್ನ 5ಜಿ ನೆಟ್‌ವರ್ಕ್ ಅನ್ನು ಪೂರ್ಣ ದೇಶಿ ನೆಟ್‌ವರ್ಕ್ ಆಗಿ ಅಭಿವೃದ್ಧಿಪಡಿಸುತ್ತಿದೆ. ಹಾರ್ಡ್‌ವೇರ್ ಮತ್ತು ತಂತ್ರಜ್ಞಾನ ಸಾಧನಗಳು ಸ್ಥಳೀಯ ಮೂಲದ್ದಾಗಿರಲಿವೆ ಎಂದು ತಿಳಿಸಿದರು. ಇಂಡಿಯಾ ಮೊಬೈಲ್ ಕಾಂಗ್ರೆಸ್ 2020 ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಜಿಯೊದ 5ಜಿ ನೆಟ್‌ವರ್ಕ್ ಆತ್ಮನಿರ್ಭರ್ ಭಾರತ ಅಭಿಯಾನಕ್ಕೆ ನಿರ್ದೇಶನವಾಗಲಿದೆ. ಭಾರತ ಜಗತ್ತಿನಲ್ಲೇ ಡಿಜಿಟಲ್ ನೆಟ್‌ವರ್ಕ್ ಸೌಲಭ್ಯವನ್ನು ವ್ಯಾಪಕವಾಗಿ ಒಳಗೊಂಡಿರುವ ರಾಷ್ಟ್ರಗಳಲ್ಲೊಂದು. 5ಜಿಯನ್ನು ಕೈಗೆಟುಕುವ ದರದಲ್ಲಿ ಒದಗಿಸಬೇಕಾಗಿದೆ. ಜಿಯೊ ಜೊತೆ 20ಕ್ಕೂ ಹೆಚ್ಚು ಸ್ಟಾರ್ಟಪ್‌ಗಳ ಪಾಲುದಾರಿಕೆ ಇದ್ದು, ಕೃತಕ ಮತ್ತೆ ಬುದ್ಧಿ ಕ್ಲೌಡ್, ಕಂಪ್ಯೂಟಿಂಗ್, ಬಿಗ್ ಡೇಟಾ ಮೆಶೀನ್ ಲರ್ನಿಂಗ್, ಇಂಟರ್‌ನೆಟ್ ಆಫ್ ಥಿಂಗ್ಸ್ ಬ್ಲಾಕ್ ಚೈನ್ ಇತ್ಯಾದಿಗಳ ಅಭಿವೃದ್ಧಿಗೆ ಸಾಧ್ಯವಾಗಲಿದೆ ಎಂದು ಮುಕೇಶ್ ಅಂಬಾನಿ ಹೇಳಿದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:09.12.2020.

## 59. ಪಿಎಂ ಉಚಿತ ವೈಫೈ ಯೋಜನೆಗೆ ಆಸ್ತು

ದೇಶಾದ್ಯಂತ ಸಾರ್ವಜನಿಕ ಉಚಿತ ವೈಫೈ ಸಂಪರ್ಕಜಾಲ ಬಲಪಡಿಸುವ ಉದ್ದೇಶದ 'ಪಿಎಂ ವಾನಿ' (PM-VANI) ಯೋಜನೆಗೆ ಕೇಂದ್ರ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಈ ಯೋಜನೆಯಡಿ ಸಾರ್ವಜನಿಕ ಡೇಟಾ ಕಛೇರಿಗಳ (ಪಿಡಿಓ) ಮೂಲಕ ಉಚಿತ ವೈಫೈ ಸೇವೆ ಒದಗಿಸುವುದು ಸರ್ಕಾರದ ಉದ್ದೇಶವಾಗಿದೆ. ದೇಶಾದ್ಯಂತ ಒಂದು ಕೋಟಿ ಸಾರ್ವಜನಿಕ ಡೇಟಾ ಕಚೇರಿಗಳನ್ನು ತೆರೆಯಲಾಗುವುದು. ಯಾವುದೇ ಶುಲ್ಕ ಅಥವಾ ಪರವಾನಿಗಿ ಇಲ್ಲದೆ ಇಂತಹ ಕಛೇರಿಗಳನ್ನು ತೆರೆಯಬಹುದು. ಸಣ್ಣ ಅಂಗಡಿಗಳನ್ನು ಅಥವಾ ಸಾಮಾನ್ಯ ಸೇವಾ ಕೇಂದ್ರಗಳನ್ನೇ ಪಿಡಿಓಗಳಾಗಿ ಬದಲಾಯಿಸಬಹುದು. ಇದರಿಂದ ದೇಶದಲ್ಲಿ ವೈಫೈ ಕ್ರಾಂತಿಯಾಗಲಿದೆ ಎಂದು ಕೇಂದ್ರ ಸಚಿವ ರವಿಶಂಕರ್ ಪ್ರಸಾದ್ ತಿಳಿಸಿದ್ದಾರೆ.

ಈ ಮಧ್ಯೆ ರೂ.22,180 ಕೋಟಿಗಳ ಆತ್ಮನಿರ್ಭರ್ ಭಾರತ್ ರೋಜ್‌ಗಾರ್ ಯೋಜನೆಗಳಿಗೂ ಸಂಪುಟ ಸಭೆ ಅನುಮೋದನೆ ನೀಡಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:10.12.2020.

## 60. ಸಂಸತ್ ದಾಳಿಗೆ 19 ವರ್ಷಪೂರ್ಣ

ಭಾರತದ ಇತಿಹಾಸದ ಕರಾಳ ಅಧ್ಯಾಯ 2001 ಡಿಸೆಂಬರ್ 13 ರಂದು ನಡೆದ ಸಂಸತ್ ದಾಳಿಗೆ 19 ವರ್ಷ ಪೂರ್ಣಗೊಂಡಿದ್ದು, ಈ ಹಿನ್ನೆಲೆಯಲ್ಲಿ ದಾಳಿಯಲ್ಲಿ ಹುತಾತ್ಮರಾದವರಿಗೆ ಸಂಸತ್ ಸಂಕೀರ್ಣದಲ್ಲಿ ಪ್ರಧಾನಿ ನರೇಂದ್ರ ಮೋದಿ, ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು, ಸಭಾಪತಿ ಓಂ ಬಿರ್ಲಾ, ಕೇಂದ್ರ ಸಚಿವರು ಮತ್ತು ವಿರೋಧಪಕ್ಷಗಳ ನಾಯಕರು ಗೌರವ ನಮನ ಸಲ್ಲಿಸಿದರು. ರಾಜ್ಯ ಸಭಾ ಉಪ ಸಭಾಪತಿ ಹರಿವಂಶ್, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಗೃಹ ಸಚಿವ ಅಮಿತ್ ಶಾ, ಮೇಲ್ಮನೆಯ ವಿರೋಧ ಪಕ್ಷ ನಾಯಕ ಗುಲಾಂ ನಬಿ ಆಜಾದ್ ಮತ್ತಿತರರು ಸಂಸತ್ ಅವರಣದಲ್ಲಿ ನಿಂತು ಕೆಲ ಕಾಲ ಮೌನಾಚರಣೆ ಮೂಲಕ ನಮನ ಸಲ್ಲಿಸಿದರು.

ಈ ಕುರಿತು ಟ್ವೀಟ್ ಮಾಡಿರುವ ಪ್ರಧಾನಿ ಮೋದಿ ಸಂಸತ್ತಿನ ಮೇಲೆ ನಡೆದ ಹೇಡಿತನದ ಕೃತ್ಯವನ್ನು ಭಾರತ ಎಂದೆಂದಿಗೂ ಮರೆಯುವುದಿಲ್ಲ. ನಮ್ಮ ಸಂಸತ್ತಿನ ರಕ್ಷಣಾ ಕಾರ್ಯದಲ್ಲಿ ಪ್ರಾಣ ಕಳೆದುಕೊಂಡವರ ಶೌರ್ಯ ಮತ್ತು ತ್ಯಾಗವನ್ನು ನಾವು ಸ್ಮರಿಸಿಕೊಳ್ಳುತ್ತೇವೆ ಎಂದಿದ್ದಾರೆ. 2001ರ ಡಿಸೆಂಬರ್ 13 ರಂದು ಲಷ್ಕರ್ – ಎ–ತೋಯ್ಬಾ ಮತ್ತು ಜೈಷ್ – ಎ– ಮಹಮ್ಮದ್ ಉಗ್ರ ಸಂಘಟನೆಯ ಉಗ್ರ ಸಂಸತ್ ಮೇಲೆ ನಡೆಸಿದ ದಾಳಿಯಲ್ಲಿ ಐವರು ಪೊಲೀಸ್ ಸಿಬ್ಬಂದಿಗಳು, ಸಿಆರ್‌ಪಿಎಫ್‌ನ ಓರ್ವ

ಮಹಿಳೆ ಮತ್ತು ಪಾರ್ಲಿಮೆಂಟಿನ 4 ಮಂದಿ ಸಿಬ್ಬಂದಿಗಳು ಸಾವನ್ನಪ್ಪಿದ್ದರು. ದಾಳಿ ಮಾಡಿದ ಎಲ್ಲಾ ಐವರು ಉಗ್ರರನ್ನು ಭದ್ರತಾ ಪಡೆ ಗುಂಡಿಕ್ಕಿ ಹತ್ಯೆ ಮಾಡಿತ್ತು.

ಆಧಾರ: ಕನ್ನಡಪ್ರಭ, ದಿನಾಂಕ:14.12.2020.

## 61. ಬೆಂಗಳೂರು ಅಂಚೆ ಇಲಾಖೆ ಮತ್ತಷ್ಟು ಹೈಟೆಕ್

ಜನಸೇವಾ ಕೇಂದ್ರ ಯೋಜನೆಯಡಿ ನಗರದಲ್ಲಿ ಸ್ಮಾಟ್ ಡೆಲ್, ಸ್ಮಾರ್ಟ್ ಫೋಸ್ಟ್ ಕಿಯೋಸ್ಕ್ ಯಂತ್ರ ಆಳವಡಿಕೆ ಸ್ಪೀಡ್–ರಿಜಿಸ್ಟರ್ ಪೋಸ್ಟ್, ಪಾರ್ಸಲ್ ಬುಕ್ಕಿಂಗ್ ಪುಲ್ ಸ್ಮಾರ್ಟ್ ಮ್ಯೂಸಿಯಂ ರಸ್ತೆ ಕಛೇರಿಯಲ್ಲಿ ಪ್ರಾಯೋಗಿಕವಾಗಿ ಜಾರಿ.

ಭಾರತೀಯ ಅಂಚೆ ಇಲಾಖೆ ಬೆಂಗಳೂರಿನಲ್ಲಿ ಹೊಸದಾಗಿ 'ಜನಸೇವಾ ಕೇಂದ್ರ ಯೋಜನೆಯಡಿ' ಸ್ಮಾರ್ಟ್ ಡೆಲ್ ಮತ್ತು ಸ್ಮಾರ್ಟ್ ಪೋಸ್ಟ್ ಕಿಯೋಸ್ಕ್ ಯಂತ್ರ ಅಳವಡಿಸಿದೆ.

ಸುದ್ದಿಗೋಷ್ಠಿಯಲ್ಲಿ ಬೆಂಗಳೂರು ಪ್ರಧಾನ ಅಂಚೆ ಕಚೇರಿ (ಜಿಪಿಓ) ಮುಖ್ಯ ಪ್ರಧಾನ ಪೋಸ್ಟ್ ಮಾಸ್ಟರ್ (ಕರ್ನಾಟಕ ವಲಯ) ಶಾರದಾ ಸಂಪತ್ ಮಾತನಾಡಿ, ಈ ಸ್ಮಾರ್ಟ್ ಕಿಯೋಸ್ಕ್ ಯಂತ್ರವು ಸ್ಪೀಡ್ ಫೋಸ್ಟ್, ರಿಜಿಸ್ಟರ್ ಪೋಸ್ಟ್ ಪಾರ್ಸಲ್ ತಲುಪಿಸಲು ಬುಕ್ಕಿಂಗ್‌ಗೆ ಸಹಕಾರಿ ಕಿಯೋಸ್ಕ್‌ನಲ್ಲಿ ನೋಂದಾಯಿಸಿಕೊಂಡು ವಿವರ ತಲುಪಿಸುವ ವಿಳಾಸ ಹಾಕಿ ಟೋಕನ್ ಪಡೆದುಕೊಳ್ಳಬೇಕು. ಬಳಿಕ ಸಿಗುವ ಬಾರ್ ಕೋಡ್ ಅಂಟಿಸಿ ಕವರ್ ಅನ್ನು ಪೆಟ್ಟಿಗೆಯಲ್ಲಿ ಹಾಕಿ ಪರದೆ ಮೇಲೆ ಕಾಣುವ ಕ್ಯೂ ಆರ್ ಕೋಡ್‌ನಿಂದ ಶುಲ್ಕ ಪಾವತಿಸಬೇಕು. ಸದ್ಯ ಪ್ರಾಯೋಗಿಕವಾಗಿ ಒಂದು ಯಂತ್ರ ನಗರದ ಮ್ಯೂಸಿಯಂ ರಸ್ತೆಯ ಅಂಚೆ ಕಛೇರಿಯಲ್ಲಿ ಅಳವಡಿಸಲಾಗಿದೆ.

ಮೊಬೈಲ್‌ಗೆ ಬರುವ ಸಂದೇಶದ ಸಹಾಯದಿಂದ ಸ್ಮಾರ್ಟ್ ಡೆಲಿವೆರಿ ವ್ಯವಸ್ಥೆಯಾದ ಸ್ಮಾರ್ಟ್ ಡೆಲ್‌ನಲ್ಲಿ ಅಂಚೆ ಪಾರ್ಸಲ್ ಪತ್ರಗಳನ್ನು ಕಳುಹಿಸಬಹುದು ಮತ್ತು ಪಡೆಯಲುಬಹುದು. ಪರೀಕ್ಷಾರ್ಥವಾಗಿ ನಗರದ ವಿವಿಧೆಡೆ ಏಳು ವಸತಿ ಸಮುಚ್ಚಯಗಳಲ್ಲಿ ಈ ಸೇವೆ ಲಭ್ಯವಿದೆ. ಸೇವೆಯ ಬಳಕೆ ನೋಡಿಕೊಂಡು ಮುಂದಿನ ದಿನಗಳಲ್ಲಿ ಇತರೆಡೆಗೆ ಅಳವಡಿಸಲಿದ್ದೇವೆ ಎಂದು ವಿವರಿಸಿದರು. ಬ್ಯಾಂಕಿಂಗ್, ಸರ್ಕಾರದ ಯೋಜನೆಗಳು ಡಿಜಿಟಲ್ ಸೇರಿ 73 ಸೇವೆಗಳನ್ನು ರಾಜ್ಯದ ಒಟ್ಟು 851 ಅಂಚೆ ಕಛೇರಿಯಡಿ ನೀಡುತ್ತಿದ್ದೇವೆ. ಇಂದು ಸಹ ಡಾಕ್ ಪೇ ಆನ್‌ಲೈನ್ ಪೇಮೆಂಟ್ ಆ್ಯಪ್ ಬಿಡುಗಡೆ ಆಗಿದೆ ಜನರಿಗೆ ಅಂಚೆ ಮೂಲಕ ಕರಕುಶಲ ವಸ್ತು ಮಾರಾಟ ಇತರ ಡಿಜಿಟಲ್ ಸೇವೆ ಒದಗಿಸಲು ಚಿಂತನೆ ನಡೆದಿದೆ ಎಂದರು.

ಈ ವೇಳೆ ಕರ್ನಾಟಕ ವೃತ್ತದ ಇಬ್ಬರು ಅಂಚೆ ಸಿಬ್ಬಂದಿಗಳಿಗೆ ರಾಷ್ಟ್ರಮಟ್ಟದ ಮೇಘದೂತ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕರ್ನಾಟಕ ವಲಯ ಅಂಚೆ ಸೇವೆ ನಿರ್ದೇಶಕ ಕೆ. ರವೀಂದ್ರನ್, ದಕ್ಷಿಣ ಕರ್ನಾಟಕ ಪ್ರಧಾನ ಪೋಸ್ಟ್ ಮಾಸ್ಟರ್ ಎಸ್.ವಿ.ಎಸ್ ಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

ಆಧಾರ: ಕನ್ನಡಪ್ರಭ, ದಿನಾಂಕ:16.12.2020

## 62. ಸಂಸತ್‌ನ ಚಳಿಗಾಲದ ಅಧಿವೇಶನ ರದ್ದು

ಕೋವಿಡ್–19 ಪಿಡುಗಿನ ಹಿನ್ನೆಲೆಯಲ್ಲಿ ಸಂಸತ್‌ನ ಚಳಿಗಾಲದ ಅಧಿವೇಶನ ನಡೆಸುವುದಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ. ಅಲ್ಲದೇ, ಜನವರಿಯಲ್ಲಿ ಬಜೆಟ್ ಅಧಿವೇಶನ ನಡೆಸುವ ಇಂಗಿತವನ್ನು ವ್ಯಕ್ತಪಡಿಸಿದೆ. ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧಿರ್ ರಂಜನ್ ಚೌಧರಿ ಅವರಿಗೆ ಬರೆದಿರುವ ಪತ್ರದಲ್ಲಿ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ ಜೋಶಿ ತಿಳಿಸಿದ್ದಾರೆ. ಕೋವಿಡ್–19 ಪಿಡುಗಿನ ಕಾರಣ ಚಳಿಗಾಲದ ಅವಧಿಯಲ್ಲಿ ಹೆಚ್ಚು ಎಚ್ಚರಿಕೆ ಅಗತ್ಯ. ಇತ್ತೀಚಿನ ಕೆಲ ದಿನಗಳಲ್ಲಿ ದೆಹಲಿ ಸೇರಿದಂತೆ

ಕೆಲವೆಡೆ ಕೋವಿಡ್ ಪ್ರಕರಣಗಳು ದಿಢೀರ್ ಹೆಚ್ಚಳವು ಕಂಡುಬಂದಿದೆ. ಚಳಿಗಾಲದ ಅಧಿವೇಶನ ನಡೆಸದಿರಲು ತೀರ್ಮಾನಿಸಲಾಗಿದೆ ಎಂದು ವಿವರಿಸಿದ್ದಾರೆ.

ಅಧಿವೇಶನ ನಡೆಸದೇ ಇರುವ ಕುರಿತಂತೆ ಎಲ್ಲ ಪಕ್ಷಗಳ ಸಭಾನಾಯಕರೊಂದಿಗೆ ಚರ್ಚೆ ನಡೆಸಲಾಗಿದೆ. ಕೋವಿಡ್ ಪಿಡುಗಿನ ಬಗ್ಗೆ ನಾಯಕರು ಕಳವಳ ವ್ಯಕ್ತಪಡಿಸಿದ್ದಾರೆ ಎಂದು ಜೋಶಿ ಹೇಳಿದ್ದಾರೆ.

ಆಧಾರ: ಪ್ರಜಾವಾಣಿ, ದಿನಾಂಕ:16.12.2020

## 63. ಮುಸ್ಲಿಂ ವಿವಿ ಶತಮಾನೋತ್ಸವ ಕಾರ್ಯಕ್ರಮಕ್ಕೆ ಮೋದಿ

ಅಲೀಗಢ ಮುಸ್ಲಿಂ ವಿಶ್ವವಿದ್ಯಾಲಯದ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸುತ್ತಿದ್ದಾರೆ. ಡಿಸೆಂಬರ್ 22ರಂದು ವರ್ಚುವಲ್ ಕಾನ್ಫರೆನ್ಸ್ ಮೂಲಕ ಪ್ರಧಾನಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಲಿದ್ದು, ಈ ವಿವಿಯ ಕಾರ್ಯಕ್ರಮದಲ್ಲಿ ಅವರು ಇದೇ ಮೊದಲ ಬಾರಿ ಭಾಗಿಯಾಗುತ್ತಿದ್ದಾರೆ.

ಯಾವುದೇ ಒಂದು ವಿಶ್ವವಿದ್ಯಾಲಯ ಶತಮಾನೋತ್ಸವ ಆಚರಿಸಿಕೊಳ್ಳುತ್ತಿದೆಯೆಂದರೆ ಅದೊಂದು ಐತಿಹಾಸಿಕ ಕ್ಷಣ. ಈ ಕಾರ್ಯಕ್ರಮದಲ್ಲಿ ಮೋದಿ ಭಾಗಿಯಾಗುತ್ತಿರುವುದು ಗೌರವದ ಸಂಗತಿಯಾಗಿದೆ. ಪ್ರಧಾನಿ ಭಾಗವಹಿಸುವುದರಿಂದ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ವೇಗ ದೊರಕುತ್ತದೆ. ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ನಿಶಾಂಕ್ ಕೂಡ ಭಾಗವಹಿಸುತ್ತಿದ್ದಾರೆ ಎಂದು ಉಪ ಕುಲಪತಿ ಪ್ರೊ. ತಾರಿಖ್ ಮನ್ಸೂರ್ ಅವರು ಹೇಳಿದ್ದಾರೆ.

1964ರ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಆಗಿನ ಲಾಲ್ ಬಹದ್ದೂರ್ ಶಾಸ್ತ್ರಿ ಭಾಗವಹಿಸಿದ್ದರು. ಅದರ ಬಳಿಕ ವಿವಿ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವ ಪ್ರಧಾನಿಯೆಂದರೆ ಅದು ಮೋದಿ. ರಾಷ್ಟ್ರಪತಿ ರಾಮನಾಥ್ ಕೋವಿಂದ್ ಕೂಡ ಭಾಗವಹಿಸುವುದು ಖಚಿತವಾಗಿತ್ತು. ಆದರೆ ಅವರು ಕಾರಣಾಂತರಗಳಿಂದ ಭಾಗಿಯಾಗುತ್ತಿಲ್ಲ ಕೋವಿಡ್ ಕಾರಣದಿಂದ ಕಾರ್ಯಕ್ರಮವನ್ನು ಆನ್‌ಲೈನ್ ಮುಖಾಂತರ ನಡೆಯಲಿದೆ ಎಂದು ವಿವಿ ಮೂಲಗಳು ತಿಳಿಸಿವೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:18.12.2020.

## 64. ಕೃಷಿ ಕಾಯ್ದೆಗಳಿಂದ ರೈತರಿಗೆ ಲಾಭ: ಮೋದಿ

ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆಯಬೇಕು ಎಂದು ದೆಹಲಿಯ ಗಡಿಗಳಲ್ಲಿ ಆಸಂಖ್ಯ ರೈತರು ನಡೆಸುತ್ತಿರುವ ಪ್ರತಿಭಟನೆ 23ನೇ ಕಾಲಿಟ್ಟ ದಿನವೇ, ಪ್ರಧಾನಿ ನರೇಂದ್ರ ಮೋದಿ ಅವರು ಮೂರು ಶಾಸನಗಳನ್ನು ಮತ್ತೊಮ್ಮೆ ಪ್ರಬಲವಾಗಿ ಸಮರ್ಥಿಸಿಕೊಂಡಿದ್ದಾರೆ.

ರಾಜಕೀಯ ಪಕ್ಷಗಳು, ಕೃಷಿತಜ್ಞರು ಹಾಗೂ ರೈತರು ಸಹ ಈ ಸುಧಾರಣೆ ಬೇಕೆಂದು ದೀರ್ಘಕಾಲದಿಂದ ಬೇಡಿಕೆ ಇಟ್ಟಿದ್ದರು. ಆದರೆ ಸುಧಾರಣೆಯ ಶ್ರೇಯ ನನಗೆ ಸಿಗುತ್ತೆಂದು ರಾಜಕೀಯ ಪಕ್ಷಗಳು ಈಗ ಅದಕ್ಕೆ ವಿರೋಧ ಮಾಡುತ್ತಿವೆ ಎಂದು ಹರಿಹಾಯ್ದಿದ್ದಾರೆ.

**ರೈತರ ಆತಂಕಕ್ಕೆ ಮೋದಿ ಸ್ಪಷ್ಟನೆ**

- ಆತಂಕ: ಕನಿಷ್ಠ ಬೆಂಬಲ ಬೆಲೆ ವ್ಯವಸ್ಥೆ ರದ್ದಾಗುತ್ತೆ – ಮೋದಿ ಸ್ಪಷ್ಟನೆ: ಕಾಯ್ದೆ ಬಂದು 6 ತಿಂಗಳಾಗಿದೆ. ಕೊರೋನಾ ಇದ್ದಾಗಲೂ ಬೆಂಬಲ ಬೆಲೆ ವ್ಯವಸ್ಥೆ ಮುಂದುವರಿದಿದೆ. ಹಿಂದೆಯೂ ಇತ್ತು. ಈಗಲೂ ಇದೆ ಮುಂದೆಯೂ ಇರುತ್ತೆ.

- ಆತಂಕ: ಎಪಿಎಂಸಿಗಳನ್ನು ಮುಚ್ಚಲಾಗುತ್ತದೆ – ಮೋದಿ ಸ್ಪಷ್ಟನೆ: ಎಪಿಎಂಸಿಗಳಲ್ಲಿ ಮಾರಲು ರೈತರು ಸ್ವತಂತ್ರ ಒಂದೂ ಮಂಡಿ ಮುಚ್ಚಿಲ್ಲ. ಎಪಿಎಂಸಿಗಳಲ್ಲಿ ಕಳೆದ ವರ್ಷಕ್ಕಿಂತ ಹೆಚ್ಚು ಈ ಬಾರಿ ಖರೀದಿ ಆಗಿದೆ.

- ಆತಂಕ: ಕಾರ್ಪೋರೇಟ್‌ಗೆ ಗುತ್ತಿಗೆ ವ್ಯವಸ್ಥೆಯ ಲಾಭ – ಮೋದಿ ಸ್ಪಷ್ಟನೆ : ಗುತ್ತಿಗೆ ವ್ಯವಸ್ಥೆ ಹಿಂದೆಯೇ ಇತ್ತು. ಈಗ ರೈತ ಪರವಾಗಿ ಸುಧಾರಿಸಲಾಗಿದೆ. ಈ ವ್ಯವಸ್ಥೆ ಐಚ್ಛಿಕ ಕಂಪನಿಗಳು ಒಪ್ಪಂದ ಮುರಿದರೆ ಭಾರೀ ದಂಡ ಕಟ್ಟಬೇಕು. ಆದರೆ ರೈತರು ಬೇಕಾದಾಗ ಒಪ್ಪಂದದಿಂದ ಹಿಂದೆ ಸರಿಯಬಹುದು. ಅಲ್ಲದೆ ಬೆಳೆಗೆ ಹೆಚ್ಚಿನ ದರ ಸಿಕ್ಕರೆ, ಒಪ್ಪಂದದ ದರದ ಜೊತೆಗೆ ಹೆಚ್ಚುವರಿ ಮೊತ್ತವನ್ನು ಕಂಪನಿಗಳು ರೈತರಿಗೆ ನೀಡಬೇಕು. ಇನ್ನು ಗುತ್ತಿಗೆ ಒಪ್ಪಂದ ಕೇವಲ ಬೆಳೆಗೆ ಹೊರತು ರೈತರ ಜಮೀನಿಗಲ್ಲ. ಜಮೀನು ಸಂಸ್ಥೆಗಳ ಪಾಲಾಗುವ ಮಾತೇ ಇಲ್ಲ.

ಆಧಾರ: ವಿಜಯ ಕರ್ನಾಟಕ, ದಿನಾಂಕ:19.12.2020.

## 65. ರೈತರಿಗೆ ನಮೋ

ಕೈಮುಗಿದು ಕೇಳಿಕೊಳ್ಳುತ್ತೇನೆ, ನಿಮ್ಮ ಎಲ್ಲಾ ಕಳವಳ, ಆತಂಕಗಳ ಬಗ್ಗೆ ಚರ್ಚೆಗೆ ಸಿದ್ಧವಿದ್ದೇವೆ ನಿಮ್ಮ ಆತಂಕಗಳನ್ನು ದೂರ ಮಾಡುತ್ತೇವೆ. ಇದು ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ಪ್ರತಿಭಟನೆ ನಡೆಸುತ್ತಿರುವ ರೈತರಿಗೆ ಪ್ರಧಾನಿ ಮೋದಿ ಅವರು ಮಾಡಿದ ಮನವಿ. ಮೂರು ಕಾಯ್ದೆಗಳ ಬಗ್ಗೆ ಬಲವಾಗಿ ಸಮರ್ಥಿಸಿಕೊಂಡ ಅವರು ಇವು ಜಾರಿಯಾದರೆ ಕನಿಷ್ಠ ಬೆಂಬಲ ಬೆಲೆ ರದ್ದಾಗುತ್ತದೆ ಎಂಬುದು ಬಹುದೊಡ್ಡ ಸುಳ್ಳು ಎಂದು ಹೇಳಿದ್ದಾರೆ.

ಮಧ್ಯಪ್ರದೇಶದ 23 ಸಾವಿರ ಗ್ರಾಮಗಳ ರೈತರನ್ನು ಉದ್ದೇಶಿಸಿ ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತನಾಡಿದ ಪ್ರಧಾನಿ ನಿಮ್ಮಲ್ಲಿ ಯಾರಿಗಾದರೂ ಈ ಬಗ್ಗೆ ಆತಂಕವಿದ್ದಲ್ಲಿ ನಾನು ತಲೆಬಾಗಿ ಮತ್ತು ಕೈ ಮುಗಿದು ಕೇಳಿಕೊಳ್ಳುತ್ತೇನೆ. ನಿಮ್ಮ ಆತಂಕ ಕಳವಳಗಳ ಬಗ್ಗೆ ಚರ್ಚೆಗೆ ಸಿದ್ಧವಿದ್ದೇವೆ, ನಿಮ್ಮ ಭಯವನ್ನು ಹೋಗಲಾಡಿಸುತ್ತೇವೆ ಎಂದು ಭರವಸೆ ನೀಡಿದರು.

ಎಂಎಸ್‌ಪಿ ಕುರಿತಂತೆ ಪ್ರತಿಪಕ್ಷಗಳು ಸುಳ್ಳಿನ ಕಂತೆಯನ್ನೇ ಹಬ್ಬಿಸುತ್ತಿವೆ. ಆದರೆ ನಾನು ಇಲ್ಲಿ ರೈತರಿಗೆ ಭರವಸೆ ನೀಡುತ್ತಿದ್ದೇನೆ. ಕನಿಷ್ಠ ಬೆಂಬಲ ಬೆಲೆ ಎಲ್ಲಿಗೂ ಹೋಗುವುದಿಲ್ಲ, ಹೋಗುತ್ತೆ ಎಂಬುದು ದೊಡ್ಡ ಸುಳ್ಳು ಎಂದು ಮೋದಿ ಅಭಯ ನೀಡಿದರು. ರೈತರ ಯಾವುದೇ ವಿಚಾರಗಳ ಬಗ್ಗೆಯೂ ನಾವು ಸಂಪೂರ್ಣ ಚರ್ಚೆಗೆ ಸಿದ್ಧರಿದ್ದೇವೆ ಎಂದರು.

**ಪ್ರಧಾನಿ ಹೇಳಿಕೆಗಳು:–**

- ಈ ಮೂರು ಕಾಯ್ದೆಗಳನ್ನು ರಾತ್ರೋರಾತ್ರಿ ತಂದಿದ್ದಲ್ಲ.
- ಈ ಬಗ್ಗೆ ಎರಡು ದಶಕಗಳಿಂದ ಪ್ರತಿ ಸರ್ಕಾರ ರಾಜ್ಯಗಳು ಚರ್ಚೆ ನಡೆಸಿವೆ.
- ರೈತರ ಗುಂಪುಗಳು, ಕೃಷಿ ತಜ್ಞರು, ಅರ್ಥಶಾಸ್ತ್ರಜ್ಞರು, ವಿಜ್ಞಾನಿಗಳು, ಪ್ರಗತಿಪರ ರೈತರು ಕೃಷಿ ಸುಧಾರಣೆ ಬೇಕು ಎಂದಿದ್ದಾರೆ.
- ಎಂಎಸ್‌ಪಿಯಾಗಲಿ, ಮಂಡಿಗಳಾಗಲಿ ರದ್ದಾಗಲ್ಲ.
- ರದ್ದು ಮಾಡುವುದಾದರೆ, ಎಪಿಎಂಸಿಗಳ ಸುಧಾರಣೆಗಾಗಿ ರೂ.500 ಕೋಟಿ ವೆಚ್ಚ ಮಾಡಲಾಗುತ್ತಿತ್ತೇ.
- ಕಾಯ್ದೆಗಳನ್ನು ವಿರೋಧಿಸುತ್ತಿರುವ ಪ್ರತಿಪಕ್ಷಗಳ ಚುನಾವಣಾ ಪ್ರಣಾಳಿಕೆಯಲ್ಲೂ ಈ ಕಾಯ್ದೆಗಳ ಬಗ್ಗೆ ಉಲ್ಲೇಖ.

- ಮೋದಿಯೇ ಈ ಕಾಯ್ದೆ ಜಾರಿಯ ಶ್ರೇಯ ಪಡೆಯುತ್ತಾರೆ ಎಂಬುದು ವಿರೋಧ ಪಕ್ಷಗಳ ಆತಂಕ.
- ಕಾಯ್ದೆ ಜಾರಿ ಬಗ್ಗೆ ಬೇಕಾದರೆ ಪ್ರತಿಪಕ್ಷಗಳೇ ಶ್ರೇಯ ಇಟ್ಟುಕೊಳ್ಳಲಿ, ನಮಗೆ ಯಾವುದೇ ಕ್ರೆಡಿಟ್ ಬೇಡ.
- ನಮಗೆ ರೈತರು ಉದ್ಧಾರವಾಗಬೇಕು. ಅವರ ಜೀವನ ಸುಧಾರಣೆಯಾಗಬೇಕಷ್ಟೇ.

ಆಧಾರ: ಉದಯವಾಣಿ, ದಿನಾಂಕ:19.12.2020

## 66. ದಯವಿಟ್ಟು ಮಾತುಕತೆಗೆ ಬನ್ನಿ ಕೈ ಮುಗಿದ ಮೋದಿ

ಮಾತುಕತೆಗೆ ಸರ್ಕಾರ ಸಿದ್ಧವಿದೆ. ದಯಮಾಡಿ ಬನ್ನಿ ಎಂದು ಪ್ರಧಾನಿ ನರೇಂದ್ರ ಮೋದಿಯವರು ತಲೆಬಾಗಿ, ಕೈಮುಗಿದು, ಪ್ರತಿಭಟನಾನಿರತ ರೈತರಲ್ಲಿ ಮನವಿ ಮಾಡಿದ್ದಾರೆ. ಸರ್ಕಾರದ ಪ್ರಯತ್ನಗಳ ನಂತರವು ಯಾರಿಗಾದರೂ ಭಯವಿದ್ದರೆ ತಲೆ ಬಾಗಿಸಿ, ಮಡಿಸಿದ ಕೈಗಳಿಂದ ಮತ್ತು ಎಲ್ಲ ನಮ್ರತೆಯಿಂದ ನಾವು ಅವರ ಕಳವಳವನ್ನು ನಿವಾರಿಸಲು ಸಿದ್ಧರಿದ್ದೇವೆ ಎಂದು ಪ್ರಧಾನಿ ಮೋದಿ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಕಿಸಾನ್ ಕಲ್ಯಾಣ್ ಕಾರ್ಯಕ್ರಮದಲ್ಲಿ ರೈತರನ್ನು ಉದ್ದೇಶಿಸಿ ಹೇಳಿದ್ದಾರೆ.

ಹೊಸ ಕಾನೂನುಗಳ ಮೂಲಕ ಸರ್ಕಾರವು ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯನ್ನು ಕೊನೆಗೊಳಿಸುತ್ತಿದೆ ಎಂಬ ಆರೋಪವನ್ನು ಅವರು ತಳ್ಳಿಹಾಕಿದ್ದು, ಇದು ಇದುವರೆಗಿನ ಅತಿದೊಡ್ಡ ಸುಳ್ಳು ಎಂದಿದ್ದಾರೆ.

ನಾವು ಇತ್ತೀಚಿಗೆ ತಂದ ಕೃಷಿ ಸುಧಾರಣೆಗಳಲ್ಲಿ ಅಪನಂಬಿಕೆಗೆ ಯಾವುದೇ ಕಾರಣವಿಲ್ಲ ಮತ್ತು ಸುಳ್ಳಿನ ಅವಕಾಶವಿಲ್ಲ ಎಂಎಸ್‌ಪಿಯನ್ನು ತೆಗೆದುಹಾಕುವ ಬಗ್ಗೆ ಆಲೋಚನೆಯಿದ್ದಿದ್ದರೆ ಸರ್ಕಾರವು ಸ್ವಾಮಿನಾಥನ್ ಸಮಿತಿ ವರದಿಯನ್ನು ಏಕೆ ಜಾರಿಗೆ ತರುತ್ತದೆ ಎಂದು ಪ್ರಶ್ನಿಸಿದ್ದಾರೆ. ಕನಿಷ್ಠ ಬೆಂಬಲ ಬೆಲೆಯನ್ನು ಮೊದಲಿನಂತೆ ನೀಡಲಾಗುವುದು ಎಂದು ರೈತರಿಗೆ ಭರವಸೆ ನೀಡುತ್ತೇನೆ. ಅದನ್ನು ನಿಲ್ಲಿಸಲಾಗುವುದಿಲ್ಲ ಅಥವಾ ಕೊನೆಗೊಳಿಸುವುದಿಲ್ಲ. ಎಪಿಎಂಸಿ ಮಂಡಿಗಳು ಈ ಬಗ್ಗೆ ಮತ್ತೊಂದು ಸುಳ್ಳು ಹರಡುತ್ತಿದೆ. ಹೊಸ ಕಾನೂನುಗಳಲ್ಲಿ ಸರ್ಕಾರವು ರೈತರಿಗೆ ತಮ್ಮ ಉತ್ಪನ್ನಗಳನ್ನು ಮಂಡಿಗಳಲ್ಲಿ ಅಥವಾ ಹೊರಗಡೆ ಹೆಚ್ಚು ಲಾಭವನ್ನು ಸಿಗುವ ಎಲ್ಲಿ ಬೇಕಾದರೂ ಮಾರಾಟ ಮಾಡುವ ಆಯ್ಕೆಯನ್ನು ನೀಡಿದೆ. ಹೊಸ ಕಾನೂನುಗಳ ನಂತರ ಒಂದೇ ಒಂದು ಮಂಡಿ ಕೂಡ ಮುಚ್ಚಿಲ್ಲ. ಹಾಗಾದರೆ ಈ ಸುಳ್ಳುಗಳು ಏಕೆ ಹರಡುತ್ತಿವೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಕೃಷಿಕರ ಕುರಿತು ಮಾತನಾಡುವವರು ತುಂಬಾ ಹೃದಯಹೀನರು ಅದಕ್ಕೆ ಒಂದು ಪುರಾವೆಯೆಂದರೆ ಸ್ವಾಮಿನಾಥನ್ ಸಮಿತಿ ವರದಿ. ಈ ಜನರು ಎಂಟು ವರ್ಷಗಳ ಕಾಲ ಸಮಿತಿಯ ಶಿಫಾರಸ್ಸಿಗಾಗಿ ಕಾದು ಕುಳಿತರು ಎಂದಿದ್ದಾರೆ.

- ಇತ್ತೀಚೆಗೆ ತಂದ ಕೃಷಿ ಸುಧಾರಣೆಗಳಲ್ಲಿ ಅಪನಂಬಿಕೆಗೆ ಯಾವುದೇ ಕಾರಣವಿಲ್ಲ ಮತ್ತು ಸುಳ್ಳಿನ ಅವಕಾಶವಿಲ್ಲ.
- ಎಂಎಸ್‌ಪಿ ತೆಗೆದುಹಾಕುವ ವಿಚಾರವಿದ್ದರೆ, ಸರ್ಕಾರವು ಸ್ವಾಮಿನಾಥನ್ ಸಮಿತಿ ವರದಿ ಏಕೆ ಜಾರಿಗೆ ತರುತ್ತದೆ.
- ಹೊಸ ಕಾನೂನುಗಳ ನಂತರ ಒಂದೇ ಒಂದು ಮಂಡಿ ಕೂಡ ಮುಚ್ಚಿಲ್ಲ.
- ಕೃಷಿಕರ ಜೀವನಮಟ್ಟ ಸುಧಾರಣೆಗಾಗಿ ವಿಪಕ್ಷಗಳು ನೀಡಿದ್ದ ಭರವಸೆಯನ್ನೇ ನಮ್ಮ ಸರ್ಕಾರ ಅನುಷ್ಠಾನಕ್ಕೆ ತಂದಿದೆ.

- ರಾಜಕೀಯ ಮಾಡದೇ ಒಂದಾಗಿ ರೈತ ಸಮುದಾಯವನ್ನು ಸದೃಢಗೊಳಿಸೋಣ.
- ಕೃಷಿ ಕಾನೂನುಗಳನ್ನು ಒಂದೇ ರಾತ್ರಿಯಲ್ಲಿ ಜಾರಿಗೊಳಿಸಲಾಗಿಲ್ಲ.
- 20–30 ವರ್ಷಗಳಿಂದ ಮಾಡಲಾದ ಸುದೀರ್ಘ ಅಧ್ಯಯನ ಪರಿಗಣಿಸಿ ಕಾನೂನು ಜಾರಿ.
- ರಾಜಕೀಯ ಪಕ್ಷಗಳು ರೈತರನ್ನು ಪ್ರಚೋದಿಸುವುದನ್ನು ನಿಲ್ಲಿಸಬೇಕು. ರೈತರ ವಿಷಯದಲ್ಲಿ ರಾಜಕೀಯ ಬೇಡ

**ರೈತರ ಸಮಸ್ಯೆ ಶೀಘ್ರದಲ್ಲೇ ಪರಿಹಾರವಾಗಲಿದೆ:** ರೈತರ ಸಮಸ್ಯೆಗಳಿಗೆ ಶೀಘ್ರದಲ್ಲೇ ಪರಿಹಾರ ನೀಡಲಾಗುವುದು ಎಂದು ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಹೇಳಿದ್ದಾರೆ. ರಾಜಸ್ಥಾನ, ಮಹಾರಾಷ್ಟ್ರ, ಗುಜರಾತ್ ಮತ್ತು ಹರಿಯಾಣದ ರೈತ ಉತ್ಪಾದಕ ಸಂಸ್ಥೆ ಪ್ರತಿನಿಧಿಗಳು ತಮ್ಮ ಅನುಭವಗಳನ್ನು ಸಚಿವರೊಂದಿಗೆ ಹಂಚಿಕೊಂಡಿದ್ದು, ಹೊಸ ಕೃಷಿ ಕಾನೂನು ಅಡಿಯಲ್ಲಿ ಮುಕ್ತ ಮಾರುಕಟ್ಟೆ ವ್ಯವಸ್ಥೆಯಿಂದ ರೈತರು ಲಾಭ ಪಡೆದಿದ್ದಾರೆ ಮತ್ತು ಪಡೆದ ನಂತರ ಪರಿಹಾರವಿದೆ ಎಂದಿದ್ದಾರೆ. ಪ್ರಗತಿಪರ ರೈತರು ಹೊಸ ಕಾನೂನುಗಳ ಪರಿಣಾಮವಾಗಿ ಬಹುಪದರ ತೆರಿಗೆ ವ್ಯವಸ್ಥೆಯನ್ನು ತೆಗೆದುಹಾಕುವುದರಿಂದ, ಅವು ಹೆಚ್ಚಿನ ಪ್ರಮಾಣದಲ್ಲಿ ಆರ್ಥಿಕ ಲಾಭವನ್ನು ಪಡೆಯುತ್ತಿದ್ದಾರೆ 2022ರ ವೇಳೆಗೆ ರೈತರ ಆದಾಯವನ್ನು ದ್ವಿಗುಣಗೊಳಿಸಲು ಮತ್ತು ಅವರ ಜೀವನ ಮಟ್ಟವನ್ನು ಸುಧಾರಿಸಲು ಪ್ರಧಾನಿ ನರೇಂದ್ರ ಮೋದಿ ಸರ್ಕಾರ ದೃಢನಿಶ್ಚಯವನ್ನು ಹೊಂದಿದೆ ಎಂದು ಅವರು ಹೇಳಿದ್ದಾರೆ.

**ಕೇಂದ್ರ ಕೃಷಿ ಸಚಿವರಿಗೆ 10 ಪತ್ರ:** ರೈತರ ಪಾಲಿಗೆ ಮರಣ ಶಾಸನವಾಗಿರುವ ಮೂರು ಕೃಷಿ ಕಾನೂನುಗಳನ್ನು ಹಿಂಪಡೆಯುವಂತೆ ಒತ್ತಾಯಿಸಿ ರೈತರು ನಡೆಸುತ್ತಿರುವ ಪ್ರತಿಭಟನೆಗೆ ದೇಶದ 10 ಹಿರಿಯ ಅರ್ಥಶಾಸ್ತ್ರಜ್ಞರು ಬೆಂಬಲ ವ್ಯಕ್ತಪಡಿಸಿದ್ದಾರೆ. ಅಲ್ಲದೆ ಕೃಷಿ ಕಾನೂನುಗಳನ್ನು ರದ್ದುಗೊಳಿಸುವಂತೆ ಕೇಂದ್ರ ಸಚಿವ ನರೇಂದ್ರ ಸಿಂಗ್ ತೋಮರ್ ಅವರಿಗೆ ಪತ್ರವನ್ನು ಬರೆದಿದ್ದಾರೆ. ಹೊಸ ಕೃಷಿ ಕಾನೂನುಗಳ ಪ್ರಕಾರ ಎರಡು ಮಾರುಕಟ್ಟೆಗಳ ರಚನೆಗೆ ಕಾರಣವಾಗುತ್ತವೆ. ಎಪಿಎಂಸಿ ಮಾರುಕಟ್ಟೆ ಪ್ರಾಂಗಣಗಳಲ್ಲಿ ನಿಯಂತ್ರಿತ ಮಾರುಕಟ್ಟೆ ಮತ್ತು ವ್ಯಾಪಾರ ಪ್ರದೇಶದಲ್ಲಿ ಅನಿಯಂತ್ರಿತ ಮಾರುಕಟ್ಟೆ ಸೃಷ್ಟಿಯಾಗುತ್ತದೆ.

ಆಧಾರ: ವಿಶ್ವವಾಣಿ, ದಿನಾಂಕ:19.12.2020

## 67. ವಿದ್ಯುತ್ ಗ್ರಾಹಕರ ಹಕ್ಕು ರಕ್ಷಣೆಗೆ ಕೇಂದ್ರ ಸರ್ಕಾರದ ನಿಯಮ

ವಿದ್ಯುತ್ ವಿತರಣಾ ಕಂಪನಿಗಳು (ಎಸ್ಕಾಂ) ಗ್ರಾಹಕರನ್ನು ಶೋಷಿಸುತ್ತವೆ. ಬೇಕಾಬಿಟ್ಟಿ ಸೇವೆ ನೀಡುತ್ತದೆ ಮತ್ತು ಪದೇ ಪದೇ ವಿದ್ಯುತ್ ಕಡಿತಗೊಳಿಸಿ ಸರಿಯಾದ ಸೇವೆ ನೀಡದಿದ್ದರೂ ದುಬಾರಿ ಬಿಲ್ ವಸೂಲಿ ಮಾಡುತ್ತವೆ ಎಂಬ ದೂರು ದೇಶಾದ್ಯಂತ ಇದೆ. ಇದಕ್ಕೆ ಪರಿಹಾರವಾಗಿ ಕೇಂದ್ರ ಸರ್ಕಾರ ವಿದ್ಯುತ್ ಗ್ರಾಹಕರ ಹಕ್ಕುಗಳನ್ನು ರಕ್ಷಿಸಲು ಹೊಸ ನಿಯಮಾವಳಿ ಬಿಡುಗಡೆ ಮಾಡಿದ್ದು, ಅದರಡಿ ನಿಗದಿಗಿಂತ ಹೆಚ್ಚು ಸಮಯ ಕರೆಂಟ್ ತೆಗೆದರೆ ಎಸ್ಕಾಂಗಳು ಗ್ರಾಹಕರಿಗೆ ದಂಡದ ರೂಪದಲ್ಲಿ ಪರಿಹಾರ ನೀಡಬೇಕಿದೆ.

ಕೇಂದ್ರ ಇಂಧನ ಸಚಿವ ಆರ್.ಸಿ.ಸಿಂಗ್ ವಿದ್ಯುತ್ ನಿಯಮಗಳು (ಗ್ರಾಹಕರ ಹಕ್ಕುಗಳು) ಹೆಸರಿನ ಹೊಸ ನೀತಿಯನ್ನು ಬಿಡುಗಡೆ ಮಾಡಿ ದೇಶದೆಲ್ಲೆಡೆ ವಿದ್ಯುತ್ ವಿತರಣಾ ಕಂಪನಿಗಳು ಏಕಸ್ವಾಮ್ಯ ಹೊಂದಿವೆ. ಒಂದು ಕಡೆ ಒಂದೇ ಕಂಪನಿ ಸೇವೆ ನೀಡುವುದರಿಂದ ಗ್ರಾಹಕರಿಗೆ ಆಯ್ಕೆ ಇಲ್ಲದಂತಾಗಿದೆ. ವಿದ್ಯುತ್ ವಿತರಣಾ ಕಂಪನಿಗಳು ಗ್ರಾಹಕರ ಹಕ್ಕುಗಳನ್ನು ರಕ್ಷಿಸದ ಬಗ್ಗೆ ದೂರುಗಳಿವೆ. ಅದನ್ನು ಹೋಗಲಾಡಿಸಲು ಹೊಸ ನಿಯಮಾವಳಿ ಜಾರಿಗೊಳಿಸಲಾಗುತ್ತಿದೆ ಎಂದು ಹೇಳಿದರು.

ಹೊಸ ನಿಯಮಗಳಲ್ಲಿ ಕೆಲವನ್ನು ಕೇಂದ್ರ ಸರ್ಕಾರ ಸ್ಪಷ್ಟವಾಗಿ ಹೇಳಿದೆ. ಇನ್ನು ಕೆಲ ನಿಯಮಗಳನ್ನು ರಾಜ್ಯಗಳ ವಿದ್ಯುತ್ ನಿಯಂತ್ರಣ ಆಯೋಗಗಳು ಅಂತಿಮಗೊಳಿಸಬೇಕು ಎಂದು ತಿಳಿಸಿದೆ.

**ಹೊಸ ನಿಯಮದ ಪ್ರಮುಖ ಅಂಶಗಳು:**

- ಎಸ್ಕಾಂಗಳು ನಿಗದಿಗಿಂತ ಹೆಚ್ಚು ಬಾರಿ ಅಥವಾ ಹೆಚ್ಚು ಸಮಯ ವಿದ್ಯುತ್ ನಿಲುಗಡೆ ಮಾಡಿದರೆ ಗ್ರಾಹಕರಿಗೆ ದಂಡದ ರೂಪದಲ್ಲಿ ಪರಿಹಾರ ನೀಡಬೇಕು. ಈ ಪರಿಹಾರ ತನ್ನಿಂತಾನೇ ಪಾವತಿಯಾಗಬೇಕು. ವಿದ್ಯುತ್ ನಿಲುಗಡೆ ಸಮಯ ನಿಗದಿ ಬಗ್ಗೆ ಆಯೋಗಗಳು ನಿರ್ಧರಿಸಬೇಕು.
- ವಿದ್ಯುತ್ ಕಡಿತಗೊಳಿಸುವ ಮುನ್ನ ಎಲ್ಲಾ ಗ್ರಾಹಕರಿಗೂ ಎಸ್ಎಂಎಸ್ ಮುಂತಾದ ರೂಪದಲ್ಲಿ ವೈಯಕ್ತಿಕವಾಗಿ ಸಂದೇಶ ರವಾನಿಸಬೇಕು.
- ಹಿರಿಯ ನಾಗರಿಕರಿಗೆ ಅರ್ಜಿ ಸ್ವೀಕಾರ, ಬಿಲ್ ಪಾವತಿ ಸೇರಿದಂತೆ ಎಲ್ಲಾ ಸೇವೆಯನ್ನು ಎಸ್ಕಾಂಗಳು ಮನೆ ಬಾಗಿಲಿಗೆ ನೀಡಬೇಕು.
- ಸೇವೆ ನೀಡಲು 24 ಗಂಟೆ ಉಚಿತ ಕಾಲ್‌ಸೆಂಟರ್, ವೆಬ್‌ಸೈಟ್, ಆ್ಯಪ್ ಕೇಂದ್ರಿಕೃತ ದೂರವಾಣಿ ಸಂಖ್ಯೆ ಇತ್ಯಾದಿಗಳನ್ನು ಹೊಂದಿರಬೇಕು.
- ಗ್ರಾಹಕರು ದೂರುಗಳನ್ನು ಗರಿಷ್ಠ 7 ದಿನ, ಮುನ್ಸಿಪಲ್ ಪ್ರದೇಶದಲ್ಲಿ 15 ದಿನ ಹಾಗೂ ಗ್ರಾಮೀಣ ಭಾಗದಲ್ಲಿ 30 ದಿನದೊಳಗೆ ಗ್ರಾಹಕರು ಕೋರುವ ಹೊಸ ವಿದ್ಯುತ್ ಸಂಪರ್ಕ, ಬದಲಾವಣೆ, ರದ್ಧತಿ ಸೇವೆ ನೀಡಬೇಕು.
- ಮೀಟರ್ ಇಲ್ಲದೆ ಯಾವುದೇ ಹೊಸ ಸಂಪರ್ಕ ನೀಡುವಂತಿಲ್ಲ. ಗ್ರಾಹಕರಿಗೆ ದಿನದ 24 ಗಂಟೆ ನಿರಂತರ ವಿದ್ಯುತ್ ನೀಡಬೇಕು ಆದರೆ, ಕೃಷಿ ಮುಂತಾದ ಚಟುವಟಿಕೆಗಳಿಗೆ ನೀಡುವ ವಿದ್ಯುತ್‌ನ ಅವಧಿ ಕಡಿತಗೊಳಿಸಲು ಆಯೋಗಕ್ಕೆ ಅಧಿಕಾರವಿದೆ.
- ಮನೆಯಲ್ಲೇ ವಿದ್ಯುತ್ ಉತ್ಪಾದಿಸುವ ಗ್ರಾಹಕರು ವಿದ್ಯುತ್ ಗ್ರಾಹಕರೆಂದೇ ಪರಿಗಣಿಸಲ್ಪಡಬೇಕು. ಅವರಿಗೆ ಸಾಮಾನ್ಯ ಗ್ರಾಹಕರಿಗಿರುವ ಎಲ್ಲಾ ಹಕ್ಕುಗಳಿರುತ್ತವೆ.

ಆಧಾರ: ಕನ್ನಡಪ್ರಭ, ದಿನಾಂಕ:22.12.2020

## 68. ಪ್ರಧಾನಿ ಮೋದಿಗೆ ಅಮೆರಿಕದ ಅತ್ಯುನ್ನತ ಪ್ರಶಸ್ತಿ

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಮೆರಿಕದ ಪ್ರತಿಷ್ಠಿತ 'ಲೀಜನ್ ಆಫ್ ಮೆರಿಟ್' ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ. ಅಮೆರಿಕದಲ್ಲಿನ ಭಾರತದ ರಾಯಭಾರಿ ತರನ್‌ಜಿತ್ ಸಿಂಗ್ ಸಂಧು ಅವರು ಪ್ರಧಾನಿ ಪರವಾಗಿ ಈ ಪ್ರಶಸ್ತಿಯನ್ನು ಸ್ವೀಕರಿಸಿದರು. ಶ್ವೇತಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರರ ರಾಬರ್ಟ್ ಒಬ್ರಿಯಾನ್ ಪ್ರಶಸ್ತಿ ಪ್ರಧಾನ ಮಾಡಿದರು.

ಭಾರತವನ್ನು ಜಾಗತಿಕ ಶಕ್ತಿಯಾಗಿ ರೂಪಿಸುವಲ್ಲಿ ಹಾಗೂ ಅಮೆರಿಕದೊಂದಿಗಿನ ಸಂಬಂಧವನ್ನು ಬಲಪಡಿಸುವ ನಿಟ್ಟಿನಲ್ಲಿ ಪ್ರದರ್ಶಿಸಿದ ನಾಯಕತ್ವ ಗುಣಗಳನ್ನು ಪರಿಗಣಿಸಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮೋದಿ ಅವರಿಗೆ ಈ ಪ್ರಶಸ್ತಿಯನ್ನು ಪ್ರದಾನ ಮಾಡಿದರು ಎಂದು ಒಬ್ರಿಯಾನ್ ಟ್ವೀಟ್ ಮಾಡಿದ್ದಾರೆ.

ಆಧಾರ: ಪ್ರಜಾವಾಣಿ, ದಿನಾಂಕ:23.12.2020.

## 69. ಎಸ್ಸಿ ವಿದ್ಯಾರ್ಥಿಗಳಿಗೆ ಬಂಪರ್

ಪರಿಶಿಷ್ಟ ಜಾತಿ ಬಡ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ಶಿಕ್ಷಣಕ್ಕೆ ನೆರವು ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರ ರೂ.59,000 ಕೋಟಿಗಳ ವಿದ್ಯಾರ್ಥಿ ವೇತನ ಯೋಜನೆಯನ್ನು ಘೋಷಿಸಿದೆ.

ಐದು ವಷಗಳ ಅವಧಿಗೆ ಸುಮಾರು ರೂ.4 ಕೋಟಿಗಿಂತಲೂ ಹೆಚ್ಚು ವಿದ್ಯಾರ್ಥಿಗಳಿಗೆ ಅನುಕೂಲ ಒದಗಿಸಲು ರೂಪಿಸಲಾಗಿರುವ ಈ ಯೋಜನೆಗೆ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ದೊರೆತಿದೆ. ಅರ್ಹ ವಿದ್ಯಾರ್ಥಿಗಳ 10ನೇ ತರಗತಿ ನಂತರದ ವಿದ್ಯಾಭ್ಯಾಸದ ಖರ್ಚನ್ನು ಈ ಯೋಜನೆಯ ಮೂಲಕ ಸರ್ಕಾರವೇ ಭರಿಸಲಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲುದಾರಿಕೆಯ ಈ ಯೋಜನೆಯು 2021–22ನೇ ಶೈಕ್ಷಣಿಕ ವರ್ಷದಿಂದಲೇ ಅನುಷ್ಠಾನಗೊಳ್ಳಲಿದೆ. ಇದು ಸಂಪೂರ್ಣ ಆನ್‌ಲೈನ್ ಯೋಜನೆಯಾಗಿದ್ದು, ಹಣವು ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮೆಯಾಗಲಿದೆ. ಅರ್ಹ ಬಡ ವಿದ್ಯಾರ್ಥಿಗಳ ನೋಂದಣಿ, ಸಕಾಲಿಕ ಪಾವತಿ ಸತತ ನಿಗಾ ಹಾಗೂ ಸಂಪೂರ್ಣ ಪಾರದರ್ಶಕತೆಗೆ ಸಾಕಷ್ಟು ಕ್ರಮಗಳನ್ನು ಯೋಜನೆ ಒಳಗೊಂಡಿದೆ ಎಂದು ಸಂಪುಟ ಸಭೆಯ ಬಳಿಕ ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಮಾಹಿತಿ ನೀಡಿದ್ದಾರೆ.

**ಅನುದಾನ ಹೆಚ್ಚಳ:** 2017–18ರ ಅವಧಿಯಲ್ಲಿ ಕೇಂದ್ರ ನೀಡುತ್ತಿದ್ದ ರೂ.1,100 ಕೋಟಿ ವಾರ್ಷಿಕ ನೆರವನ್ನು 2020–21 ರಿಂದ 2025–26ನೇ ಸಾಲಿನವರೆಗೆ 5 ಪಟ್ಟು ಹೆಚ್ಚಿಸಲು ತೀರ್ಮಾನಿಸಲಾಗಿದೆ,

**ಪ್ರಮುಖ ಅಂಶಗಳು:**

- 2021–22 ರಿಂದ ಯೋಜನೆ ಆರಂಭ
- ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮೆ
- ನಿಗದಿತ ಸಮಯ ಮಿತಿಯಲ್ಲಿ ಹಣ ವರ್ಗಾವಣೆ
- ಆಧಾರ್ ಆಧರಿತ ವ್ಯವಸ್ಥೆಯಡಿ ಪಾವತಿ

**ಯಾರಿಗೆ ಪ್ರಯೋಜನ:** 10ನೇ ತರಗತಿ ಪಾಸಾದ ಕಡುಬಡವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಮುಂದಿನ ವಿದ್ಯಾಬ್ಯಾಸಕ್ಕಾಗಿ ಹಣದ ನೆರವು ನೀಡಲಾಗುವುದು. ಇಂತಹ ಸುಮಾರು 1.36 ಕೋಟಿ ಮಂದಿ ವಿದ್ಯಾರ್ಥಿಗಳು ಹಣದ ಕೊರತೆಯಿಂದ ಶಿಕ್ಷಣ ತೊರೆದಿದ್ದಾರೆಂದು ಅಂದಾಜಿಸಲಾಗಿದೆ. ಅಂಥವರನ್ನು ಈ ಯೋಜನೆಗೆ ನೋಂದಾಯಿಸಿ, ಶಿಕ್ಷಣ ಮುಂದುವರಿಸಲು ವಿಶೇಷ ಅಭಿಯಾನ ನಡೆಸಲು ಸರ್ಕಾರ ಉದ್ದೇಶಿಸಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:24.12.2020

## 70. ಎಸ್.ಸಿ. ವಿದ್ಯಾರ್ಥಿ ವೇತನಕ್ಕೆ ರೂ.59,000 ಕೋಟಿ

ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ಮುಂದಿನ 5 ವರ್ಷಗಳಲ್ಲಿ ರೂ.59,000 ಕೋಟಿಯನ್ನು ವಿನಿಯೋಗಿಸಲು ಕೇಂದ್ರ ಸಚಿವ ಸಂಪುಟವು ಅನುಮೋದನೆ ನೀಡಿದೆ. ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಇದು ನೆರವಾಗುತ್ತದೆ ಎಂದು ಪ್ರಧಾನಿ ನರೆಂದ್ರ ಮೋದಿ ಅವರು ಹೇಳಿದ್ದಾರೆ.

ಈ ಸಮುದಾಯಕ್ಕೆ ಸೇರಿದ ಕಡುಬಡವ ಕುಟುಂಬಗಳ ವಿದ್ಯಾರ್ಥಿಗಳನ್ನು ಕೇಂದ್ರೀಕರಿಸಿಕೊಂಡು ಈ ಯೋಜನೆ ರೂಪಿಸಲಾಗಿದೆ. ಅಂತಹ 1.36 ಕೋಟಿ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ನಂತರ ಶಿಕ್ಷಣ ಮುಂದುವರಿಸುತ್ತಿಲ್ಲ. ಮುಂದಿನ ಐದು ವರ್ಷಗಳಲ್ಲಿ ಈ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣಕ್ಕೆ ಮರಳಿ

ತರುವುದು ಈ ಯೋಜನೆಯ ಗುರಿ. ಈ ಯೋಜನೆಗೆ ವಿದ್ಯಾರ್ಥಿಗಳನ್ನು ನೋಂದಾಯಿಸುವ ಅಭಿಯಾನ ಶೀಘ್ರವೇ ಆರಂಭವಾಗಲಿದೆ ಎಂದು ಸರ್ಕಾರ ಹೇಳಿದೆ.

ಈ ಸಮುದಾಯದ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ನಂತರ ಕೈಗೊಳ್ಳುವ ಉನ್ನತ ಶಿಕ್ಷಣ ಕೋರ್ಸ್‌ನ ವೆಚ್ಚವನ್ನು ಸರ್ಕಾರವೇ ಭರಿಸಲಿದೆ. ಇದಕ್ಕಾಗಿ ಮುಂದಿನ 5 ವರ್ಷಗಳಲ್ಲಿ ರೂ.59,041 ಕೋಟಿಯನ್ನು ಸರ್ಕಾರವು ವೆಚ್ಚ ಮಾಡಲಿದೆ. ಇದರಲ್ಲಿ ಕೇಂದ್ರ ಸರ್ಕಾರವು ರೂ.35,534 (ಶೇ.60ರಷ್ಟು) ವೆಚ್ಚವನ್ನು ಭರಿಸಲಿದೆ. ರಾಜ್ಯ ಸರ್ಕಾರಗಳು ಶೇ.40ರಷ್ಟನ್ನು ಭರಿಸಲಿವೆ.

**ಸಂಪುಟ ಸಭೆಯ ನಿರ್ಧಾರಗಳು:**

- 51 ಶೈಕ್ಷಣಿಕ ಚಾನಲ್‌ಗಳನ್ನು ಆರಂಭಿಸಲು ಪ್ರಸಾರ ಭಾರತಿ ಮತ್ತು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಮಧ್ಯೆ ಒಪ್ಪಂದ ಮಾಡಿಕೊಳ್ಳಲು ಸಂಪುಟ ಒಪ್ಪಿಗೆ ನೀಡಿದೆ.
- ಸಿನಿಮೋತ್ಸವಗಳ ನಿರ್ದೇಶನಾಲಯ ಭಾರತೀಯ ರಾಷ್ಟ್ರೀಯ ಸಿನಿಮಾ ಆರ್ಕೈವ್, ಮಕ್ಕಳ ಸಿನಿಮಾ ಸೊಸೈಟಿ, ರಾಷ್ಟ್ರೀಯ ಸಿನಿಮಾ ಸೊಸೈಟಿ, ರಾಷ್ಟ್ರೀಯ ಸಿನಿಮಾ ಅಭಿವೃದ್ಧಿ ನಿಗಮಗಳ ವಿಲೀನ ಮಾಡಲು ಸಂಪುಟ ಸಭೆಯು ಒಪ್ಪಿಗೆ ನೀಡಿದೆ.
- ವಿದ್ಯಾರ್ಥಿಗಳು ತಮ್ಮ ಇಚ್ಛೆಯ ಕೋರ್ಸ್ ಅನ್ನು ಆಯ್ಕೆ ಮಾಡಿಕೊಳ್ಳಬಹುದು. ಆ ಕೋರ್ಸ್‌ನ ವೆಚ್ಚವನ್ನು ಸರ್ಕಾರ ಭರಿಸಲಿದೆ.
- ವಿದ್ಯಾರ್ಥಿ ವೇತನ ಯೋಜನೆಯ ಕಡು ಭದ್ರತೆಯುಳ್ಳ ಸೈಬರ್ ಪ್ಲಾಟ್ ಫಾರಂನ ಮೂಲಕ ಅನುಷ್ಠಾನವಾಗಲಿದೆ. ಪಾರದರ್ಶಕತೆ, ಉತ್ತರದಾಯಿತ್ವ, ದಕ್ಷತೆ, ಕಾಲಮಿತಿಯಲ್ಲಿ ಪಾವತಿಗೆ ಒತ್ತು ನೀಡಲಾಗುತ್ತದೆ.
- ವಿದ್ಯಾರ್ಥಿಗಳ ಅರ್ಹತೆ, ಜಾತಿ ಪ್ರಮಾಣಪತ್ರ ಆಧಾರ್ ಮತ್ತು ಬ್ಯಾಂಕ್ ಖಾತೆ ವಿವರಗಳನ್ನು ಪರಿಶೀಲಿಸಿ, ನಿರ್ವಹಣೆ ಮಾಡುವ ಹೊಣೆ ರಾಜ್ಯ ಸರ್ಕಾರಗಳದ್ದು.
- ಆಧಾರ್ ಆಧಾರಿತ ಫಲಾನುಭವಿಗಳಿಗೆ ನೇರ ವರ್ಗಾವಣೆ ರೂಪದಲ್ಲಿ ಆರ್ಥಿಕ ನೆರವು ನೀಡಲಾಗುತ್ತದೆ. ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ಆರ್ಥಿಕ ನೆರವಿನ ಮೊತ್ತ ಜಮೆಯಾಗಲಿದೆ.
- ರಾಜ್ಯ ಸರ್ಕಾರಗಳು ತಮ್ಮ ಪಾಲಿನ ಶೇ.40ರಷ್ಟು ಮೊತ್ತವನ್ನು ಜಮೆ ಮಾಡಿದ ನಂತರವಷ್ಟೇ ಕೇಂದ್ರ ಸರ್ಕಾರವು ತನ್ನ ಪಾಲಿನ ಶೇ.60ರಷ್ಟು ಮೊತ್ತವನ್ನು ಜಮೆ ಮಾಡಲಿದೆ.
- ವಾರ್ಷಿಕ ಲೆಕ್ಕಪರಿಶೋಧನೆ, ಅರ್ಧವಾರ್ಷಿಕ ಸಾಂಸ್ಥಿಕ ಲೆಕ್ಕಪರಿಶೋಧನೆ ಮತ್ತು ಸಾಮಾಜಿಕ ಸಮೀಕ್ಷೆಯ ಮೂಲಕ ಯೋಜನೆಯ ಅನುಷ್ಠಾನ ಮತ್ತು ಪರಿಣಾಮವನ್ನು ಪರಿಶೀಲಿಸಲಾಗುತ್ತದೆ.

ಆಧಾರ: ಪ್ರಜಾವಾಣಿ, ದಿನಾಂಕ:24.12.2020.

## 71. 9 ಕೋಟಿ ರೈತರ ಖಾತೆಗೆ ಹಣ

ಪ್ರಧಾನಿ ನರೇಂದ್ರ ಮೋದಿಯವರು ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ಪಿಎಂ–ಕಿಸಾನ್) ಯೋಜನೆಯ 7ನೇ ಕಂತನ್ನು ರೈತರಿಗೆ ಬಿಡುಗಡೆ ಮಾಡಲಿದ್ದಾರೆ.

ವಿಡಿಯೋ ಕಾನ್ಫರೆನ್ಸ್‌ನಲ್ಲಿ 7 ಕಂತಿನ ರೂ.18,000 ಕೋಟಿ ಮೊತ್ತವನ್ನು ಕರ್ನಾಟಕ ಸೇರಿದಂತೆ ದೇಶದ 9 ಕೋಟಿ ಅನ್ನದಾತರು ಸ್ವೀಕರಿಸಲಿದ್ದಾರೆ. ಈ ಮೊತ್ತವು ರೈತರ ಖಾತೆಗೆ ನೇರವಾಗಿ ಜಮೆ ಆಗಲಿದೆ. ಮೋದಿ ಅವರು ಆರು ರಾಜ್ಯಗಳ ರೈತರೊಂದಿಗೆ ಸಂವಾದವನ್ನು ನಡೆಸಲಿದ್ದಾರೆ. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನವೂ ಆಗಿದ್ದು, ಅಂದೇ ಈ ಕಾರ್ಯಕ್ರಮ

ನಡೆಯುತ್ತಿರುವುದು ವಿಶೇಷ ಅಟಲ್ ಜನ್ಮದಿನವನ್ನು ರೈತರಿಗೆ ಸಮರ್ಪಿಸುವುದಾಗಿ ಬಿಜೆಪಿ ಇತ್ತೀಚೆಗೆ ಘೋಷಿಸಿತ್ತು.

ಪಿಎಂ–ಕಿಸಾನ್ ಸಮ್ಮಾನ್ ಯೋಜನೆಯಿಂದ ತಮಗೆ ಆಗಿರುವ ಅನುಕೂಲ ಹಾಗೂ ಕೇಂದ್ರ ಸರ್ಕಾರದ ಇತರೆ ಯೋಜನೆಗಳ ಕುರಿತು ರೈತರು ಅನುಭವವನ್ನು ಹಂಚಿಕೊಳ್ಳಲಿದ್ದಾರೆ ಎಂದು ಪ್ರಧಾನಿ ಕಾರ್ಯಾಲಯ ಮಾಹಿತಿ ನೀಡಿದೆ. ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತರ ಪ್ರತಿಭಟನೆ ಮುಂದುವರಿದಿರುವಂತೆಯೇ ಈ ಕಾರ್ಯಕ್ರಮ ನಡೆಯಲಿದೆ.

ಕಳೆದ ಫೆಬ್ರವರಿಯಲ್ಲಿ ಕಿಸಾನ್ ಸಮ್ಮಾನ್ ಯೋಜನೆಯನ್ನು ಕೇಂದ್ರ ಸರ್ಕಾರ ಘೋಷಿಸಿತ್ತು. ಫಲಾನುಭವಿ ರೈತರಿಗೆ ವರ್ಷಕ್ಕೆ ರೂ.6 ಸಾವಿರಗಳನ್ನು 3 ಕಂತುಗಳಲ್ಲಿ ಪಾವತಿಸಲಾಗುತ್ತದೆ.

ಆಧಾರ: ಉದಯವಾಣಿ, ದಿನಾಂಕ:24.12.2020.

## 72. ಆತ್ಮನಿರ್ಭರಕ್ಕೆ ಟಾಗೋರ್ ದೂರದೃಷ್ಟಿ ಸ್ಫೂರ್ತಿ : ಪ್ರಧಾನಿ

ಗುರುದೇವ ರವೀಂದ್ರನಾಥ್ ಟ್ಯಾಗೋರ್ ಅವರ ದೂರದೃಷ್ಟಿತ್ವವೇ ನಮ್ಮ ಸರ್ಕಾರದ ಆತ್ಮನಿರ್ಭರ ಭಾರತ ಪರಿಕಲ್ಪನೆಗೆ ಸ್ಫೂರ್ತಿ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ದೇಶದ ಅತಿ ಪುರಾತನ ಕೇಂದ್ರ ವಿವಿಯಾಗಿರುವ ವಿಶ್ವಭಾರತೀಯ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದ್ದಾರೆ, ರವೀಂದ್ರನಾಥ್ ಟ್ಯಾಗೋರ್ ಅವರ ವಿಶ್ವಭಾರತೀಯ ಪರಿಕಲ್ಪನೆಯೇ ಆತ್ಮನಿರ್ಭರ ಭಾರತದ ಕಲ್ಪನೆಗೆ ಕಾರಣವಾಯಿತು. ಇದು ಭಾರತದ ಅಭಿವೃದ್ಧಿಗೆ ಹಾಗೂ ಜಗತ್ತಿನ ಪ್ರಗತಿಗೆ ಕಾರಣವಾಗಲಿದೆ. ಟ್ಯಾಗೋರ್ ಹಾಗೂ ಅವರ ಈ ಸಂಸ್ಥೆಯು ರಾಷ್ಟ್ರೀಯವಾದದ ಶಕ್ತಿಯನ್ನು ಬಲಿಷ್ಠಗೊಳಿಸಿರುವುದು ಮಾತ್ರವಲ್ಲ ವಿಶ್ವ ಬಂಧುತ್ವವನ್ನು ಬಲಪಡಿಸಿದೆ ಎಂದು ಮೋದಿ ಹೇಳಿದ್ದಾರೆ.

ಟ್ಯಾಗೋರರ ಗುಜರಾತ್ ಪ್ರೀತಿಯನ್ನು ಪ್ರಸ್ತಾಪಿಸಿದ ಮೋದಿ ಅವರ ಹಿರಿಯ ಸಹೋದರ ಸತ್ಯೇಂದ್ರನಾಥ್ ಟ್ಯಾಗೋರರು ಐಪಿಎಸ್ ಅಧಿಕಾರಿಯಾಗಿ ಗುಜರಾತ್‌ನಲ್ಲಿ ನಿಯೋಜಿತರಾಗಿದ್ದಾಗ, ಟ್ಯಾಗೋರ್ ಅವರು ಆಗಾಗ್ಗೆ ಗುಜರಾತ್‌ಗೆ ಬಂದು ಹೋಗುತ್ತಿದ್ದರು. ಗುಜರಾತ್‌ನಲ್ಲಿದ್ದಾಗಲೇ ಅವರು ಎರಡು ಕವಿತೆಗಳನ್ನು ಬರೆದಿದ್ದಾರೆ. ಗುಜರಾತ್‌ನ ಮಗಳು ಟ್ಯಾಗೋರ್ ಕುಟುಂಬದ ಸೊಸೆಯಾಗಿದ್ದಾಳೆ ಎಂದು ಹೇಳಿದ್ದಾರೆ. ಪಶ್ಚಿಮ ಬಂಗಾಳವನ್ನು ಗುಜರಾತ್ ಆಗಲು ಬಿಡುವುದಿಲ್ಲ. ಹೊರಗಿನವರು ಬಂದು ಇಲ್ಲಿ ಆಡಳಿತ ಮಾಡಲು ಅವಕಾಶ ನೀಡುವುದಿಲ್ಲ ಎಂಬ ಟಿಎಂಸಿ ಹೇಳಿಕೆಯ ಬೆನ್ನಲ್ಲೇ ಮೋದಿಯವರಿಂದ ಈ ಗುಜರಾತ್ –ಬಂಗಾಳ ಸಂಪರ್ಕದ ಹೇಳಿಕೆ ಹೊರಬಿದ್ದಿರುವುದು ವಿಶೇಷ. ಕಳೆದ 2 ತಿಂಗಳಲ್ಲಿ ಮೋದಿ ಅವರು ಮೈಸೂರು ವಿವಿ ಅಲಿಗಢ ಮುಸ್ಲಿಂ ವಿವಿ ಸೇರಿದಂತೆ ಒಟ್ಟು 4 ವಿವಿಗಳ ಘಟಿಕೋತ್ಸವ ಹಾಗೂ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾರೆ.

ಆಧಾರ: ಉದಯವಾಣಿ, ದಿನಾಂಕ:25.12.2020

## 73. ಸಂಪರ್ಕ ಸೂಪರ್ ಫಾಸ್ಟ್

ರಾಜ್ಯದಲ್ಲಿ ಒಟ್ಟು ರೂ.10,904 ಕೋಟಿ ವೆಚ್ಚದಲ್ಲಿ 1,197 ಕಿ.ಮೀ ಉದ್ದದ 33 ರಾಷ್ಟ್ರೀಯ ಹೆದ್ದಾರಿ ಯೋಜನೆಗಳ ಶಿಲಾನ್ಯಾಸ ಹಾಗೂ ಲೋಕಾರ್ಪಣೆಯನ್ನು ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ವರ್ಚುವಲ್ ಮಾಧ್ಯಮದಲ್ಲಿ ನೆರವೇರಿಸಿದರು.

ಭಾರತಮಾಲಾ ಮತ್ತಿತರ ಯೋಜನೆಗಳ ಅಡಿ ರೂ.31,035 ಕೋಟಿ ವೆಚ್ಚದ 19 ಕಾಮಗಾರಿಗಳು ಪ್ರಗತಿಯಲ್ಲಿವೆ. ಮುಂಬರುವ ವರ್ಷಗಳಲ್ಲಿ ಕೇಂದ್ರ ಸರ್ಕಾರದ ರಾಜ್ಯದ ಸುಮಾರು ರೂ.1,16,144 ಕೋಟಿ ಹೂಡಿಕೆ ಮಾಡಲಿದೆ ಎಂದರು.

**ಶಿಲಾನ್ಯಾಸಗೊಂಡ ಯೋಜನೆ:**

- ಶಿರಸಿ–ಕುಮಟಾ–ಬೇಲೆಕೇರಿ, 58 ಕಿ.ಮೀ. ದ್ವಿಪಥ
- ದಾಬಸ್ ಪೇಟೆ –ದೊಡ್ಡಬಳ್ಳಾಪುರ, 42 ಕಿ.ಮೀ. ಚತುಷ್ಪಥ
- ದೊಡ್ಡಬಳ್ಳಾಪುರ – ಹೊಸಕೋಟೆ, 38 ಕಿ.ಮೀ. ಚತುಷ್ಪಥ
- ಔರಾದ್–ಬೀದರ್, 45 ಕಿ.ಮೀ. ವೀಪಥ ತೀರ್ಥಹಳ್ಳಿ – ಶೃಂಗೇರಿ ರಸ್ತೆ ವಿಸ್ತರಣೆ

**ಲೋಕಾರ್ಪಣೆಗೊಂಡ ಯೋಜನೆ:**

- ಹೊಸಪೇಟೆ –ಚಿತ್ರದುರ್ಗ, 120 ಕಿ.ಮೀ. ಚತುಷ್ಪಥ
- ಗೋವಾ ಗಡಿ–ಕುಂದಾಪುರ, 187 ಕಿ.ಮೀ. ಚತುಷ್ಪಥ
- ಬಿಜಾಪುರ–ಕಲಬುರಗಿ–ಹುಮ್ನಾಬಾದ್, 220 ಕಿ.ಮೀ. ದ್ವಿಪಥ
- ಚಿಕ್ಕಬಳ್ಳಾಪುರ–ಮುಳಬಾಗಿಲು, 82 ಕಿ.ಮೀ. ರಸ್ತೆ ಅಗಲೀಕರಣ

ಆಧಾರ: ವಿಜಯ ಕರ್ನಾಟಕ, ದಿನಾಂಕ:26.12.2020

## 75. ಸಂಧಾನಕ್ಕೆ ರೈತರ ಸಮ್ಮತಿ

3 ಕೃಷಿ ಕಾಯ್ದೆಗಳ ವಾಪಸ್‌ಗೆ ಒತ್ತಾಯಿಸಿ ರಾಷ್ಟ್ರ ರಾಜಧಾನಿ ದಿಲ್ಲಿಯ ಗಡಿಗಳಲ್ಲಿ ಕಳೆದೊಂದು ತಿಂಗಳಿಂದ ನಿರಂತರ ಪ್ರತಿಭಟನೆ ನಡೆಸುತ್ತಿರುವ ರೈತ ಸಂಘಟನೆಗಳು ಮಾತುಕತೆಗೆ ಬನ್ನಿ ಎಂಬ ಕೇಂದ್ರ ಸರ್ಕಾರದ ಕೂಗಿಗೆ ಕೊನೆಗೂ ಓಗೊಟ್ಟಿದೆ. ಡಿಸೆಂಬರ್ 29ರಂದು ಸರ್ಕಾರದ ಜೊತೆ ಮುಂದಿನ ಹಂತದ ಮಾತುಕತೆಗೆ ಸಿದ್ಧರಿರುವುದಾಗಿ 40 ರೈತ ಸಂಘಟನೆ ಒಳಗೊಂಡಿರುವ ಸಂಯುಕ್ತ ಕಿಸಾನ್ ಮೋರ್ಚಾ ಹೇಳಿದೆ. ರೈತರ ಕೋರಿಕೆಯನ್ನು ಸರ್ಕಾರ ಪುರಸ್ಕರಿಸಿದಲ್ಲಿ ರೈತರು ಮತ್ತು ಸರ್ಕಾರದ ಮಧ್ಯೆ ಮಾತುಕತೆ ನಡೆಯುವ ಸಾಧ್ಯತೆಯಿದೆ.

ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ರೈತ ಸಂಘಟನೆಗಳ ನಾಯಕರು ಕೃಷಿ ಕಾಯ್ದೆಗಳ ಹಿಂಪಡೆತ, ರೈತರ ಬೆಳೆಗಳಿಗೆ ನೀಡಲಾಗುವ ಬೆಂಬಲ ಬೆಲೆ ಈ ಮಾತುಕತೆಯ ಭಾಗವಾಗಿರಬೇಕು ಎಂದು ಒತ್ತಾಯಿಸಿವೆ. ಅಲ್ಲದೆ ರಾಷ್ಟ್ರ ರಾಜಧಾನಿ ವ್ಯಾಪ್ತಿ ಮತ್ತು ಸುತ್ತಮುತ್ತಲಿನ ಪ್ರದೇಶಗಳ ವಾಯು ನಿರ್ವಹಣೆ ಕುರಿತಾದ ಆಯೋಗದಲ್ಲಿ ವಿಧಿಸಲಾಗುವ ದಂಡ ಅಥವಾ ಶಿಕ್ಷೆ ವ್ಯಾಪ್ತಿಯಿಂದ ರೈತರಿಗೆ ವಿನಾಯಿತಿ ನೀಡಬೇಕು. ರೈತರ ಅನುಕೂಲಕ್ಕಾಗಿ ವಿದ್ಯುತ್ ತಿದ್ದುಪಡಿ ಮಸೂದೆ–2020ರಲ್ಲಿ ಬದಲಾವಣೆ ಸೇರಿದಂತೆ ಇನ್ನಿತರ ಷರತ್ತುಗಳನ್ನೊಳಗೊಂಡ ಮಾತುಕತೆಯ ಪ್ರಸ್ತಾವನೆಯನ್ನು ರೈತ ಸಂಘಟನೆಗಳು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿವೆ.

ತಮ್ಮ ಬೇಡಿಕೆಗಳನ್ನು ಈಡೇರಿಸಲು ಕೇಂದ್ರ ಸರ್ಕಾರ ಮುಂದಾಗದೇ ಇದ್ದಲ್ಲಿ ದೆಹಲಿಯಲ್ಲಿ ಬೃಹತ್ ಟ್ರ್ಯಾಕ್ಟರ್ ಮೆರವಣಿಗೆ ನಡೆಸುತ್ತೇವೆ. ಈ ಜಾಥಾದಲ್ಲಿ ಭಾಗವಹಿಸಲು ದೇಶಾದ್ಯಂತ ಇರುವ ಎಲ್ಲಾ ರೈತರನ್ನು ಆಹ್ವಾನಿಸಲಾಗುತ್ತದೆ. ದೆಹಲಿಯ ಹೆದ್ದಾರಿಗಳು ರೈತರಿಂದ ಬಂದ್ ಆಗಬಾರದು ಎಂದಾದರೆ ಕೃಷಿ ಕಾಯ್ದೆಗಳನ್ನು ಹಿಂಪಡೆಯಬೇಕೆಂಬ ಅನ್ನದಾತರ ಮನವಿಯನ್ನು ಪುರಸ್ಕರಿಸಲೇಬೇಕು ಎಂದಿದ್ದಾರೆ.

ರೈತರ ಈ ಚಳುವಳಿಯನ್ನು ದೂಷಿಸಲು ಮತ್ತು ರೈತ ಸಂಘಟನೆಗಳಿಗೆ ಮಸಿ ಬಳಿಯಲು ಇಡೀ ಸರ್ಕಾರವೇ ಯತ್ನಿಸುತ್ತಿದ್ದು, ಇದು ಮೊದಲು ನಿಲ್ಲಬೇಕು ಎಂದು ರೈತರು ಕೇಂದ್ರ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಬ್ರಿಟನ್, ಅಮೆರಿಕದಲ್ಲೂ ಮುಷ್ಕರದ ಕೂಗು ಭಾರತ ಸರ್ಕಾರದ ಜೊತೆ ವಿಷಯ ಪ್ರಸ್ತಾಪಿಸುವಂತೆ ಒತ್ತಡ. ಭಾರತ ಸರ್ಕಾರ ಜನರಿಗೆ ತಂದಿರುವ ಕೃಷಿ ಕಾಯ್ದೆಗಳನ್ನು ವಿರೋಧಿಸಿ ದಿಲ್ಲಿ ಹೊರವಲಯದಲ್ಲಿ ಮುಷ್ಕರ ನಡೆಸಿರುವ ರೈತರ ಪರವಾಗಿ ಅಮೆರಿಕ ಹಾಗು ಬ್ರಿಟನ್‌ಗಳ ಸಂಸದರು ಮತ್ತೆ ದನಿ ಎತ್ತಿದ್ದಾರೆ. ಭಾರತ ಸರ್ಕಾರದ ಮುಂದೆ ಈ ವಿಷಯ ಪ್ರಸ್ತಾಪಿಸಬೇಕು ಎಂದು ಆಗ್ರಹಿಸಿದ್ದಾರೆ.

ಭಾರತದ ಗಣರಾಜ್ಯ ದಿನದಲ್ಲಿ ಪಾಲ್ಗೊಳ್ಳಲು ಬ್ರಿಟನ್ ಪ್ರಧಾನಿ ಬೋರಿಕ್ ಜಾನ್ಸನ್ ಆಗಮಿಸುತ್ತಿದ್ದಾರೆ. ಈ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರ ಜೊತೆ ರೈತರ ವಿಷಯ ಪ್ರಸ್ತಾಪಿಸಬೇಕು ಎಂದು ಲೇಬರ್ ಪಾರ್ಟಿ ಸಂಸದ ತನ್ಮನ್‌ಜಿತ್ ಸಿಂಗ್ ಧೇಸಿ ಹೇಳಿದ್ದಾರೆ.

ಅಮೆರಿಕದ ವಿದೇಶಾಂಗ ಸಚಿವ ಮೈಕ್ ಪಾಂಪೆಯೋ ಅವರಿಗೆ ಪತ್ರ ಬರೆದ ಅಮೆರಿಕದ ಸಂಸದರು, "ರೈತ ಪ್ರತಿಭಟನೆಯಿಂದ ಭಾರತದಲ್ಲಿ ಸಾಮಾಜಿಕ ಅಶಾಂತಿ" ನೆಲಸಿದೆ. ಕೂಡಲೇ ಈ ವಿಷಯದ ಬಗ್ಗೆ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಜೊತೆ ಮಾತನಾಡಿ ಸಮಸ್ಯೆ ಇತ್ಯರ್ಥಕ್ಕೆ ಸಲಹೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಆಧಾರ: ಕನ್ನಡಪ್ರಭ, ದಿನಾಂಕ:27.12.2020

## 75. ಸರ್ಕಾರಿ ನೌಕರಿಗೆ ಆನ್‌ಲೈನ್ ಪರೀಕ್ಷೆ

ಮುಂದಿನ ವರ್ಷದಿಂದ ಕೇಂದ್ರ ಸರ್ಕಾರದ ಎಲ್ಲಾ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಪರೀಕ್ಷೆ ನಡೆಸಲಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಹೇಳಿದ್ದಾರೆ.

ದೇಶಕ್ಕೆ ಅನ್ವಯವಾಗುವಂತೆ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಟಿ) ನಡೆಯಲಿದ್ದು, ಈ ಮೂಲಕವೇ ಕೇಂದ್ರ ಸರ್ಕಾರದ ಗ್ರೂಪ್ ಬಿ ಮತ್ತು ಗ್ರೂಪ್ ಸಿ ಹುದ್ದೆಗಳಿಗೆ ಭರ್ತಿ ಮಾಡಿಕೊಳ್ಳಲಾಗುತ್ತದೆ. ಇದರಿಂದ ಕೆಲಸ ಹುಡುಕುತ್ತಿರುವ ಯುವಕರಿಗೆ ಉತ್ತಮ ಅವಕಾಶ ಸಿಗಲಿದೆ. ದೇಶದ ಪ್ರತಿಯೊಂದು ಜಿಲ್ಲೆಯಲ್ಲೂ ಪರೀಕ್ಷಾ ಕೇಂದ್ರ ತೆರೆಯಲಾಗುವುದು ಇದರಿಂದ ಬಡ ಯುವಕರು ಮತ್ತು ಯವತಿಯರಿಗೆ ಪ್ರಯೋಜನವಾಗಲಿದೆ. ಇದುವರೆಗೆ ಪರೀಕ್ಷೆ ಬರೆಯುವ ಸಲುವಾಗಿಯೇ ದೂರದ ಊರುಗಳಿಗೆ ತೆರಳಬೇಕಾಗಿದ್ದು. ಇನ್ನು ಮುಂದೆ ಈ ಸಮಸ್ಯೆ ನೀಗಲಿದೆ. 2021ರ ದ್ವಿತೀಯಾರ್ಧದಲ್ಲಿ ಈ ಪರೀಕ್ಷೆ ನಡೆಯಲಿದೆ ಎಂದು ಅವರು ತಿಳಿಸಿದ್ದಾರೆ.

ಆಧಾರ: ಉದಯವಾಣಿ, ದಿನಾಂಕ:29.12.2020

## 76. ಚಾಲಕರಹಿತ ಮೆಟ್ರೋ ರೈಲು

ದೇಶದ ಮೊದಲ ಚಾಲಕರಹಿತ ರೈಲಿಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದ್ದಾರೆ. ದೆಹಲಿ ಮೆಟ್ರೋದ ಮೆಜೆಂಟಾ ಲೈನ್‌ನಲ್ಲಿ (ಜನಕಪುರಿ ಪಶ್ಚಿಮದಿಂದ ಬೊಡಾನಿಕಲ್ ಗಾರ್ಡನ್) ಈ ರೈಲು ಸಂಚರಿಸಲಿದೆ. ಏರ್‌ಪೋರ್ಟ್ ಎಕ್ಸ್‌ಪ್ರೆಸ್ ಲೈನ್‌ನಲ್ಲಿ ನ್ಯಾಷನಲ್ ಕಾಮನ್ ಮೊಬಿಲಿಟಿ ಕಾರ್ಡ್‌ನ (ಎನ್‌ಸಿಎಂಸಿ) ಸಂಪೂರ್ಣ ಅನುಷ್ಠಾನ ಪ್ರಕ್ರಿಯೆಗೆ ಕೂಡ ಪ್ರಧಾನಿ ವಿಡಿಯೋ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಿದರು. ಚಾಲಕ–ರಹಿತ ರೈಲಿನ ಉದ್ಘಾಟನೆಯು ಭಾರತ ವೇಗವಾಗಿ ಸ್ಮಾರ್ಟ್ ವ್ಯವಸ್ಥೆಯತ್ತ ಸಾಗುತ್ತಿರುವುದರ ದ್ಯೋತಕವಾಗಿದೆ ಎಂದು ಪ್ರಧಾನಿ ಹೇಳಿದರು. ಮೆಟ್ರೋ ಸೇವೆಗಳ ವಿಸ್ತರಣೆಯಲ್ಲಿ ಮೇಕ್ ಇನ್ ಇಂಡಿಯಾ ಪ್ರಕ್ರಿಯೆ ಮಹತ್ವದ ಪಾತ್ರ ನಿರ್ವಹಿಸುತ್ತದೆ, ಇದರಿಂದ ವೆಚ್ಚ ಕಡಿಮೆಯಾಗುತ್ತದೆ ಹೆಚ್ಚು ಭಾರತೀಯರಿಗೆ ಉದ್ಯೋಗ ಲಭ್ಯವಾಗುತ್ತದೆ ಎಂದು ಮೋದಿ ಹೇಳಿದರು.

**7ರ ಗುಂಪಿಗೆ ಭಾರತ:** ಮೆಜೆಂಟಾ ಲೈನ್‌ನಲ್ಲಿ ಚಾಲಕ–ರಹಿತ ರೈಲುಗಳ ಸೇವೆ ಆರಂಭಿಸುವುದರೊಂದಿಗೆ ದೆಹಲಿ ಮೆಟ್ರೋ ರೈಲು ನಿಗಮ (ಡಿಎಂಆರ್‌ಸಿ) ಚಾಲಕರಿಲ್ಲದೆ ಟ್ರೈನ್‌ಗಳು ಸಂಚರಿಸುವ ಜಗತ್ತಿನ ಶೇ.7 ರ ಗುಂಪಿಗೆ ಸೇರ್ಪಡೆಯಾಗಿದೆ.

- ಚಾಲಕರಹಿತ ರೈಲು ಸಂಚರಿಸಲಿರುವ ಮೆಜೆಂಟಾ ಲೈನ್ ಮಾರ್ಗದ ಉದ್ದ 37 ಕಿಲೋ ಮೀಟರ್
- 2021ರ ಮಧ್ಯಭಾಗದೊಳಗೆ 57 ಕಿ.ಮೀ ಉದ್ದದ ಪಿಂಕ್ ಲೈನ್‌ನಲ್ಲೂ ಈ ಸೇವೆ ಲಭ್ಯ.
- ಒಟ್ಟು 94 ಕಿ.ಮೀ. ಮಾರ್ಗದಲ್ಲಿ ಚಾಲಕರಹಿತ ರೈಲುಗಳು ಓಡಾಡಲಿವೆ. ಇದು ದೆಹಲಿ ಮೆಟ್ರೋ ಜಾಲದ ಶೇಕಡ 9 ರಷ್ಟಾಗಲಿದೆ.
- ಟ್ರೈನ್‌ನಲ್ಲಿ ಆರು ಬೋಗಿಗಳಿರುತ್ತವೆ. ದೋಷ ಪತ್ತೆಗೆ ಆತ್ಯಾಧುನಿಕ ಕ್ಯಾಮರಾಗಳನ್ನು ಆಳವಡಿಸಲಾಗಿದೆ.

ಆಧಾರ: ಉದಯವಾಣಿ, ದಿನಾಂಕ:29.12.2020.

## 77. ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತ ದಾಪುಗಾಲು

ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತ ಅತ್ಯಂತ ವೇಗವಾಗಿ ಸಾಗುತ್ತಿದೆ ಕ್ಷ–ಕಿರಣ ಮತ್ತು ಅತಿನೇರಳೆ ಕಿರಣಗಳ ಬಗ್ಗೆ ಸಮೀಕ್ಷೆ ಮಾಡಲು ಇಸ್ರೋದ ಮಂಗಳಯಾನ ಮತ್ತು ಶೀಘ್ರದಲ್ಲೇ ಉಡಾವಣೆಯಾಗಲಿರುವ ಅದಿತ್ಯ ಎಲ್ 1 ಸೌರ ಅಧ್ಯಯನ ಮಿಷನ್ ಎಲ್ಲೆಡೆ ಹೆಚ್ಚು ಚರ್ಚೆಯಲ್ಲಿದೆ ಎಂದು ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ಹೇಳಿದ್ದಾರೆ.

ಭಾರತೀಯ ಖಭೌತ (ಅಸ್ಟ್ರೋಫಿಸಿಕ್ಸ್) ವಿಜ್ಞಾನ ಸಂಸ್ಥೆಯ ವಿಜ್ಞಾನ ಮತ್ತೂ ತಂತ್ರಜ್ಞಾನದಲ್ಲಿ ಸಂಶೋಧನೆ ಮತ್ತು ಶಿಕ್ಷಣ ಕೇಂದ್ರದಲ್ಲಿ (ಸಿಆರ್‌ಇಎಸ್‌ಟಿ) ಎರಡು ಹೊಸ ಸೌಲಭ್ಯ ಉದ್ಘಾಟಿಸಿ ಮಾತನಾಡಿದರು.

ಭೂಮಿಯಿಂದ ಸುಮಾರು 15 ಲಕ್ಷ ಕಿ.ಮೀ. ದೂರದಲ್ಲಿ ಕಕ್ಷೆಗೆ ಸೇರಿಸಲಾಗುವ ಅದಿತ್ಯಮಿಷನ್ ಸೂರ್ಯನ ಬಗ್ಗೆ ಅಭೂತಪೂರ್ವ ಮಾಹಿತಿಯನ್ನು ಒದಗಿಸುತ್ತದೆ. ಭಾರತೀಯ ಖಭೌತ ವಿಜ್ಞಾನ ಸಂಸ್ಥೆಯು ಖಗೋಳ ಸಂಶೋಧನೆಯಲ್ಲಿ ಸುದೀರ್ಘ ಇತಿಹಾಸವನ್ನು ಹೊಂದಿದೆ. ಸೂರ್ಯನಲ್ಲಿ ಹೀಲಿಯಂ ಅಂಶದ ಉಪಸ್ಥಿತಿ ಮತ್ತು ಯುರೇನಸ್ ಗ್ರಹದ ಸುತ್ತ ಉಂಗುರಗಳು ಸೇರಿ ಅನೇಕ ಪ್ರಮುಖ ಅವಿಷ್ಕಾರಗಳಲ್ಲಿ ಈ ಸಂಸ್ಥೆ ಕೆಲಸ ಮಾಡಿದೆ ಎಂದು ಹೇಳಿದರು. ಅವರ ಜೀವನವನ್ನು ಸುಗಮವಾಗಿಸಿ, ಅವರ ಬದುಕಿನಲ್ಲಿ ಸಂತೋಷ ತರುವುದೇ ವಿಜ್ಞಾನದ ಗುರಿ. ಭವಿಷ್ಯದ ಪೀಳಿಗೆಗೆ ಮೂಲಭೂತ ಸಂಶೋಧನೆ ಮತ್ತು ತಂತ್ರಜ್ಞಾನ ಅಭಿವೃದ್ಧಿಯ, ಬದ್ಧತೆಗೆ ಈ ಸಂಸ್ಥೆಯು ಅತ್ಯುತ್ತಮ ಉದಾಹರಣೆಯಾಗಿದೆ. ಇದು ಆತ್ಮನಿರ್ಭರ ಭಾರತಕ್ಕೆ ಆಡಿಪಾಯವಾಗಿದೆ ಎಂದರು.

ಮಕ್ಕಳು ಮತ್ತು ಸಾರ್ವಜನಿಕರಲ್ಲಿ ವಿಜ್ಞಾನದ ಅರಿವು ಮೂಡಿಸಲು ಕ್ಯಾಂಪಸ್‌ನಲ್ಲಿ ವಿಜ್ಞಾನ ಕೇಂದ್ರ ಸ್ಥಾಪಿಸುವ ಯೋಜನೆಯು ಒಂದು ಪ್ರಮುಖ ಹೆಜ್ಜೆಯಾಗಿದೆ ಎಂದರು.

ಬೃಹತ್ ದೂರದರ್ಶನ ಸೇವೆ: 2014ರಲ್ಲಿ ಮೋದಿ ಸರ್ಕಾರವು ಅಮೆರಿಕದ ಹವಾಯಿಯಲ್ಲಿ 30 ಮೀಟರ್ ದೂರದರ್ಶಕವನ್ನು ನಿರ್ಮಿಸಲು ಜಪಾನ್, ಚೀನಾ, ಕೆನಡಾ ಮತ್ತು ಅಮೆರಿಕದೊಂದಿಗೆ ಭಾರತವು ಸೇರಿಕೊಳ್ಳಲು ಅನುಮೋದನೆ ನೀಡಿತ್ತು. ಈ ಪ್ರಯತ್ನದ ಸಾಕಾರಕ್ಕಾಗಿ ಆಪ್ಟಿಕ್ಸ್ ರೂಪಿಸುವ ಸೌಲಭ್ಯವನ್ನು ಇದೀಗ ಉದ್ಘಾಟಿಸಲಾಗಿದೆ. ಖಭೌತ ವಿಜ್ಞಾನ ಸಂಸ್ಥೆಯ ಸಿದ್ಧಪಡಿಸಿರುವ ಪರಿಸರ ಪರೀಕ್ಷಾ ಸೌಲಭ್ಯವು ಸಣ್ಣ ಪೇಲೋಡ್‌ಗಳನ್ನು (ಪೇಲೋಡ್ ವಿಮಾನ ಅಥವಾ ಉಡಾವಣಾ ವಾಹನದ ಸಾಗಿಸುವ ಸಾಮರ್ಥ್ಯ) ಬಾಹ್ಯಾಕಾಶಕ್ಕೆ ಸೇರಿಸಲು ನೆರವಾಗುತ್ತದೆ. ಸಣ್ಣ ಪೇಲೋಡ್ ಅಭಿವೃದ್ಧಿಪಡಿಸಲು ವಿಶ್ವವಿದ್ಯಾಲಯ ಮತ್ತು ಉದ್ಯಮಗಳನ್ನು ಇದನ್ನು ಬಳಸಲು ಮುಕ್ತಗೊಳಿಸಲಾಗುತ್ತದೆ. ಈ ಸೌಲಭ್ಯಗಳು ಭವಿಷ್ಯದಲ್ಲಿ ಬಾಹ್ಯಾಕಾಶ ಕ್ಷೇತ್ರದ ಬೆಳವಣಿಗೆಗೆ ಸಹಾಯ ಮಾಡುತ್ತವೆ.

ಆಧಾರ: ವಿಜಯವಾಣಿ, ದಿನಾಂಕ:30.12.2020

## 78. ತುಮಕೂರು ಕೈಗಾರಿಕಾ ಕಾರಿಡಾರ್‌ಗೆ ಕೇಂದ್ರ ಒಪ್ಪಿಗೆ

ಕರ್ನಾಟಕದ ತುಮಕೂರು ಹಾಗೂ ಆಂಧ್ರ ಪ್ರದೇಶದ ಕೃಷ್ಣಪಟ್ಟಣಂಗಳಲ್ಲಿ ಕೈಗಾರಿಕಾ ಕಾರಿಡಾರ್ ಜಾಲ (ನೋಡ್) ನಿರ್ಮಿಸಲು ಕೇಂದ್ರ ಸರ್ಕಾರ ಅಂಗೀಕಾರ ನೀಡಿದೆ. ಇವು ಚೆನ್ನೈ – ಬೆಂಗಳೂರು ಕೈಗಾರಿಕಾ ಕಾರಿಡಾರ್‌ನ ಭಾಗವಾಗಲಿದ್ದು, ವಿಶ್ವದರ್ಜೆಯ ಔದ್ಯಮಿಕ ಜಾಲಗಳಾಗಿ ಮಾರ್ಪಾಡಾಗಲಿವೆ. ಕೇಂದ್ರ ಆರ್ಥಿಕ ವ್ಯವಹಾರಗಳ ಸಂಪುಟ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು. ತುಮಕೂರಿನಲ್ಲಿ ಕೈಗಾರಿಕಾ ಜಾಲ ನಿರ್ಮಿಸಲು ರೂ.1,701,81 ಕೋಟಿ ಹಾಗೂ ಕೃಷ್ಣಪಟ್ಟಣಂಗೆ ರೂ.2,139.44 ಕೋಟಿ ಮೀಸಲಿರಿಸಲಾಗುತ್ತದೆ.

ತುಮಕೂರಲ್ಲಿ 88 ಸಾವಿರ ಉದ್ಯೋಗ: ತುಮಕೂರಿನಲ್ಲಿ ಕೈಗಾರಿಕಾ ಜಾಲದ ನಿರ್ಮಾಣದಿಂದ 88.500 ಜನರಿಗೆ ಹಾಗೂ ಕೃಷ್ಣಪಟ್ಟಣಂನಲ್ಲಿ 98,000 ಜನರಿಗೆ ಉದ್ಯೋಗ ಲಭಿಸಲಿದೆ. ತುಮಕೂರಿನ 88.500 ಜನರ ಪೈಕಿ 17,700 ಜನರಿಗೆ ಚಿಲ್ಲರೆ ವ್ಯವಹಾರ ಕಛೇರಿಗಳು ಹಾಗೂ ಇತರ ವಾಣಿಜ್ಯ ಅವಕಾಶಗಳಂಥ ಸೇವಾ ಉದ್ದಿಮೆಗಳಿಂದ ಉದ್ಯೋಗ ದೊರಕಲಿದೆ ಎಂದು ಸರ್ಕಾರ ಹೇಳಿದೆ.

**ವಿಶ್ವದರ್ಜೆಯ ಮೂಲಸೌಕರ್ಯ :** ಈ ಎರಡು ಯೋಜನೆಗಳು ಚೆನ್ನೈ–ಬೆಂಗಳೂರು ಕೈಗಾರಿಕಾ ಕಾರಿಡಾರ್ ಯೋಜನೆ ವ್ಯಾಪ್ತಿಗೆ ಬರಲಿವೆ. ಈ ನಗರಗಳು ವಿಶ್ವದರ್ಜೆಯ ಮೂಲಸೌಕರ್ಯ ರಸ್ತೆ ಹಾಗೂ ರೈಲು ಸಂಪರ್ಕ ಹೊಂದಲಿದ್ದು, ಈ ಮೂಲಕ ಬಂದರು ಹಾಗೂ ಔದ್ಯಮಿಕ ಕೇಂದ್ರ ಸ್ಥಾನಗಳಿಗೆ ಸುಲಭವಾಗಿ ಸರಕು ಸಾಗಿಸಬಹುದಾಗಿದೆ.

ಆಧಾರ: ಕನ್ನಡ ಪ್ರಭ, ದಿನಾಂಕ:31.12.2020

# ಭಾಗ–3

# ರಾಜ್ಯ ಸರ್ಕಾರದ ಸುದ್ದಿಗಳು

## 1. ರಸ್ತೆಗಳ ಅಭಿವೃದ್ಧಿ ನಕ್ಷೆಯಲ್ಲಿ ಪ್ರತ್ಯೇಕ ಬಣ್ಣ

ಪಾಲಿಕೆಯ 8 ವಲಯಗಳಲ್ಲಿ ವಿವಿಧ ವಿಭಾಗಗಳಿಂದ ಅಭಿವೃದ್ಧಿಪಡಿಸಿದ ರಸ್ತೆಗಳನ್ನು ಪ್ರತ್ಯೇಕ ಬಣ್ಣದಲ್ಲಿ ಗುರುತಿಸಿ, ನಕ್ಷೆ ತಯಾರಿಸುವಂತೆ ಬಿಬಿಎಂಪಿ ಆಡಳಿತಾಧಿಕಾರಿ ಗೌರವ ಗುಪ್ತ ಸೂಚಿಸಿದ್ದಾರೆ.

ಬಿಬಿಎಂಪಿ ರಸ್ತೆ ಮತ್ತು ಮೂಲಸೌಕರ್ಯ ವಿಭಾಗದ ಅಧಿಕಾರಿಗಳೊಂದಿಗೆ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನಾ ಸಭೆ ನಡೆಸಿದರು. ನಗರದಲ್ಲಿ 1,323 ಕೀ.ಮೀ ಉದ್ದದ ಮುಖ್ಯ ಮತ್ತು ಉಪ ಮುಖ್ಯ ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಎಂ.ಆರ್. ವೆಂಕಟೇಶ್, ಹೆಚ್ಚು ವಾಹನ ಸಾಂದ್ರತೆಯ ಕಾರಿಡಾರ್‌ಗಳಾದ ಹಳೇ ವಿಮಾನ ನಿಲ್ದಾಣ ರಸ್ತೆ, ಹಳೇ ಮದ್ರಾಸ್ ರಸ್ತೆ ಮತ್ತು ಹೊರವರ್ತುಲ ರಸ್ತೆಯಲ್ಲಿ ಪಾಲಿಕೆ ಯೋಜನಾ ವಿಭಾಗದಿಂದ ಸಿಗ್ನಲ್ ಮುಕ್ತ ಕಾರಿಡಾರ್, ವೈಟ್ ಟಾಪಿಂಗ್ ನಡೆಯುತ್ತಿದೆ ಎಂದು ಮಾಹಿತಿ ನೀಡಿದರು. ನಗರದಲ್ಲಿ ಯಾವ ರಸ್ತೆಗಳನ್ನು ಯಾವ ವಿಭಾಗದಿಂದ ನಿರ್ಮಾಣ ಮಾಡಲಾಗುತ್ತಿದೆ, ಯಾರು ನಿರ್ವಹಣೆ ಮತ್ತು ದುರಸ್ತಿ ಮಾಡುತ್ತಾರೆ ಎಂಬ ಮಾಹಿತಿ ಇಲ್ಲವಾಗಿದೆ. ಯೋಜನಾ ವಿಭಾಗ ಮತ್ತು ರಸ್ತೆ, ಮೂಲಸೌಕರ್ಯ ವಿಭಾಗದಿಂದ ನಿರ್ಮಿಸುವ ರಸ್ತೆಗಳನ್ನು ಪ್ರತ್ಯೇಕ ಬಣ್ಣದಿಂದ ಗುರುತಿಸಿ, ನಕ್ಷೆ ತಯಾರಿಸಬೇಕು. ಇದರಿಂದ ರಸ್ತೆ ನಿರ್ಮಿಸಿದವರ ಬಗ್ಗೆ ನಕ್ಷೆಯಲ್ಲೆ ಮಾಹಿತಿ ದೊರೆಯಲಿದೆ ಎಂದು ಗೌರವ ಗುಪ್ತ ತಿಳಿಸಿದರು.

**10 ವರ್ಷದ ರಸ್ತೆಗಳ ಇತಿಹಾಸ ಕೊಡಿ:** ಪಾಲಿಕೆ ವ್ಯಾಪ್ತಿಯ ಮುಖ್ಯ ರಸ್ತೆಗಳ ನಿರ್ಮಾಣ, ನಿರ್ವಹಣೆ, ದುರಸ್ತಿ, ರಸ್ತೆಗಳ ಉದ್ದ, ಹೆಸರು, ಪ್ರದೇಶ ಹಾಗೂ ನಿರ್ವಹಣೆ ಬಗ್ಗೆ ದೋಷಮುಕ್ತ ಅವಧಿ ಬಗ್ಗೆ ತಿಳಿದುಕೊಳ್ಳಲು ಕಳೆದ 10 ವರ್ಷಗಳ ವಿವರವಾದ ಮಾಹಿತಿಯನ್ನು ಸರ್ಕಾರ ಕೇಳಿದೆ. ಸಂಬಂಧಿಸಿದ ಅಧಿಕಾರಿಗಳು ಮಾಹಿತಿ ಸಲ್ಲಿಸಬೇಕು. ಜೊತೆಗೆ, ಗುಂಡಿ ಮುಚ್ಚುವುದು, ರಸ್ತೆಗಳ ಒತ್ತುವರಿ ತೆರವು, ಪಾದಚಾರಿ ಮಾರ್ಗ ತೆರವು, ಕಟ್ಟಡ ತ್ಯಾಜ್ಯ ಸುರಿಯುವುದನ್ನು ತಡೆಗಟ್ಟುವ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸುವಂತೆ ನಿರ್ದೇಶಿಸಿದರು.

ವಿಶೇಷ ಆಯುಕ್ತ (ಯೋಜನೆ) ಮನೋಜ್ ಜೈನ್, ರಸ್ತೆ ಮತ್ತು ಮೂಲ ಸೌಕರ್ಯ ವಿಭಾಗದ ಮುಖ್ಯ ಇಂಜಿನಿಯರ್ ಪ್ರಹ್ಲಾದ್ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಆಧಾರ: ವಿಜಯವಾಣಿ, ದಿನಾಂಕ:01.10.2020

## 2. ಸರ್ಕಾರದಿಂದ ಮೌಲಾನಾ ಆಜಾದ್ ಟ್ರಸ್ಟ್ ರಚನೆ

ಶೈಕ್ಷಣಿಕವಾಗಿ ಹಿಂದುಳಿದ ಮುಸ್ಲಿಮರಲ್ಲಿ ವೈಜ್ಞಾನಿಕ ಮನೋಭಾವ ಹಾಗೂ ಆಧುನಿಕ ಶಿಕ್ಷಣ ಉತ್ತೇಜಿಸಲು ಸರ್ಕಾರ ಮೌಲಾನಾ ಆಜಾದ್ ಟ್ರಸ್ಟ್ ರಚನೆಗೆ ಮುಂದಾಗಿದೆ. ಆಧುನಿಕ ಶಿಕ್ಷಣ ಪದ್ಧತಿ ಅಳವಡಿಸಿದರೆ ಮುಂದಿನ ಜೀವನೋಪಾಯಕ್ಕೆ ಅನುಕೂಲವಾಗಲಿದೆ ಎಂಬುದು ಸರ್ಕಾರದ ಉದ್ದೇಶವಾಗಿದೆ.

ಏನಿದು ಟ್ರಸ್ಟ್: ಮುಸ್ಲಿಮರನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ವ್ಯಾಪಕ ಕೆಲಸ ಮಾಡಬೇಕಾಗಿದೆ. ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ಕೆಲಸ ಮಾಡಬೇಕಾಗಿರುವ ಕಾರಣ ಮೌಲಾನಾ ಆಜಾದ್ ಹೆಸರಿನಲ್ಲಿ ಟ್ರಸ್ಟ್ ರಚನೆ ಮಾಡಲಾಗುತ್ತಿದೆ. ಟ್ರಸ್ಟ್ ಚಟುವಟಿಕೆಗಳನ್ನು ನಡೆಸಲು ರೂ.25 ಕೋಟಿ ಮೀಸಲಿಡಲಾಗುತ್ತದೆ. ಟ್ರಸ್ಟ್‌ಗೆ ಮುಸ್ಲಿಂ ಸಮುದಾಯದ ಮುಖಂಡರನ್ನೇ ನೇಮಕ

ಮಾಡಲಾಗುತ್ತದೆ. ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಶ್ರೀಮಂತ ಪಾಟೀಲ್ ವಿಶೇಷ ಆಸಕ್ತಿ ವಹಿಸಿ ಟ್ರಸ್ಟ್ ಸ್ಥಾಪನೆಗೆ ಮುಂದಾಗಿದ್ದಾರೆ.

**ಟ್ರಸ್ಟ್ ಕೆಲಸಗಳೇನು:** ಸರ್ಕಾರ ಅಲ್ಪಸಂಖ್ಯಾತರಿಗಾಗಿ ಸಾಕಷ್ಟು ವಸತಿ ಶಾಲೆಗಳನ್ನು ತೆರೆದಿದೆ. ಜೊತೆಗೆ ರಾಜ್ಯದಲ್ಲಿ 960 ಮದರಸಾಗಳಿವೆ. ಮದರಸಾಗಳಲ್ಲಿ ಹೆಚ್ಚಾಗಿ ಧಾರ್ಮಿಕ ಶಿಕ್ಷಣ ನೀಡಲಾಗುತ್ತದೆ. ಅದೊಂದರಿಂದಲೇ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗುವುದಿಲ್ಲ. ಅಲ್ಲಿನ ವಿದ್ಯಾರ್ಥಿಗಳಿಗೆ ಧಾರ್ಮಿಕ ಶಿಕ್ಷಣದ ಜೊತೆ ಜೊತೆಗೆ ವಿಜ್ಞಾನ ಹಾಗೂ ತಂತ್ರಜ್ಞಾನದ ಶಿಕ್ಷಣ ನೀಡಿದರೆ ಮುಂದೆ ಜೀವನಕ್ಕೆ ಅನುಕೂಲವಾಗಲಿದೆ ಎಂಬುದು ಸರ್ಕಾರದ ಉದ್ದೇಶವೆಂದು ಅಲ್ಪಸಂಖ್ಯಾತ ಇಲಾಖೆಯ ಉನ್ನತ ಮೂಲಗಳು ತಿಳಿಸಿವೆ. ಇತ್ತೀಚೆಗೆ ನಡೆದಿರುವ ಅಧ್ಯಯನವೊಂದರ ಪ್ರಕಾರ, ಸಾಕಷ್ಟು ಮದರಸಾಗಳಲ್ಲಿ ಮೂಲಸೌಕರ್ಯದ ಕೊರತೆ ಇದೆ. ಆ ಕೊರತೆಗಳನ್ನು ನೀಗುವುದಕ್ಕೆ ನೆರವಾಗುವ ಉದ್ದೇಶವು ಟ್ರಸ್ಟ್ ಸ್ಥಾಪನೆಯ ಹಿಂದಿದೆ ಎಂದು ಮೂಲಗಳು ಹೇಳುತ್ತವೆ.

ಆಧಾರ: ವಿಜಯವಾಣಿ, ದಿನಾಂಕ:01.10.2020

## 3. ಅಕ್ಟೋಬರ್ 5ಕ್ಕೆ ಪಾಲಿಕೆ ಬಜೆಟ್ ಪರಿಷ್ಕರಣೆ ಸಭೆ

ಪಾಲಿಕೆಯ 2020–21ನೇ ಸಾಲಿನ ಬಜೆಟ್ ಪರಿಷ್ಕರಣೆ ಮಾಡಲು ಅಕ್ಟೋಬರ್ 5ಕ್ಕೆ ತುರ್ತು ಸಭೆ ಕರೆಯಲಾಗಿದೆ. ಇದು ಪಾಲಿಕೆಯ ಆರ್ಥಿಕ ಪರಿಸ್ಥಿತಿಯ ಮೇಲೆ ಪರಿಣಾಮ ಬೀರಲಿದೆ.

ಬಜೆಟ್ ಅನ್ನು ಪರಿಷ್ಕರಣೆ ಮಾಡಿ ಆದಾಯಕ್ಕೆ ಅನುಗುಣವಾಗಿ ಮಂಡನೆ ಮಾಡಬೇಕು ಎನ್ನುವ ಬಗ್ಗೆ ಚರ್ಚೆ ನಡೆದಿತ್ತು ಬಿಬಿಎಂಪಿಯ ಆಡಳಿತಾಧಿಕಾರಿಯಾಗಿ ನೇಮಕವಾದ ಮೊದಲ ದಿನವೇ ಗೌರವ ಗುಪ್ತ ಪಾಲಿಕೆಯ ಬಜೆಟ್ ಪರಿಷ್ಕರಣೆ ಸುಳಿವು ನೀಡಿದ್ದರು.

ಅಕ್ಟೋಬರ್ 5ಕ್ಕೆ ಎಲ್ಲ ವಿಭಾಗದ ಅಧಿಕಾರಿಗಳ ಸಭೆ ಕರೆದಿದ್ದು, 2020ರ ಏಪ್ರಿಲ್ 1ರಿಂದ ಸೆಪ್ಟೆಂಬರ್ 30ರ ವರೆಗಿನ ಸ್ವೀಕೃತ ವೆಚ್ಚಗಳು ಹಾಗೂ ಅಕ್ಟೋಬರ್ 1ರಿಂದ 2021ರ ಮಾರ್ಚ್ 31ರ ವರೆಗಿನ ನಿರೀಕ್ಷಿತ ಸ್ವೀಕೃತಿ ಮತ್ತು ವೆಚ್ಚಗಳನ್ನು ಸಿದ್ಧಪಡಿಸಿಕೊಂಡು ಮಂಡನೆ ಮಾಡುವಂತೆ ಸೂಚನೆ ನೀಡಲಾಗಿದೆ.

**ಪಾಲಿಕೆಯ ವಿಭಾಗಗಳ ಜೊತೆ ಸರಣಿ ಸಭೆ:** ಬಜೆಟ್ ಪರಿಷ್ಕರಣೆ ಸಂಬಂಧ ಅಕ್ಟೋಬರ್ 5ಕ್ಕೆ ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಪಾಲಿಕೆಯ ವಿವಿಧ ವಿಭಾಗಗಳೊಂದಿಗೆ ಬಿಬಿಎಂಪಿ ಆಡಳಿತಾಧಿಕಾರಿ ಗೌರವ ಗುಪ್ತ ಅವರು ಸರಣಿ ಸಭೆ ಹಮ್ಮಿಕೊಂಡಿದ್ದಾರೆ. ಬೆಳಗ್ಗೆಯಿಂದ ಅನುಕ್ರಮವಾಗಿ ಎಂಟು ವಲಯದ ಆಡಳಿತಾತ್ಮಕ ನಿರ್ವಹಣೆ, ಯೋಜನೆ, ಘನತ್ಯಾಜ್ಯ ನಿರ್ವಹಣೆ, ಕಂದಾಯ ಮತ್ತು ಹಣಕಾಸು, ಶಿಕ್ಷಣ, ಮಾರುಕಟ್ಟೆ ಮುಖ್ಯ ಆರ್ಥಿಕ ಅಧಿಕಾರಿ ಹಾಗೂ ಮುಖ್ಯ ಲೆಕ್ಕಾಧಿಕಾರಿಗಳೊಂದಿಗೆ ಸಭೆ ನಿಗದಿ ಮಾಡಲಾಗಿದೆ.

**ರೂ.8 ಸಾವಿರ ಕೋಟಿಗಿಂತ ಕಡಿಮೆ ಸಾಧ್ಯತೆ:** ಬಜೆಟ್ ಅನ್ನು ಕನಿಷ್ಠ ರೂ.8 ಸಾವಿರ ಕೋಟಿ ಅಥವಾ ಅದಕ್ಕಿಂತಲೂ ಕಡಿಮೆ ಮಾಡುವ ಸಾಧ್ಯತೆ ಇದೆ. ಕೊರೋನಾ ಭೀತಿಯಿಂದ ರಾಜ್ಯ ಹಾಗೂ ಪಾಲಿಕೆಯು ಆರ್ಥಿಕ ಸಂಕಷ್ಟದಲ್ಲಿದೆ. ಕೊರೋನಾ ವೈದ್ಯಕೀಯ ವೆಚ್ಚ ಹಾಗೂ ಆಡಳಿತಾತ್ಮಕ ನಿರ್ವಹಣೆಗೂ ಆದ್ಯತೆ ನೀಡಬೇಕಾಗಿದ್ದು, ಆದಾಯವು ಕಡಿಮೆ ಇದೆ. ಈ ಹಿನ್ನೆಲೆಯಲ್ಲಿ ಕೆಲವು ಯೋಜನೆಗಳನ್ನು ಕೈಬಿಟ್ಟು ಹಾಗೂ ಕೆಲಸವನ್ನು ಮುಂದೂಡಿಕೆ ಮಾಡಿ, ಸಾಧ್ಯವಾದಷ್ಟು ಬಜೆಟ್ ಗಾತ್ರವನ್ನು ಕಡಿಮೆ ಮಾಡುವ ಚಿಂತನೆ ಇದೆ ಎಂದು ಮೂಲಗಳು ತಿಳಿಸಿವೆ.

ಆಧಾರ: ಉದಯವಾಣಿ, ದಿನಾಂಕ:01.10.2020

## 4. ವಿಧೇಯಕಗಳಿಗೆ ಸುಗ್ರೀವಾಜ್ಞೆ ದಾರಿ

ಮೇಲ್ಮನೆಯಲ್ಲಿ ಪಾಸಾಗದೆ ಉಳಿದಿರುವ ಭೂಸುಧಾರಣೆ, ಎಪಿಎಂಸಿ ಹಾಗೂ ಕಾರ್ಮಿಕ ತಿದ್ದುಪಡಿ ವಿಧೇಯಕಗಳ ಸಂಬಂಧ ಪುನಃ ಸುಗ್ರೀವಾಜ್ಞೆ ಹೊರಡಿಸಲು ರಾಜ್ಯ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಲಾಕ್‌ಡೌನ್ ವೇಳೆ ಈ ವಿಧೇಯಕಗಳ ಸಂಬಂಧ ಸುಗ್ರೀವಾಜ್ಞೆ ಹೊರಡಿಸಲಾಗಿತ್ತು. ಕಳೆದ ವಾರ ನಡೆದ ಅಧಿವೇಶನದಲ್ಲಿ ಈ ಮೂರು ವಿಧೇಯಕಗಳು ವಿಧಾನ ಸಭೆಯಲ್ಲಿ ಅಂಗೀಕಾರಗೊಂಡಿದೆ. ಪರಿಷತ್‌ನಲ್ಲಿ ಕಾರ್ಮಿಕ ತಿದ್ದುಪಡಿ ವಿಧೇಯಕಕ್ಕೆ ಸೋಲಾಗಿದೆ. ಭೂಸುಧಾರಣೆ ಮತ್ತು ಎಪಿಎಂಸಿ ತಿದ್ದುಪಡಿ ವಿಧೇಯಕವನ್ನು ಪರಿಷತ್‌ನಲ್ಲಿ ತಡೆಹಿಡಿಯಲಾಗಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ಮೂರು ವಿಧೇಯಕಗಳ ಬಗ್ಗೆ ಮತ್ತೊಮ್ಮೆ ಸುಗ್ರೀವಾಜ್ಞೆ ಹೊರಡಿಸುವ ನಿರ್ಧಾರಕ್ಕೆ ಬರಲಾಯಿತು ಎಂದು ಗೊತ್ತಾಗಿದೆ.

**ಮುಸಲ್ಮಾನರಿಗೆ ವೈಜ್ಞಾನಿಕ ಶಿಕ್ಷಣ:** ಶೈಕ್ಷಣಿಕವಾಗಿ ಹಿಂದುಳಿದಿರುವ ಮುಸಲ್ಮಾನರಿಗೆ ಆಧುನಿಕ ಶಿಕ್ಷಣದ ಜೊತೆಗೆ ವೈಜ್ಞಾನಿಕ ಮನೋಭಾವ ಮೂಡಿಸಲು ಸಂಪುಟದಲ್ಲಿ ಮಹತ್ವದ ತೀರ್ಮಾನ ತೆಗೆದುಕೊಳ್ಳಲಾಗಿದೆ. ಈ ಉದ್ದೇಶಕ್ಕೆ ಮೌಲಾನಾ ಆಜಾದ್ ಟ್ರಸ್ಟ್ ರಚಿಸಲಾಗುತ್ತಿದ್ದು ರೂ.25 ಕೋಟಿ ಹಂಚಿಕೆ ಮಾಡಲಾಗಿದೆ.

**ಶಾಲೆ ಆರಂಭ ಗೊಂದಲವಿಲ್ಲ ಸುರೇಶ ಕುಮಾರ್:** ಶಾಲೆ ಪುನಾರಾರಂಭದ ಬಗ್ಗೆ ಗೊಂದಲಕ್ಕೆ ಅವಕಾಶವಿಲ್ಲ. ಈ ಸಂಬಂಧ ಯಾವುದೇ ಆದೇಶವನ್ನು ಹೊರಡಿಸಿಲ್ಲ. ಕೂಲಂಕಷ ಪರಾಮರ್ಶೆ ಬಳಿಕವೇ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಂಪುಟ ಸಭೆಗೆ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದರು.

ಕೋವಿಡ್ ನಿಯಂತ್ರಣದ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಆದರೆ, ಮಾಸ್ಕ್ ಧರಿಸದವರಿಗೆ ರೂ.1 ಸಾವಿರವರೆಗೆ ದಂಡ ವಿಧಿಸುವುದು ದುಬಾರಿಯಾಗುತ್ತದೆ. ಈ ತಪಾಸಣೆಯನ್ನು ಪೋಲಿಸರಿಗೆ ವಹಿಸುವುದು ಅಪಾಯಕಾರಿಯೆಂದು ಸಂಪುಟ ಸಭೆಯಲ್ಲಿ ಪ್ರಸ್ತಾಪವಾಯಿತು. ಕೆಲ ಸಚಿವರು ಈ ಕ್ರಮಕ್ಕೆ ವಿರೋಧಿಸಿದರು. ಆದರೆ, ದುಬಾರಿ ದಂಡದ ಭಯದಿಂದಲಾದರೂ ಜನರು ಮಾಸ್ಕ್ ಧರಿಸಿ ಓಡಾಡುತ್ತಾರೆ. ಇನ್ನು ಕೆಲವು ತಿಂಗಳು ಈ ಕ್ರಮ ಅನಿವಾರ್ಯವೆಂದು ವೈದ್ಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಸಮರ್ಥಿಸಿಕೊಂಡರು. ಸಹಮತ ವ್ಯಕ್ತಪಡಿಸಿದ ಮುಖ್ಯಮಂತ್ರಿಯವರು ಇದರಿಂದ ಜನರಿಗೆ ಕಿರುಕುಳವಾಗದಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:02.10.2020

## 5. ಉಪನ್ಯಾಸಕರ ವರ್ಗಾವಣೆ ನಿಯಮಕ್ಕೆ ಒಪ್ಪಿಗೆ

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ವಾರ್ಷಿಕ ಶೇ.12ರ ಮಿತಿಗೆ ಒಳಪಟ್ಟು ಬೋಧಕ ಸಿಬ್ಬಂದಿ ವರ್ಗಾವಣೆ ಮಾಡುವ ಮಹತ್ವದ 'ಕರ್ನಾಟಕ ರಾಜ್ಯ ನಾಗರಿಕ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆಯ ಬೋಧಕ ಸಿಬ್ಬಂದಿ ವರ್ಗವಣೆ ನಿಯಂತ್ರಣ) ನಿಯಮಗಳು–2020ಕ್ಕೆ ಸಂಪುಟ ಸಭೆ ಅನುಮೋದನೆ ನೀಡಿದೆ.

ತಕ್ಷಣವೇ ಈ ಸಂಬಂಧ ಅಧಿಸೂಚನೆ ಹೊರಬೀಳುವ ನಿರೀಕ್ಷೆಯಿದ್ದು, ಹೊಸ ನಿಯಮ ಜಾರಿಗೆ ಬರಲಿದೆ. ರಾಜ್ಯದಲ್ಲಿ ಉಪ ಚುನಾವಣೆ ಘೋಷಣೆ ಆಗಿರುವುದರಿಂದ ಚುನಾವಣಾ ಆಯೋಗದ ಅನುಮತಿ ನಿರೀಕ್ಷಿಸಲಾಗುತ್ತದೆ.

ಕಾಲೇಜು ಶಿಕ್ಷಣ ಇಲಾಖೆ ಉಪನ್ಯಾಸಕರ ವರ್ಗಾವಣೆಗೆ ಯಾವುದೇ ಕಟ್ಟುನಿಟ್ಟು ನಿಯಮ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಈ ಸಂಬಂಧ ಜಾರಿಯಲ್ಲಿದ್ದ ಕಾಯಿದೆಯನ್ನು ಕಳೆದ ಅಧಿವೇಶನದಲ್ಲಿ

ವಾಪಸ್ಸು ಪಡೆಯಲಾಗಿತ್ತು. ಅದರ ಮುಂದುವರಿದ ಭಾಗವಾಗಿ ನಿಯಮ ರೂಪಿಸಲಾಗಿದೆ. ಇದರಿಂದಾಗಿ ಬೇಕಾಬಿಟ್ಟಿ ವರ್ಗಾವಣೆಗೆ ಕಡಿವಾಣ ಬೀಳುವ ಭರವಸೆ ತಾಳಲಾಗಿದೆ. ಇದೇ ರೀತಿ ತಾಂತ್ರಿಕ ಶಿಕ್ಷಣ ಇಲಾಖೆ ಬೋಧಕರ ವರ್ಗಾವಣೆ ಸಂಬಂಧದ ನಿಯಮಕ್ಕೂ ಸಂಪುಟ ಸಭೆ ಸಮ್ಮತಿ ನೀಡಿದೆ.

**ಮೂರು ವಲಯ:** ಎ. ಬಿ. ಸಿ ಎಂಬ 3 ವಲಯದ ಆಧಾರದಲ್ಲಿ ಬೋಧಕರ ವರ್ಗಾವಣೆ ಕೈಗೊಳ್ಳಲಾಗುತ್ತದೆ. ಈ ವರ್ಗಾವಣೆಯಲ್ಲಿ ಶೇ.50ರಷ್ಟನ್ನು ಸಾರ್ವಜನಿಕ ಹಿತಾಸಕ್ತಿ ಪ್ರಕರಣಗಳೆಂದು ಪರಿಗಣಿಸಲಾಗುತ್ತದೆ. ಉಳಿದಂತೆ ಪತಿ–ಪತ್ನಿ ಪ್ರಕರಣ ಶೇ.3 ವಿಕಲಚೇತನರು, ಗಂಭೀರ ಕಾಯಿಲೆ ಇರುವವರು ಹಾಗೂ ಸಿಂಗಲ್ ಪೇರೆಂಟ್ ಪ್ರಕರಣಗಳಿಗೆ ತಲಾ ಶೇ.1ರಷ್ಟು ಮೀಸಲು ಕಲ್ಪಿಸಲಾಗುತ್ತಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:02.10.2020

## 6. ಮಾಸ್ಕ್ ಹಾಕದಿದ್ರೆ ಬೀಳುತ್ತೆ ಕ್ರಿಮಿನಲ್ ಕೇಸ್

ಮಾಸ್ಕ್ ಧರಿಸದೆ ಪದೇ ಪದೇ ನಿಯಮ ಉಲ್ಲಂಘಿಸುವವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ಎಚ್ಚರಿಕೆ ನೀಡಿದ್ದಾರೆ. 'ಕೊರೋನಾ ಸೋಂಕಿಗೆ ಈವರೆಗೆ ಯಾವುದೇ ಔಷಧ, ಲಸಿಕೆ ಲಭ್ಯವಿಲ್ಲ. ಎಲ್ಲರೂ ಕಡ್ಡಾಯವಾಗಿ ಮುಖಗವಸು ಧರಿಸಬೇಕು. ಸದ್ಯ ಇದೊಂದೇ ಸೋಂಕು ನಿಯಂತ್ರಣಕ್ಕಿರುವ ಪರಿಣಾಮಕಾರಿ ಔಷಧ, ಬಾಯಿ ಮತ್ತು ಮೂಗು ಸಂಪೂರ್ಣವಾಗಿ ಮುಚ್ಚುವಂತೆ ಮಾಸ್ಕ್ ಹಾಕಿಕೊಳ್ಳಬೇಕು" ಎಂದು ಸಲಹೆ ನೀಡಿದರು.

'ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸದೆ ಅಡ್ಡಾಡುವವರಿಗೆ ದಂಡ ವಿಧಿಸಲು 230 ಮಾರ್ಷಲ್‌ಗಳನ್ನು ನೇಮಕ ಮಾಡಲಾಗಿದೆ. ಇನ್ನೂ ಹೆಚ್ಚುವರಿಯಾಗಿ 120 ಮಂದಿಯನ್ನು ನಿಯೋಜಿಸಲಾಗುತ್ತಿದೆ. ಮಾರ್ಷಲ್‌ಗಳೊಂದಿಗೆ ಪೊಲೀಸರು ಕೂಡ ಕಾರ್ಯನಿರ್ವಹಿಸಲಿದ್ದಾರೆ." ಎಂದರು.

'ಮಾಸ್ಕ್ ಧರಿಸದವರಿಗೆ ದಂಡ ಹಾಕಲು ಆಧುನಿಕ ತಂತ್ರಜ್ಞಾನವನ್ನೊಳಗೊಂಡ ಸಾಧನಗಳನ್ನು ಮಾರ್ಷಲ್‌ಗಳಿಗೆ ನೀಡಲಾಗಿದೆ. ಇದರಲ್ಲಿ ಭಾವಚಿತ್ರದ ಜೊತೆಗೆ ಲೋಕೇಶನ್ ಮತ್ತು ದಂಡದ ರಶೀದಿ ಕೂಡ ನೀಡಬಹುದಾಗಿದೆ. ಸದ್ಯ ಮಾಸ್ಕ್ ಹಾಕದವರಿಗೆ ರೂ.200 ದಂಡ ಹಾಕಲಾಗುತ್ತಿದ್ದು, ಸರ್ಕಾರ ದಂಡದ ಮೊತ್ತವನ್ನು ರೂ.1000 ಗಳಿಗೆ ಏರಿಕೆ ಮಾಡಿದೆ," ಎಂದು ತಿಳಿಸಿದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:02.10.2020

## 7. ಬೇಕಾಬಿಟ್ಟಿ ಕಸ ವಿಲೇವಾರಿ ಮೇಲೆ ಮಾರ್ಷಲ್ ಗಸ್ತು ಪಡೆ ನಿಗಾ

ನಗರದಲ್ಲಿ ರಾತ್ರಿ ವೇಳೆ ಎಲ್ಲೆಂದರಲ್ಲಿ ಕಸ ಹಾಕುವ, ಮೂತ್ರ ವಿಸರ್ಜಿಸುವ, ಕಟ್ಟಡಗಳ ಅವಶೇಷಗಳನ್ನು ಸುರಿಯುವವರ ಮೇಲೆ ಕಣ್ಗಾವಲಿಡಲು ಬಿಬಿಎಂಪಿಯು 'ಮಾರ್ಷಲ್ ಗಸ್ತು ಪಡೆ'ಗಳನ್ನು ನಿಯೋಜಿಸಿದೆ. ಒಟ್ಟು 8 ತಂಡಗಳು ರಾತ್ರಿಯಿಡೀ ಗಸ್ತು ತಿರುಗಲಿವೆ.

ಪಾಲಿಕೆಯ ಆಡಳಿತಾಧಿಕಾರಿ ಗೌರವ ಗುಪ್ತ ಮತ್ತು ಆಯುಕ್ತ ಎನ್.ಮಂಜುನಾಥ ಪ್ರಸಾದ್ ಅವರು ಗಾಂಧಿ ಜಯಂತಿ ದಿನವಾದ ಅಕ್ಟೋಬರ್ 2ರಂದು ಮಾರ್ಷಲ್ ಗಸ್ತು ಪಡೆ ವಾಹನಗಳಿಗೆ ಚಾಲನೆ ನೀಡಲಿದ್ದಾರೆ. ರಾತ್ರಿ ಗಸ್ತಿಗಾಗಿ 55 ನಿವೃತ್ತ ಸೈನಿಕರು ಮತ್ತು ಎನ್‌ಸಿಸಿಯಿಂದ 'ಸಿ' ಪ್ರಮಾಣಪತ್ರ ಪಡೆದವರನ್ನು ನೇಮಕ ಮಾಡಲಾಗಿದೆ. 8 ಪಡೆಗಳು ನಗರಾದ್ಯಂತ ಗಸ್ತು ತಿರುಗಲಿವೆ. ಪ್ರತಿ ವಾಹನದಲ್ಲಿ ಚಾಲಕ ಸೇರಿ ಐವರು ಮಾರ್ಷಲ್‌ಗಳು ಕಾರ್ಯನಿರ್ವಹಿಸಲಿದ್ದಾರೆ. ಗಸ್ತು ಪಡೆಗಳು ರಾತ್ರಿ 9 ರಿಂದ ಬೆಳಗ್ಗೆ 6 ಗಂಟೆಯವರೆಗೆ ಎಲ್ಲ ಎಂಟು ವಲಯಗಳಲ್ಲಿ ಸುತ್ತಾಡಿ, ಎಲ್ಲೆಂದರಲ್ಲಿ ಕಸ ಸುರಿಯುವವರನ್ನು ಪತ್ತೆ ಮಾಡಿ ದಂಡ ವಿಧಿಸಲಿವೆ. ರಸ್ತೆಯುದ್ದಕ್ಕೂ ಜಲ್ಲಿ, ಮರಳು, ಮಣ್ಣು, ಸಿಮೆಂಟ್, ಕಾಂಕ್ರೀಟ್ ಅನ್ನು

ಸೋರಿಕೆ ಮಾಡಿಕೊಂಡು ಹೋಗುವ ವಾಹನಗಳನ್ನು ಪತ್ತೆ ಮಾಡಿ ದಂಡ ಹಾಕಲಿವೆ. ಪ್ರತಿಯೊಂದು ಗಸ್ತು ಪಡೆ ವಾಹನ ಖರೀದಿಗೆ ರೂ.7.65 ಲಕ್ಷ ವೆಚ್ಚ ಮಾಡಲಾಗಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:02.10.2020

## 8. ಶಾಲೆ ಅಥವಾ ಆನ್‌ಲೈನ್ ಆಯ್ಕೆ ನಿಮ್ಮದೇ

ಅಕ್ಟೋಬರ್ 15ರ ನಂತರ ವಿದ್ಯಾರ್ಥಿಗಳು ಶಾಲೆಗಳಿಗೆ ತೆರಳಿ ಪಾಠ, ಪ್ರವಚನ ಕೇಳುವ ಅಥವಾ ಆನ್‌ಲೈನ್ ಶಿಕ್ಷಣದ ಪೈಕಿ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು. ಶಾಲೆಗಳಿಗೆ ಹಾಜರಾಗಲೇಬೇಕು ಎಂದು ಕಡ್ಡಾಯ ಮಾಡುವಂತಿಲ್ಲ ಎಂದು ರಾಜ್ಯ ಸರ್ಕಾರ ಸ್ಪಷ್ಟವಾಗಿ ಹೇಳಿದೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಶಾಲೆಗಳು ಮತ್ತು ತರಬೇತಿ ಸಂಸ್ಥೆಗಳ ಪುನಾರಂಭ ಮಾಡಲು ಅಕ್ಟೋಬರ್ 15ರ ನಂತರ ಹಂತ ಹಂತವಾಗಿ ತೀರ್ಮಾನ ತೆಗೆದುಕೊಳ್ಳಬಹುದು. ಸಂಬಂಧಪಟ್ಟ ಶಾಲೆ, ಆಡಳಿತ ಮಂಡಳಿಯೊಂದಿಗೆ ಸಮಾಲೋಚಿಸಿ, ಷರತ್ತುಗಳಿಗೆ ಒಳಪಟ್ಟು ಅನುಮತಿ ನೀಡಬಹುದು ಎಂದು ಹೇಳಿದೆ.

ಆನ್‌ಲೈನ್, ದೂರಶಿಕ್ಷಣ ಕಲಿಕೆಗೆ ಪ್ರೋತ್ಸಾಹ ಮುಂದುವರಿಸಬೇಕು. ವಿದ್ಯಾರ್ಥಿಗಳು ಖುದ್ದಾಗಿ ಶಾಲೆಗೆ ಹಾಜರಾಗುವ ಬದಲು, ಆನ್‌ಲೈನ್ ತರಗತಿಗಳಲ್ಲಿ ಪಾಲ್ಗೊಳ್ಳಲು ಬಯಸಿದರೆ, ಕಡ್ಡಾಯಗೊಳಿಸಬಾರದು. ಹಾಗೊಂದು ವೇಳೆ ವಿದ್ಯಾರ್ಥಿಗಳು ಶಾಲೆಗಳಿಗೆ ಹಾಜರಾಗಲು ಆಸಕ್ತಿ ತೋರಿದರೆ ಅದಕ್ಕೆ ಪೋಷಕರ ಅನುಮತಿ ಕಡ್ಡಾಯ ಎಂದು ತಿಳಿಸಿದೆ.

ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಗೆ ಒಳಪಡುವ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸುವ ಕುರಿತಂತೆಯೂ ಸಂಬಂಧಪಟ್ಟ ಇಲಾಖೆ ಸೂಕ್ತ ತೀರ್ಮಾನ ತೆಗೆದುಕೊಳ್ಳಬೇಕು. ಆಗಸ್ಟ್ 15ರ ನಂತರ ಪ್ರಯೋಗಾಲಯ ಮತ್ತು ಪ್ರಾಯೋಗಿಕ ಚಟುವಟಿಕೆ, ಸಂಶೋಧನಾ ವಿದ್ಯಾರ್ಥಿಗಳ ಹಾಜರಾತಿ ಕುರಿತಂತೆಯೂ ಸೂಕ್ತ ತೀರ್ಮಾನ ಕೈಗೊಳ್ಳಬೇಕು ಎಂದು ಹೇಳಿದೆ.

ಆಧಾರ: ವಿಶ್ವವಾಣಿ, ದಿನಾಂಕ:03.10.2020

## 9. ಡಿಸೆಂಬರ್‌ಗೆ ಬರಲಿದೆ ಕಾವೇರಿ ನೀರು

ಬಿಬಿಎಂಪಿಗೆ ಹೊಸದಾಗಿ ಸೇರಿದ 110 ಹಳ್ಳಿಗಳ ಕುಡಿಯುವ ನೀರಿನ ಬವಣೆ ನೀಗಿಸುವ ಸಲುವಾಗಿ ಜಲಮಂಡಳಿ ಕೈಗೊಂಡಿರುವ ಕೊಳವೆ ಅಳವಡಿಕೆ ಕಾಮಗಾರಿ ಡಿಸೆಂಬರ್‌ನಲ್ಲಿ ಪೂರ್ಣಗೊಳ್ಳುವ ಸಾಧ್ಯತೆಗಳಿವೆ.

ಜಲಮಂಡಳಿ ನೀಡಿರುವ ಅಂಕಿ–ಅಂಶಗಳ ಪ್ರಕಾರ, ಕೊಳವೆ ಅಳವಡಿಕೆ ಕಾಮಗಾರಿ ಶೇ.99ರಷ್ಟು ಮುಗಿದಿದೆ. ನೆಲಮಟ್ಟದ ಜಲಾಗಾರ ನಿರ್ಮಾಣಕ್ಕೆ ಅಗತ್ಯವಿರುವ ಭೂಮಿ ದೊರಕದಿರುವುದು ಮತ್ತು ಕೊರೋನಾ ಸೋಂಕು ತಡೆಗೆ ಹೇರಿದ್ದ ಲಾಕ್‌ಡೌನ್‌ನಿಂದ ಕಾಮಗಾರಿ ಕುಂಠಿತಗೊಂಡಿತ್ತು. ಇದೀಗ ಚುರುಕುಗೊಂಡಿದೆ.

110 ಹಳ್ಳಿಗಳಿಗೆ ಕಾವೇರಿ ನೀರಿನ ಸಂಪರ್ಕ ಕಲ್ಪಿಸುವ ಸಲುವಾಗಿ 2017ರಲ್ಲೇ ಕೊಳವೆ ಅಳವಡಿಕೆ ಕಾಮಗಾರಿಗೆ ಚಾಲನೆ ನೀಡಲಾಯಿತು. 5 ವಲಯಗಳಲ್ಲಿ 2785 ಕಿ.ಮೀ, ಉದ್ದದ ಕೊಳವೆ ಅಳವಡಿಸಬೇಕಿದ್ದು, ಇದರಲ್ಲಿ 2749.75 ಕಿ.ಮೀ ಪೂರ್ಣಗೊಳಿಸಲಾಗಿದೆ. ಕೇವಲ 36 ಕಿ.ಮೀ. ಉದ್ದದ ಮಾರ್ಗದಲ್ಲಿ ಮಾತ್ರ ಕೊಳವೆ ಅಳವಡಿಸುವ ಕೆಲಸ ಬಾಕಿ ಇದೆ. ಈ ಕಾಮಗಾರಿಯನ್ನು ವರ್ಷಾಂತ್ಯದೊಳಗೆ ಮುಗಿಸಲಾಗುವುದು ಎಂದು ಜಲಮಂಡಳಿ ಅಧಿಕಾರಿಯೊಬ್ಬರು ತಿಳಿಸಿದರು. ಕಾವೇರಿ 5ನೇ ಹಂತದ ಯೋಜನೆಯಡಿ ಈವರೆಗೆ 52 ಹಳ್ಳಿಗಳಿಗೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲಾಗಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:03.10.2020

## 10. ವಾರ್ಡ್ ಸಂಖ್ಯೆ 250ಕ್ಕೆ ಹೆಚ್ಚಳಕ್ಕೆ ಅಧಿಸೂಚನೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ವಾರ್ಡ್ ಸಂಖ್ಯೆಯನ್ನು 198 ರಿಂದ 250ಕ್ಕೆ ಹೆಚ್ಚಳ ಮಾಡುವ ಬಗ್ಗೆ ರಾಜ್ಯ ಸರ್ಕಾರ ರಾಜ್ಯಪತ್ರದ ಮೂಲಕ ಅಧಿಸೂಚನೆ ಹೊರಡಿಸಿದೆ.

ಪಾಲಿಕೆಯ ವಾರ್ಡ್‌ಗಳ ಸಂಖ್ಯೆಯನ್ನು 225ಕ್ಕಿಂತ ಕಡಿಮೆ ಇಲ್ಲದಂತೆ 250ರವರೆಗೆ ಹೆಚ್ಚಳ ಮಾಡಲು ಅಧಿಸೂಚನೆ ಹೊರಡಿಸಿದೆ. ಪಾಲಿಕೆ ವಾರ್ಡ್‌ಗಳ ಸಂಖ್ಯೆ ಹೆಚ್ಚಳ ಸಂಬಂಧ ಕರ್ನಾಟಕ ನಗರ ಪಾಲಿಕೆಗಳ (3ನೇ ತಿದ್ದುಪಡಿ) ಅಧಿನಿಯಮಕ್ಕೆ ರಾಜ್ಯಪಾಲರು ಒಪ್ಪಿಗೆ ನೀಡಿದ್ದಾರೆ.

ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ವಾರ್ಡ್‌ಗಳು ವಿಭಜನೆಯಾಗಲಿವೆ. ವಾರ್ಡ್ ಸಂಖ್ಯೆ ಹೆಚ್ಚಳ ಮಾಡುವಾಗ ಯಾವ ವಿಧಾನಸಭಾ ಕ್ಷೇತ್ರದ ವಾರ್ಡ್‌ಗಳನ್ನು ಅದೇ ಕ್ಷೇತ್ರದ ವ್ಯಾಪ್ತಿಯಲ್ಲಿ ಪುನರ್ ವಿಂಗಡಣೆ ಮಾಡಿ ವಾರ್ಡ್ ಸಂಖ್ಯೆ ಹೆಚ್ಚಿಸಬೇಕು. ಯಾವುದೇ ಕಾರಣಕ್ಕೂ ಒಂದು ಕ್ಷೇತ್ರದ ವಾರ್ಡುಗಳನ್ನು ಬೇರೆ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಗೆ ಹಂಚಬಾರದು ಎಂದು ಸ್ಪಷ್ಟಪಡಿಸಲಾಗಿದೆ. ಪ್ರತಿ ವಾರ್ಡ್‌ಗಳ ಗಡಿ ನಿರ್ಧಾರ ವಿಧಾನವನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಗಡಿ ನಿರ್ಧಾರ ಆಯೋಗ ರಚನೆ ಮಾಡಬೇಕು ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

**ವಿಧಾನಸಭೆಯಲ್ಲಿ ಒಪ್ಪಿಗೆ:** ಕಳೆದ ವಿಧಾನ ಸಭೆ ಅಧಿವೇಶನದಲ್ಲಿ ಶಾಸಕ ಎಸ್.ರಘು ನೇತೃತ್ವದ ಜಂಟಿ ಪರಿಶೀಲನಾ ಸಮಿತಿಯು ಸಲ್ಲಿಸಿರುವ ವಿಶೇಷ ವರದಿಯಲ್ಲಿ ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 198ರಿಂದ 250ಕ್ಕೆ ಹೆಚ್ಚಳ ಮಾಡುವಂತೆ ಶಿಫಾರಸ್ಸು ಮಾಡಲಾಗಿತ್ತು. ಅದಕ್ಕೆ ವಿಧಾನ ಸಭೆಯಲ್ಲಿ ಒಪ್ಪಿಗೆ ನೀಡಲಾಗಿತ್ತು. ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ–1976ರ ನಿಯಮಾವಳಿಯಲ್ಲಿ ಸಣ್ಣ ಪ್ರಮಾಣದ ತಿದ್ದುಪಡಿ ಮಾಡಿ 200 ವಾರ್ಡ್‌ಗಳ (ಕಾಯಿದೆಯಲ್ಲಿ 200 ವಾರ್ಡ್‌ಗಳ ಅವಕಾಶವಿದೆ) ಹೆಸರಿನ ಬದಲಿಗೆ 250 ಎಂಬ ಪದ ಪ್ರಯೋಗಕ್ಕೆ ಒಪ್ಪಿಗೆ ಪಡೆಯಲಾಗಿತ್ತು.

ರಾಜ್ಯ ಸರ್ಕಾರ ಬೆಂಗಳೂರಿಗೆ ಪ್ರತ್ಯೇಕವಾಗಿ ಕಾಯ್ದೆ (ಬಿಬಿಎಂಪಿ ವಿಧೇಯಕ–2020) ಮಂಡನೆ, ಅಂಗೀಕಾರ ವಿಳಂಬವಾದರೂ ಅಥವಾ ತಕ್ಷಣ ಹೈಕೋರ್ಟ್ ಚುನಾವಣೆ ನಡೆಸುವಂತೆ ಘೋಷಣೆ ಮಾಡಿದರೂ ಬಿಬಿಎಂಪಿ ವಾರ್ಡ್‌ಗಳನ್ನು 198ರಿಂದ 250ಕ್ಕೆ ಪುನರ್ ರಚನೆ ಮಾಡಿ ಪರಿಷ್ಕೃತ ವಾರ್ಡ್‌ಗಳ ಸಂಖ್ಯೆಗೆ ಚುನಾವಣೆ ನಡೆಸಲು ಸರ್ಕಾರ ವೇದಿಕೆ ಸಜ್ಜುಗೊಳಿಸಿಕೊಂಡಿದೆ.

**ಏನಿದು ತಿದ್ದುಪಡಿ:** 2020ನೇ ಸಾಲಿನ ಬಿಬಿಎಂಪಿ ವಿಧೇಯಕವನ್ನು (ಬಿಬಿಎಂಪಿ ವಿಧೇಯಕ–2020) ಪರಿಶೀಲಿಸಲು ಶಾಸಕ ಎಸ್.ರಘು ನೇತೃತ್ವದಲ್ಲಿ ಕರ್ನಾಟಕ ವಿಧಾನಮಂಡಲ ಜಂಟಿ ಪರಿಶೀಲನಾ ಸಮಿತಿಯನ್ನು ರಚನೆ ಮಾಡಲಾಗಿದೆ. ಆದರೆ, ಸಮಿತಿಯ ತನ್ನ ಅಂತಿಮ ವರದಿ ಸಲ್ಲಿಸಲು ನವೆಂಬರ್ ಅಂತ್ಯದವರೆಗೆ ಗಡುವು ಪಡೆದಿದ್ದು, ಅಲ್ಲಿಯವರೆಗೆ ವಿಧೇಯಕಕ್ಕೆ ಒಪ್ಪಿಗೆ ದೊರೆಯುವುದು ಅನುಮಾನ ಎಂಬಂತಾಗಿದೆ.

ಇದರ ನಡುವೆ ಸೆಪ್ಟೆಂಬರ್ 15ರಂದು ಸಮಿತಿಯು ಒಂದು ಪುಟದ ವಿಶೇಷ ವರದಿ ಸಲ್ಲಿಸಿ 'ಬಿಬಿಎಂಪಿಯ ಚುನಾಯಿತ ಸದಸ್ಯರ ಅವಧಿ ಮುಗಿದಿದ್ದು, ಮಹಾನಗರ ಪಾಲಿಕೆಗೆ ಚುನಾವಣೆ ನಡೆಸಬೇಕಾಗಿರುತ್ತದೆ. ಪ್ರಸ್ತುತ ವಿದ್ಯಾಮಾನಗಳು ಬೆಂಗಳೂರು ಮಹಾನಗರದಲ್ಲಿ ಹೆಚ್ಚಳವಾದ ಜನಸಂಖ್ಯೆ ಹಾಗೂ ವಿಸ್ತೀರ್ಣದ ಆಧಾರದ ಮೇಲೆ 1976ನೇ ಸಾಲಿನ ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ ಪ್ರಕರಣ 7ಕ್ಕೆ ತಿದ್ದುಪಡಿ ತಂದು ವಾರ್ಡ್ ಹೆಚ್ಚಳಕ್ಕೆ ಅವಕಾಶ ಮಾಡಿಕೊಡಬೇಕು. ಇದಕ್ಕಾಗಿ 1976ನೇ ಸಾಲಿನ ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ 7(1)ನೇ ಉಪ ಪ್ರಕರಣದ (ಎ) ಖಂಡದಲ್ಲಿ 200 ಬದಲಿಗೆ 250 ಎಂಬ ಪದ ಪ್ರಯೋಗಿಸಬೇಕು' ಎಂದು ವರದಿ ನೀಡಿದ್ದರು.

ಆಧಾರ: ಕನ್ನಡಪ್ರಭ, ದಿನಾಂಕ:04.10.2020

## 11. ಶಾಲಾರಂಭಕ್ಕೆ ಮಾರ್ಗಸೂಚಿ

ಅನ್‌ಲಾಕ್–5 ಪ್ರಕಾರ ಅಕ್ಟೋಬರ್ 15ರಿಂದ ಶಾಲೆಗಳನ್ನು ಪುನಾರಂಭ ಮಾಡಲು ಅನುಮತಿ ನೀಡಿರುವ ಕೇಂದ್ರ ಸರ್ಕಾರ, ಈ ಕುರಿತು ಮಾರ್ಗಸೂಚಿ ಹೊರಡಿಸಿದೆ. ಕಂಟೈನ್ಮೆಂಟ್ ವಲಯಗಳಲ್ಲಿ ಶಾಲೆಗಳನ್ನು ಆರಂಭಿಸುವಂತಿಲ್ಲ. ಶಾಲೆಗಳಿಗೆ ಮಕ್ಕಳನ್ನು ಕಳುಹಿಸುವುದಕ್ಕೆ ಪೋಷಕರು/ಪಾಲಕರು ಲಿಖಿತ ಒಪ್ಪಿಗೆ ನೀಡುವುದು ಕಡ್ಡಾಯ, ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಶಿಕ್ಷಣ ಮುಂದುವರಿಸುವ ಅವಕಾಶವು ಇರಲಿದೆ. ಎಲ್ಲ ಶಾಲೆಗಳಲ್ಲಿ ಕಾರ್ಯಪಡೆಗಳನ್ನು ರಚಿಸಬೇಕು. ತುರ್ತು ಆರೈಕೆ ತಂಡ, ಸ್ವಚ್ಛತಾ ತಂಡಗಳ ರಚನೆಯಾಗಬೇಕು. ಬಿಸಿಯೂಟದ ಬಗ್ಗೆ ಹೆಚ್ಚಿನ ಮುನ್ನೆಚ್ಚರಿಕೆ ವಹಿಸಬೇಕು. ಮಾಸ್ಕ್ ಸ್ಯಾನಿಟೈಸರ್ ಬಳಕೆ, ದೈಹಿಕ ಅಂತರ ಕಾಪಾಡಿಕೊಳ್ಳುವುದು ಕಡ್ಡಾಯವಾಗಿದೆ.

ಆಧಾರ: ವಿಜಯವಾಣಿ, ದಿನಾಂಕ:06.10.2020

## 12. ಶಾಲಾರಂಭ ಅಧ್ಯಯನಕ್ಕೆ ತಜ್ಞರ ಸಮಿತಿ

ಶಾಲೆ–ಕಾಲೇಜುಗಳನ್ನು ಅಕ್ಟೋಬರ್ 15ರಿಂದ ಆರಂಭಿಸಲು ಕೇಂದ್ರ ಸರ್ಕಾರ ಅಸ್ತು ಎಂದಿದ್ದರೂ, ಸಾಧಕ–ಬಾಧಕದ ಕುರಿತು ವಿಸ್ತೃತ ಅಧ್ಯಯನಕ್ಕೆ ತಜ್ಞರ ಸಮಿತಿ ರಚಿಸಿ, ವರದಿ ಸಲ್ಲಿಸಿದ ಬಳಿಕ ಮುಂದಿನ ಕ್ರಮವಹಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ನಿರ್ಧರಿಸಿದ್ದಾರೆ.

ಶಾಲೆ–ಕಾಲೇಜು ಪುನಾರಂಭದ ಕುರಿತು ಸಚಿವ ಎಸ್.ಸುರೇಶ್ ಕುಮಾರ್ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಲಹೆ–ಸೂಚನೆಗಳನ್ನು ಕೇಳಿದ್ದರು. ಈ ಹಿನ್ನೆಲೆಯಲ್ಲಿ ಆರೋಗ್ಯ ಸಚಿವರು ವರ್ಚುವಲ್ ವೇದಿಕೆ ಮೂಲಕ ತಜ್ಞರು ಮತ್ತು ಇಲಾಖೆ ಅಧಿಕಾರಿಗಳ ಜೊತೆಗೆ ಪ್ರಾಥಮಿಕ ಹಂತದ ಸಭೆ ನಡೆಸಿದ್ದು, ಸ್ಪಷ್ಟ ನಿಲುವಿಗೆ ಬರಲು ತಜ್ಞರ ಮೊರೆ ಹೋಗಿದ್ದಾರೆ. ಮಕ್ಕಳ ತಜ್ಞರು, ಇಲಾಖೆಯಲ್ಲಿರುವ ಪರಿಣಿತ ಅಧಿಕಾರಿಗಳ ಸಮಿತಿ ರಚಿಸಬೇಕು. ವಿಸ್ತೃತ ಅಧ್ಯಯನ, ಸಮಾಲೋಚನೆ ನಡೆಸಿ 2 ದಿನಗಳಲ್ಲಿ ಈ ಸಮಿತಿ ವರದಿ ನೀಡಬೇಕು ಎಂದು ಸೂಚಿಸಿದ್ದಾರೆ. ಮಕ್ಕಳ ವಿಷಯ ತುಂಬಾ ಸೂಕ್ಷ್ಮವಾಗಿದೆ. ಸಕಾರಾತ್ಮಕ ಹಾಗೂ ನಕಾರಾತ್ಮಕ ಅಂಶಗಳನ್ನು ಚರ್ಚಿಸಿ, ಮಕ್ಕಳ ಆರೋಗ್ಯ ಮತ್ತು ಶಿಕ್ಷಣದ ಹಿತದೃಷ್ಟಿಗೆ ಪೂರಕ ಕ್ರಮಗಳಿಗೆ ಪ್ರಾಶಸ್ತ್ಯ ನೀಡಿದೆ.

ಕೊರೋನಾದಿಂದಾಗಿ ಶಿಕ್ಷಣ ಇಲಾಖೆ ಅತ್ಯಂತ ಸಂಕಷ್ಟಕ್ಕೆ ಸಿಲುಕಿದೆ. ಶಾಲೆ ಪ್ರಾರಂಭಿಸಿದರೂ ಕಷ್ಟ, ಬಿಟ್ಟರೂ ಕಷ್ಟ–ನಷ್ಟ ಎಂಬಂತಹ ಪರಿಸ್ಥಿತಿಯಿದೆ. ಕೇಂದ್ರ ಸರ್ಕಾರ ಗ್ರೀನ್ ಸಿಗ್ನಲ್ ನೀಡಿದ ಬಳಿಕ ಶಾಲೆ ಕಾಲೇಜು ಪುನಾರಂಭದ ಕುರಿತು ಪರ–ವಿರೋಧದ ಧ್ವನಿಗಳೆದ್ದಿವೆ. ಮಕ್ಕಳಲ್ಲಿ ಸಾಮಾಜಿಕ ದೂರ ಅಂತರ, ಮಾಸ್ಕ್ ಇನ್ನಿತರ ಮುನ್ನೆಚ್ಚರಿಕೆ ಕ್ರಮಗಳ ಪಾಲನೆ ಅಸಾಧ್ಯ. ಇದರಿಂದ ಮಕ್ಕಳು ತಾವು ಸೋಂಕು ಅಂಟಿಸಿಕೊಂಡು, ಮನೆ ಹಾಗೂ ಸಮುದಾಯಕ್ಕೂ ತರುತ್ತಾರೆ ಎನ್ನುವ ತಳಮಳ ವ್ಯಕ್ತವಾಗಿದೆ. ಮಕ್ಕಳು ಬಹುಕಾಲ ಶಾಲಾ ಆವರಣದಿಂದ ಹೊರಗೆ ಉಳಿಯುವುದರಿಂದ ಬಾಲ್ಯ ವಿವಾಹ, ಬಾಲ ಕಾರ್ಮಿಕ ಪದ್ಧತಿಯಂತಹ ಸಾಮಾಜಿಕ ಪಿಡುಗುಗಳು ಹೆಚ್ಚುತ್ತಿವೆ ಎನ್ನುವ ತಲ್ಲಣದ ಮಾತುಗಳು ಕೇಳಲಾರಂಭಿಸಿವೆ.

**ಕೊರೋನಾ ಟೆಸ್ಟ್ ವರದಿ ಗೊಂದಲ:** ಸರ್ಕಾರಕ್ಕೆ ಕೊರೋನಾ ಟೆಸ್ಟ್ ವಿಚಾರದಲ್ಲೂ ಗೊಂದಲ ಕಾಣಿಸಿಕೊಂಡಿದೆ. ಸರ್ಕಾರದಿಂದ ನಡೆಯುತ್ತಿರುವ ಟೆಸ್ಟ್‌ನಲ್ಲಿ ಪಾಸಿಟಿವ್ ಬರುತ್ತಿರುವ ಪ್ರಮಾಣ ಕಡಿಮೆ ಇದ್ದರೆ, ಖಾಸಗಿ ಲ್ಯಾಬ್‌ನ ವರದಿಗಳಲ್ಲಿ ಈ ಪ್ರಮಾಣ ಅಧಿಕವಾಗಿದೆ. ಹಿರಿಯ ಅಧಿಕಾರಿಯೊಬ್ಬರು ಸಿದ್ಧಪಡಿಸಿರುವ ವರದಿ ಪ್ರಕಾರ ಸರ್ಕಾರ ಕಡೆಯಿಂದ 100 ಟೆಸ್ಟ್ ನಡೆಸಿದರೆ ಸರಾಸರಿ 10ರಿಂದ 13 ಮಂದಿಗೆ ಪಾಸಿಟಿವ್ ಬರುತ್ತಿದೆ. ಆದರೆ, ಖಾಸಗಿಯಲ್ಲಿ ಮಾಡಿಸಿದಾಗ ಈ ಪ್ರಮಾಣ ಹೆಚ್ಚಾಗಿದೆ. ಈ ವಿಚಾರದಲ್ಲಿ ಪ್ರತಿಕ್ರಿಯೆ ನೀಡಿರುವ ಸಚಿವ ಡಾ.ಕೆ.ಸುಧಾಕರ್, ಈ ಬಗ್ಗೆ ಮಾಹಿತಿ ತರಿಸಿಕೊಂಡು ಪರಿಶೀಲಿಸುವುದಾಗಿ ಹೇಳಿದ್ದಾರೆ. ಜೊತೆಗೆ ಅಂಟಿಜೆನ್ ಫಲಿತಾಂಶದ ಮೇಲೆ ಸಾಕಷ್ಟು ದೂರು

ಬರುತ್ತಿರುವ ಹಿನ್ನೆಲೆ ಆರ್‌ಟಿಪಿಸಿಆರ್ ಟೆಸ್ಟ್ ಪ್ರಮಾಣ ದಿನವೊಂದಕ್ಕೆ 45 ಸಾವಿರದಿಂದ 1 ಲಕ್ಷಕ್ಕೆ ಹೆಚ್ಚಿಸಲು ಉದ್ದೇಶಿಸಲಾಗಿದೆ ಎಂದಿದ್ದಾರೆ.

**ಕೊರೋನಾ ಗುಣಮುಖರ ಸಂಖ್ಯೆ ಶೇ.81 ಏರಿಕೆ:** ರಾಜ್ಯದಲ್ಲಿ 10,228 ಮಂದಿ ಕೊರೋನಾ ಸೋಂಕಿನಿಂದ ಗುಣಮುಖರಾಗಿದ್ದು, ಗುಣಮುಖರ ಸಂಖ್ಯೆ 5.33 ಲಕ್ಷಕ್ಕೆ ಏರಿಕೆಯಾಗಿದೆ. ಮತ್ತೊಂದೆಡೆ ಒಂದೇ ದಿನ 91 ಮಂದಿ ಸೋಂಕಿಗೆ ಬಲಿಯಾಗಿದ್ದು, ಒಟ್ಟು ಮೃತರ ಸಂಖ್ಯೆ 9,461ಕ್ಕೆ ತಲುಪಿದೆ. 9.993 ಹೊಸ ಸೋಂಕಿತರ ಸಂಖ್ಯೆ 6.57 ಲಕ್ಷಕ್ಕೆ ಏರಿಕೆಯಾಗಿದೆ. 1,15,151 ಮಂದಿ ಚಿಕಿತ್ಸೆ ಪಡೆಯುತ್ತಿದ್ದು, 848 ಮಂದಿ ತುರ್ತು ನಿಗಾ ಘಟಕದಲ್ಲಿದ್ದಾರೆ. ರಾಜಧಾನಿ ಬೆಂಗಳೂರಿನಲ್ಲಿ ಒಂದೇ ದಿನ 5,012 ಹೊಸ ಕೋವಿಡ್ ಪ್ರಕರಣಗಳು ಕಂಡುಬಂದಿವೆ.

ಆಧಾರ: ವಿಜಯವಾಣಿ, ದಿನಾಂಕ:07.10.2020

## 13. ಸುರಕ್ಷತೆಯಲ್ಲಿ ಏರೋ ಇಂಡಿಯಾ ನಡೆಸಲು ಕ್ರಮ

ಕೋವಿಡ್ ಹಿನ್ನೆಲೆಯಲ್ಲಿ ಅಗತ್ಯ ಸುರಕ್ಷತಾ ಕ್ರಮ ಕೈಗೊಂಡು 13ನೇ ಆವೃತ್ತಿಯ ಏರೋ ಇಂಡಿಯಾ–2021 ಆಯೋಜಿಸಲು ತೀರ್ಮಾನಿಸಲಾಗಿದೆ. ಈ ಸಂಬಂಧ ಸಿದ್ಧತೆ ಕೈಗೊಳ್ಳಲು ಕೇಂದ್ರ ರಕ್ಷಣಾ ಸಚಿವ ರಾಜನಾಥ್‌ಸಿಂಗ್ ಅವರು ವರ್ಚುವಲ್ ಸಭೆ ನಡೆಸಿದರು. ರಾಜ್ಯದ ಕಡೆಯಿಂದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಮುಖ್ಯ ಕಾರ್ಯದರ್ಶಿ ಟಿ.ಎಂ.ವಿಜಯ ಭಾಸ್ಕರ್ ಭಾಗಿಯಾಗಿದ್ದರು.

ಈ ವೇಳೆ ಮಾತನಾಡಿದ ಮುಖ್ಯಮಂತ್ರಿಯವರು 'ಕಳೆದ 12 ಏರ್ ಶೋ ಆವೃತ್ತಿಗಳಿಗೆ ಅತಿಥೇಯ ರಾಜ್ಯವಾಗಿ ತೊಡಗಿಸಿಕೊಂಡಿರುವ ಉತ್ತಮ ಅನುಭವವನ್ನು ಕರ್ನಾಟಕ ಹೊಂದಿದೆ. ಈ ಬಾರಿಯೂ 2021ರ ಫೆಬ್ರವರಿ 3 ರಿಂದ 7ರವರೆಗೆ ನಡೆಯುವ ಏರೋ ಇಂಡಿಯಾದ ಅತಿಥೇಯ ರಾಜ್ಯವಾಗಿ ಕರ್ನಾಟಕ ಆಯ್ಕೆಯಾಗಿರುವುದು ಹೆಮ್ಮೆಯ ವಿಚಾರ. ಏರೋ ಇಂಡಿಯಾ ವಸ್ತು ಪ್ರದರ್ಶನ ಪ್ರಾಂಗಣದಲ್ಲಿ ಸ್ಥಳ ಕಾಯ್ದಿರಿಸಿಕೊಳ್ಳಲು ಆಸಕ್ತರು ಈಗಾಗಲೇ ಮುಂದೆ ಬಂದಿರುವುದು ಸಕಾರಾತ್ಮ ಬೆಳವಣಿಗೆ. ರಾಜ್ಯದಲ್ಲಿ ಕೋವಿಡ್ ನಿಯಂತ್ರಣಕ್ಕೆ ಅನೇಕ ಕ್ರಮ ಕೈಗೊಳ್ಳಲಾಗಿದೆ. ಕೇಂದ್ರದ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ", ಎಂದರು.

'ಏರೋ ಇಂಡಿಯಾ–2021 ಕಾರ್ಯಕ್ರಮಕ್ಕೆ ಆಗಮಿಸುವ ಅಂತರರಾಷ್ಟ್ರೀಯ ಗಣ್ಯರು, ಅಧಿಕಾರಿ, ಸಿಬ್ಬಂದಿ ಹಾಗೂ ಸಾರ್ವಜನಿಕರಿಗೆ ಥರ್ಮಲ್ ಸ್ಕ್ರೀನಿಂಗ್ ಮಾಡಲಾಗುವುದು. ಸ್ಯಾನಿಟೈಸೇಷನ್ ಮತ್ತು ಸಾಮಾಜಿಕ ಅಂತರವನ್ನು ಕಡ್ಡಾಯವಾಗಿ ಕಾಯ್ದುಕೊಳ್ಳಲು ಕಟ್ಟುನಿಟ್ಟು ಕ್ರಮ ಕೈಗೊಳ್ಳಲಾಗುವುದು. ದೇಶದ ವೈಮಾನಿಕ ಮತ್ತು ಬಾಹ್ಯಾಕಾಶ ಉದ್ಯಮಕ್ಕೆ ಕರ್ನಾಟಕ ರಾಜ್ಯ ಶೇ.25ರಷ್ಟು ಕೊಡುಗೆ ನೀಡುತ್ತಿದೆ. ವೈಮಾನಿಕ ಸಂಬಂಧಿತ ರಫ್ತಿಗೆ ಶೇ.65ರಷ್ಟು ಕೊಡುಗೆ ನೀಡಲಾಗುತ್ತಿದೆ. ದೇಶದಲ್ಲೇ ಮೊದಲ ಏರೋಸ್ಪೇಸ್ ನೀತಿ ರೂಪಿಸಿರುವ ರಾಜ್ಯ ಕರ್ನಾಟಕ, ಎಚ್‌ಎಎಲ್, ಬೆಮೆಲ್, ಬಿಇಎಲ್ ನಂತಹ ಪ್ರಮುಖ ಸಾರ್ವಜನಿಕ ವಲಯದ ಸಂಸ್ಥೆಗಳು ಬೆಂಗಳೂರಿನಲ್ಲಿ ಸ್ಥಾಪಿತಗೊಂಡಿವೆ," ಎಂದು ಸಿಎಂ ಹೇಳಿದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:08.10.2020

## 14. ಆನ್‌ಲೈನ್‌ನಲ್ಲಿ ಮಾತ್ರ ಪಾಲಿಕೆ ಸೇವೆಗಳು ಲಭ್ಯ

ನಗರದಲ್ಲಿ ಕೊರೋನಾ ಸೋಂಕು ತೀವ್ರವಾಗಿ ಹರಡುತ್ತಿರುವುದರಿಂದ ಬಿಬಿಎಂಪಿ ವ್ಯಾಪ್ತಿಯ ಆಸ್ತಿ ನೋಂದಣಿ, ತೆರಿಗೆ ಪಾವತಿ, ಕಟ್ಟಡ ನಿರ್ಮಾಣಕ್ಕೆ ಪರವಾನಿಗಿ, ವಾಸಯೋಗ್ಯ ಪ್ರಮಾಣ ಪತ್ರ, ಉದ್ದಿಮೆ ಪರವಾನಿಗಿ, ನವೀಕರಣ ಸೇರಿ ಇನ್ನಿತರೆ ಸೇವೆಗಳನ್ನು ಆನ್‌ಲೈನ್‌ನಲ್ಲಿ ಮಾತ್ರ ಒದಗಿಸುವಂತೆ ಪಾಲಿಕೆಗೆ ನಗರಾಭಿವೃದ್ಧಿ ಇಲಾಖೆ ನಿರ್ದೇಶನ ನೀಡಿದೆ.

ಪಾಲಿಕೆಯಲ್ಲಿ ಈಗಾಗಲೇ ಈಸ್ ಆಫ್ ಡೂಯಿಂಗ್ ಬಿಜಿನೆಸ್ ಮೂಲಕ ಆನ್‌ಲೈನ್ ಸೇವೆ ನೀಡಲಾಗುತ್ತಿದೆ. ಆದರೆ, ಅದರ ಕಾರ್ಯನಿರ್ವಹಣೆ ಆಗುತ್ತಿಲ್ಲ. ಜನರು ಕಚೇರಿಗಳಿಗೆ ಅಲೆದಾಡುತ್ತಿದ್ದು, ಕೊರೋನಾ ಮತ್ತಷ್ಟು ಹರಡುವ ಸಾಧ್ಯತೆಯಿದೆ. ಆದ್ದರಿಂದ ಭೌತಿಕ ಸಂಪರ್ಕಕ್ಕೆ ಬಾರದಂತೆ ಅರ್ಜಿ ವಿಲೇ ಮಾಡಬೇಕಿದೆ. ಪಾಲಿಕೆ ವ್ಯಾಪ್ತಿ ಸೇವೆಗಳನ್ನು ಆನ್‌ಲೈನ್ ಮೂಲಕ ನಿರ್ವಹಿಸುವುದನ್ನು ಕಡ್ಡಾಯಗೊಳಿಸಲು ಸೂಚಿಸಲಾಗಿದೆ.

ಆಸ್ತಿ ನೋಂದಣಿ ತೆರಿಗೆ ಸಂಗ್ರಹ, ಕಟ್ಟಡ ನಿರ್ಮಾಣಕ್ಕೆ ಪರವಾನಿಗಿ, ಕಟ್ಟಡ ನಿರ್ಮಾಣದ ನಂತರ ವಾಸಯೋಗ್ಯ ಪ್ರಮಾಣ ಪತ್ರ, ಇ-ಆಸ್ತಿ ಪತ್ರ, ರಸ್ತೆ ಅಗೆಯುವುದಕ್ಕೆ ಅನುಮತಿ, ಅಗೆದ ರಸ್ತೆ ದುರಸ್ತಿ ನಂತರ ಪರಿಶೀಲಿಸಿ ಒಪ್ಪಿಗೆ, ಹೊಸ ಉದ್ದಿಮೆಗಳ ಆರಂಭಕ್ಕೆ ಪರವಾನಿಗಿ, ಈಗಾಗಲೇ ಇರುವ ಉದ್ದಿಮೆಗಳ ಪರವಾನಿಗಿ ನವೀಕರಣವನ್ನು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಸೇವೆ ಪಡೆಯಬೇಕು. ಈ ಎಲ್ಲದರ ಶುಲ್ಕವನ್ನು ಆನ್‌ಲೈನ್‌ನಲ್ಲಿ ಪಾವತಿಸಬೇಕಾಗುತ್ತದೆ. ಹಾಸ್ಟೆಲ್, ಪಿಜಿ, ಪ್ಲೇ ಸ್ಕೂಲ್‌ಗಳಿಗೆ ಮಂಜೂರಾತಿ, ಸಭಾಂಗಣ, ಮನರಂಜನಾ ಕೇಂದ್ರಗಳಿಗೆ ಪರವಾನಿಗಿಯನ್ನು ಆನ್‌ಲೈನ್‌ಮಯ ಮಾಡಲು ನಿರ್ದೇಶನ ನೀಡಲಾಗಿದೆ.

ಸರ್ಕಾರದ ನಿರ್ದೇಶನದಂತೆ ಬಿಬಿಎಂಪಿಯಲ್ಲಿ ಆನ್‌ಲೈನ್ ಸೇವೆಯನ್ನು ಶೇ.100 ಜಾರಿಗೊಳಿಸ ಲಾಗುವುದು. ಈ ಬಗ್ಗೆ ಅಧಿಕಾರಿಗಳೊಂದಿಗೆ ಸಭೆ ಮಾಡಲಾಗಿದ್ದು, ಆನ್‌ಲೈನ್ ಸೌಲಭ್ಯವಿರುವ ಯಾವುದೇ ಅರ್ಜಿಗಳನ್ನು ಆಫ್‌ಲೈನ್‌ನಲ್ಲಿ (ಭೌತಿಕವಾಗಿ) ಸ್ವೀಕರಿಸದಂತೆ ನಿರ್ದೇಶನ ನೀಡಲಾಗಿದೆ.

ಆಧಾರ: ವಿಜಯವಾಣಿ, ದಿನಾಂಕ:08.10.2020

## 15. ಹೈಡೆನ್ಸಿಟಿ ಕಾರಿಡಾರ್ ಹೊಣೆ ಬಿಬಿಎಂಪಿಗೆ ವಹಿಸಿ

ಬೆಂಗಳೂರಿನ ಅತಿ ಹೆಚ್ಚು ಸಂಚಾರಿ ದಟ್ಟಣೆ (ಹೈಡೆನ್ಸಿಟಿ ಕಾರಿಡಾರ್) ಹೊಂದಿರುವ 12 ಪ್ರಮುಖ ರಸ್ತೆಗಳ ನಿರ್ವಹಣೆ ಜವಾಬ್ದಾರಿಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಕೆಆರ್‌ಡಿಸಿಎಲ್) ಸಂಸ್ಥೆಗೆ ವಹಿಸುವ ನಿರ್ಧಾರವನ್ನು ಮರುಪರಿಶೀಲಿಸಿ, ಬಿಬಿಎಂಪಿಗೆ ವಹಿಸುವಂತೆ ಕೋರಿ ಪಾಲಿಕೆ ಆಯುಕ್ತ ಎನ್.ಮಂಜುನಾಥ್ ಪ್ರಸಾದ್ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಕೆಆರ್‌ಡಿಸಿಎಲ್‌ಗೆ ಈ ರಸ್ತೆಗಳನ್ನು ನಿರ್ವಹಣೆ ಮಾಡುವುದು ಕಷ್ಟವಾಗಿದೆ ಎಂದು ಕಾರಣ ಸಹಿತ ವಿವರಿಸಿ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದಾರೆ. ಸಂಚಾರಿ ದಟ್ಟಣೆ ಹೊಂದಿರುವ 190 ಕಿ.ಮೀ ಉದ್ದದ 12 ಪ್ರಮುಖ ರಸ್ತೆಗಳನ್ನು ಕೆಆರ್‌ಡಿಸಿಎಲ್‌ಗೆ ಹಸ್ತಾಂತರಕ್ಕೆ ರಾಜ್ಯ ಸರ್ಕಾರ ತೀರ್ಮಾನಿಸಿತ್ತು. ಕೆಆರ್‌ಡಿಸಿಎಲ್ ಮತ್ತು ಬಿಬಿಎಂಪಿ ಅಧಿಕಾರಿಗಳು ಜಂಟಿ ಪರಿಶೀಲನೆ ನಡೆಸಿ, 2020-21ನೇ ಸಾಲಿನಲ್ಲಿ ಪ್ರಾರಂಭಿಕ ಹಂತದಲ್ಲಿ ಸುಧಾರಣೆ ಮೊತ್ತ ರೂ.335 ಕೋಟಿ ಹಾಗೂ ವಾರ್ಷಿಕ ದೈನಂದಿನ ನಿರ್ವಹಣೆ ಮೊತ್ತ ರೂ.142 ಕೋಟಿ ಸೇರಿದಂತೆ ಒಟ್ಟು ರೂ.477 ಕೋಟಿಗೆ ಅಂದಾಜು ಪಟ್ಟಿ ಸಿದ್ಧಪಡಿಸಿ ನಗರಾಭಿವೃದ್ಧಿ ಇಲಾಖೆಗೆ ಸಲ್ಲಿಸಿದ್ದರು. ಸರ್ಕಾರದ ಆರ್ಥಿಕ ಇಲಾಖೆ ರೂ.400 ಕೋಟಿ ನೀಡಲು ಒಪ್ಪಿಗೆ ನೀಡಿ ಉಳಿದ ರೂ.77 ಕೋಟಿ ಬಿಬಿಎಂಪಿ ಭರಿಸುವಂತೆ ಸೂಚಿಸಿತ್ತು. ಈ ಹಿನ್ನೆಲೆಯಲ್ಲಿ ಬಿಬಿಎಂಪಿಗೆ ವಹಿಸಲು ತಿಳಿಸಿದರು.

**ರೂ.400 ಕೋಟಿ ಬಿಡುಗಡೆಗೂ ಮನವಿ:** 12 ಹೈಡೆನ್ಸಿಟಿ ಕಾರಿಡಾರ್ ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ಯೋಜನೆ ಅನುಷ್ಠಾನ ಪ್ರಕ್ರಿಯೆಯನ್ನು ಬಿಬಿಎಂಪಿಗೆ ಮರು ನಿಯೋಜನೆ ಮಾಡಿ, 12 ರಸ್ತೆಯ ಅಭಿವೃದ್ಧಿಗೆ ಆರ್ಥಿಕ ಇಲಾಖೆ ಬಿಡುಗಡೆಗೆ ಘೋಷಿಸಿದ ರೂ.400 ಕೋಟಿ ಅನುದಾನವನ್ನು ಪಾಲಿಕೆಗೆ ಬಿಡುಗಡೆಗೆ ಅನುಮೋದನೆ ನೀಡುವಂತೆ ಆಯುಕ್ತರು ಮನವಿ ಮಾಡಿದ್ದಾರೆ.

ಆಧಾರ: ಕನ್ನಡ ಪ್ರಭ, ದಿನಾಂಕ:09.10.2020

## 16. ರಸ್ತೆಗುಂಡಿ ಮಾಹಿತಿಗೆ ಪ್ರತ್ಯೇಕ ವೆಬ್ ಆ್ಯಪ್ ಅಭಿವೃದ್ಧಿಗೆ ಸೂಚನೆ

ನಗರದ ರಸ್ತೆ ಗುಂಡಿ ದುರಸ್ತಿ ಬಗ್ಗೆ ಪಾರದರ್ಶಕತೆ ಕಾಯ್ದುಕೊಳ್ಳುವ ಉದ್ದೇಶದಿಂದ ಹಾಗೂ ಮೇಲ್ವಿಚಾರಣೆ ನಡೆಸಲು ಪ್ರತ್ಯೇಕ ವೆಬ್ ತಂತ್ರಾಂಶ ಅಭಿವೃದ್ಧಿಗೆ ಬಿಬಿಎಂಪಿ ಮುಂದಾಗಿದೆ. ನಗರದ ಯಾವ ರಸ್ತೆಗಳಲ್ಲಿ ಗುಂಡಿ ಇವೆ. ಎಷ್ಟು ರಸ್ತೆಗಳು ಗುಂಡಿ ಮುಕ್ತವಾಗಿವೆ. ಯಾವ ರಸ್ತೆಯಲ್ಲಿ ಗುಂಡಿ ಮುಚ್ಚುವ ಕಾರ್ಯ ನಡೆಯುತ್ತಿದೆ ಸೇರಿದಂತೆ ಇತರೆ ಮಾಹಿತಿ ಲಭ್ಯವಾಗುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಪ್ರತ್ಯೇಕ ವೆಬ್ ತಂತ್ರಾಂಶ ರೂಪಿಸಲು ಸೂಚಿಸಿದ್ದಾರೆ. ಜೊತೆಗೆ ಬಿಬಿಎಂಪಿಯ ಡಾಂಬರ್ ಮಿಶ್ರಣ ಘಟಕದ ಕಾರ್ಯ ನಿರ್ವಹಣೆಯ ಬಗ್ಗೆ ನಿಗಾವಹಿಸಲು ಹಾಗೂ ಮೇಲ್ವಿಚಾರಣೆಗೆ ಪ್ರತ್ಯೇಕ ವೆಬ್‌ಸೈಟ್ ಅಭಿವೃದ್ಧಿ ಪಡಿಸುವಂತೆ ಆಡಳಿತಾಧಿಕಾರಿ ಗೌರವ ಗುಪ್ತ ಸೂಚಿಸಿದ್ದಾರೆ.

ತಂತ್ರಾಂಶದಲ್ಲಿ ಪಾಲಿಕೆಯ ಕಾರ್ಯಪಾಲಕ ಎಂಜಿನಿಯರ್‌ಗಳು ತಮ್ಮ ವ್ಯಾಪ್ತಿಯಲ್ಲಿ ರಸ್ತೆ ಗುಂಡಿ ಮುಚ್ಚಲು ಬೇಕಿರುವ ಡಾಂಬರು ಮಿಶ್ರಣ ಪ್ರಮಾಣ, ರಸ್ತೆಗಳ ಹೆಸರು, ರಸ್ತೆ ಗುಂಡಿಗಳ ಸಂಖ್ಯೆ ಹಾಗೂ ರಸ್ತೆ ಗುಂಡಿಗಳ ಅಳತೆ ವಿವರ ದಾಖಲಿಸಬೇಕು. 'ಸಹಾಯ' ಮೊಬೈಲ್ ಅಪ್ಲಿಕೇಷನ್‌ನಲ್ಲಿ ದಾಖಲಾಗುವ ರಸ್ತೆ ಗುಂಡಿಗಳ ದೂರನ್ನು ವೆಬ್ ತಂತ್ರಾಂಶದೊಂದಿಗೆ ಸಮೀಕರಣ ಮಾಡುವುದು. ಸಾರ್ವಜನಿಕರು ನೀಡುವ ದೂರುಗಳನ್ನು ಶೀಘ್ರ ಪರಿಹಾರ ಮಾಡುವಂತೆ ರೂಪಿಸಬೇಕು ಎಂದಿದ್ದಾರೆ.

ಆಧಾರ: ಕನ್ನಡ ಪ್ರಭ, ದಿನಾಂಕ:09.10.2020

## 17.ಸ್ವಯಂ ಮೌಲ್ಯ ಮಾಪನ ಆಸ್ತಿಗಳ ಪರಿಶೀಲನೆಗೆ ಒತ್ತು

ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ಮಾಲೀಕರು 'ಸ್ವಯಂ ಮೌಲ್ಯಮಾಪನ ಯೋಜನೆ' ಅಡಿ ಘೋಷಣೆ (ಆಸ್ತಿ ಮಾಲೀಕರೇ ಅವರ ಆಸ್ತಿ ವಿವರ ಘೋಷಿಸಿಕೊಳ್ಳುವುದು) ಮಾಡಿಕೊಂಡಿರುವ ಆಸ್ತಿ ವಿವರದ ಬಗ್ಗೆ ಪರಿಶೀಲನೆ ನಡೆಸುವಂತೆ ಕಂದಾಯ ವಿಭಾಗದ ಅಧಿಕಾರಿಗಳಿಗೆ ಬಿಬಿಎಂಪಿ ಆಡಳಿತಾಧಿಕಾರಿ ಗೌರವ ಗುಪ್ತ ಸೂಚನೆ ನೀಡಿದರು.

ಮಲ್ಲೇಶ್ವರದ ಐಪಿಪಿ ಕೇಂದ್ರದಲ್ಲಿ ಪಾಲಿಕೆ ಆಡಳಿತಾಧಿಕಾರಿ ಗೌರವ ಗುಪ್ತ ಹಾಗೂ ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ್ ಪ್ರಸಾದ್ ಅವರ ನೇತೃತ್ವದಲ್ಲಿ ಪಾಲಿಕೆ ಕಂದಾಯ ವಿಭಾಗದ ಆಸ್ತಿ ತೆರಿಗೆ ಸಂಗ್ರಹ ಪರಿಶೀಲನಾ ಸಭೆ ನಡೆಯಿತು.

ಈ ವೇಳೆ ಮಾತನಾಡಿದ ಗೌರವ್ ಗುಪ್ತ, ನಗರದಲ್ಲಿ 'ಸ್ವಯಂ ಮೌಲ್ಯಮಾಪನ ಯೋಜನೆ' ಅಡಿ ಆಸ್ತಿ ಘೋಷಿಸಿಕೊಂಡಿರುವವರ ಬಗ್ಗೆ ಕೆಲವು ನಿರ್ದಿಷ್ಟ ಪ್ರಕರಣಗಳಲ್ಲಿ ಗೊಂದಲ ಹಾಗೂ ತಪ್ಪು ಮಾಹಿತಿ ಇದ್ದು, ಇದನ್ನು ಪರಿಶೀಲಿಸಿ ತಪ್ಪಿದ್ದಲ್ಲಿ ಸರಿಪಡಿಸಿಕೊಳ್ಳುವಂತೆ ಸೂಚನೆ ನೀಡಿದರು.

ಪ್ರತಿ ವಲಯದಲ್ಲೂ 'ಖಾತಾ ಮೇಳ' ಏರ್ಪಡಿಸಿ, ಆಸ್ತಿ ಮಾಲೀಕರಿಗೆ ನಿಗದಿಯ ಸಮಯದಲ್ಲಿ ಖಾತೆಗಳನ್ನು ನೀಡಬೇಕು. ಈ ಮೂಲಕ ಹೆಚ್ಚು ಆಸ್ತಿಗಳನ್ನು ಆಸ್ತಿ ತೆರಿಗೆ ವ್ಯಾಪ್ತಿಗೆ ಸೇರ್ಪಡೆ ಮಾಡಬೇಕು. ಆಸ್ತಿ ತೆರಿಗೆ ಸಂಗ್ರಹದ ಬಗ್ಗೆ ಪ್ರತಿ ವಾರ ಪರಿಶೀಲನಾ ಸಭೆ ನಡೆಸುವಂತೆ ನಿರ್ದೇಶಿಸಿದರು.

ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಸುಸ್ತಿದಾರರ ಪಟ್ಟಿ ಸಿದ್ಧಪಡಿಸಿ ನೋಟಿಸ್ ಜಾರಿಗೊಳಿಸಬೇಕು. ನೋಟಿಸ್ ನೀಡಿಯೂ ತೆರಿಗೆ ಕಟ್ಟದಿದ್ದರೆ, ಆ ಅಸ್ತಿಗಳನ್ನು ಮುಟ್ಟುಗೋಲು ಅಥವಾ ಬೀಗಮುದ್ರೆ ಹಾಕಬೇಕು. ಇನ್ನೂ ಆಸ್ತಿ ತೆರೆಗೆ ವ್ಯಾಪ್ತಿಗೆ ಸೇರ್ಪಡೆಯಾಗದ ಆಸ್ತಿಗಳನ್ನು ಕೂಡಲೇ ತೆರಿಗೆ ವ್ಯಾಪ್ತಿಗೆ ಸೇರ್ಪಡೆ ಗೊಳಿಸಬೇಕು. ಆಸ್ತಿ ತೆರಿಗೆ ಸಂಗ್ರಹಿಸಲು ಸಮಗ್ರ ಯೋಜನೆ ರೂಪಿಸಿ, ಆಸ್ತಿಗಳನ್ನು ಪರಿಶೀಲಿಸಿ ತೆರಿಗೆ ಸಂಗ್ರಹಿಸಬೇಕು. ಜಿಪಿಎಸ್ ಮ್ಯಾಪಿಂಗ್, ಡ್ರೋಣ್ ಸೇರಿದಂತೆ ಇತರೆ ತಂತ್ರಜ್ಞಾನ ಬಳಸಿಕೊಳ್ಳಲು ಸೂಚಿಸಿದರು.

ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಮಾತನಾಡಿ, ವಲಯವಾರು ಅತಿ ಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ 100 ಸುಸ್ತಿದಾರರ ಪಟ್ಟಿ ಸಿದ್ಧಪಡಿಸಿ ಅವರಿಗೆ ನೋಟಿಸ್ ಜಾರಿಗೊಳಿಸ

ಬೇಕು. ಆಸ್ತಿ ತೆರಿಗೆ ಸಂಗ್ರಹ ಕಾರ್ಯ ಸಮರ್ಪಕವಾಗಿ ನಿರ್ವಹಿಸಬೇಕು. ಹೊಸ ಆಸ್ತಿಗಳನ್ನು ಆಸ್ತಿ ತೆರಿಗೆ ವ್ಯಾಪ್ತಿಗೆ ತರಲು ಹಾಗೂ ಖಾತಾ ನೀಡುವ ಸಂಬಂಧ ಕ್ರಮ ವಹಿಸಲು ನಿರ್ದೇಶನ ನೀಡಿದರು.

ಆಧಾರ: ಉದಯವಾಣಿ, ದಿನಾಂಕ:10.10.2020

## 18. ಬಿಡದಿಯಲ್ಲಿ ತ್ಯಾಜ್ಯ ವಿದ್ಯುತ್ ಯೋಜನೆ

ಬಿಡದಿಯಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ (ಕೆಪಿಸಿಎಲ್) ವತಿಯಿಂದ 11.5 ಮೇ ವ್ಯಾ. ಸಾಮರ್ಥ್ಯದ ತ್ಯಾಜ್ಯ ವಿದ್ಯುತ್ ಯೋಜನೆ ಆರಂಭಿಸಲು ಇಂಧನ ಇಲಾಖೆ ಖಾತೆ ಹೊಂದಿರುವ ಸಿಎಂ ಯಡಿಯೂರಪ್ಪ ಒಪ್ಪಿಗೆ ಸೂಚಿಸಿದರು.

ಉದ್ದೇಶಿತ ಘಟಕದಲ್ಲಿ ಪ್ರತಿನಿತ್ಯ 600 ಟನ್ ತ್ಯಾಜ್ಯವನ್ನು ವಿದ್ಯುತ್ ಉತ್ಪಾದಿಸುವ ಗುರಿ ಹೊಂದಲಾಗಿದೆ. ಯೋಜನೆಯನ್ನು ಎರಡು ವರ್ಷದಲ್ಲಿ ಪೂರ್ಣಗೊಳಿಸಲು ಗಡುವು ವಿಧಿಸಿದ್ದು, 260 ಕೋಟಿ ರೂ. ವೆಚ್ಚವಾಗಲಿದೆ. ಈ ಯೋಜನೆಗೆ ಇತ್ತೀಚೆಗಷ್ಟೆ ನಡೆದ ಸಂಸ್ಥೆಯ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ.

ಘಟಕಕ್ಕೆ ಬಿಬಿಎಂಪಿ ವ್ಯಾಪ್ತಿಯಿಂದ ನಿತ್ಯ 600 ಟನ್ ತ್ಯಾಜ್ಯ ರವಾನೆಯಾಗಲಿದೆ. ಪಾಲಿಕೆಯ ಶೇ. 25ರಷ್ಟು ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಿದಂತಾಗುತ್ತದೆ. ಘಟಕ ಸ್ಥಾಪನೆಗೆ ಬೇಕಿರುವ ಬಂಡವಾಳವನ್ನು ಕೆಪಿಸಿಎಲ್ ಹಾಗೂ ಬಿಬಿಎಂಪಿ ಸಮನಾಗಿ ಹೂಡಿಕೆ ಮಾಡಲಿವೆ. ಘಟಕದ ನಿರ್ವಹಣೆಯನ್ನು ಕೆಪಿಸಿಎಲ್ ವಹಿಸಲಿದೆ. ಇಷ್ಟು ಪ್ರಮಾಣದ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವುದರಿಂದ ಪಾಲಿಕೆಗೆ ವಾರ್ಷಿಕ ರೂ. 14 ಕೋಟಿ ನಿರ್ವಹಣಾ ವೆಚ್ಚವನ್ನು ಕಡಿಮೆ ಮಾಡಿದಂತಾಗಿದೆ.

**ನೋಯಿಡಾ ಕಂಪನಿಗೆ ನಿರ್ಮಾಣ ಹೊಣೆ:** ಘಟಕದ ನಿರ್ಮಾಣದ ಹೊಣೆಯನ್ನು ನೋಯಿಡಾದ ಐಎಸ್‌ಜಿಇಸಿ ಹೆವಿ ಎಂಜಿನಿಯರಿಂಗ್ ಲಿ. ಕಂಪನಿಗೆ ನೀಡಲಾಗಿದೆ. ಮೆ.ಹಿಟಾಚಿ ಜೋಸ್ ಇಂಡಿಯಾ ಪ್ರೈ.ಲಿ. ಕಂಪನಿಯ ಸಹಭಾಗಿತ್ವ ಹೊಂದಿರುತ್ತದೆ. ಯೋಜನೆಗೆ ಬಳಸುವ ಉಪಕರಣಗಳು ದೇಶಿಯವಾಗಿದ್ದು, ಪ್ರಧಾನಿ ಘೋಷಿತ 'ಆತ್ಮನಿರ್ಭರ್ ಭಾರತ್' ಯೋಜನೆಯಡಿ ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ಕೆಪಿಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:10.10.2020

## 19. ಅನಾಮಧೇಯ ಪತ್ರದ ಆಧಾರದಲ್ಲಿ ತನಿಖೆಯಿಲ್ಲ

ಅಧಿಕಾರಿಗಳ ವಿರುದ್ಧ ಇಷ್ಟು ದಿನ ಬರೆಯುತ್ತಿದ್ದ ಮೂಗರ್ಜಿ ಸಂಸ್ಕೃತಿಯಿಂದ ಅನೇಕ ಅಧಿಕಾರಿಗಳಿಗೆ ಆಗುತ್ತಿದ್ದ ಸಮಸ್ಯೆಯನ್ನು ತಪ್ಪಿಸಲು ಸರ್ಕಾರ ಮುಂದಾಗಿದ್ದು, ಇನ್ನು ಮುಂದೆ ಅನಾಮಧೇಯ ಪತ್ರದ ಆಧಾರದಲ್ಲಿ ತನಿಖೆ ನಡೆಸುವಂತಿಲ್ಲ ಎಂದು ಆದೇಶ ಹೊರಡಿಸಿದೆ.

ಈ ಸಂಬಂಧ ಆದೇಶ ಹೊರಡಿಸಿರುವ ಸರ್ಕಾರದ ಮುಖ್ಯ ಕಾರ್ಯದರ್ಶಿ ವಿಜಯ ಭಾಸ್ಕರ ಅವರು, ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಬರುವ ಅನಾಮಧೇಯ ದೂರುಗಳ ಬಗ್ಗೆ ಕ್ರಮಕೈಗೊಳ್ಳುವಂತಿಲ್ಲ, ಪೂರ್ಣ ವಿಳಾಸ, ದಾಖಲೆ ಇದ್ದರೆ ಮಾತ್ರ ತನಿಖೆ ನಡೆಸುವಂತೆ ಸೂಚನೆ ನೀಡಿದ್ದಾರೆ. ಯಾವುದೇ ಮಾಹಿತಿಯಿಲ್ಲದೇ, ಪತ್ರ ಬರೆದರೂ ಆ ಪತ್ರದ ಆಧಾರದಲ್ಲಿ ತನಿಖೆ ನಡೆಸಲಾಗುತ್ತಿತ್ತು. ಇದರಿಂದ ಅನೇಕ ಅಧಿಕಾರಿಗಳಿಗೆ ಸಮಸ್ಯೆಯಾಗುತ್ತದೆ. ಅನಾಮಧೇಯ ಪತ್ರಗಳ ಆಧಾರದಲ್ಲಿ ತನಿಖೆ ನಡೆಸದಂತೆ ಕ್ರಮವಹಿಸಲು ಸರ್ಕಾರಿ ನೌಕರರ ಸಂಘ ಮನವಿ ಮಾಡಿತ್ತು. ಇದರ ಅನ್ವಯ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಸ್ವೀಕೃತವಾಗುವ ಅನಾಮಧೇಯ ದೂರುಗಳ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಕೆಲವು ಸೂಚನೆಗಳನ್ನು ನೀಡಲಾಗಿದೆ. ಇಂತಹ ದೂರುಗಳು ಕೆಲವು ಸಂದರ್ಭಗಳಲ್ಲಿ ವೈಯುಕ್ತಿಕ ದ್ವೇಷ, ಅಸೂಯೆ ಅಥವಾ ಪೂರ್ವಗ್ರಹ ಪೀಡಿತವಾಗಿರುತ್ತದೆ. ದೂರುಗಳಿಗೆ ಪೂರಕವಾದ ಮಾಹಿತಿ, ದಾಖಲೆಗಳನ್ನು ಸಾಮಾನ್ಯವಾಗಿ ಲಗತ್ತಿಸಿರುವುದಿಲ್ಲ. ಇಂತಹ ದೂರುಗಳಿಂದಾಗಿ ಸರ್ಕಾರಿ ಅಧಿಕಾರಿ, ನೌಕರರ ದೈನಂದಿನ ಕೆಲಸ ಕಾರ್ಯಗಳಲ್ಲಿ ಹಸ್ತಕ್ಷೇಪ ಉಂಟಾಗುವುದಲ್ಲದೇ ದಕ್ಷ ಮತ್ತು ಪ್ರಾಮಾಣಿಕ ನೌಕರರ ವಿಶ್ವಾಸಾರ್ಹತೆಗೆ ಧಕ್ಕೆ ಉಂಟಾಗುತ್ತದೆ. ಅವರು ಮುಕ್ತ ಮತ್ತು ನಿರ್ಭೀತರಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಆಧಾರ: ವಿಶ್ವವಾಣಿ, ದಿನಾಂಕ:11.10.2020

## 20. ರಾಜ್ಯಕ್ಕೆ ಬರಲಿದೆ ಪಡಿತರ ಎಟಿಎಂ

ಪಡಿತರ ಪಡೆಯಲು ಸಾಲು ನಿಲ್ಲುವುದನ್ನು ತಡೆಯುವ ಉದ್ದೇಶದಿಂದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಪಡಿತರ ಎಟಿಎಂ ಶೀಘ್ರದಲ್ಲಿಯೇ ತಲೆ ಎತ್ತಲಿದೆ. ಪಡಿತರ ಚೀಟಿ ಹೊಂದಿರುವ ಫಲಾನುಭವಿಗಳಿಗೆ ಅಕ್ಕಿ ವಿತರಿಸುವ ಎಟಿಎಂ ಯಂತ್ರಗಳು ರಾಜ್ಯದಲ್ಲಿ ಶೀಘ್ರದಲ್ಲೇ ಸ್ಥಾಪನೆಯಾಗಲಿದೆ. ಪ್ರಾಯೋಗಿಕವಾಗಿ ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ಇನ್ನೊಂದು ಭಾಗದಲ್ಲಿ ಆರಂಭವಾಗಲಿದೆ. ಸಾರ್ವಜನಿಕರ ಪ್ರತಿಕ್ರಿಯೆ ನೋಡಿಕೊಂಡು ಹಂತಹಂತವಾಗಿ ರಾಜ್ಯಾದ್ಯಂತ ಅಳವಡಿಸಲು ಸರ್ಕಾರ ಮುಂದಾಗಿದೆ.

ಕೇಂದ್ರ ಸರ್ಕಾರದ ಯೋಜನೆಯಲ್ಲಿ ಸ್ವಯಂ ಚಾಲಿತ ವಿತರಣಾ ವ್ಯವಸ್ಥೆಯನ್ನು ದೇಶ್ಯಾದಂತ ಅಳವಡಿಸಲಾಗುತ್ತಿದೆ. ಕರ್ನಾಟಕ, ಉತ್ತರ ಪ್ರದೇಶ, ಹರಿಯಾಣ, ಮಹಾರಾಷ್ಟ್ರ ಮತ್ತು ಉತ್ತರಖಂಡ್‌ನಲ್ಲಿ ಇಂತಹ ಎಟಿಎಂಗಳನ್ನು ಆರಂಭಿಸಲಾಗುತ್ತಿದೆ ಎಂದು ತಿಳಿದುಬಂದಿದೆ.

ಈ ಎಟಿಎಂ ಮೂಲಕ ಬಿಪಿಎಲ್ ಕಾರ್ಡ್ ಹೊಂದಿರುವವರು ಪಡಿತರವನ್ನು ಬಿಡಿಸಿಕೊಳ್ಳಬಹುದಾಗಿದೆ. ಎಟಿಎಂಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರದೊಂದಿಗೆ ನಿಕಟ ಸಂಪರ್ಕದಲ್ಲಿದ್ದು, ಇದರ ಹೊಣೆಯನ್ನು ಜಂಟಿ ನಿರ್ದೇಶಕರಿಗೆ ಹೆಚ್ಚುವರಿಯಾಗಿ ವಹಿಸಲಾಗುವುದು. ಬಡವರು ಅಧಿಕ ಸಂಖ್ಯೆಯಲ್ಲಿರುವ ಸ್ಥಳಗಳನ್ನು ಗುರುತಿಸಿ ಅಂತಹ ಕಡೆಗಳಲ್ಲಿ ಈ ಯಂತ್ರಗಳನ್ನು ಸ್ಥಾಪಿಸಲಾಗುವುದು ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಯಂತ್ರಕ್ಕೆ ಈ ಮೊದಲೇ ಎಷ್ಟು ಪ್ರಮಾಣದಲ್ಲಿ ಅಕ್ಕಿ ನೀಡಬೇಕೆಂಬುದು ಹಾಗೂ ಪಡಿತರ ಚೀಟಿದಾರರ ಮಾಹಿತಿ ದಾಖಲಾಗಿರುತ್ತದೆ. ಒಂದು ವೇಳೆ ವ್ಯಕ್ತಿ 2 ಬಾರಿ ಅಕ್ಕಿಗೆ ಬಂದರೆ ಯಂತ್ರದ ಬಳಿ ಇರುವ ಕ್ಯಾಮೆರಾಗಳು ಆತನ ಚಹರೆಯನ್ನು ಪತ್ತೆ ಹಚ್ಚುತ್ತವೆ. ಒಬ್ಬ ವ್ಯಕ್ತಿಗೆ ಇಷ್ಟೇ ಅಕ್ಕಿ ಎಂದು ನಿಗದಿ ಮಾಡಿ ಎಟಿಎಂಗಳಲ್ಲಿ ನೀಡಲಾಗುವುದು ಎಂದು ಹೇಳಲಾಗಿದೆ. ಯಂತ್ರದಲ್ಲಿ ಹಣ ಹಾಕಿದರೆ ಅಕ್ಕಿ ಸಿಗುತ್ತದೆ. ಜನರು ಬ್ಯಾಗ್‌ಗಳಲ್ಲಿ ಕೊಳವೆಯಿಂದ ಬರುವ ಅಕ್ಕಿಯನ್ನು ಹಿಡಿದುಕೊಳ್ಳಬೇಕು. ಇದರಿಂದಾಗಿ ನ್ಯಾಯ ಬೆಲೆ ಅಂಗಡಿಗಳ ಎದುರು ಜನ ಸರತಿಸಾಲಿನಲ್ಲಿ ನಿಲ್ಲುವ ಬದಲು ಸುಲಭವಾಗಿ ಅಕ್ಕಿ ಪಡೆಯಬಹುದಾಗಿದೆ.

ರಾಜ್ಯದ ಸುಮಾರು 4.3 ಕೋಟಿಗೂ ಅಧಿಕ ಜನರು ಪಡಿತರ ಆಹಾರ ಧಾನ್ಯ ಪಡೆಯಲು ತಮ್ಮ ಕೆಲಸ ಕಾರ್ಯ ಬಿಟ್ಟು ಗಂಟೆಗಟ್ಟಲೇ ಕಾಯಬೇಕಾದ ಪರಿಸ್ಥಿತಿ ಇದೆ. ಇದನ್ನು ತಡೆಯಲು ಮತ್ತು ಕೊರೋನಾ ಕಾರಣದಿಂದ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಉದ್ದೇಶದಿಂದ ಅಕ್ಕಿ ಎಟಿಎಂ ಅಳವಡಿಸಲು ಚಿಂತನೆ ನಡೆದಿದೆ ಎಂದು ಹೇಳಲಾಗಿದೆ. ಈಗಾಗಲೇ ರಾಜ್ಯಾದ್ಯಂತ ಪಿಡಿಎಸ್ ಮತ್ತು ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ 800 ವಾಟರ್ ಎಟಿಎಂಗಳನ್ನು ಸ್ಥಾಪಿಸಲಾಗಿದೆ. ಅದೇ ರೀತಿಯಲ್ಲಿ ಅಕ್ಕಿ ಎಟಿಎಂ ವ್ಯವಸ್ಥೆಯನ್ನು ಅಳವಡಿಸಲಾಗುವುದು. ಮೂಲಗಳ ಪ್ರಕಾರ ಅಕ್ಕಿ ಎಟಿಎಂಗಳಲ್ಲಿ 100 ಕೆಜಿಯಿಂದ 500 ಕೆಜಿ ಸಾಮರ್ಥ್ಯವಿರುವ ಸಾಧ್ಯತೆಯಿದ್ದು, ಬೇಡಿಕೆಗನುಗುಣವಾಗಿ

ಯಂತ್ರಗಳನ್ನು ಅಳವಡಿಸಲಾಗುತ್ತಿದೆ. ಪ್ರಸ್ತುತ ಅನ್ನಭಾಗ್ಯ ಯೋಜನೆಯಲ್ಲಿ ಸರ್ಕಾರ 1.27 ಕೋಟಿ ಕುಟುಂಬಕ್ಕೆ ಅಕ್ಕಿ, ಧಾನ್ಯ ಮತ್ತಿತರ ಅಗತ್ಯ ವಸ್ತುಗಳನ್ನು ಪ್ರತಿ ತಿಂಗಳು ಪೂರೈಸುತ್ತಿದೆ. ಬಿಪಿಎಲ್ ಕಾರ್ಡ್‌ದಾರರಿಗೆ ಉಚಿತವಾಗಿ ಧಾನ್ಯಗಳನ್ನು ನೀಡಲಾಗುತ್ತಿದ್ದು, ಎಪಿಎಲ್ ಕಾರ್ಡ್‌ದಾರರಿಗೆ ಸಾಮಾನ್ಯ ದರದಲ್ಲಿ ವಿತರಿಸಲಾಗುತ್ತಿದೆ. ಫಲಾನುಭವಿಗಳಿಗೆ ಎಟಿಎಂ ಕಾರ್ಡ್‌ಗಳನ್ನು ನೀಡಲಾಗುವುದು.

ಆಧಾರ: ವಿಶ್ವವಾಣಿ, ದಿನಾಂಕ:14.10.2020

## 21. ವಾರ್ಡ್ ಪುನರ್‌ವಿಂಗಡಣೆಗೆ ಸಮಿತಿ

ಪಾಳಿಕೆಯ ವಾರ್ಡ್‌ಗಳನ್ನು 243ಕ್ಕೆ ಏರಿಕೆ ಮಾಡಿ ಹಾಗೂ ಅಷ್ಟೆ ಪ್ರಮಾಣದ ಸದಸ್ಯರನ್ನು ನಿಗದಿ ಮಾಡಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದ್ದು ವಾರ್ಡ್ ಪುನರ್ ವಿಂಗಡಣಾ ಸಮಿತಿಯನ್ನು ರಚಿಸಿದೆ. ವಾರ್ಡ್‌ಗಳ ಪುನರ್ ವಿಂಗಡಣೆಗಾಗಿ ಆರು ತಿಂಗಳ ಅವಧಿಗೆ ಸೀಮಿತವಾಗಿ ಅಧ್ಯಕ್ಷರು ಬಿಬಿಎಂಪಿ ಆಯುಕ್ತರು, ಸದಸ್ಯರಾಗಿ ಬೆಂಗಳೂರು ಜಿಲ್ಲಾಧಿಕಾರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರನ್ನು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತರನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ ಮಾಡಿ ಸಮಿತಿಯನ್ನು ರಚನೆ ಮಾಡಲಾಗಿದೆ.

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ ಉಭಯ ಸದನಗಳಲ್ಲಿ ಅಂಗೀಕಾರ ದೊರೆತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ತಕ್ಷಣದಿಂದ ಜಾರಿಗೆ ಬರುವಂತೆ ಬಿಬಿಎಂಪಿ ಕೌನ್ಸಿಲರ್‌ಗಳ ಸಂಖ್ಯೆಯನ್ನು 243 ಎಂದು ನಿಗದಿ ಮಾಡಿ ಅಧಿಸೂಚನೆ ಹೊರಡಿಸಿರುವ ಹಿನ್ನೆಲೆಯಲ್ಲಿ ಈ ಸಮಿತಿ ಆರು ತಿಂಗಳ ಒಳಗಾಗಿ ವಾರ್ಡ್‌ಗಳ ಪುನರ್‌ವಿಂಗಡಣೆ ಸಂಬಂಧಿಸಿದಂತೆ ಸರ್ಕಾರಕ್ಕೆ ವರದಿ ನೀಡಬೇಕಾಗುತ್ತದೆ.

ಹಾಲಿ ಬಿಬಿಎಂಪಿ 198 ವಾರ್ಡ್‌ಗಳಿದ್ದು, ಅವುಗಳ ಸಂಖ್ಯೆ 250ಕ್ಕೆ ಏರಿಕೆ ಮಾಡುವ ಕುರಿತಂತೆ ವಿಧಾನಮಂಡಲದಲ್ಲಿ ಅಂಗೀಕಾರ ಮಾಡಲಾಗಿರುವ ಅಧಿನಿಯಮಕ್ಕೆ ಈಗಾಗಲೇ ರಾಜ್ಯಪಾಲರು ಒಪ್ಪಿಗೆ ನೀಡಿದ್ದಾರೆ. ಅಧಿನಿಯಮದ ಪ್ರಕಾರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ವಾರ್ಡ್‌ಗಳು ವಿಭಜನೆಯಾಗಲಿವೆ. ವಾರ್ಡ್‌ಸಂಖ್ಯೆ ಹೆಚ್ಚಳ ಮಾಡುವಾಗ ಯಾವ ವಿಧಾನಸಭಾ ಕ್ಷೇತ್ರದ ವಾರ್ಡ್‌ಗಳನ್ನು ಅದೇ ಕ್ಷೇತ್ರ ವ್ಯಾಪ್ತಿಯಲ್ಲಿ ಪುನರ್ ವಿಂಗಡಣೆ ಮಾಡಿ ವಾರ್ಡ್ ಸಂಖ್ಯೆ ಹೆಚ್ಚಿಸಬೇಕು. ಯಾವುದೇ ಕಾರಣಕ್ಕೂ ಒಂದು ಕ್ಷೇತ್ರದ ವಾರ್ಡ್‌ಗಳನ್ನು ಬೇರೆ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಗೆ ಹಂಚಬಾರದು ಎಂದು ಸ್ಪಷ್ಟಪಡಿಸಲಾಗಿದೆ.

ಕಳೆದ ವಿಧಾನಸಭೆ ಅಧಿವೇಶನದಲ್ಲಿ ಶಾಸಕ ಎಸ್. ರಘು ನೇತೃತ್ವದ ಜಂಟಿ ಪರಿಶೀಲನಾ ಸಮಿತಿಯ ಸಲ್ಲಿಸಿರುವ ವಿಶೇಷ ವರದಿಯಲ್ಲಿ ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 198 ರಿಂದ 250ಕ್ಕೆ ಹೆಚ್ಚಳ ಮಾಡುವಂತೆ ಶಿಫಾರಸ್ಸು ಮಾಡಲಾಗಿತ್ತು. ಅದಕ್ಕೆ ವಿಧಾನಸಭೆಯಲ್ಲಿ ಅಂಗೀಕಾರ ದೊರೆತಿತ್ತು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:15.10.2020

## 22. ನಷ್ಟದ ಅಂದಾಜು ಶೀಘ್ರ

ಉತ್ತರ ಕರ್ನಾಟಕದ ಮಳೆ ಮತ್ತು ಪ್ರವಾಹ ಪೀಡಿತ ಜಿಲ್ಲೆಗಳಲ್ಲಿ ಆಗಿರುವ ನಷ್ಟದ ಅಂದಾಜಿಗೆ ಸಮರೋಪಾದಿಯಲ್ಲಿ ಸಮೀಕ್ಷೆ ನಡೆಸಿ, ಒಂದು ವಾರದಲ್ಲಿ ವರದಿ ನೀಡಬೇಕು ಎಂದು. ಪ್ರವಾಹ ಪೀಡಿತ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜೊತೆಗೆ ನಡೆದ ವಿಡಿಯೊ ಸಂವಾದದ ಬಳಿಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಇತರ ಹಿರಿಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಯಡಿಯೂರಪ್ಪ ಈ ಸೂಚನೆ ನೀಡಿದರು.

ಪೂರ್ಣ ಮತ್ತು ಭಾಗಶಃ ಕುಸಿದಿರುವ ಮಣ್ಣಿನ ಮನೆಗಳನ್ನು ನೆಲಸಮಗೊಳಿಸಿ, ಸಿಮೆಂಟ್ ಬಳಸಿ ಹೊಸ ಮನೆಗಳ ನಿರ್ಮಾಣಕ್ಕೆ ತಲಾ ರೂ.5 ಲಕ್ಷ ವಿತರಿಸಲು ಯೋಜನೆಯನ್ನು ರೂಪಿಸಬೇಕು ಎಂದು ಹೇಳಿದರು.

ಉತ್ತರ ಕರ್ನಾಟಕದ ಗ್ರಾಮಾಂತರ ಪ್ರದೇಶಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮಣ್ಣಿನ ಮನೆಗಳು ಇವೆ. ಮಳೆ ಮತ್ತು ಪ್ರವಾಹದಿಂದ ಕೆಲವು ಪೂರ್ಣ ಪ್ರಮಾಣದಲ್ಲೂ, ಮತ್ತೆ ಕೆಲವು ಭಾಗಶಃ ಕುಸಿದಿದೆ. ಭಾಗಶಃ ಕುಸಿದಿದ್ದರೂ ಅವುಗಳನ್ನು ಪೂರ್ಣ ಕುಸಿದಿದೆ ಎಂದೇ ಪರಿಗಣಿಸಿ, ಕಾಂಕ್ರಿಟ್ ಮನೆಗಳನ್ನು ಕಟ್ಟಿಕೊಳ್ಳಲು ತಲಾ ರೂ.5 ಲಕ್ಷ ವಿತರಿಸುವಂತೆ ಮುಖ್ಯಮಂತ್ರಿ ಸೂಚನೆ ನೀಡಿದರು.

ಆಧಾರ: ಪ್ರಜಾವಾಣಿ, ದಿನಾಂಕ:17.10.2020

## 23. ಅನುಮತಿ ಪಡೆಯದೆ ರಸ್ತೆ ಅಗೆದರೆ ರೂ. 25 ಲಕ್ಷ ದಂಡ

ಅನುಮತಿ ಪಡೆಯದೆ ಪಾಲಿಕೆ ವ್ಯಾಪ್ತಿಯ ರಸ್ತೆಗಳನ್ನು ಅಗೆದರೆ ಖಾಸಗಿ ಅಥವಾ ಸರ್ಕಾರಿ ಸ್ವಾಮ್ಯದ ಸಂಸ್ಥೆಗೆ (ಪ್ರತಿ ಪ್ರಕರಣ) ರೂ.25 ಲಕ್ಷ ಹಾಗೂ ಸಾರ್ವಜನಿಕರಿಗೆ ರೂ.10 ಲಕ್ಷ ದಂಡ ವಿಧಿಸುವ ಆದೇಶವನ್ನು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಹೊರಡಿಸಿದ್ದಾರೆ.

ರಾಜ್ಯ ಸರ್ಕಾರದ ಸೂಚನೆ ಅನುಸಾರ ಈ ಕ್ರಮ ಕೈಗೊಳ್ಳಲಾಗಿದೆ. ಇದರನ್ವಯ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸಿಜರ್) ಪಾಲಿಸದಿದ್ದರೆ ಅಥವಾ ಉಲ್ಲಂಘಿಸಿದರೆ ಖಾಸಗಿ ಅಥವಾ ಸರ್ಕಾರಿ ಸ್ವಾಮ್ಯದ ಸಂಸ್ಥೆ ಮತ್ತು ಸಾರ್ವಜನಿಕರಿಗೆ ನಿಗದಿತ ದಂಡ ವಿಧಿಸುವ ಅಧಿಕಾರವನ್ನು ವಾರ್ಡ್‌ನ(ಪ್ರಾಂತೀಯ) ಎಂಜಿನಿಯರ್‌ಗಳಿಗೆ ನೀಡಿದ್ದು, ಕಡ್ಡಾಯವಾಗಿ ಈ ಆದೇಶ ಪಾಲಿಸುವಂತೆ ಸೂಚಿಸಿದ್ದಾರೆ. ನಗರದಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸುವ ಉದ್ದೇಶದಿಂದ ಜಲ ಮಂಡಳಿ, ಬೆಸ್ಕಾಂ, ಗೇಲ್ ಸಂಸ್ಥೆ ಹಾಗೂ ಓಎಫ್‌ಸಿ ಸಂಸ್ಥೆ ಸೇರಿದಂತೆ ಹಲವು ಸಂಸ್ಥೆಗಳಿಗೆ ರಸ್ತೆ ಕತ್ತರಿಸಲು ಎಂಎಆರ್‌ಸಿಎಸ್ ತಂತ್ರಾಂಶದ ಮೂಲಕ ಅನುಮತಿ ನೀಡಲಾಗುತ್ತಿದೆ. ಈ ರೀತಿ ಅನುಮತಿ ಪಡೆದ ಸಂಸ್ಥೆಗಳು ಕಡ್ಡಾಯವಾಗಿ ನಿಯಮ ಪಾಲನೆ ಮಾಡಬೇಕು. ಸಾರ್ವಜನಿಕರ ಹಿತದೃಷ್ಟಿಯಿಂದ ರಸ್ತೆ ಅಗೆಯುವಾಗ ರಾತ್ರಿ ವೇಳೆ ಎಲ್‌ಇಡಿ ಲೈಟ್, ರಸ್ತೆ ಬದಿ ಹೂಳು ತೆರವು ಹಾಗೂ ಬ್ಯಾರಿಕೇಡ್ ಸೇರಿದಂತೆ ಮುಂಜಾಗೃತಾ ಕ್ರಮ ಅನುಸರಿಸಬೇಕು. ಇವುಗಳ ಮೇಲು ವಾರ್ಡ್ ಎಂಜಿನಿಯರ್ ನಿಗಾವಹಿಸಬೇಕು ಎಂದು ಆಯುಕ್ತರು ನಿರ್ದೇಶನ ನೀಡಿದ್ದಾರೆ.

ಆಧಾರ: ಕನ್ನಡಪ್ರಭ, ದಿನಾಂಕ:17.10.2020

## 24. ಜನಪ್ರತಿನಿಧಿಗಳಿಂದ ಸರ್ಕಾರಿ ಶಾಲೆಗಳ ದತ್ತು

ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಅಭಿವೃದ್ಧಿ ಪಡಿಸಲು ಲೋಕಸಭಾ, ರಾಜ್ಯಸಭಾ, ವಿಧಾನಸಭಾ ಹಾಗೂ ವಿಧಾನ ಪರಿಷತ್ ಸದಸ್ಯರು ಉತ್ಸಾಹದಿಂದ ಮುಂದಾಗಿದ್ದಾರೆ ಎಂದು ಶಿಕ್ಷಣ ಸುಧಾರಣೆಗಳ ಸಲಹೆಗಾರ ಪ್ರೊ.ಎಂ.ಆರ್.ದೊರೆಸ್ವಾಮಿ ತಿಳಿಸಿದ್ದಾರೆ.

ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಯಾವುದೇ ಶಿಕ್ಷಣ ಸೌಲಭ್ಯಗಳಿಂದ ವಂಚಿತರಾಗಬಾರದು ಎಂಬ ಆಶಯದೊಂದಿಗೆ ಸರ್ಕಾರಕ್ಕೆ ಶಿಫಾರಸ್ಸು ಸಲ್ಲಿಸಲಾಗಿತ್ತು. 2020–21ನೇ ಸಾಲಿನ ಆಯವ್ಯಯದ ಕ್ರಮ ಸಂಖ್ಯೆ 98ರಲ್ಲಿ ಎಲ್ಲ ಶಾಸಕರುಗಳು ತಮ್ಮ ಪ್ರದೇಶಾಭಿವೃದ್ಧಿ ಅನುದಾನದಡಿಯಲ್ಲಿ ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಅಭಿವೃದ್ಧಿಪಡಿಸುವಂತೆ ಮುಖ್ಯಮಂತ್ರಿ ಯಡಿಯೂರಪ್ಪ ಸೂಚನೆ ನೀಡಿದ್ದರು. ಅದಾದ ಬಳಿಕ ಲೋಕಸಭಾ, ರಾಜ್ಯ ಸಭಾ ಹಾಗೂ ವಿಧಾನ ಪರಿಷತ್ ಸದಸ್ಯರು ಅತಿ ಉತ್ಸಾಹದಿಂದ ಸರ್ಕಾರಿ ಶಾಲೆಗಳನ್ನು ದತ್ತು ಪಡೆಯಲು ಮುಂದಾಗಿದ್ದಾರೆ ಎಂದು ತಿಳಿಸಿದ್ದಾರೆ.

**ಮೂಲಸೌಕರ್ಯ ಕಲ್ಪಿಸಲು ಮನವಿ:** ಮನವಿಗೆ ಸ್ಪಂದಿಸಿ ಈವರೆಗೆ 21 ವಿಶ್ವವಿದ್ಯಾಲಯಗಳು(ಖಾಸಗಿ ಮತ್ತು ಸರ್ಕಾರಿ) ತಲಾ 10 ಸರ್ಕಾರಿ ಶಾಲೆಗಳನ್ನು ದತ್ತು ಪಡೆಯಲು ಮುಂದಾಗಿವೆ. ಸಿನಿಮಾ ನಟ, ನಟಿಯರು, ಬೆಂಗಳೂರಿನಲ್ಲಿರುವ 200 ಐಟಿ ಕಂಪನಿಗಳಿಗೆ ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಅಭಿವೃದ್ಧಿ ಪಡಿಸಲು ನಮ್ಮೊಂದಿಗೆ ಕೈ ಜೋಡಿಸುವಂತೆ ಕೋರಿದ್ದೇವೆ. ಈಗಾಗಲೇ ದತ್ತು ಪಡೆಯಲು ಗುರುತಿಸಿರುವ ಸರ್ಕಾರಿ ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರು, ಶೌಚಗೃಹ, ಶಿಕ್ಷಕರಿಗೆ ಬೇಕಾಗುವ ಸೌಲಭ್ಯಗಳು, ತರಗತಿಗಳಿಗೆ ಬೇಕಾಗುವ ಅಗತ್ಯ ಸವಲತ್ತುಗಳು, ಗ್ರಂಥಾಲಯ, ಕಂಪ್ಯೂಟರ್, ಪೀಠೋಪಕರಣ, ಕಾಂಪೌಂಡ್‌ನಂತಹ ಮೂಲಸೌಕರ್ಯಗಳನ್ನು ಮೊದಲನೇ ಹಂತದಲ್ಲಿ ಕೈಗೊಳ್ಳುವಂತೆ ಸರ್ಕಾರಕ್ಕೆ ದೊರೆಸ್ವಾಮಿ ಮನವಿ ಮಾಡಿದ್ದಾರೆ.

ಆಧಾರ: ವಿಜಯವಾಣಿ, ದಿನಾಂಕ:18.10.2020

## 25. ಅಡುಗೆ ಅನಿಲ ಪಡೆಯಲು ಒಟಿಪಿ ಕಡ್ಡಾಯ

ನವೆಂಬರ್ 1 ರಿಂದ ಗೃಹಬಳಕೆ ಎಲ್‌ಪಿಜಿ ಸಿಲಿಂಟರ್ ಪಡೆಯಲು ನೀವು ನಿಮ್ಮ ಮೊಬೈಲಿಗೆ ಬಂದ ಒಟಿಪಿಯನ್ನು ಡೆಲಿವರಿ ಬಾಯ್‌ಗೆ ನೀಡಬೇಕು. ನಂತರವಷ್ಟೇ ನಿಮಗೆ ಸಿಲಿಂಡರ್ ಸಿಗಲಿದೆ. ಹೊಸ ವ್ಯವಸ್ಥೆಯನ್ನು ಕರ್ನಾಟಕದ 7 ನಗರ ಸೇರಿದಂತೆ 100 ಸ್ಮಾರ್ಟ್ ಸಿಟಿಗಳಲ್ಲಿ ಸರ್ಕಾರಿ ಸ್ವಾಮ್ಯದ ಎಲ್ಲಾ ಅಡುಗೆ ಅನಿಲ ಪೂರೈಕೆ ಕಂಪನಿಗಳು ಜಾರಿಗೊಳಿಸುತ್ತಿವೆ.

ಈಗಾಗಲೇ ಈ ವ್ಯವಸ್ಥೆ ಪ್ರಾಯೋಗಿಕವಾಗಿ ರಾಜಸ್ಥಾನದ ಜೈಪುರದಲ್ಲಿ ಜಾರಿಯಲ್ಲಿದೆ. ಅಲ್ಲಿ ಯಶಸ್ವಿಯಾಗಿರುವುದರಿಂದ ದೇಶದ 100 ಸ್ಮಾರ್ಟ್ ಸಿಟಿಗಳಲ್ಲಿ ಜಾರಿಗೆ ತರಲಾಗುತ್ತಿದೆ. ಇಲ್ಲೂ ಯಶಸ್ವಿಯಾದರೆ ಇನ್ನಿತರ ನಗರಗಳು ಮತ್ತು ಗ್ರಾಮೀಣ ಪ್ರದೇಶದಲ್ಲಿ ಇದೇ ವ್ಯವಸ್ಥೆ ಜಾರಿಗೆ ಬರಲಿದೆ. ಸದ್ಯಕ್ಕೆ 100 ಸ್ಮಾರ್ಟ್ ಪ್ರದೇಶಗಳಲ್ಲಿ ಹಳೆಯ ವ್ಯವಸ್ಥೆಯೇ ಮುಂದುವರೆಯಲಿದೆ.

ಒಟಿಪಿ ಆಧಾರಿತ ಹೊಸ ವ್ಯವಸ್ಥೆ ಗೃಹಬಳಕೆ ಎಲ್‌ಪಿಜಿ ಸಿಲಿಂಡರ್ ಪಡೆಯಲಷ್ಟೇ ಅನ್ವಯಿಸುತ್ತದೆ. ವಾಣಿಜ್ಯ ಬಳಕೆಯ ಸಿಲಿಂಡರ್ ವಿತರಣೆಗೆ ಹಳೆಯ ವ್ಯವಸ್ಥೆಯೇ ಇರಲಿದೆ. ಹೊಸ ಎಇಎಸಿ ವ್ಯವಸ್ಥೆ ಜಾರಿಗೆ ಬಂದ ಮೇಲೆ ಸರಿಯಾದ ಮೊಬೈಲ್ ಸಂಖ್ಯೆಯನ್ನು ಎಲ್‌ಪಿಜಿ ಸಿಲಿಂಡರ್ ವಿತರಿಸುವ ಏಜೆನ್ಸಿಯಲ್ಲಿ ನೋಂದಣಿ ಮಾಡಿಕೊಂಡಿರದ ಅಥವಾ ಅಡ್ರೆಸ್ ಸರಿಯಾಗಿ ಇಲ್ಲದ ಗ್ರಾಹಕರಿಗೆ ಸಮಸ್ಯೆಯಾಗುವ ಸಾಧ್ಯತೆಯಿದೆ. ಅಂತಹ ಸಂದರ್ಭದಲ್ಲಿ ಡೆಲಿವರಿ ಬಾಯ್‌ಗಳೇ ಮೊಬೈಲ್ ನಂಬರ್‌ಗಳನ್ನು ಅಪ್‌ಡೇಟ್ ಮಾಡಿಕೊಡಲಿದ್ದಾರೆ ಎಂದು ಹೇಳಲಾಗಿದೆ.

**ಹೊಸ ವ್ಯವಸ್ಥೆ ಹೇಗಿರಲಿದೆ:–** ಮೊಬೈಲ್‌ನಲ್ಲಿ ಎಲ್‌ಪಿಜಿ ಸಿಲಿಂಡರ್ ಬುಕ್ ಮಾಡಿದಾಗ ಒಂದು ಒಟಿಪಿ ಬರುತ್ತದೆ. ಸಿಲಿಂಡರ್ ವಿತರಿಸಲು ಡೆಲಿವರಿ ಬಾಯ್ ಬಂದಾಗ ಅದನ್ನು ಆತನಿಗೆ ಹೇಳಬೇಕು. ಆತ ಒಟಿಪಿ ಪಡೆದು ತನ್ನ ಉಪಕರಣದಲ್ಲಿ ನಮೂದಿಸಿದ ಬಳಿಕ ಸಿಲಿಂಡರ್ ವಿತರಿಸುತ್ತಾನೆ. ಒಟಿಪಿ ಕಳೆದುಕೊಂಡಿದ್ದರೆ ಅಥವಾ ತಪ್ಪು ಒಟಿಪಿ ನೀಡಿದರೆ ಸಿಲಿಂಡರ್ ಸಿಗುವುದಿಲ್ಲ.

ಆಧಾರ: ವಿಶ್ವವಾಣಿ, ದಿನಾಂಕ:18.10.2020

## 26. 500 ಸರ್ಕಾರಿ ಹೈಸ್ಕೂಲ್ ಮೇಲ್ದರ್ಜೆಗೆ

ಪ್ರತಿ 10 ಕಿ.ಮೀ.ಗೆ ಒಂದು ಸರ್ಕಾರಿ ಪಿಯು ಕಾಲೇಜು ಆರಂಭಿಸುವ ಸಂಕಲ್ಪ ತೊಟ್ಟಿರುವ ರಾಜ್ಯ ಸರ್ಕಾರ ರಾಜ್ಯದಲ್ಲಿ 500 ಸರ್ಕಾರಿ ಹೈಸ್ಕೂಲ್‌ಗಳನ್ನು ಮೇಲ್ದರ್ಜೆಗೆ ಏರಿಸಲು ಮುಂದಾಗಿದೆ. ಮೊದಲ ಹಂತವಾಗಿ 361 ಪ್ರೌಢ ಶಾಲೆಗಳನ್ನು ಆಯ್ಕೆ ಮಾಡಿಕೊಂಡು ಪೂರಕ ಮಾಹಿತಿ ಕಲೆ ಹಾಕುತ್ತಿದೆ.

ಸೌಲಭ್ಯ ಇಲ್ಲದ ಕಾರಣಕ್ಕಾಗಿ ಯಾವೊಬ್ಬ ವಿದ್ಯಾರ್ಥಿಯು ಉನ್ನತ ಶಿಕ್ಷಣದಿಂದ ವಂಚಿತಗೊಳ್ಳಬಾರದು ಎಂಬ ಉದ್ದೇಶ ಸರ್ಕಾರದ್ದು, ಸದ್ಯ ಇರುವ ಪ್ರೌಢ ಶಾಲೆಗಳನ್ನು ಬೇಡಿಕೆಗೆ

ಅನುಸಾರವಾಗಿ ಮೇಲ್ದರ್ಜೆಗೆ ಏರಿಸಿ ಅಲ್ಲಿ ಪಿಯು ಕಾಲೇಜುಗಳನ್ನು ಆರಂಭಿಸಲು ಚಿಂತಿಸಿದೆ. ಇದಕ್ಕೆ ಪೂರಕವಾಗಿ ಪಿಯು ಕಾಲೇಜು ಬೇಡಿಕೆ ಇರುವ ಹೈಸ್ಕೂಲ್‌ಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಹೈಸ್ಕೂಲ್ ಸುತ್ತಲಿನ ಪ್ರದೇಶಗಳಲ್ಲಿ ಎಸ್‌ಎಸ್‌ಎಲ್‌ಸಿಯಿಂದ ಪಿಯುಸಿಗೆ ಬರುವ ವಿದ್ಯಾರ್ಥಿಗಳ ಪ್ರತಿಶತ ಮಾಹಿತಿಯನ್ನು ಸಲ್ಲಿಸುವಂತೆ ಎಲ್ಲ ಡಿಡಿಪಿಐಗಳಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ದೇಶನ ನೀಡಿದೆ.

ರಾಜ್ಯದಲ್ಲಿ ಸರ್ಕಾರಿ, ಅನುದಾನಿತ, ಅನುದಾನ ರಹಿತ 3953 ಪಿಯು ಕಾಲೇಜುಗಳಿವೆ. ಇದರಲ್ಲಿ ಕೇವಲ 1202 ಸರ್ಕಾರಿ ಕಾಲೇಜುಗಳಿದ್ದು, ಇದೀಗ ಏಕಾಏಕಿ 500 ಸರ್ಕಾರಿ ಕಾಲೇಜುಗಳನ್ನು ಆರಂಭಿಸುವ ಸರ್ಕಾರದ ಚಿಂತನೆ ಬಡ ವಿದ್ಯಾರ್ಥಿಗಳಲ್ಲಿ ಸಹಜವಾಗಿ ಹರ್ಷ ಮೂಡಿಸಿದೆ. ಅದರಲ್ಲೂ ಪ್ರಮುಖವಾಗಿ ಗ್ರಾಮೀಣ ಪ್ರದೇಶಗಳಲ್ಲಿಯೇ ಹೆಚ್ಚು ಕಾಲೇಜುಗಳನ್ನು ಸ್ಥಾಪಿಸುವ ಇಂಗಿತವನ್ನು ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ.

ಈಗಾಗಲೇ ರಾಜ್ಯದ ಎಲ್ಲ ಜಿಲ್ಲೆಗಳಿಂದಲೂ ಸರ್ಕಾರಿ ಪಿಯು ಕಾಲೇಜುಗಳ ಬೇಡಿಕೆ ಪಟ್ಟಿಯನ್ನು ಸಲ್ಲಿಸಲಾಗಿದೆ. ಇದರಲ್ಲಿಯೇ ಅಗತ್ಯ ಪ್ರಸ್ತಾವನೆಗಳನ್ನು ಪರಿಗಣಿಸಲಾಗುತ್ತಿದೆ. ಹೊಸ ಪ್ರದೇಶಕ್ಕೆ ಹೊಸ ಕಾಲೇಜಿಗೆ ಮಂಜೂರಾತಿ ನೀಡುವುದರಿಂದ ಸರ್ಕಾರಕ್ಕೆ ಮೂಲಸೌಕರ್ಯದಂತಹ ಸೌಲಭ್ಯ ಕಲ್ಪಿಸಲು ಹೊರೆ ಆಗಲಿದೆ.

ಹೈಸ್ಕೂಲ್‌ಗಳನ್ನೇ ಮೇಲ್ದರ್ಜೆಗೆ ಏರಿಸಲು ಸರ್ಕಾರ ಆಸಕ್ತಿ ತೋರಿದೆ. ಬೇಡಿಕೆಗೆ ತಕ್ಕಂತೆಯೇ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ವಿಭಾಗಗಳನ್ನು ತೆರೆಯುವ ಬಗ್ಗೆಯೂ ಚರ್ಚೆ ಆಗಿದೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಆಧಾರ: ವಿಜಯಕರ್ನಾಟಕ, ದಿನಾಂಕ:20.10.2020

## 27. ಮನೆ ನಿರ್ಮಾಣಕ್ಕೆ ರೂ. 5 ಲಕ್ಷ ಘೋಷಣೆ

ಮಳೆಯಿಂದ ಸಂತ್ರಸ್ತರಾದ ಕುಟುಂಬಗಳಿಗೆ ರಾಜ್ಯ ಸರ್ಕಾರ ಪರಿಹಾರ ಘೋಷಿಸಿದ್ದು, ಸಂಪೂರ್ಣ ಮತ್ತು ಭಾಗಶಃ ಮನೆಗಳಿಗೆ ಹಾನಿ ಆಗಿದ್ದರೆ ತಲಾ ರೂ.5 ಲಕ್ಷ ಪರಿಹಾರ ನೀಡಲು ತೀರ್ಮಾನಿಸಲಾಗಿದೆ. ಈ ಸಂಬಂಧ ರಾಜ್ಯ ಸರ್ಕಾರ ಆದೇಶ ಹೊರಡಿಸಿದ್ದು, ಅಕ್ಟೋಬರ್‌ವರೆಗೆ ಮಳೆ ಮತ್ತು ಪ್ರವಾಹದಿಂದ ಬಾಧಿತರಾದ ಕುಟುಂಬಗಳಿಗೆ ಅನ್ವಯವಾಗಲಿದೆ. ಬಟ್ಟೆ ಮತ್ತು ದಿನಬಳಕೆ ವಸ್ತುಗಳಿಗೆ ಪ್ರತಿ ಕುಟುಂಬಕ್ಕೆ ರೂ.10,000 ಪರಿಹಾರ ನೀಡಲಾಗುವುದು ಎಂದು ಆದೇಶದಲ್ಲಿ ತಿಳಿಸಲಾಗಿದೆ. ಉತ್ತರ ಕರ್ನಾಟಕ ಭಾಗದ ಮಣ್ಣಿನ ಮನೆಗಳ ಪುನರ್ ನಿರ್ಮಾಣಕ್ಕೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೂಚನೆ ನೀಡಿದ್ದಾರೆ.

ಕಲಬುರಗಿ, ಯಾದಗಿರಿ, ವಿಜಯಪುರ ಜಿಲ್ಲೆಯಲ್ಲಿ ಪ್ರವಾಹದಿಂದ ಮನೆ ಕಳೆದುಕೊಂಡವರಿಗೆ ತಕ್ಷಣ ಮನೆ ನಿರ್ಮಿಸಿಕೊಳ್ಳಲು ಪರಿಹಾರ ಹಾಗೂ ಬೆಳೆಹಾನಿಗೆ ಪರಿಹಾರ ಒದಗಿಸಲಾಗುವುದು.

ಅತಿವೃಷ್ಟಿಯಿಂದ ಮನೆಗಳ ಹಾನಿ, ಬೆಳೆಹಾನಿ ಹಾಗೂ ಇನ್ನಿತರ ಸಮಸ್ಯೆಗಳನ್ನು ಪರಿಶೀಲಿಸಿ, ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು. ಜಿಲ್ಲಾಧಿಕಾರಿಗಳಿಗೆ ಹಣ ಬಿಡುಗಡೆ ಮಾಡಲಾಗಿದೆ. ಇನ್ನೂ ಅಗತ್ಯವಿರುವ ಹಣ ಬಿಡುಗಡೆ ಮಾಡಿ ತಕ್ಷಣ ಮನೆ ಕಳೆದುಕೊಂಡವರಿಗೆ ಮನೆ ನಿರ್ಮಾಣ ಮಾಡುವುದಕ್ಕೆ ಮತ್ತು ಬೆಳೆ ಹಾನಿಗೆ ಪರಿಹಾರ ಒದಗಿಸುವುದಕ್ಕೆ ಕ್ರಮ ವಹಿಸಲಾಗುವುದು ಎಂದು ಮುಖ್ಯಮಂತ್ರಿಯವರು ಹೇಳಿದರು.

ಕಲಬುರಗಿಯಲ್ಲಿ ಅಧಿಕಾರಿಗಳ ಸಭೆ ನಡೆಸಿದ ಸಿಎಂ, ಮನೆಗೆ ನೀರು ನುಗ್ಗಿ ಬಟ್ಟೆ ಮತ್ತು ಪಾತ್ರೆ ಹಾನಿಯಾದ ಕುಟುಂಬಗಳಿಗೆ ಒಂದು ವಾರದಲ್ಲಿ ರೂ.10 ಸಾವಿರ ವಿತರಿಸಬೇಕು ಎಂದು ಕಲಬುರಗಿ ಜಿಲ್ಲಾಧಿಕಾರಿಗೆ ಸೂಚಿಸಿದರು.

ಆಧಾರ: ವಿಶ್ವವಾಣಿ, ದಿನಾಂಕ:22.10.2020

## 28. 37 ರೈಲುಗಳು ಇನ್ನು 'ಎಕ್ಸ್‌ಪ್ರೆಸ್'

ಕರ್ನಾಟಕ ಮೂಲಕ ಸಂಚರಿಸುವ 37 ರೈಲುಗಳನ್ನು ಎಕ್ಸ್‌ಪ್ರೆಸ್ ರೈಲುಗಳಾಗಿ ಪರಿವರ್ತಿಸಲು ರೈಲ್ವೆ ಮಂಡಳಿ ಒಪ್ಪಿಗೆ ನೀಡಿದೆ. ದೇಶದಾದ್ಯಂತ ಒಟ್ಟು 362 ರೈಲುಗಳು ಎಕ್ಸ್‌ಪ್ರೆಸ್ ಆಗಿ ಪರಿವರ್ತನೆ ಆಗಲಿದೆ. ಪರಿವರ್ತಿಸಲಾದ ರೈಲುಗಳ ವೇಗವನ್ನು ಹೆಚ್ಚಿಸಲಾಗುತ್ತದೆ ಹಾಗೂ ನಿಲುಗಡೆ ಸಂಖ್ಯೆಯನ್ನು ಕಡಿತಗೊಳಿಸಲಾಗುತ್ತದೆ. 200ಕ್ಕಿಂತ ಅಧಿಕ ಕಿಲೋಮೀಟರ್ ಓಡುವ ರೈಲುಗಳ ಪಟ್ಟಿಯನ್ನು ವಿವಿಧ ರೈಲ್ವೆ ವಲಯಗಳು ಮಂಡಳಿಗೆ ಕಳುಹಿಸಿದ್ದವು. ಕೋವಿಡ್‌ನಿಂದ ಸ್ಥಗಿತಗೊಂಡಿರುವ ರೈಲುಗಳ ಕಾರ್ಯಾಚರಣೆ ಸಹಜ ಸ್ಥಿತಿಗೆ ಬಂದ ಬಳಿಕ ಹೊಸ ಎಕ್ಸ್‌ಪ್ರೆಸ್ ರೈಲುಗಳು ಕಾರ್ಯಾಚರಿಸಲಿದೆ. ಸದ್ಯ ರೈಲ್ವೆಯು ವಿಶೇಷ ರೈಲುಗಳನ್ನು ಮಾತ್ರ ಓಡಿಸುತ್ತಿದೆ.

ರೈಲ್ವೆ ಇಲಾಖೆಯು ಮುಂದಿನ ದಿನಗಳಲ್ಲಿ ಪರಿಚಯಿಸಲು ಉದ್ದೇಶಿಸಿರುವ ಶೂನ್ಯ ವೇಳಾಪಟ್ಟಿಯ (ಝೀರೊ ಟೈಮ್‌ಟೇಬಲ್) ಭಾಗವಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಲಾಭದಾಯಕ ಅಲ್ಲದ ಹಾಗೂ ಕಡಿಮೆ ಜನರು ಹತ್ತಿಳಿಯುವ ನಿಲ್ದಾಣಗಳಲ್ಲಿ ನಿಲುಗಡೆಯನ್ನು ಸ್ಥಗಿತಗೊಳಿಸಲಾಗುತ್ತದೆ. ನಿಲುಗಡೆ ತಾಣಗಳನ್ನು ರದ್ದುಗೊಳಿಸುವುದರಿಂದ ಬಡವರು ಮತ್ತು ಸಣ್ಣ ಊರುಗಳ ಪ್ರಯಾಣಿಕರಿಗೆ ತೊಂದರೆಯಾಗುತ್ತದೆ ಎಂಬ ವಾದವಿದೆ. ಆದರೆ ಹೆಚ್ಚು ಪ್ರಯಾಣಿಕರು ಇಲ್ಲದ ಹಾಗೂ ಕಾರ್ಯಸಾಧುವಲ್ಲದ ನಿಲ್ದಾಣಗಳಲ್ಲಿ ಮಾತ್ರ ನಿಲುಗಡೆ ಸ್ಥಗಿತಗೊಳಿಸುವುದಾಗಿ ಇಲಾಖೆ ತಿಳಿಸಿದೆ.

'ಈ ನಿಲ್ದಾಣಗಳಲ್ಲಿ ಎಕ್ಸ್‌ಪ್ರೆಸ್ ರೈಲುಗಳ ನಿಲುಗಡೆ ಸ್ಥಗಿತಗೊಳಿಸಿದ್ದಕ್ಕೆ ಪರ್ಯಾಯವಾಗಿ ಬೇರೆ ರೈಲುಗಳು ಇಲ್ಲಿ ನಿಲುಗಡೆ ಆಗುವಂತೆ ವ್ಯವಸ್ಥೆ ಮಾಡಲಾಗುವುದು. ಇದರಿಂದ ಸ್ಥಳೀಯ ಪ್ರಯಾಣಿಕರಿಗೆ ಅನುಕೂಲವಾಗುತ್ತದೆ' ಎಂದು ಇಲಾಖೆ ತಿಳಿಸಿದೆ. ಇತರೆ ಸಾರಿಗೆಗಳಿಗೆ ಹೋಲಿಸಿದರೆ ಎಕ್ಸ್‌ಪ್ರೆಸ್ ಆಗಿ ಪರಿವರ್ತನೆ ಆದ ರೈಲುಗಳಲ್ಲಿ ಪ್ರಯಾಣ ದರ ದುಬಾರಿ ಆಗಿರುವುದಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ. ಇಲಾಖೆಗೆ ಪ್ರಯಾಣಿಕ ರೈಲುಗಳಿಗಿಂತ ಹೆಚ್ಚಾಗಿ ಸರಕು ಸಾಗಣೆ ರೈಲುಗಳ ಆದಾಯ ತಂದುಕೊಡುತ್ತವೆ.

**ಎಕ್ಸ್‌ಪ್ರೆಸ್ ಆಗಿ ಪರಿವರ್ತಿಸಲಾದ ರೈಲುಗಳು:–**

- ಬಳ್ಳಾರಿ –ಹುಬ್ಬಳ್ಳಿ (51411/12)
- ಯಶವಂತಪುರ–ಐಸೂರು (56215/16)
- ಕೆಎಸ್‌ಆರ್ ಬೆಂಗಳೂರು–ಶಿವಮೊಗ್ಗ ಟೌನ್ (56227/28)
- ಸೇಲಂ–ಯಶವಂತಪುರ (56241/42)
- ಅರಸೀಕೆರೆ–ಹುಬ್ಬಳ್ಳಿ (562737/4)
- ತಾಳಗುಪ್ಪ –ಮೈಸೂರು (56 275/76)
- ಚಿಕ್ಕಮಗಳೂರು–ಯಶವಂತಪುರ (56277/78)
- ಬೆಂಗಳೂರು ದಂಡು–ವಿಜಯವಾಡ (56503/04)
- ಕಾರೈಕಲ್–ಕೆಎಸ್‌ಆರ್ ಬೆಂಗಳೂರು (56512–13)
- ಕೆಎಸ್‌ಅರ್ ಬೆಂಗಳೂರು–ಹುಬ್ಬಳ್ಳಿ (56515/16)
- ಕೆಎಸ್‌ಅರ್ ಬೆಂಗಳೂರು–ಹುಬ್ಬಳ್ಳಿ (56513/14)
- ಕೆಎಸ್‌ಅರ್ ಬೆಂಗಳೂರು – ಶಿವಮೊಗ್ಗ ಟೌನ್ (56917/18)

- ಚನ್ನಪಟ್ಟಣ–ಕೋಲಾರ (76525/26)
- ಮಂಗಳೂರು–ಮಂಡಗಾಂವ್ (56640/41)
- ಮಂಡಗಾಂವ್– ಮಂಗಳೂರು (70105/06)
- ಮಂಗಳೂರು–ಕೋಯಿಕ್ಕೋಡ್ (56654)
- ಮಂಗಳೂರು–ಕೊಯಮತ್ತೂರು (56323/24)

ಆಧಾರ: ಪ್ರಜಾವಾಣಿ, ದಿನಾಂಕ:22.10.2020

## 29. ಗ್ರಂಥಾಲಯಕ್ಕೆ ಚೇಂಜ್ ಮೇಕರ್ಸ್ ಕೊಡುಗೆ

ಬಾಲ ಗ್ರಂಥಾಲಯ ತೆರೆದು ಮಕ್ಕಳಲ್ಲಿ ಓದುವ ಹವ್ಯಾಸ ಮೂಡಿಸಲು ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಮುಂದಾಗಿದ್ದು, ನಾನಾ ಮೂಲಕಗಳಿಂದ ಹಲವು ಪುಸ್ತಕಗಳನ್ನು ಸಂಗ್ರಹಿಸುತ್ತಿದೆ.

ಇತ್ತೀಚಿನ ದಿನಗಳಲ್ಲಿ ಮಕ್ಕಳು ಅತಿಹೆಚ್ಚು ಮೊಬೈಲ್ ಗೀಳಿಗೆ ದಾಸರಾಗುತ್ತಿರುವುದರಿಂದ ಅವರಲ್ಲಿ ಪುಸ್ತಕದ ಬಗ್ಗೆ ಅರಿವು ಮತ್ತು ಜ್ಞಾನ ಮೂಡಿಸಲು ಈ ಯೋಜನೆ ಮಾಡಲಾಗಿದೆ. ಎಲ್ಲ ಜಿಲ್ಲೆಗಳ ಪಂಚಾಯಿತಿಗಳಲ್ಲಿರುವ ಗ್ರಂಥಾಲಯಗಳಲ್ಲಿ ಬಾಲ ಗ್ರಂಥಾಲಯ ತೆರೆಯಲಾಗುವುದು. ರಾಜ್ಯದಲ್ಲಿರುವ 8–14 ವರ್ಷದ ಮಕ್ಕಳಲ್ಲಿ ಪುಸ್ತಕ ಓದುವ ಹವ್ಯಾಸ, ಕಥೆ ಕಾದಂಬರಿ ಹಾಗೂ ಚಿತ್ರಗಳ ಬಗ್ಗೆ ಜ್ಞಾನ ಹೆಚ್ಚಿಸಲು ಇದೊಂದು ಉತ್ತಮ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

**'ಚೇಂಜ್ ಮೇಕರ್ಸ್ ಆಫ್ ಕರ್ನಾಟಕ'ದಿಂದ 3000 ಪುಸ್ತಕಗಳು:**ನಗರದ ಕನಕಪುರ ರಸ್ತೆಯಲ್ಲಿರುವ 'ಚೇಂಜ್ ಮೇಕರ್ಸ್ ಆಫ್ ಕರ್ನಾಟಕ' ಸಂಘಟನೆ ಮೂರು ಸಾವಿರಕ್ಕೂ ಅಧಿಕ ಪುಸ್ತಕಗಳನ್ನು ಉಚಿತವಾಗಿ ನೀಡಿದೆ. ಸುಮಾರು 17 ಅಪಾರ್ಟ್‌ಮೆಂಟ್‌ಗಳ ನಿವಾಸಿಗಳು ಸೇರಿ ಈ ಸಂಘಟನೆಯನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ಸದಾ ಸಾಮಾಜಿಕ ಕಳಕಳಿಯ ಕೆಲಸಗಳಲ್ಲಿ ಭಾಗವಹಿಸುವುದು ಈ ಸಂಘಟನೆಯ ಮುಖ್ಯ ಉದ್ದೇಶವಾಗಿದೆ. ಕಳೆದ ಐದು ದಿನಗಳ ಹಿಂದೆ ಸಂಘಟನೆ ಸದಸ್ಯರೆಲ್ಲರೂ ಸೇರಿ ಅಪಾರ್ಟ್‌ಮೆಂಟ್ ನಿವಾಸಿಗಳ ಮನೆಯಲ್ಲಿರುವ ಹಳೆಯ ಹಾಗೂ ನಿರುಪಯುಕ್ತ ಪುಸ್ತಕಗಳನ್ನು ನೀಡುವಂತೆ ತಿಳಿಸಿದರು, ಬಳಿಕ ಪ್ರತಿ ಅಪಾರ್ಟ್‌ಮೆಂಟ್‌ನಿಂದಲೂ ಪುಸ್ತಕ ಕಲೆ ಹಾಕಿದರು. ಪ್ರಸ್ತುತ ಮೂರು ಸಾವಿರ ಪುಸ್ತಕಗಳು ದೊರಕಿದ್ದು, ಇದನ್ನು ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ನೀಡಲು ಮುಂದಾಗಿದ್ದಾರೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:22.10.2020

## 30. ಬ್ಲೇಡ್ ಕಂಪನಿಗಳಿಗೆ ಕಡಿವಾಣ

ಹೆಚ್ಚಿನ ಬಡ್ಡಿ ಇಲ್ಲವೇ ಲಾಭದ ಆಸೆ ತೋರಿಸಿ, ಜಾಸ್ತಿ ಹಣವನ್ನು ಹೂಡಿಕೆ ಮಾಡಿಸಿಕೊಂಡು ಅಮಾಯಕರರಿಗೆ ವಂಚಿಸುವ ಬ್ಲೇಡ್ ಕಂಪನಿಗಳಿಗೆ ಕಡಿವಾಣ ಹಾಕುವ ಮಹತ್ವದ ತೀರ್ಮಾನವನ್ನು ನಡೆದ ಸಂಪುಟ ಸಭೆಯಲ್ಲಿ ಕೈಗೊಳ್ಳಲಾಗಿದೆ. ಖಾಸಗಿ ಸಂಸ್ಥೆಗಳು ಅನಿಯಂತ್ರಿತ ಠೇವಣಿ ಸಂಗ್ರಹಿಸುವ ಪ್ರವೃತ್ತಿಗೆ ಕಡಿವಾಣ ಹಾಕುವ ಗುರಿಯೊಂದಿಗೆ ಸಿಎಂ ಯಡಿಯೂರಪ್ಪ ನೇತೃತ್ವದ ಸಂಪುಟ ಸಭೆಯಲ್ಲಿ 'ಕರ್ನಾಟಕ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ನಿಯಮಗಳು 2020' ಕ್ಕೆ ಅನುಮೋದನೆ ನೀಡಿತು.

ಕೇಂದ್ರ ಸರ್ಕಾರ ಈ ಸಂಬಂಧ ಈಗಾಗಲೇ ಕಾಯಿದೆ ತಂದಿದೆ. ಸಂಪುಟ ತೀರ್ಮಾನದ ಅನ್ವಯ ಅದನ್ನು ರಾಜ್ಯದಲ್ಲೂ ಅಳವಡಿಸಿಕೊಳ್ಳಲಾಗುತ್ತದೆ. ಸಾರ್ವಜನಿಕರಿಂದ ಹಣ ಸಂಗ್ರಹಿಸಿ ಠೇವಣಿ

ಇರಿಸಿಕೊಂಡು ಟೋಪಿ ಹಾಕುವ ಕಂಪನಿಗಳ ವಿರುದ್ಧ ಕ್ರಮ ಜರುಗಿಸಲು ಈ ಕಾಯಿದೆ ನೆರವಾಗಲಿದೆ. ರಾಜ್ಯದಲ್ಲಿ ಬ್ಲೇಡ್ ಕಂಪನಿಗಳಿಗೆ ತಡೆ ಬೀಳುವ ನಿರೀಕ್ಷೆ ಇದೆ. ರಾಜ್ಯದಲ್ಲಿ ಐಎಂಎ ಸಂಸ್ಥೆಯಲ್ಲಿ ಹೂಡಿಕೆ ಮಾಡಿದ್ದ ಹಲವರಿಗೆ ನಷ್ಟವಾಗಿದ್ದು, ಕೋಟ್ಯಂತರ ರೂಪಾಯಿ ವಂಚನೆಯಾಗಿದೆ. ಭವಿಷ್ಯದಲ್ಲಿ ಇಂತಹ ಹಗರಣಗಳು ನಡೆಯದಂತೆ ತಡೆಯಲು ಸರ್ಕಾರ ಈ ನಿಯಮ ರೂಪಿಸಲು ನಿರ್ಧಾರ ಕೈಗೊಂಡಿದೆ.

**ಶಿರಸಿ, ಉಡುಪಿ ಆಸ್ಪತ್ರೆ ಮೇಲ್ದರ್ಜೆಗೆ:** ಶಿರಸಿಯ ತಾಲ್ಲೂಕು ಆಸ್ಪತ್ರೆ ಹಾಗೂ ಉಡುಪಿ ಜಿಲ್ಲಾಸ್ಪತ್ರೆ ಮೇಲ್ದರ್ಜೆಗೆ ಏರಿಸಲು ಸಂಪುಟದಲ್ಲಿ ಅನುಮೋದನೆ ನೀಡಲಾಗಿದೆ. ಶಿರಸಿ ಆಸ್ಪತ್ರೆ ಸಾಮರ್ಥ್ಯವನ್ನು 100 ಬೆಡ್‌ನಿಂದ 250 ಬೆಡ್‌ಗೆ ಹೆಚ್ಚಿಸಲಾಗುತ್ತದೆ. ಈ ಉದ್ದೇಶಕ್ಕೆ ರೂ.142 ಕೋಟಿ ರೂ. ಒದಗಿಸಲಾಗುತ್ತಿದೆ. ಉಡುಪಿ ಆಸ್ಪತ್ರೆಯಲ್ಲಿ 250 ಬೆಡ್ ಹೊಂದಿಸುವ ಸಂಬಂಧ ರೂ. 115 ಕೋಟಿ ನೀಡಲಾಗುತ್ತಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:23.10.2020

## 31. ಒಣ ಕಸ ಸಂಗ್ರಹಕ್ಕೆ 18 ವಾಹನ

ಸ್ವಚ್ಛ ಭಾರತ ಅಭಿಯಾನದ ಪರಿಣಾಮಕಾರಿ ಅನುಷ್ಠಾನಕ್ಕೆ ನೆರವಾಗುವ ಸಲುವಾಗಿ ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ(ಗೇಲ್) ಸಾಮಾಜಿಕ ಹೊಣೆಗಾರಿಕೆ ನಿಧಿ ಅಡಿ 18 ವಾಹನಗಳನ್ನು ಒಣ ಕಸ ಸಂಗ್ರಹಕ್ಕಾಗಿ ಬಿಬಿಎಂಪಿಗೆ ಹಸ್ತಾಂತರಿಸಿದೆ.

ಗೇಲ್ ಸಂಸ್ಥೆಯ ದಕ್ಷಿಣ ಪ್ರಾಂತ್ಯದ ಕಾರ್ಯಕಾರಿ ನಿರ್ದೇಶಕ ಮುರುಗೇಶನ್ ಹಾಗೂ ಮುಖ್ಯ ಪ್ರಧಾನ ವ್ಯವಸ್ಥಾಪಕ ಹಾಗೂ ಮುಖ್ಯ ಪ್ರಧಾನ ವ್ಯವಸ್ಥಾಪಕ ವಿವೇಕ್ ವಾಥೋಡ್ಕರ್ ಅವರು ಈ ವಾಹನಗಳನ್ನು ಬಿಬಿಎಂಪಿ ಆಡಳಿತಾಧಿಕಾರಿ ಗೌರವ ಗುಪ್ತ ಹಾಗೂ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಅವರಿಗೆ ಹಸ್ತಾಂತರಿಸಿದರು.

ಈ ವಾಹನಗಳಿಗೆ ಇಂಧನವಾಗಿ ಸಂಕ್ಷೇಪಿತ ನೈಸರ್ಗಿಕ ಅನಿಲ(ಸಿಎನ್‌ಜಿ) ಹಾಗೂ ಪೆಟ್ರೋಲ್‌ಗಳನ್ನು ಬಳಸಬಹುದು. ಸಿಎನ್‌ಜಿ ಇಂಧನ ಬಳಸುವುದರಿಂದ ಈ ವಾಹನಗಳು ಪರಿಸರ ಸ್ನೇಹಿಯಾಗಿವೆ. ಇವುಗಳ ನಿರ್ವಹಣೆ ಸುಲಭ, ಸಾಂಪ್ರದಾಯಿಕ ಇಂಧನಗಳಿಗೆ ಹೋಲಿಸಿದರೆ ಸಿಎನ್‌ಜಿ ಬಳಕೆಯಿಂದ ನಿರ್ವಹಣೆ ವೆಚ್ಚವು ಕಡಿಮೆ. 18 ವಾಹನಗಳ ಒಟ್ಟು ಮೌಲ್ಯ ರೂ.1 ಕೋಟಿ ಎಂದು ಗೇಲ್ ಸಂಸ್ಥೆ ತಿಳಿಸಿದೆ. ಈ ಸಂಸ್ಥೆಯು ನಗರದಲ್ಲಿ ಸಿಎನ್‌ಜಿ ಅನಿಲವನ್ನು ವಾಹನಗಳ ಬಳಕೆಗಾಗಿ ಹಾಗೂ ಮನೆ ಬಳಕೆಗಾಗಿ ವಿತರಿಸುತ್ತಿದೆ.

ಒಣ ಕಸ ವಿಲೇವಾರಿಯ ಹೊಣೆಯನ್ನು ಕಸ ಆಯುವ ಕಾಯಕದಲ್ಲಿ ತೊಡಗಿದ್ದವರಿಗೆ ಹಾಗೂ ಸ್ವ–ಸಹಾಯ ಗುಂಪುಗಳಿಗೆ ವಹಿಸಲಾಗಿದೆ. ಅವರು ವಾರದಲ್ಲಿ ಎರಡು ಬಾರಿ ಮನೆ ಮನೆಯಿಂದ ಒಣ ಕಸ ಸಂಗ್ರಹಿಸಲಿದ್ದಾರೆ. ನಗರದಲ್ಲಿ ಸುಮಾರು 7,500 ಮಂದಿ ಕಸ ಆಯುವ ಕಾಯಕದಲ್ಲಿ ತೊಡಗಿದವರಿದ್ದಾರೆ. ಅವರು ಬದುಕು ರೂಪಿಸಿಕೊಳ್ಳಲು ಇದು ಸಹಕಾರಿ 'ಮೂಲದಲ್ಲೇ ಕಸ ವಿಂಗಡಣೆಯಲ್ಲಿ ಶೇ.100 ರಷ್ಟು ಸಾಧನೆ ಮಾಡುವ ಉದ್ದೇಶದಿಂದ ಹಸಿ, ಒಣ ಹಾಗೂ ನೈರ್ಮಲ್ಯ(ಸ್ಯಾನಿಟರಿ) ಕಸಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಲಾಗುತ್ತಿದೆ. ಕಸವನ್ನು ವಿಂಗಡಣೆ ಮಾಡಿಕೊಡದವರಿಗೆ ದಂಡ ವಿಧಿಸಲಾಗುತ್ತದೆ' ಎಂದು ಮಂಜುನಾಥ್ ಪ್ರಸಾದ್ ತಿಳಿಸಿದ್ದಾರೆ.

ಪಾಲಿಕೆಯ ಬಳಿ ಇದುವರೆಗೆ ಒಣ ಕಸ ಸಂಗ್ರಹಕ್ಕೆ ಸ್ವಂತ ಆಟೋಗಳು ಇರಲಿಲ್ಲ. ಪ್ರತಿ ವಾರ್ಡ್‌ಗೆ ಕನಿಷ್ಠ ಎರಡರಿಂದ ಗರಿಷ್ಠ 6 ವಾಹನಗಳಂತೆ ಒಟ್ಟು 613 ವಾಹನಗಳ ಅವಶ್ಯಕತೆ ಇದೆ. ಇವುಗಳನ್ನು ಬಾಡಿಗೆಗೆ ಪಡೆದು, ಚಾಲಕ ಹಾಗೂ ನಿರ್ವಾಹಕರ ವೆಚ್ಚ ಸೇರಿಸಿ ತಿಂಗಳಿಗೆ ರೂ 56,316 ಪಾವತಿ ಮಾಡಲಾಗುತ್ತಿತ್ತು. ಈಗ 18 ವಾಹನಗಳು ಲಭ್ಯವಾಗಿರುವುದರಿಂದ, ಇಷ್ಟು ವಾಹನಗಳ ಬಾಡಿಗೆ ವೆಚ್ಚ ಪಾಲಿಕೆಗೆ ಉಳಿತಾಯವಾಗಲಿದೆ.

ಆಧಾರ: ಪ್ರಜಾವಾಣಿ, ದಿನಾಂಕ:23.10.2020

## 32. ಆರೋಗ್ಯ ಕಾರ್ಯಕರ್ತರಿಗೆ ಮೊದಲು ಲಸಿಕೆ

ಕೇಂದ್ರ ಸರ್ಕಾರವು ಕೋವಿಡ್ ಲಸಿಕೆಯನ್ನು ಮೊದಲ ಹಂತದಲ್ಲಿ ಯಾರಿಗೆ ವಿತರಿಸಬೇಕು ಎಂಬ ಬಗ್ಗೆ ಯೋಜನೆ ರೂಪಿಸಿದ್ದು, ಈ ಬೆನ್ನಲ್ಲೇ ರಾಜ್ಯದ ಆರೋಗ್ಯ ಇಲಾಖೆಯು ಪೂರ್ವಸಿದ್ಧತೆ ಪ್ರಾರಂಭಿಸಿದೆ.

ಲಸಿಕೆ ವಿತರಣೆಯ ಮೊದಲ ಹಂತದಲ್ಲಿ ಸರ್ಕಾರಿ ಮತ್ತು ಖಾಸಗಿ ಆರೋಗ್ಯ ಕೇಂದ್ರಗಳ ಎಲ್ಲ ಆರೋಗ್ಯ ಕಾರ್ಯಕರ್ತರನ್ನು ಫಲಾನುಭವಿಗಳು ಎಂದು ಗುರುತಿಸಲಾಗುತ್ತಿದೆ. ಲಸಿಕೆ ವಿತರಣೆಯ ಸಿದ್ಧತೆಗೆ ಸಂಬಂಧಿಸಿದಂತೆ ಕೋವಿಡ್ ಕಾರ್ಯಪಡೆಯು ಸಭೆ ನಡೆಸಿ, ಕಾರ್ಯವಿಧಾನ ರೂಪಿಸಿದೆ. ಆರೋಗ್ಯ ಕಾರ್ಯಕರ್ತರು, ಕಿರಿಯ ಮಹಿಳಾ ಆರೋಗ್ಯ ಸಹಾಯಕರು, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು, ಶುಶ್ರೂಷಕರು ಮತ್ತು ಮೇಲ್ವಿಚಾರಕರು, ವೈದ್ಯಾಧಿಕಾರಿಗಳು, ಆಯುಷ್ ವೈದ್ಯರು, ಅರೆ ವೈದ್ಯಕೀಯ ಸಿಬ್ಬಂದಿ, ವಿಜ್ಞಾನ ಮತ್ತು ಸಂಶೋಧನಾ ಸಿಬ್ಬಂದಿ, ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಹಾಗೂ ಶುಶ್ರೂಷಕ ವಿದ್ಯಾರ್ಥಿಗಳು, ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜುಗಳ ಸಿಬ್ಬಂದಿ ಸೇರಿದಂತೆ ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ವಲಯದಲ್ಲಿ ಕಾರ್ಯನಿರ್ವಹಿಸುವವರಿಗೆ ಮೊದಲು ಆದ್ಯತೆ ನೀಡಲು ನಿರ್ಧರಿಸಲಾಗಿದೆ ಎಂದು ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಆಧಾರ: ಪ್ರಜಾವಾಣಿ, ದಿನಾಂಕ:24.10.2020

## 33. ನಗರದ 50 ಸ್ಥಳಗಳಲ್ಲಿ ಕಸ ಟ್ರಾನ್ಸ್‌ಫರ್ ಸ್ಟೇಷನ್‌ಗಳ ಸ್ಥಾಪನೆ

ಬಿಬಿಎಂಪಿ ವ್ಯಾಪ್ತಿಯಲ್ಲಿ ಸಮರ್ಪಕವಾಗಿ ಕಸ ವಿಲೇವಾರಿ ಮಾಡುವ ಸಲುವಾಗಿ ರಾಧಾಕೃಷ್ಣ ದೇವಸ್ಥಾನ ವಾರ್ಡ್‌ನಲ್ಲಿ ಸ್ಥಳಾಂತರ ಕೇಂದ್ರ (ಟ್ರಾನ್ಸ್‌ಫರ್ ಸ್ಟೇಷನ್) ಸ್ಥಾಪಿಸಲಾಗಿದೆ. ರೂ.246.01 ಕೋಟಿ ವೆಚ್ಚದಲ್ಲಿ ನಗರದ 50 ಕಡೆ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ನಿರ್ಮಿಸಲಾಗುತ್ತಿದೆ.

ಮನೆ–ಮನೆಯಿಂದ ಆಟೋ ಟಿಪ್ಪರ್‌ಗಳು ಮತ್ತು ತಳ್ಳುವ ಗಾಡಿಗಳ ಮೂಲಕ ಸಂಗ್ರಹಿಸುವ ಕಸವನ್ನು ವಾರ್ಡ್‌ಗಳಲ್ಲಿ 4–5 ಸ್ಥಳಗಳಲ್ಲಿ ಕಾಂಪ್ಯಾಕ್ಟರ್‌ಗಳಿಗೆ ತುಂಬಲಾಗುತ್ತಿದೆ. ಇದರಿಂದ ಕಸ ಮತ್ತು ಲಿಚೆಟ್ ಎಲ್ಲೆಡೆ ಸೋರುತ್ತಿತ್ತು. ಇದನ್ನು ತಪ್ಪಿಸುವ ಸಲುವಾಗಿಯೇ ಸಣ್ಣ ಪ್ರಮಾಣದ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ಸ್ಥಾಪಿಸುವ ಗುತ್ತಿಗೆಯನ್ನು ಟಿಪಿಎಸ್ ಇನ್‌ಫ್ರಾಸ್ಟ್ರಕ್ಚರ್ ಕಂಪೆನಿಗೆ ನೀಡಲಾಗಿದೆ.

ಪ್ರತಿಯೊಂದು ಸ್ಥಳದಲ್ಲಿ ತಲಾ 2 ಪೋರ್ಟಬಲ್ ಕಾಂಪ್ಯಾಕ್ಟರ್ ಮತ್ತು ಹುಕ್ ಲೋಡರ್ ಯಂತ್ರಗಳ ಖರೀದಿ ಮತ್ತು ಸಿವಿಲ್ ಕಾಮಗಾರಿಗೆ ರೂ.75,99,34,720 ಮತ್ತು 7 ವರ್ಷಗಳ ನಿರ್ವಹಣೆಗೆ ರೂ.170,02,30,200 ಸೇರಿ ಒಟ್ಟು ರೂ.246,01,64,920 ವ್ಯಯ ಮಾಡಲಾಗುತ್ತಿದೆ. ನಗರದ ದೊಮ್ಮಲೂರು, ಸುಧಾಮನಗರ, ವಸಂತಪುರ, ಉಲ್ಲಾಳ, ಕೊಟ್ಟಿಗೆಪಾಳ್ಯ ವಾರ್ಡ್‌ಗಳಲ್ಲಿ ಟ್ರಾನ್ಸ್‌ಫರ್ ಸ್ಟೇಷನ್‌ಗಳನ್ನು ಸ್ಥಾಪಿಸಲಾಗಿದೆ.

ರಾಧಾಕೃಷ್ಣ ದೇವಸ್ಥಾನ ವಾರ್ಡ್‌ನಲ್ಲಿನ ಟ್ರಾನ್ಸ್‌ಫರ್ ಸ್ಟೇಷನ್‌ನ ಕಾರ್ಯನಿರ್ವಹಣೆಯನ್ನು ಪರಿಶೀಲಿಸಿದ ಆಡಳಿತಾಧಿಕಾರಿ ಗೌರವ ಗುಪ್ತ, ಇಲ್ಲಿ ಪೋರ್ಟಬಲ್ ಕಾಂಪ್ಯಾಕ್ಟರ್‌ಗಳ ಮೂಲಕ ತ್ಯಾಜ್ಯ ಸಂಗ್ರಹಿಸಿ, ಕಂಪ್ರೆಸ್ ಮಾಡಿ ಟ್ರಕ್‌ಗಳಲ್ಲಿ ಘಟಕಗಳಿಗೆ ಸಾಗಣೆ ಮಾಡಲಾಗುವುದು ಎಂದು ಹೇಳಿದರು.

ಆಯುಕ್ತ ಎನ್.ಮಂಜುನಾಥ ಪ್ರಸಾದ್ ಮಾತನಾಡಿ, ನಗರದಲ್ಲಿ 50 ಕಡೆ ಕಸ ವರ್ಗಾವಣಾ ಕೇಂದ್ರಗಳನ್ನು ನಿರ್ಮಿಸುತ್ತಿದ್ದು, 15 ಕಡೆ ಕಾಮಗಾರಿ ಪ್ರಗತಿಯಲ್ಲಿದೆ. ಐದು ಕಡೆ ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಎಲ್ಲ ಸ್ಟೇಷನ್‌ಗಳು ಕಾರ್ಯಾರಂಭಗೊಳ್ಳಲಿವೆ. ಆಟೋ ಟಿಪ್ಪರ್‌ಗಳ ಮೂಲಕ 15 ಟನ್ ತ್ಯಾಜ್ಯವನ್ನು ಪೋರ್ಟಬಲ್ ಕಾಂಪ್ಯಾಕ್ಟರ್‌ಗಳಿಗೆ ಹಾಕಿದಾಗ ಕಂಪ್ರೆಸ್‌ನಿಂದ 7 ಟನ್‌ಗೆ ಇಳಿಕೆಯಾಗಲಿದೆ.

ತ್ಯಾಜ್ಯದಿಂದ ಬೇರ್ಪಟ್ಟ ಕೊಳಚೆ(ಲಿಚೆಟ್) ಅನ್ನು ಪ್ರತ್ಯೇಕವಾಗಿ ಶೇಖರಿಸಿ ವಿಲೇವಾರಿ ಮಾಡಲಾಗುವುದು," ಎಂದು ತಿಳಿಸಿದರು.

ಆಧಾರ: ವಿಜಯಕರ್ನಾಟಕ, ದಿನಾಂಕ:24.10.2020

## 34. ಮಳೆ ಪ್ರದೇಶದಲ್ಲಿ ಸಿಎಂ ಸಿಟಿ ರೌಂಡ್ಸ್

ರಾಜಧಾನಿಯಲ್ಲಿ ಭಾರಿ ಮಳೆಯಿಂದ ಸಂತ್ರಸ್ತರಾದವರ ನೆರವಿಗೆ ಮುಖ್ಯಮಂತ್ರಿಯವರು ಖುದ್ದು ಧಾವಿಸಿ, ಮಳೆಯಿಂದಾಗಿ ಮನೆಯಲ್ಲಿದ್ದ ವಸ್ತುಗಳು ಹಾನಿಯಾಗಿರುವ ಪ್ರತಿ ಕುಟುಂಬಕ್ಕೆ ರೂ.25 ಸಾವಿರ ಪರಿಹಾರ ನೀಡುವುದಾಗಿ ಘೋಷಿಸಿದ್ದಾರೆ.

ಹೊಸಕೆರೆಹಳ್ಳಿ, ದತ್ತಾತ್ರೇಯನಗರ ಹಾಗೂ ಕುಮಾರಸ್ವಾಮಿ ಲೇಔಟ್ ಪ್ರದೇಶಗಳಲ್ಲಿ ಮಳೆಯಿಂದ ಉಂಟಾಗಿರುವ ಅನಾಹುತವನ್ನು ಖುದ್ದಾಗಿ ಮುಖ್ಯಮಂತ್ರಿಯವರು ಪರಿಶೀಲಿಸಿದರು. ಈ ವೇಳೆ ಸಂತ್ರಸ್ತರ ಕುಟುಂಬಕ್ಕ ರೇಷನ್ ಕಿಟ್ ವಿತರಿಸಿ, ಧೈರ್ಯ ಹೇಳಿದರು. ಬಿಬಿಎಂಪಿ ವ್ಯಾಪ್ತಿಯಲ್ಲಿ ಧಾರಾಕಾರ ಮಳೆ ಸುರಿದ ಪರಿಣಾಮ ಈ ಅನಾಹುತಗಳು ಸಂಭವಿಸಿವೆ. ಈ ಬಗ್ಗೆ ಪಾಲಿಕೆ ಅಧಿಕಾರಿಗಳೊಂದಿಗೆ ಚರ್ಚಿಸಿದ್ದು, ಪರಿಹಾರ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದ್ದೇನೆ. ನೀರು ನುಗ್ಗಿ ಬಟ್ಟೆ, ದವಸ–ಧಾನ್ಯ ಸೇರಿದಂತೆ ವಸ್ತುಗಳು ಹಾಳಾಗಿರುವ ಪ್ರತಿ ಕುಟುಂಬಕ್ಕೆ ಚೆಕ್ ಮೂಲಕ ರೂ.25 ಸಾವಿರ ಪರಿಹಾರ ನೀಡುವುದಾಗಿ ಹೇಳಿದರು.

ಈ ಭಾಗದಲ್ಲಿ ಸುಮಾರು 650 ರಿಂದ 700 ಮನೆಗಳಿದ್ದು, ಅನಾಹುತವಾಗಿರುವ ಎಲ್ಲ ಮನೆಗಳಿಗೂ ಪರಿಹಾರ ನೀಡಲಾಗುತ್ತದೆ. ರಾಜಕಾಲುವೆಗೆ ಶಾಶ್ವತ ತಡೆಗೋಡೆಯನ್ನು ನಿರ್ಮಿಸಿ ಜಲಾವೃತ ಆಗದ ರೀತಿ ಶಾಶ್ವತ ಪರಿಹಾರ ಕಂಡುಕೊಳ್ಳಲು ಸೂಚಿಸಲಾಗಿದೆ. ಪ್ರವಾಹದ ಅನಾಹುತ ತಡೆಯಲು ಕಟ್ಟೆಚ್ಚರ ವಹಿಸಬೇಕು. ರಾಜ ಕಾಲುವೆ ಒತ್ತುವರಿ ಮಾಡಿದ್ದರೆ, ಮುಲಾಜಿಲ್ಲದೆ ತೆರವು ಕಾರ್ಯಾಚರಣೆ ಕೈಗೊಳ್ಳಬೇಕು. ಶೀಘ್ರದಲ್ಲಿಯೇ ಈ ತೆರವು ಕಾರ್ಯಾಚರಣೆ ಪ್ರಕ್ರಿಯೆ ಪ್ರಾರಂಭಿಸುವಂತೆ ಸೂಚಿಸಲಾಗಿದೆ ಎಂದರು. ಈ ವೇಳೆ ಬಿಬಿಎಂಪಿ ಆಡಳಿತಾಧಿಕಾರಿ ಗೌರವ ಗುಪ್ತ, ಆಯುಕ್ತ ಎನ್.ಮಂಜುನಾಥ ಪ್ರಸಾದ್, ಸಚಿವ ಆರ್.ಅಶೋಕ್, ಶಾಸಕ ಕೃಷ್ಣಪ್ಪ, ಅಧಿಕಾರಿಗಳು ಉಪಸ್ಥಿತರಿದ್ದರು.

ಆಧಾರ: ಕನ್ನಡಪ್ರಭ, ದಿನಾಂಕ:25.10.2020

## 35. ಟಿಇಟಿ ಪ್ರಮಾಣಪತ್ರ ಸಿಂಧುತ್ವಕ್ಕೆ ಜೀವಿತಾವಧಿ

ಶಿಕ್ಷಕರ ಹುದ್ದೆ ಅರ್ಹತೆಗೆ ನಡೆಯುವ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ಪ್ರಮಾಣ ಪತ್ರದ ಸಿಂಧುತ್ವದ ಅವಧಿಯನ್ನು 7 ವರ್ಷಗಳಿಂದ 'ಜೀವಿತಾವಧಿ' ವರೆಗೆ ವಿಸ್ತರಿಸಲು 'ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ (ಎನ್‌ಸಿಟಿಇ)' ತೀರ್ಮಾನಿಸಿದೆ. ಈಗಾಗಲೇ ಟಿಇಟಿ ಪರೀಕ್ಷೆ ಪಾಸಾಗಿ ಪ್ರಮಾಣ ಪತ್ರವನ್ನು ಪಡೆದಿರುವ ಅಭ್ಯರ್ಥಿಗಳಿಗೂ ಇದು ಅನ್ವಯವಾಗಲಿದೆ.

ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಜಾರಿ ಹಿನ್ನೆಲೆಯಲ್ಲಿ ಶಿಕ್ಷಕರ ಹುದ್ದೆ ಅರ್ಹತೆಗಾಗಿ ಎನ್‌ಸಿಟಿಇ 2015 ರಿಂದ ಟಿಇಟಿ ಪರೀಕ್ಷೆಯನ್ನು ಜಾರಿಗೆ ತಂದಿದೆ. ಡಿ.ಇಡಿ ಮತ್ತು ಬಿ.ಇಡಿ ಪದವೀಧರರು ಶಿಕ್ಷಕರ ಹುದ್ದೆಗೆ ಆಯ್ಕೆಯಾಗಬೇಕಾದರೆ ಟಿಇಟಿ ಪರೀಕ್ಷೆ ಪಾಸಾಗುವುದು ಕಡ್ಡಾಯ. ಜೊತೆಗೆ, ಸರ್ಕಾರಿ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಟಿಇಟಿ ಪರೀಕ್ಷೆಯಲ್ಲಿ ಪಡೆದ ಶೇ.15 ರಷ್ಟು ಅಂಕಗಳನ್ನು ಪರಿಗಣಿಸಲಾಗುತ್ತದೆ. ರಾಜ್ಯದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಟಿಇಟಿ ಪರೀಕ್ಷೆಯನ್ನು ನಡೆಸುತ್ತದೆ. ಒಟ್ಟು 300 ಅಂಕಗಳಿಗೆ ಟಿಇಟಿ ಪರೀಕ್ಷೆ ನಡೆಯಲಿದ್ದು, ಈ ಪರೀಕ್ಷೆಯಲ್ಲಿ ಪಾಸಾಗಲು ಅಭ್ಯರ್ಥಿಗಳು ಶೇ.60ರಷ್ಟು ಅಂಕಗಳನ್ನು ಕಡ್ಡಾಯವಾಗಿ ಪಡೆಯಲೇಬೇಕು. ಪಾಸಾದ ಅಭ್ಯರ್ಥಿಗಳಿಗೆ ಟಿಇಟಿ ಪ್ರಮಾಣ ಪತ್ರಗಳನ್ನು ನೀಡಲಾಗುತ್ತದೆ.

ಈ ಪರೀಕ್ಷೆಯನ್ನು ಜಾರಿಗೆ ತಂದಾಗ ಎನ್‌ಸಿಟಿಇ, ಟಿಇಟಿ ಪ್ರಮಾಣ ಪತ್ರಕ್ಕೆ ಕೇವಲ 7 ವರ್ಷಗಳ ಅವಧಿವರೆಗೆ ಮಾತ್ರ ಸಿಂಧುತ್ವನ್ನು ನೀಡಿತ್ತು. ಈ ಅವಧಿಯನ್ನು ಮುಂಬರುವ ದಿನಗಳಲ್ಲಿ ವಿಸ್ತರಿಸುವ ಬಗ್ಗೆ ಈ ಹಿಂದೆಯೇ ನಿರ್ಣಯ ಕೈಗೊಳ್ಳಲಾಗಿತ್ತು. 2015ರಲ್ಲಿ ಟಿಇಟಿ ಪರೀಕ್ಷೆ ಪಾಸಾದ ಅಭ್ಯರ್ಥಿಗಳು ಪ್ರಮಾಣ ಪತ್ರದ ಮಾನ್ಯತೆ ಮುಕ್ತಾಯಗೊಳ್ಳಲು ಕೇವಲ ಎರಡು ವರ್ಷ ಮಾತ್ರ ಬಾಕಿಯಿತ್ತು.

ಸೆಪ್ಟೆಂಬರ್ 29ರಂದು ನಡೆದ ಪರಿಷತ್‌ನ ಸಾಮಾನ್ಯ ಸಭೆಯಲ್ಲಿ ಟಿಇಟಿ ಪ್ರಮಾಣ ಪತ್ರದ ಮಾನ್ಯತೆಯನ್ನು ಜೀವಿತಾವಧಿವರೆಗೆ ವಿಸ್ತರಿಸಲು ನಿರ್ಣಯ ಕೈಗೊಳ್ಳಲಾಗಿದೆ. ಈ ಸಂಬಂಧ ಕಾನೂನು ತಜ್ಞರ ಅಭಿಪ್ರಾಯ ಪಡೆದು, ಆದೇಶ ಹೊರಡಿಸಲು ಎನ್‌ಸಿಟಿಇ ಮುಂದಾಗಿದೆ. ಕಳೆದ ಐದು ವರ್ಷಗಳಿಂದ ಟಿಇಟಿ ಪರೀಕ್ಷೆ ಪಾಸಾಗಿರುವ ಅಭ್ಯರ್ಥಿಗಳ ಪ್ರಮಾಣ ಪತ್ರದ ಸಿಂಧುತ್ವ ಸಹ ಜೀವಿತಾವಧಿವರೆಗೆ ಮುಂದುವರಿಯಲಿದೆ.

ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್‌ನಿಂದ ಅಧಿಕೃತ ಆದೇಶ ಇನ್ನೂ ಸಾರ್ವಜನಿಕ ಶಿಕ್ಷಣ ಇಲಾಖೆಗೆ ತಲುಪಿಲ್ಲ. ಆದೇಶ ತಲುಪಿದ ತಕ್ಷಣ ರಾಜ್ಯದಲ್ಲೂ ಟಿಇಟಿ ಪ್ರಮಾಣ ಪತ್ರಗಳ ಸಿಂಧುತ್ವವನ್ನು ಜೀವಿತಾವಧಿವರೆಗೆ ವಿಸ್ತರಿಸಲು ಕ್ರಮ ಕೈಗೊಂಡಿದೆ ಎಂದು ಇಲಾಖೆಯ ಉನ್ನತ ಮೂಲಗಳು ತಿಳಿಸಿವೆ.

**ಡಿಜಿಟಲ್ ಪ್ರಮಾಣ ವಿತರಣೆ:** ಅಭ್ಯರ್ಥಿಗಳು ನಿಗದಿತ ಶುಲ್ಕ ಪಾವತಿಸಿ ಪ್ರಮಾಣ ಪತ್ರಗಳನ್ನು ಪಡೆಯಬೇಕು. ಆದರೆ, ನಾನಾ ಕಾರಣಗಳಿಂದಾಗಿ ಬಹುತೇಕ ಜಿಲ್ಲೆಗಳಲ್ಲಿ ಉಪ ನಿರ್ದೇಶಕರು ಪ್ರಮಾಣ ಪತ್ರಗಳನ್ನು ಅಭ್ಯರ್ಥಿಗಳಿಗೆ ವಿತರಣೆ ಮಾಡದೆ ಇಲಾಖೆಗೆ ವಾಪಸ್ಸು ಕಳುಹಿಸಿರುವುದು ಕಂಡುಬಂದಿದೆ. ಈ ವರ್ಷದಿಂದ ಟಿಇಟಿ ಪರೀಕ್ಷೆ ಪಾಸಾದ ಎಲ್ಲಾ ಅಭ್ಯರ್ಥಿಗಳಿಗೆ 'ಡಿಜಿಟಲ್ ಪ್ರಮಾಣ ಪತ್ರ' ವಿತರಣೆಗೆ ಶಿಕ್ಷಣ ಇಲಾಖೆ ಗಂಭೀರ ಚಿಂತನೆ ನಡೆಸಿದೆ ಎಂದು ಮೂಲಗಳು ಖಚಿತಪಡಿಸಿವೆ.

ಆಧಾರ: ವಿಜಯಕರ್ನಾಟಕ, ದಿನಾಂಕ:27.10.2020

## 36. 584 ಎಕರೆ ಕೆರೆ ಅಂಗಳ ಭೂಗಳ್ಳರ ಪಾಲು

ಸಾವಿರ ಕೆರೆಗಳ ನಾಡು ಎನಿಸಿಕೊಂಡಿದ್ದ ಬೆಂಗಳೂರಿನಲ್ಲೀಗ ಜೀವಂತವಾಗಿರುವ ಜಲಮೂಲಗಳು ಬೆರೆಣಿಕೆಯಷ್ಟು ಮಾತ್ರ. ಇವು ಕೂಡ ನೆಲಗಳ್ಳರ ಭೂ ದಾಹಕ್ಕೆ ನಲುಗಿ ಹೋಗಿದ್ದು, ಮೂಲ ಅಸ್ತಿತ್ವವನ್ನೇ ಕಳೆದುಕೊಳ್ಳುವ ಆತಂಕ ಎದುರಿಸುತ್ತಿವೆ.

ದಶಕಗಳ ಹಿಂದೆ ನಗರವೊಂದರಲ್ಲೇ 23,366 ಎಕರೆ ವಿಸ್ತೀರ್ಣದ 837 ಕೆರೆಗಳಿದ್ದವು. ಪ್ರಸ್ತುತ ಬಿಬಿಎಂಪಿ ಒಡೆತನದಲ್ಲಿರುವುದು 6576 ಎಕರೆ ವಿಸ್ತೀರ್ಣದ 205 ಜಲಕಾಯಗಳಷ್ಟೇ. ಇದರಲ್ಲೂ 19 ಕೆರೆಗಳು ನಾಮಾವಶೇಷವಾಗಿವೆ. 'ಕೋಟಿ ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದರು' ಎಂಬಂತೆ ಇದೀಗ ಕೆರೆಗಳ ಒತ್ತುವರಿ ಗುರುತಿಸಲಾಗಿದೆ. ಹೈಕೋರ್ಟ್, ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪೀಠ, ಸದನ ಸಮಿತಿ, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಕೆರೆಗಳ ಗಡಿ ಗುರುತಿಸಿ, ಒತ್ತುವರಿ ತೆರವುಗೊಳಿಸಲು ಆದೇಶಿಸಿದೆ.

ಈ ಹಿನ್ನೆಲೆಯಲ್ಲಿ ಪಾಲಿಕೆಯ ಕೋರಿಕೆ ಮೇರೆಗೆ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯು ಮೂಲ ಕಂದಾಯ ದಾಖಲೆಗಳ ಪ್ರಕಾರ ಕೆರೆಗಳ ಗಡಿ ಗುರುತಿಸಿ ಅಧಿಕೃತವಾಗಿ ಸರ್ವೇ ನಕ್ಷೆ ತಯಾರಿಸಿ ದೃಢೀಕರಿಸಿದೆ. ಕೆಲವೊಂದು ಕೆರೆಗಳ ಅಧಿಕೃತ ಸರ್ವೇ ನಕ್ಷೆಗಳ ದಾಖಲೆಗಳನ್ನು ಪಾಲಿಕೆಯ ವೆಬ್ ಸೈಟ್‌ನಲ್ಲಿ ಹಾಕಲಾಗಿದೆ. ಕಂದಾಯ ಇಲಾಖೆಯ ಭೂಮಾಪಕರು 169 ಕೆರೆಗಳ ಸರ್ವೇ ಕಾರ್ಯ ಪೂರ್ಣಗೊಳಿಸಿದ್ದಾರೆ. ಉಳಿದ ಕೆರೆಗಳ ಸಮೀಕ್ಷೆಯು ಪ್ರಗತಿಯಲ್ಲಿದೆ.

ಅಭಿವೃದ್ಧಿಯ ನಾಗಾಲೋಟದಲ್ಲಿ ಸಾಗಿರುವ ರಾಜಧಾನಿಯು ಹಲವು ಕೆರೆಗಳನ್ನು ಆಪೋಶನ ತೆಗೆದುಕೊಂಡಿದೆ. ನಗರೀಕರಣದ ಹೆಸರಿನಲ್ಲಿ ಅನೇಕ ಕೆರೆಗಳು ಮುಚ್ಚಲ್ಪಟ್ಟಿದ್ದು, ಅವುಗಳ ಒಡಲಿನಲ್ಲಿ

ಗಗನಚುಂಬಿ ಕಟ್ಟಡಗಳು, ಬಸ್ ನಿಲ್ದಾಣಗಳು, ಕ್ರೀಡಾಂಗಣಗಳು, ದೇವಾಲಯ ಮಸೀದಿಗಳು ತಲೆ ಎತ್ತಿವೆ. ಭೂಗಳ್ಳರು ಮತ್ತು ಸರ್ಕಾರಿ ಸಂಸ್ಥೆಗಳ ದಾಹದಿಂದಾಗಿ ಬಡಾವಣೆಗಳಾಗಿ ಪರಿವರ್ತನೆಗೊಂಡಿವೆ.

ಬೊಮ್ಮನಹಳ್ಳಿ ವಲಯದ ಹುಳಿಮಾವು ಕೆರೆಯು 124.25 ಎಕರೆ ವಿಸ್ತೀರ್ಣವಿದ್ದು, ಇದರಲ್ಲಿ 19.25 ಎಕರೆ ಒತ್ತುವರಿಯಾಗಿದೆ. ಕೆರೆ ಜಾಗವನ್ನು ಆಕ್ರಮಿಸಿರುವ ಬಿಡಿಎ, ಬಡಾವಣೆ ನಿರ್ಮಿಸಿದೆ. ಇದರಲ್ಲದೆ, ಅಂಗಡಿಗಳು, ಕಟ್ಟಡಗಳು, ಸಾಯಿಬಾಬಾ, ವೈಷ್ಣೋದೇವಿ, ಚೌಡೇಶ್ವರಿ ದೇವಾಲಯ, ಅಂಗನವಾಡಿ ಇದೆ. ಕೋನಪ್ಪನ ಅಗ್ರಹಾರ ಕೆರೆಯು 90.04 ಎಕರೆ ಒತ್ತುವರಿಯಾಗಿದೆ. ಕಾಳೇನ ಅಗ್ರಹಾರ ಕೆರೆಯು 2.11 ಎಕರೆ ಜಾಗದಲ್ಲಿ ಗ್ರಾಸ್ ಹೂಪರ್ ರೆಸಾರ್ಟ್, ವಸತಿ ಸಂಕೀರ್ಣಗಳು, ಬಡಾವಣೆಗಳು ನಿರ್ಮಾಣಗೊಂಡಿವೆ. ಪುಟ್ಟೇನಹಳ್ಳಿ ಕೆರೆ 3.19 ಎಕರೆ, ಉತ್ತರಹಳ್ಳಿ ಕೆರೆ 1.10 ಎಕರೆ, ವಸಂತಪುರ ಕೆರೆ 1.28 ಎಕರೆ, ಚಿಕ್ಕಬೇಗೂರು ಕೆರೆ 4.04 ಎಕರೆ, ಗೊಟ್ಟಿಗೆರೆ ಕೆರೆ 2.22 ಎಕರೆ, ಚೊಕ್ಕಸಂದ್ರ ಕೆರೆ 3.07 ಎಕರೆ, ದೊಡ್ಡ ಬಿದರಕಲ್ಲು ಕೆರೆ 4.35 ಎಕರೆ, ಕಗ್ಗದಾಸನಪುರ 3.34 ಎಕರೆ, ದುಬಾಸಿಪಾಳ್ಯ ಕೆರೆ 7.15 ಎಕರೆ, ಚಿಕ್ಕಬಸ್ತಿ 2.10, ತಲಘಟ್ಟಪುರ 2.29, ವರಾಹಸಂದ್ರ 3.38 ಎಕರೆ ಕಬಳಿಕೆಯಾಗಿದೆ.

ಮಹದೇವಪುರ ವಲಯದ ಅಂಬಲೀಪುರ ಕೆಳಗಿನ ಕೆರೆಯು 4.09 ಎಕರೆ ವಿಸ್ತೀರ್ಣವಿದ್ದು, ಇದನ್ನು ಸಂಪೂರ್ಣವಾಗಿ ಸರ್ಕಾರವೇ ಒತ್ತುವರಿ ಮಾಡಿದೆ. ಅಂಬಲೀಪುರ ಮೇಲಿನ ಕೆರೆಯು 12.16 ಎಕರೆ ವಿಸ್ತೀರ್ಣವಿದ್ದು, ಇದರಲ್ಲಿ 2.12 ಎಕರೆ ಜಾಗದಲ್ಲಿ ಖಾಸಗಿ ಅಪಾರ್ಟ್‌ಮೆಂಟ್ ಸೇರಿದಂತೆ ಹಲವು ಕಟ್ಟಡಗಳು ನಿರ್ಮಾಣವಾಗಿವೆ. 4.11 ಎಕರೆ ವಿಸ್ತೀರ್ಣವಿದ್ದ ಬಸಪ್ಪನ ಕಟ್ಟೆಯು ಮಾಯವಾಗಿದೆ.

ಪಾಲಿಕೆ ವ್ಯಾಪ್ತಿಯ ಕೆರೆಗಳ ಸರ್ವೇ ಕಾರ್ಯ ಮುಗಿದ ಬಳಿಕ ಸ್ಥಳ ಮಹಜರು ಮಾಡಿ ಕೆರೆ ಸರಹದ್ದು ಗುರುತಿಸಲಾಗುತ್ತದೆ. ಆನಂತರ ನೋಟಿಸ್ ಜಾರಿ ಮಾಡಿ, ತೆರವು ಕಾರ್ಯಕೈಗೊಳ್ಳಲಾಗುತ್ತದೆ. ನಗರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈಗಾಗಲೇ ಸರ್ವೇ ಪೂರ್ಣಗೊಳಿಸಿರುವ ಕೆರೆಗಳ ಒತ್ತುವರಿ ತೆರವಿಗೆ ಕ್ರಮ ಕೈಗೊಳ್ಳುವಂತೆ ತಹಸೀಲ್ದಾರ್‌ಗಳಿಗೆ ಸೂಚನೆ ನೀಡಲಾಗಿದೆ. ತೆರವು ಬಳಿಕ ಪಾಲಿಕೆಯಿಂದ ತಂತಿ ಬೇಲಿ ಅಳವಡಿಸಿ ಕೆರೆಗಳನ್ನು ಸಂರಕ್ಷಿಸಲಾಗುವುದು ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು

**ಕೆರೆಗಳ ಒತ್ತುವರಿ ವಿವರ**

| ತಾಲ್ಲೂಕು | ಸರ್ವೇ ಮುಗಿಸಿರುವ ಕೆರೆಗಳು | ಒತ್ತುವರಿ ಮುಕ್ತ ಕೆರೆಗಳು | ಕೆರೆಗಳ ಒಟ್ಟು ವಿಸ್ತೀರ್ಣ (ಎಕರೆಗಳಲ್ಲಿ) | ಒತ್ತುವರಿಯಾಗಿರುವ ವಿಸ್ತೀರ್ಣ | ಒತ್ತುವರಿ ತೆರವು | ತೆರವಿಗೆ ಬಾಕಿ |
|---|---|---|---|---|---|---|
| ಪೂರ್ವ | 46 | 1 | 1641.17 | 154.08 | 22.34 | 131.03 |
| ದಕ್ಷಿಣ | 64 | 2 | 1316.17 | 253.08 | – | 253.08 |
| ಉತ್ತರ | 32 | 3 | 873.17 | 120.08 | 6 ಗುಂಟೆ | 120.03 |
| ಉತ್ತರ ಹೆಚ್ಚುವರಿ | 25 | 3 | 1349.17 | 99.08 | 22.05 | 77.03 |
| ಆನೇಕಲ್ | 2 | 0 | 58.24 | 2.25 | 00 | 2.25 |
| **ಒಟ್ಟು** | **169** | **9** | **5239.12** | **629.20** | **45.06** | **584.03** |

ಆಧಾರ: ವಿಜಯ ಕರ್ನಾಟಕ, ದಿನಾಂಕ:27.10.2020

## 37. ಸರಳ ಜಂಬೂಸವಾರಿ

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಕೊನೆಯ ದಿನದ ಪ್ರಮುಖ ಆಕರ್ಷಣೆಯಾದ ಜಂಬೂಸವಾರಿಯು ಕೋವಿಡ್ ಹಿನ್ನೆಲೆಯಲ್ಲಿ ಸರಳ, ಸಾಂಪ್ರದಾಯಿಕವಾಗಿ ಅರಮನೆ ಆವರಣದಲ್ಲಿ ಸೀಮಿತ ಪ್ರೇಕ್ಷಕರ ಸಮ್ಮುಖದಲ್ಲಿ ನಡೆಯಿತು. ವಿಜಯದಶಮಿ ಅಂಗವಾಗಿ ನಡೆದ ಈ ಮೆರವಣಿಗೆಯನ್ನು ನೇರವಾಗಿ ನೋಡುವ ಅವಕಾಶ ಕೇವಲ 300 ಮಂದಿಗೆ ಮಾತ್ರ ಲಭ್ಯವಾಯಿತು. ಟಿವಿ, ಆನ್‌ಲೈನ್‌ನಲ್ಲಿ ಲಕ್ಷಾಂತರ ಮಂದಿ ವೀಕ್ಷಿಸಿದರು.

ಮೆರವಣಿಗೆಗೆ ಚಾಲನೆ ನೀಡುವ ಅವಕಾಶ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಐದನೇ ಬಾರಿಗೆ ಲಭಿಸಿತು. ನವರಾತ್ರಿಯ ವೈಭವಕ್ಕೆ ಕಳಸಪ್ರಾಯವಾದ ಜಂಬೂ ಸವಾರಿಯಲ್ಲಿ ಗಜರಾಜ 'ಅಭಿಮನ್ಯು' ಮೊದಲ ಬಾರಿಗೆ 750 ಕೆಜಿ ತೂಕದ ಚಿನ್ನದ ಅಂಬಾರಿಯನ್ನು ಹೊತ್ತು ಸಂಗಾತಿಗಳಾದ 'ವಿಜಯ' ಹಾಗೂ 'ಕಾವೇರಿ' ಅವರೊಂದಿಗೆ ಹೆಜ್ಜೆಹಾಕಿದೆ. ಅಂಬಾರಿಯಲ್ಲಿ ಶ್ರೀ ಚಾಮುಂಡಿ ಮಾತಾ ಕೀ ' ಮತ್ತಿತರ ಜೈಕಾರಗಳು ಕೇಳಿ ಬರಲಿಲ್ಲ. ಉತ್ತರದ ಬಲರಾಮ ದ್ವಾರದವರೆಗೆ, ಅಂದರೆ ಸುಮಾರು 500 ಮೀಟರ್ ಸಾಗಿದ ಮೆರವಣಿಗೆ ಅರ್ಧ ತಾಸಿನಲ್ಲಿ ಮುಗಿಯಿತು.

ಅರಮನೆ ಉತ್ತರದಲ್ಲಿರುವ ಬಲರಾಮ ದ್ವಾರದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಮಧ್ಯಾಹ್ನ 2.59 ರಿಂದ 3.20 ರವರೆಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ನಂದಿ ಧ್ವಜ ಪೂಜೆ ನೆರವೇರಿಸಿದರು. ಮೊದಲಿಗೆ ನಿಶಾನೆ(ಧ್ವಜ) ಆನೆ ವಿಕ್ರಮ, ನೌಫತ್ ಆನೆ ಗೋಪಿ ಸಾಗಿದವು. ಅದರ ಹಿಂದೆ ನಾದಸ್ವರ, ವೀರಗಾಸೆ, ಆರೋಗ್ಯ ಇಲಾಖೆ ವತಿಯಿಂದ ಕೊರೋನಾ ವಾರಿಯರ್‌ಗಳಿಗೆ ಗೌರವ ಸಲ್ಲಿಸುವ ಸ್ತಬ್ದ ಚಿತ್ರ, ಚೆಂಡೆಮೇಳ, ಮರಗಾಲು ವೇಷ, ಚಿಲಿಪಿಲಿ ಗೊಂಬೆ ತಂಡಗಳು ಸಾಗಿದವು.

ನಂತರ ಕರ್ನಾಟಕ ಪೊಲೀಸ್ ಬ್ಯಾಂಡ್ ವತಿಯಿಂದ ಆನೆ ಬಂಡಿ ಸ್ತಬ್ದ ಚಿತ್ರ, ಪೊಲೀಸ್ ಅಶ್ವದಳದ ಪ್ರಧಾನ ದಳಪತಿ, ಕೆಎಆರ್‌ಪಿ ಮೌಂಡೆದ್ ಕಂಪನಿ, ವಿ.ನಟರಾಜ ಮತ್ತು ತಂಡದಿಂದ ನಾದಸ್ವರ ಮುನ್ನಡೆದವು. ಇವುಗಳ ಹಿಂದೆ 750 ಕೆ.ಜಿ ತೂಕದ ಚಿನ್ನದ ಅಂಬಾರಿಯಲ್ಲಿ ಶ್ರೀ ಚಾಮುಂಡೇಶ್ವರಿ ವಿಗ್ರಹ ಹೊತ್ತು 'ಅಭಿಮನ್ಯು' ತನ್ನ ಸಂಗಾತಿಗಳಾದ 'ವಿಜಯ' ಮತ್ತು 'ಕಾವೇರಿ' ಜೊತೆ ಸಂಜೆ 3.40ಕ್ಕೆ ಬಂದ ವಿಶೇಷ ವೇದಿಕೆಯಲ್ಲಿ ನಿಂತು ಮುಖ್ಯಮಂತ್ರಿಯವರು ಚಾಮುಂಡೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡುತ್ತಿದ್ದಂತೆ 21 ಸುತ್ತು ಕುಶಾಲ ತೋಪುಗಳನ್ನು ಸಿಡಿಸಿ, ರಾಷ್ಟ್ರಗೀತೆ ನುಡಿಸಲಾಯಿತು.

ನಂತರ ಅಂಬಾರಿ ಆನೆಯು ಪೊಲೀಸ್ ಅಶ್ವದಳ, ಕೆಎಆರ್‌ಪಿ ಮೌಂಟೆಡ್ ಕಂಪನಿ ಬೆಂಗಾವಲಿನಲ್ಲಿ ಮುಂದೆ ಸಾಗಿತು. ಫಿರಂಗಿ ಗಾಡಿಗಳು, ಅರಣ್ಯ ಇಲಾಖೆ ವೈದ್ಯರ ತಂಡ, ಅಗ್ನಿಶಾಮಕ ತಂಡ ಮತ್ತು ತುರ್ತು ಚಿಕಿತ್ಸಾ ವಾಹನ ಸಾಗಿದವು.

ವಿಶೇಷ ವೇದಿಕೆಯಲ್ಲಿ ಮುಖ್ಯಮಂತ್ರಿ ಜೊತೆ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸಚಿವ ಎಸ್.ಟಿ. ಸೋಮಶೇಖರ್, ಮೇಯರ್ ತಸ್ನೀಂ, ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ, ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಇದ್ದರು. ಪ್ರವಾಸೋದ್ಯಮ ಸಚಿವ ಸಿ.ಟಿ ರವಿ, ಸಂಸದ ಪ್ರತಾಪ್ ಸಿಂಹ, ಶಾಸಕ ಎಸ್.ಎ.ರಾಮದಾಸ್ ಮೊದಲಾದವರು ದಸರಾ ವೀಕ್ಷಿಸಿದರು.

ಆಧಾರ: ಕನ್ನಡಪ್ರಭ, ದಿನಾಂಕ:27.10.2020

## 38. ಸರ್ಕಾರಿ ನೌಕರರ ಕುಟುಂಬದವರಿಗೆ ನಿರ್ಬಂಧ

ಸರ್ಕಾರಿ ನೌಕರರು ವರದಕ್ಷಿಣೆ ತೆಗೆದುಕೊಳ್ಳುವಂತಿಲ್ಲ, ಪತಿ ಅಥವಾ ಪತ್ನಿ ಇದ್ದಲ್ಲಿ ಮತ್ತೊಂದು ಮದುವೆ ಆಗುವಂತಿಲ್ಲ. ಪತ್ರಿಕೆಗಳಿಗೆ ಅನುಮತಿ ಇಲ್ಲದೆ ಲೇಖನಗಳನ್ನು ಬರೆಯುವಂತಿಲ್ಲ. ರಾಜಕೀಯ ಪಕ್ಷಗಳು ಮತ್ತು ಅವುಗಳ ಒಡನಾಟ ಹೊಂದಿದ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತಿಲ್ಲ.

ರಾಜ್ಯ ಸರ್ಕಾರವು 'ಕರ್ನಾಟಕ ನಾಗರಿಕ ಸೇವಾ (ನಡತೆ) 2020' ಕರಡನ್ನು ಬಿಡುಗಡೆ ಮಾಡಿದ್ದು, ಅದರ ಪ್ರಮುಖ ಅಂಶಗಳಿವು. ಎಲ್ಲ ನೌಕರರಿಗೂ ಇದು ಅನ್ವಯವಾಗಲಿದ್ದು, ಇದಕ್ಕೆ ಆಕ್ಷೇಪಣೆಗಳಿದ್ದರೆ 15 ದಿನಗಳಲ್ಲಿ ಸಲ್ಲಿಸಬಹುದು.

**ಪ್ರಮುಖ ಅಂಶಗಳು**

- ಸರ್ಕಾರಕ್ಕೆ ಸಂಪೂರ್ಣ ನೀತಿ ನಿಷ್ಠೆ ಹೊಂದಿರಬೇಕು. ರಾಜಕೀಯವಾಗಿ ತಟಸ್ಥವಾಗಿರಬೇಕು. ಸಾರ್ವಜನಿಕರೊಂದಿಗೆ ವಿಧೇಯರಾಗಿ ನಡೆದುಕೊಳ್ಳಬೇಕು.
- ಸರ್ಕಾರಿ ನೌಕರರು ಯಾವುದೇ ರಾಜಕೀಯ ಪಕ್ಷದ ಅಥವಾ ರಾಜಕೀಯ ಪಕ್ಷಗಳಿಗೆ ಸಂಬಂಧ ಹೊಂದಿದ ಯಾವುದೇ ಸಂಘ–ಸಂಸ್ಥೆಗಳ ಸದಸ್ಯರಾಗಿರಬಾರದು. ಅವುಗಳ ಜೊತೆ ಸಂಬಂಧ ಹೊಂದಿರಬಾರದು.
- ರಾಜಕೀಯ ಚಳುವಳಿ ಅಥವಾ ಚಟುವಟಿಕೆಗಳಲ್ಲಿ ಭಾಗವಹಿಸಬಾರದು. ಅವುಗಳಿಗೆ ವಂತಿಕೆಯನ್ನು ಸಂಗ್ರಹಿಸಬಾರದು ಮತ್ತು ಕೊಡಬಾರದು.
- ಕಾನೂನು ಬದ್ಧ ಸರ್ಕಾರವನ್ನು ಉರುಳಿಸುವ ಪ್ರತ್ಯಕ್ಷ ಅಥವಾ ಪರೋಕ್ಷ ಚಳುವಳಿಗಳಲ್ಲಿ ಭಾಗವಹಿಸಬಾರದು. ರಾಜಕೀಯ ಪಕ್ಷಗಳ ಪರವಾಗಿ ಚುನಾವಣಾ ಪ್ರಚಾರದಲ್ಲಿ ತೊಡಗಬಾರದು. ರಾಜ್ಯ ಅಥವಾ ರಾಷ್ಟ್ರ ಮಟ್ಟದಲ್ಲಿ ಕ್ರೀಡಾ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸಬಾರದು.
- ಧಾರ್ಮಿಕ, ಜನಾಂಗೀಯ, ಭಾಷಿಕ, ಪ್ರಾದೇಶಿಕ, ಕೋಮು ಭಾವನೆ ಮತ್ತು ದ್ವೇಷಕ್ಕೆ ಕಾರಣವಾಗುವ ಸಂಘ–ಸಂಸ್ಥೆಗಳಲ್ಲಿ ಭಾಗವಹಿಸುವಂತಿಲ್ಲ.
- ದೇಶದ ಸಾರ್ವಭೌಮತ್ವ, ಅಖಂಡತೆ, ಭದ್ರತೆ, ವಿದೇಶಿ ರಾಷ್ಟ್ರಗಳ ಸಂಬಂಧ ಹದಗೆಡಿಸುವ ಉದ್ದೇಶದ ಪ್ರತಿಭಟನೆ, ಬಹಿರಂಗ ಸಮಾವೇಶಗಳಲ್ಲಿ ಭಾಗವಹಿಸುವಂತಿಲ್ಲ.
- ಸರ್ಕಾರದಿಂದ ನೇಮಿಸಲ್ಪಟ್ಟ ಪ್ರಾಧಿಕಾರದ ಅನುಮತಿ ಪಡೆಯದೇ ವೃತ್ತ ಪತ್ರಿಕೆ, ನಿಯತಕಾಲಿಕೆಗಳಲ್ಲಿ ಭಾಗಶ: ಅಥವಾ ಪೂರ್ಣ ಪ್ರಮಾಣದ ಒಡೆತನ ಹೊಂದುವಂತಿಲ್ಲ, ಪೂರ್ವಾನುಮತಿ ಇಲ್ಲದೇ ಪತ್ರಿಕೆಗಳಿಗೆ ಲೇಖನ ಬರೆಯುವಂತಿಲ್ಲ.
- ಚಲನಚಿತ್ರ ಮತ್ತು ಧಾರಾವಾಹಿಗಳಲ್ಲಿ ನಟಿಸುವಂತಿಲ್ಲ. ವರದಕ್ಷಿಣೆ/ವಧು ದಕ್ಷಿಣೆ ತೆಗೆದುಕೊಳ್ಳುವಂತಿಲ್ಲ. ವರದಕ್ಷಿಣೆಗಾಗಿ ವಧುವಿನ ತಂದೆ ತಾಯಿಗೆ ಬೇಡಿಕೆ ಸಲ್ಲಿಸುವಂತಿಲ್ಲ.
- ಪೂರ್ವಾನುಮತಿ ಇಲ್ಲದೆ ನೌಕರರು ಭಿನ್ನವತ್ತಳೆ, ಪ್ರಶಸ್ತಿ ಪತ್ರ ಸ್ವೀಕರಿಸುವಂತಿಲ್ಲ ತಂದೆ ತಾಯಿಯನ್ನು ನಿರ್ಲಕ್ಷ್ಯಿಸುವಂತಿಲ್ಲ. ಗೃಹ ಕೃತ್ಯಕ್ಕೆ ಮಕ್ಕಳನ್ನು ನೇಮಿಸಿಕೊಳ್ಳುವಂತಿಲ್ಲ.

ಆಧಾರ: ಪ್ರಜಾವಾಣಿ, ದಿನಾಂಕ:28.10.2020

## 39. ಆನ್‌ಲೈನ್ ಕ್ಲಾಸ್ ಅವಧಿಗೆ ಮಿತಿ

ಕೋವಿಡ್ ಸೋಂಕಿನ ಪ್ರಸರಣದಿಂದ ಭೌತಿಕವಾಗಿ ಇನ್ನೂ ಶಾಲೆಗಳನ್ನು ತೆರೆಯಲು ಸಾಧ್ಯವಾಗದ ಹಿನ್ನೆಲೆಯಲ್ಲಿ ತಜ್ಞರ ಸಮಿತಿ ಶಿಫಾರಸ್ಸಿನ ಅನ್ವಯ ಆನ್‌ಲೈನ್ ಬೋಧನಾ ತರಗತಿಗಳನ್ನು ಮುಂದುವರಿಸಲು ಸರ್ಕಾರ ಹೊಸ ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ಆನ್‌ಲೈನ್ ಕ್ಲಾಸ್‌ಗೆ ಪ್ರತಿ ತರಗತಿಗೆ ಗರಿಷ್ಠ 30 ನಿಮಿಷಗಳನ್ನು ನಿಗದಿ ಮಾಡಲಾಗಿದೆ. 6 ಮತ್ತು ನಂತರದ ತರಗತಿಗಳಿಗೆ ಅವಶ್ಯಕತೆಗೆ ಅನುಗುಣವಾಗಿ 30 ರಿಂದ 45 ನಿಮಿಷಗಳ ಅವಕಾಶ ಒದಗಿಸಲಾಗಿದೆ. ವಯೋಮಾನಕ್ಕೆ ಅನುಗುಣವಾಗಿ ದಿನಕ್ಕೆ 1 ರಿಂದ 4 ಗರಿಷ್ಠ ತರಗತಿಗಳನ್ನು ತೆಗೆದುಕೊಳ್ಳಲು ಸೂಚಿಸಲಾಗಿದೆ. 3 ರಿಂದ 6 ವರ್ಷದವರೆಗೆ (ಪ್ರಿ ಪ್ರೈಮರಿ) ದಿನಕ್ಕೆ 1, 1 ರಿಂದ 5ನೇ ತರಗತಿಗೆ 2, 6 ರಿಂದ 8ನೇ ತರಗತಿವರೆಗೆ 3 ಹಾಗೂ 9 ರಿಂದ 10ನೇ ತರಗತಿ ಮಕ್ಕಳಿಗೆ 4 ತರಗತಿಗಳನ್ನು ನಡೆಸಲು ಅವಕಾಶ ಕಲ್ಪಿಸಲಾಗಿದೆ.

2ನೇ ತರಗತಿವರೆಗೆ ವಾರದಲ್ಲಿ ಪರ್ಯಾಯ ದಿನಗಳ ಬೋಧನೆ; 3ನೇ ತರಗತಿ ನಂತರ ವಾರಕ್ಕೆ ಗರಿಷ್ಠ 5 ದಿನಗಳವರೆಗೆ ಆನ್‌ಲೈನ್ ತರಗತಿ ನಡೆಸಬಹುದು. 2ನೇ ತರಗತಿವರೆಗೆ ಪೋಷಕರ ಉಪಸ್ಥಿತಿ ಅಥವಾ ಪೋಷಕರ ಅನುಮತಿ ಕಡ್ಡಾಯಗೊಳಿಸಲಾಗಿದೆ. ಸಿಂಕ್ರನಸ್(ನೇರ ಪ್ರಸಾರದ ತರಗತಿ) ಮತ್ತು ಅಸಿಂಕ್ರನಸ್(ಪೂರ್ವ–ಮುದ್ರಿತ ಅಧಿವೇಶನ) ವಿಧಾನಗಳಿಗೆ ಅನುಮತಿ ನೀಡಲಾಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ತಿಳಿಸಿದ್ದಾರೆ.

ರಾಜ್ಯದ ಖಾಸಗಿ ಶಾಲೆಗಳು ಆನ್‌ಲೈನ್ ಬೋಧನೆ ಆರಂಭಿಸಿ ಹೆಚ್ಚುವರಿ ಶುಲ್ಕ ಪಾವತಿಸಲು ಒತ್ತಡ ತರುತ್ತಿದ್ದ ಹಿನ್ನೆಲೆಯಲ್ಲಿ ಪೋಷಕರ ದೂರಿನನ್ವಯ ಕ್ರಮ ಕೈಗೊಂಡು ಹೆಚ್ಚುವರಿ ಶುಲ್ಕ ಪಡೆಯದೇ ಆನ್‌ಲೈನ್ ತರಗತಿಗಳನ್ನು ನಡೆಸಲು 2020ರ ಏಪ್ರಿಲ್‌ನಲ್ಲಿ ಆದೇಶ ಹೊರಡಿಸಲಾಗಿತ್ತು. ಆದರೆ, ಪೋಷಕರಿಗೆ ಮಕ್ಕಳ ಆನ್‌ಲೈನ್ ತರಗತಿಗಳಿಗೆ ಮೊಬೈಲ್ ಖರೀದಿಸಲು ಸಾಮರ್ಥ್ಯ ಇಲ್ಲದಿರುವ ಮತ್ತು ಎಲ್‌ಕೆಜಿಯಿಂದ ಐದನೇ ತರಗತಿ ಮಕ್ಕಳು ಆನ್‌ಲೈನ್ ಶಿಕ್ಷಣದಲ್ಲಿ ಭಾಗವಹಿಸಲು ತೊಂದರೆಗಳಾಗುತ್ತಿವೆ ಎಂಬ ಪೋಷಕರ ದೂರಿನ ಹಿನ್ನೆಲೆಯಲ್ಲಿ ಜೂನ್ 15 ರಂದು ತಜ್ಞರ ಸಮಿತಿ ರಚಿಸಿ ಆನ್‌ಲೈನ್ ಶಿಕ್ಷಣ ಕುರಿತು ವರದಿ ನೀಡಲು ಕೋರಲಾಗಿತ್ತು.

ಜೂನ್ 17 ರಂದು ಎಲ್‌ಕೆಜಿಯಿಂದ ಐದನೇ ತರಗತಿವರೆಗೆ ಆನ್‌ಲೈನ್ ಶಿಕ್ಷಣ ರದ್ದುಪಡಿಸಲು ಆದೇಶ ಹೊರಡಿಸಲಾಗಿತ್ತು. ತಜ್ಞರ ಸಮಿತಿ ವರದಿ ಬರುವವರೆಗೆ ಪ್ರಾಥಮಿಕ ತರಗತಿಗಳಿಂದ 10ನೇ ತರಗತಿವರೆಗೆ ಆನ್‌ಲೈನ್ ಶಿಕ್ಷಣಕ್ಕೆ ತರಗತಿವಾರು ಅವಧಿ ನಿಗದಿಪಡಿಸಿ ಜೂ. 27ರಂದು ಸುತ್ತೋಲೆ ಹೊರಡಿಸಲಾಗಿತ್ತು. ಆದರೆ, ಇಲಾಖೆಯ ಜೂನ್ 17ರ ಸುತ್ತೋಲೆ ವಿರುದ್ಧ ಖಾಸಗಿ ಶಿಕ್ಷಣ ಸಂಸ್ಥೆಗಳು ಹೈಕೋರ್ಟ್‌ನಲ್ಲಿ ದಾವೆ ಸಲ್ಲಿಸಿದ್ದವು. ನ್ಯಾಯಾಲಯವು ಜೂನ್ 17 ಮತ್ತು ಜೂನ್ 27ರ ಆದೇಶಗಳಿಗೆ ತಡೆಯಾಜ್ಞೆ ನೀಡಿ, ಆನ್‌ಲೈನ್ ಶಿಕ್ಷಣವನ್ನು ಯಥಾವತ್ತಾಗಿ ಮುಂದುವರೆಸಿಕೊಂಡು ಹೋಗಲು ಅವಕಾಶ ನೀಡಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಪರಿಷ್ಕೃತ ಮಾರ್ಗಸೂಚಿ ಹೊರಡಿಸಿದ್ದಾರೆ.

ಆಧಾರ: ವಿಜಯಕರ್ನಾಟಕ, ದಿನಾಂಕ:29.10.2020

## 40. ಕೊರೋನಾ ಹತೋಟಿಗೆ ನವಸೂತ್ರ

ಕೊರೋನಾ ಸೋಂಕು ಪ್ರಕರಣಗಳು ತಗ್ಗಿದ್ದರೂ ನಿರುಮ್ಮಳವಾಗಿರುವಂತಿಲ್ಲ. 2ನೇ ಅಲೆ ಅಪ್ಪಳಿಸಲಿದೆ, ಮುಂದಿನ 3 ತಿಂಗಳು ಇನ್ನಷ್ಟು ಜಾಗೃತಿ ವಹಿಸಬೇಕಿದೆ ಎಂಬ ತಜ್ಞರ ಎಚ್ಚರಿಕೆ ಮಿಶ್ರಿತ ಸಲಹೆ ಬೆನ್ನಲ್ಲೇ ಸಿಎಂ ಯಡಿಯೂರಪ್ಪ ಪರಿಣಾಮಕಾರಿ ಕ್ರಮಕ್ಕೆ ಮುಂದಾಗಿದ್ದಾರೆ.

ಮಾರಕ ಪಿಡುಗಿನ ಹತೋಟಿಗೆ ನವಸೂತ್ರಗಳನ್ನು ರೂಪಿಸಿ ಜಿಲ್ಲಾ ಉಸ್ತುವಾರಿ ಸಚಿವರಿಗೆ ಹೆಚ್ಚಿನ ಹೊಣೆ ಒಪ್ಪಿಸಿದ್ದಾರೆ. ಪರಿಣಾಮಕಾರಿ ಕ್ರಮಗಳಿಂದ ಜನರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಿದರೆ ರೋಗ ನಿಯಂತ್ರಣ ಹಾಗೂ ಹೆಚ್ಚಿನ ಅಪಾಯ ತಡೆಗಟ್ಟಲು ಸಾಧ್ಯ ಎಂಬ ನಿಲುವು ತಳೆದಿದ್ದಾರೆ.

ಸೋಂಕು ಪತ್ತೆಯಾದ ಹಂತದಿಂದ ಇದುವರೆಗೂ ಉಸ್ತುವಾರಿ ಜಿಲ್ಲೆಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದವರಿಗೆ ಬಿಎಸ್‌ವೈ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಚಳಿಗಾಲದಲ್ಲಿ ಕೊರೋನಾ ಹೆಚ್ಚುವ

ಸಂಭವವಿರುವ ಕಾರಣ ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ತಿಳಿಸಿ, ಪ್ರತಿ ವಾರ ಅನುಷ್ಠಾನದ ವರದಿ ಸಲ್ಲಿಸುವಂತೆಯೂ ಸೂಚಿಸಿದ್ದಾರೆ.

**ಕೋವಿಡ್ ತಡೆಗೆ ಪರಿಹಾರೋಪಾಯಗಳು:–**

- ಗ್ರಾಮ ಹಾಗೂ ನಗರ ಪ್ರದೇಶ ಬೂತ್ ಮಟ್ಟದ ಸಮಿತಿಗಳನ್ನು ಕ್ರಿಯಾಶೀಲಗೊಳಿಸಿ, ಅವುಗಳ ಕಾರ್ಯಗಳನ್ನು ಪರಾಮರ್ಶಿಸುವುದು.
- ಪ್ರಾಥಮಿಕ ಸಂಪರ್ಕಿತರಿಗೆ ಕಡ್ಡಾಯವಾಗಿ ಪರೀಕ್ಷೆಗೆ ಒಳಪಡಿಸುವುದು
- ಸೋಂಕು ಸಾಧ್ಯತೆಯುಳ್ಳ ಹಿರಿಯ ನಾಗರಿಕರ ಆರೋಗ್ಯದ ಬಗ್ಗೆ ಆರೋಗ್ಯ ಅಧಿಕಾರಿಗಳ ಮೂಲಕ ನಿರಾಂತಕ ನಿಗಾವಹಿಸುವುದು
- ಗೃಹ ಆರೈಕೆ/ಮನೆಯಲ್ಲೇ ಕ್ವಾರಂಟೈನ್‌ನಲ್ಲಿ ಇರುವವರ ಆರೋಗ್ಯದ ಬಗ್ಗೆ ನಿಯಮಿತವಾಗಿ ನಿಗಾವಹಿಸುವುದು.
- ಐಸಿಯುನಲ್ಲಿರುವ ರೋಗಿಗಳಿಗೆ ಟೆಲಿಮೆಡಿಸಿನ್ ವ್ಯವಸ್ಥೆ ತಜ್ಞರಿಂದ ಚಿಕಿತ್ಸೆ ಕೊಡಿಸಿ ಗುಣಮುಖರಾಗುವಂತೆ ಮಾಡುವ ಮೂಲಕ ಸಾವು ಸಂಭವಿಸದಂತೆ ನೋಡಿಕೊಳ್ಳುವುದು.
- ಪ್ರತಿ ಸಾವಿಗೆ ಸಂಬಂಧಿಸಿದಂತೆ ವೈದ್ಯರು ಮರಣ ಶೋಧನಾ (ಡೆತ್ ಆಡಿಟ್) ವರದಿಯನ್ನು 24 ಗಂಟೆಯೊಳಗೆ ಸಲ್ಲಿಸುವುದು.
- ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸುವಿಕೆ, ವ್ಯಕ್ತಿಗತ ಅಂತರ ಕಾಯ್ದುಕೊಳ್ಳುವುದನ್ನು ಕಡ್ಡಾಯಗೊಳಿಸುವುದು. ಮಾಸ್ಕ್ ಧರಿಸದವರಿಗೆ ನಗರ ಪ್ರದೇಶದಲ್ಲಿ ರೂ.250 ಗ್ರಾಮೀಣ ಪ್ರದೇಶದಲ್ಲಿ ರೂ.100 ದಂಡ ವಿಧಿಸುವ ಕುರಿತು ತಿಳುವಳಿಕೆ ಮೂಡಿಸುವುದು.
- ಕೊರೋನಾ ನಿಯಮ ಉಲ್ಲಂಘಿಸುವವರ ವಿರುದ್ಧ ಕಾನೂನು ರೀತ್ಯ ಪೊಲೀಸ್ ಇಲಾಖೆ ಕ್ರಮ ಜರುಗಿಸುವುದು.
- ನಾಗರಿಕರ ಮನಸ್ಸಿನಲ್ಲಿ ಕೊರೋನಾ ಕುರಿತಾದ ಭಯ ಹೋಗಲಾಡಿಸಲು ಸ್ಥಳೀಯ ಧಾರ್ಮಿಕ ಗುರುಗಳ ನೆರವು ಪಡೆಯುವುದು.

ಆಧಾರ: ವಿಜಯವಾಣಿ, ದಿನಾಂಕ:29.10.2020

## 41. ಸೋಂಕಿತರಿಗೂ ಮತದಾನದ ಅವಕಾಶ

ರಾಜರಾಜೇಶ್ವರಿ ನಗರದ ಉಪ ಚುನಾವಣೆಯಲ್ಲಿ ಕೊರೋನಾ ದೃಢಪಟ್ಟವರಿಗೂ ನವೆಂಬರ್ 3ರ ಚುನಾವಣಾ ದಿನದ ಸಂಜೆ 5 ರಿಂದ 6 ಗಂಟೆಯ ವರೆಗಿನ ಕೊನೆಯ ಒಂದು ಗಂಟೆ ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ತಿಳಿಸಿದರು.

ಕ್ಷೇತ್ರದಲ್ಲಿ 17 ದಿನದಲ್ಲಿ 1177 ಜನರಿಗೆ ಸೋಂಕು ದೃಢಪಟ್ಟಿದೆ. ಸೋಂಕು ದೃಢಪಟ್ಟ ಎಲ್ಲರಿಗೂ ಮಾಸ್ಕ್, ಫೇಸ್ ಶೀಲ್ಡ್, ಗ್ಲೌಸ್, ಪಿಪಿಇ ಕಿಟ್ ನೀಡುತ್ತೇವೆ. ಸೋಂಕು ದೃಢಪಟ್ಟು ಮತದಾನ ಮಾಡಲು ಇಚ್ಛಿಸುವವರಿಗೆ ಕಂಟ್ರೋಲ್ ರೂಂ ಸಿಬ್ಬಂದಿ ಕರೆ ಮಾಡಲಿದ್ದಾರೆ. ಸೋಂಕಿತರಿಗೆ ಮತದಾನದ ವ್ಯವಸ್ಥೆಗಾಗಿ ಆರ್.ಆರ್.ನಗರ 9 ವಾರ್ಡ್‌ಗೂ ತಲಾ ಹತ್ತು ಆ್ಯಂಬುಲೆನ್ಸ್ ಹೋಗಲಿದೆ. ಪಿಪಿಇ ಕಿಟ್

ಧರಿಸಿದ ಸಿಬ್ಬಂದಿ ಮತದಾನದ ಕಡೇ ಒಂದು ಗಂಟೆ 5 ರಿಂದ 6 ಗಂಟೆಯವರೆಗೆ ಮತದಾನ ಮಾಡಿಸಿ, ವಾಪಸ್ಸು ಮನೆಗೆ ಬಿಡಲಾಗುತ್ತದೆ ಎಂದರು.

ಆರ್.ಆರ್. ನಗರದಲ್ಲಿ ಕೊರೋನಾ ದೃಢಪಟ್ಟವರಲ್ಲಿ ಆಸ್ಪತ್ರೆಯಲ್ಲಿ 317 ಜನ, ಮನೆಯಲ್ಲಿ 842 ಹಾಗೂ ಕೋವಿಡ್ ಆರೈಕೆ ಕೇಂದ್ರದಲ್ಲಿ 17 ಜನ ಚಿಕಿತ್ಸೆ ಪಡೆಯುತ್ತಿದ್ದಾರೆ. ಸೋಂಕು ದೃಢಪಟ್ಟವರು ಮತದಾನ ಮಾಡಲು ಬರುವ ಸಂದರ್ಭದಲ್ಲಿ ಕೊರೋನೇತರರು ಮತದಾನಕ್ಕೆ ಬಂದರೂ, ಮತಗಟ್ಟೆ ಪೂರ್ಣ ಸ್ಯಾನಿಟೈಸ್ ಮಾಡಿ, ಮತದಾನಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದರು.

**ವೃದ್ಧರಿಗೆ, ದಿವ್ಯಾಂಗರಿಗೆ ಪೋಸ್ಟಲ್ ಬ್ಯಾಲೆಟ್:** ಆರ್.ಆರ್.ನಗರದಲ್ಲಿ 80 ವರ್ಷಕ್ಕಿಂತ ಮೇಲ್ಪಟ್ಟ 5,560 ಹಿರಿಯ ನಾಗರಿಕರು ಹಾಗೂ 695 ಜನ ವಿಕಲಚೇತನರು ಇದ್ದಾರೆ. ಇವರಲ್ಲಿ 489 ಹಿರಿಯ ಮತದಾರರು ಹಾಗೂ 23 ವಿಕಲಚೇತನರು ಪೋಸ್ಟಲ್ ಬ್ಯಾಲೆಟ್‌ನ ಮೂಲಕ ಮತದಾನ ಮಾಡಲು ಇಚ್ಛಿಸಿದ್ದಾರೆ. ಪಾಲಿಕೆ ಸಿಬ್ಬಂದಿ ಇವರ ಮನೆಗೇ ಭೇಟಿ ನೀಡಿ, ಮತದಾನ ಮಾಡಲು ಅವಕಾಶ ಕಲ್ಪಿಸಿದ್ದಾರೆ. ಈ ಪ್ರಕ್ರಿಯೆ ಸಂಪೂರ್ಣ ವಿಡಿಯೋ ಚಿತ್ರಣ ನಡೆಯಲಿದೆ ಎಂದರು.

**ನೋಟಾಗಾಗಿ ಪ್ರತ್ಯೇಕ ಬ್ಯಾಲೆಟ್ ಯೂನಿಟ್:** ಸಾಮಾನ್ಯವಾಗಿ ಬ್ಯಾಲೆಟ್ ಯೂನಿಟ್‌ನಲ್ಲಿ ಕೊನೆಯ ಆಯ್ಕೆಯಲ್ಲಿ ನೋಟಾ ಚಲಾವಣೆಗೆ ಅವಕಾಶ ಕಲ್ಪಿಸಲಾಗುತ್ತದೆ. ಆರ್.ಆರ್.ನಗರದಲ್ಲಿ 16 ಜನ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ನೋಟಾ ಚಲಾವಣೆಗೆ ಪ್ರತ್ಯೇಕ ಬ್ಯಾಲೆಟ್ ಯೂನಿಟ್ ವ್ಯವಸ್ಥೆ ಮಾಡಲಾಗಿದೆ ಎಂದರು.

ಆಧಾರ: ಉದಯವಾಣಿ, ದಿನಾಂಕ:30.10.2020

## 42. ಇಂದಿನಿಂದ ಶಾಲೆಗೆ ಶಿಕ್ಷಕರ ಹಾಜರಿ ಕಡ್ಡಾಯ

ಮಧ್ಯಂತರ ರಜೆ ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ ಅಕ್ಟೋಬರ್ 31ರಿಂದ ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಿಗೆ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಮಾತ್ರ ಕಡ್ಡಾಯವಾಗಿ ಹಾಜರಾಗಬೇಕು. ವಿದ್ಯಾರ್ಥಿಗಳು ಹಾಜರಾಗುವಂತಿಲ್ಲ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಸೂಚನೆ ನೀಡಿದೆ.

ಈ ಸಂಬಂಧ ಇಲಾಖೆಯ ಆಯುಕ್ತ ವಿ. ಅನ್ಬುಕುಮಾರ್ ಸುತ್ತೋಲೆ ಹೊರಡಿಸಿದ್ದು, ಕೋವಿಡ್ ಹಿನ್ನೆಲೆಯಲ್ಲಿ ವಿದ್ಯಾಗಮ ಕಾರ್ಯಕ್ರಮ ತಾತ್ಕಾಲಿಕ ಸ್ಥಗಿತಗೊಳಿಸಿದ ಹಿನ್ನೆಲೆಯಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರಿಗೆ ಅಕ್ಟೋಬರ್ 12ರಿಂದ 30ರ ವರೆಗೆ ಮಧ್ಯಂತರ ರಜೆ ನೀಡಲಾಗಿತ್ತು. ರಜೆ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಎಲ್ಲ ಶಾಲೆಗಳಲ್ಲೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಕಡ್ಡಾಯವಾಗಿ ಹಾಜರಾಗಬೇಕು ಎಂದು ಸೂಚಿಸಿದ್ದಾರೆ.

ಕೋವಿಡ್ ಸೋಂಕು ಹೆಚ್ಚಳದ ಹಿನ್ನೆಲೆಯಲ್ಲಿ 'ವಿದ್ಯಾಗಮ' ಕಲಿಕಾ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಶಿಕ್ಷಕರು ನವೆಂಬರ್ 2ರಿಂದ ಇದುವರೆಗಿನ ವಿದ್ಯಾಗಮ ಕಾರ್ಯಕ್ರಮದಡಿ ವಿದ್ಯಾರ್ಥಿಗಳ ಪ್ರಗತಿ ವಿಶ್ಲೇಷಣೆ ಮಾಡಬೇಕು. ವಿದ್ಯಾರ್ಥಿವಾರು ಸಾಧನೆ ಹಾಗೂ ಕೊರತೆಯನ್ನು ಪಟ್ಟಿಮಾಡಲು ಹಾಗೂ ವಿಶ್ಲೇಷಣೆ ಅನುಸಾರ ಮುಂದಿನ ಕಲಿಕೆಗೆ ಅಗತ್ಯ ಬೋಧನಾಕಲಿಕಾ ಯೋಜನೆ ಮತ್ತು ಸಾಮಗ್ರಿ ತಯಾರಿಕೆಗೆ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ಆಯುಕ್ತರು ತಿಳಿಸಿದ್ದಾರೆ.

**ಜ್ಞಾನದೀಪ ಮುಂದುವರಿಕೆ:** ರಾಜ್ಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ) 'ಜ್ಞಾನದೀಪ' ಯೂಟ್ಯೂಬ್ ಚಾನಲ್‌ನಲ್ಲಿ ಅಳವಡಿಸಿರುವ ಕಲಿಕಾ ವಿಡಿಯೋಗಳು ಹಾಗೂ ದೂರದರ್ಶನ ಚಂದನ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಪಾಠಗಳು ಮತ್ತು ದೀಕ್ಷಾ ಪೋರ್ಟಲ್‌ನಲ್ಲಿ ಅಳವಡಿಸಿರುವ ಕಲಿಕಾ ಸಾಮಗ್ರಿಗಳ ಬಳಕೆ ಎಂದಿನಂತೆ ಮುಂದುವರೆಯಲಿದೆ.

ಇವುಗಳನ್ನು ಬಳಸಿಕೊಂಡು ಕಲಿಕೆಯಲ್ಲಿ ತೊಡಗಿರುವ ಮಕ್ಕಳಿಗೆ ಶಿಕ್ಷಕರು ದೂರವಾಣಿ, ಸಮೂಹ ಮಾಧ್ಯಮ ಮೂಲಕ ಅಗತ್ಯ ಮಾರ್ಗದರ್ಶನ ನೀಡಬೇಕು ಎಂದು ಸೂಚಿಸಲಾಗಿದೆ.

ಇಲಾಖೆಯಿಂದ ಮುಂದಿನ ದಿನಗಳಲ್ಲಿ ಟಿವಿ ಮಾಧ್ಯಮ, ಅಕಾಶವಾಣಿ ಮೂಲಕ ಇನ್ನೂ ಹೆಚ್ಚಿನ ಕಲಿಕೆಯ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸಲು ಉದ್ದೇಶಿಸಲಾಗಿದೆ. ಇವುಗಳ ಪ್ರಾರಂಭವಾದ ನಂತರ ವಿದ್ಯಾರ್ಥಿಗಳಿಗೆ ತಲುಪಿಸುವ ಕಾರ್ಯಗಳನ್ನು ಕೈಗೊಳ್ಳಲಾಗುವುದು ಎಂದು ಆಯುಕ್ತರು ಹೇಳಿದ್ದಾರೆ.

ಆಧಾರ: ಕನ್ನಡ ಪ್ರಭ, ದಿನಾಂಕ:31.10.2020

## 43.ಇನ್ನು ಹೆಣ್ಣುಮಕ್ಕಳಿಗೂ ರಾತ್ರಿ ಪಾಳಿ ಅವಕಾಶ

ವಾಣಿಜ್ಯ ಮಳಿಗೆ, ಅಂಗಡಿಗಳಲ್ಲಿ ಇನ್ನುಂದೆ ಮಹಿಳೆಯರಿಗೂ ರಾತ್ರಿ ಪಾಳಿ ಕೆಲಸ ಮಾಡಲು ಅವಕಾಶ ಕಲ್ಪಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಹಿಂದಿನಂತೆ ಅನಿವಾರ್ಯತೆ ಮೇರೆಗಷ್ಟೇ ಕಾರ್ಮಿಕ ಇಲಾಖೆ ಅನುಮತಿ ಪಡೆದು ಮಹಿಳೆಯರನ್ನು ರಾತ್ರಿಪಾಳಿಗೆ ನಿಯೋಜಿಸಬೇಕೆಂಬ ನಿಯಮ ರದ್ದಾಗಲಿದೆ. ಆದರೆ ಮಹಿಳೆಯರಿಗೆ ಮೂಲಸೌಕರ್ಯ ಹಾಗೂ ಭದ್ರತಾ ವ್ಯವಸ್ಥೆಯನ್ನು ಕಡ್ಡಾಯವಾಗಿ ಕಲ್ಪಿಸಬೇಕೆಂಬ ಷರತ್ತು ವಿಧಿಸಲಾಗಿದೆ. ಇದನ್ನು ಉಲ್ಲಂಘಿಸಿದರೆ ಪರವಾನಿಗಿ ರದ್ದುಪಡಿಸಲಾಗುತ್ತದೆ ಎಂದು ಮಾರ್ಗಸೂಚಿಯಲ್ಲಿ ಸ್ಪಷ್ಟ ಪಡಿಸಲಾಗಿದೆ.

ಇಲಾಖೆಯಲ್ಲಿ ನೋಂದಾಯಿಸಲಾದ ಅಂಗಡಿ, ವಾಣಿಜ್ಯ ಮಳಿಗೆಗಳು ಮಹಿಳೆಯರನ್ನು ರಾತ್ರಿ ಪಾಳಿಯಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳಬಹುದಾಗಿದೆ.

ರಾತ್ರಿ ಪಾಳಿಯಲ್ಲಿ ಮಹಿಳೆಯರ ಕೆಲಸ ಮಾಡುವುದಕ್ಕಿದ್ದ ನಿಷೇಧವನ್ನು 2002ರಲ್ಲಿ ಐಟಿ–ಬಿಟಿ ಕಂಪನಿಗಳು ಸಡಿಲಿಸಿ ಅನುಮತಿ ಪಡೆದುಕೊಂಡಿದ್ದವು. ರಾಜ್ಯಾದ್ಯಂತ ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರು ರಾತ್ರಿ ಪಾಳಿಯಲ್ಲಿ (ರಾತ್ರಿ 8 ರಿಂದ ಬೆಳಿಗ್ಗೆ 6) ಉದ್ಯೋಗ ನಿರ್ವಹಿಸಬಹುದಾಗಿದೆ.

ಮಹಿಳೆಯರು ಗಾರ್ಮೆಂಟ್ಸ್ ಉದ್ಯಮದಲ್ಲಿ ಶೇ.60ರಷ್ಟಿದ್ದರೆ, ಜವಳಿ ಉದ್ಯಮದಲ್ಲಿ ಶೇ.50ರಷ್ಟಿದ್ದಾರೆ. ಉದ್ಯಮಶೀಲತೆ ಬೆಳವಣಿಗೆಗೂ ಇದು ಪರೋಕ್ಷವಾಗಿ ದಾರಿಯಾಗಲಿದೆ ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಮಹಿಳೆಯರ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡುವ ಜವಾಬ್ದಾರಿಯನ್ನು ಸಂಸ್ಥೆಗಳೇ ವಹಿಸಿಕೊಳ್ಳಬೇಕಿದೆ. ಮನೆಯಿಂದ ಕೆಲಸದ ಸ್ಥಳಕ್ಕೆ ಹಾಗೂ ಕೆಲಸ ಮಾಡುವ ಕಂಪನಿಯಿಂದ ಮನೆಗೆ ಉಚಿತ ಸಾರಿಗೆ ವ್ಯವಸ್ಥೆ ಕಲ್ಪಿಸಬೇಕು. ಮಹಿಳಾ ಉದ್ಯೋಗಿ ತೆರಳುವ ವಾಹನಗಳ ಮಾರ್ಗವನ್ನು ಸಂಸ್ಥೆಯು ಗೊತ್ತುಪಡಿಸಿದ ಮೇಲ್ವಿಚಾರಕರು ಸೂಕ್ತ ರೀತಿಯಲ್ಲಿ ಪರಿಶೀಲಿಸಬೇಕು. ತುರ್ತು ಸಮಯದಲ್ಲಿ ಮಹಿಳಾ ಉದ್ಯೋಗಿಗಳು ಸಿಗ್ನಲ್ ನೀಡಿ, ಸಂಬಂಧ ಪಟ್ಟವರನ್ನು ಸಂಪರ್ಕಿಸಲು ಸಾಧ್ಯವಾಗುವ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಿ, ಕಾರ್ಯರೂಪಕ್ಕೆ ತರಬಹುದು. ಈ ಸಾರಿಗೆ ಸೌಲಭ್ಯವು ಟ್ರ್ಯಾಕಿಂಗ್ ಹಾಗೂ ಜಿಪಿಎಸ್ ಒಳಗೊಂಡಿರಬೇಕು. ಸಂಸ್ಥೆಯು ಪ್ರತಿಯೊಬ್ಬ ಚಾಲಕನ ಸ್ವ–ವಿವರ ಪಡೆದುಕೊಂಡು ಉದ್ಯೋಗ ಪೂರ್ವ ಪರಾಮರ್ಶೆ ನಡೆಸಬೇಕು ಎಂಬ ಷರತ್ತುಗಳನ್ನು ವಿಧಿಸಲಾಗಿದೆ.

ಕೊರೋನಾ ಹಿನ್ನೆಲೆಯಲ್ಲಿ ಆರ್ಥಿಕ ಸಂಕಷ್ಟ ಎದುರಾಗಿದ್ದು, ಉದ್ಯೋಗಾವಕಾಶ ಹೆಚ್ಚಿಸುವುದಕ್ಕಾಗಿ ಮಹಿಳೆಯರಿಗೂ ರಾತ್ರಿ ಪಾಳಿಗೆ ಅನುಮತಿ ನೀಡುವಂತೆ ಸರ್ಕಾರಿ ಹಾಗೂ ಖಾಸಗಿ ವಲಯದಿಂದ ಬೇಡಿಕೆ ವ್ಯಕ್ತವಾಗಿತ್ತು

ಆಧಾರ: ವಿಜಯವಾಣಿ, ದಿನಾಂಕ:01.11.2020

## 44. ಸಿದ್ಧವಾಗಿದೆ ರೂ. 289 ಕೋಟಿ ವೆಚ್ಚದ ಕಾರ್ಯಯೋಜನೆ

ವಾಯುಮಾಲಿನ್ಯ ಮೂಲ ಪತ್ತೆ ಹಚ್ಚಿ ನಗರದ ಗಾಳಿಯ ಗುಣಮಟ್ಟದ ಮೇಲೆ ನಿಗಾ ಇಡಲು ಬಿಬಿಎಂಪಿ ರೂ.279 ಕೋಟಿ ವೆಚ್ಚದ ಕಾರ್ಯ ಯೋಜನೆ ಸಿದ್ಧಪಡಿಸಿದೆ.

ವಾಯು ಗುಣಮಟ್ಟಕ್ಕೆ ಸಂಬಂಧಿಸಿದ ಸಮಗ್ರ ದತ್ತಾಂಶಗಳ ಮೇಲೆ ನಿಗಾ ಇಡುವುದಕ್ಕೆ ರೂ.44 ಕೋಟಿ ವೆಚ್ಚದಲ್ಲಿ ಹಾಗೂ ಕಸ ವಿಲೇವಾರಿ ಮೇಲೆ ಇಡುವುದಕ್ಕೆ ರೂ. 22.22 ಕೋಟಿ ವೆಚ್ಚದಲ್ಲಿ ಪ್ರತ್ಯೇಕ ಕೇಂದ್ರೀಕೃತ ನಿಯಂತ್ರಣ ಮತ್ತು ಕಮಾಂಡ್ ಕೇಂದ್ರಗಳನ್ನು (ಸಿಪಿಸಿ) ಸ್ಥಾಪಿಸುವ ಪ್ರಸ್ತಾಪವು ಈ ಕಾರ್ಯ ಯೋಜನೆಯಲ್ಲಿದೆ. ಈ ಯೋಜನೆಯ ಅನುಷ್ಠಾನಕ್ಕೆ ಕೇಂದ್ರ ಹಣಕಾಸು ಸಚಿವಾಲಯವು ಮೊದಲ ಕಂತಿನಲ್ಲಿ ರೂ.139 ಕೋಟಿ ಅನುದಾನ ಮಂಜೂರು ಮಾಡಿದೆ.

ವಾಹನಗಳಿಂದ ಹೊಗೆ ಹೊರಸೂಸುವಿಕೆ ಪ್ರಮಾಣ ಪತ್ತೆಗೆ ಕೃತಕ ಬುದ್ಧಿಮತ್ತೆಯನ್ನು ಬಿಬಿಎಂಪಿ ಬಳಸಲಿದೆ. ಈ ಸಲುವಾಗಿಯೇ ಶಬ್ದ ಮಾಪಕಗಳು, ವಾತಾವರಣ ಸೇರುವ ಹೊಗೆಯ ಪ್ರಮಾಣ ಪತ್ತೆ ಹಚ್ಚುವ ಪರಿಕರಗಳು, ರಸ್ತೆಯಲ್ಲಿ ಕಸ ಗುಡಿಸುವ ಯಂತ್ರಗಳು, ನೀರು ಚುಮುಕಿಸುವ ಯಂತ್ರಗಳನ್ನು ಖರೀದಿಸಲಿದೆ.

ಕಸ ಸುಡುವುದರಿಂದ ವಾತಾವರಣದ ಗಾಳಿಯ ಮೇಲಾಗುವ ಪ್ರಮಾಣ ಪತ್ತೆ ಹಾಗೂ ಅದರಿಂದ ಉಂಟಾಗುವ ದುಷ್ಪರಿಣಾಮಗಳ ನಿಯಂತ್ರಣ ಕ್ರಮಗಳನ್ನು ಈ ಕಾರ್ಯ ಯೋಜನೆ ಒಳಗೊಂಡಿದೆ. ನಗರದ ಹಸಿರೀಕರಣ, ರಸ್ತೆ ಗುಂಡಿ ಮುಚ್ಚುವಿಕೆ, ರಸ್ತೆಗಳನ್ನು ಕತ್ತರಿಸಿದರೆ ಅವುಗಳ ವೈಜ್ಞಾನಿಕವಾಗಿ ದುರಸ್ತಿಪಡಿಸುವ ನಿರ್ದಿಷ್ಟ ಕಾರ್ಯಕ್ರಮಗಳನ್ನು ಬಿಬಿಎಂಪಿ ರೂಪಿಸಲಿದೆ. ವಾಯು ಗುಣಮಟ್ಟದ ಜಾಗೃತಿ ಅಭಿಯಾನಗಳನ್ನು ಹಮ್ಮಿಕೊಳ್ಳಲಿದೆ.

ರಸ್ತೆಗಳಲ್ಲಿ ವಾಹನ ಸಂಚಾರದ ವೇಳೆ ಪಥ ಶಿಸ್ತು (ಲೇನ್ ಡಿಸಿಪ್ಲೀನ್) ಕಾಪಾಡುವುದು, ಬಸ್ ವೇಗಳ ನಿರ್ಮಾಣ, ಟೆಂಡರ್‌ಶ್ಯೂರ್ ರಸ್ತೆಗಳ ನಿರ್ಮಾಣ, ಪಾದಚಾರಿ ಮಾರ್ಗಗಳ ಅಭಿವೃದ್ಧಿ, ಸಾರ್ವಜನಿಕ ಸ್ಥಳಗಳಲ್ಲಿ ಕಟ್ಟಡ ತ್ಯಾಜ್ಯ ತೆರವು, ಇವುಗಳಿಂದ ಆಗುವ ಮಾಲಿನ್ಯದ ಮೇಲೆ ನಿಗಾ ಇಡುವುದು ಈ ಯೋಜನೆಯಲ್ಲಿ ಸೇರಿದೆ.

ನಗರದಲ್ಲಿ ಬಿಬಿಎಂಪಿ ಸಹಯೋಗದಲ್ಲಿ 2018ರ ಜುಲೈನಲ್ಲಿ 'ಸಿ40 ನಗರಗಳ ಕಾರ್ಯಾಗಾರ' ಏರ್ಪಡಿಸಲಾಗಿತ್ತು. ಜಗತ್ತಿನ ಪ್ರಮುಖ ಮಹಾನಗರಗಳ ವಾಯು ಗುಣಮಟ್ಟ ಸುಧಾರಣೆ ಕುರಿತು ಸಮಾಲೋಚನೆ ನಡೆದಿತ್ತು.

| **ಯೋಜನೆಗಳ ವೆಚ್ಚ ವಿವರ:** | |
|---|---|
| ವಾಯು ಗುಣಮಟ್ಟದ ಮೇಲೆ ಮೇಲೆ ನಿಗಾ ಇಡಲು ಸಿಸಿಸಿ ಸ್ಥಾಪನೆ | **44** |
| ಶಬ್ದಮಾಪಕ, ವಾಹನಗಳ ಹೊಗೆ ಪತ್ತೆಗೆ ಕೃತಕ ಬುದ್ಧಿಮತ್ತೆ ಬಳಕೆ | **8.37** |
| ಕಸ ಗುಡಿಸುವ ಯಂತ್ರ ನೀರು ಚುಮುಕಿಸುವ ಯಂತ್ರ ಖರೀದಿ, ನಿರ್ವಹಣೆ | **50.22** |
| ಕಸ ಸುಡುವುದರ ಮೇಲೆ ನಿಗಾ, ಕಸ ವಿಲೇವಾರಿಗೆ ಸಿಸಿಸಿ ಸ್ಥಾಪನೆ | **22.22** |
| ಹಸಿರೀಕರಣ ಅಭಿಯಾನ | **19.53** |
| ರಸ್ತೆಗುಂಡಿ ಮುಚ್ಚುವುದು, ಕತ್ತರಿಸಿದ ರಸ್ತೆ ದುರಸ್ತಿ | **19.53** |
| ವಾಯು ಗುಣಮಟ್ಟದ ಜಾಗೃತಿ ಅಭಿಯಾನ | **13.95** |
| ಸಂಚಾರ ವ್ಯವಸ್ಥೆ ಸುಧಾರಣೆ | **50.22** |
| ಜಂಕ್ಷನ್‌ಗಳಲ್ಲಿ ಕಾರಂಜಿ ನಿರ್ಮಾಣ | **27.90** |
| ಕಟ್ಟಡ ತ್ಯಾಜ್ಯದ ಮಾಲಿನ್ಯ ನಿಯಂತ್ರಣ | **22.32** |

ಆಧಾರ: ಪ್ರಜಾವಾಣಿ, ದಿನಾಂಕ:04.11.2020

## 45. ಶಿಕ್ಷಣ ಆಯೋಗದ ಸ್ಥಾಪನೆಗೆ ಸಲಹೆ

ರಾಜ್ಯದಲ್ಲಿ 'ರಾಷ್ಟ್ರೀಯ ಶಿಕ್ಷಣ ನೀತಿ–2020' ಜಾರಿಗೊಳಿಸುವ ಸಂಬಂಧ ನಿವೃತ್ತ ಐಎಎಸ್ ಅಧಿಕಾರಿ ಎಸ್.ವಿ.ರಂಗನಾಥ್ ನೇತೃತ್ವದಲ್ಲಿ ರಚಿಸಿದ ಕಾರ್ಯಪಡೆಯು ಕರ್ನಾಟಕ ಶಿಕ್ಷಣ ಆಯೋಗ (ಕೆಎಸ್ಎ/ಕೆಇಸಿ), ಅನುಷ್ಠಾನ ಮಿಷನ್ ಹಾಗೂ ಹಲವು ಹೊಸ ಸಂಸ್ಥೆಗಳ ಸ್ಥಾಪನೆ ಸೇರಿ ಅನೇಕ ಸಲಹೆಗಳಿರುವ ಅಂತಿಮ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದೆ.

ಉನ್ನತ ಶಿಕ್ಷಣ ಸಚಿವರು ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಮತ್ತು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಅವರಿಗೆ ಅಂತಿಮ ವರದಿಯನ್ನು ಕಾರ್ಯಪಡೆ ಸಲ್ಲಿಸಿದೆ.

ವಿವಿಧ ಇಲಾಖೆಗಳು, ಕಾರ್ಯಗಳು, ಸಂಸ್ಥೆಗಳು ಹಾಗೂ ಘಟಕಗಳ ನಡುವೆ ಸಮನ್ವಯ ಸಾಧಿಸಲು ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಕರ್ನಾಟಕ ಶಿಕ್ಷಣ ಆಯೋಗ ಸ್ಥಾಪಿಸಬೇಕು, ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಎರಡೂ ಈ ಆಯೋಗದಡಿ ಕೆಲಸ ಮಾಡಬೇಕು. ವರ್ಷಕ್ಕೆ ಕನಿಷ್ಠ ಎರಡು ಸಲ ಅಥವಾ ಅಗತ್ಯವಿದ್ದರೆ ಅದಕ್ಕಿಂತ ಹೆಚ್ಚು ಬಾರಿ ಈ ಆಯೋಗ ಸಭೆಗಳನ್ನು ನಡೆಸಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನೆ ನಡೆಸಬೇಕು. ಉನ್ನತ ಶಿಕ್ಷಣ ಸಚಿವರು ಮತ್ತು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಇದರ ಉಪಾಧ್ಯಕ್ಷರಾಗಿರಬೇಕು ಎಂದು ಕಾರ್ಯಪಡೆ ಹೇಳಿದೆ.

**ವರದಿಯಲ್ಲಿರುವ ಪ್ರಮುಖ ಸಲಹೆಗಳು**

- ನಿರ್ದಿಷ್ಟ ಗುರಿಗಳೊಂದಿಗೆ ಅನುಷ್ಠಾನ ಮಿಷನ್ ಸ್ಥಾಪಿಸಬೇಕು. ಪ್ರತಿ ಮೂರು ತಿಂಗಳಿಗೆ ನಿಗದಿ ಮಾಡಲಾದ ಗುರಿಗಳ ಕ್ಯಾಲೆಂಡರ್ ಅನ್ನು ಮೂರು ವರ್ಷಗಳ ಅವಧಿಗೆ ಸಿದ್ಧಪಡಿಸಬೇಕು. ಮೂರು ತಿಂಗಳಿಗೊಮ್ಮೆ ಅನುಷ್ಠಾನ ಕಾರ್ಯಪಡೆ (ಐಟಿಎಫ್) ರಚಿಸಬೇಕು.
- ಸಮಗ್ರ ಶಿಕ್ಷಣ (ಎಸ್ಎಸ್ಕೆ) ಮತ್ತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿಯಲ್ಲಿ (ಕೆಎಸ್ಎಸ್ಇಸಿ) ತಕ್ಷಣವೇ 'ಅನುಷ್ಠಾನ ನಿಧಿ'ಗೆ ಅನುವು ಮಾಡಿಕೊಡಬೇಕು.
- ರಾಜ್ಯ ಶಾಲಾ ಪ್ರಮಾಣೀಕರಣ ಪ್ರಾಧಿಕಾರ (ಎಸ್ಎಸ್ಎಸ್ಎ) ಮತ್ತು ಕರ್ನಾಟಕ ಉನ್ನತ ಶಿಕ್ಷಣ ನಿಯಂತ್ರಣ ಮಂಡಳಿ (ಕೆಎಚ್ಇಆರ್ಸಿ) ಎಂಬ ನಿಯಂತ್ರಣ ಸಂಸ್ಥೆಗಳನ್ನು ಸ್ಥಾಪಿಸಬೇಕು.
- ಹೊಸ ನೀತಿಯಲ್ಲಿರುವ ಉನ್ನತ ಶಿಕ್ಷಣ ಸಂರಚನೆ ಕಾರ್ಯರೂಪಕ್ಕಿಳಿಸಲು ಹೊಸ ಕೆಎಸ್ಯು (ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ) ಕಾಯ್ದೆ ರೂಪಿಸಬೇಕು.
- ಶಿಕ್ಷಣ ಇಲಾಖೆಯಲ್ಲಿ ಈಗಾಗಲೇ ಇರುವ ಸಂಸ್ಥೆಗಳ ನಡುವೆ ಪ್ರತ್ಯೇಕ ಅಧಿಕಾರ ವ್ಯಾಪ್ತಿ ನಿಗದಿಗೊಳಿಸಬೇಕು.
- ಕೆಪಿಎಸ್/ಶಾಲಾ ಸಮುಚ್ಚಯಗಳಲ್ಲಿ ಸೇವಾ ನಿಯಮಗಳು–ಟಿನ್ಯೂರ್ ಶಿಪ್‌ಗಳಿಗೆ ತಿದ್ದುಪಡಿ ತರಬೇಕು. ಶಿಕ್ಷಕರ ವೃತ್ತಿ ಬೆಳವಣಿಗೆ ಹಾಗೂ ಉನ್ನತಿ ಕುರಿತು ಸ್ಪಷ್ಟವಾಗಿ ವ್ಯಾಖ್ಯಾನಿಸಬೇಕು.
- ಗುರುತಿಸಿದ ಕಡೆಗಳಲ್ಲಿ ವಿಶೇಷ ಶೈಕ್ಷಣಿಕ ವಲಯ (ಎಸ್ಇಝಡ್) ಸ್ಥಾಪಿಸಬೇಕು.

ಆಧಾರ: ಪ್ರಜಾವಾಣಿ, ದಿನಾಂಕ:08.11.2020

## 46. ಕಾಲೇಜುಗಳ ಆರಂಭಕ್ಕೆ ಮಾರ್ಗಸೂಚಿ

ನವೆಂಬರ್ 17 ರಿಂದ ಪದವಿ, ಇಂಜಿನಿಯರಿಂಗ್, ಡಿಪ್ಲೋಮಾ ಕಾಲೇಜುಗಳ ಆರಂಭ ಕುರಿತು ಸರ್ಕಾರ ಮಾರ್ಗಸೂಚಿ ಬಿಡುಗಡೆ ಮಾಡಿದೆ.

ಯುಜಿಸಿ ಮಾರ್ಗಸೂಚಿಯನ್ವಯ ಉನ್ನತ ಶಿಕ್ಷಣ ಇಲಾಖೆ ಮಾರ್ಗಸೂಚನೆ ಬಿಡುಗಡೆ ಮಾಡಿದ್ದು, ವಿದ್ಯಾರ್ಥಿಗಳು ಕಾಲೇಜಿಗೆ ಬರುವ ಮೂರು ದಿನಗಳ ಮುಂಚಿತವಾಗಿಯೇ ಕೊರೋನಾ ಪರೀಕ್ಷೆ ಮಾಡಿಸಿಕೊಳ್ಳಬೇಕು. ಪೋಷಕರಿಂದ ಒಪ್ಪಿಗೆ ಪತ್ರ ತರಬೇಕು. ತರಗತಿಗಳನ್ನು ನಡೆಸುವಾಗ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಕಾಲೇಜಿನಲ್ಲಿ ಲಭ್ಯವಿರುವ ಒಟ್ಟು ತರಗತಿ ಕೊಠಡಿಗಳ ಸಂಖ್ಯೆಗೆ ಅನುಗುಣವಾಗಿ ಆರೋಗ್ಯ ಇಲಾಖೆಯಿಂದ ಹೊರಡಿಸಲಾಗಿರುವ ಮತ್ತು ಪ್ರಸ್ತುತ ಮಾರ್ಗಸೂಚಿಗಳ ಪ್ರಕಾರ ದೈಹಿಕ ಅಂತರವನ್ನು ಕಾಪಾಡಿಕೊಂಡು ಸುರಕ್ಷಿತವಾಗಿ ತರಗತಿಗಳನ್ನು ನಡೆಸಲು ಅವಶ್ಯವಿರುವಂತೆ ತರಗತಿ ವೇಳಾಪಟ್ಟಿಯನ್ನು ಕಾಲೇಜಿನ ಹಂತದಲ್ಲಿಯೇ ಸಿದ್ಧಪಡಿಸಿಕೊಳ್ಳುವುದು.

ಬೋಧನಾ, ಪ್ರಯೋಗಾಲಯ ಮತ್ತು ಪ್ರಾಜೆಕ್ಟ್ ತರಗತಿಗಳನ್ನು ಅವಶ್ಯಕವಿದ್ದಲ್ಲಿ ಪಾಳಿ ವ್ಯವಸ್ಥೆಯ ಮೇರೆಗೆ ನಡೆಸುವುದು.

ಭೌತಿಕ ತರಗತಿಗಳಿಗೆ ಹಾಜರಾಗಲು ಇಚ್ಛಿಸಿದ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಗಳಿಗೆ ಹಾಜರಾಗಲು ಬಯಸಿದ ವಿದ್ಯಾರ್ಥಿಗಳಿಗೆ ಪಠ್ಯಕ್ರಮದ ಬಗ್ಗೆ ಇರುವ ಅನುಮಾನ ಅಥವಾ ಸಮಸ್ಯೆಗಳನ್ನು ನಿವಾರಿಸುವ ಸಂಬಂಧ ಪ್ರತಿ ದಿನವು ಭೌತಿಕ ಸಂಪರ್ಕ ತರಗತಿಗಳನ್ನು ನಡೆಸಬೇಕು. ಸಂಪರ್ಕ ತರಗತಿಗಳನ್ನು ನಡೆಸುವಾಗ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಕಾಲೇಜಿನಲ್ಲಿ ಲಭ್ಯವಿರುವ ಒಟ್ಟು ತರಗತಿ ಕೊಠಡಿಗಳ ಸಂಖ್ಯೆಗೆ ಅನುಗುಣವಾಗಿ ಆರೋಗ್ಯ ಇಲಾಖೆಯಿಂದ ಹೊರಡಿಸಲಾಗಿರುವ ಮತ್ತು ಪ್ರಸ್ತುತ ಮಾರ್ಗಸೂಚಿಗಳ ಪ್ರಕಾರ ದೈಹಿಕ ಅಂತರವನ್ನು ಕಾಪಾಡಿಕೊಂಡು ಸುರಕ್ಷಿತವಾಗಿ ತರಗತಿಗಳನ್ನು ನಡೆಸಲು ಅವಶ್ಯಕವಿರುವಂತೆ ತರಗತಿ ವೇಳಾ ಪಟ್ಟಿಯನ್ನು ಕಾಲೇಜಿನ ಹಂತದಲ್ಲಿಯೇ ಸಿದ್ಧಪಡಿಸಿಕೊಳ್ಳಬೇಕು.

ಎಲ್ಲಾ ಅಧ್ಯಾಪಕರು ತಮ್ಮ ತರಗತಿಗಳ ವಿದ್ಯಾರ್ಥಿಗಳಿಗೆ ಪಠ್ಯಕ್ರಮದ ಕುರಿತು ಮುಂದಿನ ಕನಿಷ್ಠ ಒಂದು ತಿಂಗಳ ಅಧ್ಯಯನ ಸಾಮಗ್ರಿಗಳನ್ನು ತಯಾರಿಸಿ ಅವುಗಳನ್ನು ವಾಟ್ಸಾಪ್,–ಇ–ಮೇಲ್ ಮುಖಾಂತರ ವಿದ್ಯಾರ್ಥಿಗಳಿಗೆ ತಲುಪಿಸಬೇಕು. ಹಾಗೂ ಕಾಲೇಜಿನ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕು.

ಕಾಲೇಜಿನ ಸಂಪೂರ್ಣ ಕಟ್ಟಡ, ಮುಖ್ಯದ್ವಾರ, ಶೌಚಾಲಯ ಹಾಗೂ ಎಲ್ಲಾ ಕೊಠಡಿಗಳಲ್ಲಿನ ಪೀಠೋಪಕರಣ ಮತ್ತು ಪಠ್ಯಸಾಮಗ್ರಿಗಳನ್ನು ಸ್ಯಾನಿಟೈಸ್ ಮಾಡಿಸುವುದು, ಪ್ರತಿ ತರಗತಿಯಿಂದ ಒಬ್ಬ ವಿದ್ಯಾರ್ಥಿಯನ್ನು ಗುರುತಿಸಿ ತನ್ನ ಸಹಪಾಠಿಗಳಲ್ಲೇನಾದರೂ ಕೋವಿಡ್‌ಗೆ ಸಂಬಂಧಿಸಿದ ಲಕ್ಷಣಗಳನ್ನು ಕಂಡುಬಂದಲ್ಲಿ ಅದನ್ನು ಕೋವಿಡ್ ಕಾರ್ಯಪಡೆ ಗಮನಕ್ಕೆ ತರುವಂತೆ ಸೂಚಿಸುವುದು. ಕಾಲೇಜುಗಳಿಗೆ ಹಾಜರಾಗುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಮನೆಯಿಂದಲೇ ಊಟ ಮತ್ತು ಕುಡಿಯುವ ನೀರನ್ನು ಸ್ವತಃ ತಂದು ಅವರೇ ಉಪಯೋಗಿಸುವುದು ಜಿಲ್ಲಾ ಸಮಿತಿಯೂ ಸಹ ಈ ಮಾರ್ಗಸೂಚಿಗಳನ್ನು ಅನುಸರಿಸಬೇಕು ಎಂದು ಸರ್ಕಾರ ಹೇಳಿದೆ.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:10.11.2020

## 47. ಕಸ್ತೂರಿರಂಗನ್ ವರದಿ ಅಧ್ಯಯನಕ್ಕೆ ಸಮಿತಿ

ಪಶ್ಚಿಮ ಘಟ್ಟ ಪ್ರದೇಶ ಸಂರಕ್ಷಣೆ ಸಂಬಂಧ ಡಾ.ಕಸ್ತೂರಿರಂಗನ್ ವರದಿ ಜಾರಿಗೆ ರಾಷ್ಟ್ರೀಯ ಹಸಿರು ಪೀಠ ನೀಡಿರುವ ಗಡುವು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ, ವರದಿ ಬಗ್ಗೆ ಅಧ್ಯಯನದ ಸಲುವಾಗಿ ಸಂಪುಟದ ಉಪ ಸಮಿತಿ ರಚಿಸಲು ತೀರ್ಮಾನಿಸಲಾಗಿದೆ.

ಈ ವರದಿ ಜಾರಿಗೆ ಬಂದಲ್ಲಿ ರಾಜ್ಯದ 1452 ಗ್ರಾಮಗಳು ಪರಿಸರ ಸೂಕ್ಮ ಪ್ರದೇಶದ ವ್ಯಾಪ್ತಿಗೆ ಬರಲಿದೆ. ಇದರಿಂದ ಆ ಭಾಗದಲ್ಲಿ ಜನಜೀವನಕ್ಕೆ ಧಕ್ಕೆ ಬರಲಿದ್ದು, ವರದಿ ತಿರಸ್ಕರಿಸಬೇಕು ಎಂದು ಆ ಭಾಗದ ಜನಪ್ರತಿನಿಧಿಗಳು ಮುಖ್ಯಮಂತ್ರಿಯವರ ಮೇಲೆ ಒತ್ತಡ ಹೇರಿದ್ದರು. ಈ ಹಿನ್ನೆಲೆಯಲ್ಲಿ, ಸಂಪುಟ

ಉಪಸಮಿತಿ ರಚಿಸಿರುವ ಸಂಪುಟ ಸಭೆ, ಈ ಬಗ್ಗೆ ಅಧ್ಯಯನ ನಡೆಸಿದ ನಂತರ ಮುಂದಿನ ಹೆಜ್ಜೆ ಇಡಲು ತೀರ್ಮಾನಿಸಿದೆ.

ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಈ ವಿಷಯ ತಿಳಿಸಿದರು. ಸಮಿತಿ ಪುನಾರಚನೆಗೆ ಮುಖ್ಯಮಂತ್ರಿಯವರಿಗೆ ಅಧಿಕಾರ ನೀಡಲಾಯಿತು. ಮುಖ್ಯಮಂತ್ರಿಯವರ ಸೂಚನೆ ಮೇರೆಗೆ ಸಮಿತಿ ರಚನೆಯಾಗಿದ್ದು, ಅರಣ್ಯ, ಕಂದಾಯ, ಉನ್ನತ ಶಿಕ್ಷಣ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ನಗರಾಭಿವೃದ್ಧಿ, ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು ಉಪ ಸಮಿತಿಯಲ್ಲಿ ಇರಲಿದ್ದಾರೆ ಎಂದು ತಿಳಿಸಿದರು.

ಉಪ ಸಮಿತಿಯು ಡಾ.ಕಸ್ತೂರಿರಂಗನ್ ವರದಿ ಕುರಿತು ಕೂಲಂಕಷವಾಗಿ ಚರ್ಚಿಸಿ ಆರ್ಥಿಕ ಪರಿಣಾಮ, ಆಂತರಿಕ ಅಧ್ಯಯನ, ವನ್ಯಧಾಮ ಪ್ರದೇಶದಲ್ಲಿ ಮಾನವ–ಪ್ರಾಣಿ ಸಂಘರ್ಷ ತಪ್ಪಿಸುವುದು, ಪಕ್ಷಿಗಳು ಸೇರಿದಂತೆ ವನ್ಯ ಜೀವಿಗಳ ರಕ್ಷಣೆ ವಿಚಾರ ಗಮನದಲ್ಲಿಟ್ಟುಕೊಂಡು ಸಂಬಂಧಿತ ಇಲಾಖೆಗಳ ಅಭಿಪ್ರಾಯ ಸಂಗ್ರಹಿಸಿ ಅಂತಿಮ ವರದಿ ನೀಡಬೇಕಾಗಿದೆ. ಆ ವರದಿ ಆಧರಿಸಿ ರಾಜ್ಯ ಸರ್ಕಾರವು ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಿದೆ ಎಂದು ಹೇಳಲಾಗಿದೆ.

ಈಗಾಗಲೇ ಕೇಂದ್ರ ಅರಣ್ಯ ಮತ್ತು ಪರಿಸರ ಇಲಾಖೆ ವರದಿ ಜಾರಿ ಸಂಬಂಧ ನಾಲ್ಕನೇ ಕರಡು ಅಧಸೂಚನೆ ಹೊರಡಿಸಿದೆ. ರಾಷ್ಟ್ರೀಯ ಹಸಿರುಪೀಠವು ಡಿಸೆಂಬರ್ 31 ರೊಳಗೆ ವರದಿ ಜಾರಿಗೆ ಸಂಬಂಧಿಸಿದಂತೆ ತೀರ್ಮಾನ ಕೈಗೊಳ್ಳಲು ಕೇಂದ್ರ ಸರ್ಕಾರಕ್ಕೆ ಗಡವು ನೀಡಿದೆ.

**ಮಹಿಳಾ ಸುರಕ್ಷತಾ ಆ್ಯಪ್:** ನಿರ್ಭಯ ಯೋಜನೆಯಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ 60:40 ಪಾಲುದಾರಿಕೆಯಲ್ಲಿ ಮಹಿಳಾ ಸುರಕ್ಷತೆಯ ವೈಶಿಷ್ಟ್ಯತೆ ಹೊಂದಿರುವ ಮೊಬೈಲ್ ಆ್ಯಪ್, ಇನ್–ಬಸ್ ಕಣ್ಗಾವಲು ವ್ಯವಸ್ಥೆ ರೂಪಿಸಲು ರೂ.40.92 ಕೋಟಿ ವೆಚ್ಚದ ಯೋಜನೆಗೆ ಸಂಪುಟ ಒಪ್ಪಿಗೆ ನೀಡಿದೆ. ಮಹಿಳೆಯರು ತುರ್ತು ಸಂದರ್ಭದಲ್ಲಿ ಆ್ಯಪ್ ಮೂಲಕ ಪೊಲೀಸ್, ಸಹಾಯವಾಣಿ ಸಂಪರ್ಕಿಸಲು ಇದು ನೆರವಾಗಲಿದೆ.

ಆಧಾರ: ಉದಯವಾಣಿ, ದಿನಾಂಕ:13.11.2020

## 48. ಇನ್ನು ಸಂಸದೀಯ ಕಾರ್ಯದರ್ಶಿ ಹುದ್ದೆ ಇಲ್ಲ

ಸಂಸದೀಯ ಕಾರ್ಯದರ್ಶಿಗಳ ನೇಮಕಕ್ಕೆ ಅವಕಾಶ ಕಲ್ಪಿಸುತ್ತಿದ್ದ ಕಾಯಿದೆ ಬರಖಾಸ್ತುಗೊಳಿಸಲು ತೀರ್ಮಾನ ಕೈಗೊಂಡಿದೆ ಎಂದು ಸಂಪುಟ ಸಭೆ ಬಳಿಕ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ಇನ್ನು ಮುಂದೆ ಸಂಸದೀಯ ಕಾರ್ಯದರ್ಶಿಗಳ ನಿಯುಕ್ತಿಗೆ ಆಸ್ಪದ ಇರುವುದಿಲ್ಲ. ಈ ನಿಟ್ಟಿನಲ್ಲಿ 'ಕರ್ನಾಟಕ ಸಂಸದೀಯ ಕಾರ್ಯದರ್ಶಿಗಳ ವೇತನ, ಭತ್ಯೆಗಳು ಮತ್ತು ಸಂಕೀರ್ಣ ಉಪಬಂಧಗಳ (ನಿರಸನಗೊಳಿಸುವ) ವಿಧೇಯಕ–2020'ಕ್ಕೆ ಅನುಮೋದನೆ ನೀಡಲಾಗಿದೆ. ಸುಪ್ರೀಂಕೋರ್ಟ್ ಸೂಚನೆ ಅನುಸಾರ ಈ ತೀರ್ಮಾನ ಕೈಗೊಳ್ಳಲಾಗಿದೆ. ಹಾಲಿ ಸರ್ಕಾರ ಯಾವುದೇ ಸಂಸದೀಯ ಕಾರ್ಯದರ್ಶಿಗಳನ್ನು ನೇಮಿಸಿಲ್ಲ, ಈ ಕಾಯಿದೆ ನಿರಸನಗೊಳಿಸುವುದರಿಂದ ಯಾರದೇ ಅಧಿಕಾರ ಹೋಗುವ ಪ್ರಶ್ನೆ ಉದ್ಭವಿಸುವುದಿಲ್ಲ." ಎಂದರು.

**ಪರ್ಯಾಯ ಮಾರ್ಗ:** ರಾಜ್ಯದಲ್ಲಿ ಬಿಜೆಪಿ ಸರ್ಕಾರ ರಚನೆಯಾದ ಬಳಿಕ ಸಂಸದೀಯ ಕಾರ್ಯದರ್ಶಿಗಳನ್ನು ನೇಮಿಸಿಲ್ಲ. ಆದರೆ, ರಾಜಕೀಯ ಕಾರ್ಯದರ್ಶಿಗಳು, ಸಲಹೆಗಾರರನ್ನು ನೇಮಿಸಿಕೊಳ್ಳಲಾಗಿದೆ. ಅಂಥವರಿಗೆ ಸಂಪುಟ ದರ್ಜೆ, ರಾಜ್ಯ ದರ್ಜೆ ಸಚಿವರ ಸ್ಥಾನಮಾನ ನೀಡಲಾಗಿದೆ.

ಅದರ ಅನ್ವಯ ವೇತನ, ಭತ್ಯೆ ಸಂದಾಯವಾಗುತ್ತಿದೆ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಡಜನ್‌ಗೂ ಹೆಚ್ಚು ಶಾಸಕರಿಗೆ ಸಂಸದೀಯ ಕಾರ್ಯದರ್ಶಿಗಳ ಸ್ಥಾನ ನೀಡಲಾಗಿತ್ತು.

**ಖನಿಜಾನ್ವೇಷಣೆ:** ರಾಜ್ಯದಲ್ಲಿ ಖನಿಜಾನ್ವೇಷಣೆ ಕೈಗೊಳ್ಳಲು ಕೇಂದ್ರ ಸ್ವಾಮ್ಯದ ಕೆಐಓಸಿಎಲ್, ಎಂಇಸಿಎಲ್ ಸಂಸ್ಥೆಗಳಿಗೆ ಜವಾಬ್ದಾರಿ ವಹಿಸಲಾಗಿದೆ. ಈ ಸಂಬಂಧ ಫೆಬ್ರವರಿ 20ರಂದು ಹೊರಡಿಸಿದ ಆದೇಶಕ್ಕೆ ಘಟನೋತ್ತರ ಅನುಮೋದನೆ ನೀಡಲಾಗಿದೆ. ಜೊತೆಗೆ ಈ ಸಂಬಂಧ ರೂ. 65.20 ಕೋಟಿ ಒದಗಿಸಲಾಗುತ್ತಿದೆ.

**ಸಂಪುಟದ ತೀರ್ಮಾನಗಳು**

- ಬೆಳ್ತಂಗಡಿ ತಾಲ್ಲೂಕಿನ ತೋಟತ್ತಾಡಿಯಲ್ಲಿ 25 ಸೆಂಟ್ಸ್ ಜಾಗದಲ್ಲಿ ಸೇಂಟ್ ಅಂಟನಿ ಚರ್ಚ್ ಮಂಜೂರು.
- ನಾಗಮಂಗಲದ ಬಾಲ್ಯದ ಕೆರೆ, ಚುಂಚನಹಳ್ಳಿ ಗ್ರಾಮದ ನಾನಾ ಸರ್ವೇ ನಂಬರ್‌ನಲ್ಲಿ 32.12 ಎಕರೆಯನ್ನು ಆದಿಚುಂಚನಗಿರಿ ಮಠದ ಶೈಕ್ಷಣಿಕ ಉದ್ದೇಶಕ್ಕೆ ನೀಡಲು ಸಮ್ಮತಿ.
- ಹಾರಂಗಿ ಜಲಾನಯನ ಪ್ರದೇಶ, ನದಿ ಪಾತ್ರದ ಪುನಶ್ಚೇತನ ಮತ್ತು ರಕ್ಷಣಾ ಕಾಮಗಾರಿಗೆ ರೂ.130 ಕೋಟಿ ಅಂದಾಜು ಪಟ್ಟಿಗೆ ಅನುಮೋದನೆ.
- ಉತ್ತರ ಕನ್ನಡದ ಮುಂಡಗೋಡು ತಾಲ್ಲೂಕಿನ 5 ಗ್ರಾಮ ಪಂಚಾಯಿತಿ ವ್ಯಾಪ್ತಿಯ 84 ಸಣ್ಣ ನೀರಾವರಿ ಕೆರೆಗಳಿಗೆ ಬೇಡ್ತಿ ಉಪ ನದಿ ಕವಳಿಹಳ್ಳದಿಂದ ನೀರು ತುಂಬಿಸುವ ರೂ.225 ಕೋಟಿ ಯೋಜನೆಗೆ ಅಸ್ತು.
- ಕೆಂಗ್ರೆಹೊಳೆಯಿಂದ ಶಿರಸಿ ಪಟ್ಟಣಕ್ಕೆ ಕುಡಿಯುವ ನೀರು ಪೂರೈಸುವ ಯೋಜನೆಗೆ ರೂ.31.12 ಕೋಟಿ.
- ದೇವದುರ್ಗ ಮತ್ತು ಲಿಂಗಸುಗೂರು ಕೋರ್ಟ್ ಸಂಕೀರ್ಣಕ್ಕೆ ಕ್ರಮವಾಗಿ 13.95 ಮತ್ತು ರೂ.15.82 ಕೋಟಿ ಅನುಮೋದನೆ.
- ಸೋಮವಾರಪೇಟೆ ತಾಲ್ಲೂಕಿನ ಕುಶಾಲನಗರದಲ್ಲಿ ಕೋರ್ಟ್ ಸಂಕೀರ್ಣ ನಿರ್ಮಿಸಲು ರೂ.12.50 ಕೋಟಿ.
- ಬೆಂಗಳೂರು ವಿವಿಯ ಯುವಿಸಿಇ ಬಾಲಕರ ಹಾಸ್ಟೆಲ್ ಮತ್ತು ಜ್ಞಾನಭಾರತಿ ಆವರಣದಲ್ಲಿ ಸ್ನಾತಕೋತ್ತರ, ಪಿಎಚ್.ಡಿ ವಿದ್ಯಾರ್ಥಿಗಳ ಹಾಸ್ಟೆಲ್ ನಿರ್ಮಿಸಲು ರೂ.35.85 ಕೋಟಿ.
- ಬ್ರಹ್ಮಾವರದ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದ ಬಳಿ ಸೇತುವೆ ಸಹಿತ ಕಿಂಡಿ ಆಣೆಕಟ್ಟಿ ನಿರ್ಮಿಸಲು ರೂ.35 ಕೋಟಿ.
- ಬ್ರಹ್ಮಾವರದ ಹೇರೂರು ಗ್ರಾಮದ ಸೇತುವೆ ಬಳಿ ಉಪ್ಪು ನೀರು ತಡೆ ಅಣೆಕಟ್ಟಿ ನಿರ್ಮಿಸಲು ರೂ.35 ಕೋಟಿ.
- ಯಲಹಂಕ ಹೋಬಳಿ ಬಳಿ ಮಣಿಪಾಲ್ ಶಿಕ್ಷಣ ಸಂಸ್ಥೆಗೆ ಸಂಪರ್ಕ ರಸ್ತೆ ನಿರ್ಮಿಸಿಕೊಳ್ಳಲು ಅನುಮತಿ.
- ಬೆಳಗಾವಿ ಬಿಜೆಪಿ ಕಚೇರಿ ನಿರ್ಮಿಸಲು 10 ಗುಂಟೆ ಮಂಜೂರು.
- ಐಐಎಸ್‌ಸಿಯಿಂದ ಆರ್ಟಿಫಿಷಿಯಲ್ ಟೆಕ್ನಾಲಜಿ ಪಾರ್ಕ್ ನಿರ್ಮಿಸಲು 5 ವರ್ಷದಲ್ಲಿ ರೂ.60 ಕೋಟಿ ಅನುದಾನ.

- ಮೈಸೂರು ಸಕ್ಕರೆ ಕಾರ್ಖಾನೆಯನ್ನು ಹೊರಗುತ್ತಿಗೆಗೆ ವಹಿಸುವ ಪ್ರಸ್ತಾವಕ್ಕೆ ಅನುಮೋದನೆ.
- ಬೆಂಗಳೂರು ಕೇಂದ್ರ ವಿವಿ ಅಭಿವೃದ್ಧಿಯ ರೂ.155 ಕೋಟಿ ಅಂದಾಜು ಪಟ್ಟಿಗೆ ಸಮ್ಮತಿ.

ಆಧಾರ: ವಿಜಯ ಕರ್ನಾಟಕ, ದಿನಾಂಕ:13.11.2020

## 49. ರೂ. 3,500 ಕೋಟಿ ವೆಚ್ಚಕ್ಕೆ ಅಸ್ತು

ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಯ ಬಯಲುಸೀಮೆ ತಾಲ್ಲೂಕುಗಳ 197 ಕೆರೆಗಳಿಗೆ ನೀರು ತುಂಬಿಸುವ ರೂ.1,281.80 ಕೋಟಿ ಯೋಜನೆಗೆ ಸಚಿವ ಸಂಪುಟ ಸಭೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಸಚಿವ ಸಂಪುಟ ಸಭೆಯಲ್ಲಿ ಒಟ್ಟು ರೂ.3,500 ಮೊತ್ತದ ವಿವಿಧ ನೀರಾವರಿ ಯೋಜನೆಗಳಿಗೆ ಅನುಮೋದನೆ ನೀಡಿದಂತಾಗಿದೆ. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಸಂಪುಟ ಸಭೆಯ ಬಳಿಕ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ಈ ಕೆರೆಗಳಿಗೆ ಚಿಕ್ಕಮಗಳೂರು ಜಿಲ್ಲೆಯ ಭದ್ರಾ ಜಲಾಶಯದಿಂದ ನೀರು ತುಂಬಿಸಲಾಗುವುದು. ತರೀಕೆರೆ ತಾಲ್ಲೂಕಿನ 31, ಕಡೂರಿನ 114, ಚಿಕ್ಕಮಗಳೂರಿನ 48 ಮತ್ತು ಅರಸೀಕೆರೆಯ 4 ಕೆರೆಗಳು ಸೇರಿವೆ. ಇದಕ್ಕಾಗಿ ಭದ್ರಾ ಜಲಾಶಯದಿಂದ 1.45 ಟಿಎಂಸಿ ಅಡಿ ನೀರು ಹರಿಸಲಾಗುವುದು. ಈ ಯೋಜನೆಯನ್ನು ಮೂರು ಹಂತಗಳಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ. ಮೊದಲನೇ ಹಂತದಲ್ಲಿ ರೂ.406.50 ಕೋಟಿ ಎರಡನೇ ಹಂತದಲ್ಲಿ ರೂ.298.60 ಕೋಟಿ ಮತ್ತು ಮೂರನೇ ಹಂತದಲ್ಲಿ ರೂ.476.07 ಕೋಟಿ ವೆಚ್ಚ ಮಾಡಲಾಗುವುದು ಎಂದರು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿರುವ ಸಿ.ಟಿ.ರವಿ ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಮತದಾರರಿಗೆ ಕೆರೆ ತುಂಬಿಸುವ ಯೋಜನೆಯ ಭರವಸೆ ನೀಡಿದ್ದರು.

**ಇತರ ನೀರಾವರಿ ಯೋಜನೆಗಳಿಗೆ ಒಪ್ಪಿಗೆ:**

- ಮಾರ್ಕಾಂಡೇಯ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸಿ ಗೋಕಾಕ್ ತಾಲ್ಲೂಕಿಗೆ ಕುಡಿಯುವ ನೀರು ಒದಗಿಸಲು ರೂ. 995 ಕೋಟಿ ಯೋಜನೆಗೆ ಒಪ್ಪಿಗೆ.
- ಹಾರಂಗಿ ಜಲಾನಯನ ಪ್ರದೇಶ ಮತ್ತು ನದಿ ಪಾತ್ರದ ಪುನಶ್ಚೇತನ ಹಾಗೂ ರಕ್ಷಣಾ ಕಾಮಗಾರಿಯ ರೂ.130 ಕೋಟಿ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ.
- ಉತ್ತರಕನ್ನಡ ಜಿಲ್ಲೆಯ ಮುಂಡಗೋಡು ತಾಲ್ಲೂಕಿನ 5 ಗ್ರಾಮ ಪಂಚಾಯಿತಿಗಳಲ್ಲಿ ಬರುವ 84 ಸಣ್ಣ ನೀರಾವರಿ, ಜಿಲ್ಲಾ ಪಂಚಾಯತ್ ಕೆರೆಗಳನ್ನು ಬೇಡ್ತಿ ನದಿಯ ಉಪ ನದಿಯಾದ ಕವಳಗಿಹಳ್ಳದಿಂದ ತುಂಬಿಸುವ ರೂ.225 ಕೋಟಿ ಮೊತ್ತದ ಯೋಜನೆಗೆ ಘಟನೋತ್ತರ ಅನುಮೋದನೆ.
- ಪಶ್ಚಿಮ ವಾಹಿನಿ ಯೋಜನೆಯಡಿ ಉಡುಪಿ ಜಿಲ್ಲೆ, ಬ್ರಹ್ಮಾವರ ತಾಲ್ಲೂಕು ಕೊಕ್ಕರ್ಣೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಮೊಗವೀರಪೇಟೆಯಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣಕ್ಕೆ ರೂ.35 ಕೋಟಿ.
- ಬೂದಿಹಾಳ್ ವೀರಾಪೂರ ಏತ ನೀರಾವರಿ ಯೋಜನೆಗೆ ರೂ.549 ಕೋಟಿ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಈ ವರ್ಷಕ್ಕೆ ರೂ.244 ಕೋಟಿ ಅನುದಾನ ನಿಗದಿ ಮಾಡಲಾಗಿದೆ.

- ಬೆಳಗಾವಿ ಜಿಲ್ಲೆ ಹುಕ್ಕೇರಿಯ 1200 ಹೆಕ್ಟೇರ್ ಪ್ರದೇಶಕ್ಕೆ ನೀರು ಒದಗಿಸಲು ಅಡವಿ ಸಿದ್ದೇಶ್ವರ ಏತ ನೀರಾವರಿ ಯೋಜನೆಗೆ ರೂ. 66.13 ಕೋಟಿ.
- ಶಿರಸಿ ನಗರಕ್ಕೆ ನೀರು ಪೂರೈಕೆ ಯೋಜನೆಗೆ ರೂ. 38.12 ಕೋಟಿ.

ಆಧಾರ: ಪ್ರಜಾವಾಣಿ, ದಿನಾಂಕ:13.11.2020

## 50. ವಿಶ್ವದಲ್ಲೇ ಮೊದಲ ಬಾರಿಗೆ 'ವರ್ಚುವಲ್' ಶೃಂಗಸಭೆ

ಗಿಜಿಗುಡುವ ಜನಸಂದಣಿ, ನೂಕುನುಗ್ಗಲು, ನಾಲ್ಕೈದು ಕಡೆ ನಡೆಯುವ ತಂತ್ರಜ್ಞಾನ ಗೋಷ್ಠಿಗಳಲ್ಲಿ ಆಯ್ಕೆಯ ಸಮಸ್ಯೆ, ಅಲ್ಲಿಂದಿಲ್ಲಿಗೆ ಓಡಾಡುವ ತಾಪತ್ರಯಗಳೇ ಇಲ್ಲದಂತೆ ಈ ಬಾರಿಯ 'ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯಲ್ಲಿ ಪಾಲ್ಗೊಳ್ಳಬಹುದು.

ಅತ್ಯಾಧುನಿಕ ತಂತ್ರಜ್ಞಾನ ಬಳಸಿಕೊಂಡು ವಿಶ್ವದಲ್ಲೇ ಮೊದಲ ಬಾರಿಗೆ ವರ್ಚುವಲ್ ರೂಪದಲ್ಲಿ ನಡೆಯುತ್ತಿರುವ 'ಬೆಂಗಳೂರು ತಂತ್ರಜ್ಞಾನ ಶೃಂಗಸಭೆ' (ಬಿಟಿಎಸ್) ಅನೇಕ ವೈಶಿಷ್ಟ್ಯಗಳನ್ನು ಹೊಂದಿದೆ.

'ಪ್ರಜಾವಾಣಿ' ಕಚೇರಿಗೆ ಭೇಟಿ ನೀಡಿದ್ದ ಉನ್ನತ ಶಿಕ್ಷಣ ಹಾಗೂ ಐಟಿ–ಬಿಟಿ ಸಚಿವರು ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ, ಬಿಟಿಎಸ್ ಯಶಸ್ಸುಗೊಳಿಸಲು ಇಲಾಖೆ ನಡೆಸಿರುವ ಸಿದ್ಧತೆಯನ್ನು ಸಾದ್ಯಂತ ವಿವರಿಸಿದರು.

ಐಟಿ ಮತ್ತು ಬಿಟಿ ಸಂಬಂಧಿತ ಕ್ಷೇತ್ರಗಳಲ್ಲಿ ಬೆಂಗಳೂರು ತನ್ನ ಮುಂಚೂಣಿ ನಾಯಕತ್ವವನ್ನು ಕೋವಿಡ್ ಕಾಲದಲ್ಲೂ ಉಳಿಸಿಕೊಂಡಿದೆ. ಅದನ್ನು ಇನ್ನಷ್ಟು ವೈಭವ ಹಾಗೂ ಸಮೃದ್ಧಿಯತ್ತ ಕೊಂಡೊಯ್ಯುವುದು ಈ ವರ್ಷದ ಬಿಟಿಎಸ್‌ನ ಆಶಯ ಎಂದರು.

ಮಾರ್ಚ್‌ನಿಂದ ಅಕ್ಟೋಬರ್‌ವರೆಗಿನ ಕೋವಿಡ್ ಕಾಲಘಟ್ಟದಲ್ಲಿ ಐ.ಟಿ ಕ್ಷೇತ್ರ ತನ್ನ ಹೆಗ್ಗಳಿಕೆ ಉಳಿಸಿಕೊಂಡಿದೆ. ಈ ಅವಧಿಯಲ್ಲಿ ಐ.ಟಿ ರಫ್ತಿನಲ್ಲಿ ರೂ.1.16 ಲಕ್ಷ ಕೋಟಿ ಮೌಲ್ಯದಷ್ಟು ವಹಿವಾಟು ನಡೆದಿದೆ. ನವೋದ್ಯಮಕ್ಕೆ ಕರ್ನಾಟಕ ಅದ್ಯತೆ ನೀಡಿರುವುದರಿಂದಾಗಿ ಪ್ರತಿವರ್ಷ 50ರಿಂದ 100ರಷ್ಟು ಹೊಸ ನವೋದ್ಯಮಗಳು ಆರಂಭವಾಗುತ್ತಲೇ ಇವೆ ಎಂದು ವಿವರಿಸಿದರು.

ವರ್ಚುವಲ್ ರೂಪದಲ್ಲಿ ತಂತ್ರಜ್ಞಾನ ಸಮಾವೇಶ ನಡೆಯುತ್ತಿರುವುದರಿಂದಾಗಿ ಅನೇಕ ಅನುಕೂಲಗಳು ಲಭಿಸಲಿವೆ. ಹಿಂದಿನಂತೆಯೇ ಭೌತಿಕ ರೂಪದಲ್ಲಿ ನಡೆದಿದ್ದರೆ ವಿಶ್ವದ ನಾನಾ ದಿಕ್ಕುಗಳಲ್ಲಿರುವ ತಂತ್ರಜ್ಞಾನ ಕ್ಷೇತ್ರದ ಸಂಪನ್ಮೂಲ ವ್ಯಕ್ತಿಗಳು, ವಿಶ್ವಶ್ರೇಷ್ಠ ತಂತ್ರಜ್ಞರು, ವಿಜ್ಞಾನಿಗಳು ಹಾಗೂ ಉದ್ಯಮಿಗಳು ಭಾಗಿಯಾಗಲು ಸಾಧ್ಯವಾಗುತ್ತಿರಲಿಲ್ಲ. ವರ್ಚುವಲ್ ರೂಪದಲ್ಲಿ ನಡೆಯುತ್ತಿರುವುದರಿಂದ ಅವರು ಎಲ್ಲಿರುತ್ತಾರೋ ಅಲ್ಲಿಂದಲೇ ಪಾಲ್ಗೊಳ್ಳುವ ಅವಕಾಶ ಒದಗುವುದರಿಂದ ಜಗತ್ತಿನ ತಂತ್ರಜ್ಞಾನ ದಿಗ್ಗಜರ ಜ್ಞಾನ ಹಾಗೂ ತಿಳುವಳಿಕೆ ಬಿಟಿಎಸ್‌ನಲ್ಲಿ ಸಿಗಲಿವೆ ಎಂದು ಅಶ್ವತ್ಥನಾರಾಯಣ ವಿವರಿಸಿದರು.

250ಕ್ಕೂ ಹೆಚ್ಚು ತಂತ್ರಜ್ಞಾನ ಮಳಿಗೆಗಳು ವರ್ಚುವಲ್ ರೂಪದಲ್ಲೇ ಭಾಗವಹಿಸಲಿವೆ. ಭೌತಿಕವಾಗಿ ಪಾಲ್ಗೊಳ್ಳುವುದು ದೂರದ ದೇಶಗಳ ತಂತ್ರಜ್ಞಾನ ಸಂಸ್ಥೆಗಳಿಗೆ ಸಾಧ್ಯವಾಗುತ್ತಿರಲಿಲ್ಲ. ಅನೇಕ ಶೃಂಗಗಳಲ್ಲಿ ದೇಶೀಯ ಕಂಪನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗುತ್ತಿದ್ದವು. ಈ ಬಾರಿ ವರ್ಚುವಲ್ ಆಗಿ ನಡೆಯುತ್ತಿರುವುದರಿಂದ, ಅಯಾ ದೇಶಗಳಲ್ಲಿದ್ದುಕೊಂಡೇ ಭಾಗವಹಿಸುವ ಅಮೂಲ್ಯ ಅವಕಾಶ ಒದಗಲಿದೆ. ಕೃಷಿ, ಆರೋಗ್ಯ, ಅತಿಥ್ಯ, ಪ್ರವಾಸೋದ್ಯಮ ಇನ್ನಿತರ ಕ್ಷೇತ್ರಗಳಿಗೆ ಈ ಶೃಂಗಸಭೆಯಿಂದ ದೊಡ್ಡ ಮಟ್ಟದ ಉತ್ತೇಜನ ಸಿಗಲಿದೆ ಎಂದರು.

**ಉದ್ಘಾಟನೆಗೆ ಮೋದಿ:** ನವೆಂಬರ್ 19ರಿಂದ 21ರ ವರೆಗೆ ನಡೆಯಲಿರುವ ಶೃಂಗಸಭೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುವಲ್ ರೂಪದಲ್ಲಿ ಉದ್ಘಾಟಿಸಲಿದ್ದಾರೆ. ಆಸ್ಟ್ರೇಲಿಯ,

ನೆದರ್‌ಲೆಂಡ್ ಹಾಗೂ ಜರ್ಮನಿಯ ಪ್ರಧಾನ ಮಂತ್ರಿಗಳು ಭಾಗಿಯಾಗಲಿದ್ದಾರೆ ಎಂದು ಅಶ್ವತ್ಥನಾರಾಯಣ ಹೇಳಿದರು.

ಕೈಗಾರಿಕೆಗಳಿಗೆ ಪೂರಕವಾಗುವ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ, ಕೌಶಲಾಭಿವೃದ್ಧಿ, ಕಲಿಕಾ ನಿರ್ವಹಣೆಗೆ ಆದ್ಯತೆ ನೀಡಲಾಗಿದೆ. ವ್ಯಾಸಂಗದ ಹಂತದಲ್ಲೇ ಇಂಟರ್‌ಶಿಪ್‌ಗೆ ಒತ್ತು ನೀಡಲಾಗುತ್ತಿದೆ. ಈ ಬಾರಿಯ ಶೃಂಗಸಭೆಯ ಯಶಸ್ಸಿಗೆ 'ಗ್ಲೋಬಲ್ ಇನ್ನೋವೇಶನ್ ಅಲಯನ್ಸ್' ಎಂಬ ಸಂಸ್ಥೆಯ ನೆರವು ಪಡೆಯಲಾಗಿದ್ದು, ಅದಕ್ಕಾಗಿ ಸಲಹೆಗಾರರ ಸಮಿತಿಯನ್ನು ರಚಿಸಲಾಗಿದೆ ಎಂದು ವಿವರಿಸಿದರು.

ಆಧಾರ: ಪ್ರಜಾವಾಣಿ, ದಿನಾಂಕ:14.11.2020

## 51. ಮನೆಯಿಂದಲೇ ಖಾತಾ ನೋಂದಾಯಿಸಿ

ಮನೆಯಲ್ಲಿ ಕುಳಿತೇ ತ್ವರಿತವಾಗಿ ಮತ್ತು ಸುಲಭವಾಗಿ ಆಸ್ತಿ ಖಾತಾ ನೋಂದಣಿ, ವರ್ಗಾವಣೆ ಮತ್ತು ವಿಭಜನೆ ಸೇರಿದಂತೆ ಹಲವು ಸೇವೆಗಳನ್ನು ಪಡೆಯಬಹುದಾದ ಇ–ಆಸ್ತಿ ತಂತ್ರಾಂಶಕ್ಕೆ ಬಿಬಿಎಂಪಿಯು ಚಾಲನೆ ನೀಡಿದೆ. ಬಿಬಿಎಂಪಿ ಆಡಳಿತಾಧಿಕಾರಿ ಗೌರವ ಗುಪ್ತ, 'ಬಿಬಿಎಂಪಿಯ ಶಾಂತಲಾನಗರ, ನೀಲಸಂದ್ರ ಮತ್ತು ಶಾಂತಿನಗರ ವಾರ್ಡ್‌ಗಳ ಮಾಹಿತಿ, ಉಳಿದ 97 ವಾರ್ಡ್‌ಗಳ ಕಂದಾಯ ಸೇವೆಗಳ ಮಾಹಿತಿಯನ್ನು ಇನ್ನೆರಡು ವಾರಗಳಲ್ಲಿ ಇ–ಆಸ್ತಿ ತಂತ್ರಾಂಶದಲ್ಲಿ ಅಳವಡಿಸಲಾಗುವುದು' ಎಂದು ತಿಳಿಸಿದರು.

'ಆಸ್ತಿ ನಿರ್ವಹಣೆಗೆ ಸಂಬಂಧಿಸಿದಂತೆ ನಾಗರಿಕರು ಈ ತಂತ್ರಾಂಶ ಬಳಸಿಕೊಳ್ಳಬಹುದು. ಲೋಪ–ದೋಷಗಳು ಕಂಡು ಬಂದರೆ, ಪ್ರತಿಕ್ರಿಯೆ ದಾಖಲಿಸಬಹುದು. ಸಲಹೆಗಳನ್ನು ಸರಿಪಡಿಸಿಕೊಂಡು ಉತ್ತಮ ಸೇವೆ ನೀಡಲಾಗುವುದು' ಎಂದರು. 'ಖಾತಾ ಪಡೆಯುವ, ಕಟ್ಟಡದ ನಕ್ಷೆ ಮಂಜೂರಾತಿ, ಉದ್ದಿಮೆ ಪರವಾನಿಗಿ ಸೇರಿದಂತೆ ಇನ್ನಿತರೆ ಸಾರ್ವಜನಿಕರಿಗೆ ಅನುಕೂಲವಾಗುವ ಎಲ್ಲವೂ ಆನ್‌ಲೈನ್ ಮೂಲಕ ದೊರೆಯುವಂತಾದರೆ ಸಾರ್ವಜನಿಕರು ಕಚೇರಿಗೆ ಅಲೆದಾಡುವುದು ತಪ್ಪುತ್ತದೆ' ಎಂದು ಹೇಳಿದರು.

ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ್ ಪ್ರಸಾದ್, 'ಬಿಬಿಎಂಪಿಯ ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯಗಳಲ್ಲಿನ 100 ವಾರ್ಡ್‌ಗಳಲ್ಲಿ ಪ್ರಾರಂಭಿಕವಾಗಿ ಈ ಇ–ಆಸ್ತಿ ತಂತ್ರಾಂಶ ವ್ಯವಸ್ಥೆ ಜಾರಿಗೆ ತರಲಾಗುವುದು. ಉಳಿದ ವಾರ್ಡ್‌ಗಳಲ್ಲಿ ಮುಂದಿನ ಆರು ತಿಂಗಳಲ್ಲಿ ಈ ವ್ಯವಸ್ಥೆ ಅಳವಡಿಸಲಾಗುವುದು ಎಂದರು.

'2018ರ ಫೆಬ್ರವರಿಯಲ್ಲಿ ಸಕಾಲ ಯೋಜನೆಯಡಿ ಆನ್‌ಲೈನ್ ಮೂಲಕ ಖಾತಾ ಬದಲಾವಣೆ ಮಾಡುವ ವ್ಯವಸ್ಥೆ ಜಾರಿಗೆ ತರಲಾಗಿದ್ದು, ಈವರೆಗೆ 2,87,953 ಖಾತೆಗಳನ್ನು ಆನ್‌ಲೈನ್ ಮೂಲಕ ವರ್ಗಾವಣೆ, ವಿಭಜನೆ, ನೋಂದಣಿ ಮಾಡಲಾಗಿದೆ. ಈ ಖಾತಾಗಳಿಗೆ ಕೈಯಿಂದ ಸಹಿ ಮಾಡಲಾಗುತ್ತಿತ್ತು. ಈಗ ಒಂದೇ ಫಾರ್ಮ್‌ನ (ನಮೂನೆ) 46 ಕಾಲಂಗಳಲ್ಲಿ ಆಸ್ತಿಗೆ ಸಂಬಂಧಿಸಿದ ಮಾಹಿತಿ, ಕಟ್ಟಡ, ಮಾಲೀಕರ ಭಾವಚಿತ್ರ, ಕಟ್ಟಡದ ಭಾವಚಿತ್ರ, ಚಕ್ಕುಬಂಧಿ ಸೇರಿದಂತೆ ಆಸ್ತಿಗೆ ಸಂಬಂಧಿಸಿದ ಎಲ್ಲ ಸಂಪೂರ್ಣ ಮಾಹಿತಿಗಳನ್ನು ಹೊಸ ನಮೂನೆ ಪತ್ರದಲ್ಲಿ ನೀಡಲಾಗುತ್ತಿದೆ ಎಂದರು.

'ಆ ಪತ್ರಕ್ಕೆ ಸಂಬಂಧಪಟ್ಟ ಅಧಿಕಾರಿ ಡಿಜಿಟಲ್ ಸಹಿ ಮಾಡಲಿದ್ದು, ಪತ್ರಕ್ಕೆ ಸಹಿ ಮಾಡಿರುವ ಅಧಿಕಾರಿಯ ಸಹಿಯು ಅವರ ಆಧಾರ್ ಗುರುತಿನ ಸಂಖ್ಯೆಗೆ ಜೋಡಿಸಲಾಗಿರುತ್ತದೆ. ಅದೆಲ್ಲವೂ ಸಂಬಂಧಪಟ್ಟವರ ಡಿಜಿ ಲಾಕರ್‌ಗೆ ಸ್ವಯಂಚಾಲಿತವಾಗಿ ಹೋಗಲಿದೆ. ನಾನು ಸಹಿ ಮಾಡಿರಲಿಲ್ಲ, ನನಗೆ ಗೊತ್ತಿಲ್ಲ ಎಂಬ ಸಬೂಬು ಹೇಳಲು ಈ ವ್ಯವಸ್ಥೆಯಲ್ಲಿ ಸಾಧ್ಯವಿಲ್ಲ' ಎಂದು ಅವರು ವಿವರಿಸಿದರು.

'ಪ್ರಾರಂಭದ ಈ ಮೂರು ವಾರ್ಡ್‌ಗಳಲ್ಲಿ ಕೈಬರಹದ ದಾಖಲೆಗಳನ್ನು ನಿಷೇಧಿಸಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಬಗ್ಗೆ ಸೂಚನೆಯನ್ನು ನೀಡಲಾಗಿದೆ. ಇ–ಆಸ್ತಿ ತಂತ್ರಾಂಶ ಜಾರಿಗೊಳಿಸುವುದರಿಂದ ನಕಲಿ ದಾಖಲೆಗಳು ಸೃಷ್ಟಿಯಾಗುವುದು ಕಡಿಮೆಯಾಗುತ್ತದೆ' ಎಂದರು.

**ಪ್ರಕ್ರಿಯೆ ಹೇಗೆ.**

- ಇ–ಆಸ್ತಿ ತಂತ್ರಾಂಶವನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ ತಂತ್ರಾಂಶಕ್ಕೆ ಸಂಯೋಜಿಸುವುದು.
- ನಗರಪಾಲಿಕೆಯಿಂದ ಪಡೆದ ಗಣಕೀಕೃತ ಡಿಜಿಟಲ್ ಸಹಿಯುಳ್ಳ ನಮೂನೆಯನ್ನು ಹಕ್ಕು ವರ್ಗಾವಣೆ ಮಾಡುವ ಪ್ರಾಧಿಕಾರಗಳಿಗೆ ರವಾನೆ.
- ನೋಂದಣಿ ಇಲಾಖೆಯಲ್ಲಿ ಹಕ್ಕು ವರ್ಗಾವಣೆ ನಂತರ ಇ–ಆಸ್ತಿ ತಂತ್ರಾಂಶಕ್ಕೆ ಸ್ವಯಂಚಾಲಿತವಾಗಿ ವರ್ಗಾವಣೆ.
- ಮಾರಾಟ–ಖರೀದಿದಾರರಿಗೆ ಎಸ್ಎಂಎಸ್/ಇ–ಮೇಲ್ ಮೂಲಕ ಹಕ್ಕು ವರ್ಗಾವಣೆ ಪ್ರಕ್ರಿಯೆ ಮಾಹಿತಿ ರವಾನೆ.
- ಸದರಿ ತಂತ್ರಾಂಶದಲ್ಲಿನ ದಾಖಲೆಯನ್ನು ರೂ.120 ಪಾವತಿಸಿ ಮುದ್ರಿಸಿಕೊಳ್ಳುವುದಲ್ಲದೆ, ಡಿಜಿ ಲಾಕರ್ ಮೂಲಕ ಸಂಗ್ರಹಿಸಿಟ್ಟುಕೊಳ್ಳಬಹುದು.

**ಅನುಕೂಲಗಳೇನು.**

- ಆಸ್ತಿಯ ಮಾಲೀಕರು ಖಾತೆ ವರ್ಗಾವಣೆಗಾಗಿ ಪಾಲಿಕೆಗೆ ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆಯಿಲ್ಲ.
- ಸ್ವತ್ತಿನ ಮಾಲೀಕರ ಮತ್ತು ಸ್ವತ್ತಿನ ಭಾವಚಿತ್ರ ಮತ್ತು ಚೆಕ್ಕುಬಂದಿ ವಿವರ ಇರುವುದರಿಂದ ಖರೀದಿದಾರರು ಮೋಸ ಹೋಗುವ ಸಾಧ್ಯತೆ ಇಲ್ಲ.
- ನಮೂನೆಯಲ್ಲಿ ಡಿಜಿಟಲ್ ಸಹಿ ಬಾರ್‌ಕೋಡ್ ಇರುವುದರಿಂದ ನಕಲಿ ದಾಖಲೆ ಪತ್ತೆ ಸುಲಭವಾಗುತ್ತದೆ.
- ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆಗಳು ನಿರ್ಮಾಣವಾಗುವುದಕ್ಕೆ ತಡೆ.

ಆಧಾರ: ಪ್ರಜಾವಾಣಿ, ದಿನಾಂಕ:14.11.2020

## 52. ದ್ವೀತಿಯ ಸ್ತರದ ನಗರಗಳ ಐಟಿ ಕಂಪನಿಗಳಿಗೆ ಹೇರಳ ರಿಯಾಯಿತಿ

ಆತ್ಯಾಧುನಿಕ ತಂತ್ರಜ್ಞಾನ ಬಳಸಿಕೊಂಡು ಇದೇ ಮೊದಲ ಬಾರಿಗೆ ವರ್ಚುವಲ್ ರೂಪದಲ್ಲಿ ನವೆಂಬರ್ 19ರಿಂದ ನಡೆಯುತ್ತಿರುವ ಬೆಂಗಳೂರು ತಂತ್ರಜ್ಞಾನ ಶೃಂಗಸಭೆ (ಬಿಟಿಎಸ್) ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಗೆ ಸಾಕ್ಷಿಯಗುವ ನಿರೀಕ್ಷೆ ಹುಟ್ಟಿಸಿದೆ.

ಬೆಂಗಳೂರು ಹೊರತು ಪಡಿಸಿ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಉದ್ದಿಮೆ ಸ್ಥಾಪಿಸಲು ಯೋಜಿಸುತ್ತಿರುವ ಅರ್ಹ ಐಟಿ ಸಂಸ್ಥೆಗಳಿಗೆ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ವಿವಿಧ ಪ್ರೋತ್ಸಾಹಗಳನ್ನು ಒದಗಿಸಿ ಉತ್ತೇಜಿಸಲು ಮುಂದಾಗಿದ್ದಾರೆ. ಬಾಡಿಗೆ ವೆಚ್ಚದ ಮರುಪಾವತಿ, ಮುದ್ರಾಂಕ ಶುಲ್ಕದಿಂದ ವಿನಾಯಿತಿ, ವಿದ್ಯುಚ್ಛಕ್ತಿ ದರದಲ್ಲಿ ರಿಯಾಯಿತಿ, ಪೇಟೆಂಟ್‌ಗಳಿಗೆ ತಗಲಿದ ವೆಚ್ಚದ ಮರುಪಾವತಿ ಸೇರಿದಂತೆ ಹಲವು ಪ್ರೋತ್ಸಾಹಕ ನೀಡುವ ಮಹತ್ವದ ನಿರ್ಧಾರವನ್ನು ಅಶ್ವತ್ಥನಾರಾಯಣ ಅವರು ಕೈಗೊಂಡಿದ್ದಾರೆ.

ರಾಜ್ಯದಲ್ಲಿರುವ ಎಲ್ಲಾ ಅರ್ಹ ಐಟಿ ಉದ್ಯಮಗಳ ಸ್ಥಳೀಯ ಪೇಟೆಂಟ್‌ಗಾಗಿ ಅರ್ಜಿ ಸಲ್ಲಿಸಿ, ಪುರಸ್ಕರಿಸಿರುವ ಪೇಟೆಂಟ್‌ಗೆ ತಗಲಿರುವ ವೆಚ್ಚಕ್ಕೆ ರೂ.2 ಲಕ್ಷವರೆಗೆ ಮರುಪಾವತಿಸಲಾಗುವುದು. ಅದೇ

ರೀತಿ ಪುರಸ್ಕರಿಸಿರುವ ಅಂತರರಾಷ್ಟ್ರೀಯ ಪೇಟೆಂಟ್‌ಗೆ ತಗಲಿರುವ ವೆಚ್ಚಕ್ಕೆ ರೂ.10 ಲಕ್ಷವರೆಗೆ ಮರುಪಾವತಿಗೆ ಉಪ ಮುಖ್ಯಮಂತ್ರಿ ಕ್ರಮ ಕೈಗೊಂಡಿದ್ದಾರೆ.

ಬೆಂಗಳೂರು ಹೊರತುಪಡಿಸಿರುವ ನಗರದಲ್ಲಿ ಐಟಿ ಮತ್ತು ಉದನೋನ್ಮುಖ ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸಮಾವೇಶಗಳನ್ನು ಆಯೋಜಿಸಲು ರಾಜ್ಯ ಸರ್ಕಾರ ಉತ್ತೇಜನ ನೀಡಲಿದೆ. ಐಟಿ ಘಟಕಗಳಿಗೆ, ವಿದ್ಯಾರ್ಥಿಗಳಿಗೆ ಮತ್ತು ಸಂಬಂಧಪಟ್ಟ ಇತರ ಹಿತಾಸಕ್ತಿದಾರರಿಗೆ ಉದ್ಯಮದಲ್ಲಾಗುತ್ತಿರುವ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ತಿಳಿದುಕೊಳ್ಳಲು ಜ್ಞಾನವನ್ನು ಹಂಚಿಕೊಳ್ಳಲು ಮತ್ತು ಮಾರುಕಟ್ಟೆ ಪ್ರವೇಶಕ್ಕೆ ಅವಕಾಶ ಪಡೆಯಲು ಈ ಸಮಾವೇಶ ವೇದಿಕೆ ಕಲ್ಪಿಸಲಿದೆ.

ಪ್ರಮುಖ ಆರ್ಥಿಕ ವಲಯದಲ್ಲಿ ಮಾಹಿತಿ ತಂತ್ರಜ್ಞಾನದ ಬಳಕೆಯನ್ನು ಪ್ರೋತ್ಸಾಹಿಸಿ ಉತ್ತಮಗೊಳಿಸಲು ವಿವಿಧ ಉಪಕ್ರಮಗಳ ಮೂಲಕ ಉದ್ಯೋನ್ಮುಖ ಉದ್ಯಮದ ಸಾಮರ್ಥ್ಯಗಳಿಗೆ ಒತ್ತು ನೀಡಲು ಮತ್ತು ಪೂರಕ ಪರಿಸರ ವ್ಯವಸ್ಥೆಯನ್ನು ಬೆಳೆಸಿ ವರ್ಧಿಸಲು ಸರ್ಕಾರವು ತನ್ನ ಹೊಣೆಗಾರಿಕೆಯನ್ನು ಕಂಡುಕೊಂಡಿದೆ. ವ್ಯವಹಾರವನ್ನು ಹೆಚ್ಚು ಸುಗಮವಾಗಿ ಕೈಗೊಳ್ಳಲು ಅನುವಾಗುವಂತೆ ಐಟಿ ಸೇವೆಗಳ, ಯಂತ್ರಾಂಶ ಮತ್ತು ತಂತ್ರಾಂಶ ಉತ್ಪನ್ನಗಳ ಮತ್ತು ಕ್ಲೌಡ್ ಸಂಬಂಧಿತ ಸೇವೆ ಕುರಿತು ಅಶ್ವತ್ಥ ನಾರಾಯಣ ನೇತೃತ್ವದಲ್ಲಿ ಐಟಿ ಇಲಾಖೆಯು ತನ್ನ ಸಾರ್ವಜನಿಕ ಸಂಗ್ರಹಣೆಯನ್ನು ಕ್ರಮದಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಿದೆ.

ಆರ್ಥಿಕತೆಯ ಪ್ರಮುಖ ಚಾಲಕ ಶಕ್ತಿಗಳಲ್ಲಿ ಐಟಿ ಮೂಲಸೌಕರ್ಯವು ಒಂದು. ರಾಜ್ಯದ ಪ್ರಗತಿಯ ಒರೆಗಲ್ಲಿಗೆ ಇದು ಅತ್ಯಂತ ಸ್ಪಷ್ಟ ಸಾಕ್ಷಿಯಾಗಿದೆ. ಬೆಂಗಳೂರು ಹೊರತುಪಡಿಸಿ ಇತರೆ ನಗರಗಳ ಬೆಳವಣಿಗೆಯ ವೇಗವನ್ನು ವರ್ಧಿಸಲು ಈ ಸಮಾವೇಶ ಶ್ರೀಕಾರ ಹಾಕಲಿದೆ ಎಂದು ಬಿಂಬಿಸಲಾಗುತ್ತಿದೆ.

ಬೆಂಗಳೂರು ಹೊರತು ಇತರೆ ನಗರದಲ್ಲಿ ಸ್ಥಾಪಿಸುವ ಐಟಿ ಹಬ್‌ಗಳು/ಕ್ಲಸ್ಟರ್‌ಗಳಿಗೆ, ಸ್ಥಿರ ಹೂಡಿಕೆಗಳ (ಜಮೀನು ವೆಚ್ಚ ಹೊರತುಪಡಿಸಿ) ಶೇ.20ರವರೆಗೆ ಮತ್ತು ರೂ.3 ಕೋಟಿಗಳ ಪರಿಮಿತಿಗೊಳಪಟ್ಟು, ಇವರೆಡರಲ್ಲಿ ಯಾವುದು ಕಡಿಮೆಯೋ ಅಷ್ಟು ಆರ್ಥಿಕ ಬೆಂಬಲ ಕಲ್ಪಿಸಲಿದೆ. ಐಟಿ ಹಬ್‌ಗಳು/ಕ್ಲಸ್ಟರ್‌ಗಳು ನೆಲೆಯೂರಿರುವ ಸ್ಥಳದ ಕನಿಷ್ಠ ಶೇ.60ರಷ್ಟಕ್ಕೆ ಅಥವಾ ಐಟಿ ಉದ್ಯಮದಲ್ಲಿ ಕನಿಷ್ಠ 500 ಉದ್ಯೋಗಾವಕಾಶಗಳನ್ನು ಕಲ್ಪಿಸುವ ಸಂಸ್ಥೆಗಳಿಗೆ ರಾಜ್ಯಮಟ್ಟದ ಸಮಿತಿಗಳಿಂದ ಅನುಮೋದನೆ ಮತ್ತು ಶಿಫಾರಸ್ಸುಗಳಿಗೆ ಒಳಪಟ್ಟು ಆರ್ಥಿಕ ಸಹಾಯವು ಅನ್ವಯವಾಗುತ್ತದೆ.

ಆಧಾರ: ಕನ್ನಡಪ್ರಭ, ದಿನಾಂಕ:15.11.2020

## 53. ವರ್ಚುವಲ್ ಕೃಷಿ ಮೇಳ ಯಶಸ್ವಿ

ಕೋವಿಡ್–19 ಹಿನ್ನೆಲೆಯಲ್ಲಿ ದೇಶದಲ್ಲೇ ಮೊದಲ ಬಾರಿಗೆ ಬೆಂಗಳೂರು ಕೃಷಿ ವಿವಿ ಆಯೋಜಿಸಿದ್ದ 'ವರ್ಚುವಲ್ ಕೃಷಿ ಮೇಳ' ಯಶಸ್ವಿಯಾಗಿ ಮುಕ್ತಾಯವಾಗಿದೆ. ನವೆಂಬರ್ 11–13ರವರೆಗೆ ನಡೆದ ವರ್ಚುವಲ್ ಮೇಳದಲ್ಲಿ ಸುಮಾರು ಒಂದು ಲಕ್ಷ ಮಂದಿ ನಾನಾ ಜಾಲತಾಣದಲ್ಲಿ ವೀಕ್ಷಿಸಿದ್ದಾರೆ. ಇದರಿಂದ ರಾಜ್ಯದ ಇತರ ಕೃಷಿ–ತೋಟಗಾರಿಕೆ ವಿವಿಗಳು ಕೂಡ ವರ್ಚುವಲ್ ಮೇಳದತ್ತ ದೃಷ್ಟಿಹರಿಸಲು ಪ್ರೇರಣೆ ನೀಡಿದೆ.

ಈ ಬಾರಿ ಮೇಳ ನಡೆಯುವುದು ಅನುಮಾನ ಮೂಡಿತ್ತು. ಕೋವಿಡ್–19ರ ಮಾರ್ಗಸೂಚಿಯಂತೆ ದೊಡ್ಡ ಸಂಖ್ಯೆಯಲ್ಲಿ ಜನರನ್ನು ಸೇರಿಸಲು ಅವಕಾಶ ಇರಲಿಲ್ಲ. ಇದು ಮೇಳ ಆಯೋಜನೆಗೆ ತೊಡಕುಂಟು ಮಾಡಿತ್ತು. ಇದನ್ನು ಸವಾಲಾಗಿ ಸ್ವೀಕರಿಸಿದ ವಿವಿ ಕುಲಪತಿ ಹಾಗೂ ಆಡಳಿತ ಮಂಡಳಿಯು ಸರಳವಾಗಿ ಆಚರಿಸಲು ನಿರ್ಧರಿಸಿತ್ತು. ಆದರೆ, ಶಿರಾ ಹಾಗೂ ಆರ್‌ಆರ್ ನಗರಗಳಿಗೆ ಉಪ ಚುನಾವಣೆಯ ನೀತಿ ಸಂಹಿತೆಯ ಬಿಸಿ ತಟ್ಟಿತ್ತು. ಮೊದಲು ನಿಗದಿ ಮಾಡಿಕೊಂಡಿದ್ದ ದಿನಾಂಕದ ಬದಲು ಮತದಾನ ಮುಗಿದ ಬಳಿಕ ಮೇಳ ನಡೆಸಲು ಒಪ್ಪಿಗೆ ದೊರೆಯಿತು. ಇದರಿಂದ ವರ್ಚುವಲ್ ಮೂಲಕವೇ

ಅನ್ನದಾತರಿಗೆ ಕೃಷಿ ಜ್ಞಾನವನ್ನು ತಲುಪಿಸಲು ವೇದಿಕೆ ಸೃಷ್ಟಿಯಾಯಿತು. ವಾರ್ಷಿಕ ಮೇಳವನ್ನು ತಪ್ಪಿಸಬಾರದೆಂಬ ಕಾರಣಕ್ಕೆ ಅದ್ಧೂರಿ ಬದಲು ಸರಳ ಆಚರಣೆ ವಿವಿಗೆ ಹೊಸ ಅನುಭವ ನೀಡಿದೆ.

ಸದ್ಯ ಈ ವರ್ಷ ಬೆಂಗಳೂರು ಕೃಷಿ ವಿವಿ ಹೊರತುಪಡಿಸಿ ಇನ್ನುಳಿದ ವಿವಿಗಳು ಕೃಷಿಮೇಳ ನಡೆಸಿಲ್ಲ. ಧಾರವಾಡ, ರಾಯಚೂರು, ಶಿವಮೊಗ್ಗ ಕೃಷಿ ವಿವಿ ಹಾಗೂ ಬಾಗಲಕೋಟೆ ತೋಟಗಾರಿಕೆ ವಿವಿ ಮೇಳ ನಡೆಸಲು ಹಿಂದೇಟು ಹಾಕಿವೆ. ಹಾಲಿ 'ಯುಎಎಸ್-ಬಿ' ಮೇಳವನ್ನು ಯಶಸ್ವಿಯಾಗಿ ನಿಭಾಯಿಸಿರುವ ಕಾರಣ ಸೀಮಿತ ಮಟ್ಟದಲ್ಲಿ ಕೃಷಿ ಮೇಳ ನಡೆಸಬಹುದೆಂಬ ವಿಶ್ವಾಸ ಮೂಡಿದೆ. ಜೊತೆಗೆ ಹೆಸರುಘಟ್ಟದಲ್ಲಿರುವ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ಪ್ರತಿ ವರ್ಷ ಜನವರಿ ಅಥವಾ ಫೆಬ್ರವರಿಯಲ್ಲಿ ದಕ್ಷಿಣ ಭಾರತ ಮಟ್ಟದ 'ತೋಟಗಾರಿಕೆ ಮೇಳ' ನಡೆಸುತ್ತದೆ.

**ಪ್ರಾತ್ಯಕ್ಷಿತೆಗೆ ಒತ್ತು:** ಕೃಷಿ ಮೇಳವು ವರ್ಚುವಲ್ ಮೂಲಕ ನಡೆಸಿದ್ದರೂ ಪ್ರಗತಿಪರ ಕೃಷಿಕರು ಹಾಗೂ ರೈತ ಪ್ರಶಸ್ತಿ ಪಡೆದ ರೈತರನ್ನು ಮೇಳಕ್ಕೆ ಆಹ್ವಾನಿಸಲಾಗಿತ್ತು. ಇವರಿಗೆ ವಿವಿ ಅಭಿವೃದ್ಧಿಪಡಿಸಿರುವ ಹೊಸ ತಳಿಗಳ ಕುರಿತು ತಾಕುಗಳಲ್ಲಿ ಪ್ರಾತ್ಯಕ್ಷಿಕೆ ನೀಡಲಾಯಿತು. ಇದೂ ಸೇರಿದಂತೆ ವಸ್ತುಪ್ರದರ್ಶನ, ವಿಜ್ಞಾನಿಗಳ ಸಲಹೆಗಳನ್ನು ಆನ್‌ಲೈನ್ ಮೂಲಕ ಬಿತ್ತರಿಸಲಾಯಿತು. ನಾನಾ ಜಿಲ್ಲೆಗಳಿಂದ ಹಲವು ರೈತರು ಆನ್‌ಲೈನ್ ಮೂಲಕವೇ ಪ್ರಶ್ನೆ ಕೇಳಿ ಕೃಷಿ ತಜ್ಞರಿಂದ ಉತ್ತರವನ್ನು ಪಡೆದರು. ಅನಕ್ಷರಸ್ಥ ರೈತರಿಗೆ ವರ್ಚುವಲ್ ವೇದಿಕೆ ಕೈಗೆಟುಕದಿದ್ದರೂ, ಹೊಸದಾಗಿ ಕೃಷಿ ಕೈಗೊಳ್ಳುವವರಿಗೆ ಅನುಕೂಲವಾಗಿದೆ ಎಂಬ ಮಾತುಗಳು ಕೇಳಿ ಬಂದಿವೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:15.11.2020

## 54. 31ನೇ ಜಿಲ್ಲೆಗೆ ವಿಜಯ

ವಿಜಯನಗರ ಜಿಲ್ಲೆ ರಚನೆಗೆ ಬೆಂಗಳೂರಿನಲ್ಲಿ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಸಿಕ್ಕಿದ್ದು, ದಶಕಗಳ ಹೋರಾಟಕ್ಕೆ ಜಯ ಸಿಕ್ಕಂತಾಗಿದೆ. ವಿಶಾಲ ಬಳ್ಳಾರಿ ಜಿಲ್ಲೆ ವಿಭಜಿಸಿ ಪ್ರತ್ಯೇಕ ವಿಜಯನಗರ ಜಿಲ್ಲೆ ರಚಿಸಬೇಕು ಎಂದು 2007ರಿಂದ ಹೋರಾಟ ನಡೆಯುತ್ತಲೇ ಇತ್ತು. ಇದೀಗ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ತಾತ್ವಿಕ ಒಪ್ಪಿಗೆ ನೀಡುವ ಮೂಲಕ ರಾಜ್ಯದ 31ನೇ ಜಿಲ್ಲೆ ರಚನೆಗೆ ಹಸಿರು ನಿಶಾನೆ ತೋರಿದ್ದಾರೆ.

**ಹೋರಾಟದ ಹಿನ್ನೆಲೆ:** 2007ರಲ್ಲಿ ಬಳ್ಳಾರಿ ಜಿಲ್ಲೆ ವಿಭಜಿಸಿ ವಿಜಯನಗರ ಪ್ರತ್ಯೇಕ ಜಿಲ್ಲೆ ಮಾಡಬೇಕು ಎಂದು ವಿಜಯನಗರ ಜಿಲ್ಲಾ ಹೋರಾಟ ಸಮಿತಿ ಹೋರಾಟ ಆರಂಭಿಸಿತು. ಅದೇ ವರ್ಷ ಈ ಬೇಡಿಕೆ ಈಡೇರಿಕೆಗಾಗಿ ಈ ಭಾಗದ ಜನರೆಲ್ಲ ಒಗ್ಗಟ್ಟಾಗಿ ಸತತ ಮೂರು ತಿಂಗಳು ಹೋರಾಟ ನಡೆಸಿದರು. ಆದರೆ, ಆ ವೇಳೆ ರಾಜ್ಯದಲ್ಲಿ ಮೂರು ಪಕ್ಷಗಳು ಅಧಿಕಾರಕ್ಕೆ ಬಂದರೂ ಯಾವ ಸರ್ಕಾರವು ಸ್ಥಿರವಾಗಿ ಸರ್ಕಾರವನ್ನು ನಡೆಸಲಿಲ್ಲ. ಅದೇ ಅವಧಿಯಲ್ಲಿ ರಾಜ್ಯದಲ್ಲಿ ಎರಡು ಬಾರಿ ರಾಷ್ಟ್ರಪತಿ ಆಳ್ವಿಕೆಯು ನಡೆಯಿತು. ಪ್ರತ್ಯೇಕ ಜಿಲ್ಲೆಯ ಕೂಗು ಸರ್ಕಾರದ ಮಟ್ಟದಲ್ಲಿ ಜೋರಾಗಿ ಕೇಳಿಸಲೇ ಇಲ್ಲ. ಬಳಿಕ ಹೋರಾಟ ನಿಂತು, ಕೇವಲ ಮನವಿ ಪತ್ರಗಳಿಗೆ ಸೀಮಿತವಾಯಿತು.

**ಆನಂದ್ ಸಿಂಗ್ ರಾಜೀನಾಮೆ ಬಳಿಕ ಹೆಚ್ಚಾದ ಬೇಡಿಕೆ:** 2019ರಲ್ಲಿ ಈ ವಿಷಯಕ್ಕೆ ಹೆಚ್ಚಿನ ಮಹತ್ವ ಬಂತು. ಈ ವಿಷಯವನ್ನು ಮುಂದಿಟ್ಟುಕೊಂಡು ಆನಂದ್ ಸಿಂಗ್ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಬಳಿಕ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ ಅವರು, ವಿಜಯನಗರ ಜಿಲ್ಲೆ ಮಾಡುವುದೇ ನನ್ನ ಮುಖ್ಯ ಗುರಿ ಎಂದು ಅಬ್ಬರದ ಪ್ರಚಾರ ನಡೆಸಿದ್ದರು. ಮುಖ್ಯಮಂತ್ರಿಯವರು ಕೂಡ ಆನಂದ್ ಸಿಂಗ್ ಅವರ ಬೇಡಿಕೆಗೆ ಸ್ಪಂದಿಸಿ, ಜಿಲ್ಲೆ ರಚನೆಗೆ ಸಂಬಂಧಿಸಿದಂತೆ ಮಾಹಿತಿ ಕ್ರೋಢೀಕರಿಸಿ ವರದಿ ಸಲ್ಲಿಸುವಂತೆ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದರು. ಜಿಲ್ಲಾಡಳಿತ ಅದಕ್ಕೆ ಸಂಬಂಧಿಸಿದ ಮಾಹಿತಿ ಕ್ರೋಢೀಕರಿಸಿ ಜಿಲ್ಲೆ ರಚನೆ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಬಳ್ಳಾರಿ ಶಾಸಕ

ಜಿ.ಸೋಮಶೇಖರ್ ರೆಡ್ಡಿ ಬಳ್ಳಾರಿ ಜಿಲ್ಲೆ ವಿಭಜನೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರಿಂದ ವಿಷಯ ನೆನೆಗುದಿಗೆ ಬಿದ್ದಿತ್ತು. ಬಳಿಕ ಆನಂದ್ ಸಿಂಗ್ ಅರಣ್ಯ ಸಚಿವರಾದರು. ಬೇಡಿಕೆ ಇಡುತ್ತಲೇ ಇದ್ದರು.

ಆಧಾರ: ವಿಶ್ವವಾಣಿ, ದಿನಾಂಕ:19.11.2020

## 55. ಕರ್ನಾಟಕ–ಫಿನ್ಲೆಂಡ್ 2 ಮಹತ್ವದ ಒಪ್ಪಂದ

ಕರ್ನಾಟಕ ಹಾಗೂ ಫಿನ್ಲೆಂಡ್ ದತ್ತಾಂಶ ವಿಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ಕ್ಷೇತ್ರಗಳಲ್ಲಿ ಕೈಜೋಡಿಸಲಿವೆ. ನ್ಯಾಸ್ ಕಾಮ್ ಸಹಭಾಗಿತ್ವದಲ್ಲಿ ರಚಿಸಲಾಗಿರುವ 'ಸೆಂಟರ್ ಫಾರ್ ಎಕ್ಸಲೆನ್ಸ್ ಡೇಟಾಸೈನ್ಸ್' ಮತ್ತು ಬ್ಯುಸಿನೆಸ್ ಫಿನ್ಲೆಂಡ್' ನಡುವೆ ಈ ಒಪ್ಪಂದ ಜಾರಿಗೆ ಬರಲಿದೆ.

ನಾವೀನ್ಯತೆಗಾಗಿ ಹೆಸರಾಗಿರುವ ಫಿನ್ಲೆಂಡ್ ದೇಶ ಉನ್ನತ ಶಿಕ್ಷಣ, ತರಬೇತಿ, ಆಧುನಿಕ ತಂತ್ರಜ್ಞಾನಗಳ ಲಭ್ಯತೆ ಹಾಗೂ ಕೃತಕ ಬುದ್ಧಿಮತ್ತೆ (ಎಐ) ಬಳಕೆಯ ಸಾಧ್ಯತೆಗಳಲ್ಲಿ ಪ್ರಪಂಚದಲ್ಲೇ ಮುಂಚೂಣಿ ಸ್ಥಾನದಲ್ಲಿದೆ. ಈ ರಾಷ್ಟ್ರದೊಂದಿಗೆ ಸಹಭಾಗಿತ್ವವು ರಾಜ್ಯದಲ್ಲಿನ ಕೃತಕ ಬುದ್ಧಿಮತ್ತೆ ವಲಯದ ವಿಕಸನಕ್ಕೆ ಸಹಕಾರಿಯಾಗಲಿದೆ. ಎಐ ಕ್ಷೇತ್ರದ ಮಹತ್ವವನ್ನು ಅರಿತಿರುವ ಸರ್ಕಾರವು ಅದರ ಬೆಳವಣಿಗೆಯನ್ನು ಪ್ರೋತ್ಸಾಹಿಸಲು ಕ್ರಮಗಳನ್ನು ಕೈಗೊಂಡಿದೆ. ಈಗ ಏರ್ಪಡಲಿರುವ ಒಪ್ಪಂದವು ಕರ್ನಾಟಕ ಹಾಗೂ ಫಿನ್‌ಲ್ಯಾಂಡ್ ನಡುವಿನ ತಾಂತ್ರಿಕ ಪಾಲುದಾರಿಕೆಯನ್ನು ಇನ್ನಷ್ಟು ಸದೃಢವಾಗಿಸಲಿದೆ ಎಂದು ಐಟಿ/ಬಿಟಿ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ್ ನಾರಾಯಣ ಅಭಿಪ್ರಾಯಪಟ್ಟಿದ್ದಾರೆ.

ಫಿನ್ಲೆಂಡ್ ರಾಯಭಾರಿ ರಿಟ್ವಾ ಕೌಕು ರೋಂಡೆ, ಭಾರತದಂತೆಯೇ ಫಿನ್ಲೆಂಡ್ ಕೂಡ ನಾವೀನ್ಯತೆ ಹಾಗೂ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿನ ನೈಪುಣ್ಯಕ್ಕೆ ಹೆಸರಾಗಿದೆ. ಫಿನ್ಲೆಂಡ್ ಹಾಗೂ ಕರ್ನಾಟಕದ ನಡುವೆ 2017ರಲ್ಲಿ ಏರ್ಪಟ್ಟ ನಾವೀನ್ಯತಾ ಒಪ್ಪಂದದ ಫಲವಾಗಿ ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸತನದಿಂದ ಕೂಡಿದ ಅನೇಕ ಚಟುವಟಿಕೆಗಳನ್ನು ಬೆಂಬಲಿಸುವುದು ಸಾಧ್ಯವಾಗಿದೆ. ಈ ಒಪ್ಪಂದದಿಂದಾಗಿ ಕರ್ನಾಟಕ ಮತ್ತು ಫಿನ್ಲೆಂಡ್ ಮಧ್ಯೆ ಉತ್ತಮ ತಾಂತ್ರಿಕ ವಾತಾವರಣವಾಗಲಿದೆ ಎಂದು ಹೇಳಿದರು.

ಆರೋಗ್ಯ ಸೇವೆ ಮತ್ತು ಚಿಲ್ಲರೆ ವಹಿವಾಟು ಉದ್ದಿಮೆಗಳಲ್ಲಿ ಎ.ಐ.ವಹಿಸುತ್ತಿರುವ ಪಾತ್ರದ ಬಗ್ಗೆ ಚರ್ಚಿಸಿದ ತಜ್ಞರು ಕೋವಿಡ್–19 ಜಾಗತಿಕ ಸೋಂಕಿನ ಸಂದರ್ಭದಲ್ಲಿ ಎ.ಐ. ಮಹತ್ವ ಇನ್ನಷ್ಟು ಹೆಚ್ಚಾಗಿದೆ ಎಂದು ಅಭಿಪ್ರಾಯಪಟ್ಟರು. ಮನುಷ್ಯರ ಸಾಮರ್ಥ್ಯವನ್ನು ತಂತ್ರಜ್ಞಾನದ ಸಾಧ್ಯತೆಗಳಿಗೆ ಪೂರಕವಾಗಿ ಬಳಸಿಕೊಳ್ಳುವ 'ಸಂವರ್ಧಿತ ಬುದ್ಧಿಮತ್ತೆ'ಯ ಪರಿಕಲ್ಪನೆ ಮುಂದಿನ ದಿನಗಳಲ್ಲಿ ಇನ್ನಷ್ಟು ವ್ಯಾಪಕವಾಗಿ ಬೆಳೆಯಲಿದೆ ಎಂಬ ಅಭಿಪ್ರಾಯ ಈ ಸಂದರ್ಭದಲ್ಲಿ ವ್ಯಕ್ತವಾಯಿತು.

ಆಧಾರ: ಕನ್ನಡಪ್ರಭ, ದಿನಾಂಕ:20.11.2020

## 56. ಜೈವಿಕ ಆರ್ಥಿಕತೆ 5 ಸಾವಿರ ಕೋಟಿ ಡಾಲರ್ ಗುರಿ

ರಾಜ್ಯದ ಮೊಟ್ಟಮೊದಲ ಕರ್ನಾಟಕ ಜೈವಿಕ ಆರ್ಥಿಕತೆ ವರದಿ ಬಿಡುಗಡೆಗೊಂಡಿದ್ದು, ಪ್ರಸ್ತುತ ರಾಜ್ಯವು 2,260 ಕೋಟಿ ಡಾಲರ್ ಪಾಲು ಹೊಂದಿದೆ. ಮುಂದಿನ ಐದು ಸಾವಿರ ವರ್ಷದಲ್ಲಿ ಇದನ್ನು ದುಪ್ಪಟ್ಟು ಅಂದರೆ ಐದು ಸಾವಿರ ಕೋಟಿ ಡಾಲರ್‌ಗೆ ಹೆಚ್ಚಿಸುವ ಗುರಿಯನ್ನು ಸರ್ಕಾರ ಹೊಂದಿದೆ.

ಪ್ರಸ್ತುತ ವೃದ್ಧಿದರದ ಪ್ರಕಾರ 2025ರ ವೇಳೆಗೆ ರಾಜ್ಯದ ಜೈವಿಕ ಆರ್ಥಿಕತೆ 4,200 ಕೋಟಿ ಡಾಲರ್ ತಲುಪುವ ನಿರೀಕ್ಷೆ ಇದೆ. ಆದರೆ, ಇದನ್ನು ಐದು ಸಾವಿರ ಕೋಟಿ ಡಾಲರ್ ಗಡಿ ದಾಟಿಸುವ ಗುರಿ ಇದೆ. ಇದು ಒಟ್ಟಾರೆ ಇಡೀ ದೇಶದ ಜೈವಿಕ ಆರ್ಥಿಕತೆ ಗುರಿ ಹೊಂದಿದೆ.

ಸುಮಾರು 300ಕ್ಕೂ ಅಧಿಕ ಜೈವಿಕ ತಂತ್ರಜ್ಞಾನ ಕಂಪೆನಿಗಳು ರಾಜ್ಯಾದ್ಯಂತ ನೋಂದಣಿಯಾಗಿದ್ದು, ಕಳೆದೆರಡು ವರ್ಷದಲ್ಲಿ ಆ ಕಂಪೆನಿಗಳು ಭಾರತದ ಜೈವಿಕ ತಂತ್ರಜ್ಞಾನ ರಫ್ತಿನಲ್ಲಿ ಸರಾಸರಿ ಶೇ. 15 ರಿಂದ

17 ರಷ್ಟು ಪ್ರಗತಿ ಸಾಧಿಸಿವೆ. ಇದು ಭಾರತೀಯ ಬಿಟಿ ಕಂಪೆನಿಗಳ ತಂತ್ರಜ್ಞಾನಗಳ ರಫ್ತಿನ ಒಟ್ಟು ಪ್ರಮಾಣದ 3ನೇ ಒಂದು ಭಾಗದಷ್ಟು ಆಗುತ್ತದೆ. ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನ (ಜಿಎಸ್‌ಡಿಪಿ) ದಲ್ಲಿ ಜೈವಿಕ ತಂತ್ರಜ್ಞಾನದ ಪಾಲು ಶೇ. 10.3 ರಷ್ಟಿದೆ ಎಂದು ಸರ್ಕಾರ ಬಿಡುಗಡೆ ಮಾಡಿದ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ವರದಿ ಬಿಡುಗಡೆಗೊಳಿಸಿ ಮಾತನಾಡಿದ ಐಟಿ–ಬಿಟಿ ಸಚಿವರು ಆದ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ್, ಮುಂದಿನ ಐದು ವರ್ಷಗಳಲ್ಲಿ ಕರ್ನಾಟಕದ ಜೈವಿಕ ಆರ್ಥಿಕತೆ (ಬಯೋ ಎಕಾನಮಿ) ಕೊಡುಗೆಯನ್ನು ಐದು ಸಾವಿರ ಕೋಟಿ ಡಾಲರ್‌ಗಳಿಗೆ ಹೆಚ್ಚಿಸುವ ನಿಟ್ಟಿನಲ್ಲಿ ಲಸಿಕೆ, ಕೃಷಿ, ಪಶುಸಂಗೋಪನೆ, ಪೌಷ್ಟಿಕತೆ, ಲಸಿಕೆ, ಆರೋಗ್ಯಸೇವೆ, ಜೈವಿಕ ಇಂಧನ, ಸಾಗರ ಜೀವನೋಪಾಯ ಕ್ಷೇತ್ರಗಳಲ್ಲಿ ಆಗುವ ಜೈವಿಕ ತಂತ್ರಜ್ಞಾನದ ಬೆಳವಣಿಗೆಗಳು ಜನಸಾಮಾನ್ಯರ ಬದುಕನ್ನು ನೇರವಾಗಿ ಸುಧಾರಿಸಲಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜೈವಿಕ ತಂತ್ರಜ್ಞಾನದ ಸಾಮರ್ಥ್ಯವನ್ನು ಸರ್ಕಾರ ಮನಗಂಡಿದೆ. 20 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಯೋಜನೆಯೊಂದಕ್ಕೆ ಇದೀಗ ಚಾಲನೆ ಸಿಕ್ಕಿದೆ. ಪರಿಣಾಮ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಏಳು ಸಾವಿರ ರೂ. ಕೋಟಿ 80 ಲಕ್ಷ ಚದರಡಿ ವಿಸ್ತೀರ್ಣದಲ್ಲಿ ಜೈವಿಕ ಉದ್ಯಮ ಸಮುಚ್ಚಯದ (ಬಯೋ–ಇಂಡಸ್ಟ್ರಿ ಕ್ಲಸ್ಟರ್) ನಿರ್ಮಾಣ ಕಾರ್ಯ ಆರಂಭಗೊಂಡಿದೆ ಎಂದು ತಿಳಿಸಿದರು.

ಕರ್ನಾಟಕ ಬಯೋಟೆಕ್ನಾಲಜಿ ವಿಷನ್ ಗ್ರೂಪ್ ಅಧ್ಯಕ್ಷೆ ಕಿರಣ್ ಮಜುಂದಾರ್ ಷಾ ಮಾತನಾಡಿ, ಹೊಸ ತಲೆಮಾರಿನ ಲಸಿಕೆಗಳು ಹಾಗೂ ಆಂಟಿಬಯೋಟಿಕ್, ಪರಿಸರ ಸ್ನೇಹಿ ಮುಂದಿನ ತಲೆಮಾರಿನ ಬ್ಯಾಟರಿಗಳು, ಎನ್ ಜೈಮ್ ತಾಂತ್ರಿಕತೆಗಳು, ಜೈವಿಕ ಇಂಧನಗಳು ಮುಂಬರುವ ದಿನಗಳಲ್ಲಿ ಬೆರಗುಗೊಳಿಸಲಿವೆ ಎಂದು ಹೇಳಿದರು.

ಏಬಲ್ (ಅಸೋಸಿಯೇಷನ್ ಫಾರ್ ಬಯೋಟೆಕ್‌ಲೆಡ್ ಎಂಟರ್ ಪ್ರೈಸಸ್) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ನಾರಾಯಣನ್ ಸುರೇಶ್ ವರದಿಯಲ್ಲಿರುವ ಅಂಶಗಳ ಮೇಲೆ ಬೆಳಕು ಚೆಲ್ಲಿದರು ಕರ್ನಾಟಕ ನಾವೀನ್ಯತಾ ಮತ್ತು ತಂತ್ರಜ್ಞಾನ ಸಂಸ್ಥೆಯ (ಕಿಟ್ಸ್) ವ್ಯವಸ್ಥಾಪಕ ನಿರ್ದೇಶಕಿ ಮೀನಾ ನಾಗರಾಜ್ ಉಪಸ್ಥಿತರಿದ್ದರು.

ಆಧಾರ: ಉದಯವಾಣಿ, ದಿನಾಂಕ:21.11.2020

## 57. ಕೊರೋನಾ ಲಸಿಕೆಗೆ ಕೇಂದ್ರದಿಂದ ಒಪ್ಪಂದ

ಕೊರೋನಾಗೆ ಲಸಿಕೆ ಅಧಿಕೃತವಾಗಿ ಸಿದ್ಧವಾಗಿಲ್ಲ. ಲಸಿಕೆ ಸಿದ್ಧಪಡಿಸಿ ಕ್ಲಿನಿಕಲ್ ಟ್ರಯಲ್ ನಡೆಸಿರುವ ಕಂಪನಿಗಳ ಜೊತೆಗೆ ಕೇಂದ್ರ ಸರ್ಕಾರ ಒಡಂಬಡಿಕೆ ಮಾಡಿಕೊಂಡಿದೆ ಎಂದು ಆರೋಗ್ಯ, ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ ಮಾಹಿತಿ ನೀಡಿದರು.

ಕೊರೋನಾ ಲಸಿಕೆ ಸಿದ್ಧಪಡಿಸುತ್ತಿರುವ ಅನೇಕ ಕಂಪೆನಿಗಳ ಜೊತೆ ಕೇಂದ್ರ ನಿರಂತರ ಸಮಾಲೋಚನೆ ನಡೆಸುತ್ತಿದೆ. ಅಂತಿಮ ಕ್ಲಿನಿಕಲ್ ಟ್ರಯಲ್ ಬಳಿಕ ಬಿಡುಗಡೆ ಮಾಡುವ ಕಂಪೆನಿಯ ಲಸಿಕೆ ಪಡೆಯುವುದಾಗಿ ಕೇಂದ್ರ ಅಧಿಕೃತ ಘೋಷಣೆ ಮಾಡಲಿದೆ ಎಂದರು. ರಾಜ್ಯದಲ್ಲಿಯೂ ಲಸಿಕೆ ಸಂಗ್ರಹಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಲಸಿಕೆ ಲಭ್ಯವಾಗುತ್ತಿದ್ದಂತೆ ಎಲ್ಲ ಜಿಲ್ಲೆಗಳಿಗೂ ಏಕಕಾಲಕ್ಕೆ ಲಸಿಕೆ ವಿತರಿಸಲಾಗುವುದು ಎಂದರು. ಭಾರತದಲ್ಲಿ ಕೊರೋನಾ 2ನೇ ಅಲೆ ಬಂದೇ ಬರುತ್ತದೆ ಎನ್ನುವುದಕ್ಕಿಂತ ಜನರ ನಡವಳಿಕೆ ಮೇಲೆ ಆಧಾರಿತವಾಗಿದೆ. ಜನ ಸರ್ಕಾರದ ಮಾರ್ಗಸೂಚಿ ಅನ್ವಯ ನಡೆದುಕೊಂಡರೆ 2ನೇ ಅಲೆ ಬರುವುದಿಲ್ಲ ಎಂದರು.

**ಖಾಸಗಿ ಚಿಕಿತ್ಸೆ ಸ್ಥಗಿತ**

ಕೊರೋನಾ ಇಳಿಮುಖ ಆಗುತ್ತಿರುವ ಕಾರಣ ಸೋಂಕಿತರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಹಾಸಿಗೆ ಹಂಚಿಕೆ ಮಾಡಬೇಕು. ಶೇ.90 ಹಾಸಿಗೆಗಳು ಭರ್ತಿಯಾದಲ್ಲಿ ಮಾತ್ರ ಖಾಸಗಿ ಆಸ್ಪತ್ರೆಗಳಿಗೆ ಶಿಫಾರಸ್ಸು ಮಾಡಬೇಕು ಎಂದು ಆರೋಗ್ಯ ಇಲಾಖೆ ಅಧಿಕೃತ ಆದೇಶ ಹೊರಡಿಸಿದೆ. ಪರಿಣಾಮಕಾರಿ ಚಿಕಿತ್ಸೆ ಲಭ್ಯವಿಲ್ಲದಿದ್ದಲ್ಲಿ ಮಾತ್ರ ಖಾಸಗಿ ಆಸ್ಪತ್ರೆಗಳ ಹಾಸಿಗೆಗಳನ್ನು ಬಳಕೆ ಮಾಡಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

ಆಧಾರ: ವಿಜಯವಾಣಿ, ದಿನಾಂಕ:22.11.2020

## 58. ರಾಜ್ಯದಲ್ಲಿ ಸ್ಮಾರ್ಟ್ ಪ್ರೊಡಕ್ಷನ್ ಉತ್ಕೃಷ್ಟತಾ ಕೇಂದ್ರ ಸ್ಥಾಪನೆ

ಕೋವಿಡ್–19ರ ಅಘಾತದಿಂದ ಕೈಗಾರಿಕಾ ವಲಯ ಚೇತರಿಸಿಕೊಂಡಿದೆ. ರಾಜ್ಯದಲ್ಲಿ ಕೈಗಾರಿಕೆಗಳಿಗೆ ಇನ್ನಷ್ಟು ಪ್ರೊತ್ಸಾಹ ನೀಡಲು 'ಸೆಂಟರ್ ಆಫ್ ಎಕ್ಸಲೆನ್ಸ್ ಫಾರ್ ಸ್ಮಾರ್ಟ್ ಪ್ರೊಡಕ್ಷನ್ ಕೇಂದ್ರ'ವನ್ನು ಸ್ಥಾಪಿಸಲು ಉದ್ದೇಶಿಸಿದ್ದೇವೆ ಎಂದು ಬೃಹತ್ ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ತಿಳಿಸಿದ್ದಾರೆ.

ಬೆಂಗಳೂರು ಟೆಕ್ ಶೃಂಗದಲ್ಲಿ ರಾಜ್ಯ ಸರ್ಕಾರದ ಸಚಿವರುಗಳ ಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಈ ಕೇಂದ್ರವನ್ನು ಬಾಶ್, ಜನರಲ್ ಎಲೆಕ್ಟ್ರಿಕಲ್ಸ್, ಡಸಾಲ್ಟ್, ಸೀಮನ್ಸ್ ಕಂಪನಿಗಳ ಸಹಯೋಗದಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ. ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ಡಿಜಿಟಲ್ ಆರ್ಥಿಕತೆ ಪರಿಕಲ್ಪನೆಯು ಮುಂಚೂಣಿಗೆ ಬಂದಿದ್ದು, ಇದರಿಂದ ಉತ್ಪಾದಕ, ಮಾರಾಟಗಾರ ಹಾಗೂ ಗ್ರಾಹಕನಿಗೆ ಹೆಚ್ಚು ಅನುಕೂಲವಾಗುತ್ತಿದೆ. ಡಿಜಿಟಲ್ ಆರ್ಥಿಕತೆಯಲ್ಲಿ ತಂತ್ರಜ್ಞಾನವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತೆ ಆಗಬೇಕು ಎಂದು ಹೇಳಿದರು.

ರಾಷ್ಟ್ರೀಯ ಶಿಕ್ಷಣ ನೀತಿ–2020ನ್ನು ಮೊಟ್ಟಮೊದಲು ಜಾರಿಗೊಳಿಸುತ್ತಿರುವ ರಾಜ್ಯ ಕರ್ನಾಟಕ. ಈ ನೀತಿಯನ್ನು ಜಾರಿಗೆ ತಂದು ನಮ್ಮ ಶಿಕ್ಷಣ ವ್ಯವಸ್ಥೆಗೆ ಆಧುನಿಕ ಸ್ಪರ್ಶ ನೀಡಲಿದ್ದೇವೆ. ಈಗಾಗಲೇ ಶಿಕ್ಷಣ ಇಲಾಖೆಯ ಬಹುತೇಕ ಚಟುವಟಿಕೆಗಳು ಆನ್‌ಲೈನ್ ಮೂಲಕವೇ ನಡೆಯುತ್ತಿದೆ ಎಂದು ಪ್ರಾಥಮಿಕ ಶಿಕ್ಷಣ ಸಚಿವರು ತಿಳಿಸಿದರು.

ಆಧಾರ: ಕನ್ನಡಪ್ರಭ, ದಿನಾಂಕ:22.11.2020

## 59. ಕೃಷಿ ಉತ್ಪನ್ನ ಹೆಚ್ಚಿಸಲು ಬಿಟಿ ಅಗತ್ಯ

ಕೃಷಿಕ್ಷೇತ್ರದ ಉತ್ಪಾದಕತೆ ಹೆಚ್ಚಿಸಲು ಜೈವಿಕ ತಂತ್ರಜ್ಞಾನ (ಬಿಟಿ) ಅತ್ಯಗತ್ಯ. ರಾಜ್ಯ ಕೃಷಿಯಲ್ಲಿ ಜೈವಿಕ ತಂತ್ರಜ್ಞಾನವನ್ನು ಬಳಸಿಕೊಳ್ಳುವುದರಲ್ಲಿ ಮುಂದಿದ್ದು, ಬಿ.ಟಿ. ಕೃಷಿ ಉತ್ತೇಜಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಹೇಳಿದ್ದಾರೆ.

ಬೆಂಗಳೂರು ಟೆಕ್ ಶೃಂಗಸಭೆಯಲ್ಲಿ ಸಚಿವರುಗಳ ಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದ ಪಾಟೀಲ್, ಈಗಾಗಲೇ ಹತ್ತಿ ಸೇರಿದಂತೆ ಅನೇಕ ಕೃಷಿ ಉತ್ಪನ್ನಗಳ ಉತ್ಪಾದಕತೆ ಹೆಚ್ಚಿಸಲು ಜೈವಿಕ ತಂತ್ರಜ್ಞಾನವನ್ನು ರೈತರು ಇನ್ನಷ್ಟು ಬಳಸಬೇಕು. ಸಾಂಪ್ರದಾಯಿಕ ಕೃಷಿ ವಿಧಾನಗಳಿಂದ ಲಾಭಗಳಿಸಲು ಸಾಧ್ಯವಿಲ್ಲ. ಆಹಾರ ಉತ್ಪಾದನೆ ಹೆಚ್ಚಿಸಲು ಸಾಗುವಳಿ ಪ್ರದೇಶ ಹೆಚ್ಚಿಸುವ ಸವಾಲು ನಮ್ಮ ಮುಂದಿದೆ. ಸಾಗುವಳಿ ಪ್ರದೇಶ ಹೆಚ್ಚಿಸುವುದಕ್ಕಿಂತ ಇಳುವರಿ ಹೆಚ್ಚಿಸುವುದಕ್ಕೆ ಸರ್ಕಾರ ಆದ್ಯತೆ ನೀಡಲಿದೆ ಎಂದು ಬಿ.ಸಿ. ಪಾಟೀಲ್ ಹೇಳಿದರು.

ಯುಎಸ್‌ಎ, ಚೀನಾ ಮತ್ತು ಕೆನಡಾದಲ್ಲಿ ಮೆಕ್ಕೆಜೋಳ, ಸೋಯಾಬೀನ್, ಸಾಸಿವೆ ಮುಂತಾದ ಬೆಳೆಗಳನ್ನು ಸ್ಥಳೀಯವಾಗಿ ಮಾರ್ಪಡಿಸಲಾಗಿದೆ. ಆದರೆ ಭಾರತದಲ್ಲಿನ ಇಂತಹ ಪ್ರಯತ್ನ ಇನ್ನು

ನಡೆದಿಲ್ಲ. ದೇಶದ ಆಹಾರ ಭದ್ರತೆ ಇಂತಹ ತಳಿ ಮಾರ್ಪಡು ಯೋಜನೆಗಳನ್ನು ಕೈಗೊಳ್ಳಬೇಕು ಎಂದರು.

ಆಧಾರ: ಕನ್ನಡಪ್ರಭ, ದಿನಾಂಕ:22.11.2020

## 60. ಕಸ ಎತ್ತೋಕೆ ಕಾಸು ಫಿಕ್ಸ್ ಮಾಡಿದ ಬಿಬಿಎಂಪಿ

ನಗರದಲ್ಲಿ ಈಗಾಗಲೇ ವಿದ್ಯುತ್ ದರ ಏರಿಕೆಯಿಂದ ಬಳಲುತ್ತಿರುವ ಸಾರ್ವಜನಿಕರು ಸೇರಿ ಹೋಟೆಲ್, ಕಲ್ಯಾಣ ಮಂಟಪ, ಆಸ್ಪತ್ರೆ, ಶಾಪಿಂಗ್ ಮಾಲ್‌ಗಳಿಗೆ ಹೊಸ ವರ್ಷದಿಂದ ಕಸ ಸಂಗ್ರಹಕ್ಕಾಗಿ ಶುಲ್ಕ ವಿಧಿಸಲು ಬಿಬಿಎಂಪಿ ತೀರ್ಮಾನಿಸಿದೆ.

ವಿದ್ಯುತ್ ಶುಲ್ಕ ಮತ್ತು ನೀರಿನ ಶುಲ್ಕದ ಮಾದರಿಯಲ್ಲಿ ಪ್ರತಿ ತಿಂಗಳು ಸಾರ್ವಜನಿಕರಿಂದ ತ್ಯಾಜ್ಯ ಸಂಗ್ರಹಣೆ ಶುಲ್ಕ ವಿಧಿಸಲು ನಿರ್ಧರಿಸಿದೆ. ಆ ಮೂಲಕ ಪಾಲಿಕೆಯ ಆದಾಯವನ್ನು ಹೆಚ್ಚಿಸಿಕೊಳ್ಳುವುದು ಬಿಬಿಎಂಪಿಯ ಲೆಕ್ಕಾಚಾರ. ಕೆಲ ಸಗಟು ತ್ಯಾಜ್ಯ ಉತ್ಪಾದಕರು ಪೌರಕಾರ್ಮಿಕರಿಗೆ, ಕೆಲ ತ್ಯಾಜ್ಯ ವಿಲೇವಾರಿ ಗುತ್ತಿಗೆದಾರರಿಗೆ ತಿಂಗಳಿಗಿಷ್ಟು ಎಂಬ ಆಧಾರದಲ್ಲಿ ಹಣ ನೀಡಿ ತ್ಯಾಜ್ಯವನ್ನು ಅನಧಿಕೃತವಾಗಿ ವಿಲೇವಾರಿ ಮಾಡಿಸುತ್ತಿದ್ದಾರೆ. ಇದನ್ನೆಲ್ಲ ತಪ್ಪಿಸುವ ಮೂಲಕ ಬಿಬಿಎಂಪಿಯೇ ಅಧಿಕೃತವಾಗಿ ಇಂತಹ ಸಗಟು ಮಾರಾಟಗಾರರಿಗೆ ಮತ್ತು ಸಾರ್ವಜನಿಕರಿಗೆ ತ್ಯಾಜ್ಯ ವಿಲೇವಾರಿ ವ್ಯವಸ್ಥೆ ಒದಗಿಸಲು ತೀರ್ಮಾನಿಸಲಾಗಿದೆ.

ಪ್ರತಿ ತಿಂಗಳು ಕನಿಷ್ಠ 200 ರೂ. ನಿಂದ 14 ಸಾವಿರದವರೆಗೆ ಶುಲ್ಕ ವಸೂಲಿ ಮಾಡಲು ಬಿಬಿಎಂಪಿ ಚಿಂತನೆ ನಡೆಸಿದೆ. ತೆರಿಗೆ ಸಂಗ್ರಹದಲ್ಲಿ ಇಳಿಕೆ ಆದಾಯಕ್ಕಿಂತ ಅಧಿಕ ವೆಚ್ಚ, ಗುತ್ತಿಗೆದಾರರಿಗೆ ಕೋಟ್ಯಂತರ ಹಣ ಬಾಕಿ ಮೊತ್ತ ಉಳಿಸಿಕೊಂಡಿರುವ ಪಾಲಿಕೆ ಈಗ ಹೊಸ ಸಂಪನ್ಮೂಲ ಕಂಡುಕೊಳ್ಳಲು ತ್ಯಾಜ್ಯ ಸಂಗ್ರಹ ಶುಲ್ಕ ವಿಧಿಸಲು ಮುಂದಾಗಿದೆ. ಇದರ ಜೊತೆಗೆ ಬಿಬಿಎಂಪಿ ಕಸ ನಿರ್ವಹಣೆ ಉಪನಿಯಮ 2020ರ ಅನ್ವಯ ಶುಲ್ಕ ವಸೂಲು ಮಾಡಲು ಮುಂದಾಗಿದ್ದು, ಇದಕ್ಕೆ ಇತ್ತೀಚೆಗೆ ಸರ್ಕಾರ ಅನುಮೋದನೆ ನೀಡಿದೆ.

ಈ ನೀತಿಯಂತೆ ಪ್ರತಿ ಮನೆಗೆ ಬಿಬಿಎಂಪಿ ಮಾಸಿಕವಾಗಿ ರೂ. 200 ಶುಲ್ಕ ವಿಧಿಸಬಹುದು. ಜೊತೆಗೆ ವಾಣಿಜ್ಯ ತ್ಯಾಜ್ಯ ಉತ್ಪಾದಕರಾದ ಹೋಟೆಲ್, ಕಲ್ಯಾಣ ಮಂಟಪ, ಆಸ್ಪತ್ರೆ, ಶಾಪಿಂಗ್ ಮಾಲ್ ಸೇರಿದಂತೆ ಮೊದಲಾದ ಕಡೆ ಪ್ರತಿ ದಿನ ಉತ್ಪಾದನೆ ಆಗುವ ತ್ಯಾಜ್ಯದ ಆಧಾರದ ಮೇಲೆ ಬೆಲೆ ನಿಗದಿ ಪಡಿಸಲಾಗಿದೆ. ಐದರಿಂದ 100 ಕೆ.ಜಿ ವರೆಗೆ 500 ರೂ. ನಿಂದ ರೂ.14 ಸಾವಿರ ಮಾಸಿಕ ಶುಲ್ಕ ನಿಗದಿ ಮಾಡಲು ಸಾಧ್ಯವಿದೆ. ಡಿಸೆಂಬರ್ ಅಥವಾ ಹೊಸ ವರ್ಷದ ಆರಂಭದ ವೇಳೆಗೆ ಜಾರಿಗೆ ತರಲು ಬಿಬಿಎಂಪಿ ಚಿಂತನೆ ನಡೆಸಿದೆ.

**ವಿದ್ಯುತ್ ಬಿಲ್ ಅಥವಾ ನೀರಿನ ಬಿಲ್ ಜೊತೆ ಸಂಗ್ರಹ :** ಮಾಸಿಕ ಶುಲ್ಕವನ್ನು ಹೇಗೆ ಸಂಗ್ರಹಿಸಬೇಕು ಎಂಬುದರ ಬಗ್ಗೆ ಚರ್ಚೆ ನಡೆಸಲಾಗಿದ್ದು, ಆಸ್ತಿ, ತೆರಿಗೆಯೊಂದಿಗೆ ಸಂಗ್ರಹಿಸಬೇಕಾ ಅಥವಾ ವಿದ್ಯುತ್ ಮತ್ತು ನೀರಿನ ಬಿಲ್‌ನೊಂದಿಗೆ ತಿಂಗಳ ಶುಲ್ಕ ಸಂಗ್ರಹಿಸಬೇಕಾ ಎಂಬುದರೊಂದಿಗೆ ಬಗ್ಗೆ ಚರ್ಚೆ ನಡೆಸಲಾಗುತ್ತದೆ. ಇನ್ನೂ ಯಾವುದೇ ಅಂತಿಮ ತೀರ್ಮಾನಕ್ಕೆ ಬಂದಿಲ್ಲ. ಸಾಧಕ ಬಾಧಕಗಳನ್ನು ನೋಡಿಕೊಂಡು ಇದರ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ ಎಂದು ಬಿಬಿಎಂಪಿ ವಿಭಾಗದ ಘನತ್ಯಾಜ್ಯ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ಆಧಾರ: ವಿಶ್ವವಾಣಿ, ದಿನಾಂಕ:25.11.2020

## 61. 20 ಕ್ಕೂ ಹೆಚ್ಚು ನಿಗಮ ಮಂಡಳಿಗಳಿಗೆ ನೇಮಕ

ಸಚಿವ ಸಂಪುಟ ವಿಸ್ತರಣೆಯೋ, ಪುನಾರಚನೆಯೋ ಎಂಬ ಚರ್ಚೆ ನಡೆಯುತ್ತಿರುವ ಬೆನ್ನಲ್ಲೇ 20ಕ್ಕೂ ಹೆಚ್ಚು ನಿಗಮ, ಮಂಡಳಿಗಳು, ಪ್ರಾಧಿಕಾರಗಳು, ಸಮಿತಿಗಳಿಗೆ ಅಧ್ಯಕ್ಷರು, ಅಧಿಕಾರೇತರ ನಿರ್ದೇಶಕರನ್ನು ನೇಮಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಮುಖ್ಯಮಂತ್ರಿಯವರು ಅವರ ಬೀಗರಾಗಿರುವ ಎಸ್.ಐ. ಚಿಕ್ಕನಗೌಡ್ರು ಅವರನ್ನು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮಕ್ಕೆ ಹಾಗೂ ಆಪ್ತರಾದ ಎಂ.ರುದ್ರೇಶ್ ಅವರನ್ನು ಕೆಆರ್‌ಐಡಿಎಲ್ (ಕರ್ನಾಟಕ ಗ್ರಾಮೀಣ ಮೂಲಸೌಕರ್ಯಾಭಿವೃದ್ಧಿ ನಿಯಮಿತ) ಅಧ್ಯಕ್ಷರಾಗಿ ನೇಮಿಸಲಾಗಿದೆ. ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿಯಾಗಿರುವ ಯಲಹಂಕ ಶಾಸಕ ಎಸ್.ಆರ್.ವಿಶ್ವನಾಥ್ ಅವರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪಟ್ಟ ನೀಡಲಾಗಿದೆ.

ಕುಂದಗೋಲ ಕ್ಷೇತ್ರದ ಮಾಜಿ ಶಾಸಕರಾಗಿರುವ ಚಿಕ್ಕನಗೌಡ್ರು, ಕಳೆದ ಚುನಾವಣೆಯಲ್ಲಿ ಸೋಲು ಕಂಡಿದ್ದರು. ಈ ಹಿಂದೆ ರಾಮನಗರ ಜಿಲ್ಲಾ ಘಟಕ ಅಧ್ಯಕ್ಷರಾಗಿದ್ದ ರುದ್ರೇಶ್, ಹಿಂದೆ ರಾಮನಗರ ಕ್ಷೇತ್ರದಿಂದ ವಿಧಾನ ಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಪರಾಭವಗೊಂಡಿದ್ದರು. ಬಿ.ವೈ. ವಿಜಯೇಂದ್ರ ಕವಿಕಾ ಅಧ್ಯಕ್ಷರಾಗಿ ನೇಮಿಸಲಾಗಿದೆ.

ಆಧಾರ: ಪ್ರಜಾವಾಣಿ, ದಿನಾಂಕ:25.11.2020

## 62. ಸರ್ಕಾರಿ ಶಾಲಾ ದತ್ತು ಪರಿಕಲ್ಪನೆ ದೇಶಕ್ಕೆ ಪ್ರೇರಣೆ

ಸರ್ಕಾರಿ ಶಾಲೆಗಳನ್ನು ಜನಪ್ರತಿನಿಧಿಗಳು ಸೇರಿ ಸಮಾಜದ ವಿವಿಧ ಸಂಘ–ಸಂಸ್ಥೆಗಳು ದತ್ತು ತೆಗೆದುಕೊಂಡು ಅಭಿವೃದ್ಧಿಪಡಿಸುವ ಪರಿಕಲ್ಪನೆ ದೇಶದಲ್ಲೇ ಮೊದಲನೆಯದಾಗಿದ್ದು, ಇದು ಉಳಿದವರಿಗೂ ಪ್ರೇರಣೆಯಾಗಲಿದೆ ಎಂದು ಮುಖ್ಯಮಂತ್ರಿಯವರು ಹೇಳಿದರು.

ವಿಧಾನ ಸೌಧದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಸಮಗ್ರ ಶಿಕ್ಷಣ ಕರ್ನಾಟಕ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಸರ್ಕಾರಿ ಶಾಲೆಗಳ ದತ್ತು ಸ್ವೀಕಾರ ಸಮಾರಂಭದಲ್ಲಿ ದತ್ತು ಸ್ವೀಕರಿಸಿದ ಸಂಸ್ಥೆಗಳಿಗೆ ಶಾಲಾ ದತ್ತು ಪತ್ರಗಳನ್ನು ವಿತರಿಸಿ, ಶಿಕ್ಷಣ ಸುಧಾರಣಾ ಶಿಫಾರಸ್ಸುಗಳ ಪ್ರಸಕ್ತ ಬಿಡುಗಡೆ ಮಾಡಿ ಮಾತನಾಡಿದರು.

ಶಾಲೆಗಳನ್ನು ಅಭಿವೃದ್ಧಿ ಪಡಿಸುವುದು ಮಾತ್ರವಲ್ಲದೇ, ಆಗಿಂದಾಗ್ಯೆ ಶಾಲೆಗಳಿಗೆ ಭೇಟಿ ನೀಡಿ, ಮಕ್ಕಳೊಂದಿಗೂ ಕೆಲ ಹೊತ್ತು ಕಳೆಯಬೇಕು. ಮಕ್ಕಳ ಪಾಲಕ, ಪೋಷಕರ ಸಭೆ ಕರೆದು, ಶಿಕ್ಷಣದ ಮಹತ್ವವನ್ನು ತಿಳಿಹೇಳಬೇಕು ಎಂದು ಸಲಹೆ ನೀಡಿದರು.

ಸರ್ಕಾರದೊಂದಿಗೆ ಸಮುದಾಯವು ಕೈಜೋಡಿಸಿ ಶಾಲೆಗಳ ಅಭಿವೃದ್ಧಿಗೆ ಕೈಜೋಡಿಸುತ್ತಿರುವುದು ವಿಶಿಷ್ಟ ಕಲ್ಪನೆ. ಇದರಿಂದ ಸರ್ಕಾರಿ ಶಾಲೆಗಳ ಸರ್ವತೋಮುಖ ಅಭಿವೃದ್ಧಿಗೆ ನಾಂದಿಯಾಗಲಿದೆ. 2020–21ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ರಾಜ್ಯದ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರು ತಮ್ಮ ಅವಧಿಯಲ್ಲಿ ಕನಿಷ್ಠ 3 ಶಾಲೆಗಳನ್ನು ದತ್ತು ತೆಗೆದುಕೊಂಡು ತಮ್ಮ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯ ಹೆಚ್ಚು ಸರ್ಕಾರಿ ಹಾಗೂ ಖಾಸಗಿ ವಿಶ್ವವಿದ್ಯಾನಿಲಯಗಳು, ಶಿಕ್ಷಣ ಸಂಸ್ಥೆಗಳು, ಮಾಧ್ಯಮ ಸಂಸ್ಥೆಗಳು ದತ್ತು ಕಾರ್ಯಕ್ರಮದಲ್ಲಿ ಭಾಗಿಯಾಗಿರುವುದು ಪ್ರಶಂಸನೀಯ ಎಂದರು.

**ಸರ್ಕಾರಿ ಶಾಲೆಗಳ ಅಭಿವೃದ್ಧಿ:** ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಮಾತನಾಡಿ ಕೂಲಿ ಕೆಲಸ ಮಾಡುವವರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸಿ ತಮ್ಮ ಆದಾಯದ ಶೇ.20ರಷ್ಟನ್ನು ಶುಲ್ಕವಾಗಿ ತುಂಬುತ್ತಿದ್ದಾರೆ. ಅವರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸುವುದರಿಂದ ಶೇ.20ರಷ್ಟು ಹಣವನ್ನು ತಮ್ಮ ಕುಟುಂಬದ ಇತರೆ ಸಂಗತಿಗಳಿಗೆ ಬಳಸಿಕೊಳ್ಳಬಹುದು. ಆ ನಿಟ್ಟಿನಲ್ಲಿ ನಾವು ಖಾಸಗಿ ಶಾಲೆಗಳಿಗೆ ಸಮಾನವಾಗಿ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಲು ಸಮುದಾಯ ಪಾಲ್ಗೊಳ್ಳುತ್ತಿರುವುದು ವೈಶಿಷ್ಟ ಪೂರ್ಣವಾಗಿದೆ ಎಂದರು.

ಸರ್ಕಾರದ ಶೈಕ್ಷಣಿಕ ಸಲಹೆಗಾರ ಪ್ರೊ.ಎಂ.ಆರ್.ದೊರೆಸ್ವಾಮಿ ಮಾತನಾಡಿ, ಶಿಕ್ಷಣ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆ ತರಬೇಕಾದರೂ ಪ್ರಾಥಮಿಕ ಶಿಕ್ಷಣದಿಂದಲೇ ಆಗಬೇಕು. 45 ಸಾವಿರ ಸರ್ಕಾರಿ ಶಾಲೆಯಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಎಷ್ಟೇ ಬೆಳೆದಿದ್ದರೂ, ರೈತರು, ಬಡವರ ಕುಟುಂಬದ ಶೇ.85ರಷ್ಟು

ಮಕ್ಕಳು ಸರ್ಕಾರಿ ಶಾಲೆಯಲ್ಲೇ ಓದುತ್ತಿದ್ದಾರೆ. ಜನಪ್ರತಿನಿಧಿಗಳಲ್ಲದೇ ಸಮುದಾಯವು ಪೂರ್ಣಪ್ರಮಾಣದಲ್ಲಿ ಭಾಗಿಯಾದರೆ, ಸರ್ಕಾರಿ ಶಾಲೆಗಳು ಪೂರ್ಣ ಅಭಿವೃದ್ಧಿಯಾಗಲಿದೆ ಎಂದರು. ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ, ಸಮಾಜ ಕಲ್ಯಾಣ ಸಚಿವ ಬಿ.ಶ್ರೀರಾಮುಲು, ಶಾಸಕರಾದ ರಿಜ್ವಾನ್ ಅರ್ಹದ್, ಕೆ.ಟಿ. ಶ್ರೀಕಂಠೇಗೌಡ, ಹನುಮಂತ್ ಆರ್.ನಿರಾಣಿ, ಸಮಗ್ರ ಶಿಕ್ಷಣ ಕರ್ನಾಟಕ ರಾಜ್ಯ ಯೋಜನಾಧಿಕಾರಿ ದೀಪಾ ಚೋಳನ್, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಆರ್.ಉಮಾಶಂಕರ್, ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತ ವಿ.ಅನ್ಬುಕುಮಾರ್, ಮಧ್ಯಾಹ್ನ ಉಪಹಾರ ಯೋಜನೆ ಸಹಾಯಕ ನಿರ್ದೇಶಕಿ ಲೀಲಾವತಿ ಇದ್ದರು.

ಆಧಾರ: ಉದಯವಾಣಿ, ದಿನಾಂಕ:25.11.2020

## 63. ಪೀಣ್ಯ ಕೈಗಾರಿಕಾ ಪ್ರದೇಶ ಅಭಿವೃದ್ಧಿ

ರಾಜಧಾನಿಯ ಪೀಣ್ಯ ಕೈಗಾರಿಕೆ ಪ್ರದೇಶದಲ್ಲಿ ಅಗತ್ಯ ಮೂಲಸೌಕರ್ಯ ಒದಗಿಸಲು ಸರ್ಕಾರ ರೂ.50 ಕೋಟಿ ಅನುದಾನ ಬಿಡುಗಡೆ ಮಾಡಿದೆ ಎಂದು ಕೈಗಾರಿಕೆ ಸಚಿವ ಜಗದೀಶ್ ಶೇಟ್ಟರ್ ತಿಳಿಸಿದರು.

ನಗರದ ಎಫ್‌ಕೆಸಿಸಿಐ ಸಭಾಂಗಣದಲ್ಲಿ ನಡೆದ 'ಬೆಂಗಳೂರು ಕಟ್ಟೋಣ ಬನ್ನಿ ವಿಕ ಅಭಿಯಾನ'ದ ಮೊದಲ ಸಂವಾದ 'ಕೈಗಾರಿಕೆ ವಲಯದ ಪುನಶ್ಚೇತನ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಏಷ್ಯಾದಲ್ಲೇ ದೊಡ್ಡ ಕೈಗಾರಿಕೆ ಪ್ರದೇಶ ಪೀಣ್ಯದಲ್ಲಿ ನಾನಾ ಮೂಲಸೌಕರ್ಯ ಒದಗಿಸಲು ಸಿಎಂ ಹಣ ಬಿಡುಗಡೆಗೆ ಒಪ್ಪಿದ್ದಾರೆ. ಗ್ರೇಟರ್ ಪೀಣ್ಯ ಪ್ರದೇಶವನ್ನು ಅಭಿವೃದ್ಧಿಪಡಿಸಲು ಕಾಳಜಿ ವಹಿಸಲಾಗುವುದು. ಐಟಿ ಸಹಿತ ನಾನಾ ವಲಯಗಳಲ್ಲಿ ಮುಂಚೂಣಿಯಲ್ಲಿರುವ ಬೆಂಗಳೂರು ಮೂಲಕ ಕೋವಿಡ್ ನಂತರದಲ್ಲಿ ಕರ್ನಾಟಕದ ಕೈಗಾರಿಕೆ ಕ್ಷೇತ್ರವನ್ನು ಮೇಲ್ಮಟ್ಟಕ್ಕೆ ಏರಿಸಲಾಗುವುದು," ಎಂದರು. 'ಸಚಿವನಾದ ಬಳಿಕ 28 ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಸಮಸ್ಯೆಗಳನ್ನು ಅರಿತಿರುವೆ. ಇದರಿಂದ ಆಯಾ ಕೈಗಾರಿಕೆ ವಸಾಹತು ಪ್ರದೇಶಗಳ ಸ್ಥಿತಿಗತಿ ಹಾಗೂ ಕೈಗಾರಿಕೋದ್ಯಮಿಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಅಲ್ಲಿಯೇ ಪರಿಹಾರ ಒದಗಿಸಲು ಸಾಧ್ಯವಾಗಿದೆ. ಹೊಸ ಕೈಗಾರಿಕೆ ನೀತಿ, ಭೂ ಮಂಜೂರಾತಿಗೆ ಕಾಯಿದೆ ತಿದ್ದುಪಡಿ, ಹೊಸ ಕೈಗಾರಿಕೆ ಸ್ಥಾಪನೆಗೆ ಒಪ್ಪಿಗೆ ನೀಡಲು ಏಕಗವಾಕ್ಷಿ ಪದ್ಧತಿ, ಆಡಳಿತ ವಿಚಾರಗಳಲ್ಲಿ ಪಾರದರ್ಶಕತೆ, ಅಧಿಕಾರಿಶಾಹಿ ವರ್ತನೆಯಲ್ಲಿ ಬದಲಾವಣೆ ತರಲು ಕಾಳಜಿ ವಹಿಸಲಾಗಿದೆ." ಎಂದರು.

**ಬೇಲೆಕೇರಿ ಬಂದರು ಮಂಡಳಿ ಸ್ಥಾಪನೆ:** ರಾಜ್ಯದಲ್ಲಿ ಉತ್ಪಾದನೆಯಾಗುವ ಸಾಮಗ್ರಿಗಳನ್ನು ವಿದೇಶಕ್ಕೆ ರಫ್ತು ಮಾಡಲು ಮಂಗಳೂರು ಬಂದರನ್ನು ಮಾತ್ರ ಬಳಸಿಕೊಳ್ಳಲಾಗಿದೆ. ಬೇಲೆಕೇರಿ ಬಂದರನ್ನು ಅಭಿವೃದ್ಧಿಗೊಳಿಸಲು ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಇದನ್ನಾಧರಿಸಿ ರಾಜ್ಯ ಸರ್ಕಾರ ಬೇಲೆಕೇರಿ ಬಂದರು ಮಂಡಳಿ ಸ್ಥಾಪಿಸಲಿದೆ. ಇದಕ್ಕಾಗಿ ಡಿಪಿಆರ್ ಸಿದ್ಧಗೊಳ್ಳುತ್ತಿದ್ದು, ಶೀಘ್ರವೇ ಅಂತಿಮ ರೂಪ ಸಿಗಲಿದೆ. ಇದರಿಂದ ಉತ್ತರ ಕರ್ನಾಟಕದಲ್ಲಿ ತಯಾರಾಗುವ ಉತ್ಪನ್ನಗಳನ್ನು ನೇರವಾಗಿ ಈ ಬಂದರು ಮೂಲಕ ರಫ್ತು ಮಾಡಬಹುದು ಎಂದು ವಿಶ್ವಾಸ ವ್ಯಕ್ತಪಡಿಸಿದರು.

**ತೆರಿಗೆ ತಾರತಮ್ಯ ನಿವಾರಿಸಲು ಮನವಿ**

"ಬಿಬಿಎಂಪಿ, ನಗರಸಭೆ, ಪುರಸಭೆ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಕೈಗಾರಿಕಾಗಳಿಗೆ ವಿಧಿಸುತ್ತಿರುವ ತೆರಿಗೆಯಲ್ಲಿ ಸಾಕಷ್ಟು ವ್ಯತ್ಯಾಸವಿದ್ದು, ಈ ತಾರತಮ್ಯವನ್ನು ಸರಿಪಡಿಸಬೇಕು." ಎಂದು ಬೊಮ್ಮಸಂದ್ರ ಕೈಗಾರಿಕಾ ಸಂಘದ ಅಧ್ಯಕ್ಷ ಎ.ಪ್ರಸಾದ್ ಮನವಿ ಮಾಡಿಕೊಂಡರು.

"ಸ್ಥಳೀಯ ಸಂಸ್ಥೆಗಳು ಕೈಗಾರಿಕೆಗಳಿಂದ ಏಕರೂಪದ ತೆರಿಗೆ ಸಂಗ್ರಹ ಮಾಡುತ್ತಿಲ್ಲ. ಒಂದೊಂದು ಸಂಸ್ಥೆಯು ಬೇರೆ ಬೇರೆ ತೆರಿಗೆ ವಿಧಿಸುತ್ತಿದ್ದು, ಇದನ್ನು ಸರಿಪಡಿಸಬೇಕು. ಅತ್ತಿಬೆಲೆ, ಜಿಗಣಿ, ಬೊಮ್ಮಸಂದ್ರ, ಪೀಣ್ಯ ಮತ್ತು ವೀರಸಂದ್ರದಲ್ಲಿ ಕೈಗಾರಿಕಾ ಟೌನ್‌ಶಿಪ್‌ಗಳನ್ನು ನಿರ್ಮಾಣ ಮಾಡಬೇಕು," ಎಂದು ಒತ್ತಾಯಿಸಿದರು.

"ರಾಜ್ಯ ಸರ್ಕಾರಕ್ಕೆ ಕೈಗಾರಿಕೆಗಳು ಪಾವತಿಸುತ್ತಿರುವ ಆದಾಯದಲ್ಲಿ ಶೇ.60ರಷ್ಟು ಪಾಲು ಬೆಂಗಳೂರಿನದ್ದೇ ಆಗಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಮಹಾನಗರವನ್ನು ಕಟ್ಟಿದರೆ, ರಾಜ್ಯ ಮತ್ತು ದೇಶದ ಅಭಿವೃದ್ಧಿಯಾದಂತೆ," ಎಂದರು.

**ಇಂಡಸ್ಟ್ರಿಯಲ್ ಫೆಸಿಲಿಟೇಷನ್ ಕಾಯಿದೆ ಜಾರಿ**

ರಾಜ್ಯದಲ್ಲಿ ಹೊಸದಾಗಿ ಕೈಗಾರಿಕೆ ಘಟಕಗಳನ್ನು ಸ್ಥಾಪಿಸಲು ತ್ವರಿತವಾಗಿ ಸರ್ಕಾರದ ಒಪ್ಪಿಗೆ ಪಡೆಯಲು 'ಇಂಡಸ್ಟ್ರಿಯಲ್ ಫೆಸಿಲಿಟೇಷನ್ ಆ್ಯಕ್ಟ್' (ಐಎಫ್ಎ) ಹೊಸದಾಗಿ ಜಾರಿಗೆ ತರಲಾಗಿದೆ. ಈ ಕಾಯಿದೆಗೆ ಈಗಾಗಲೇ ವಿಧಾನ ಸಭೆ ಹಾಗೂ ವಿಧಾನ ಪರಿಷತ್‌ನಲ್ಲಿ ಸರ್ವಾನುಮತದ ಅನುಮೋದನೆ ದೊರೆತಿದೆ. ಉದ್ದಿಮೆದಾರರೊಬ್ಬರು ಸರ್ಕಾರದ ಅನುಮತಿ ಪಡೆದ ಬಳಿಕ ಒಪ್ಪಿಗೆ ಸಿಗಲಿದೆ. ಸಮಯ ಉಳಿತಾಯದ ಜೊತೆಗೆ ಕಾಲಮಿತಿಯಲ್ಲಿ ಘಟಕ ಆರಂಭಿಸಬಹುದು. ಉದ್ದಿಮೆಗೆ ಬೇಕಾದ ಸವಲತ್ತು, ಉತ್ತೇಜನ, ಮೂಲ ಸೌಕರ್ಯವನ್ನು ತ್ವರಿತವಾಗಿ ಒದಗಿಸಲಾಗುವುದು. ಈ ಉದ್ದಿಮೆ ಸ್ನೇಹಿ ಉಪಕ್ರಮವನ್ನು ಎಲ್ಲೆಡೆ ಜನಪ್ರಿಯಗೊಳಿಸಲು ಅಧಿಕಾರಿ ವರ್ಗದಲ್ಲಿ ಜನಜಾಗೃತಿ ಕೈಗೊಳ್ಳಲು ಸ್ವತಃ ಕೈಗಾರಿಕೆ ಸಚಿವರೇ ನೇತೃತ್ವ ವಹಿಸಿದ್ದಾರೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:27.11.2020

## 64. ಭಾಗ್ಯಲಕ್ಷ್ಮಿ ಯೋಜನೆಗೆ ಸರ್ಟಿಫಿಕೇಟ್ ಕಡ್ಡಾಯವಲ್ಲ

ಹೆಣ್ಣು ಮಕ್ಕಳ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ ಲಿಂಗಾನುಪಾತ ಹೆಚ್ಚಿಸುವಲ್ಲಿ ಸರ್ಕಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 2006ರಿಂದ ಜಾರಿಗೊಳಿಸಿರುವ ಭಾಗ್ಯಲಕ್ಷ್ಮಿ ಯೋಜನೆ ಆಸರೆಯಾಗಿದೆ. ಸದರಿ ಯೋಜನೆಗಾಗಿ ಪೋಷಕರು ಮ್ಯಾರೇಜ್ ಸರ್ಟಿಫಿಕೇಟ್ ನೀಡುವುದು ಕಡ್ಡಾಯವಲ್ಲ.

ಪೋಷಕರು ಎರಡು ಹೆಣ್ಣುಮಕ್ಕಳಿಗೆ ಈ ಯೋಜನೆಯ ಸವಲತ್ತು ಪಡೆಯಬಹುದಾಗಿದ್ದು, ಮಗು ಜನಿಸಿದ 2 ವರ್ಷದೊಳಗೆ ನೋಂದಣಿ ಮಾಡಬೇಕು. ಅಲ್ಲದೆ ಒಂದು ಕುಟುಂಬದಲ್ಲಿ ಮಕ್ಕಳ ಸಂಖ್ಯೆ 2ನ್ನು ಮೀರಬಾರದು ಎಂಬ ಕಡ್ಡಾಯ ನಿಯಮವಿದೆ.

ಯೋಜನೆ ಪರಿಣಾಮಕಾರಿ: ಸದರಿ ಯೋಜನೆಯ ಸವಲತ್ತು ಪಡೆಯಲು ಮಗು ಜನಿಸಿದ ಎರಡು ವರ್ಷಗಳವರೆಗೆ ನೋಂದಣಿ ವಿಸ್ತರಿಸಲಾಗಿದೆ. ಕುಟುಂಬದಲ್ಲಿನ ಮೊದಲ ಎರಡು ಹೆಣ್ಣು ಮಕ್ಕಳು ಮಾತ್ರ ಸೌಲಭ್ಯ ಪಡೆಯಬಹುದಾಗಿದೆ. ಭ್ರೂಣಹತ್ಯೆ, ಹೆಣ್ಣು ಮಕ್ಕಳ ಮಾರಾಟ, ಗರ್ಭಪಾತ, ಹತ್ಯೆಯಂತಹ ಪಿಡುಗುಗಳನ್ನು ಹೋಗಲಾಡಿಸಿ ಹೆಣ್ಣುಮಕ್ಕಳ ಸಂತತಿಯನ್ನು ಹೆಚ್ಚಿಸುಲ್ಲಿ ಸದರಿ ಯೋಜನೆ ಪರಿಣಾಮಕಾರಿಯಾಗಿದೆ.

**ಸರ್ಟಿಫಿಕೇಟ್ ಕಡ್ಡಾಯವಲ್ಲ:** ಭಾಗ್ಯಲಕ್ಷ್ಮಿ ಲಕ್ಷ್ಮಿ ಯೋಜನೆಯ ಸವಲತ್ತು ಪಡೆದುಕೊಳ್ಳಲು ಪೋಷಕರು ಮ್ಯಾರೇಜ್ ಸರ್ಟಿಫಿಕೇಟ್ ನೀಡುವುದು ಕಡ್ಡಾಯವಲ್ಲ. ಬಾಲ್ಯವಿವಾಹವನ್ನು ತಡೆಗಟ್ಟುವ ಸಲುವಾಗಿ ಸರ್ಟಿಫಿಕೇಟ್ ಕೇಳಲಾಗುತ್ತಿದೆ. ಅನವಶ್ಯಕವಾಗಿ ಪೋಷಕರು ಮ್ಯಾರೇಜ್ ಸರ್ಟಿಫಿಕೇಟ್ ನೀಡುವ ಅಗತ್ಯವಿಲ್ಲ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ನಟರಾಜ್ ತಿಳಿಸಿದ್ದಾರೆ.

**ಮಕ್ಕಳಿಗೆ ದೊರೆಯುವ ಹಣವೆಷ್ಟು:** ಯೋಜನೆಯಡಿ ನೋಂದಣಿಯಾದ ಕುಟುಂಬದಲ್ಲಿನ ಮೊದಲನೇ ಹೆಣ್ಣು ಮಗುವಿನ ಹೆಸರಿನಲ್ಲಿ ರೂ.19,300 ಹಾಗೂ ಅದೇ ಕುಟುಂಬದಲ್ಲಿನ 2ನೇ ಹೆಣ್ಣು ಮಗುವಿನ ಹೆಸರಿನಲ್ಲಿ ರೂ. 18,350 ಗಳನ್ನು ಪಾಲುದಾರ ಹಣಕಾಸು ಸಂಸ್ಥೆಯಲ್ಲಿ ಪ್ರಾರಂಭಿಕ ಠೇವಣಿ

ಇಡಲಾಗುತ್ತದೆ 18 ವರ್ಷ ಪೂರ್ಣಗೊಂಡ ನಂತರದಲ್ಲಿ ಹೆಣ್ಣು ಮಕ್ಕಳು ಕ್ರಮವಾಗಿ ರೂ.1,00,097 ಮತ್ತು ರೂ.1,00,052 ಮೊತ್ತವನ್ನು ಪಡೆಯಲು ಮಕ್ಕಳು ಅರ್ಹರಿರುತ್ತಾರೆ.

ಆಧಾರ: ವಿಶ್ವವಾಣಿ, ದಿನಾಂಕ:29.11.2020

## 65. ರೂ. 2.45 ಕೋಟಿ ನೆರವು ನೀಡಿದ ಮುಖ್ಯಮಂತ್ರಿ

ಶಿಕಾರಿಪುರ ಕ್ಷೇತ್ರದ ಶಾಸಕರು ಆಗಿರುವ ಮುಖ್ಯಮಂತ್ರಿಯವರು ಸರ್ಕಾರಿ ಶಾಲೆ ಮತ್ತು ಕಾಲೇಜುಗಳ ಅಭಿವೃದ್ಧಿಗೆ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ಎರಡು ವರ್ಷಗಳಲ್ಲಿ ರೂ 2.45 ಕೋಟಿ ಅನುದಾನ ನೀಡಿದ್ದಾರೆ.

ದಾವಣಗೆರೆ ಉತ್ತರ ಕ್ಷೇತ್ರದ ಶಾಸಕ ಎಸ್.ಎ.ರವೀಂದ್ರನಾಥ್ ರೂ.2.35 ಕೋಟಿ, ಉತ್ತರ ಕನ್ನಡ ಜಿಲ್ಲೆ ಹಳಿಯಾಳ ಶಾಸಕ ಆರ್.ವಿ.ದೇಶಪಾಂಡೆ ಅವರು ರೂ.1.71 ಕೋಟಿ, ಕೊಡಗು ಜಿಲ್ಲೆ ವಿರಾಜಪೇಟೆಯ ಕೆ.ಜಿ.ಬೋಪಯ್ಯ ರೂ.1.56 ಕೋಟಿ ಹಾಗೂ ಮಡಿಕೇರಿಯ ಎಂ.ಪಿ.ಅಪ್ಪಚ್ಚು ರಂಜನ್ ಅವರು ರೂ.1.32 ಕೋಟಿ ಈ ಉದ್ದೇಶಕ್ಕೆ ವಿನಿಯೋಗಿಸಿದ್ದಾರೆ.

ಸಾಗರದ ಹರತಾಳು ಹಾಲಪ್ಪ ರೂ.77 ಲಕ್ಷ. ಶಿವಮೊಗ್ಗ ನಗರ ಶಾಸಕರು ಆಗಿರುವ ಸಚಿವ ಕೆ.ಎಸ್.ಈಶ್ವರಪ್ಪ ರೂ.42 ಲಕ್ಷ, ಸೊರಬ ಶಾಸಕ ಕುಮಾರ್ ಬಂಗಾರಪ್ಪ ರೂ.38 ಲಕ್ಷ ಅನುದಾನ ನೀಡಿದ್ದಾರೆ.

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆಯ ಟಿ. ರಘುಮೂರ್ತಿ ವಿದ್ಯಾಭ್ಯಾಸ ಮಾಡಿದ ಬಿಸಿನೀರು ಮುದ್ದಪ್ಪ ಸರ್ಕಾರಿ ಪ್ರೌಢಶಾಲೆಗೆ ಕೊಠಡಿ ನಿರ್ಮಾಣ, ಕಟ್ಟಡ, ಕಾಂಪೌಂಡ್, ಪ್ರಯೋಗಾಲಯ ಪರಿಕರ ಖರೀದಿ ಸೇರಿ ಇತರ ಉದ್ದೇಶಕ್ಕೆ ರೂ.90 ಲಕ್ಷ ಅನುದಾನ ನೀಡಿದ್ದಾರೆ. ಹಿರಿಯೂರು ಶಾಸಕಿ ಕೆ.ಪೂರ್ಣಿಮಾ ರೂ.71 ಲಕ್ಷ ನೀಡಿದ್ದಾರೆ.

ದಾವಣಗೆರೆ ಜಿಲ್ಲೆಯ ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ ಏಳು ಶಾಲೆಗಳಿಗೆ ರೂ.61 ಲಕ್ಷ, ಜಗಳೂರು ಶಾಸಕ ಎಸ್.ವಿ.ರಾಮಚಂದ್ರ ರೂ.23 ಲಕ್ಷ, ಬೀದರ್ ಜಿಲ್ಲೆಯ ಔರದ್ ಶಾಸಕರೂ ಆಗಿರುವ ಸಚಿವ ಪ್ರಭು ಚವ್ಹಾಣ್ ರೂ. 48 ಲಕ್ಷ ಅನುದಾನ ಒದಗಿಸಿದ್ದಾರೆ.

ಶೃಂಗೇರಿ ಶಾಸಕ ಡಿ.ಟಿ. ರಾಜೇಗೌಡ ರೂ.59 ಲಕ್ಷ, ಚಿಕ್ಕಮಗಳೂರು ಶಾಸಕ ಸಿ.ಟಿ. ರವಿ ರಾಮನಹಳ್ಳಿಯ ಲಾಲ್‌ಬಹದ್ದೂರ್ ಶಾಸ್ತ್ರಿ ಸರ್ಕಾರಿ ಪ್ರೌಢಶಾಲೆಯ ಮೂಲಸೌಕರ್ಯ ಅಭಿವೃದ್ಧಿಗೆ ರೂ.25.26 ಲಕ್ಷ ಹಂಚಿಕೆ ಮಾಡಿದ್ದಾರೆ.

ಮೈಸೂರು ಭಾಗದವರು 'ಪರವಾಗಿಲ್ಲ': ಮೈಸೂರು ಜಿಲ್ಲೆಯ ತಿ.ನರಸೀಪುರ ಕ್ಷೇತ್ರದ ಶಾಸಕ ಎಂ.ಅಶ್ವಿನ್‌ಕುಮಾರ್ ಅವರು ಎರಡು ವರ್ಷಗಳಲ್ಲಿ 29 ಪ್ರೌಢಶಾಲೆ, 19 ಪಿಯು ಮತ್ತು ಪದವಿ ಕಾಲೇಜುಗಳಲ್ಲಿ ಡಿಜಿಟಲ್ ಸ್ಮಾರ್ಟ್ ತರಗತಿ ನಡೆಸಲು ಶಾಸಕರ ಅನುದಾನದಡಿ ರೂ.98 ಲಕ್ಷ ಮೊತ್ತದ ಉಪಕರಣಗಳನ್ನು ಕೊಡಿಸಿದ್ದಾರೆ. ತಿ. ನರಸೀಪುರ ಪಟ್ಟಣ, ಬನ್ನೂರು ಪಟ್ಟಣದ ಬಾಲಕ ಬಾಲಕಿಯರ ಪ್ರೌಢಶಾಲೆ, ತಲಕಾಡು ಸೇರಿದಂತೆ ತಾಲ್ಲೂಕಿನ ಹಲವು ಶಾಲೆ, ಕಾಲೇಜುಗಳಲ್ಲಿ ಈ ಸೌಲಭ್ಯವಿದೆ. ಎರಡು ಶಾಲೆಗಳ ಅಭಿವೃದ್ಧಿ ಕಾಮಗಾರಿಗೂ ಅನುದಾನ ನೀಡಿದ್ದಾರೆ.

ವರುಣಾ ಕ್ಷೇತ್ರದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ರೂ. 26 ಲಕ್ಷ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ರೂ.54 ಲಕ್ಷ ನೀಡಿದ್ದಾರೆ.

ಎಚ್. ವಿಶ್ವನಾಥ್ ಅವರು ಹುಣಸೂರು ಶಾಸಕರಾಗಿದ್ದ ಅವಧಿಯಲ್ಲಿ (2018–19) ರೂ.26 ಲಕ್ಷ ಅನುದಾನವನ್ನು ಶಾಲೆ ಕಾಲೇಜುಗಳ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ನೀಡಿದ್ದಾರೆ. ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಶಾಲಾ ಕೊಠಡಿ ನಿರ್ಮಾಣಕ್ಕೆ ಒಟ್ಟು ರೂ.34 ಲಕ್ಷ ನೀಡಿದ್ದಾರೆ.

ಹಾಸನ ಜಿಲ್ಲೆ ಸಕಲೇಶಪುರ ಎಚ್.ಕೆ.ಕುಮಾರಸ್ವಾಮಿ ರೂ.39 ಲಕ್ಷ. ಅರಕಲಗೂಡು ಶಾಸಕ ಎ.ಟಿ.ರಾಮಸ್ವಾಮಿ ಕೇವಲ ರೂ.10 ಲಕ್ಷ ಅನುದಾನವನ್ನು ಶಾಲೆಗಳಲ್ಲಿ ಶೌಚಾಲಯ, ಪ್ರಯೋಗಾಲಯಕ್ಕೆ, ಹಾಸನ ಶಾಸಕ ಪ್ರೀತಂಗೌಡ ರೂ.33 ಲಕ್ಷ ವ್ಯಯಿಸಿದ್ದಾರೆ.

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ಶಾಸಕ ರವೀಂದ್ರ ಶ್ರೀಕಂಠಯ್ಯ ಶ್ರೀರಂಗಪಟ್ಟಣ ಗುರುಭವನ ಪಕ್ಕದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡ ನಿರ್ಮಾಣಕ್ಕೆ ರೂ.40 ಲಕ್ಷ ಹಾಗೂ ಎಂ.ಶೆಟ್ಟಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡ ನಿರ್ಮಾಣಕ್ಕೆ ರೂ.31 ಲಕ್ಷ, ಮೇಲುಕೋಟೆಯ ಸಿ.ಎಸ್. ಪುಟ್ಟರಾಜು ರೂ.28.99 ಲಕ್ಷ ವ್ಯಯಿಸಿದ್ದಾರೆ.

ಇವರನ್ನು ಹೊರತು ಪಡಿಸಿ ರಾಜ್ಯದ ಉಳಿದ ಶಾಸಕರು ರೂ.20 ಲಕ್ಷಕ್ಕಿಂತ ಕಡಿಮೆ ಅನುದಾನವನ್ನು ಈ ಉದ್ದೇಶಕ್ಕೆ ಒದಗಿಸಿದ್ದಾರೆ.

ಆಧಾರ: ಪ್ರಜಾವಾಣಿ, ದಿನಾಂಕ:29.11.2020

## 66. ಕಂಡಲ್ಲಿ ಕಸ ಎಸೆದರೆ ಜೋಕೆ

ಕಸ ವಿಲೇವಾರಿಗೆ ಪ್ರಯಾಸ ಪಡುತ್ತಿರುವ ಬಿಬಿಎಂಪಿ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದರೂ ಸಹ ನಿಯಮ ಉಲ್ಲಂಘಿಸುವವರಿಗೇನೊ ಕಡಿಮೆಯಿಲ್ಲ. ಆದರೆ ಕೊರೋನಾ ಹಿನ್ನೆಲೆಯಲ್ಲಿ ಕಸ ನಿರ್ವಹಣೆಯನ್ನು ಕಟ್ಟುನಿಟ್ಟಾಗಿ ಪರಿಗಣಿಸಿರುವ ಪಾಲಿಕೆ ಕಳೆದ ಐದು ತಿಂಗಳಲ್ಲಿ ನಿಯಮ ಉಲ್ಲಂಘಿಸಿದವರಿಂದ ದಂಡ ವಿಧಿಸುವ ಮೂಲಕ ರೂ.75 ಲಕ್ಷ ಸಂಗ್ರಹಿಸಲಾಗಿದೆ.

ಕೊರೋನಾ ನಿಯಂತ್ರಣದಲ್ಲಿ ಪಾಲಿಕೆ ಸಿಬ್ಬಂದಿ ನಿರತರಾಗಿರುವುದರಿಂದ ಮಾನವ ಸಂಪನ್ಮೂಲದ ಕೊರತೆಯನ್ನು ಎದುರಿಸುತ್ತಿರುವ ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆಗಾಗಿಯೇ ಕೈಗೊಂಡಿದ್ದ ಕ್ರಮಗಳನ್ನು ಯಾವುದೇ ಕಾರಣಕ್ಕೂ ಹಿಂಪಡೆಯುವುದಿಲ್ಲ ಎಂದು ತಿಳಿಸಿದೆ.

ಬಿಬಿಎಂಪಿ ನೇಮಕ ಮಾಡಿಕೊಂಡಿದ್ದ 250 ಮಾರ್ಷಲ್‌ಗಳನ್ನು ಕೋವಿಡ್ ಕರ್ತವ್ಯಕ್ಕೆ ನಿಯೋಜಿಸಲಾಗಿದ್ದು, ಈಗ ಘನತ್ಯಾಜ್ಯ ನಿರ್ವಹಣೆಗೆ ಪ್ರತ್ಯೇಕವಾಗಿ 250 ಮಾರ್ಷಲ್‌ಗಳನ್ನು ನೇಮಿಸಲಾಗಿದೆ ಎಂದು ಬಿಬಿಎಂಪಿ ಜಂಟಿ ಆಯುಕ್ತ ಸರ್ಫರಾಜ್‌ಖಾನ್ ತಿಳಿಸಿದ್ದಾರೆ.

ಕಸ ವಿಂಗಡಣೆ ಬಗ್ಗೆ ಜನಸಾಮಾನ್ಯರಿಗೆ ಅರಿವು ಮೂಡಿಸುವುದು ಬಿಬಿಎಂಪಿ ಅಧಿಕಾರಿಗಳ ಕರ್ತವ್ಯ. ವಿಂಗಡಿಸಲಾಗದ ಕಸವನ್ನು ಪೌರಕಾರ್ಮಿಕರು ಸ್ವೀಕರಿಸಿದರೂ ಸಹ ಅಪರಾಧ. ಇನ್ನು ರಾತ್ರಿ ವೇಳೆ ಖಾಲಿ ನಿರ್ಜನ ಪ್ರದೇಶಗಳಲ್ಲಿ ಕಸ ಎಸೆದು ಆ ಪ್ರದೇಶವನ್ನು ತಿಪ್ಪೆಗುಂಡಿಯನ್ನಾಗಿ ಮಾಡುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು.

ಕಳೆದ ಜೂನ್‌ನಿಂದ ಕಸ ಬಿಸಾಡಿದರೆ ವಿಧಿಸಲಾಗುತ್ತಿದ್ದ ದಂಡದ ಮೊತ್ತವನ್ನು ರೂ.200ಗಳಿಂದ ರೂ.1 ಸಾವಿರಗಳಿಗೆ ಏರಿಕೆ ಮಾಡಲಾಗಿದೆ. ಎರಡನೇ ಬಾರಿ ಸಿಕ್ಕಿಕೊಂಡವರಿಗೆ ರೂ.2 ಸಾವಿರ ದಂಡ ವಿಧಿಸಲಾಗುತ್ತಿದ್ದು ಕಸ ವಿಂಗಡಣೆ ಮಾಡದಿರುವವರಿಗೆ ಮೊದಲ ಬಾರಿಗೆ ರೂ.1 ಸಾವಿರ, ಎರಡನೇ ಬಾರಿಗೆ ರೂ.2 ಸಾವಿರ ವಿಧಿಸಲಾಗುತ್ತಿದೆ. ಕಸ ಸಂಗ್ರಹಿಸುವವರು ವಿಂಗಡಿಸದ ಕಸವನ್ನು ಸಂಗ್ರಹಿಸಿದರೆ ಅವರಿಗೂ ದಂಡ ವಿಧಿಸಲಾಗುತ್ತಿದೆ ಎಂದು ಪಾಲಿಕೆ ಜಂಟಿ ಆಯುಕ್ತರು ತಿಳಿಸಿದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:30.11.2020

## 67. ಬಿಬಿಎಂಪಿಯ ವ್ಯಾಪ್ತಿ 1ಕಿ.ಮೀ. ಹೆಚ್ಚಳ

ಬಿಬಿಎಂಪಿ ವ್ಯಾಪ್ತಿಯನ್ನು ಮತ್ತಷ್ಟು ಹಿಗ್ಗಿಸಲು ಬಿಬಿಎಂಪಿ ಸುತ್ತಲೂ ಇರುವ 1ಕಿಲೋ ಮೀಟರ್ ವ್ಯಾಪ್ತಿಯ ಗ್ರಾಮ, ಗ್ರಾಮಪಂಚಾಯಿತಿ, ಪಟ್ಟಣ ಪಂಚಾಯಿತಿ ಹಾಗೂ ನಗರಸಭೆಗೆ ಸೇರಿದ ಪ್ರದೇಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಿಕೊಳ್ಳಬೇಕು.

ಮೇಯರ್ ಹಾಗೂ ಉಪ ಮೇಯರ್ ಅವಧಿಯನ್ನು 1 ವರ್ಷದಿಂದ ಎರಡೂವರೆ ವರ್ಷಗಳಿಗೆ ಹೆಚ್ಚಳ ಮಾಡಬೇಕು ಎಂಬುದು ಸೇರಿದಂತೆ ಹಲವು ಪ್ರಮುಖ ಶಿಫಾರಸ್ಸುಗಳನ್ನು ಒಳಗೊಂಡ ಬಿಬಿಎಂಪಿ ವಿಧೇಯಕ–2020 ಪರಿಶೀಲನಾ ವರದಿಯನ್ನು ಎಸ್.ರಘು ನೇತೃತ್ವದ ಜಂಟಿ ಪರಿಶೀಲನಾ ಸಮಿತಿಯು ಉಭಯ ಸದನಗಳಲ್ಲಿ ಮಂಡಿಸಿತು.

159 ಪುಟಗಳ ವರದಿಯಲ್ಲಿ ಬಿಬಿಎಂಪಿ ಕಾರ್ಯವ್ಯಾಪ್ತಿ, ಮೇಯರ್–ಉಪಮೇಯರ್ ಅಧಿಕಾರಾವಧಿ ಜವಾಬ್ದಾರಿ ಆಯುಕ್ತರ ಬದಲಿಗೆ ಮುಖ್ಯ ಆಯುಕ್ತರ ನೇಮಕ, ಸ್ಥಾಯಿ ಸಮಿತಿಗಳು, ವಲಯ ಆಯುಕ್ತರ ಜವಾಬ್ದಾರಿಗಳು ಸೇರಿದಂತೆ ಬಿಬಿಎಂಪಿ ಕಾಯಿದೆ–2020ರಲ್ಲಿ ಇರಬೇಕಾದ ಎಲ್ಲಾ ಅಂಶಗಳ ಬಗ್ಗೆಯೂ ಉಲ್ಲೇಖಿಸಿದೆ.

**ವಾರ್ಡ್ ಸಂಖ್ಯೆ ಹೆಚ್ಚಳ ಉಲ್ಲೇಖವಿಲ್ಲ:** ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 198 ರಿಂದ 243ಕ್ಕೆ ಈಗಾಗಲೇ ಹೆಚ್ಚಳ ಮಾಡಿ ಕಾಯಿದೆ ತಿದ್ದುಪಡಿ ಮಾಡಿದ್ದು, ಪರಿಶೀಲನಾ ಸಮಿತಿ ವರದಿಯಲ್ಲಿ ಅದರ ಉಲ್ಲೇಖ ಮಾಡಿಲ್ಲ. ಈ ಮೂಲಕ ಬಿಬಿಎಂಪಿ ವ್ಯಾಪ್ತಿ ವಿಸ್ತರಣೆ, ಗಡಿ ಗುರುತಿಸುವಿಕೆ ನೂತನವಾಗಿ ಸೇರ್ಪಡೆ ಆಗಬೇಕಿರುವ ಪ್ರದೇಶಗಳ ಸಮೀಕ್ಷೆ, ಜನಸಂಖ್ಯೆ ಗಣತಿ ಮತ್ತಿತರ ಕಾರ್ಯಗಳ ನೆಪವೊಡ್ಡಿ ಸುಪ್ರೀಂ ಕೋರ್ಟ್‌ನಲ್ಲಿ ಬಿಬಿಎಂಪಿ ಚುನಾವಣೆ ಮುಂದೂಡಲು ಸರ್ಕಾರ ಮನವಿ ಮಾಡಲಿದೆಯೇ ಎಂಬ ಅನುಮಾನ ವ್ಯಕ್ತವಾಗಿದೆ.

**ಮೇಯರ್ ಅವಧಿ ಹೆಚ್ಚಳ:** ವರದಿ ಅನ್ವಯ ಬಿಬಿಎಂಪಿಯ ಆಡಳಿತ ಹಾಗೂ ನಿರ್ವಹಣೆ ಸುಗಮಗೊಳಿಸುವ ಉದ್ದೇಶದಿಂದ ಬಿಬಿಎಂಪಿ ಮೇಯರ್ ಹಾಗೂ ಉಪ ಮೇಯರ್ ಅವರ ಅಧಿಕಾರ ಅವಧಿಯನ್ನು ಒಂದು ವರ್ಷದಿಂದ 30 ತಿಂಗಳಿಗೆ(ಎರಡೂವರೆ ವರ್ಷಗಳಿಗೆ) ಹೆಚ್ಚಳ ಮಾಡಲಾಗಿದೆ. ಇನ್ನು ಮೇಯರ್ ಹಾಗೂ ಉಪ ಮೇಯರ್ ಕಾರ್ಯವ್ಯಾಪ್ತಿಯನ್ನು ನಿಗದಿ ಮಾಡಿದ್ದು, ಮೇಯರ್ ಯಾವುದಾದರೂ ವರದಿ ಅಥವಾ ಮಾಹಿತಿ ಕೇಳಿದರೆ 15 ದಿನಗಳೊಳಗಾಗಿ ಮುಖ್ಯ ಆಯುಕ್ತರು ನೀಡಬೇಕು ಎಂದು ಸ್ಪಷ್ಟಪಡಿಸಿದೆ. ಈ ಮೂಲಕ ಮೇಯರ್ ಅಧಿಕಾರವನ್ನು ತುಸು ಹೆಚ್ಚಿಸಲು ಶಿಫಾರಸ್ಸು ಮಾಡಲಾಗಿದೆ.

**ಮುಖ್ಯ ಆಯುಕ್ತರ ನೇಮಕ:** ಬಿಬಿಎಂಪಿಗೆ ಪ್ರಸ್ತುತ ಇರುವ ಬಿಬಿಎಂಪಿ ಆಯುಕ್ತ ಹುದ್ದೆಯನ್ನು ಮುಖ್ಯ ಹುದ್ದೆಯಾಗಿ ಮಾಡಬೇಕು. ಇದಕ್ಕೆ ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯ ಹುದ್ದೆಗಿಂತ ಕಡಿಮೆ ಇಲ್ಲದವರನ್ನು ಸರ್ಕಾರ ನೇಮಕ ಮಾಡಲಿದೆ. ಜೊತೆಗೆ ಅಧಿಕಾರ ಅವಧಿ ಎರಡು ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ನಿಯೋಜನೆ ಮಾಡಬೇಕು. ಎರಡು ವರ್ಷದೊಳಗಾಗಿ ಮುಖ್ಯ ಆಯುಕ್ತರ ಆಡಳಿತ ಹಾಗೂ ನಿರ್ವಹಣೆ ಸರ್ಕಾರಕ್ಕೆ ತೃಪ್ತಿಕರವಾದರೆ, ಆಯುಕ್ತರ ಅಧಿಕಾರ ಅವಧಿಯನ್ನು ಮುಂದುವರಿಸುವ ಅಧಿಕಾರ ಸರ್ಕಾರಕ್ಕೆ ಇರಲಿದೆ. ಅವಧಿಗೆ ಮೊದಲು ವರ್ಗಾವಣೆ ಮಾಡಬೇಕಾದರೆ ಬಿಬಿಎಂಪಿ ಮೇಯರ್ ಅವರಿಗೆ ಕಾರಣಗಳನ್ನು ತಿಳಿಸಬೇಕು ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಇನ್ನು ವಲಯ ಆಯುಕ್ತರು ಸರ್ಕಾರದ ಕಾರ್ಯದರ್ಶಿ ಹಂತಕ್ಕಿಂತ ಕಡಿಮೆ ಇಲ್ಲದ ಅಧಿಕಾರಿಯಾಗಿರಬೇಕು ಎಂದು ಹೇಳಲಾಗಿದೆ.

**ವಿಪತ್ತು ನಿರ್ವಹಣಾ ಸಮಿತಿ ರಚನೆ:** ನಗರದಲ್ಲಿ ಸಾರ್ವಜನಿಕರಿಗೆ ತುರ್ತಾಗಿ ಸ್ಪಂದಿಸುವ ಉದ್ದೇಶದಿಂದ ವಿಪತ್ತು ನಿರ್ವಹಣಾ ಸಮಿತಿಯನ್ನು ರಚನೆ ಮಾಡುವ ಪ್ರಸ್ತಾವನೆ ಸಹ ಇದೆ. ನಗರದಲ್ಲಿ ಮಳೆಯಿಂದ ಸೃಷ್ಟಿಯಾಗುವ ಅನಾಹುತಗಳನ್ನು ತಪ್ಪಿಸುವ ನಿಟ್ಟಿನಲ್ಲಿ ಈ ಸಮಿತಿ ಮಹತ್ವ ಪಡೆದುಕೊಳ್ಳಲಿದೆ.

**ಏರಿಯಾ ಸಭಾ ಅಸ್ತಿತ್ವಕ್ಕೆ ಶಿಫಾರಸ್ಸು:** ಪಾಲಿಕೆಯ ವ್ಯಾಪ್ತಿಯಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡುವ ಉದ್ದೇಶದಿಂದ ವಿಧಾನಸಭಾ ಕ್ಷೇತ್ರವಾರು ಹಾಗೂ ವಾರ್ಡ್‌ನಲ್ಲಿ "ಪ್ರಾಂತ್ಯ ಸಭೆ"ಗಳನ್ನು

(ಏರಿಯಾ ಸಭಾ) ಅಸ್ತಿತ್ವಕ್ಕೆ ತರಬೇಕು ಎಂಬ ಶಿಫಾರಸ್ಸು ಮಾಡಲಾಗಿದ್ದು, ಏರಿಯಾ ಸಭಾಗಳಲ್ಲಿ ವಾರ್ಡಿನ ಪ್ರತಿಯೊಬ್ಬ ಮತದಾರರು ಸದಸ್ಯರಾಗಿರಬೇಕು ಎಂದು ಉಲ್ಲೇಖಿಸಲಾಗಿದೆ.

**ಶಾಸಕರ ಆಧ್ಯಕ್ಷತೆಯಲ್ಲಿ ಸಮಿತಿ:** ಪಾಲಿಕೆ ವ್ಯಾಪ್ತಿಯಲ್ಲಿ ಇಲ್ಲಿಯವರೆಗೆ ವಾರ್ಡ್ ಮಟ್ಟದ ಸಮಿತಿಗಳು ಅಸ್ತಿತ್ವದಲ್ಲಿ ಇದ್ದವು. ಜೊತೆಗೆ ಬಿಬಿಎಂಪಿ ಆಡಳಿತದಲ್ಲಿ ಶಾಸಕರ ಪಾತ್ರ ತೀರಾ ಕಡಿಮೆ ಇತ್ತು. ಉದ್ದೇಶಿತ ಮಸೂದೆಯಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರವಾರು ಸಮಿತಿಗಳನ್ನು ರಚನೆ ಮಾಡುವ ಪ್ರಸ್ತಾವನೆ ಇದ್ದು. ಇದು ಜಾರಿಯಾದಲ್ಲಿ ಶಾಸಕರು ಸಹ ವಾರ್ಡ್ ಮಟ್ಟದ ಸಮಸ್ಯೆಗಳು ಹಾಗೂ ಯೋಜನೆಗಳ ಬಗ್ಗೆ ಚರ್ಚೆ ಮಾಡುವಂತಾಗಲಿದೆ.

ಆಧಾರ: ಕನ್ನಡಪ್ರಭ, ದಿನಾಂಕ:10.12.2020

## 68. ಬಿಬಿಎಂಪಿ ವಿಧೇಯಕಕ್ಕೆ ಸದನ ಒಪ್ಪಿಗೆ

ಬಿಬಿಎಂಪಿ ಗಡಿಗೆ ಹೊಂದಿಕೊಂಡ ಒಂದು ಕಿ.ಮೀ. ವ್ಯಾಪ್ತಿ ಹಾಗೂ ಆಜುಬಾಜಿನ ಪ್ರದೇಶಗಳನ್ನು ಸೇರ್ಪಡೆ ಮಾಡಿಕೊಂಡು ವಾರ್ಡ್ ಪುನರ್‌ವಿಂಗಡಿಸುವ ಜೊತೆಗೆ ಮೇಯರ್, ಉಪ ಮೇಯರ್ ಅಧಿಕಾರಾವಧಿಯನ್ನು 30 ತಿಂಗಳಿಗೆ ವಿಸ್ತರಿಸುವ, ಗರಿಷ್ಟ 15 ವಲಯ ಸಮಿತಿ, ಎಂಟು ಸ್ಥಾಯಿ ಸಮಿತಿ ರಚನೆಗೆ ಅವಕಾಶ ಕಲ್ಪಿಸುವ ಬಿಬಿಎಂಪಿ ವಿಧೇಯಕಕ್ಕೆ ಉಭಯ ಸದನಗಳಲ್ಲಿ ಅನುಮೋದನೆ ನೀಡಲಾಯಿತು.

ಬಿಬಿಎಂಪಿ ವಿಧೇಯಕವನ್ನು ಪರಿಶೀಲಿಸಲು ರಚಿಸಲಾಗಿರುವ ವಿಧಾನಮಂಡಲದ ಜಂಟಿ ಪರಿಶೀಲನಾ ಸಮಿತಿಯು ಪಾಲಿಕೆ ಗಡಿಯಿಂದ ಒಂದು ಕಿ.ಮೀ. ಮೀರಿ ಆಜುಬಾಜುವಿನಲ್ಲಿರುವ ಗ್ರಾಮ, ಪ್ರದೇಶ ಸೇರ್ಪಡೆಗೂ ಅಧಿಕಾರ ಕಲ್ಪಿಸಿ ವಿಧೇಯಕ ಮಂಡಿಸಿ ಸರ್ಕಾರ ಒಪ್ಪಿಗೆ ಪಡೆಯಿತು.

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಪರವಾಗಿ ವಿಧಾನ ಸಭೆಯಲ್ಲಿ ವಿಧೇಯಕ ಮಂಡಿಸಿದ ಸಚಿವ ಜೆ.ಸಿ. ಮಾಧುಸ್ವಾಮಿ ವಿಧೇಯಕದ ಅಂಶಗಳನ್ನು ಪ್ರಸ್ತಾಪಿಸಿದರು. ಈ ಹಿಂದೆ ನಡೆದ ವಾರ್ಡ್ ಪುನರ್ ವಿಂಗಡಣೆಯಿಂದ ಸಾಕಷ್ಟು ಸಮಸ್ಯೆಗಳಾಗಿವೆ. ಪಾಲಿಕೆ ಪ್ರದೇಶ, ಗ್ರಾಮ ಪಂಚಾಯ್ತಿ, ಪುರಸಭೆ, ನಗರಸಭೆ ಪ್ರದೇಶ ಯಾವುದು ಎಂಬುದು ಗೊತ್ತಾಗದ ಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆಲ್ಲಾ ಸೂಕ್ತ ಚೌಕಟ್ಟು ನೀಡಲು ವಿಧೇಯಕ ಮಂಡಿಸಲಾಗುತ್ತಿದೆ ಎಂದು ಹೇಳಿದರು.

ಸದ್ಯ 198 ವಾರ್ಡ್‌ಗಳಿದ್ದು, 225 ರಿಂದ 250ರವರೆಗೆ ವಿಸ್ತರಿಸಲು ಅವಕಾಶ ನೀಡಲಾಗಿತ್ತು. ಅದರಂತೆ 243 ವಾರ್ಡ್ ರಚನೆಗೆ ನಿಗದಿಪಡಿಸಲಾಗಿದೆ. ಜನಸಂಖ್ಯೆ, ವಿಧಾನಸಭಾ ಕ್ಷೇತ್ರದ ಆಧಾರದ ಮೇಲೆ ಒಂದು ವಾರ್ಡ್ ಮೂರ್ನಾಕ್ಕು ವಿಧಾನಸಭಾ ಕ್ಷೇತ್ರದಲ್ಲಿ ಹಂಚಿಕೆಯಾಗಬೇಕಿದೆ ಎಂದು ತಿಳಿಸಿದರು.

**ವ್ಯಾಪ್ತಿ ವಿಸ್ತರಣೆ:** ಪಾಲಿಕೆ ವ್ಯಾಪ್ತಿ ವಿಸ್ತರಿಸಬೇಕು ಎಂಬುದು ಹಲವು ಶಾಸಕರ ಅಭಿಪ್ರಾಯವಾಗಿತ್ತು. ಅದರಂತೆ ಪಾಲಿಕೆ ಗಡಿಯ ಅಜುಬಾಜುವಿನಲ್ಲಿರುವ ಗ್ರಾಮ ಪಂಚಾಯಿತಿ, ಪುರಸಭೆ, ಪಟ್ಟಣ ಪಂಚಾಯ್ತಿ, ನಗರ ಪಾಲಿಕೆ ಪ್ರದೇಶವಿದ್ದರೆ ಅದನ್ನು ಸೇರ್ಪಡೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಸಮಿತಿಯು ತನ್ನ ವರದಿಯಲ್ಲಿ ಗಡಿಯಿಂದ ಒಂದು ಕಿ.ಮೀ. ವ್ಯಾಪ್ತಿಯ ಪ್ರದೇಶ ಸೇರ್ಪಡೆಗೆ ಶಿಫಾರಸ್ಸು ಮಾಡಿತ್ತು. ಆದರೆ ಒಂದು ಕಿ.ಮೀ. ಮಿತಿಗಿಂತ ಹೊರಗೆ 300–500 ಮೀಟರ್ ಅಂತರದಲ್ಲಿರುವ ಗ್ರಾಮ, ಪ್ರದೇಶದ ಸ್ಥಿತಿ ಏನು ಎಂಬ ಪ್ರಶ್ನೆ ಮೂಡಿದ ಹಿನ್ನೆಲೆಯಲ್ಲಿ ಆಜುಬಾಜಿನಲ್ಲಿನ ಪ್ರದೇಶ ಸೇರ್ಪಡೆಗೂ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದರು.

ಏಕಕಾಲಕ್ಕೆ ಎರಡು ಸದಸ್ಯತ್ವ ಹೊಂದಿರುವಂತಿಲ್ಲ: ಬಿಬಿಎಂಪಿ ಸದಸ್ಯರಾದವರು ವಿಧಾನ ಸಭೆ, ವಿಧಾನ ಪರಿಷತ್, ಲೋಕಸಭೆ, ರಾಜ್ಯಸಭೆಯಲ್ಲಿ ಮತ್ತೊಂದು ಸದಸ್ಯತ್ವ ಹೊಂದಿರಲು ಈಗಿರುವ ಕಾಯ್ದೆಯಲ್ಲಿ ಅವಕಾಶವಿದೆ. ಇದನ್ನು ಕೈಬಿಡಲಾಗಿದ್ದು ಏಕಕಾಲಕ್ಕೆ ಒಂದು ಕಡೆ ಸದಸ್ಯತ್ವ ಹೊಂದಲಷ್ಟೇ ಅವಕಾಶ ನೀಡಲಾಗಿದೆ. ಇದರಿಂದ ಮತ್ತೊಬ್ಬರಿಗೆ ಯಾವುದಾದರೂ ಸದನ ಇಲ್ಲವೇ ಪಾಲಿಕೆಯಲ್ಲಿ

ಸದಸ್ಯತ್ವ ಹೊಂದಲು ಅನುಕೂಲ ಕಲ್ಪಿಸುವುದು ಇದರ ಉದ್ದೇಶವಾಗಿದೆ. ಆರು ತಿಂಗಳಲ್ಲಿ ಒಂದು ಸದಸ್ಯತ್ವ ರದ್ದಾಗಲಿದೆ ಎಂದು ತಿಳಿಸಿದರು.

ಶಾಸಕರ ಅಧ್ಯಕ್ಷತೆಯಲ್ಲಿ ಕ್ಷೇತ್ರ ಸಮಾಲೋಚನಾ ಸಮಿತಿ ಸ್ಥಾಪನೆ ಪ್ರಸ್ತಾಪವಿದೆ. ಆ ಕ್ಷೇತ್ರ ವ್ಯಾಪ್ತಿಯ ಎಲ್ಲಾ ಪಾಲಿಕೆ ಸದಸ್ಯರು ಸಮಿತಿ ಸದಸ್ಯರಾಗಿರುತ್ತಾರೆ. ನಾಮ ನಿರ್ದೇಶಿತ ಸದಸ್ಯರ ಅವಧಿಯನ್ನು 30 ತಿಂಗಳಿಗೆ ನಿಗದಿಪಡಿಸಲಾಗಿದೆ. 8 ವಲಯ ಕಚೇರಿಗಳ ಬದಲಿಗೆ 15 ವಲಯ ಸಮಿತಿಗಳ ರಚನೆಗೆ ಅವಕಾಶ ಕಲ್ಪಿಸಲಾಗಿದೆ. ಮುಖ್ಯ ಆಯುಕ್ತರ ಹುದ್ದೆಗೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶ್ರೇಣಿ ಹಾಗೂ ವಲಯ ಆಯುಕ್ತರ ಹುದ್ದೆಗೆ ಕಾರ್ಯದರ್ಶಿ ಶ್ರೇಣಿಯ ಅಧಿಕಾರಿಗಳ ನಿಯೋಜನೆಗೆ ಅವಕಾಶ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

**ಜಾಹೀರಾತು ಶುಲ್ಕಕ್ಕೆ ಅವಕಾಶ:** ಜಿಎಸ್‌ಟಿ ಜಾರಿ ಬಳಿಕ ಪಾಲಿಕೆ ವ್ಯಾಪ್ತಿಯಲ್ಲಿ ಜಾಹೀರಾತು ತೆರಿಗೆ ವಿಧಿಸಲು ಅವಕಾಶವಿರಲಿಲ್ಲ. ಜಾಹೀರಾತು ಶುಲ್ಕ ಸಂಗ್ರಹಕ್ಕೆ ಪ್ರಸ್ತಾಪಿಸಲಾಗಿದೆ. ಜೊತೆಗೆ ಮನರಂಜನಾ ತೆರಿಗೆ ವಿಧಿಸಲು ಅವಕಾಶ ನೀಡಲಾಗಿದೆ. ನೀರಿನ ಸಮರ್ಪಕ ಬಳಕೆ ಉದ್ದೇಶದಿಂದ 2,400 ಚದರ ಅಡಿ ವಿಸ್ತೀರ್ಣ ಮತ್ತು ಮೇಲ್ಪಟ್ಟ ವಿಸ್ತೀರ್ಣದ ನಿವೇಶನಗಳಲ್ಲಿ ಕಟ್ಟಡಗಳಿಗೆ ಮಳೆ ನೀರು ಕೊಯ್ಲು ವ್ಯವಸ್ಥೆ ಅಳವಡಿಕೆ ಕಡ್ಡಾಯಗೊಳಿಸಲಾಗಿದೆ ಎಂದು ಹೇಳಿದರು.

**ದಂಡ ವಿಧಿಸಲು ಅಧಿಕಾರ:** ಕುಂದುಕೊರತೆ ನಿವಾರಣೆಗೆ ಕುಂದು ಕೊರತೆ ನಿವಾರಣಾ ಪ್ರಾಧಿಕಾರ ರಚನೆ ಬಗ್ಗೆ ಪ್ರಸ್ತಾಪಿಸಲಾಗಿದೆ. ಜೊತೆಗೆ ವಿಪತ್ತು ನಿರ್ವಹಣಾ ವ್ಯವಸ್ಥೆ ರೂಪಿಸಿಕೊಂಡು ನಿರ್ವಹಿಸಲು ಅಧಿಕಾರ ನೀಡಲಾಗಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಅಪಾಯಕಾರಿ ಗಣಿಗಾರಿಕೆ ತಡೆಯಲು ಹಾಗೂ ದಂಡ ವಿಧಿಸಲು ಅಧಿಕಾರ ನೀಡಲಾಗಿದೆ ಎಂದು ಸದನಕ್ಕೆ ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಜನಸಂಖ್ಯೆ ಬೆಳವಣಿಗೆಗೆ ಅನುಗುಣವಾಗಿ ವಾರ್ಡ್ ಸಂಖ್ಯೆ ಹೆಚ್ಚಿಸಿ ಪುನರ್ ವಿಂಗಡಿಸುವ ಮೂಲಕ ಉತ್ತಮ ಆಡಳಿತ ವ್ಯವಸ್ಥೆ ರೂಪಿಸುವ ನಿಟ್ಟಿನಲ್ಲಿ ಪೂರಕವಾದ ಅಂಶಗಳುಳ್ಳ ವಿಧೇಯಕ ಮಂಡಿಸಲಾಗಿದೆ ಎಂದು ಹೇಳಿದರು.

ಬಿಜೆಪಿ ಅರವಿಂದ ಲಿಂಬಾವಳಿ, ವಾರ್ಡ್ ಪುನರ್ ವಿಂಗಡಣೆ ಅಗತ್ಯವಿದೆ. ಬೆಂಗಳೂರಿನ ಹಳೆಯ ವಾರ್ಡ್‌ನ ಜನಸಂಖ್ಯೆಗೂ ಹೊರವಲಯದ ವಾರ್ಡ್ ಜನಸಂಖ್ಯೆಗೂ ಅಜಗಜಾಂತರ. ಬೆಳ್ಳಂದೂರು, ಹೊರಮಾವು ವಾರ್ಡ್‌ಗಳಲ್ಲಿ 1 ಲಕ್ಷಕ್ಕಿಂತ ಹೆಚ್ಚು ಮತದಾರರಿದ್ದಾರೆ. ಮತದಾರರ ಪಟ್ಟಿ ಆಧರಿಸಿ ವಾರ್ಡ್ ಪುನರ್‌ವಿಂಗಡಿಸುವುದು ಸೂಕ್ತ ಎಂದು ಹೇಳಿದರು.

ಬಿಜೆಪಿಯ ಮುನಿರತ್ನ ರಾಜರಾಜೇಶ್ವರಿನಗರ ಕ್ಷೇತ್ರ ವಿಸ್ತಾರವಾಗಿದ್ದು, 224 ಕಿ.ಮೀ. ಉದ್ದದ ರಸ್ತೆಗಳಿವೆ. ಆದರೆ ಸಾಮಾನ್ಯ ವಾರ್ಡ್‌ಗಳಿಗೆ ಹಂಚಿಕೆಯಾದಂತೆ ಪೌರ ಕಾರ್ಮಿಕರನ್ನು ಹಂಚಿಕೆ ಮಾಡಿರುವುದರಿಂದ ಸ್ವಚ್ಛತಾ ಕಾರ್ಯಕ್ಕೂ ಹಿನ್ನೆಡೆಯಾಗುತ್ತಿದೆ. ವಿಸ್ತೀರ್ಣ, ಜನಸಂಖ್ಯೆ, ಸ್ವರೂಪದ ಆಧಾರದ ಮೇಲೆ ವಾರ್ಡ್ ಪುನರ್ ವಿಂಗಡಣೆಯಾಗುವುದು ಸೂಕ್ತ ಎಂದು ಬಚ್ಚೇಗೌಡ ಅವರು ಕೆಲ ಸಲಹೆ ನೀಡಿದರು. ಬಳಿಕ ಕಾಂಗ್ರೆಸ್ ಸದಸ್ಯರುಗಳ ಗೈರುಹಾಜರಿ ನಡುವೆ ವಿಧೇಯಕಕ್ಕೆ ವಿಧಾನ ಸಭೆಯಲ್ಲಿ ಒಪ್ಪಿಗೆ ನೀಡಲಾಯಿತು.

ಆಧಾರ: ಉದಯವಾಣಿ, ದಿನಾಂಕ:11.12.2020

# ಭಾಗ–4

## ರಾಜ್ಯ ನೆಲ – ಜಲ –ಭಾಷೆ

### 1. ಕಾಸರಗೋಡಿನ ಇಕೋ ಬೀಚ್‌ಗೆ ಅಂತರರಾಷ್ಟ್ರೀಯ ಬ್ಲ್ಯೂ ಫ್ಲಾಗ್ ಮಾನ್ಯತೆ

ಹೊನ್ನಾವರ ತಾಲ್ಲೂಕಿನ ಕಾಸರಗೋಡಿನ ಇಕೋ ಬೀಚ್ ಅಂತರರಾಷ್ಟ್ರೀಯ ಮಾನ್ಯತೆ ದೊರೆತಿದೆ.

ಹೊನ್ನಾವರದ ಕಾಸರಗೋಡು ಕಡಲ ತೀರಕ್ಕೆ ಪ್ರಮಾಣಪತ್ರ ಪಡೆಯುವ ನಿಟ್ಟಿನಲ್ಲಿ 2018 ರ ಅಕ್ಟೋಬರ್‌ನಲ್ಲಿ ಕೆಲಸ ಆರಂಭಿಸಲಾಗಿತ್ತು. ಕೇಂದ್ರ ಸರ್ಕಾರವು ಒಟ್ಟು ರೂ.78 ಕೋಟಿ ಅನುದಾನ ಒದಗಿಸಿತ್ತು. ಉತ್ತರ ಕನ್ನಡ ಜಿಲ್ಲಾಡಳಿತ ಹಾಗೂ ಪ್ರವಾಸೋದ್ಯಮ ಇಲಾಖೆಯು ಕಳೆದ 2019ರ ನೆರೆ ಹಾವಳಿಯ ಸಂಧರ್ಭದಲ್ಲಿ ಹಿನ್ನಡೆಯಾದರೂ, ಕೇವಲ ಒಂದು ವರ್ಷದಲ್ಲಿ ಎಲ್ಲಾ ಕಾಮಗಾರಿಗಳನ್ನು ಮುಕ್ತಾಯ ಮಾಡಿತ್ತು. ಬಳಿಕ ಕೇಂದ್ರದಿಂದ ಆಗಮಿಸಿದ ವಿಶೇಷ ತಂಡ ಪರಿಶೀಲನೆ ನಡೆಸಿ ತೆರಳಿತ್ತು. ಇದೀಗ ಭಾರತೀಯ ಬ್ಲೂ ಫ್ಲಾಗ್ ಕಡಲತೀರ ಅಭಿಯಾನದ ನಾಯಕ ಸಂಜಯ ಜಿಲ್ಲಾ ಅವರು ಪ್ರಕಟಣೆ ಹೊರಡಿಸಿದ್ದು ಕಾಸರಗೋಡ್ ಬೀಚ್ ಅಂತರರಾಷ್ಟ್ರೀಯ ಮನ್ನಣೆ ಪಡೆದಿರುವ ಕುರಿತು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಬರುವ ಪ್ರವಾಸಿಗರಿಗೆ ಸ್ವಚ್ಚ ಕಡಲ ತೀರದ ಜೊತೆಗೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸುವ ಮೂಲಕ ಇದೀಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳುವುದರಿಂದ ದೇಶ, ವಿದೇಶಗಳ ಪ್ರವಾಸಿಗರನ್ನು ಇತ್ತ ಸೆಳೆಯುವಲ್ಲಿ ಅನುಕೂಲವಾಗಲಿದೆ. ಡೆನ್ಮಾರ್ಕ್‌ನ ಪರಿಸರ ಶಿಕ್ಷಣ ಪ್ರತಿಷ್ಠಾನ ಪರಿಶೀಲನೆ ಬಳಿಕ ಬ್ಲ್ಯೂ ಫ್ಲಾಗ್ ಪ್ರಮಾಣ ಪತ್ರ ನೀಡಿದೆ. ಕಡಲ ತೀರದಲ್ಲಿನ ಅಭಿವೃದ್ಧಿ ಕಾರ್ಯಗಳು ಹಾಗೂ ಬೀಚ್ ಸ್ಥಿತಿಯನ್ನು ಆಧರಿಸಿ ಬ್ಲ್ಯೂ ಫ್ಲಾಗ್ ಪ್ರಮಾಣಪತ್ರ ನೀಡಲಾಗಿದೆ.

ಕಾಸರಗೋಡಿನಲ್ಲಿರುವ ಈ ಇಕೋ ಬೀಚ್ ಇದೀಗ ಅಂತರರಾಷ್ಟ್ರೀಯ ಮಟ್ಟದ ಬೀಚ್ ಆಗಿ ಮೇಲ್ದರ್ಜೆಗೇರಿದೆ. ಕಡಲ ತೀರಕ್ಕೆ ಬರುವ ಪ್ರವಾಸಿಗರಿಗೆ ಕುಳಿತುಕೊಳ್ಳುವ ಆಸನ ಸೇರಿದಂತೆ ಕುಡಿಯುವ ನೀರು, ಮಕ್ಕಳ ಆಟಿಕೆಗಳು ಜೀವರಕ್ಷಕ ಸಿಬ್ಬಂದಿ ಹಾಗೂ ಮುಖ್ಯವಾಗಿ ಕಡಲ ತೀರದ ಸ್ವಚ್ಛತೆಯನ್ನು ಕಾಯ್ದುಕೊಳ್ಳಲು ಪ್ರತ್ಯೇಕ ಸಿಬ್ಬಂದಿ ಒಳಗೊಂಡು ವಿನೂತನ ಮಾದರಿಯ ವ್ಯವಸ್ಥೆ ಒದಗಿಸಲಾಗಿದೆ.

ಆಧಾರ:ವಿಶ್ವವಾಣಿ, ದಿನಾಂಕ:12.10.2020.

### 2. 19 ಜಿಲ್ಲೆಗಳಿಗೆ ನೆರೆಘಾತ

ಮುಂಗಾರು ಹಂಗಾಮಿನಲ್ಲಿ ಎಡೆಬಿಡದೆ ಸುರಿದ ಮಳೆಯಿಂದಾಗಿ ರಾಜ್ಯದ 19 ಜಿಲ್ಲೆಗಳಲ್ಲಿ ರೂ.15 ಸಾವಿರ ಕೋಟಿಗಳಿಗೂ ಹೆಚ್ಚಿನ ಮೊತ್ತದ ಹಾನಿ ಸಂಭವಿಸಿರುವುದು ಜನರು ಮತ್ತು ರೈತರನ್ನು ಸಂಕಷ್ಟಕ್ಕೆ ದೂಡಿದೆ. ಇತ್ತ ಉತ್ತರ ಕರ್ನಾಟಕವನ್ನು ಕಂಗಾಲಾಗಿಸಿರುವ ಅಕ್ಟೋಬರ್ ಮಳೆಗೆ ರೂ. 2.54 ಲಕ್ಷ ಹೆಕ್ಟೇರ್ ಬೆಳೆಹಾನಿಯಾಗಿರುವುದು ಗಾಯದ ಮೇಲೆ ಬರೆ ಎಳೆದಿದೆ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರದಿಂದ ಅನುದಾನದ ನಿರೀಕ್ಷೆಯಲ್ಲಿರುವುದರಿಂದ ಪರಿಹಾರ ಕಾರ್ಯಗಳಿಗೆ ಅಡ್ಡಿಯಾಗಿದೆ. ಅಕ್ಟೋಬರ್ ಮಳೆ ಹಾಗೂ ಪ್ರವಾಹದ ಹಾನಿಯ ಅಂದಾಜು ಇನ್ನೂ ನಡೆಯಬೇಕಿರುವುದರಿಂದ ನಷ್ಟದ ಪ್ರಮಾಣ ಇನ್ನಷ್ಟು ಹೆಚ್ಚಾಗಲಿದೆ.

ರಾಜ್ಯದ ಮುಂಗಾರು ಹಂಗಾಮಿನ ಆರಂಭದಿಂದ(ಜೂನ್–ಸೆಪ್ಟೆಂಬರ್ ಅಂತ್ಯದವರೆಗೆ) ಒಟ್ಟಾರೆ ಶೇ.245 ಹೆಚ್ಚು ಮಳೆಯಾಗಿದೆ. ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಶೇ.83, ಉತ್ತರ ಒಳನಾಡಿನಲ್ಲಿ

ಜಿಲ್ಲೆಗಳಲ್ಲಿ ಶೇ.331, ಮಲೆನಾಡಿನ ಜಿಲ್ಲೆಗಳಲ್ಲಿ ಶೇ.198 ಹಾಗೂ ಕರಾವಳಿಯಲ್ಲಿ ಶೇ.435 ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲೂ ವಾಡಿಕೆಗಿಂತ ಶೇ.79 ಹೆಚ್ಚು ಮಳೆಯಾಗಿರುವುದು ವಿಶೇಷ. ಶಿವಮೊಗ್ಗ ಜಿಲ್ಲೆಯಲ್ಲಿ ಮಾತ್ರ ಶೇ.9 ಕಡಿಮೆ ಮಳೆ ದಾಖಲಾಗಿದೆ. ಸೆಪ್ಟೆಂಬರ್ ಅಂತ್ಯದ ತನಕ ಕೃಷಿ, ತೋಟಗಾರಿಕೆ, ತೋಟದ ಬೆಳೆಗಳು, ಮೂಲ ಸೌಕರ್ಯದಿಂದ ಆಗಿರುವ ನಷ್ಟದ ಅಂದಾಜು ರೂ.15,108 ಕೋಟಿಗಳೆಂದು ಅಂದಾಜು ಮಾಡಲಾಗಿದೆ.

ಈ ಹಾನಿಯನ್ನು ಎರಡು ಹಂತದಲ್ಲಿ ಅಂದಾಜು ಮಾಡಲಾಗಿತ್ತು. ಜುಲೈ 25 ರಿಂದ ಸೆಪ್ಟೆಂಬರ್ 15ರ ತನಕ ಆಗಿರುವ ಹಾನಿಯ ಪ್ರಮಾಣ ರೂ. 9,440 ಕೋಟಿಗಳಾಗಿದ್ದರೆ, ಸೆಪ್ಟೆಂಬರ್ 16 ರಿಂದ 30ರ ತನಕ ನಡೆದಿರುವ ನಷ್ಟದ ಅಂದಾಜು ರೂ.5667 ಕೋಟಿಗಳಾಗಿದೆ. ಅ.1 ರಿಂದ 15 ರ ತನಕ ಆಗಿರುವ ಮಳೆಯಿಂದ ಆದ ನಷ್ಟವನ್ನು ಅಂದಾಜು ಮಾಡುವ ಕಾರ್ಯ ನಡೆದಿದೆ.

ಕೇಂದ್ರ ಸರ್ಕಾರ ಎಸ್‌ಡಿಆರ್‌ಎಫ್ ನಿಧಿಯಲ್ಲಿ ರಾಜ್ಯಕ್ಕೆ ಪರಿಹಾರ ನೀಡಬೇಕಾಗುತ್ತದೆ. ನಿಯಮಾವಳಿಗಳ ಪ್ರಕಾರ ರಾಜ್ಯಕ್ಕೆ ರೂ.1,306ಕೋಟಿ ದೊರಕಬೇಕಾಗಿದೆ.

ಸೆಪ್ಟಂಬರ್‌ರವರೆಗಿನ ಮಳೆಯ ನಷ್ಟದ ಅಂದಾಜಿಗೆ ಕೇಂದ್ರ ಅಧ್ಯಯನ ತಂಡ ಬಂದು ಹೋಗಿದೆ. ಕೇಂದ್ರ ಗೃಹ ಸಚಿವಾಲಯವು ಅಧ್ಯಯನ ತಂಡದ ವರದಿಯನ್ನು ಪರಿಶೀಲನೆ ಮಾಡಬೇಕು, ಮಾರ್ಚ್‌ನಲ್ಲಿ ರಾಜ್ಯ ಸಲ್ಲಿಸಿದ್ದ ಮನವಿಗೆ ಆಗಸ್ಟ್‌ನಲ್ಲಿ ಕೇಂದ್ರದಿಂದ ರೂ.790.5 ಕೋಟಿ ಬಿಡುಗಡೆಯಾಗಿದೆ ಎಂದು ಕಂದಾಯ ಇಲಾಖೆಯ ಮೂಲಗಳು ಹೇಳಿವೆ.

ಕೇಂದ್ರದಿಂದ ಅಗತ್ಯ ನೆರವು: ಭಾರಿ ಮಳೆ, ಪ್ರವಾಹದಿಂದಾಗಿ ರಾಜ್ಯದಲ್ಲಿ ಉಂಟಾಗಿರುವ ಹಾನಿಯ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ, ಜನ–ಜೀವನ ಸಹಜ ಸ್ಥಿತಿಗೆ ತರುವುದಕ್ಕೆ ಅಗತ್ಯವಿರುವ ನೆರವನ್ನು ಕೇಂದ್ರ ಸರ್ಕಾರ ನೀಡಲಿದೆ ಎಂದು ರಾಜ್ಯಕ್ಕೆ ಅಭಯ ನೀಡಿದ್ದಾರೆ. ನೆರೆ ವಿಚಾರವಾಗಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರೊಂದಿಗೆ ಚರ್ಚಿಸಿರುವೆ. ನೊಂದವರ ಬೆನ್ನಿಗೆ ಕೇಂದ್ರ ನಿಲ್ಲಲಿದ್ದು, ಯುದ್ಧೋಪಾದಿಯಲ್ಲಿ ಸಾಗಿರುವ ರಕ್ಷಣೆ ಮತ್ತು ಪರಿಹಾರ ಕಾರ್ಯಗಳಿಗೆ ಸಾಧ್ಯವಾದ ಎಲ್ಲ ನೆರವು ಒದಗಿಸಲು ಬದ್ಧವೆಂದು ಮೋದಿ ಟ್ವೀಟ್ ಮಾಡಿದ್ದಾರೆ.

ಆಧಾರ:ವಿಜಯವಾಣಿ, ದಿನಾಂಕ:17.10.2020.

## 3. ಉತ್ತಮ ಆಳ್ವಿಕೆ ರಾಜ್ಯ ಕರ್ನಾಟಕ ನಂ.4

ದೇಶದಲ್ಲಿ ಉತ್ತಮ ಆಳ್ವಿಕೆ ನಡೆಯುತ್ತಿರುವ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ 4ನೇ ಸ್ಥಾನದಲ್ಲಿದೆ ಎಂದು ಬೆಂಗಳೂರಿನ ಸಂಸ್ಥೆಯೊಂದು ರ್‍ಯಾಂಕಿಂಗ್ ಪಟ್ಟಿ ಬಿಡುಗಡೆ ಮಾಡಿದೆ. ಸಾರ್ವಜನಿಕ ವ್ಯವಹಾರಗಳ ಸೂಚ್ಯಂಕ–2020ನ್ನು ಬಿಡುಗಡೆ ಮಾಡಿದೆ. ದೊಡ್ಡ ಸಣ್ಣ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶ ಎಂಬ ಮೂರು ವರ್ಗೀಕರಣ ಮಾಡಿ ಈ ರ್‍ಯಾಂಕಿಂಗ್‌ನ್ನು ನೀಡಲಾಗಿದೆ. ಸುಸ್ಥಿರ ಅಭಿವೃದ್ಧಿಯ ಸಮಗ್ರ ಸೂಚ್ಯಂಕವನ್ನು ಆಧರಿಸಿ ಸ್ಥಾನ ನೀಡಲಾಗಿದೆ.

ಆಧಾರ:ಕನ್ನಡ ಪ್ರಭ, ದಿನಾಂಕ:31.10.2020

## 4. ವಿಶ್ವದ ನಂ.1 ಪಟ್ಟಕ್ಕೇರಿದ ಕರ್ನಾಟಕ ಡಿಜಿಟಲ್ ಲೈಬ್ರರಿ

ಕೊರೋನಾ ವೈರಸ್ ಸಮುದಾಯಗಳ ಭೌತಿಕ ಅಂತರವನ್ನು ಹೆಚ್ಚು ಮಾಡಿದೆ. ಆದರೆ ಸಾಮಾಜಿಕ ಅಂತರವನ್ನು ಹತ್ತಿರ ಮಾಡಿದ್ದು ಅಂತರ್ಜಾಲ. ರಾಜ್ಯ ಸರ್ಕಾರದ ಸಾರ್ವಜನಿಕ ಗ್ರಂಥಾಲಯದ ಡಿಜಿಟಲ್ ಗ್ರಂಥಾಲಯ, ಜಗತ್ತಿನ ಡಿಜಿಟಲ್ ಲೈಬ್ರರಿ ವಿಭಾಗದಲ್ಲಿ ಕಳೆದ 8 ತಿಂಗಳಲ್ಲಿ ವಿಶ್ವದ 31 ಕೋಟಿ ಜನರಿಂದ ಗೂಗಲ್ ಸರ್ಚ್‌ಗೆ ಒಳಗಾಗಿದೆ ಜನರ ಡಿಜಿಟಲ್ ಹುಡುಕಾಟದಲ್ಲಿ ವಿಶ್ವದಲ್ಲಿಯೇ ನಂ.1 ಸ್ಥಾನಕ್ಕೇರಿದ ಹೆಗ್ಗಳಿಕೆಗೆ ಪಾತ್ರವಾಗಿದೆ.

ಈ ವರ್ಷದ ಆರಂಭದಲ್ಲಿ ಫೆಬ್ರವರಿ 26ರಂದು ಲೋಕಾರ್ಪಣೆಗೊಂಡಿರುವ ಕರ್ನಾಟಕ ಸರ್ಕಾರದ ಡಿಜಿಟಲ್ ಗ್ರಂಥಾಲಯ ಅಮೆರಿಕನ್ ಸಾರ್ವಜನಿಕ ಗ್ರಂಥಾಲಯಕ್ಕಿಂತಲೂ ಹೆಚ್ಚಿನ ಜನ ಹುಡುಕಾಡಿದ್ದಾರೆ. ಅಮೆರಿಕನ್ ಸಾರ್ವಜನಿಕ ಗ್ರಂಥಾಲಯ ಗೂಗಲ್ ಹುಡುಕಾಟದಲ್ಲಿ ಎರಡನೇ ಸ್ಥಾನದಲ್ಲಿದ್ದು, ನಮ್ಮ ದೇಶದ ನ್ಯಾಷನಲ್ ಡಿಜಿಟಲ್ ಲೈಬ್ರರಿ 3ನೇ ಸ್ಥಾನದಲ್ಲಿದೆ. ವಿಶ್ವದಲ್ಲಿ ಅತಿ ವೇಗವಾಗಿ ಜನರನ್ನು ತಲುಪುತ್ತಿರುವ ಡಿಜಿಟಲ್ ಲೈಬ್ರರಿ ಇದಾಗಿದೆ.

ಕೊರೋನಾ ಸಂದರ್ಭದಲ್ಲಿ ಸಾರ್ವಜನಿಕರಿಗೆ ವೃತ್ತ ಪತ್ರಿಕೆಗಳು ಹಾಗೂ ಪುಸ್ತಕ ಓದಲು ಅವಕಾಶ ಕಲ್ಪಿಸಲು ಸಾರ್ವಜನಿಕ ಗ್ರಂಥಾಲಯ ಇಲಾಖೆ 26 ನಗರ ಕೇಂದ್ರ ಗ್ರಂಥಾಲಯಗಳು, 30 ಜಿಲ್ಲಾ ಗ್ರಂಥಾಲಯ, 82 ವಾಚನಾಲಯ, 5766 ಗ್ರಾಮ ಪಂಚಾಯಿತಿ ಗ್ರಂಥಾಲಯಗಳು, 100 ಕೊಳಚೆ ಪ್ರದೇಶ ಗ್ರಂಥಾಲಯ, 127 ಅಲೆಮಾರಿ ಗ್ರಂಥಾಲಯ, 31 ಸಮುದಾಯದ ಮಕ್ಕಳ ಗ್ರಂಥಾಲಯ ಕಾರ್ಯ ನಿರ್ವಹಿಸುತ್ತಿದ್ದು, ಅವುಗಳಲ್ಲಿ ನಗರದ 26 ಜಿಲ್ಲಾ ಕೇಂದ್ರಗಳ 30 ಹಾಗೂ 216 ತಾಲ್ಲೂಕು ಗ್ರಂಥಾಲಯಗಳು ಸೇರಿ 272 ಗ್ರಂಥಾಲಯಗಳನ್ನು ಡಿಜಿಲೀಕರಣಗೊಳಿಸಲಾಗಿದೆ.

ರಾಜ್ಯ ಸರ್ಕಾರ ಆರಂಭಿಸಿರುವ ಡಿಜಿಟಲ್ ಲೈಬ್ರರಿಗೆ 8 ತಿಂಗಳಲ್ಲಿ 5.85 ಲಕ್ಷ ಸದಸ್ಯರು ನೋಂದಣಿಯಾಗಿದ್ದಾರೆ. ಇ-ಲೈಬ್ರರಿಯಲ್ಲಿ 14.44 ಲಕ್ಷ ಇ-ಕಂಟೆಂಟ್‌ಗಳನ್ನು ಸಾರ್ವಜನಿಕರು ಬಳಕೆ ಮಾಡಿಕೊಂಡಿದ್ದಾರೆ.

ರಾಜ್ಯ ಸರ್ಕಾರದ ಡಿಜಿಟಲ್ ಲೈಬ್ರರಿಯಲ್ಲಿ 4.30 ಲಕ್ಷ ವಿವಿಧ ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳು ಲಭ್ಯ ಇವೆ. 59900 ವಿಶ್ವದ ದಿನ ಪತ್ರಿಕೆಗಳು ಲಭ್ಯವಿದೆ. ಶೈಕ್ಷಣಿಕ ಮತ್ತು ಕಲಿಕೆಗೆ ಅಗತ್ಯವಿರುವ ಎಲ್ಲಾ ವಿಭಾಗಗಳಿಗೆ ಸಂಬಂಧಿಸಿದ ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು, ಮರಾಠಿ, ತಮಿಳು, ತೆಲುಗು ಭಾಷೆಯಲ್ಲಿ ಪಾಠಗಳನ್ನು ಒದಗಿಸಲಾಗಿದೆ. ರಾಜ್ಯ, ಸಿಬಿಎಸ್‌ಸಿ ಪಠ್ಯಕ್ರಮವನ್ನು ವಿದ್ಯಾರ್ಥಿಗಳ ಅನುಕೂಲಕ್ಕೆ ಡಿಜಿಟಲ್ ರೂಪದಲ್ಲಿ ಉಚಿತವಾಗಿ ಒದಗಿಸಲಾಗಿದೆ. ಕಲೆ ಮತ್ತು ಮಾನವಿಕತೆ, ವ್ಯಕ್ತಿತ್ವ, ಕೌಶಲ್ಯ ಮತ್ತು ಸಾಹಿತ್ಯ ಒಳಗೊಂಡಂತೆ ಸುಮಾರು 5 ಸಾವಿರಕ್ಕೂ ಹೆಚ್ಚು ಕನ್ನಡ ವಿಷಯಗಳಿವೆ. ರಾಜ್ಯ ಸರ್ಕಾರ ಹಾಗೂ ಸಿಬಿಎಸ್‌ಸಿ 1 ರಿಂದ 12 ನೇ ತರಗತಿವರೆಗಿನ ಎಲ್ಲಾ ಪಠ್ಯ-ಪುಸ್ತಕಗಳು ಮತ್ತು ವಿಡಿಯೋಗಳು ಲಭ್ಯವಿದೆ. ಕನ್ನಡ ಭಾಷೆಯಲ್ಲಿಯೇ ಸುಮಾರು 600 ಕ್ಕೂ ಹೆಚ್ಚು ವಿಡಿಯೋಗಳು ಲಭ್ಯ ಇವೆ.

ಈ ಯೋಜನೆಯ ಭಾಗವಾಗಿ ರಾಜ್ಯದ ವಿವಿಧ ಜಿಲ್ಲೆಗಳ 10 ಲಕ್ಷ ಸರ್ಕಾರಿ ಶಾಲೆ ಹಾಗೂ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಗುಣಮಟ್ಟದ ಕಲಿಕಾ ಸಾಮಗ್ರಿ ಒದಗಿಸಲಾಗಿದೆ.

**ಸ್ಪರ್ಧಾತ್ಮಕ ಪರೀಕ್ಷೆಗೂ ಮಾಹಿತಿ:** ಇ-ಲೈಬ್ರರಿಯಲ್ಲಿ ಐಐಟಿ, ಜೆಇಇ, ನೀಟ್, ಐಎಎಸ್, ಐಪಿಎಸ್ ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಗೆ ಅಗತ್ಯವಿರುವ ವಿಷಯಗಳನ್ನು ಅಳವಡಿಸಲಾಗಿದ್ದು, ಹೆಚ್ಚಿನ ವಿದ್ಯಾರ್ಥಿಗಳಿಗೆ ಇದು ಅನುಕೂಲಕರವಾಗಿದೆ.

ಇ-ಪ್ಲಾಟ್ ಫಾರ್ಮ ಬಳಕೆದಾರರಿಗೆ ವೆಬ್ ಮತ್ತು ಆ್ಯಪ್ ಆಧಾರಿತವಾಗಿದೆ. www.karnataka digitalpublic library.org ವೆಬ್‌ನಲ್ಲಿ ಲಭ್ಯವಿರುವ ಎಲ್ಲಾ ಮಾಹಿತಿಯು ಆ್ಯಪ್‌ನಲ್ಲಿಯೂ ಲಭ್ಯವಿದೆ. e-Sarvajanika Granthalaya ಪ್ಲೇಸ್ಟೋರ್‌ನಲ್ಲಿ ಲಭ್ಯವಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಣಜದ 800 ಇ-ಪುಸ್ತಕಗಳು, ನ್ಯಾಷನಲ್ ಎಮರ್ಜನ್ಸಿ ಲೈಬ್ರರಿ ಇ-ಪುಸ್ತಕಗಳು, ತಂತ್ರಜ್ಞಾನ ವರ್ಧಿತ ಕಲಿಕೆಯ ರಾಷ್ಟ್ರೀಯ ಕಾರ್ಯಕ್ರಮ, ಇ-ಜ್ಞಾನಕೋಶ, ಸ್ವಾಮಿ ಆನ್‌ಲೈನ್ ಕೋರ್ಸ್‌ಗಳು ಸಾಮಾಜಿಕ ವಿಜ್ಞಾನ, ಕಲೆ, ಲಲಿತಕಲೆ ಮತ್ತು ಮಾನವಿಕತೆ, ನೈಸರ್ಗಿಕ

ಮತ್ತು ಗಣಿತ ವಿಜ್ಞಾನದ 70 ಸ್ನಾತಕೋತ್ತರ ವಿಭಾಗದ 230000 ಇ–ಪಠ್ಯ ಪುಸ್ತಕ ಹಾಗೂ ವಿಡಿಯೋಗಳನ್ನು ಅಳವಡಿಸಲಾಗಿದೆ.

| ಇ–ಗ್ರಂಥಾಲಯದಲ್ಲಿ ನೋಂದಣಿಯಾದ ಟಾಪ್ 10 ಜಿಲ್ಲೆಗಳು | |
|---|---|
| ಬೆಂಗಳೂರು ನಗರ | 105015 |
| ರಾಯಚೂರು | 62036 |
| ಯಾದಗಿರಿ | 36096 |
| ರಾಮನಗರ | 32507 |
| ಬಾಗಲಕೋಟೆ | 26060 |
| ತುಮಕೂರು | 19438 |
| ದಕ್ಷಿಣ ಕನ್ನಡ | 15193 |
| ಹಾಸನ | 11535 |
| ಬೆಳಗಾವಿ | 11397 |
| ಉಡುಪಿ | 10617 |

ಆಧಾರ: ಉದಯವಾಣಿ, ದಿನಾಂಕ:01.11.2020.

## 5. ಸರಳ ರಾಜ್ಯೋತ್ಸವಕ್ಕೆ ಕನ್ನಡ ಕಂಪು

ಕೊರೋನಾ ಸೋಂಕಿನ ಅಟ್ಟಹಾಸ ಹಾಗೂ ಸಾಮಾಜಿಕ ಅಂತರದ ಕಟ್ಟಳೆಯ ಪರಿಣಾಮವಾಗಿ ಇದೇ ಮೊದಲ ಬಾರಿಗೆ ಬೆಂಗಳೂರು ನಗರವು ಸೇರಿದಂತೆ ರಾಜ್ಯಾದ್ಯಂತ ಸರಳ ಕರ್ನಾಟಕ ರಾಜ್ಯೋತ್ಸವ ಆಚರಿಸಲಾಯಿತು.

ನಾಡಿನೆಲ್ಲೆಡೆ ಕನ್ನಡಾಂಬೆಯ ಉತ್ಸವವನ್ನು ಅನಿವಾರ್ಯವಾಗಿ ಸರಳ ಹಾಗೂ ವಿರಳ ಜನಸಂದಣಿಯ ನಡುವೆ ಆಚರಿಸಿರುವುದು ಕಂಡು ಬಂತು. ಒಂದೆಡೆ ಕೊರೋನಾ ಹಿನ್ನೆಲೆಯಲ್ಲಿ ಶಾಲಾ–ಕಾಲೇಜುಗಳಿಗೆ ರಜೆ ಘೋಷಣೆ ಮತ್ತೊಂದೆಡೆ ಭಾನುವಾರ ರಜಾದಿನವು ಆಗಿರುವುದರಿಂದ ರಾಜ್ಯೋತ್ಸವ ಆಚರಣೆಯ ಆಡಂಬರ ಕಂಡುಬರಲಿಲ್ಲ.

ಪ್ರತಿವರ್ಷ ರಾಜ್ಯೋತ್ಸವ ಆಚರಣೆ ವೇಳೆ ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳಿಂದ ನಡೆಯುತ್ತಿದ್ದ ತಾಯಿ ಭುವನೇಶ್ವರಿಯ ಭಾವಚಿತ್ರ ಮೆರವಣಿಗೆ, ಜಾನಪದ ತಂಡಗಳ ಸಂಭ್ರಮ, ಕನ್ನಡ ನಾಡು–ನುಡಿ–ನೆಲದ ಸೇವೆಗೆ ಕೊಡುಗೆ ನೀಡಿದ ಮಹನೀಯರ ಛದ್ಮವೇಷಗಳ ಪ್ರದರ್ಶನಗಳು, ವೀರಗಾಸೆಗಳು, ಕನ್ನಡದ ಉತ್ಸಾಹ ಚಿಮ್ಮಿಸುವ ಚಲನಚಿತ್ರ ಗೀತೆಗಳ ವೈಭವ ಈ ಬಾರಿ ಕಂಡು ಬರಲಿಲ್ಲ.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ರಾಜ್ಯೋತ್ಸವದ ಸರಳ ಸಮಾರಂಭದಲ್ಲಿ ಮುಖ್ಯಮಂತ್ರಿ ಅವರು, ಇಂದಿನಿಂದ ವರ್ಷಪೂರ್ತಿ ಕನ್ನಡ ಕಾಯಕವರ್ಷ ಎಂದು ಆಚರಿಸಲಾಗುವುದು ಎಂದು

ಘೋಷಿಸಿದರು. ಕನ್ನಡ ಭಾಷೆಯ ಅಭಿವೃದ್ಧಿ, ಕನ್ನಡದ ಏಳ್ಗೆಗಾಗಿ ರಚನಾತ್ಮಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುವುದು ಎಂದು ಹೇಳಿದರು.

ಆದರೆ ಬೆಂಗಳೂರಿನ ಬೀದಿ ಬೀದಿಗಳಲ್ಲಿ ಕನ್ನಡಪರ ಸಂಘಟನೆಗಳು ಪ್ರತಿ ವರ್ಷದಂತೆ ಈ ಬಾರಿಯೂ ರಾಜ್ಯೋತ್ಸವ ಆಚರಣೆ, ಅಬ್ಬರದ ಕನ್ನಡದ ಗೀತೆಗಳು, ಅನ್ನಸಂತರ್ಪಣೆಯಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರೂ ಕೂಡ ಪ್ರತಿವರ್ಷ ಕಂಡುಬರುತ್ತಿದ್ದ ಅಬ್ಬರ ಈ ಬಾರಿ ಇರಲಿಲ್ಲ. ನಗರದ ಪ್ರಮುಖ ವೃತ್ತಗಳಲ್ಲಿ ಕನ್ನಡಪರ ಸಂಘಟನೆಗಳು, ಯುವಕ ಮಂಡಳಿಗಳು ಇಂದು ಕೂಡ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿದ್ದರು ಅಷ್ಟೊಂದು ಜನಸಂದಣಿ ಕಂಡು ಬರಲಿಲ್ಲ. ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕಾದ ಅನಿವಾರ್ಯತೆಯಿಂದ ಆಯಾ ಸಂಘಟನೆಗಳ ಪದಾಧಿಕಾರಿಗಳು ಮಾತ್ರ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದುದ್ದು ಕಂಡುಬಂತು.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭ ಕೂಡ ಈ ಬಾರಿ ಜರುಗಲಿಲ್ಲ. ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುತ್ತಿದ್ದ ಸಾಂಪ್ರಾದಾಯಿಕ ಕಾರ್ಯಕ್ರಮ ನಡೆಯಲಿಲ್ಲ. ಕೊರೋನಾ ಪಿಡುಗಿನಿಂದ ನಾಡಿನ ಜನಜೀವನ ತತ್ತರಿಸಿದ್ದು, ಸಾಮಾಜಿಕ ಅಂತರದ ನಿರ್ಬಂಧದ ಪರಿಣಾಮವಾಗಿ ಕನ್ನಡಾಂಬೆಯ ಆರಾಧನೆಯ ಉತ್ಸವ ನೀರಸವಾಗಿ ನಡೆದು ಇತಿಹಾಸದ ಕಾಲಗರ್ಭ ಸೇರಿದೆ.

**ಕನ್ನಡಗರಿಗೆ ಕನ್ನಡದಲ್ಲೇ ಶುಭಾಶಯ ಕೋರಿದ ಮೋದಿ:** ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಟ್ವಿಟರ್ ಮೂಲಕ ರಾಜ್ಯದ ಜನತೆಗೆ ಕನ್ನಡದಲ್ಲೇ ರಾಜ್ಯೋತ್ಸವದ ಶುಭಾಶಯ ಕೋರಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಕೂಡ ರಾಜ್ಯದ ಜನತೆಗೆ ಕನ್ನಡದಲ್ಲೇ ಶುಭ ಹಾರೈಸಿದ್ದು, ರಾಷ್ಟ್ರದ ಅಭಿವೃದ್ಧಿ ಮತ್ತು ಪ್ರಗತಿಯಲ್ಲಿ ಕರ್ನಾಟಕ ಸದಾ ಮಹತ್ವದ ಪಾತ್ರವನ್ನು ನಿಭಾಯಿಸುತ್ತಾ ಬಂದಿದೆ. ಮುಂಬರುವ ವರ್ಷಗಳಲ್ಲೂ ರಾಜ್ಯ ಮತ್ತಷ್ಟು ಸಮೃದ್ಧಿ ಹೊಂದಿ ಪ್ರಗತಿ ಸಾಧಿಸಲಿ ಎಂದಿದ್ದಾರೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಇಂಗ್ಲೀಷ್‌ನಲ್ಲಿ ರಾಜ್ಯದ ಜನತೆಗೆ ಶುಭ ಕೋರಿ, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಕಾರ್ಯವೈಖರಿಯನ್ನು ಪ್ರಶಂಸಿಸಿದ್ದಾರೆ.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:02.11.2020.

## 6. ರಾಜ್ಯಾದ್ಯಂತ ಸಂಭ್ರಮದ 65ನೇ ರಾಜ್ಯೋತ್ಸವ

ಕೋವಿಡ್–19 ಹಿನ್ನೆಲೆಯಲ್ಲಿ ರಾಜ್ಯಾದ್ಯಂತ 65ನೇ ಕನ್ನಡ ರಾಜ್ಯೋತ್ಸವವನ್ನು ಸರಳವಾಗಿ ಆಚರಿಸಲಾಯಿತು. ಬಹುತೇಕ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಉಸ್ತುವಾರಿ ಸಚಿವರು ಧ್ವಜಾರೋಹಣ ನೆರವೇರಿಸಿದ್ದಾರೆ. ಬೆಳಗಾವಿಯಲ್ಲಿ ಕಲ್ಲು ತೂರಾಟ, ಲಾಠಿಪ್ರಹಾರ, ಕುಬುರಗಿಯಲ್ಲಿ ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಧ್ವಜಾರೋಹಣಕ್ಕೆ ಯತ್ನಿಸಿದ ಘಟನೆ ಹೊರತುಪಡಿಸಿ ಬಹುತೇಕ ಎಲ್ಲಾ ಕಡೆ ಶಾಂತಿಯುತವಾಗಿ ಕನ್ನಡ ರಾಜ್ಯೋತ್ಸವ ಆಚರಿಸಲಾಗಿದೆ.

ಕೊಟ್ಟೂರಿನ ಕೊಟ್ಟೂರೇಶ್ವರ ಸ್ವಾಮಿಗೆ ಕಂಪು ಮತ್ತು ಹಳದಿ ವಸ್ತ್ರಗಳಿಂದ ಶೃಂಗರಿಸಿ ವಿಶೇಷ ಪೂಜೆ ಸಲ್ಲಿಸಲಾಗಿದ್ದರೆ, ಬಳ್ಳಾರಿಯ ಕೋಟೆಯ ಮೇಲೆ 65 ಅಡಿ ಉದ್ದದ ಕನ್ನಡ ಧ್ವಜವನ್ನು ಹಾರಿಸಿ ಕನ್ನಡದ ಪ್ರೇಮ ಮೆರೆಯಲಾಗಿದೆ. ಧ್ವಜಾರೋಹಣದ ವೇಳೆ ರಾಯಚೂರು, ಬೆಳಗಾವಿ ಸೇರಿದಂತೆ ವಿವಿಧೆಡೆ ಕೊರೋನಾ ವಾರಿಯರ್ಸ್‌ಗಳನ್ನು ಸನ್ಮಾನಿಸಲಾಗಿದೆ. ಚಿತ್ರದುರ್ಗ, ಉಡುಪಿ ಸೇರಿದಂತೆ ಹಲವು ಕಡೆ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು.

ಬೆಂಗಳೂರು ನಗರದಲ್ಲಿರುವ ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಆಯೋಜಿಸಿದ್ದ ರಾಜ್ಯೋತ್ಸವ ಸಮಾರಂಭದಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಭುವನೇಶ್ವರಿ ದೇವಿಗೆ ಪುಷ್ಪನಮನ ಹಾಗೂ ಧ್ವಜಾರೋಹಣ ನೆರವೇರಿಸಿದರು.

ರಾಯಚೂರಿನಲ್ಲಿ ಡಿಸಿಎಂ ಲಕ್ಷ್ಮಣ ಸವದಿ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ನಮ್ಮ ಕನ್ನಡ ಭಾಷೆ ಸಮೃದ್ಧವಾಗಿದೆ ಎಂದು ನಾವು ಕೈ ಕಟ್ಟಿ ಕುಳಿತುಕೊಳ್ಳಬಾರದು. ಅನ್ಯ ಭಾಷೆಗಳ ಅತಿಯಾದ ದಾಳಿ, ಆಧುನಿಕ ಶಿಕ್ಷಣ ವಿಷಯದಲ್ಲಿ ಎಚ್ಚರಿಕೆ ವಹಿಸಿ ಯುವಜನಾಂಗದಲ್ಲಿ ಕನ್ನಡದ ಬಗ್ಗೆ ಇನ್ನಷ್ಟು ಪ್ರೀತಿ ಮತ್ತು ಕಾಳಜಿ ಮೂಡಿಸಬೇಕು ಎಂದರು.

ಚಿಕ್ಕಬಳ್ಳಾಪುರದಲ್ಲಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ರಾಜ್ಯದಲ್ಲಿ ಆಡಳಿತ ಭಾಷೆಯಾಗಿ ಕನ್ನಡ ಪರಿಪೂರ್ಣವಾಗಿ ಅನುಷ್ಠಾನಗೊಳ್ಳುವ ಅಗತ್ಯವಿದ್ದು, ನ್ಯಾಯಾಲಯಗಳಲ್ಲಿ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡ ಪ್ರಧಾನ ಭಾಷೆಯಾಗಬೇಕಿದೆ ಎಂದರು.

ಬೆಳಗಾವಿಯಲ್ಲಿ ಜಲಸಂಪನ್ಮೂಲ ಸಚಿವ ರಮೇಶ್ ಜಾರಕಿ ಹೋಳಿ ನಾಡದೇವಿ ಭುವನೇಶ್ವರಿಗೆ ಪುಷ್ಪಾರ್ಚನೆ ಮಾಡಿ, ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು. ಇದೇ ವೇಳೆ 19 ವಾರಿಯರ್ಸ್‌ಗಳನ್ನು ಸನ್ಮಾನಿಸಿದರು. ಬಾಗಲಕೋಟೆ ಜಿಲ್ಲೆಯಲ್ಲಿ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಧ್ವಜಾರೋಹಣ ನೆರವೇರಿಸಿದರು. ಹಾವೇರಿಯಲ್ಲಿ ಗೃಹ ಸಚಿವ ಬಸವರಾಜ್ ಬೊಮ್ಮಾಯಿ, ಕೊಪ್ಪಳದಲ್ಲಿ ಕೃಷಿ ಸಚಿವ ಬಿ.ಸಿ.ಪಾಟೀಲ್, ಮೈಸೂರಿನಲ್ಲಿ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ಧಾರವಾಡದಲ್ಲಿ ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್, ಗದಗದಲ್ಲಿ ಗಣಿ ಸಚಿವ ಸಿ.ಸಿ ಪಾಟೀಲ್, ಕಾರವಾರದಲ್ಲಿ ಕಾರ್ಮಿಕ ಸಚಿವ ಶಿವರಾಮ್ ಹೆಬ್ಬಾರ್, ಶಿವಮೊಗ್ಗದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ, ತುಮಕೂರಲ್ಲಿ ಕಾನೂನು ಸಚಿವ ಮಾಧುಸ್ವಾಮಿ, ಚಿತ್ರದುರ್ಗದಲ್ಲಿ ಸಮಾಜ ಕಲ್ಯಾಣ ಸಚಿವ ಬಿ.ಶ್ರೀರಾಮುಲು ಧ್ವಜಾರೋಹಣ ನೆರವೇರಿಸಿದರು.

ಆಧಾರ:ಕನ್ನಡ ಪ್ರಭ, ದಿನಾಂಕ:02.11.2020.

## 7. 'ಕುವೆಂಪು ಸಮಗ್ರ' ಸಾಹಿತ್ಯ ಸರಣಿ, ಡಿಜಿಟಲ್ ಆವೃತ್ತಿ ಬಿಡುಗಡೆ

ರಾಷ್ಟ್ರಕವಿ ಕುವೆಂಪು ಅವರ ಸಮಗ್ರ ಸಾಹಿತ್ಯ ಪುಸ್ತಕಗಳನ್ನು ಸರಣಿ ಹಾಗೂ ಅದರ ಡಿಜಿಟಲ್ ಆವೃತ್ತಿಯನ್ನು ಕರ್ನಾಟಕ ರಾಜ್ಯೋತ್ಸವ ದಿನವಾದ ವಿಧಾನ ಸೌಧದಲ್ಲಿ ಲೋಕಾರ್ಪಣೆಗೊಳಿಸಲಾಯಿತು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗ ಹೊರತಂದಿರುವ ಕುವೆಂಪು ಸಮಗ್ರ ಸಾಹಿತ್ಯ ಪುಸ್ತಕಗಳ ಸರಣಿ ಮತ್ತು ಉನ್ನತ ಶಿಕ್ಷಣ ಸಚಿವರು ಆದ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಬಿಡುಗಡೆಗೊಳಿಸಿದರು.

12,000 ಪುಟಗಳ ಪುಸ್ತಕಗಳ ಸರಣಿಗೆ ರೂ.10,000 ಬೆಲೆ ನಿಗದಿಪಡಿಸಲಾಗಿದ್ದು, ರಾಜ್ಯೋತ್ಸವದ ಪ್ರಯುಕ್ತ ನವೆಂಬರ್ ತಿಂಗಳಲ್ಲಿ ಶೇ.50 ರಷ್ಟು ರಿಯಾಯಿತಿ ನೀಡಲಾಗುತ್ತಿದೆ. ಜೊತೆಗೆ, ಡಿಜಿಟಲ್ ಆವೃತ್ತಿಯ ಇ–ಪುಸ್ತಕಗಳನ್ನು ಗೂಗಲ್ ಪ್ಲೇ ಬುಕ್ಸ್ ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ಶೇ.20ರಷ್ಟು ಪಠ್ಯವನ್ನು ಉಚಿತವಾಗಿ ಓದಬಹುದು.

**ಕನ್ನಡ ತಂತ್ರಜ್ಞಾನ ಅಭಿವೃದ್ಧಿ ತಂಡ ರಚನೆ:** ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದು ರಾಷ್ಟ್ರಕವಿ ಕುವೆಂಪು ಅವರ ಸಾಹಿತ್ಯ. ಇಂಥ ಸಾಹಿತ್ಯವನ್ನು ಡಿಜಿಟಲ್ ರೂಪಕ್ಕೆ ತಂದಿರುವುದು ಮಹತ್ವದ ಬೆಳವಣಿಗೆ, ಇದರಿಂದ ಹೆಚ್ಚು ಓದುಗರಿಗೆ ಸಾಹಿತ್ಯ ತಲುಪಿಸಲು ಅನುಕೂಲವಾಗಲಿದೆ' ಎಂದು ಅಶ್ವತ್ಥನಾರಾಯಣ ಹೇಳಿದರು. ಕನ್ನಡಿಗರು ಹಾಗೂ ಕನ್ನಡೇತರರ ನಡುವೆ ದಿನನಿತ್ಯದ ಸಂವಹನ ಹಾಗೂ ವ್ಯವಹಾರಗಳನ್ನು ಅಡೆತಡೆಯಿಲ್ಲದೆ ಕನ್ನಡದ ಮೂಲಕವೇ ನಡೆಸಲು ಸಾಧ್ಯವಾಗುವಂತೆ ಮಾಡಬೇಕಿದೆ. ಇದರ ಜೊತೆಗೆ ಇತರೆ ತಾಂತ್ರಿಕ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲು ಕನ್ನಡ ತಂತ್ರಜ್ಞಾನ ಅಭಿವೃದ್ಧಿ ತಂಡ ರಚಿಸಲು ತಿರ್ಮಾನಿಸಲಾಗಿದೆ. 'ನವೋದ್ಯಮ ವಿಷನ್ ಗ್ರೂಪ್ ನೇತೃತ್ವದಲ್ಲಿ ಈ ತಂಡ ಕೆಲಸ ಮಾಡಲಿದೆ' ಎಂದು ಅವರು ತಿಳಿಸಿದರು.

ಆಧಾರ: ಪ್ರಜಾವಾಣಿ, ದಿನಾಂಕ:03.11.2020.

## 8. ಕನ್ನಡ ಕಾಯಕ ಲಾಂಛನ ಬಿಡುಗಡೆ

ರಾಜ್ಯ ಸರ್ಕಾರ ಘೋಷಣೆ ಮಾಡಿರುವ ಕನ್ನಡ ಕಾಯಕ ವರ್ಷಾಚರಣೆ–2020ಕ್ಕೆ ಸಂಬಂಧಿಸಿದಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸಿದ್ದಪಡಿಸಿರುವ ಲಾಂಛನವನ್ನು ಅಧ್ಯಕ್ಷ ಟಿ.ಎಸ್. ನಾಗಾಭರಣ ಅನಾವರಣ ಮಾಡಿದರು. ವಿಧಾನ ಸೌಧದಲ್ಲಿನ ಕಚೇರಿಯಲ್ಲಿ ಲಾಂಛನ ಬಿಡುಗಡೆ ಜೊತೆಗೆ ಕನ್ನಡ ಕಾಯಕ ವರ್ಷಕ್ಕೂ ಚಾಲನೆ ನೀಡಿದರು.

ಆಡಳಿತದಲ್ಲಿ ಕನ್ನಡತನವುಳ್ಳ ತಂತ್ರಜ್ಞಾನವನ್ನು ಹೆಚ್ಚೆಚ್ಚು ಬಳಸುವ ಮೂಲಕ ನಮ್ಮ ಭಾಷೆಗೆ ವಿಶ್ವಮಾನ್ಯತೆ ದೊರಕಿಸಿಕೊಡುವ ನಿಟ್ಟಿನಲ್ಲಿ ಪ್ರಾಧಿಕಾರ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ ಎಂದು ನಾಗಾಭರಣ ಹೇಳಿದರು.

ವಿವಿಧ ರಂಗಗಳ ಜನರು ಸುಲಭವಾಗಿ ಕಲಿಯುವಂತಾಗಲು ಆರಂಭಿಕ ಕ್ರಮವಾಗಿ ಇ–ಕನ್ನಡ ಕಲಿಕಾ ಅಕಾಡೆಮಿ ಪೋರ್ಟಲ್ ಆರಂಭಿಸಲಾಗಿದೆ. ಇಲ್ಲಿ ಕನ್ನಡ ಕಲಿಕೆ, ಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಕಾಲಕಾಲಕ್ಕೆ ಪ್ರಕಟಿಸಲಾಗುತ್ತದೆ. ರಾಜ್ಯ, ದೇಶ ಮತ್ತು ವಿದೇಶದಲ್ಲಿ ನೆಲೆಸಿರುವ ಕನ್ನಡಿಗರಿಗೆ ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ಉದ್ಯೋಗ ಪಡೆಯಲು ಸಹಕಾರಿಯಾಗಲು ಹಾಗೂ ಅವರಿಗೆ ಉನ್ನತ ಶಿಕ್ಷಣದಲ್ಲಿ ಅವಕಾಶ ಸಿಗುವ ನಿಟ್ಟಿನಲ್ಲಿ ಕನ್ನಡ ಭಾಷಾ ಕೌಶಲ ಆನ್‌ಲೈನ್ ಪರೀಕ್ಷೆ ವ್ಯವಸ್ಥೆಯನ್ನು ರೂಪಿಸಲಾಗಿದೆ ಎಂದು ಮಾಹಿತಿ ನೀಡಿದರು.

'ಕರ್ನಾಟಕ ಡಾಟ್ ಭಾರತ' ಎಂಬ ಯುಆರ್‌ಎಲ್‌ಅನ್ನು ಕೇಂದ್ರ ಸರ್ಕಾರದ ನ್ಯಾಷನಲ್ ಇಂಟರ್ನೆಟ್ ಎಕ್ಸ್‌ಚೇಂಜ್ ಆಫ್ ಇಂಡಿಯಾ (ನಿಕ್ಸಿ) ಕರ್ನಾಟಕ ಸರ್ಕಾರದ ಬಳಕೆಗಾಗಿ ಮೀಸಲಿಟ್ಟಿದೆ. ಅದನ್ನು ಪಡೆಯುವ ದೃಷ್ಟಿಯಿಂದ ಇ–ಆಡಳಿತ ಇಲಾಖೆಯ ಮೂಲಕ ನೋಂದಣಿ ಪ್ರಕ್ರಿಯೆ ನಡೆಯುತ್ತಿದೆ. ಇದು ಜಾರಿಯಾದಲ್ಲಿ ಇ–ಮೇಲ್ ವಿಳಾಸಗಳನ್ನು ಕನ್ನಡದಲ್ಲಿಯೇ ರಚಿಸಿಕೊಳ್ಳಬಹುದಾಗಿದೆ ಎಂದು ವಿವರಿಸಿದರು.

ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿರುವ ಸಾವಿರಕ್ಕೂ ಹೆಚ್ಚು ಜಾಲ ತಾಣಗಳಲ್ಲಿ ಸಂಪೂರ್ಣ ಕನ್ನಡವನ್ನು ಬಳಸುವ ನಿಟ್ಟಿನಲ್ಲಿ ಎಲ್ಲ ಇಲಾಖೆಗಳಿಗೂ ಮುಖ್ಯ ಕಾರ್ಯದರ್ಶಿ ಆದೇಶ ಹೊರಡಿಸಲಿದ್ದು, ಕನ್ನಡ ಕಾಯಕ ವರ್ಷದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದಾಗಿ ನಾಗಾಭರಣ ತಿಳಿಸಿದರು.

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ಪ್ರಾಥಮಿಕ ಹಂತದ ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲಿ ರೂಪಿಸಲು ಅಗತ್ಯ ಕಾನೂನು ಜಾರಿಗೊಳಿಸುವುದು ಪ್ರಾಧಿಕಾರದ ಆಶಯವಾಗಿದೆ. ಪ್ರಾಧಿಕಾರದ ಸದಸ್ಯರಾದ ವಿಜಯಲಕ್ಷ್ಮಿ ಬಾಳೆಕುಂದ್ರಿ, ಅಬ್ದುಲ್ ರೆಹೆಮಾನ್ ಪಾಷಾ, ಡಾ.ಗುಬ್ಬಿಗೂಡು ರಮೇಶ್, ಡಾ.ಕಿಶೋರ್, ಸುರೇಶ ಬಡಿಗೇರ್, ಕಬ್ಬಿನಲೆ ವಸಂತ ಭಾರದ್ವಾಜ್, ಪ್ರಾಧಿಕಾರದ ಕಾರ್ಯದರ್ಶಿ ಡಾ.ಕೆ.ಮುರಳೀಧರ, ಆಪ್ತ ಕಾರ್ಯದರ್ಶಿ ಡಾ.ವೀರಶೆಟ್ಟಿ, ಕನ್ನಡ ಕಾಯಕ ಪಡೆಯ ಪದಾಧಿಕಾರಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಆಧಾರ: ವಿಜಯವಾಣಿ, ದಿನಾಂಕ:06.11.2020.

## 9. ಕನ್ನಡ ಕಲಿಸಿ, ಇಲ್ಲ ಬಿಡುಗಡೆಗೊಳಿಸಿ

ರಾಜ್ಯದಲ್ಲಿ ಕಾರ್ಯನಿರ್ವಹಿಸುವ ಬ್ಯಾಂಕ್‌ಗಳ ನೌಕರರಿಗೆ ಕನ್ನಡ ಕಲಿಸಬೇಕು, ಕಲಿಯದ ನೌಕರರನ್ನು ಸೇವೆಯಿಂದ ಬಿಡುಗಡೆ ಮಾಡುವಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ತಾಕೀತು ಮಾಡಿದೆ. ರಾಜ್ಯಮಟ್ಟದ ಬ್ಯಾಂಕರ್‌ಗಳ ಸಮಿತಿಯೊಂದಿಗೆ ಆನ್‌ಲೈನ್ ಸಭೆ ನಡೆಸಿದ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ, ಬಹುತೇಕ ಬ್ಯಾಂಕ್‌ಗಳು ರಾಜ್ಯದ ಭಾಷಾ ನೀತಿಯನ್ನೇ ಉಲ್ಲಂಘನೆ ಮಾಡುತ್ತಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬ್ಯಾಂಕ್‌ಗಳಲ್ಲಿ ಸಿ ಮತ್ತು ಡಿ ಹುದ್ದೆಯಲ್ಲಿರುವ ಕನ್ನಡ ಬಾರದ ಕನ್ನಡೇತರರ ಮೇಲೆ ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲದಿರುವ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು. ಕನ್ನಡೇತರರು ನೇಮಕಾತಿ ಆದ 6 ತಿಂಗಳಿನಲ್ಲಿ ಕನ್ನಡ ಓದಲು ಮತ್ತು ಬರೆಯಲು ಕಲಿತು ಗ್ರಾಹಕರೊಂದಿಗೆ ಸಂವಹನ ನಡೆಸಬೇಕು. ಆದರೆ ನೇಮಕಾತಿ ಆಗಿ ಐದಾರು ವರ್ಷ ಕಳೆದರೂ ಕನ್ನಡ ಕಲಿಯದ ನೌಕರರ ವಿರುದ್ಧ ಕ್ರಮ ಕೈಗೊಂಡಿಲ್ಲ. ಈಗಲಾದರೂ ಕನ್ನಡ ಬಾರದ ಅಧಿಕಾರಿಗಳಿಗೆ ಕನ್ನಡ ಕಲಿಸುವ ಕೆಲಸ ಆಗಬೇಕು ಎಂದು ಸೂಚಿಸಿದರು.

**ಸ್ಥಳೀಯ ಭಾಷೆಯಲ್ಲಿ ಪರೀಕ್ಷೆ ನಡೆಯಲಿ:** ಸ್ಥಳೀಯ ಭಾಷೆಯಲ್ಲಿ ಪರೀಕ್ಷೆ ಎದುರಿಸಲು ಸಹಕಾರಿಯಾಗುವ ನಿಟ್ಟಿನಲ್ಲಿ ನಿಯಾಮಾವಳಿ ಬದಲಾಯಿಸುವ ಅಗತ್ಯವಿದೆ. ಕರ್ನಾಟಕದವರಿಗೆ ಬ್ಯಾಂಕಿಂಗ್ ಹುದ್ದೆಗಳಿಗೆ ಆಯ್ಕೆಯಾಗಲು ಇರುವ ಮಾನದಂಡಗಳಿಗೆ ಪೂರಕವಾದ ಕೌಶಲ ತರಬೇತಿ ನೀಡಿದಲ್ಲಿ ಕನ್ನಡಿಗರು ಆಯ್ಕೆಯಾಗಲು ಸಹಕಾರಿಯಾಗುತ್ತದೆ ಎಂದಿ ನಾಗಾಭರಣ ಹೇಳಿದರು.

ಆಧಾರ: ವಿಜಯವಾಣಿ, ದಿನಾಂಕ:12.11.2020.

## 10. ಕನ್ನಡ ವರ್ಷ:19 ಅಂಶ ಜಾರಿ ಕಡ್ಡಾಯ

ನವೆಂಬರ್‌ನಿಂದ ಮುಂದಿನ ಒಂದು ವರ್ಷ ಕಾಲವನ್ನು ಕನ್ನಡ ಕಾಯಕ ವರ್ಷಾಚರಣೆ ಎಂದು ಇತ್ತೀಚೆಗೆ ಘೋಷಿಸಿದ್ದ ರಾಜ್ಯ ಸರ್ಕಾರ, ಈ ಅವಧಿಯಲ್ಲಿ ಕನ್ನಡ ನಾಡು ನುಡಿ ಉಳಿಸಿ ಬೆಳೆಸುವ ನಿಟ್ಟಿನಲ್ಲಿ 19 ಅಂಶಗಳನ್ನು ಕಡ್ಡಾಯ ಅನುಷ್ಠಾನಕ್ಕೆ ಎಲ್ಲ ಇಲಾಖೆಗಳು ಹಾಗೂ ಜಿಲ್ಲಾಡಳಿತಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಸರ್ಕಾರ ಯೋಜನೆಗಳಿಗೆ ಅರ್ಜಿ ಸಲ್ಲಿಸಿದವರಿಗೆ ಕನ್ನಡದಲ್ಲೇ ಎಸ್ಸೆಮ್ಮೆಸ್, ಇ-ಮೇಲ್ ಹಾಗೂ ಸ್ವೀಕೃತಿ ಸಂದೇಶ ನೀಡಬೇಕು. ರಾಜ್ಯ ಸರ್ಕಾರ/ಗುತ್ತಿಗೆ/ಹೊರಗುತ್ತಿಗೆ ನೌಕರರ ನೇಮಕಾತಿಯಲ್ಲಿ ಕಡ್ಡಾಯವಾಗಿ ಕನ್ನಡಿಗರನ್ನೇ ಒದಗಿಸುವಂತೆ ಮಾನವ ಸಂಪನ್ಮೂಲ ಸೇವೆ ನೀಡುವ ಸಂಸ್ಥೆಗಳಿಗೆ ಷರತ್ತು ವಿಧಿಸಿ ಅನುಪಾಲನೆ ಮಾಡಬೇಕು. ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ನೀಡುವ ಎಲ್ಲಾ ಸೇವೆ/ದಾಖಲೆಗಳು ಕನ್ನಡದಲ್ಲಿ ಸಹ ಇರಬೇಕು ಎಂಬುದು ಸೇರಿ ಒಟ್ಟು 19 ಅಂಶಗಳ ಜಾರಿಗೆ ಮುಖ್ಯ ಕಾರ್ಯದರ್ಶಿ ಟಿ.ಎಂ ವಿಜಯಭಾಸ್ಕರ್ ಸುತ್ತೋಲೆ ಹೊರಡಿಸಿದ್ದಾರೆ.

ಎಲ್ಲಾ ಜಿಲ್ಲೆಗಳ ಪ್ರಮುಖ ರಸ್ತೆ, ವೃತ್ತ, ಉದ್ಯಾನವನಗಳಿಗೆ ನಾಡಿನ ಪ್ರಸಿದ್ಧ ಸಾಹಿತಿಗಳ, ಹಿರಿಯ ಹೋರಾಟಗಾರರು, ಸಾಧಕರ ಹೆಸರುಗಳನ್ನು ನಾಮಕರಣ ಮಾಡಬೇಕು, ಆಡಳಿತದ ಎಲ್ಲಾ ವಲಯಗಳಲ್ಲೂ ಕನ್ನಡಪರ ಆದೇಶಗಳನ್ನು ಸಮರ್ಪಕವಾಗಿ ಕಾರ್ಯಗತಗೊಳಿಸಬೇಕು. (ಕನ್ನಡಪರ ಆದೇಶ ಮತ್ತು ಸುತ್ತೋಲೆಗಳನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಜಾಲತಾಣದಲ್ಲಿ ಲಭ್ಯವಿದೆ), ಇ-ಕಚೇರಿ ಧ್ವನಿಯಿಂದ ಪಠ್ಯ, ಪಠ್ಯದಿಂದ ಧ್ವನಿ, ಆಡಿಯೋ ಪುಸ್ತಕ, ಡಿಜಿಟಲ್ ನಿಘಂಟು, ಕನ್ನಡದಲ್ಲಿ ತಂತ್ರಾಂಶ ಬಳಕೆ ಇತ್ಯಾದಿ ಸೇರಿ ತಂತ್ರಜ್ಞಾನದಲ್ಲಿ ಕನ್ನಡವನ್ನು ಸಮರ್ಪಕವಾಗಿ ಬಳಸಲು ಕಾರ್ಯಕ್ರಮಗಳನ್ನು ರೂಪಿಸಬೇಕು. ಇಲಾಖೆಗಳು ರೂಪಿಸುವ ನೀತಿಗಳ ಕರಡುಗಳನ್ನು ಬೇರೆ-ಬೇರೆ ಇಲಾಖೆಗಳ ಅಭಿಪ್ರಾಯಕ್ಕೆ ಕಡ್ಡಾಯವಾಗಿ ಕನ್ನಡದಲ್ಲಿ ಸಿದ್ಧಪಡಿಸಿ ಸಲ್ಲಿಸಬೇಕು ಹಾಗೂ ಅನುಮೋದಿತ ಅಂತಿಮ ನೀತಿಗಳನ್ನು ಕನ್ನಡದಲ್ಲಿ ಜಾರಿಗೆ ತರತಕ್ಕದ್ದು ಎಂದು ಸೂಚಿಸಲಾಗಿದೆ.

ರಾಜ್ಯದ ಕೆಲವು ನಗರ, ಪಟ್ಟಣಗಳ ಹೆಸರು ಬದಲಾವಣೆ ಮಾಡಿ ಅಧಿಸೂಚನೆ ಹೊರಡಿಸಲಾಗಿದೆ, ಅದರಂತೆ ಬದಲಾವಣೆ ರೀತಿಯಲ್ಲೇ ಹೆಸರುಗಳನ್ನು ಎಲ್ಲ ಕಡೆ ಕಡ್ಡಾಯವಾಗಿ ಬಳಸುವುದು. ಉದಾಹರಣೆಗೆ ಬೆಂಗಳೂರು ನಗರದ ಹೆಸರನ್ನು ಕನ್ನಡ ಮತ್ತು ಆಂಗ್ಲಭಾಷೆ ಎರಡರಲ್ಲೂ ಬೆಂಗಳೂರು ಎಂದೇ ಬಳಸಬೇಕು.

ಸರ್ಕಾರದಿಂದ ಆಯೋಜಿಸುವ ದಸರಾ, ಹಂಪಿ, ಕದಂಬ, ಜಿಲ್ಲಾ ಉತ್ಸವಗಳ ಸಾಂಸ್ಕೃತಿಕ ಕಾರ್ಯಕ್ರಮಗಳು, ಬಂಡವಾಳ ಹೂಡಿಕೆ ಆಕರ್ಷಿಸುವ ರಸ್ತೆ ಮೆರವಣಿಗೆ ಮುಂತಾದ ಕಾರ್ಯಕ್ರಮಗಳಲ್ಲಿ

ಕಡ್ಡಾಯವಾಗಿ ಕನ್ನಡ ನಾಡು–ನುಡಿ, ನೆಲ ಜಲ, ಸಂಸ್ಕೃತಿಗಳನ್ನು ಬಿಂಬಿಸುವ ಕಾರ್ಯಕ್ರಮಗಳನ್ನು ಆಯೋಜಿಸಿ ಕನ್ನಡದ ಕಲಾವಿದರಿಗೆ ಪ್ರಾತಿನಿಧ್ಯ ಒದಗಿಸಬೇಕು ಎಂದು ತಿಳಿಸಿದ್ದಾರೆ.

ಸರ್ಕಾರಿ ಮುದ್ರಣಾಲಯ ಹಾಗೂ ಸರ್ಕಾರಿ ಇಲಾಖೆಗಳು ಮುದ್ರಿಸುವ ತಲೆ ಬರಹಗಳು(ಲೆಟರ್ ಹೆಡ್) ನಮೂನೆಗಳು ಪೂರಕ ಸಾಮಗ್ರಿಗಳು, ಪ್ರಕಟಣೆಗಳು, ಜಾಹೀರಾತುಗಳಲ್ಲಿ ಕನ್ನಡ ಕಾಯಕ ವರ್ಷ 2020–21 ಮತ್ತು ವರ್ಷಾಚರಣೆಯ ಲಾಂಛನ ಬಳಸಬೇಕು. ಸಮಗ್ರ ಕನ್ನಡ ಅನುಷ್ಠಾನ ಹಾಗೂ ಬಳಕೆ ಪ್ರೋತ್ಸಾಹಿಸಲು ಆಯಾ ಇಲಾಖೆಗಳು ಕನ್ನಡಕ್ಕೆ ಸಂಬಂಧಿಸಿದ ಮಹತ್ವದ ಮತ್ತು ವಿವಿಧ ವಿಷಯಗಳ ಪದಕೋಶಗಳ ನಿಘಂಟು ಸಂಗ್ರಹ ಮಾಡಿ ಡಿಜಿಟಲ್ ಮಾದರಿಯಲ್ಲಿ ತಮ್ಮ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಬೇಕು.

ಖಜಾನೆ, ಎಚ್.ಆರ್.ಎಂ.ಎಸ್.ಟೆಂಡರ್ ತಂತ್ರಾಂಶಗಳು ಹಾಗೂ ಸರ್ಕಾರಿ ಆ್ಯಪ್‌ಗಳನ್ನು ಕಡ್ಡಾಯವಾಗಿ ಕನ್ನಡದಲ್ಲಿ ಸಹ ತರಬೇಕು. ಇಲಾಖೆಗಳ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕನ್ನಡ ಅನುಷ್ಠಾನದ ಕುರಿತು ಪ್ರಮುಖವಾಗಿ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸುತ್ತೋಲೆಯಲ್ಲಿ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಆಧಾರ:ಕನ್ನಡ ಪ್ರಭ, ದಿನಾಂಕ:28.11.2020.

## 11. ರಾಜ್ಯದ ಮಕ್ಕಳ ಬೆನ್ನತ್ತಿದೆ ಅಪೌಷ್ಠಿಕತೆ ಭೂತ

ಕೇಂದ್ರ ರಾಜ್ಯ ಸರ್ಕಾರಗಳ ಸಾಕಷ್ಟು ಯೋಜನೆಗಳ ಹೊರತಾಗಿಯೂ ದೇಶದಲ್ಲಿ ಅಪೌಷ್ಟಿಕತೆ ಸಮಸ್ಯೆ ಮುಂದಿನ ಪೀಳಿಗೆಯ ಭವಿಷ್ಯವನ್ನೇ ಮಂಕಾಗಿಸುವ ಆತಂಕ ಸೃಷ್ಟಿಸಿದೆ.

ಸರ್ಕಾರದ ಪೌಷ್ಟಿಕಾಂಶ ಪುನರ್ವಸತಿ ಕೇಂದ್ರದಲ್ಲಿ ಚಿಕಿತ್ಸೆ ಪಡೆದ ನಂತರವು ಶೇ.65 ಮಕ್ಕಳಲ್ಲಿ ಅಪೌಷ್ಟಿಕತೆ ಮುಂದುವರೆದಿರುವ ವಿಚಾರ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಸಮೀಕ್ಷೆಯಲ್ಲಿ ಬಯಲಾಗಿದೆ. ದಕ್ಷಿಣಕ್ಕಿಂತ ಉತ್ತರ ಕರ್ನಾಟಕದಲ್ಲಿ, ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳಲ್ಲಿ, ಇತರ ವರ್ಗಗಳಿಗಿಂತ ಪರಿಶಿಷ್ಟ ಸಮುದಾಯಗಳಲ್ಲಿ ಈ ಸಮಸ್ಯೆ ಹೆಚ್ಚಿರುವುದು ಬೆಳಕಿಗೆ ಬಂದಿದೆ.

**ಅಭಿವೃದ್ಧಿಗೆ ಅಡಚಣೆ:** ಅಪೌಷ್ಟಿಕತೆ ಮಕ್ಕಳಲ್ಲಿ ಅಸ್ವಸ್ಥತೆಗೆ ಕಾರಣವಾಗುವುದರ ಜೊತೆಗೆ, ಮುಂದೆ ಅದೇ ಮಕ್ಕಳು ವಯಸ್ಕರಾದಾಗ ದೈಹಿಕ ಶಕ್ತಿಯನ್ನು ಕುಂದಿಸುತ್ತದೆ. ಉತ್ಪಾದಕತೆ ಮೇಲೆ ನೇರ ಪರಿಣಾಮ ಬೀರುವ ಈ ಸಮಸ್ಯೆ ದೇಶದ ಅಭಿವೃದ್ಧಿಗೂ ಮಾರಕ. ಅಪೌಷ್ಟಿಕತೆ ನಿವಾರಿಸಲು ರಾಜ್ಯಾದ್ಯಂತ ಪೌಷ್ಟಿಕಾಂಶ ಪುನರ್ವಸತಿ ಕೇಂದ್ರ ಸ್ಥಾಪಿಸಲಾಗಿದೆ. ಇಲ್ಲಿ ಕೆಲವು ದಿನ ಮಟ್ಟಿಗೆ ತಾಯಿ ಮಗುವನ್ನು ದಾಖಲಿಸಿಕೊಂಡು ವಿಶೇಷ ಕಾಳಜಿ ನೀಡಲಾಗುತ್ತದೆ. ಅಧ್ಯಯನದ ಪ್ರಕಾರ, ಪುನರ್ವಸತಿ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆದ ನಂತರವು ಶೇ.65 ಮಕ್ಕಳಲ್ಲಿ ಪೌಷ್ಟಿಕಾಂಶ ಕೊರತೆ ಕಂಡುಬಂದಿದೆ. ಅಂದರೆ ಚಿಕಿತ್ಸೆ ಪಡೆದ ನಂತರವು ವಯಸ್ಸಿಗೆ ತಕ್ಕ ತೂಕ ಗಳಿಸಲು ಸಾಧ್ಯವಾಗಿಲ್ಲ. ಕೇಂದ್ರಗಳಲ್ಲಿ ದಾಖಲಾದ ಬಹುತೇಕ ಮಕ್ಕಳು ಬಡ ಕುಟುಂಬದವರಾಗಿದ್ದು, ಅಪೌಷ್ಟಿಕತೆ, ಬಡತನಕ್ಕೆ ನೇರ ಸಂಬಂಧ ಇರುವುದನ್ನು ವರದಿ ಬೊಟ್ಟು ಮಾಡಿದೆ.

**ರಾಜ್ಯದಲ್ಲಿ ಅಧಿಕ:** ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್) ಪ್ರಕಾರ ದೇಶದಲ್ಲಿ 5 ವರ್ಷದೊಳಗಿನ ಶೇ.35.8 ಮಕ್ಕಳ ವಯಸ್ಸಿಗಿಂತ ಕಡಿಮೆ ತೂಕ ಹೊಂದಿದ್ದಾರೆ. ಶೇ.38.4 ಮಕ್ಕಳು ಕುಂಠಿತ ಬೆಳವಣಿಗೆ, ಶೇ.21 ಮಕ್ಕಳು ದುರ್ಬಲ ಹಾಗೂ ಶೇ.58.5 ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಕರ್ನಾಟಕವು ದೇಶದ ಸರಾಸರಿಯೊಂದಿಗೆ ಹೊಂದಿಕೆಯಾಗುವಂತೆ ಅಪೌಷ್ಟಿಕತೆ ಪ್ರಮಾಣ ಹೊಂದಿದೆ.

**ಹೆಣ್ಣು ಮಕ್ಕಳಲ್ಲಿ ಅಧಿಕ:** ಹೆಣ್ಣು ಮಕ್ಕಳಲ್ಲಿ ಅಪೌಷ್ಟಿಕತೆ ಪ್ರಮಾಣ ಹೆಚ್ಚಿದೆ. ಶೇ.60.7 ಗಂಡು ಮಕ್ಕಳು ಕಡಿಮೆ ತೂಕ ಹೊಂದಿದ್ದಾರೆ ಈ ಪ್ರಮಾಣ ಹೆಣ್ಣು ಮಕ್ಕಳಲ್ಲಿ ಶೇ.68.3 ಕಂಡು ಬಂದಿದೆ. ಇತರೆ

ಸಮುದಾಯಗಳ ಮಕ್ಕಳಲ್ಲಿ ಶೇ.63.04 ಮಕ್ಕಳು ಕಡಿಮೆ ತೂಕ ಹೊಂದಿದ್ದರೆ ಎಸ್‌ಸಿ–ಎಸ್‌ಟಿ ಸಮುದಾಯದ ಶೇ.71.43 ಮಕ್ಕಳು ಕಡಿಮೆ ತೂಕದಿಂದ ಬಳಲುತ್ತಿದ್ದಾರೆ.

| **ಅಪೌಷ್ಟಿಕತೆ ಅಪಾಯ** | | |
|---|---|---|
| **ಪ್ರದೇಶ** | **ಕಡಿಮೆ ತೂಕ(5 ವರ್ಷದೊಳಗಿನ ಮಕ್ಕಳು)** | **ರಕ್ತಹೀನತೆ(6–59 ತಿಂಗಳ ಮಕ್ಕಳು)** |
| ಭಾರತ(ಸರಾಸರಿ) | 35.8 | 58.5 |
| ಕರ್ನಾಟಕ(ಸರಾಸರಿ) | 35.2 | 60.9 |
| **ಉತ್ತರ ಕರ್ನಾಟಕ** | | |
| ಯಾದಗಿರಿ | 50.3 | 74 |
| ರಾಯಚೂರು | 41.2 | 70.6 |
| ಕಲಬುರ್ಗಿ | 56.6 | 72.4 |
| ಗದಗ | 38.1 | 70.7 |
| ಧಾರವಾಡ | 41.1 | 50.7 |
| ವಿಜಯಪುರ | 38.9 | 68 |
| ಬೀದರ್ | 39.4 | 69.1 |
| ಬಳ್ಳಾರಿ | 53.3 | 72.3 |
| ಬೆಳಗಾವಿ | 38.5 | 66.3 |
| **ದಕ್ಷಿಣ ಕರ್ನಾಟಕ** | | |
| ಬೆಂಗಳೂರು | 26.8 | 51.7 |
| ಬೆಂಗಳೂರು(ಗ್ರಾ) | 26.5 | 48.8 |
| ಚಾಮರಾಜನಗರ | 31.1 | 52.1 |
| ದಕ್ಷಿಣ ಕನ್ನಡ | 21.7 | 54.3 |
| ಕೊಡಗು | 25.7 | 45.3 |
| ಮಂಡ್ಯ | 20.3 | 55.2 |
| ಮೈಸೂರು | 24.9 | 60.1 |
| ತುಮಕೂರು | 26 | 53.7 |
| **(ಎನ್‌ಎಫ್‌ಎಚ್‌ಎಸ್ ವರದಿಯಂತೆ, ಶೇಕಡವಾರು)** | | |

ಆಧಾರ: ವಿಜಯವಾಣಿ, ದಿನಾಂಕ:29.11.2020

# ಭಾಗ–5

# ಚುನಾವಣಾ ಸುದ್ದಿಗಳು

## 1. ಆನ್‌ಲೈನ್‌ನಲ್ಲಿ ನಾಮಪತ್ರ ಸಲ್ಲಿಕೆ

'ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಅಭ್ಯರ್ಥಿಗಳು ನಾಮಪತ್ರ, ಪ್ರಮಾಣಪತ್ರಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸುವುದಕ್ಕೆ ಹಾಗೂ ಠೇವಣಿ ಮೊತ್ತವನ್ನು ಡಿಜಿಟಲ್ ಪಾವತಿಗೆ ಅವಕಾಶ ಕಲ್ಪಿಸಲಾಗುತ್ತದೆ' ಎಂದು ಬೆಂಗಳೂರು ನಗರ ಜಿಲ್ಲಾ ಚುನಾವಣಾಧಿಕಾರಿ ಎನ್. ಮಂಜುನಾಥ ಪ್ರಸಾದ್ ತಿಳಿಸಿದರು.

ಉಪ ಚುನಾವಣೆಗೆ ಸಂಬಂಧ ಎನ್. ಮಂಜುನಾಥ ಪ್ರಸಾದ್ ಅವರು ವಿವಿಧ ರಾಜಕೀಯ ಪಕ್ಷಗಳ ಮುಖಂಡರ ಜೊತೆ ಸಭೆ ನಡೆಸಿದರು. 'ಆನ್‌ಲೈನ್ ಮೂಲಕ ನಾಮಪತ್ರ ಸಲ್ಲಿಸಿರುವವರು ನಾಮಪತ್ರ ಪ್ರಮಾಣಪತ್ರ ಹಾಗೂ ಠೇವಣಿ ಪಾವತಿಸಿದ ದಾಖಲೆಗಳ ಪ್ರತಿಯನ್ನು ನಂತರ ಚುನಾವಣಾಧಿಕಾರಿಗೆ ತಲುಪಿಸಬೇಕು' ಎಂದು ತಿಳಿಸಿದರು.

'ಆರ್.ಆರ್.ನಗರ ವಲಯದ ಜಂಟಿ ಆಯುಕ್ತರ ಕಛೇರಿಯಲ್ಲಿ ಅಕ್ಟೋಬರ್ 9 ರಿಂದ 16ರವರೆಗೆ ನಾಮಪತ್ರ ಸ್ವೀಕರಿಸಲಿದ್ದೇವೆ. ನಾಮಪತ್ರ ಸಲ್ಲಿಕೆ ವೇಳೆ ಕಛೇರಿಯ 100 ಮೀ. ವ್ಯಾಪ್ತಿಯಲ್ಲಿ ಅಭ್ಯರ್ಥಿಗೆ ಸಂಬಂಧಿಸಿದ ಎರಡು ವಾಹನಗಳಿಗೆ ಮಾತ್ರ ಪ್ರವೇಶಾವಕಾಶ ನೀಡಲಾಗುತ್ತದೆ. ಈ ಬಗ್ಗೆ ಕಣ್ಗಾವಲು ಇಡಲು ಕಛೇರಿಯ ಬಳಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲಾಗುತ್ತದೆ' ಸಾರ್ವಜನಿಕ ಸಭೆ, ಪ್ರಚಾರ ಕಾರ್ಯಗಳಿಗೆ ಕಡ್ಡಾಯವಾಗಿ ಅನುಮತಿ ಪಡೆಯಬೇಕು. ಮನೆ ಮನೆಗೆ ಹೋಗಿ ಚುನಾವಣಾ ಪ್ರಚಾರ ನಡೆಸುವಾಗ ಐದಕ್ಕಿಂತ ಹೆಚ್ಚು ಮಂದಿ ಕಾರ್ಯಕರ್ತರು ಒಟ್ಟಿಗೆ ಇರುವಂತಿಲ್ಲ. ರೋಡ್ ಶೋನಲ್ಲಿ 5 ವಾಹನಗಳಿಗೆ ಮಾತ್ರ ಅವಕಾಶವಿದ್ದು, ನಿಯಮ ಉಲ್ಲಂಘಿಸಿದವರ ವಿರುದ್ಧ ಪ್ರಕರಣ ದಾಖಲಿಸಲಾಗುತ್ತದೆ 'ವಿ.ವಿ.ಪ್ಯಾಟ್ ಹಾಗೂ ವಿದ್ಯುನ್ಮಾನ ಮತಯಂತ್ರಗಳು ಸಿದ್ದ ಇವೆ. ಅವುಗಳನ್ನು ಮೂರು ಹಂತಗಳಲ್ಲಿ ಪರಿಶೀಲನೆ ನಡೆಸಲಾಗುವುದು. ಅಭ್ಯರ್ಥಿಗಳ ಪ್ರತಿನಿಧಿಗಳು ಅವುಗಳನ್ನು ನೋಡಬಹುದು. ಕೋವಿಡ್ ವ್ಯಾಪಕವಾಗಿರುವುದರಿಂದ ಸಕಲ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಚುನಾವಣೆ ಪಾರದರ್ಶಕವಾಗಿ ನಡೆಯುವಂತೆ ನೋಡಿಕೊಳ್ಳಲು ಆಯೋಗವು ವೀಕ್ಷಕರನ್ನು ಶೀಘ್ರವೇ ಕಳುಹಿಸಲಿದೆ' ಎಂದು ತಿಳಿಸಿದರು.

**ನೀತಿ ಸಂಹಿತೆ ಉಲ್ಲಂಘಿಸಿದರೆ ಕಟ್ಟುನಿಟ್ಟಿನ ಕ್ರಮ:**–ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಕುರಿತು ಆಧಾರಗಳ ಸಮೇತ ದೂರು ನೀಡಿದಲ್ಲಿ ಅಂತಹವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತೇವೆ. ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲಿದ್ದೇವೆ ಎಂದು ಮಂಜುನಾಥ್ ಪ್ರಸಾದ್ ಸ್ಪಷ್ಟಪಡಿಸಿದರು. ಕೇಂದ್ರ ಚುನಾವಣಾ ಆಯೋಗ ಉಪ ಚುನಾವಣೆಯನ್ನು ಘೋಷಣೆ ಮಾಡಿದ ಕ್ಷಣದಿಂದಲೇ ಈ ಕ್ಷೇತ್ರದಲ್ಲಿ ಮಾದರಿ ನೀತಿ ಸಂಹಿತೆ ಜಾರಿಯಾಗಿದೆ.

**ಮತದಾರರ ಚೀಟಿ ಸಂಗ್ರಹಿಸಿಟ್ಟುಕೊಂಡರೆ ಕೇಸ್:** ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿಗಳನ್ನು ಸಂಗ್ರಹಿಸಿಟ್ಟುಕೊಳ್ಳುವುದಕ್ಕೆ ಅಥವಾ ಬೇರೆಯವರಿಗೆ ಕೊಡುವುದಕ್ಕೆ ಅವಕಾಶ ಇಲ್ಲ. ಈ ಬಗ್ಗೆ ಆಟೋಗಳಲ್ಲಿ ಧ್ವನಿವರ್ಧಕಗಳ ಮೂಲಕ ಜಾಗೃತಿ ಮೂಡಿಸಲಿದ್ದೇವೆ. ಇಷ್ಟಾಗಿಯೂ ಮತದಾರರ ಗುರುತಿನ ಚೀಟಿ ಸಂಗ್ರಹಿಸಿಟ್ಟುಕೊಳ್ಳುವುದು ಕಂಡುಬಂದಲ್ಲಿ ಅಂತಹವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಲಾಗುವುದು. ಯಾವುದೇ ರೀತಿಯ ಆಹಿತಕರ ಘಟನೆಗಳಿಗೂ ಆಸ್ಪದ ನೀಡಬಾರದು ಎಂದು ಜಿಲ್ಲಾ ಚುನಾವಣಾಧಿಕಾರಿ ಎಚ್ಚರಿಸಿದರು.

2018ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕ್ಷೇತ್ರದ ಫ್ಲಾಟ್ ಒಂದರಲ್ಲಿ ಭಾರಿ ಪ್ರಮಾಣದಲ್ಲಿ ಮತದಾರರ ಗುರುತಿನ ಚೀಟಿ ಸಂಗ್ರಹಿಸಿಟ್ಟುಕೊಂಡಿದ್ದು ಪತ್ತೆಯಾಗಿತ್ತು. ಈ ಕಾರಣಕ್ಕೆ ಚುನಾವಣೆಯನ್ನು ಮುಂದೂಡಲಾಗಿತ್ತು.

ಆಧಾರ: ಪ್ರಜಾವಾಣಿ, ದಿನಾಂಕ:01.10.2020

## 2. ವಿಧಾನ ಪರಿಷತ್ 4 ಸ್ಥಾನಗಳ ಚುನಾವಣೆಗೆ ಅಧಿಸೂಚನೆ ಪ್ರಕಟ

ರಾಜ್ಯ ವಿಧಾನ ಪರಿಷತ್ತಿನ 2 ಪದವೀಧರ ಮತ್ತು 2 ಶಿಕ್ಷಕರ ಕ್ಷೇತ್ರಗಳಿಗೆ ನಡೆಯುವ ಚುನಾವಣೆಗೆ ಕೇಂದ್ರ ಚುನಾವಣಾ ಆಯೋಗವು ಅಧಿಸೂಚನೆ ಹೊರಡಿಸಿದ್ದು, ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭಗೊಂಡಿದೆ. ಆಗ್ನೇಯ, ಪಶ್ಚಿಮ ಪದವೀಧರರ ಕ್ಷೇತ್ರ, ಈಶಾನ್ಯ ಮತ್ತು ಬೆಂಗಳೂರು ಶಿಕ್ಷಕರ ಕ್ಷೇತ್ರಕ್ಕೆ ಅಕ್ಟೋಬರ್ 28 ರಂದು ಚುನಾವಣೆ ನಡೆಯಲಿದೆ. ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದ್ದು, ನಾಮಪತ್ರ ಸಲ್ಲಿಸಲು ಅಕ್ಟೋಬರ್ 8ಕ್ಕೆ ಕೊನೆಯ ದಿನ. ಅಕ್ಟೋಬರ್ 9ಕ್ಕೆ ನಾಮಪತ್ರ ಪರಿಶೀಲನೆ ಹಾಗೂ ನಾಮಪತ್ರ ವಾಪಸ್ ಪಡೆಯಲು ಅಕ್ಟೋಬರ್ 12 ಕೊನೆಯ ದಿನವಾಗಿದೆ. ಅಕ್ಟೋಬರ್ 28 ರಂದು ಬೆಳಗ್ಗೆ 8 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಮತದಾನ ನಡೆಯಲಿದೆ. ನವೆಂಬರ್ 2ರಂದು ಮತ ಎಣಿಕೆ ನಡೆಯಲಿದೆ. 2020ರ ಜೂನ್ 30ಕ್ಕೆ ಮೇಲ್ಮನೆ ಸದಸ್ಯರಾದ ಆರ್.ಚೌಡರೆಡ್ಡಿ ತೂಪಲ್ಲಿ, ಎಸ್.ವಿ.ಸಂಕನೂರು, ಶರಣಪ್ಪ ಮಟ್ಟೂರು ಮತ್ತು ಪುಟ್ಟಣ್ಣ ಅವರ ಅವಧಿ ಕೊನೆಗೊಂಡಿದೆ. ತೆರವಾಗಿರುವ ನಾಲ್ಕು ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.

ಆಧಾರ: ಕನ್ನಡಪ್ರಭ, ದಿನಾಂಕ:02.10.2020

## 3. ಚುನಾವಣಾ ದೂರನ್ನು 24 ತಾಸಲ್ಲಿ ತನಿಖೆ ನಡೆಸಿ

ಉಪ ಚುನಾವಣೆಗೆ ಸಂಬಂಧಿಸಿದಂತೆ ಸಲ್ಲಿಸುವ ದೂರುಗಳನ್ನು 24 ತಾಸಿನಲ್ಲಿ ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ನಗರ ಜಿಲ್ಲಾ ಚುನಾವಣಾಧಿಕಾರಿ ಎನ್. ಮಂಜುನಾಥ ಪ್ರಸಾದ್ ತಿಳಿಸಿದರು.

ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಸಂಬಂಧಿಸಿದಂತೆ ಅವರು ನಗರ ಪೊಲೀಸ್ ಆಯುಕ್ತ ಕಮಲ್ ಪಂತ್ ನೇತೃತ್ವದಲ್ಲಿ ಮಲ್ಲೇಶ್ವರದ ಐಪಿಪಿ ಕಛೇರಿಯಲ್ಲಿ ಪೊಲೀಸ್ ಇಲಾಖೆ, ಅಬಕಾರಿ ಆದಾಯ ತೆರಿಗೆ ಇಲಾಖೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ರಾಜರಾಜೇಶ್ವರಿ ನಗರ ವಿಧಾನಸಭೆ ಉಪ ಚುನಾವಣೆಗೆ ಸಂಬಂಧಿಸಿದಂತೆ ದಿನಪತ್ರಿಕೆ, ಟಿವಿ ಮಾಧ್ಯಮ ಸೇರಿದಂತೆ ವಿವಿಧ ಮೂಲಗಳಿಂದ ದಾಖಲಾಗುವ ದೂರುಗಳನ್ನು 24 ಗಂಟೆಯಲ್ಲಿ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಉಪ ಚುನಾವಣೆಗೆ ಸಂಬಂಧಿಸಿದಂತೆ 31 ನೋಡಲ್ ಅಧಿಕಾರಿಗಳು, 27 ಫ್ಲೈಯಿಂಗ್ ಸ್ಕ್ವಾಡ್, 10 ಸ್ಟ್ಯಾಟಿಕ್ಸ್ ಸ್ಕ್ವಾಡ್, 10 ಚೆಕ್ ಪೋಸ್ಟ್, 5 ವಿಡಿಯೋ ಸರ್ವೇಲೆನ್ಸ್, ವಿಡಿಯೋ ವೀಕ್ಷಣಾ ತಂಡ ರಚನೆ ಮಾಡಲಾಗಿದೆ ಎಂದರು.

ಆದಾಯ ತೆರಿಗೆ ಇಲಾಖೆ ಜೊತೆ ಸಮನ್ವಯದಿಂದ ಕೆಲಸ ಮಾಡಿ, ದೂರು, ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುತ್ತೇವೆ. ಅಬಕಾರಿ ಇಲಾಖೆಯಿಂದಲೂ ತಂಡಗಳನ್ನು ರಚನೆ ಮಾಡಿ ತಪಾಸಣೆ ಮಾಡುವ ವ್ಯವಸ್ಥೆ ಮಾಡಲಾಗಿದೆ. ದೂರು ನೀಡಲು ಶೀಘ್ರ ದೂರವಾಣಿ ಸಂಖ್ಯೆಗಳನ್ನು ಬಿಡುಗಡೆ ಮಾಡಲಾಗುತ್ತದೆ. ಚುನಾವಣಾ ಆಯೋಗದಿಂದ ಚುನಾವಣಾ ವೀಕ್ಷಕರನ್ನು ನಿಯೋಜನೆ ಮಾಡಲಿದ್ದು, ಅವರು ತಪಾಸಣೆ ನಡೆಸಲಿದ್ದಾರೆ. ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಸ್ ತಂಗುದಾಣ, ಶುದ್ಧ ಕುಡಿಯುವ ನೀರಿನ ಘಟಕ, ಉದ್ಯಾನವನಗಳಲ್ಲಿ ಜನಪ್ರತಿನಿಧಿಗಳ ಭಾವಚಿತ್ರ, ಹೆಸರು

ಇರುವ ಭಿತ್ತಿಪತ್ರಗಳು, ನಾಮಫಲಕಗಳನ್ನು ಕೂಡಲೇ ತೆರವುಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಹೆಚ್ಚುವರಿ ಪೊಲೀಸ್ ಆಯುಕ್ತ ಸೌಮೇಂದು ಮುಖರ್ಜಿ ಮಾತನಾಡಿ, ಕೊರೋನಾ ಸೋಂಕಿನ ಭೀತಿ ಇರುವುದರಿಂದ ಚುನಾವಣಾ ಆಯೋಗ ನಿರ್ದೇಶನದಂತೆ ಮೆರವಣಿಗೆ, ಸಾರ್ವಜನಿಕ ಸಭೆ ನಡೆಸಬೇಕು. ಸದ್ಯದ ಪ್ರಕಾರ 100 ಜನಕ್ಕಿಂತ ಹೆಚ್ಚಿನ ಮಂದಿ ಸಭೆ ಸೇರುವಂತಿಲ್ಲ. ಇದು ಚುನಾವಣೆ ಪ್ರಚಾರಕ್ಕೂ ಅನ್ವಯವಾಗಲಿದೆ. ನಿಯಮ ಉಲ್ಲಂಘಿಸಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮತಗಟ್ಟೆಗಳ ಸಂಖ್ಯೆ 381 ರಿಂದ 688 ಹೆಚ್ಚಿಸಲಾಗಿದೆ. ಇದರಲ್ಲಿ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಮತಗಟ್ಟೆ ವಿಂಗಡಿಸಲಾಗುತ್ತಿದೆ. ಆರ್.ಆರ್.ನಗರ ವ್ಯಾಪ್ತಿಯಲ್ಲಿ ಶಸ್ತ್ರಾಸ್ತ್ರ ಹೊಂದಿರುವವರ ಬಗ್ಗೆ ಸ್ಥಳೀಯ ಪೊಲೀಸ್ ಠಾಣೆಗೆ ದೂರು ನೀಡುವಂತೆ ಸೂಚನೆ ನೀಡಲಾಗಿದೆ ಎಂದು ವಿವರಿಸಿದರು. ವಿಶೇಷ ಆಯುಕ್ತ ಜೆ.ಮಂಜುನಾಥ್, ಆರ್.ಆರ್.ನಗರ ವಲಯದ ಜಂಟಿ ಆಯುಕ್ತ ನಾಗರಾಜ್ ಸೇರಿದಂತೆ ಮೊದಲಾದವರು ಉಪಸ್ಥಿತರಿದ್ದರು.

ಆಧಾರ: ಕನ್ನಡ ಪ್ರಭ, ದಿನಾಂಕ:04.10.2020

## 4. ಶಿಕ್ಷಕರ ಕ್ಷೇತ್ರಕ್ಕೆ ಪ್ರವೀಣಕುಮಾರ್ ಉಮೇದುವಾರಿಕೆ

ಬೆಂಗಳೂರು ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಪ್ರವೀಣಕುಮಾರ್ ನಾಮಪತ್ರ ಸಲ್ಲಿಸಿದ್ದಾರೆ. ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್ ಹಾಗೂ ಶಿವಾಜಿನಗರ ಶಾಸಕ ರಿಜ್ವಾನ್ ಅಹಮದ್ ಜೊತೆ ಶಾಂತಿ ನಗರ ಪ್ರಾದೇಶಿಕ ಆಯುಕ್ತರ ಕಛೇರಿಯಲ್ಲಿ ನಾಮಪತ್ರ ಸಲ್ಲಿಸಿದ್ದಾರೆ.

ನಾಮಪತ್ರದಲ್ಲಿ ಪ್ರವೀಣಕುಮಾರ್ ತಮ್ಮ ಆಸ್ತಿ ಘೋಷಣೆ ಮಾಡಿಕೊಂಡಿದ್ದು 22.37 ಲಕ್ಷ ಚರಾಸ್ತಿ, ಪತ್ನಿ ಹೆಸರಲ್ಲಿ 17.65 ಲಕ್ಷ ಚರಾಸ್ತಿ ಜೊತೆಗೆ, 200 ಗ್ರಾಂ ಚಿನ್ನ, 1 ಕೆ.ಜಿ ಬೆಳ್ಳಿ, ಪತ್ನಿ ಹೆಸರಲ್ಲಿ 300 ಗ್ರಾಂ ಚಿನ್ನ ಹೊಂದಿರುವುದಾಗಿ ತಿಳಿಸಿದ್ದಾರೆ. 8.5 ಲಕ್ಷ ಬೆಲೆ ಬಾಳುವ ಇನ್ನೋವಾ ಕಾರ್ ಹೊಂದಿದ್ದು ತಮ್ಮ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿಲ್ಲ ಎಂದು ಅಫಿಡವಿಟ್‌ನಲ್ಲಿ ತಿಳಿಸಿದ್ದಾರೆ.

ಆಧಾರ: ಉದಯವಾಣಿ, ದಿನಾಂಕ:07.10.2020

## 5. ಚುನಾವಣೆ ಸಭೆಗೆ ಅನುಮತಿ

ಕರ್ನಾಟಕ, ಬಿಹಾರ ಸೇರಿದಂತೆ ಚುನಾವಣೆಗಳು ನಡೆಯುವ 12 ರಾಜ್ಯಗಳಲ್ಲಿ ಅಕ್ಟೋಬರ್ 15ಕ್ಕಿಂತ ಮೊದಲೇ ರಾಜಕೀಯ ರ್‍ಯಾಲಿಗಳನ್ನು ನಡೆಸಲು ಕೇಂದ್ರ ಗೃಹ ಸಚಿವಾಲಯ ಅನುಮತಿ ನೀಡಿದೆ. ಸಚಿವಾಲಯವು ಸೆಪ್ಟೆಂಬರ್ 30ರಂದು ಪ್ರಕಟಿಸಿದ್ದ ಅನ್‌ಲಾಕ್ 5.0 ಮಾರ್ಗದರ್ಶಿ ಸೂತ್ರಗಳಲ್ಲಿ ಅಕ್ಟೋಬರ್ 15ರ ಬಳಿಕ ಸಾರ್ವಜನಿಕ ಸಭೆಗಳನ್ನು ನಡೆಸಬಹುದು, ಆದರೆ 100ಕ್ಕಿಂತ ಹೆಚ್ಚು ಜನರು ಸೇರುವಂತಿಲ್ಲ ಎಂದು ತಿಳಿಸಿತ್ತು. ಈಗ ಚುನಾವಣೆ ನಡೆಯುವ ರಾಜ್ಯಗಳಿಗೆ ಈ ನಿಯಮದಿಂದ ವಿನಾಯಿತಿ ನೀಡಿದೆ. ರಾಜಕೀಯ ಪಕ್ಷಗಳು ಕೊಂಚ ನಿಟ್ಟುಸಿರುಬಿಟ್ಟಿವೆ. "ಚುನಾವಣೆ ನಡೆಯುವ ರಾಜ್ಯಗಳಲ್ಲಿ ರಾಜಕೀಯ ಪಕ್ಷಗಳು ಪ್ರಚಾರ ಸಭೆಗಳನ್ನು ನಡೆಸಬಹುದು. ಆದರೆ ಸಾಮಾಜಿಕ ಅಂತರ ಪಾಲನೆ ಸೇರಿದಂತೆ ಸೆಪ್ಟೆಂಬರ್ 30ರ ಮಾರ್ಗದರ್ಶಿ ಸೂತ್ರಗಳನ್ನು ಪಕ್ಷಗಳು ಕಡ್ಡಾಯವಾಗಿ ಪಾಲಿಸಬೇಕು" ಎಂದು ಗೃಹ ಸಚಿವಾಲಯ ತಿಳಿಸಿದೆ. ಬಹಿರಂಗ ಸಭೆಗಳನ್ನು ನಡೆಸಿದರೂ 100 ಕ್ಕಿಂತ ಹೆಚ್ಚಿನ ಜನರು ಸೇರುವಂತಿಲ್ಲ. ಬಹಿರಂಗ ಪ್ರಚಾರ ಅಂತ್ಯಗೊಳ್ಳುವ ದಿನದವರೆಗೆ ಈ ವಿನಾಯಿತಿ ಜಾರಿಯಲ್ಲಿರುತ್ತದೆ. ಬಿಹಾರದ ವಿಧಾನಸಭೆಗೆ ಅಕ್ಟೋಬರ್ 28ರಿಂದ ಮೂರು ಹಂತಗಳಲ್ಲಿ ಚುನಾವಣೆ

ನಡೆಯಲಿದೆ. ಬಿಹಾರದ ಒಂದು ಲೋಕಸಭಾ ಕ್ಷೇತ್ರ ಹಾಗೂ ಕರ್ನಾಟಕದ ಆರ್. ಆರ್. ನಗರ ಮತ್ತು ಶಿರಾ ಸೇರಿ 11 ರಾಜ್ಯಗಳ 56 ವಿಧಾನಸಭೆ ಕ್ಷೇತ್ರಗಳಿಗೆ ನವೆಂಬರ್ 3ರಂದು ಚುನಾವಣೆ ನಡೆಯಲಿದೆ.

ಆಧಾರ: ವಿಶ್ವವಾಣಿ, ದಿನಾಂಕ:09.10.2020

## 6. ಚುನಾವಣಾ ಆಯೋಗದ ಸಮ್ಮತಿ

ವಿಧಾನ ಸಭೆಯ ಎರಡು ಕ್ಷೇತ್ರಗಳ ಉಪ ಚುನಾವಣೆ ಮತ್ತು ವಿಧಾನ ಪರಿಷತ್ತಿನ ನಾಲ್ಕು ಕ್ಷೇತ್ರಗಳ ಚುನಾವಣೆ ನಡೆಯುತ್ತಿರುವಾಗಲೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್‌ಗಳ ಮರು ವಿಂಗಡಣೆ ಸೇರಿದಂತೆ ಕೆಲವು ಪ್ರಕ್ರಿಯೆಗಳನ್ನು ನಡೆಸಲು ಕೇಂದ್ರ ಚುನಾವಣಾ ಆಯೋಗ ರಾಜ್ಯ ಸರ್ಕಾರಕ್ಕೆ ಷರತ್ತುಬದ್ಧ ಅನುಮತಿ ನೀಡಿದೆ.

ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸಲು, ವಾರ್ಡ್ ಮರು ವಿಂಗಡಣಾ ಆಯೋಗ ರಚಿಸಲು ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ಕೆಎಎಸ್ ಅಧಿಕಾರಿಗಳ ವರ್ಗಾವಣೆ ಮಾಡಲು ಚುನಾವಣಾ ನೀತಿ ಸಂಹಿತೆ ನಿರ್ಬಂಧವನ್ನು ಸಡಿಲಿಸಲಾಗಿದೆ. ಕೋವಿಡ್ ನಿಯಂತ್ರಣ ಕ್ರಮಗಳು ಹಾಗೂ ಪ್ರವಾಹ ಪರಿಹಾರ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಲು ಮುಖ್ಯಮಂತ್ರಿ, ಸಚಿವರು ಮತ್ತು ಇತರ ಚುನಾಯಿತ ಪ್ರತಿನಿಧಿಗಳಿಗೆ ಷರತ್ತುಬದ್ಧ ಅನುಮತಿ ನೀಡಲಾಗಿದೆ. ಈ ಕುರಿತು ಕೇಂದ್ರ ಚುನಾವಣಾ ಆಯೋಗದ ಕಾರ್ಯದರ್ಶಿ ರಾಜ್ಯದ ಮುಖ್ಯ ಚುನಾವಣಾಧಿಕಾರಿಗೆ ಪತ್ರದ ಮೂಲಕ ಮಾಹಿತಿ ನೀಡಿದ್ದಾರೆ.

ಆಧಾರ: ಪ್ರಜಾವಾಣಿ, ದಿನಾಂಕ:14.10.2020

## 7. ಉಪ ಕದನಕ್ಕೆ ಕಂಕಣ

ರಾಜ್ಯದಲ್ಲಿ ನಡೆಯುತ್ತಿರುವ ಎರಡು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗೆ ರಾಜಕೀಯ ಚಟುವಟಿಕೆ ಬಿರುಸು ಪಡೆದುಕೊಂಡಿದ್ದು, ನಾಮಪತ್ರ ಸಲ್ಲಿಕೆಗೆ ಇನ್ನೂ ಎರಡು ದಿನ ಬಾಕಿ ಇರುವಾಗಲೇ ಮೂರು ಪಕ್ಷದ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.

ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮುನಿರತ್ನ ಮತ್ತು ಜೆಡಿಎಸ್ ಅಭ್ಯರ್ಥಿ ಕೃಷ್ಣಮೂರ್ತಿ ವಿ. ಹಾಗೂ ಕಾಂಗ್ರೆಸ್ ಅಭ್ಯರ್ಥಿ ಕುಸುಮಾ ಅವರು ರಾಜರಾಜೇಶ್ವರಿ ನಗರ ಬಿಬಿಎಂಪಿ ಕಚೇರಿಗೆ ಆಗಮಿಸಿ ನಾಮಪತ್ರ ಸಲ್ಲಿಸಿರುತ್ತಾರೆ.

ಮುನಿರತ್ನ ಅವರೊಂದಿಗೆ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ, ಕಂದಾಯ ಸಚಿವ ಆರ್.ಅಶೋಕ ಆಗಮಿಸಿದ್ದು, ಇದಕ್ಕೂ ಮೊದಲು ಮುನಿರತ್ನ ಅವರೊಂದಿಗೆ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಬಿ ಫಾರಂ ನೀಡಿ, ಶುಭ ಹಾರೈಸಿದರು.

ಜೆಡಿಎಸ್ ಅಭ್ಯರ್ಥಿ ಕೃಷ್ಣಮೂರ್ತಿ ಅವರೊಂದಿಗೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಮತ್ತು ಬೆಂಗಳೂರು ನಗರ ಘಟಕದ ಅಧ್ಯಕ್ಷ ಆರ್. ಪ್ರಕಾಶ್ ಇದ್ದರು.

ಕಾಂಗ್ರೆಸ್ ಅಭ್ಯರ್ಥಿ ಕುಸುಮಾ ಕೂಡಾ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರೊಂದಿಗೆ ಆಗಮಿಸಿ ನಾಮಪತ್ರ ಸಲ್ಲಿಸಿರುತ್ತಾರೆ.

ಶಿರಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರಾಜೇಶ್ ಗೌಡ ಅವರು ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಸೇರಿದಂತೆ ಮತ್ತಿತರ ಪ್ರಮುಖ ನಾಯಕರೊಂದಿಗೆ ನಾಮಪತ್ರ ಸಲ್ಲಿಸಿದರು.

ಜೆಡಿಎಸ್ ಅಭ್ಯರ್ಥಿ ಅಮ್ಮಾಜಮ್ಮ ಅವರ ಅನಾರೋಗ್ಯದ ಹಿನ್ನೆಲೆಯಲ್ಲಿ ಪಕ್ಷದ ನಾಯಕ ಎಚ್.ಡಿ. ರೇವಣ್ಣ ಹಾಗೂ ಎಚ್.ಕೆ.ಕುಮಾರಸ್ವಾಮಿ ಅವರು ನಾಮಪತ್ರ ಸಲ್ಲಿಕೆ ಮಾಡಿದರು. ಕಾಂಗ್ರೆಸ್ ಅಭ್ಯರ್ಥಿಯಾಗಿ ಮಾಜಿ ಸಚಿವ ಟಿ.ಬಿ.ಜಯಚಂದ್ರ ಕಣಕ್ಕಿಳಿದಿದ್ದಾರೆ.

| ಕ್ಷೇತ್ರ | ಪಕ್ಷ | ಅಭ್ಯರ್ಥಿ |
|---|---|---|
| ಆರ್. ಆರ್.ನಗರ | ಬಿಜೆಪಿ | ಮುನಿರತ್ನ |
| ಆರ್. ಆರ್.ನಗರ | ಕಾಂಗ್ರೆಸ್ | ಹೆಚ್. ಕುಸುಮ |
| ಆರ್. ಆರ್.ನಗರ | ಜೆಡಿಎಸ್ | ಕೃಷ್ಣಮೂರ್ತಿ |
| ಶಿರಾ | ಬಿಜೆಪಿ | ರಾಜೇಶ್ ಗೌಡ |
| ಶಿರಾ | ಕಾಂಗ್ರೆಸ್ | ಟಿ.ಬಿ.ಜಯಚಂದ್ರ |
| ಶಿರಾ | ಜೆಡಿಎಸ್ | ಅಮ್ಮಾಜಮ್ಮ |

ಆಧಾರ: ವಿಶ್ವವಾಣಿ, ದಿನಾಂಕ:15.10.2020

## 8. ಉಪ ಚುನಾವಣೆ: ಕೊರೋನಾ ಮಾರ್ಗಸೂಚಿ ಪ್ರಕಟ

ಕೊರೋನಾ ಬಿಕ್ಕಟ್ಟಿನ ಸಂದರ್ಭದಲ್ಲಿ ಚುನಾವಣೆ ಮತ್ತು ಉಪ ಚುನಾವಣೆ ಸಂಬಂಧ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ರಾಜ್ಯದಲ್ಲಿ ಕೊರೋನಾ ಸೋಂಕು ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಉಪ ಚುನಾವಣೆ ಸನ್ನಿವೇಶ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಶಿರಾ ಮತ್ತು ರಾಜರಾಜೇಶ್ವರಿ ನಗರ ಕ್ಷೇತ್ರಗಳಲ್ಲಿ ಮತದಾರರ ಹಿತ ಕಾಪಾಡಲು ಕೆಲ ಮಾರ್ಗಸೂಚಿ ಹೊರಡಿಸಲಾಗಿದೆ. ಚುನಾವಣಾ ಅಭ್ಯರ್ಥಿಗಳು ಪ್ರಚಾರದ ವೇಳೆ ಪಾಲಿಸಬೇಕಾದ ನಿಯಮಗಳನ್ನು ಈಗಾಗಲೇ ಸರ್ಕಾರ ತಿಳಿಸಿದೆ.

**ನಿಯಮಗಳು:–**

- ಪ್ರತಿಯೊಬ್ಬರು ಮಾಸ್ಕ್ ಧರಿಸಬೇಕು.
- ಮತದಾನ ಉದ್ದೇಶಕ್ಕಾಗಿ ಕೊಠಡಿ, ಹಾಲ್, ಆವರಣ ಪ್ರವೇಶಿಸುವ ಪ್ರತಿಯೊಬ್ಬರಿಗೂ ಥರ್ಮಲ್ ಸ್ಕ್ಯಾನಿಂಗ್ ಮಾಡಬೇಕು.
- ಸ್ಯಾನಿಟೈಸರ್, ಸೋಪ್ ಮತ್ತು ನೀರು ಲಭ್ಯವಿರುವಂತೆ ವ್ಯವಸ್ಥೆ ಮಾಡಬೇಕು. ಎಲ್ಲ ಸಂದರ್ಭದಲ್ಲಿ 2 ಮೀಟರ್ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಬೇಕು.
- ಸಾಮಾಜಿಕ ಅಂತರ ನಿಯಮ ಕಾಯ್ದುಕೊಳ್ಳಲು ಅನುವಾಗುವಂತೆ ದೊಡ್ಡ ಹಾಲ್‌ಗಳನ್ನು ಗುರುತಿಸಬೇಕು.
- ಚುನಾವಣಾ ಸಿಬ್ಬಂದಿ, ಭದ್ರತಾ ಸಿಬ್ಬಂದಿಯನ್ನು ಕರೆದೊಯ್ಯಲು ಸೂಕ್ತ ವಾಹನಗಳ ವ್ಯವಸ್ಥೆ ಮಾಡಬೇಕು.
- ಕೊರೋನಾ ಸಂಬಂಧಿತ ವ್ಯವಸ್ಥೆಗಳನ್ನು ನೋಡಿಕೊಳ್ಳಲು ಜಿಲ್ಲಾ ಮತ್ತು ವಿಧಾನಸಭಾ ಕ್ಷೇತ್ರಗಳಿಗೆ ನೋಡಲ್ ಆರೋಗ್ಯ ಅಧಿಕಾರಿಯನ್ನು ನಿಯೋಜಿಸಬೇಕು.

- ಚುನಾವಣಾ ಸಿಬ್ಬಂದಿಗೆ ದೊಡ್ಡ ಹಾಲ್‌ಗಳಲ್ಲಿ ತರಬೇತಿ ನೀಡಬೇಕು. ಒಂದೊಂದು ಮತಗಟ್ಟೆಗಳಲ್ಲಿ 1500 ಮತದಾರರ ಬದಲಿಗೆ ಗರಿಷ್ಠ 1 ಸಾವಿರ ಮತದಾರರು ಇರಬೇಕು.

ಆಧಾರ: ವಿಶ್ವವಾಣಿ, ದಿನಾಂಕ:18.10.2020

## 9.ಇಂದು ಪರಿಷತ್ 4 ಕ್ಷೇತ್ರಗಳಿಗೆ ಚುನಾವಣೆ

ವಿಧಾನ ಪರಿಷತ್ತಿನ ಎರಡು ಪದವೀಧರ ಮತ್ತು ಎರಡು ಶಿಕ್ಷಕರ ಕ್ಷೇತ್ರಗಳಿಗೆ ಶಾಂತಿಯುತವಾಗಿ ಮತದಾನ ನಡೆಸಲು ಚುನಾವಣಾ ಆಯೋಗವು ಸಿದ್ದತೆ ಮಾಡಿಕೊಂಡಿದ್ದು, ಬೆಳಿಗ್ಗೆ 7 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಮತದಾನ ನಡೆಯಲಿದೆ. ನಾಲ್ಕು ಕ್ಷೇತ್ರಗಳಲ್ಲಿ ಒಟ್ಟಾರೆ 549 ಮತ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗಿದೆ. ಪಶ್ಚಿಮ ಪದವೀಧರ ಕ್ಷೇತ್ರದಲ್ಲಿ 146 ಮತ ಕೇಂದ್ರಗಳು, ಆಗ್ನೇಯ ಪದವೀಧರ ಕ್ಷೇತ್ರದಲ್ಲಿ 187 ಮತ ಕೇಂದ್ರಗಳು, ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ 69 ಮತ ಕೇಂದ್ರಗಳು ಮತ್ತು ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲಿ 147 ಮತ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಚುನಾವಣಾ ಕಣದಲ್ಲಿ ಅಂತಿಮವಾಗಿ 40 ಅಭ್ಯರ್ಥಿಗಳು ಸೆಣಸಲಿದ್ದಾರೆ. ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ 9 ಅಭ್ಯರ್ಥಿಗಳು, ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲಿ 5 ಅಭ್ಯರ್ಥಿಗಳು, ಆಗ್ನೇಯ ಪದವೀಧರ ಕ್ಷೇತ್ರದಲ್ಲಿ 15 ಅಭ್ಯರ್ಥಿಗಳು ಮತ್ತು ಪಶ್ಚಿಮ ಪದವೀಧರ ಕ್ಷೇತ್ರದಲ್ಲಿ 11 ಅಭ್ಯರ್ಥಿಗಳು ಅಖಾಡದಲ್ಲಿದ್ದಾರೆ. ನಾಲ್ಕು ಕ್ಷೇತ್ರದಲ್ಲಿ ಆಡಳಿತಾರೂಢ ಬಿಜೆಪಿ, ಪ್ರತಿಪಕ್ಷ ಕಾಂಗ್ರೆಸ್ ಮತ್ತು ಜೆಡಿಎಸ್‌ನ ತಲಾ 4 ಅಭ್ಯರ್ಥಿಗಳು ನೋಂದಾಯಿತ ಪಕ್ಷದಿಂದ 6 ಅಭ್ಯರ್ಥಿಗಳು ಮತ್ತು 22 ಪಕ್ಷೇತರ ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ.

ಪಶ್ಚಿಮ ಪದವೀಧರ ಕ್ಷೇತ್ರದಲ್ಲಿ ಒಟ್ಟು 75781, ಆಗ್ನೇಯ ಪದವೀಧರ ಕ್ಷೇತ್ರದಲ್ಲಿ ಒಟ್ಟು 1.09 ಲಕ್ಷ, ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲಿ ಒಟ್ಟು 29330, ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಒಟ್ಟು 22261 ಮತದಾರರಿದ್ದಾರೆ. ಮತದಾನದ ದಿನದಂದು ಮತದಾರರಿಗೆ ಎಡಗೈನ ತೋರು ಬೆರಳಿಗೆ ಶಾಯಿ ಹಚ್ಚಲು ಆಯೋಗವು ಸೂಚನೆ ನೀಡಿದೆ.

**ಸಾಂದರ್ಭಿಕ ರಜೆ:** ವಿಧಾನ ಪರಿಷತ್‌ನ 4 ಮತ ಕ್ಷೇತ್ರಗಳಲ್ಲಿ ಸರ್ಕಾರಿ ಮತ್ತು ಖಾಸಗಿ ಶಾಲಾ ಕಾಲೇಜುಗಳು ಅನುದಾನಿತ, ಅನುದಾನ ರಹಿತ ವಿದ್ಯಾಸಂಸ್ಥೆಗಳು, ಎಲ್ಲ ಶೈಕ್ಷಣಿಕ ಸಂಸ್ಥೆಗಳು ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಛೇರಿಗಳು ರಾಷ್ಟ್ರೀಕೃತ ಮತ್ತು ಇತರ ಬ್ಯಾಂಕ್‌ಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಾರ್ಖಾನೆಗಳು, ಕೈಗಾರಿಕೆ ಸಂಸ್ಥೆಗಳು ಸೇರಿದಂತೆ ಇತರೆ ಸಂಸ್ಥೆಯಲ್ಲಿ ಖಾಯಂ ಹಾಗೂ ದಿನಗೂಲಿ ಮೇಲೆ ಕೆಲಸ ನಿರ್ವಹಿಸುವ ಪದವೀಧರರು ಮತ್ತು ಶಿಕ್ಷಕರು ಮತದಾನ ಮಾಡಲು ಅನುಕೂಲವಾಗುವಂತೆ ವಿಶೇಷ ಸಾಂದರ್ಭಿಕ ರಜೆ ಮಂಜೂರು ಮಾಡಲು ಸರ್ಕಾರ ಆದೇಶಿಸಿದೆ.

**ಕ್ಷೇತ್ರದ ವ್ಯಾಪ್ತಿಗೆ ಬರುವ ಜಿಲ್ಲೆಗಳು:**

- ಆಗ್ನೇಯ ಪದವೀಧರ ಕ್ಷೇತ್ರ: ಚಿತ್ರದುರ್ಗ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ದಾವಣಗೆರೆ (ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕು ಹೊರತು ಪಡಿಸಿ)
- ಪಶ್ಚಿಮ ಪದವೀಧರ ಕ್ಷೇತ್ರ: ಧಾರವಾಡ, ಹಾವೇರಿ, ಗದಗ, ಉತ್ತರಕನ್ನಡ.
- ಈಶಾನ್ಯ ಶಿಕ್ಷಕರ ಕ್ಷೇತ್ರ: ಬೀದರ್, ಕಲಬುರಗಿ ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ.
- ಬೆಂಗಳೂರು ಶಿಕ್ಷಕರ ಕ್ಷೇತ್ರ: ಬೆಂಗಳೂರು, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆ.

**ನವೆಂಬರ್ 2ರಂದು ಫಲಿತಾಂಶ:** ವಿಧಾನ ಪರಿಷತ್‌ನ ನಾಲ್ಕು ಕ್ಷೇತ್ರಗಳಿಗೆ ನವೆಂಬರ್ 2 ರಂದು ಮತ ಎಣಿಕೆ ನಡೆಯಲಿದೆ. ಪದವೀಧರ ಕ್ಷೇತ್ರದ ಮತ ಎಣಿಕೆಯು, ಧಾರವಾಡದ ಕೃಷಿ ಕ್ಷೇತ್ರದ ಮತ ಎಣಿಕೆಯು ಧಾರವಾಡದ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ನಡೆಯಲಿದೆ. ಒಂದು ಹಾಲ್‌ನಲ್ಲಿ ಏಳು ಟೇಬಲ್ ವ್ಯವಸ್ಥೆ ಮಾಡಲಾಗಿದೆ. ಈಶಾನ್ಯ ಶಿಕ್ಷಕರ ಕ್ಷೇತ್ರದ ಮತ ಎಣಿಕೆಯು ಗುಲ್ಬರ್ಗಾ ವಿಶ್ವವಿದ್ಯಾಲಯದ ಗಣಿತ ವಿಭಾಗದಲ್ಲಿ ನಡೆಯಲಿದ್ದು, ಒಂದು ಹಾಲ್‌ನಲ್ಲಿ ಏಳು ಟೇಬಲ್ ವ್ಯವಸ್ಥೆ ಮಾಡಲಾಗಿದ್ದು, ಆಗ್ನೇಯ ಪದವೀಧರರ ಕ್ಷೇತ್ರ ಮತ್ತು ಬೆಂಗಳೂರು ಶಿಕ್ಷಕರ ಮತ ಕ್ಷೇತ್ರದ ಮತ ನಡೆಯಲಿದ್ದು, ಪ್ರತ್ಯೇಕವಾಗಿ ಎರಡು ಹಾಲ್‌ನಲ್ಲಿ ತಲಾ 14 ಟೇಬಲ್‌ಗಳ ವ್ಯವಸ್ಥೆ ಮಾಡಲಾಗಿದೆ.

ಆಧಾರ: ಕನ್ನಡಪ್ರಭ, ದಿನಾಂಕ:28.10.2020

## 10. ಪರಿಷತ್4 ಸ್ಥಾನಗಳಿಗೆ ಇಂದು ಮತದಾನ

ವಿಧಾನ ಪರಿಷತ್ತಿನ 2 ಪದವೀಧರ ಮತ್ತು 2 ಶಿಕ್ಷಕರ ಕ್ಷೇತ್ರಗಳಿಗೆ ಅಕ್ಟೋಬರ್ 28 ಮತದಾನ ನಡೆಯಲಿದ್ದು, ನವೆಂಬರ 2 ರಂದು ಮತ ಎಣಿಕೆ ನಡೆಯಲಿದೆ.

ಬೆಳಿಗ್ಗೆ 8 ರಿಂದ ಸಂಜೆ 5 ರವರೆಗೆ ಮತದಾನ ನಡೆಯಲಿದೆ. ನಾಲ್ಕು ಕ್ಷೇತ್ರಗಳಲ್ಲಿ ಒಟ್ಟು 2,34,718 ಮಂದಿ ಮತದಾರರಿದ್ದಾರೆ. ಮತದಾನಕ್ಕಾಗಿ 549 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಮತದಾರರು ಚುನಾವಣಾ ಗುರುತಿನ ಚೀಟಿ ಅಥವಾ ಆಧಾರ್, ಚಾಲನಾ ಪರವಾನಿಗಿ, ಪಾಸ್‌ಪೋರ್ಟ್, ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರಾಗಿದ್ದರೆ ಅವರ ಕಚೇರಿ ಗುರುತಿನ ಚೀಟಿಯನ್ನು ತೋರಿಸಿ ಮತದಾನ ಮಾಡಬಹುದು ಎಂದು ಚುನಾವಣಾ ಆಯೋಗ ತಿಳಿಸಿದೆ.

ಆಧಾರ: ಪ್ರಜಾವಾಣಿ, ದಿನಾಂಕ:28.10.2020.

## 11. ವಿಧಾನ ಪರಿಷತ್ತಿನ ನಾಲ್ಕು ಕ್ಷೇತ್ರಗಳಲ್ಲಿ ವೋಟಿಂಗ್

ವಿಧಾನ ಪರಿಷತ್ 4 ಕ್ಷೇತ್ರಗಳ ದ್ವೈವಾರ್ಷಿಕ ಚುನಾವಣೆಗೆ ಏರ್ಪಟ್ಟ ತುರುಸಿನ ಸ್ಪರ್ಧೆಗೆ ತಕ್ಕಂತೆ ಬಿರುಸಿನ ಶೇ.71.11 ಮತದಾನ ಶಾಂತಿಯುತವಾಗಿ ನೆರವೇರಿದೆ ಬಹಳ ಉಮೇದಿಯಿಂದಲೇ ಓಡಾಡಿದ್ದ ಅಭ್ಯರ್ಥಿ ಎದೆ ಬಡಿತವನ್ನು ಹೆಚ್ಚಿಸಿದೆ.

ಬೆಳಿಗ್ಗೆ ಮಂದಗತಿಯಲ್ಲೇ ಶುರುವಾಗಿದ್ದ ಮತದಾನ ಹೊತ್ತೇರುತ್ತಿದ್ದಂತೆ ಚುರುಕಾಗಿದೆ. ಕೊರೋನಾ ಭೀತಿಯನ್ನು ಹಿಮ್ಮೆಟ್ಟಿಸಿದ ಮತದಾರರ ಅತ್ಯುತ್ಸಾಹ ಈ ಬಾರಿ ಹೊಸ ದಾಖಲೆಯನ್ನು ಸೃಷ್ಟಿಸಿದೆ. ಒಟ್ಟಾರೆ ಶೇ.71.11 ಮತದಾನವಾಗಿದೆ. 4 ಕ್ಷೇತ್ರಗಳಿಗೆ 40 ಅಭ್ಯರ್ಥಿಗಳು ಸ್ಪರ್ಧಿಸಿದ್ದು, ಒಟ್ಟು 2,34,718 ಮತದಾರರಿದ್ದಾರೆ.

ಮತ್ತೊಮ್ಮೆ ಅದೃಷ್ಟ ಪರೀಕ್ಷೆ: ಕಳೆದ ಅವಧಿಯಲ್ಲಿ ಮೇಲ್ಮನೆಯನ್ನು ಪ್ರತಿನಿಧಿಸಿದ್ದ ಬಿಜೆಪಿಯ ಎಸ್.ವಿ. ಸಂಕನೂರು (ಪಶ್ಚಿಮ ಪದವೀಧರ ಕ್ಷೇತ್ರ), ಜೆಡಿಎಸ್‌ನ ಆರ್.ಚೌಡರೆಡ್ಡಿ ತೂಪಲಿ (ಆಗ್ನೇಯ ಪದವೀಧರ) ಹಾಗೂ ಕಾಂಗ್ರೇಸ್‌ನ ಶರಣಪ್ಪ ಮಟ್ಟೂರು (ಈಶಾನ್ಯ ಶಿಕ್ಷಕರ ಕ್ಷೇತ್ರ) ಮತ್ತೊಮ್ಮೆ ಅದೃಷ್ಟ ಪರೀಕ್ಷೆ ಇಳಿದಿದ್ದಾರೆ.

ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿದ್ದ ಪುಟ್ಟಣ್ಣ, 4ನೇ ಬಾರಿ ಆಯ್ಕೆ ಬಯಸಿದ್ದು, ಹಿಂದಿನ ಅವಧಿಯಲ್ಲಿ ಜೆಡಿಎಸ್‌ನಿಂದ ಗೆದ್ದವರು, ಈ ಬಾರಿ ಬಿಜೆಪಿಯಿಂದ ಸ್ಪರ್ಧಾ ಅಖಾಡಕ್ಕೆ ಧುಮುಕಿದ್ದಾರೆ.

ಪ್ರತಿಷ್ಠೆಯ ಪಣ: ಆಡಳಿತರೂಢ ಭಾರತೀಯ ಜನತಾಪಕ್ಷಕ್ಕೆ ವಿಧಾನ ಪರಿಷತ್ತಿನ ತನ್ನ ಸಂಖ್ಯಾಬಲ ವೃದ್ಧಿಸಿಕೊಳ್ಳುವುದು ಮುಖ್ಯವಾಗಿದೆ. ಪ್ರತಿಪಕ್ಷ ಕಾಂಗ್ರೇಸ್‌ಗೆ ವರ್ಚಸ್ಸು ಮರು ಸ್ಥಾಪಿಸುವ

ಹುಮ್ಮಸ್ಸಿದ್ದರೆ, ಜೆಡಿಎಸ್‌ಗೆ ತನ್ನ ಬಲ ಸಾಬೀತುಪಡಿಸುವ ಛಲವಿದೆ. 3 ಪ್ರಮುಖ ಪಕ್ಷಗಳು ಪ್ರತಿಷ್ಠೆ ಪಣಕ್ಕಿಟ್ಟು ಸೆಣಸಾಡಿವೆ.

ಕೊರೋನಾ ದಿಗಿಲಿನಿಂದ ಮತದಾರರು ಮತಗಟ್ಟೆಗೆ ಬರಲು ಹಿಂಜರಿಯಬಹುದು ಎನ್ನುವ ಅಳುಕು ಹುಸಿಯಾಗಿದೆ. ಬದಲಿಗೆ ನಿರೀಕ್ಷೆಗೆ ಮೀರಿದ ಮತದಾನ ಆಗಿರುವ ಕಾರಣ ಜಿದ್ದಾಜಿದ್ದಿಗೆ ಇಳಿದ ಪಕ್ಷಗಳ ಕುತೂಹಲ, ಅಭ್ಯರ್ಥಿಗಳಲ್ಲಿ ಢವಢವ ಹೆಚ್ಚಿಸಿರುವುದು ಸಹಜ. ನವೆಂಬರ್ 2 ರಂದು ಮತ ಎಣಿಕೆ ನಡೆಯಲಿದೆ.

ಸಚಿವ ಜಗದೀಶ ಶೆಟ್ಟರ್ ಪುತ್ರ ಸಂಕಲ್ಪ ಶೆಟ್ಟರ್ ಅವರಿಗೆ ಮತ ಚಲಾವಣೆಗೆ ಅವಕಾಶ ಸಿಗಲಿಲ್ಲ. ವಿಧಾನ ಪರಿಷತ್ ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಮತಚಲಾವಣೆಗೆ ಅವರು ಸಚಿವ ಜಗದೀಶ್ ಶೆಟ್ಟರ್, ಎಂಎಲ್‌ಸಿ ಪ್ರದೀಪ್ ಶೆಟ್ಟರ್ ಹಾಗೂ ಬಿಜೆಪಿ ಮುಖಂಡರೊಂದಿಗೆ ಕೇಶ್ವಾಪುರ ಫಾತಿಮಾ ಪ್ರೌಢಶಾಲೆ ಮತಗಟ್ಟೆಗೆ ಆಗಮಿಸಿದ್ದರು. ಆದರೆ, ಮತದಾರರ ಪಟ್ಟಿಯಲ್ಲಿ ಅವರ ಹೆಸರು ಇರಲಿಲ್ಲ, ಈ ಕಾರಣಕ್ಕೆ ಅಧಿಕಾರಿಗಳು ಮತ ಚಲಾವಣೆಗೆ ಅವಕಾಶ ನೀಡಲಿಲ್ಲ.

ಆಧಾರ: ವಿಜಯವಾಣಿ, ದಿನಾಂಕ:29.10.2020.

## 12. ಸೋಂಕಿತರಿಗೂ ಮತದಾನಕ್ಕೆ ಅವಕಾಶ

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೋವಿಡ್ ಸೋಂಕಿತರು ಮತ್ತು ರೋಗ ಲಕ್ಷಣವುಳ್ಳವರಿಗೆ ಮತದಾನ ದಿನದ ಕೊನೆಯ ಒಂದು ಗಂಟೆಯಲ್ಲಿ (ಸಂಜೆ 5 ರಿಂದ 6 ಗಂಟೆ) ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗಿದೆ. ಈ ಸಂದರ್ಭದಲ್ಲಿ ಸೋಂಕಿತರು ಮತ್ತು ಮತಗಟ್ಟೆ ಅಧಿಕಾರಿ, ಸಿಬ್ಬಂದಿ ಪಿಪಿಇ ಕಿಟ್‌ಗಳನ್ನು ಧರಿಸುವುದನ್ನು ಕಡ್ಡಾಯಗೊಳಿಸಲಾಗಿದೆ. " ರಾಜರಾಜೇಶ್ವರಿನಗರ ಕ್ಷೇತ್ರ ವ್ಯಾಪ್ತಿಯಲ್ಲಿ ಈವರೆಗೆ ಒಟ್ಟು 1,117 ಸೋಂಕಿತರನ್ನು ಗುರುತಿಸಲಾಗಿದೆ. ಈ ಪೈಕಿ ಆಸ್ಪತ್ರೆಗಳಲ್ಲಿ 317, ಆರೈಕೆ ಕೇಂದ್ರಗಳಲ್ಲಿ 18 ಮತ್ತು ಹೋಮ್ ಐಸೋಲೇಷನ್‌ನಲ್ಲಿ 842 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನವೆಂಬರ್ 3 ರಂದು ಮತದಾನ ನಡೆಯಲಿದ್ದು, ಆ ವೇಳೆಗೆ ಸೋಂಕಿತರ ಸಂಖ್ಯೆ ಮತ್ತಷ್ಟು ಜಾಸ್ತಿಯಾಗುವ ಸಾಧ್ಯತೆಗಳಿವೆ. ಇವರೆಲ್ಲರಿಗೂ ಮತದಾನಕ್ಕೆ ಅವಕಾಶ ಮಾಡಿಕೊಡಲಾಗುತ್ತಿದೆ," ಎಂದು ಜಿಲ್ಲಾ ಚುನಾವಣಾಧಿಕಾರಿ ಎನ್. ಮಂಜುನಾಥ್ ಪ್ರಸಾದ್ ಹೇಳಿದರು.

ಹೋಮ್ ಐಸೋಲೇಷನ್‌ನಲ್ಲಿರುವ ಸೋಂಕಿತರು ಕೋವಿಡ್ ನಿಯಂತ್ರಣ ಕೊಠಡಿ ಅಥವಾ ನೋಡಲ್ ಅಧಿಕಾರಿಗಳಿಗೆ ಕರೆ ಮಾಡಿ ಮತದಾನಕ್ಕೆ ಅಗತ್ಯ ವ್ಯವಸ್ಥೆ ಮಾಡುವಂತೆ ಕೋರಿಕೆ ಸಲ್ಲಿಸಬಹುದು. ನಿಯಂತ್ರಣ ಕೊಠಡಿ ಸಿಬ್ಬಂದಿ ಕೂಡ ಸೋಂಕಿತರಿಗೆ ಕರೆ ಮಾಡಿ ಮಾಹಿತಿ ಒದಗಿಸಲಿದ್ದಾರೆ. ಆಸ್ಪತ್ರೆ ಮತ್ತು ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳು ಮತದಾನ ಮಾಡಲು ಇಚ್ಛಿಸಿದರೆ, ವೈದ್ಯರ ಅನುಮತಿ ಆಧರಿಸಿ ಅವಕಾಶ ಕಲ್ಪಿಸಲಾಗುವುದು. ಹೋಮ್ ಐಸೋಲೇಷನ್‌ನಲ್ಲಿರುವ ಸೋಂಕಿತರನ್ನು ಮನೆಯಿಂದ ಮತಗಟ್ಟೆಗೆ ಕರೆತರಲು ಪ್ರತಿ ವಾರ್ಡ್‌ಗೆ ತಲಾ 10 ರಂತೆ 90 ಆ್ಯಂಬುಲೆನ್ಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಮೇಲ್ವಿಚಾರಣೆಗಾಗಿ ಕ್ಷೇತ್ರದಲ್ಲಿನ 9 ವಾರ್ಡ್‌ಗಳಿಗೂ ತಲಾ ಒಬ್ಬರು ಹಿರಿಯ ಆರೋಗ್ಯ ಪರಿವೀಕ್ಷಕರನ್ನು ನಿಯೋಜಿಸಲಾಗಿದೆ. ರೋಗ ಲಕ್ಷಣವುಳ್ಳವರು ಮತ್ತು ಪ್ರಾಥಮಿಕ ಸಂಪರ್ಕಿತರಿಗೆ ಪ್ರತ್ಯೇಕ ವಾಹನಗಳ ವ್ಯವಸ್ಥೆ ಮಾಡಲಾಗುವುದು. ನವೆಂಬರ್ 3ರಂದು ಸಂಜೆ 5ರ ವೇಳೆಗೆ ಸೋಂಕಿತರನ್ನು ಮನೆಯಿಂದ ಮತಗಟ್ಟೆಗಳಿಗೆ ಕರೆತರಲಾಗುತ್ತದೆ. ಕೊನೆಯ ಒಂದು ತಾಸಿನಲ್ಲಿ ರೋಗ ಲಕ್ಷಣವಿಲ್ಲದ ಇತರರು ಬಂದರೆ, ಮತಗಟ್ಟೆಯಲ್ಲಿ ಸ್ಯಾನಿಟೈಸ್ ಮಾಡಿ ಮತದಾನಕ್ಕೆ ಅನುವು ಮಾಡಿಕೊಡಲಾಗುವುದು ಎಂದು ವಿವರಿಸಿದರು.

**ಆಕ್ಟೋಬರ್ 31ರವರೆಗೆ ಅಂಚೆ ಮತದಾನ:** "ಚುನಾವಣಾ ಆಯೋಗದ ಕೋವಿಡ್ ನಿಯಮಾವಳಿ ಅನ್ವಯ ಕ್ಷೇತ್ರದಲ್ಲಿನ 80 ವರ್ಷ ಮೇಲ್ಪಟ್ಟ 5560 ಹಿರಿಯ ನಾಗರಿಕರು ಮತ್ತು 695 ವಿಕಲಚೇತನರಿಗೆ ಅಂಚೆ ಮತದಾನಕ್ಕೆ ಅವಕಾಶ ನೀಡಲಾಗಿತ್ತು.

ಈ ಪೈಕಿ 489 ಹಿರಿಯ ನಾಗರಿಕರು ಮತ್ತು 23 ಮಂದಿ ವಿಶೇಷಚೇತನರು ಅಂಚೆ ಮತದಾನಕ್ಕೆ ಅವಕಾಶ ಕೋರಿದ್ದಾರೆ. ಇವರಿಗೆ ಆಕ್ಟೋಬರ್ 29 ರಿಂದ ಆಕ್ಟೋಬರ್ 31 ರವರೆಗೆ ಅಂಚೆ ಮತಹಾಕಲು ಅನುವು ಮಾಡಿಕೊಡಲಾಗಿದೆ. ಮತಗಟ್ಟೆ ಅಧಿಕಾರಿಗಳು, ಪೊಲೀಸ್ ಸಿಬ್ಬಂದಿ, ಮತದಾರರ ಮನೆಗೆ ತೆರಳಿ ಮತ ಪತ್ರವನ್ನು ತಲುಪಿಸಲಿದ್ದಾರೆ. ಮತ ಚಲಾಯಿಸುವಾಗ ಗೌಪ್ಯತೆ ಕಾಪಾಡಲಾಗುತ್ತದೆ. ಈ ಎಲ್ಲ ಪ್ರಕ್ರಿಯೆಯನ್ನು ವಿಡಿಯೋ ಚಿತ್ರೀಕರಣ ಮಾಡಲಾಗುತ್ತದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಎನ್. ಮಂಜುನಾಥ ಪ್ರಸಾದ್ ತಿಳಿಸಿದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:30.10.2020

## 13. ಡಿಸೆಂಬರ್ 22,27ಕ್ಕೆ ಹಳ್ಳಿ ಫೈಟ್

ರಾಜ್ಯದ 30 ಜಿಲ್ಲೆಗಳ 5672 ಗ್ರಾಮ ಪಂಚಾಯಿತಿಗಳಿಗೆ ಡಿಸೆಂಬರ್ 22 ಹಾಗೂ 27ರಂದು 2 ಹಂತದಲ್ಲಿ ಚುನಾವಣೆ ನಡೆಸಲು ರಾಜ್ಯ ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟಿಸಿದ್ದು, ತಕ್ಷಣದಿಂದಲೇ ನೀತಿ ಸಂಹಿತೆ ಜಾರಿಗೆ ಬಂದಿದೆ.

30 ಜಿಲ್ಲೆಗಳ 6004 ಗ್ರಾಮ ಪಂಚಾಯಿತಿ ಪೈಕಿ ಅವಧಿ ಮುಕ್ತಾಯವಾಗದ 162 ಗ್ರಾಮ ಪಂಚಾಯಿತಿ ಕೋರ್ಟ್‌ಲ್ಲಿ ಕೇಸಿರುವ 6 ಗ್ರಾಮ ಪಂಚಾಯಿತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಪೂರ್ಣವಾಗಿ ಸೇರ್ಪಡೆಯಾಗಿರುವ 33 ಮತ್ತು ಭಾಗಶಃ ಸೇರ್ಪಡೆಯಾಗಿರುವ 41 ಗ್ರಾಮ ಪಂಚಾಯಿತಿ ಸೇರಿದಂತೆ 242 ಗ್ರಾಮ ಪಂಚಾಯಿತಿಗಳನ್ನು ಹೊರತುಪಡಿಸಿ 5672 ಗ್ರಾಮ ಪಂಚಾಯಿತಿಗಳ, 35,884 ವಾರ್ಡ್‌ಗಳ, 92,121 ಸದಸ್ಯ ಸ್ಥಾನಗಳಿಗೆ (ಒಂದು ವಾರ್ಡ್‌ನಲ್ಲಿ ಒಂದಕ್ಕಿಂತ ಹೆಚ್ಚು ಸದಸ್ಯ ಸ್ಥಾನಗಳಿಗೆ ಅವಕಾಶವಿದೆ) ಚುನಾವಣೆ ನಡೆಯಲಿದೆ.

ಈ ತಿಂಗಳ 30ರಂದು ಮತ ಎಣಿಕೆ ನಡೆಯಲಿದೆ. ಈ ಚುನಾವಣೆ ಪಕ್ಷಾತೀತವಾಗಿ ನಡೆಯಲಿದ್ದು, ಯಾವುದೇ ರಾಜಕೀಯ ಪಕ್ಷದ ಅಭ್ಯರ್ಥಿಯಾಗಿ ಅಥವಾ ಪಕ್ಷದ ಚಿಹ್ನೆ ಅಡಿಯಲ್ಲಿ ಸ್ಪರ್ಧಿಸಲು ಅವಕಾಶ ಇರುವುದಿಲ್ಲ.

ಸುದ್ದಿಗೋಷ್ಠಿಯಲ್ಲಿ ಚುನಾವಣಾ ವೇಳಾ ಪಟ್ಟಿ ಪ್ರಕಟಿಸಿದ ರಾಜ್ಯ ಚುನಾವಣಾ ಆಯೋಗದ ಆಯುಕ್ತ ಡಾ.ಬಿ. ಬಸವರಾಜು, ಎಲ್ಲಾ ಜಿಲ್ಲೆಗಳಲ್ಲಿ ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದೆ, ಪ್ರತಿ ತಾಲ್ಲೂಕಿನ ಅರ್ಧ ತಾಲ್ಲೂಕುಗಳು ಮೊದಲ ಹಂತದಲ್ಲಿ, ಉಳಿದರ್ಧ ತಾಲ್ಲೂಕುಗಳಲ್ಲಿ ಎರಡನೇ ಹಂತದಲ್ಲಿ ಚುನಾವಣೆ ನಡೆಯಲಿದೆ, ಬೀದರ್ ಜಿಲ್ಲೆಯಲ್ಲಿ ಮಾತ್ರ ಮತದಾನಕ್ಕೆ ವಿದ್ಯುನ್ಮಾನ ಮತ ಯಂತ್ರ ಬಳಸಲಾಗುವುದು, ಉಳಿದ ಕಡೆ ಮತಪತ್ರಗಳ ಮೂಲಕ ಮತದಾನ ನಡೆಯಲಿದೆ.

**ನೀತಿ ಸಂಹಿತೆ ತಕ್ಷಣದಿಂದ ಜಾರಿ:** ಚುನಾವಣಾ ವೇಳಾಪಟ್ಟಿ ಪ್ರಕಟಗೊಂಡಿರುವ ಹಿನ್ನೆಲೆಯಲ್ಲಿ ತಕ್ಷಣದಿಂದ ಡಿಸೆಂಬರ್ 31 ರವರೆಗೆ ಸಂಜೆ 5 ಗಂಟೆಯವರೆಗೆ ಚುನಾವಣಾ ನೀತಿಸಂಹಿತೆ ಜಾರಿಯಲ್ಲಿರುತ್ತದೆ. ಆದರೆ ನೀತಿ ಸಂಹಿತೆ ಪಟ್ಟಣ ಪಂಚಾಯಿತಿ. ಪುರಸಭೆ, ನಗರಸಭೆ, ನಗರ ಪಾಲಿಕೆ, ಮಹಾನಗರ ಪಾಲಿಕೆ ಪ್ರದೇಶಗಳಿಗೆ ಅನ್ವಯವಾಗುವುದಿಲ್ಲ ಎಂದು ಅವರು ತಿಳಿಸಿದರು.

ಒಟ್ಟು 2,97,15,048 ಪಂಚಾಯಿತಿ ಮತದಾರರಿದ್ದು, ಈ ಪೈಕಿ 1,49,71,676 ಪುರುಷರ, 1,47,41,964 ಮಹಿಳೆಯರ ಹಾಗೂ 1408 ಇತರ ಮತದಾರರಾಗಿದ್ದಾರೆ. ಕೋವಿಡ್ ಹಿನ್ನೆಲೆಯಲ್ಲಿ ಮತಗಟ್ಟೆಯಲ್ಲಿ ಮತದಾರರ ಸಂಖ್ಯೆಯನ್ನು ಗರಿಷ್ಠ ಒಂದು ಸಾವಿರಕ್ಕೆ ಮಿತಿಗೊಳಿಸಲಾಗಿದೆ. ಒಟ್ಟು 42,128 ಮತಗಟ್ಟೆ ಸ್ಥಾಪಿಸಲಾಗಿದೆ. ಚುನಾವಣಾ ಪ್ರಕ್ರಿಯೆಗೆ 5847 ಚುನಾವಣಾಧಿಕಾರಿಗಳನ್ನು ನೇಮಿಸಲಾಗಿದೆ. ಒಟ್ಟಾರೆ 2,70,768 ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ನೇಮಿಸಲಾಗಿದೆ ಎಂದು ವಿವರಿಸಿದರು.

ಕೋವಿಡ್ ಹಿನ್ನೆಲೆಯಲ್ಲಿ ಚುನಾವಣೆಗಾಗಿ ಮೊದಲ ಬಾರಿಗೆ 45 ಸಾವಿರ ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕರ್ತರು ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿಗಳ ಸೇವೆಯನ್ನು ಪಡೆದುಕೊಳ್ಳಲಾಗುವುದು.

**ಸೋಂಕಿತರಿಗೆ ಪ್ರತ್ಯೇಕ ಅವಕಾಶ:** ಕೋವಿಡ್ ಸೋಂಕಿತರು ಹಾಗೂ ಶಂಕಿತರಿಗಾಗಿ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಂಡು, ಸಂಬಂಧ ಪಟ್ಟ ಮತಗಟ್ಟೆಗಳಲ್ಲಿ ಮತದಾನದ ಕೊನೆಯ ಒಂದು ಗಂಟೆಯ ಅವಧಿಯಲ್ಲಿ ಮತದಾನಕ್ಕೆ ಅವಕಾಶ ಮಾಡಲು ಅವಕಾಶ ನೀಡಲಾಗುವುದು. ಕೋವಿಡ್ ಹಿನ್ನೆಲೆಯಲ್ಲಿ ಆಯೋಗ ಚುನಾವಣೆ ನಡೆಸಲು ತಯಾರಿಸಿರುವ ಮಾರ್ಗಸೂಚಿ ಪ್ರಕಾರ ಚುನಾವಣೆ ನಡೆಸಲು ಆದೇಶಿಸಿದೆ. ಮತದಾರರು ಕಡ್ಡಾಯವಾಗಿ ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾಯ್ದುಕೊಂಡು, ಮತಗಟ್ಟೆ ಪ್ರವೇಶಿಸುವ ಮೊದಲು ಸ್ಯಾನಿಟೈಸ್ ಮಾಡಿಕೊಂಡು ಮತ ಚಲಾಯಿಸಬೇಕಾಗುತ್ತದೆ ಎಂದು ಚುನಾವಣಾ ಆಯುಕ್ತ ಬಿ. ಬಸವರಾಜು ತಿಳಿಸಿದರು.

ಆಧಾರ: ಕನ್ನಡ ಪ್ರಭ, ದಿನಾಂಕ:01.12.2020

## 14. ಚುನಾವಣಾ ಸಿಬ್ಬಂದಿಗೆ ಸಂಭಾವನೆ ಹೆಚ್ಚಳ

ಚುನಾವಣಾ ಕಾರ್ಯ ನಿರ್ವಹಿಸುವ ಸರ್ಕಾರಿ ನೌಕರರಿಗೆ ಚುನಾವಣಾ ಆಯೋಗ, ನೌಕರರಿಗೆ ನೀಡುತ್ತಿದ್ದ ಗೌರವ ಸಂಭಾವನೆಯಲ್ಲಿ ಭಾರಿ ಏರಿಕೆ ಮಾಡಿದೆ. ಎದುರಾಗಲಿರುವ ಗ್ರಾಮ ಪಂಚಾಯಿತಿ ಚುನಾವಣೆಗೆ ಇದರ ಲಾಭ ಸಿಗಲಿದೆ.

ಚುನಾವಣೆ ಘೋಷಣೆಯಾದಾಗಿನಿಂದ ಮತ ಎಣಿಕೆವರೆಗೂ ನುರಿತ ನೌಕರರ ಒಂದು ತಂಡ ಕಾರ್ಯನಿರ್ವಹಿಸುತ್ತದೆ. ಇವರಿಗೆ ಸಂಬಳದ ಜೊತೆಗೆ ಗೌರವ ಸಂಭಾವನೆಯನ್ನೂ ನೀಡುವುದು ಹಿಂದಿನಿಂದ ನಡೆದು ಬಂದ ಪರಿಪಾಠ. ಆದರೆ ಈ ತೆರನಾಗಿ ನೀಡುವ ಗೌರವ ಸಂಭಾವನೆ ತೀರಾ ಕಡಿಮೆ ಎನ್ನುವ ಅಸಮಾಧಾನ ನೌಕರ ವರ್ಗದಿಂದ ಇದ್ದೇ ಇತ್ತು.

ಈ ಹಿನ್ನೆಲೆಯಲ್ಲಿ ಆಗೊಮ್ಮೆ ಈಗೊಮ್ಮೆ ಸಂಭಾವನೆ ಮೊತ್ತ ಪರಿಷ್ಕರಿಸಲಾಗಿತ್ತು. 2014 ರ ಪರಿಷ್ಕರಣೆಯ ನಂತರ, 2018ರಲ್ಲಿ ಪರಿಷ್ಕರಣೆ ಮಾಡಲಾಗಿತ್ತು. ಗ್ರಾಮ ಪಂಚಾಯಿತಿ ಚುನಾವಣೆ ಹೊಸ್ತಿಲಲ್ಲಿ ಸಂಭಾವನೆ ಪರಿಷ್ಕರಣೆ ಮಾಡಲಾಗಿದೆ. ಈ ಹಿಂದಿನ ಪರಿಷ್ಕರಣೆಗೆ ಹೋಲಿಸಿದಾಗ ಮೊತ್ತ ಹೆಚ್ಚಾಗಿದೆ. ಸಾರ್ವತ್ರಿಕ ಚುನಾವಣಾಧಿಕಾರಿ ದಿನವೊಂದಕ್ಕೆ ರೂ.6 ಸಾವಿರ ಪಡೆಯುತ್ತಿದ್ದರು. ರೂ.8 ಸಾವಿರಕ್ಕೆ ಏರಿಕೆಯಾಗಿದೆ. ಉಪ ಚುನಾವಣೆಗೆ ರೂ 6 ಸಾವಿರ ನೀಡಲು ನಿರ್ಧರಿಸಲಾಗಿದೆ. ಸಾರ್ವತ್ರಿಕ ಚುನಾವಣೆಗೆ ಸಹಾಯಕ ಚುನಾವಣಾಧಿಕಾರಿಗೆ ರೂ.6 ಸಾವಿರ ನೀಡಲು ನಿರ್ಧರಿಸಲಾಗಿದೆ. ಇನ್ನುಳಿದಂತೆ ತರಬೇತಿ, ಮಸ್ಟರಿಂಗ್, ಡಿಮಸರಿಂಗ್ ಕೆಲಸ ನಿರ್ವಹಿಸುವ ಪಿಆರ್‌ಓಗೆ 500 ರೂ.,ಐಪಿಓ, ಐಐಪಿಓ, ಐಐಐಪಿಓ ಅವರಿಗೆ ರೂ.350 ಡಿ ದರ್ಜೆ ನೌಕರರಿಗೆ ರೂ.200 ನೀಡುವುದಾಗಿ ರಾಜ್ಯ ಚುನಾವಣಾ ಆಯೋಗ ಆದೇಶ ಹೊರಡಿಸಿದೆ.

ಈ ಬಾರಿಯ ವಿಶೇಷತೆ ಎಂದರೆ, ಮತದಾರರು ಹಾಗೂ ಅಧಿಕಾರಿಗಳಿಗೆ ಥರ್ಮಲ್ ಸ್ಕ್ಯಾನಿಂಗ್ ಮತ್ತು ಸ್ಯಾನಿಟೈಸಿಂಗ್ ಮಾಡುವ ವೈದ್ಯಕೀಯ ಇಲಾಖೆ ಸಿಬ್ಬಂದಿ, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರಿಗೆ ಪ್ರತಿ ದಿನಕ್ಕೆ ರೂ.700 ಗೌರವ ಸಂಭಾವನೆ ನೀಡಲು ನಿರ್ಧರಿಸಲಾಗಿದೆ. ಇದೇ ತೆರನಾಗಿ ವಿವಿಧ ಸ್ತರದಲ್ಲಿ ಕೆಲಸ ನಿರ್ವಹಿಸುವ ಸಿಬ್ಬಂದಿ ವರ್ಗಕ್ಕೂ ಹೆಚ್ಚಿನ ಸಂಭಾವನೆ ನೀಡಲಾಗುತ್ತಿದೆ.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:04.12.2020

## 15. ಯಾರು ಸ್ಪರ್ಧಿಸಬಹುದು

ಗ್ರಾಮ ಪಂಚಾಯಿತಿಗಳಿಗೆ ಪಕ್ಷರಹಿತವಾಗಿ ಚುನಾವಣೆಗಳನ್ನು ನಡೆಸಲಾಗುತ್ತದೆ. ಚುನಾವಣೆ ಮುಗಿದು ಮತ ಎಣಿಕೆಯಲ್ಲಿ ವಿಜೇತರಾದ ಅಭ್ಯರ್ಥಿಗಳ ಹೆಸರುಗಳನ್ನು ಜಿಲ್ಲಾಧಿಕಾರಿಗಳು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ಒಂದು ತಿಂಗಳ ಒಳಗಾಗಿ ಅಧ್ಯಕ್ಷ–ಉಪಾಧ್ಯಕ್ಷರನ್ನು ಆಯ್ಕೆ ಮಾಡಲಾಗುತ್ತದೆ. ಗ್ರಾಮ ಚುನಾವಣೆಗೆ ಸ್ಪರ್ಧಿಸುವವರ ಅರ್ಹತೆಗಳ ಬಗ್ಗೆ ಒಂದಿಷ್ಟು ಮಾಹಿತಿ ಇಲ್ಲಿದೆ.

- ಗ್ರಾಮ ಪಂಚಾಯಿತಿ ಚುನಾವಣೆಗೆ ಮತದಾನ ಮಾಡಲು 18 ವರ್ಷ ತುಂಬಿರಬೇಕು, ಮತದಾರರ ಪಟ್ಟಿಯಲ್ಲಿ ಹೆಸರು ಇರುವ ಪ್ರತಿಯೊಬ್ಬರು ಮತಚಲಾವಣೆಯ ಹಕ್ಕು ಹೊಂದಿರುತ್ತಾರೆ. ನಾಮಪತ್ರ ಸಲ್ಲಿಸುವ ಕೊನೆ ದಿನಾಂಕದವರೆಗೂ ಮತದಾರ ಪಟ್ಟಿಯಲ್ಲಿ ಹೆಸರು ಸೇರ್ಪಡೆ, ತಿದ್ದುಪಡಿ ಇತ್ಯಾದಿಗಳಿಗೆ ಅವಕಾಶವಿರುತ್ತದೆ.
- ಚುನಾವಣೆಗೆ ಸ್ಪರ್ಧಿಸಲು 21 ವರ್ಷ ತುಂಬಿರ ಬೇಕು. ಒಂದು ಗ್ರಾಮ ಪಂಚಾಯಿತಿಯ ಯಾವುದಾದರೂ ಕ್ಷೇತ್ರ/ವಾರ್ಡ್‌ನಿಂದ ಚುನಾವಣೆಗೆ ಸ್ಪರ್ಧಿಸಬೇಕಾದರೆ ಅಂತಹವರ ಹೆಸರು ಆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮತದಾರರ ಪಟ್ಟಿಯಲ್ಲಿ ಹೆಸರು ಇರಬೇಕು.
- ಮೀಸಲು ಸ್ಥಾನದಲ್ಲಿ ಸ್ಪರ್ಧಿಸುವವರು, ಸ್ಪರ್ಧಿಸಬಯಸುವವರು ಆಯಾ ಪ್ರವರ್ಗಕ್ಕೆ ಸೇರಿದ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ದೃಢೀಕರಣ ಪ್ರಮಾಣಪತ್ರವನ್ನು ನಾಮಪತ್ರದ ಜೊತೆಗೆ ಸಲ್ಲಿಸಬೇಕು.
- ಯಾರಾದರೂ ಯಾವುದಾದರೂ ನ್ಯಾಯಾಲಯದಿಂದ ಕ್ರಿಮಿನಲ್ ಪ್ರಕರಣದಲ್ಲಿ 3 ತಿಂಗಳಿಗೆ ಮೀರಿದ ಜೈಲು ಶಿಕ್ಷೆಗೆ ಒಳಗಾಗಿ, ಆ ಶಿಕ್ಷೆಯು ಮೇಲಿನ ನ್ಯಾಯಾಲಯದಲ್ಲಿ ವಜಾ ಆಗಿರದಿದ್ದರೆ ಅಂತಹವರು ಚುನಾವಣೆಗೆ ಸ್ಪರ್ಧಿಸಲು ಅರ್ಹರಾಗಿರುವುದಿಲ್ಲ, ಆದರೆ. ವಿಚಾರಣಾಧೀನ ಕೈದಿಗಳಿಗೆ ಸ್ಪರ್ಧಿಸಲು ಅವಕಾಶವಿದೆ. ಹಿಂದಿನ ಯಾವುದಾದರೂ ಅವಧಿಯಲ್ಲಿ ಹಣ, ಅಧಿಕಾರದ ದುರ್ಬಳಕೆ, ಸೇವಾ ದುರ್ವರ್ತನೆ ಪ್ರಕರಣದಲ್ಲಿ ಸದಸ್ಯ ಸ್ಥಾನದಿಂದ 6 ವರ್ಷದ ಅವಧಿಗೆ ಅನರ್ಹಗೊಂಡು, ಅ ಅನರ್ಹತೆಯ ಅವಧಿ ಇನ್ನೂ ಮುಗಿಯದಿದ್ದರೆ ಅಥವಾ ಅನರ್ಹತೆ ಪ್ರಕರಣಕ್ಕೆ ನ್ಯಾಯಾಲಯದಲ್ಲಿ ತಡೆ ಇಲ್ಲದಿದ್ದರೆ ಅಂತಹವರು ಚುನಾವಣೆಗೆ ಸ್ಪರ್ಧಿಸಲು ಅವಕಾಶವಿಲ್ಲ.
- ಕಾಯ್ದೆಯಲ್ಲಿ ವಿವರಿಸಿರುವಂತೆ ಯಾವುದಾದರೂ ಲಾಭದಾಯಕ ಹುದ್ದೆಯಲ್ಲಿದ್ದವರು, ಆ ಹುದ್ದೆಯಲ್ಲಿ ಮುಂದುವರಿದ್ದುಕೊಂಡೇ ಚುನಾವಣೆಗೆ ಸ್ಪರ್ಧಿಸುವಂತಿಲ್ಲ, ಗಂಡ ಸರ್ಕಾರಿ ನೌಕರರಾಗಿದ್ದರೆ ಆತನ ಹೆಂಡತಿ ಚುನಾವಣೆ ಸ್ಪರ್ಧಿಸಬಹುದು. ಅದೇ ರೀತಿ ಹೆಂಡತಿ ಸರ್ಕಾರಿ ಸೇವೆಯಲ್ಲಿದ್ದರೆ ಆಕೆಯ ಗಂಡ ಚುನಾವಣೆಗೆ ಸ್ಪರ್ಧಿಸಬಹುದು.
- ಗ್ರಾಮ ಪಂಚಾಯಿತಿ ಸದಸ್ಯರಾದರೆ ತಿಂಗಳಿಗೆ 1,000 ಗೌರವಧನ ನೀಡಲಾಗುತ್ತದೆ. ಒಂದು ವಾರ್ಡ್ ಅಭಿವೃದ್ಧಿಗೆ ವಿವಿಧ ಬಗೆಯ ಅನುದಾನ ಬರುತ್ತದೆ.
- ಶಾಸನಬದ್ಧ ಅನುದಾನ: ರಾಜ್ಯ ಸರ್ಕಾರದ ಅನುದಾನ.
- 15 ನೇ ಹಣಕಾಸು ಆಯೋಗದ ಅನುದಾನ: ಕೇಂದ್ರ ಸರ್ಕಾರದ ಅನುದಾನ.
- ಸ್ವಂತ ಆದಾಯ: ಆಸ್ತಿ ತೆರಿಗೆ, ಸ್ವಂತ ಕಟ್ಟಡದ ಬಾಡಿಗೆ ಇತರೆ ಮೂಲಗಳಿಂದ.
- ಕೇಂದ್ರ ಮತ್ತು ರಾಜ್ಯ ಸರ್ಕಾರ ವಿವಿಧ ಯೋಜನೆಗಳ ಅನುದಾನ: ವಸತಿ, ಸ್ವಚ್ಛ ಭಾರತ ಅನುದಾನ, ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆ ಅನುದಾನ ಇತ್ಯಾದಿ.

ಆಧಾರ: ಉದಯ ವಾಣಿ, ದಿನಾಂಕ:06.12.2020.

## 16. ಗ್ರಾಮ ಪಂಚಾಯಿತಿ ಸಮರಕ್ಕೆ ಇಂದಿನಿಂದಲೇ ನಾಮಪತ್ರ

ರಾಜ್ಯದ ಗ್ರಾಮ ಪಂಚಾಯಿತಿ ಚುನಾವಣೆಯ ಮೊದಲ ಹಂತದ ಅಧಿಸೂಚನೆ ಹೊರಬೀಳಲಿದ್ದು, ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭಗೊಳ್ಳಲಿದೆ. ಗ್ರಾಮ ಪಂಚಾಯಿತಿ ಚುನಾವಣೆ ಘೋಷಣೆಯಾಗುತ್ತಿದ್ದಂತೆ ಈಗಾಗಲೇ ಹಳ್ಳಿಗಳಲ್ಲಿ ರಾಜಕೀಯ ಅಖಾಡ ಸಿದ್ದಗೊಂಡಿದ್ದು, ಅಧಿಕೃತವಾಗಿ ನಾಮಪತ್ರ ಸಲ್ಲಿಕೆ ಪ್ರಾರಂಭವಾದ ನಂತರ ಮತ್ತಷ್ಟು ರಂಗು ಪಡೆಯಲಿದೆ.

ರಾಜ್ಯ ಚುನಾವಣಾ ಆಯೋಗದ ಸೂಚನೆ ಮೇರೆಗೆ ಆಯಾ ಜಿಲ್ಲಾಡಳಿತಗಳು ಗ್ರಾಮ ಪಂಚಾಯಿತಿ ಚುನಾವಣೆ ಅಧಿಸೂಚನೆ ಹೊರಡಿಸಲಿವೆ. ಅದರಂತೆ ರಾಜ್ಯದಲ್ಲಿ ಡಿಸೆಂಬರ್ 22ರಂದು ಮೊದಲನೇ ಹಂತದಲ್ಲಿ 3,021 ಗ್ರಾಮ ಪಂಚಾಯಿತಿ ಚುನಾವಣೆ ನಡೆಯುತ್ತಿದ್ದು, ಅಭ್ಯರ್ಥಿಗಳು ಡಿಸೆಂಬರ್ 11ರವರೆಗೆ ನಾಮಪತ್ರ ಸಲ್ಲಿಸಬಹುದಾಗಿದೆ. ಡಿಸೆಂಬರ್ 12 ರಂದು ನಾಮಪತ್ರ ಪರಿಶೀಲನೆ ನಡೆಯಲಿದ್ದು, ತಾಲ್ಲೂಕು ಡಿಸೆಂಬರ್ 14 ರಂದು ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿರುತ್ತದೆ.

ಈ ಮೊದಲು ರಾಜ್ಯ ಚುನಾವಣಾ ಆಯೋಗ ಘೋಷಿಸಿದ್ದ ಪ್ರಕಾರ 2,930 ಗ್ರಾಮ ಪಂಚಾಯಿತಿಗಳಿಗೆ ಮೊದಲ ಹಂತದಲ್ಲಿ ಚುನಾವಣೆ ನಡೆಸುವುದಾಗಿ ತಿಳಿಸಿತ್ತು. ಬಳಿಕ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೊದಲ ಹಂತದಲ್ಲಿ ನಡೆಸುವ 97 ಗ್ರಾಮ ಪಂಚಾಯಿತಿ ಜೊತೆಗೆ ಎರಡನೇ ಹಂತದಲ್ಲಿ ನಡೆಸಬೇಕಿದ್ದ 112 ಗ್ರಾಮ ಪಂಚಾಯಿತಿಗಳಿಗೂ ಮೊದಲ ಹಂತದಲ್ಲಿಯೇ ಚುನಾವಣೆ ನಡೆಸುವುದಾಗಿ ಘೋಷಿಸಿದೆ. ಇದರ ಜೊತೆಗೆ 2,930ರ ಪೈಕಿ, 21 ಗ್ರಾಮ ಪಂಚಾಯಿತಿಗಳು ನಗರ ಸ್ಥಳೀಯ ಸಂಸ್ಥೆಗಳಾಗಿ ಪರಿವರ್ತನೆಯಾಗಿರುವುದರಿಂದ ವಿವಿಧ ಜಿಲ್ಲೆಗಳ 21 ಗ್ರಾಮ ಪಂಚಾಯಿತಿಗಳಿಗೆ ಚುನಾವಣೆ ಕೈ ಬಿಟ್ಟಿದೆ. 2,930 ರ ಜೊತೆಗೆ ಚಿಕ್ಕಮಗಳೂರು ಜಿಲ್ಲೆಯ 112 ಸೇರಿ ಒಟ್ಟಾರೆ 3,021 ಪಂಚಾಯಿತಿಗಳಿಗೆ ನಾಮಪತ್ರ ಸಲ್ಲಿಕೆ ಆರಂಭಗೊಳ್ಳಲಿದೆ.

ಆಧಾರ: ಕನ್ನಡಪ್ರಭ, ದಿನಾಂಕ:07.12.2020.

## 17. ಮತದಾನ ವೇತನ ಸಹಿತ ರಜೆ

ರಾಜ್ಯದ ಗ್ರಾಮಪಂಚಾಯಿತಿಗಳಿಗೆ ಮೊದಲ ಹಂತದ ಚುನಾವಣೆ ನಡೆಯುವ ಡಿಸೆಂಬರ್ 22 ರಂದು ಎಲ್ಲ ರಾಜ್ಯ ಸರ್ಕಾರಿ ಕಚೇರಿ ಮತ್ತು ಸಾರ್ವಜನಿಕ ಉದ್ದಿಮೆಗಳು, ಎಲ್ಲ ಶಿಕ್ಷಣ ಸಂಸ್ಥೆಗಳಿಗೆ ವೇತನ ಸಹಿತ ಕಡ್ಡಾಯ ರಜೆ ಘೋಷಿಸಿ ಸರ್ಕಾರ ಆದೇಶ ಹೊರಡಿಸಿದೆ.

ಮತದಾನ ನಡೆಯುವ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿನ ಎಲ್ಲಾ ಸರ್ಕಾರಿ ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಕಚೇರಿ, ಕಾರ್ಖಾನೆ, ಉದ್ದಿಮೆಗಳು ನೌಕರರಿಗೆ ಕಡ್ಡಾಯವಾಗಿ ರಜೆ ನೀಡಿ ಮತದಾನಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಆದೇಶಿಸಲಾಗಿದೆ. ಆದೇಶ ಡಿಸೆಂಬರ್ 27ರಂದು ಮತದಾನ ನಡೆಯುವ ಪಂಚಾಯಿತಿ ವ್ಯಾಪ್ತಿಗೆ ಈ ರಜೆ ಅನ್ವಯಿಸುವುದಿಲ್ಲ ಎಂದು ತಿಳಿಸಲಾಗಿದೆ.

ಮತ್ತೊಂದಡೆ ಕರ್ನಾಟಕ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಯಲ್ಲಿನ ಸಹಾಯಕ ನಿಯಂತ್ರಕರು ಕೆಪಿಎಸ್‌ಸಿ ಪರೀಕ್ಷೆ ಎದುರಿಸಲು ನೀಡಲಾಗಿರುವ ಪ್ರವೇಶ ಪತ್ರ ಒದಗಿಸಿದಲ್ಲಿ ಪಂಚಾಯಿತಿ ಚುನಾವಣೆಗೆ ನಿಯೋಜಿಸಿರುವುದನ್ನು ರದ್ದುಗೊಳಿಸಿ ಪರೀಕ್ಷೆ ಬರೆಯಲು ಅನುವು ಮಾಡಿಕೊಡಲಾಗುತ್ತಿದೆ.

ಆಧಾರ: ಸಂಯುಕ್ತ ಕರ್ನಾಟಕ,ದಿನಾಂಕ:19.12.2020.

## 18. 4,377 ಮಂದಿ ಅವಿರೋಧ ಆಯ್ಕೆ

ಪಂಚಾಯಿತಿ ಚುನಾವಣೆಗೆ ಅಖಾಡ ಸಜ್ಜಾಗಿದ್ದು, 117 ತಾಲ್ಲೂಕುಗಳ 3,019 ಪಂಚಾಯಿತಿಗಳ 48,048 ಸ್ಥಾನಗಳಿಗೆ ಮತದಾನ ಜರುಗಲಿದೆ. ಶೇ.9 ರಷ್ಟು ಅಂದರೆ 4,377 ಮಂದಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ, 432 ಸ್ಥಾನಗಳಿಗೆ ಯಾರೊಬ್ಬರೂ ನಾಮಪತ್ರವನ್ನೇ ಸಲ್ಲಿಸಿಲ್ಲ. ವಿವಿಧ ಕಾರಣಗಳಿಗೆ

ಇಲ್ಲಿ ಚುನಾವಣೆಯನ್ನೇ ಬಹಿಷ್ಕರಿಸಲಾಗಿದೆ. 48,048 ಸ್ಥಾನಗಳಿಗೆ ಸುಮಾರು ಒಂದೂವರೆ ಲಕ್ಷ ಆಕಾಂಕ್ಷಿಗಳು ಸ್ಪರ್ಧಿಸಿದ್ದು, ಪ್ರತಿಯೊಬ್ಬರೂ ಇಬ್ಬರ ಮೇಲೆ ಪೈಪೋಟಿ ನಡೆಸಬೇಕಾಗಿದೆ.

ಬೆಂಗಳೂರು ನಗರದಲ್ಲಿ 531 ಸ್ಥಾನಗಳ ಪೈಕಿ 57ರಲ್ಲಿ ಅವಿರೋಧವಾಗಿ ಆಯ್ಕೆ ನಡೆದಿದೆ. ಬೆಳಗಾವಿ–437, ಮಂಡ್ಯ–364, ಬಳ್ಳಾರಿ–331ಗಳಲ್ಲಿ ಅತಿ ಹೆಚ್ಚು ಮಂದಿ ಸ್ಪರ್ಧೆ ರಹಿತವಾಗಿ ಜಯಶಾಲಿಗಳಾಗಿದ್ದಾರೆ.

| ಮೊದಲ ಹಂತದ ಸಮರ | |
|---|---|
| ಒಟ್ಟು ಸ್ಥಾನಗಳು | 48,048 |
| ಸ್ವೀಕೃತವಾದ ಒಟ್ಟು ನಾಮಪತ್ರಗಳು | 164,550 |
| ನಾಮ ಪತ್ರಸಲ್ಲಿಸದೇ ಇರುವ ಸ್ಥಾನಗಳು | 432 |
| ಉಮೇದುವಾರಿಕೆ ಹಿಂಪಡೆದವರು | 40,352 |
| ಕಣದಲ್ಲಿರುವವರು | 1,17,383 |

| ನಾಮಪತ್ರ ಸಲ್ಲಿಸದೇ ಇರುವ ಸ್ಥಾನಗಳು | |
|---|---|
| ಚಿಕ್ಕಮಗಳೂರು | 139 |
| ಬಾಗಲಕೋಟೆ | 41 |
| ಬಳ್ಳಾರಿ | 35 |
| ತುಮಕೂರು | 36 |
| ಹಾಸನ | 34 |
| ಯಾದಗಿರಿ | 22 |
| ಬೆಂಗಳೂರು ನಗರ | 22 |
| ಬೆಂಗಳೂರು (ಗ್ರಾ) | 21 |
| ಉಡುಪಿ | 12 |
| ಉತ್ತರ ಕನ್ನಡ | 09 |

| ದೊಡ್ಡ ಕ್ಷೇತ್ರ | |
|---|---|
| ಬೆಳಗಾವಿ | 4259 |

| | |
|---|---|
| ತುಮಕೂರು | 2786 |
| ಮೈಸೂರು | 2303 |
| ಚಿಕ್ಕಮಗಳೂರು | 2139 |
| ಮಂಡ್ಯ | 2022 |
| **ಅವಿರೋಧ ಆಯ್ಕೆ ಟಾಪ್ 05** | |
| ಬೆಳಗಾವಿ | 437 |
| ಚಾಮರಾಜ ನಗರ | 364 |
| ಬಳ್ಳಾರಿ | 331 |
| ವಿಜಯಪುರ | 250 |
| ದಾವಣಗೆರೆ | 211 |

ಆಧಾರ: ಸಂಯುಕ್ತ ಕರ್ನಾಟಕ,ದಿನಾಂಕ:19.12.2020

## 19. ಏಕದೇಶ, ಏಕಚುನಾವಣೆಗೆ ಸಿದ್ದ: ಚುನಾವಣಾ ಆಯೋಗ

ಕೇಂದ್ರ ಸರ್ಕಾರ ಚುನಾವಣೆ ಸಂಬಂಧಿ ಕಾಯ್ದೆಗಳಿಗೆ ಅಗತ್ಯ ತಿದ್ದುಪಡಿ ಮಾಡಿದರೆ ಚುನಾವಣಾ ಆಯೋಗ 'ಏಕದೇಶ, ಏಕ ಚುನಾವಣೆ' ವ್ಯವಸ್ಥೆ ಜಾರಿಗೊಳಿಸಲು ಸಿದ್ದವಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ಸುನೀಲ್ ಅರೋರಾ ಹೇಳಿದ್ದಾರೆ.

ಸಂದರ್ಶನವೊಂದರಲ್ಲಿ ಮಾತನಾಡಿದ ಅವರು, 'ಏಕದೇಶ, ಏಕ ಚುನಾವಣೆ' ಬಗ್ಗೆ ಚುನಾವಣಾ ಆಯೋಗ ನಿರ್ಧರಿಸಲಾಗಲ್ಲ. ಕೇಂದ್ರ ಕಾಯ್ದೆ ತಿದ್ದುಪಡಿ ಮಾಡಿದರೆ ನಾವು ಏಕಕಾಲಕ್ಕೆ ದೇಶದೆಲ್ಲೆಡೆ ಚುನಾವಣೆ ನಡೆಸಲು ಸಿದ್ದರಿದ್ದೇವೆ ಎಂದರು.

ಇದೇ ವೇಳೆ ಡಿಜಿಟಲ್ ವೋಟರ್ ಐಡಿ ಬಗ್ಗೆ ಮಾಹಿತಿ ನೀಡಿದ ಅವರು, ಡಿಜಿಟಲ್ ವೋಟರ್ ಐಡಿ ವಿತರಿಸುವ ಚಿಂತನೆ ಇನ್ನೂ ಪ್ರಸ್ತಾವನೆ ಹಂತಕ್ಕೆ ಬಂದಿಲ್ಲ. ಯುವ ಹಾಗೂ ಸುರಕ್ಷಿತ ಮತದಾರರನ್ನು ಗಮನದಲ್ಲಿಟ್ಟುಕೊಂಡು ಈ ಎಲೆಕ್ಟ್ರಾನಿಕ್ ವೋಟರ್ ಐಡಿ ವಿತರಿಸಲು ಚಿಂತನೆ ನಡೆದಿದೆ. ಇದರಲ್ಲಿ ಬಾರ್ ಕೋಡ್ ಹಾಗೂ ಕ್ಯು ಆರ್ ಕೋಡ್ ಇರುತ್ತದೆ. ಅದನ್ನು ಸ್ಕ್ಯಾನ್ ಮಾಡಿದರೆ ಮತದಾರನ ಎಲ್ಲಾ ವಿವರ ತಿಳಿಯುತ್ತದೆ. ದೇಶದ ಎಲ್ಲ ಮತದಾರರಿಗೂ ಈ ಐಡಿ ವಿತರಿಸುವ ಗುರಿ ನಮ್ಮದು' ಎಂದಿದ್ದಾರೆ.

ಆಧಾರ: ಕನ್ನಡಪ್ರಭ, ದಿನಾಂಕ:22.12.2020.

# ಭಾಗ–6

# ಸರ್ವೋಚ್ಚ /ಉಚ್ಚ ನ್ಯಾಯಾಲಯದ ಸುದ್ದಿಗಳು

## 1. ಬಾಬ್ರಿ ಮಸೀದಿ ಧ್ವಂಸ ಪ್ರಕರಣದ ಸುದೀರ್ಘ ಇತಿಹಾಸಕ್ಕೆ ತೆರೆ

1992ರ ಬಾಬರಿ ಮಸೀದಿ ಧ್ವಂಸ ಪ್ರಕರಣಕ್ಕೆ ಸಂಬಂಧಿಸಿದಂತೆ ಲಖನೌ ಸಿಬಿಐ ವಿಶೇಷ ನ್ಯಾಯಾಲಯ ಕಡೆಗೂ ತೀರ್ಪು ಪ್ರಕಟಿಸಿದೆ. ಈ ತೀರ್ಪಿನಿಂದ ರಾಷ್ಟ್ರ ರಾಜಕಾರಣದ ಘಟಾನುಘಟಿಗಳಾದ ಮಾಜಿ ಉಪ ಪ್ರಧಾನಿ ಎಲ್.ಕೆ.ಅಡ್ವಾಣಿ, ಮಾಜಿ ಸಚಿವರಾದ ಮುರಳಿ ಮನೋಹರ ಜೋಶಿ, ಉಮಾಭಾರತಿ ಮತ್ತು ಉತ್ತರ ಪ್ರದೇಶದ ಮಾಜಿ ಸಿಎಂ ಕಲ್ಯಾಣ್ ಸಿಂಗ್ ಸೇರಿದಂತೆ 32 ಜನರಿಗೆ ಕ್ಲೀನ್‌ಚಿಟ್ ಸಿಕ್ಕಿದೆ.

ಕಳೆದ ಹತ್ತು ವರ್ಷಗಳ ಹಿಂದೆ, ಅಂದರೆ 2010ರ ಸೆಪ್ಟೆಂಬರ್ 30ರಂದು ಅಲಹಾಬಾದ್ ಹೈಕೋರ್ಟ್‌ನ ಮೂವರು ನ್ಯಾಯಾಧೀಶರ ಪೀಠವು ರಾಮ ಜನ್ಮಭೂಮಿ–ಬಾಬರಿ ಮಸೀದಿ ಶೀರ್ಷಿಕೆಯಡಿ ತೀರ್ಪು ಪ್ರಕಟಿಸಿತ್ತು. ಈ ತೀರ್ಪಿನಲ್ಲಿ ಅಡ್ವಾಣಿ ಮತ್ತು ಇತರ 13 ಜನರ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪಿತೂರಿ ಆರೋಪವನ್ನು ಕೈಬಿಟ್ಟಿತ್ತು. ನಂತರ ಸಿಬಿಐ 2012ರಲ್ಲಿ ಅಲಹಾಬಾದ್ ಹೈಕೋರ್ಟ್‌ನ ತೀರ್ಪನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿತ್ತು.

ಪ್ರಕರಣದ ವಿಚಾರಣೆ ಈ ಹಿಂದೆ ರಾಯ್ ಬರೇಲಿ ಮತ್ತು ಲಖನೌನ ಎರಡು ನ್ಯಾಯಾಲಯಗಳಲ್ಲಿ ನಡೆಯುತ್ತಿತ್ತು. ಒಂದೇ ಕಡೆ ತ್ವರಿತ ಜಂಟಿ ವಿಚಾರಣೆ ನಡೆಸಿ ಎರಡು ವರ್ಷಗಳಲ್ಲಿ ಪೂರ್ಣಗೊಳಿಸುವಂತೆ 2017ರ ಏಪ್ರಿಲ್‌ನಲ್ಲಿ ಸುಪ್ರೀಂಕೋರ್ಟ್ ಸೂಚಿಸಿತ್ತು. ಅದರಂತೆ ವಿಚಾರಣೆಯು 2017ರ ಮೇ 21ರಂದು ಲಖನೌ ನ್ಯಾಯಾಲಯದಲ್ಲಿ ಆರಂಭವಾಗಿತ್ತು. ಅದಾಗ್ಯೂ, ಎರಡು ವರ್ಷಗಳ ಗಡುವು ಮುಗಿದ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟ್ ಆಗಸ್ಟ್ 31ರವರೆಗೆ ಮತ್ತೆ ಮೂರು ತಿಂಗಳು ವಿಸ್ತರಿಸಿತ್ತು.

**ಕಲ್ಯಾಣ್ ಸಿಂಗ್‌ಗೆ ವಿನಾಯಿತಿ:** 2017ರ ಮೇ 21ರಂದು ವಿಚಾರಣೆ ಆರಂಭವಾದಾಗ ಎಲ್ಲ ಆರೋಪಿಗಳು ಜಾಮೀನು ಕೋರಿ ನ್ಯಾಯಾಲಯಕ್ಕೆ ಹಾಜರಾದರು. ಆದರೆ, ಈ ಅವಧಿಯಲ್ಲಿ ಕಲ್ಯಾಣ್ ಸಿಂಗ್ ಅವರು ರಾಜಸ್ಥಾನದ ರಾಜ್ಯಪಾಲರಾಗಿದ್ದ ಕಾರಣ ವಿಚಾರಣೆಗೆ ಒಳಪಡಿಸದಂತೆ ಸುಪ್ರೀಂಕೋರ್ಟ್ ವಿನಾಯಿತಿ ನೀಡಿತ್ತು. ಅವರ ಅಧಿಕಾರಾವಧಿ ಮುಗಿದ ನಂತರ 2019ರ ಸೆಪ್ಟೆಂಬರ್‌ನಿಂದ ವಿಚಾರಣೆಗೆ ಹಾಜರಾಗಿದ್ದರು.

**ವಿಡಿಯೋ ಕಾನ್ಫರೆನ್ಸ್ ಮೂಲಕ ವಿಚಾರಣೆ:** ಕೊರೋನಾ ಲಾಕ್‌ಡೌನ್ ಅವಧಿಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾಗಿದ್ದ ಎಲ್.ಕೆ.ಅಡ್ವಾಣಿ, ಮುರಳಿ ಮನೋಹರ ಜೋಶಿ ಸೇರಿದಂತೆ ಇತರೆ ಆರೋಪಿಗಳು ತಮ್ಮ ವಿರುದ್ಧದ ಆರೋಪಗಳನ್ನು ನಿರಾಕರಿಸಿದರು. ಅಂದಿನ ಕಾಂಗ್ರೆಸ್ ಸರ್ಕಾರವು ರಾಜಕೀಯ ದುರುದ್ದೇಶದಿಂದ ಈ ಪ್ರಕರಣದಲ್ಲಿ ನಮ್ಮ ಮೇಲೆ ಸುಳ್ಳು ಆರೋಪ ಹೊರಿಸಿದೆ. ನಮ್ಮ ವಿರುದ್ಧ ಯಾವುದೇ ಪುರಾವೆಗಳಿಲ್ಲ ಎಂದು ಹೇಳಿದ್ದರು. ಪ್ರಾಸಿಕ್ಯೂಷನ್ ಪರ ವಾದ ಮಂಡಿಸಿದ್ದ ಸಿಬಿಐ ವಕೀಲರು, ಬಾಬರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಆರೋಪಿಗಳ ಕೈವಾಡವಿದೆ. ಮಸೀದಿ ಕೆಡವಲು ಕರ ಸೇವಕರನ್ನು ಪ್ರಚೋದಿಸಿದ್ದಾರೆ ಎಂದು ವಾದಿಸಿದ್ದರು. 2020ರ ಸೆಪ್ಟೆಂಬರ್ 1 ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಅಂತಿಮ ವಾದ ಮತ್ತು ಪ್ರತಿವಾದಗಳನ್ನು ಆಲಿಸಿದ್ದ ವಿಶೇಷ ನ್ಯಾಯಾಧೀಶರು ತೀರ್ಪು ಕಾಯ್ದಿರಿಸಿದ್ದರು.

## ಒಟ್ಟು ಪುಟಗಳ ತೀರ್ಪು ಬಾಬರಿ ಮಸೀದಿ ಧ್ವಂಸ ಪ್ರಕರಣ ವಿಚಾರಣೆ ಅವಧಿಯಲ್ಲಿನ ತಿರುವುಗಳು

### (ಒಟ್ಟು 2300 ಪುಟಗಳ ತೀರ್ಪು)

- **2 ಎಫ್‌ಐಆರ್ ದಾಖಲು:** 1992ರ ಡಿಸೆಂಬರ್ 6 ರಂದು ವಿವಾದಿತ ಬಾಬರಿ ಮಸೀದಿ ಧ್ವಂಸ. ನಂತರ ಪ್ರಕರಣಕ್ಕೆ ಸಂಬಂಧಿಸಿದಂತೆ ಫೈಜಾಬಾದ್‌ನಲ್ಲಿ 1993ರ ಅಕ್ಟೋಬರ್ 5 ರಂದು ಎರಡು ಎಫ್‌ಐಆರ್ ದಾಖಲು.
- **ಎಫ್‌ಐಆರ್ ಸಂಖ್ಯೆ 197:** ಮಸೀದಿ ಧ್ವಂಸಗೊಳಿಸಿದ್ದಕ್ಕಾಗಿ ಲಕ್ಷಾಂತರ ಕರ ಸೇವಕರ ವಿರುದ್ಧ.
- **ಎಫ್‌ಐಆರ್ ಸಂಖ್ಯೆ 198:** ಧ್ವಂಸ ಪ್ರಕರಣದಲ್ಲಿ 48 ಸಂಘ ಪರಿವಾರ ಕಾರ್ಯಕರ್ತರ ಕೈವಾಡವಿದೆ ಎಂಬ ಆರೋಪ. ಸಿಬಿಐನಿಂದ ತನಿಖೆ ರಾಯ್ ಬರೇಲಿ ನ್ಯಾಯಾಲಯದಲ್ಲಿ ಕೇಸರಿ ಪಡೆಯ 48 ಕಾರ್ಯಕರ್ತರ ವಿರುದ್ಧ ಹಾಗೂ ಲಖನೌನಲ್ಲಿ ಕರ ಸೇವಕರ ವಿರುದ್ಧ ವಿಚಾರಣೆ ಆರಂಭ.

**1993**

- **ಚಾರ್ಜ್‌ಶೀಟ್ ಸಲ್ಲಿಕೆ:** ಎರಡು ಎಫ್‌ಐಆರ್‌ಗಳನ್ನು ಒಟ್ಟಿಗೆ ವಿಚಾರಣೆಗೆ ಒಳಪಡಿಸಿ ಅಡ್ವಾಣಿ ಸೇರಿದಂತೆ ಹಲವು ನಾಯಕರ ವಿರುದ್ಧ ಅಕ್ಟೋಬರ್‌ನಲ್ಲಿ ಚಾರ್ಜ್‌ಶೀಟ್ ಸಿಬಿಐನಿಂದ ಸಲ್ಲಿಕೆ.

**1996**

- ಎರಡು ಪ್ರಕರಣಗಳನ್ನು ಒಟ್ಟಿಗೆ ವಿಚಾರಣೆಗೆ ಒಳಪಡಿಸಿದ್ದಕ್ಕಾಗಿ ಅಧಿಸೂಚನೆ ಹೊರಡಿಸಿದ ಉತ್ತರ ಪ್ರದೇಶ ಸರ್ಕಾರ. ಅಡ್ವಾಣಿ ಮತ್ತು ಇತರರ ವಿರುದ್ಧದ ಚಾರ್ಜ್‌ಶೀಟ್‌ನಲ್ಲಿ ಕ್ರಿಮಿನಲ್ ಪಿತೂರಿ ಆರೋಪ ಸೇರಿಸಿದ ಲಖನೌ ನ್ಯಾಯಾಲಯ.
- 2001, ಮೇ 4 ಅಡ್ವಾಣಿ ಮತ್ತು ಇತರ 13 ಮಂದಿ ವಿರುದ್ಧ ಇದ್ದ ಕ್ರಿಮಿನಲ್ ಪಿತೂರಿ ಆರೋಪ ಕೈಬಿಟ್ಟ ವಿಶೇಷ ನ್ಯಾಯಾಲಯ. ಎರಡು ಪ್ರಕರಣಗಳನ್ನು ಪ್ರತ್ಯೇಕಿಸಿ ರಾಯ್ ಬರೇಲಿ ಮತ್ತು ಲಖನೌನಲ್ಲಿ ವಿಚಾರಣೆ ನಡೆಸುವಂತೆ ಆದೇಶ.
- 2003ರಲ್ಲಿ ಸಿಬಿಐನಿಂದ ಚಾರ್ಜ್‌ಶೀಟ್ ಸಲ್ಲಿಕೆ. ಅಡ್ವಾಣಿ ವಿರುದ್ಧ ಸಾಕಷ್ಟು ಪುರಾವೆಗಳಿಲ್ಲ ಎಂದ ರಾಯ್ ಬರೇಲಿ ನ್ಯಾಯಾಲಯ. ಹೈಕೋರ್ಟ್ ಕೈಬಿಟ್ಟಂತೆ ಪಿತೂರಿ ಆರೋಪಗಳಿಲ್ಲದೆ ಮುಂದುವರಿದ ವಿಚಾರಣೆ.
- 2010ರಲ್ಲಿ ಮೇ 20, 2001, ಮೇ 4ರ ವಿಶೇಷ ನ್ಯಾಯಾಲಯದ ಆದೇಶವನ್ನು ಎತ್ತಿಹಿಡಿದು, ಅಡ್ವಾಣಿ ಮತ್ತು ಇತರ 13 ಆರೋಪಿಗಳನ್ನು ಖುಲಾಸೆಗೊಳಿಸಿದ ಅಲಹಾಬಾದ್ ಹೈಕೋರ್ಟ್.
- 2011ರಲ್ಲಿ ಫೆಬ್ರವರಿ: ಕ್ರಿಮಿನಲ್ ಪಿತೂರಿ ಆರೋಪಗಳನ್ನು ಚಾರ್ಜ್‌ಶೀಟ್‌ನಲ್ಲಿ ಸೇರಿಸುವಂತೆ ಸುಪ್ರೀಂಕೋರ್ಟ್‌ನಲ್ಲಿ ಮನವಿ ಮಾಡಿದ ಸಿಬಿಐ.
- 2015: ಎಲ್ಲ ಆರೋಪಿಗಳಿಗೂ ಸುಪ್ರೀಂಕೋರ್ಟ್‌ನಿಂದ ನೋಟಿಸ್ ಜಾರಿ.
- ಏಪ್ರಿಲ್ 19: 2010ರ ಹೈಕೋರ್ಟ್ ಆದೇಶವನ್ನು ರದ್ದುಪಡಿಸಿದ ಸುಪ್ರೀಂಕೋರ್ಟ್, ಅಡ್ವಾಣಿ, ಜೋಶಿ ಮತ್ತು ಇತರ 13 ಮಂದಿಯ ವಿರುದ್ಧ ಚಾರ್ಜ್‌ಶೀಟ್‌ನಲ್ಲಿ ಪಿತೂರಿ ಆರೋಪ ಪುನಃ ಸೇರ್ಪಡೆ.

- ಸಿಬಿಐ ವಿಶೇಷ ನ್ಯಾಯಾಲಯದಲ್ಲಿ ಎರಡು ಎಫ್‌ಐಆರ್‌ಗಳ ವಿಚಾರಣೆಗೆ ಆದೇಶ. ಎರಡು ವರ್ಷಗಳಲ್ಲಿ ಪೂರ್ಣಗೊಳಿಸುವಂತೆ ಸೂಚನೆ.
- ಮೇ 21: ಸುಪ್ರೀಂಕೋರ್ಟ್ ಆದೇಶದಂತೆ ತ್ವರಿತ ವಿಚಾರಣೆ ಆರಂಭಿಸಿದ ಸಿಬಿಐ ವಿಶೇಷ ನ್ಯಾಯಾಲಯ ಜಾಮೀನಿಗಾಗಿ ಎಲ್ಲ ಆರೋಪಿಗಳು ನ್ಯಾಯಾಲಯಕ್ಕೆ ಹಾಜರು.

**2020**

- ಮೇ 8: ಪ್ರಕರಣಗಳನ್ನು ಇತ್ಯರ್ಥಪಡಿಸಲು 2020ರ ಆಗಸ್ಟ್ 31ರವರೆಗೆ 3 ತಿಂಗಳ ಗಡುವು ನೀಡಿದ ಸುಪ್ರೀಂಕೋರ್ಟ್. ಕೊರೋನಾ ಲಾಕ್‌ಡೌನ್‌ನಿಂದಾಗಿ ಮತ್ತೆ ಸೆಪ್ಟೆಂಬರ್ 30ರವರೆಗೆ ವಿಸ್ತರಣೆ.
- ಸೆಪ್ಟೆಂಬರ್ 1: ಪ್ರಕರಣದ ಅಂತಿಮ ವಾದ–ಪ್ರತಿವಾದ ಆಲಿಸಿದ ನ್ಯಾಯಾಲಯ.
- ಸೆಪ್ಟೆಂಬರ್ 16: ಸೆಪ್ಟೆಂಬರ್ 30ಕ್ಕೆ ತೀರ್ಪು ಕಾಯ್ದಿರಿಸಿದ ವಿಶೇಷ ನ್ಯಾಯಾಧೀಶ ಎಸ್.ಕೆ.ಯಾದವ್.
- ಸೆಪ್ಟೆಂಬರ್ 30: ಎಲ್ಲ 32 ಆರೋಪಿಗಳು ನಿರ್ದೋಷಿ ಎಂದು ತೀರ್ಪು ಪ್ರಕಟಿಸಿದ ಸಿಬಿಐ ವಿಶೇಷ ನ್ಯಾಯಾಧೀಶ ಎಸ್.ಕೆ.ಯಾದವ್.

ಆಧಾರ: ವಿಶ್ವವಾಣಿ, ದಿನಾಂಕ:01.10.2020

## 2. ಪ್ರಾದೇಶಿಕ ಕಚೇರಿಗಳ ಪುನರ್‌ರಚನೆಗೆ ಆಕ್ಷೇಪ

ಪರಿಸರ, ಅರಣ್ಯ ಮತ್ತು ಹವಾಮಾನ ವೈಪರೀತ್ಯ ಸಚಿವಾಲಯದಡಿ ಬರುವ 29 ಪ್ರಾದೇಶಿಕ ಮತ್ತು ಉಪ ವಿಭಾಗೀಯ ಕಚೇರಿಗಳನ್ನು ಪುನರ್‌ರಚಿಸುವುದರಿಂದ ಎನ್‌ಟಿಸಿಎ, ಡಬ್ಲ್ಯೂಸಿಸಿಬಿ, ಎಫ್‌ಎಸ್‌ಐ ಮತ್ತು ಸಿಝುಡ್ ಎ ಸಂಸ್ಥೆಗಳ ಸ್ವಾಯತ್ತತೆಗೆ ಧಕ್ಕೆ ಆಗುವುದಿಲ್ಲ ಎಂಬ ಬಗ್ಗೆ ಪ್ರಮಾಣಪತ್ರ ಸಲ್ಲಿಸುವಂತೆ ಹೈಕೋರ್ಟ್ ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಿದೆ.

ಬೆಂಗಳೂರಿನ ಪರಿಸರವಾದಿ ಗಿರಿಧರ್ ಕುಲಕರ್ಣಿ ಮತ್ತಿತರರು ಸಲ್ಲಿಸಿದ್ದ ಪಿಐಎಲ್ ಕುರಿತು ಸಿಜೆ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಕೆಲ ಕಾಲ ವಿಚಾರಣೆ ನಡೆಸಿ ಅಕ್ಟೋಬರ್ 16ಕ್ಕೆ ವಿಚಾರಣೆಯನ್ನು ಮುಂದೂಡಿತು.

ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯದ ಪರ ವಕೀಲರು, ಪ್ರಾಥಮಿಕ ಮೆಮೊ ಸಲ್ಲಿಸಿ, 'ಸ್ವಾಯತ್ತ ಸಂಸ್ಥೆಗಳ ಸ್ವಾತಂತ್ರ್ಯಕ್ಕೆ ಯಾವುದೇ ಧಕ್ಕೆ ಆಗುವುದಿಲ್ಲ. ಆ ವಿಚಾರದಲ್ಲಿ ರಾಜಿ ಇಲ್ಲ." ಎಂದರು. ಅದಕ್ಕೆ ನ್ಯಾಯಾಲಯ, ಉದ್ದೇಶಿತ ಪುನರ್ ರಚನೆಯಿಂದ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ, ವನ್ಯಜೀವಿ ಅಪರಾಧ ನಿಯಂತ್ರಣ ಬ್ಯೂರೋ, ಭಾರತೀಯ ಅರಣ್ಯ ಸಮೀಕ್ಷೆ ಮತ್ತು ಕೇಂದ್ರೀಯ ಮೃಗಾಲಯ ಪ್ರಾಧಿಕಾರಗಳ ಸ್ವಾಯತ್ತತೆಗೆ ಧಕ್ಕೆ ಆಗುವುದಿಲ್ಲ ಎಂದು ಪ್ರಮಾಣಪತ್ರ ಸಲ್ಲಿಸುವಂತೆ ಸೂಚನೆ ನೀಡಿತ್ತು.

ಅರ್ಜಿದಾರರ ಪರ ವಾದ ಮಂಡಿಸಿದ ವಕೀಲೆ ಅನು ಚೆಂಗಪ್ಪ 'ಹಾಲಿ ಸಚಿವಾಲಯದಡಿ ದೇಶಾದ್ಯಂತ 29 ಪ್ರಾದೇಶಿಕ ಮತ್ತು ಉಪ ವಿಭಾಗೀಯ ಕಚೇರಿಗಳಿವೆ. ಇದೀಗ ಅಕ್ಟೋಬರ್ 1ರಿಂದ ಜಾರಿಗೆ ಬರುವಂತೆ ಅವುಗಳನ್ನು ಪುನರ್‌ರಚಿಸಿ 19 ಸಮಗ್ರ ಪ್ರಾದೇಶಿಕ ಕಚೇರಿಗಳನ್ನು ರಚಿಸಿ, ಮಾನವ ಸಂಪನ್ಮೂಲ ಹಾಗೂ ಇತರೆ ಸಂಪನ್ಮೂಲವನ್ನು ಹಂಚಿಕೆ ಮಾಡಲು ಆದೇಶ ಹೊರಡಿಸಿದೆ," ಎಂದು ನ್ಯಾಯಪೀಠಕ್ಕೆ ವಿವರಿಸಿದರು.

'ಸಮಗ್ರ ಪ್ರಾದೇಶಿಕ ಕಚೇರಿಗಳನ್ನು ಆಡಳಿತಾತ್ಮಕ ಮತ್ತು ಸಿಬ್ಬಂದಿ ಪುನರ್‌ರಚನೆ ದೃಷ್ಟಿಯಿಂದ ಮಾಡಲಾಗುತ್ತಿದೆ ಎಂದು ಹೇಳಲಾಗುತ್ತಿದೆಯಾದರೂ, ಉದ್ದೇಶಿತ ಪುನರ್‌ರಚನೆಯಿಂದ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ, ವನ್ಯಜೀವಿ ಅಪರಾಧ ನಿಯಂತ್ರಣ ಬ್ಯೂರೋ, ಭಾರತೀಯ ಅರಣ್ಯ ಸಮೀಕ್ಷೆ ಮತ್ತು ಕೇಂದ್ರೀಯ ಮೃಗಾಲಯ ಪ್ರಾಧಿಕಾರಗಳ ರಚನೆ ಉದ್ದೇಶವೇ ವ್ಯರ್ಥವಾಗುತ್ತದೆ," ಎಂದು ಹೇಳಿದರು.

'ಈ ಪುನರ್‌ರಚನೆ ಉದ್ದೇಶ ವನ್ಯಜೀವಿ ಸಂರಕ್ಷಣಾ ಕಾಯಿದೆಗೆ ವಿರುದ್ಧವಾಗಿದೆ. ಆ ಕುರಿತು ಕೇಂದ್ರ ಸರ್ಕಾರ ಹೊರಡಿಸಿರುವ ಆದೇಶ ರದ್ದುಗೊಳಿಸಬೇಕು ಸದ್ಯ ಆ ಆದೇಶ ಜಾರಿಗೆ ತಡೆ ನೀಡಬೇಕು ಎಂದು ಅವರು ನ್ಯಾಯಾಲಯವನ್ನು ಕೋರಿದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:02.10.2020

## 3. 6 ತಿಂಗಳ ಬಡ್ಡಿ ಮನ್ನಾಕ್ಕೆ ಸಿದ್ಧ: ಸುಪ್ರೀಂಕೋರ್ಟ್

ಸಾಲದ ಕಂತು ಪಾವತಿಗೆ ವಿನಾಯಿತಿ ಘೋಷಿಸಿದ್ದ ಆರು ತಿಂಗಳ ಅವಧಿಯ ಚಕ್ರ ಬಡ್ಡಿಯನ್ನು ಮನ್ನಾ ಮಾಡುವುದಾಗಿ ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ಗೆ ತಿಳಿಸಿದೆ. ಇದರಿಂದ ವೈಯಕ್ತಿಕ ಮತ್ತು ಎಂಎಸ್‌ಎಂಇಗಳ ರೂ. 2 ಕೋಟಿವರೆಗಿನ ಸಾಲದ ಮೇಲಿನ ಬಡ್ಡಿ ಮನ್ನಾ ಆಗಲಿದೆ. ಮಾರ್ಚ್ ಮತ್ತು ಆಗಸ್ಟ್ ನಡುವಿನ ಅವಧಿಯಲ್ಲಿ ಬಾಕಿ ಪಾವತಿಸಿರುವವರಿಗೂ ಈ ಪ್ರಯೋಜನ ಲಭ್ಯವಾಗಲಿದೆ.

ಸಣ್ಣ ಸಾಲಗಾರರನ್ನು ಹಿಡಿದಿಟ್ಟುಕೊಳ್ಳುವ ದೃಷ್ಟಿಯಿಂದ ಬ್ಯಾಂಕುಗಳಲ್ಲಿನ ಬಡ್ಡಿ ಅಥವಾ ಚಕ್ರ ಬಡ್ಡಿಯನ್ನು ಮನ್ನಾ ಮಾಡುವುದರಿಂದ ಉಂಟಾಗುವ ಹೊರೆ ಹೊರಲು ಸರ್ಕಾರ ನಿರ್ಧರಿಸಿದೆ ಎಂದು ಹಣಕಾಸು ಸಚಿವಾಲಯ ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ತಿಳಿಸಿದೆ.

ಕೊರೋನಾ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಬ್ಯಾಂಕ್‌ಗಳಿಂದ ಪಡೆದ ಸಾಲದ ಮೇಲಿನ ಕಂತು ಪಾವತಿ ಮುಂದೂಡಿಕೆಗೆ ಆರ್‌ಬಿಐ ಅವಕಾಶ ನೀಡಿತ್ತು. ಈ ಸಂದರ್ಭದಲ್ಲಿ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಬೇಕು ಎಂದು ಸುಪ್ರೀಂಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿತ್ತು. ಈ ವರ್ಗದಲ್ಲಿ ರೂ.2 ಕೋಟಿವರೆಗಿನ ಎಂಎಸ್‌ಎಂಇ ಮತ್ತು ವೈಯಕ್ತಿಕ ಸಾಲ, ಶೈಕ್ಷಣಿಕ ಸಾಲ, ವಸತಿ ಸಾಲ, ಗ್ರಾಹಕ ಬಳಕೆ ವಸ್ತುಗಳ ಮೇಲಿನ ಸಾಲ, ಕ್ರೆಡಿಟ್ ಕಾರ್ಡ್ ಬಾಕಿ, ವಾಹನ ಸಾಲ, ಹಾಗೂ ವೃತ್ತಿಪರರ ವೈಯಕ್ತಿಕ ಸಾಲಗಳು ಸೇರಲಿವೆ ಎಂದು ಸಚಿವಾಲಯ ತಿಳಿಸಿದೆ.

ಕೆಲವು ವರ್ಗಗಳಿಗೆ ಮಾತ್ರ ಬಡ್ಡಿ, ಚಕ್ರಬಡ್ಡಿ ಮನ್ನಾ ಪ್ರಯೋಜನವನ್ನು ಸೀಮಿತಗೊಳಿಸಿರುವುದರಿಂದ ಸುಮಾರು ರೂ.5,000 ರಿಂದ ರೂ.6,000 ಕೋಟಿ ವೆಚ್ಚವಾಗಲಿದೆ. ಈ ಯೋಜನೆಯನ್ನು ಇತರ ಎಲ್ಲ ಸಾಲಗಾರರಿಗೆ ವಿಸ್ತರಿಸಿದರೆ ಒಟ್ಟು ವೆಚ್ಚ ರೂ.10,000 ದಿಂದ ರೂ.15,000 ಕೋಟಿ ಆಗುತ್ತದೆ ಎಂದು ಆರ್‌ಬಿಐ ಹೇಳಿದೆ. ವಿನಾಯಿತಿ ಅವಧಿಯಲ್ಲಿ ತಮ್ಮ ಇಎಂಐ ಅಥವಾ ಕ್ರೆಡಿಟ್ ಕಾರ್ಡ್ ಬಾಕಿ ಪಾವತಿಸುವವರಿಗೆ ಈ ಲಾಭವು ಹೇಗೆ ತಲುಪುತ್ತದೆ ಎಂಬ ವಿಧಾನಗಳ ಬಗ್ಗೆ ತಿಳಿದುಬಂದಿಲ್ಲ. ಆರು ತಿಂಗಳ ಅವಧಿಗೆ ಅನುಗುಣವಾಗಿ ಎಲ್ಲ ವರ್ಗದ ಸಾಲದ ಮೇಲಿನ ಬಡ್ಡಿ ಮನ್ನಾ ಅಂದಾಜು ಮೊತ್ತವು ರೂ.6 ಲಕ್ಷ ಕೋಟಿ ಗಳಿಗಿಂತ ಹೆಚ್ಚಾಗುತ್ತದೆ. 6 ತಿಂಗಳವರೆಗೆ ಬಡ್ಡಿಯನ್ನು ಮನ್ನಾ ಮಾಡಿದರೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಅರ್ಧದಷ್ಟು ನಿವ್ವಳ ಮೌಲ್ಯವು ನಾಶವಾಗಲಿದೆ ಎಂದು ಸರ್ಕಾರ ಹೇಳಿದೆ. ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿಗಳಾದ ಅಶೋಕ್ ಭೂಷಣ್, ಆರ್.ಎಸ್.ರೆಡ್ಡಿ ಮತ್ತು ಎಂ.ಆರ್.ಶಾ ಅವರನ್ನೊಳಗೊಂಡ ನ್ಯಾಯಪೀಠವು ಬಡ್ಡಿ ಮೇಲಿನ ಬಡ್ಡಿ ಮನ್ನಾ ಮಾಡದಿರುವ ನಿರ್ಧಾರವನ್ನು ಮರುಪರಿಶೀಲಿಸುವಂತೆ ಸರ್ಕಾರ ಹಾಗೂ ಆರ್‌ಬಿಐಗೆ ಸೂಚಿಸಿತ್ತು. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಈ ಕ್ರಮಕ್ಕೆ ಮುಂದಾಗಿದೆ.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:04.10.2020

## 4. ಇಎಂಐ ಮುಂದೂಡಿಕೆ ಪಡೆದವರಿಗೆ ಚಕ್ರಬಡ್ಡಿ ಇಲ್ಲ

ಕೊರೋನಾ ಹಿನ್ನೆಲೆಯಲ್ಲಿ ಸಾಲ ಮರು ಪಾವತಿಯಿಂದ ಆರು ತಿಂಗಳು ವಿನಾಯಿತಿ ಪಡೆದಿದ್ದ ವೈಯಕ್ತಿಕ ಸಾಲಗಾರರು ಹಾಗೂ ಸಣ್ಣ–ಮಧ್ಯಮ ಉದ್ದಿಮೆಗಳ ರೂ.2 ಕೋಟಿವರೆಗಿನ ಸಾಲದ ಮೇಲಿನ ಚಕ್ರ ಬಡ್ಡಿ (ಬಡ್ಡಿ ಮೇಲೆ ಬಡ್ಡಿ) ಯನ್ನು ಮನ್ನಾ ಮಾಡಲು ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದೆ. ಈ ಸಂಬಂಧ ಕೇಂದ್ರ ಹಣಕಾಸು ಸಚಿವಾಲಯ ಸುಪ್ರೀಂಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಕೆ ಮಾಡಿದೆ.

ಮನ್ನಾ ಮಾಡಲಾಗುವ ಮೊತ್ತವನ್ನು ಬ್ಯಾಂಕುಗಳಿಗೆ ಒದಗಿಸಲು ಸಂಸತ್ತಿನ ಒಪ್ಪಿಗೆಯನ್ನು ಪಡೆಯಲಾಗುವುದು. ಈ ವೆಚ್ಚ ಸಣ್ಣ–ಮಧ್ಯಮ ಉದ್ದಿಮೆ ವಲಯಕ್ಕೆ ಘೋಷಣೆ ಮಾಡಲಾಗಿದ್ದ ರೂ.3.7 ಲಕ್ಷ ಕೋಟಿ, ರೂ.70 ಸಾವಿರ ಕೋಟಿ ಗೃಹ ಸಾಲವು ಆತ್ಮನಿರ್ಭರ ಪ್ಯಾಕೇಜ್‌ಗಳಿಂದ ಹೊರತಾಗಿರುತ್ತದೆ ಎಂದು ಸ್ಪಷ್ಟಪಡಿಸಿದೆ.

ಸಾಲ ಮರುಪಾವತಿಯಿಂದ ಆರು ತಿಂಗಳ ಕಾಲ ವಿನಾಯಿತಿ ಪಡೆದಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ಲೆಕ್ಕಿಸದೆ ಎಲ್ಲರಿಗೂ ಚಕ್ರಬಡ್ಡಿ ಮನ್ನಾ ಮಾಡಲಾಗುತ್ತದೆ ಎಂದು ಸರ್ಕಾರ ಹೇಳಿದೆ. ಆದರೆ ಈ ಬಗ್ಗೆ ಹೆಚ್ಚಿನ ವಿವರಣೆ ನೀಡಿಲ್ಲ. ಸಾಲ ಮರುಪಾವತಿಯಿಂದ ವಿನಾಯಿತಿ ಪಡೆಯದೆ, ಸಾಲವನ್ನೂ ಕಟ್ಟದೆ ಸಮಸ್ಯೆಗೆ ಸಿಲುಕಿರುವವರಿಗೆ ಸರ್ಕಾರ ನೆರವು ನೀಡುವ ಉದ್ದೇಶ ಹೊಂದಿರಬಹುದು ಎಂದು ಊಹಿಸಲಾಗುತ್ತಿದೆ.

**ಯಾವ್ಯಾವ ಸಾಲಗಳಿಗೆ ಅನ್ವಯ:** ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ದಿಮೆ (ಎಂಎಸ್‌ಎಂಇ), ಶಿಕ್ಷಣ, ಗೃಹ, ಗೃಹ ಬಳಕೆಯ ವಸ್ತು, ಕ್ರೆಡಿಟ್ ಕಾರ್ಡ್ ಬಾಕಿ, ವಾಹನ, ವೈಯಕ್ತಿಕ ಹಾಗೂ ಇನ್ನಿತರೆ ವೆಚ್ಚ ಸಂಬಂಧಿ 8 ಬಗೆಯ ಸಾಲಗಳಿಗೆ ಚಕ್ರಬಡ್ಡಿ ಮನ್ನಾ ಸೌಲಭ್ಯ ಸಿಗಲಿದೆ. ಯಾವುದೇ ವ್ಯಕ್ತಿ ರೂ. 2 ಕೋಟಿಗಿಂತ ಅಧಿಕ ಸಾಲ ಹೊಂದಿದ್ದರೆ ಅಂಥವರಿಗೆ ಚಕ್ರ ಬಡ್ಡಿ ಮನ್ನಾ ಆಗುವುದಿಲ್ಲ. ಎಲ್ಲ ಆಯ್ಕೆಗಳನ್ನು ಪರಿಶೀಲಿಸಿದ ತರುವಾಯ, ಸಣ್ಣ ಸಾಲಗಾರರನ್ನು ಕೈಹಿಡಿಯುವ ಸಂಪ್ರದಾಯವನ್ನು ಮುಂದುವರಿಸಲು ನಿರ್ಧರಿಸಲಾಗಿದೆ ಎಂದು ಸರ್ಕಾರ ಪ್ರಮಾಣ ಪತ್ರದಲ್ಲಿ ತಿಳಿಸಿದೆ. ಆರು ತಿಂಗಳ ಸಾಲ ಮರುಪಾವತಿ ವಿನಾಯಿತಿ ಅವಧಿಯಲ್ಲಿನ ಎಲ್ಲ ಬಗೆಯ ಸಾಲಗಳ ಬಡ್ಡಿಯನ್ನು ಮನ್ನಾ ಮಾಡಿದರೆ ಅಂದಾಜು ರೂ.6 ಲಕ್ಷ ಕೋಟಿ ಬೇಕಾಗುತ್ತದೆ. ಇದನ್ನು ಬ್ಯಾಂಕುಗಳೇ ಭರಿಸಬೇಕು ಎಂದಾದಲ್ಲಿ, ಅವುಗಳ ನಿವ್ವಳ ಬಂಡವಾಳವೇ ಖಾಲಿಯಾಗುತ್ತದೆ. ಅವುಗಳ ಅಸ್ತಿತ್ವಕ್ಕೆ ಸಂಚಕಾರ ಬರುತ್ತದೆ ಎಂದು ಸರ್ಕಾರ ತಿಳಿಸಿದೆ.

ಕೊರೋನಾ ಲಾಕ್‌ಡೌನ್ ಹಿನ್ನೆಲೆಯಲ್ಲಿ ಇಎಂಇ ಪಾವತಿಯಿಂದ ಮೂರು ತಿಂಗಳ ಕಾಲ ವಿನಾಯಿತಿ ನೀಡಿ ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಚ್ 27ರಂದು ಸುತ್ತೋಲೆ ಹೊರಡಿಸಿತ್ತು. 2020ರ ಮಾರ್ಚ್ 1ರಿಂದ ಮೇ 31ರ ವರೆಗಿನ ಅವಧಿಗೆ ಈ ವಿನಾಯಿತಿ ನೀಡಲಾಗಿತ್ತು. ಮತ್ತೆ ಇದನ್ನು ಮೂರು ತಿಂಗಳ ಕಾಲ ವಿಸ್ತರಿಸಿ ಆಗಸ್ಟ್ 31ರವರೆಗೆ ವಿನಾಯಿತಿ ಕೊಡಲಾಗಿತ್ತು. ಈ ಅವಧಿಯಲ್ಲಿ ಬಡ್ಡಿಯ ಮೇಲೆ ಬಡ್ಡಿಯನ್ನು ವಿಧಿಸಲಾಗುತ್ತಿದೆ ಎಂದು ಹಲವು ಅರ್ಜಿಗಳು ಸುಪ್ರೀಂಕೋರ್ಟ್‌ಗೆ ಸಲ್ಲಿಕೆಯಾಗಿದ್ದವು. ಅದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಪ್ರಮಾಣಪತ್ರ ಸಲ್ಲಿಸಿದೆ.

ಇದಕ್ಕೂ ಮುನ್ನ ಸುಪ್ರೀಂಕೋರ್ಟ್‌ಗೆ ಮಾಹಿತಿ ನೀಡಿದ್ದ ಕೇಂದ್ರ ಸರ್ಕಾರ, ಮುಂದೂಡಿಕೆಯಾದ ಸಾಲ ಮರುಪಾವತಿಯ ಬಡ್ಡಿಯನ್ನು ಮನ್ನಾ ಮಾಡುವುದು ಬ್ಯಾಂಕಿಂಗ್ ಕ್ಷೇತ್ರದ ಮೂಲಸಿದ್ಧಾಂತಗಳಿಗೆ ವಿರುದ್ಧವಾದದು. ಇದರಿಂದ ಸಕಾಲಕ್ಕೆ ಸಾಲ ಮರುಪಾವತಿಸಿದವರಿಗೆಲ್ಲಾ ಅನ್ಯಾಯವಾಗುತ್ತದೆ ಎಂದು ವಾದಿಸಿತ್ತು. ಪ್ರಕರಣ ಮತ್ತೆ ವಿಚಾರಣೆಗೆ ಬರಲಿದೆ.

ಆಧಾರ: ಕನ್ನಡಪ್ರಭ, ದಿನಾಂಕ:04.10.2020

## 5. ಅಪಘಾತವಾದರೆ ವಿಮೆ ಕಂಪನಿಯೇ ಪರಿಹಾರ ಭರಿಸಬೇಕು: ಹೈಕೋರ್ಟ್

ನಾಲ್ಕು ಚಕ್ರದ ವಾಹನವು ರಾತ್ರಿ ವೇಳೆ ಸಂಚರಿಸುವಾಗ ಅಥವಾ ನಿಲುಗಡೆ ಮಾಡಿದಾಗ ವಾಹನಕ್ಕೆ ಸೂಕ್ತ ಲೈಟಿಂಗ್ ವ್ಯವಸ್ಥೆ, ಇಂಡಿಕೇಟರ್ ಲೈಟ್ (ಸೂಚಕಗಳ) ಪ್ರದರ್ಶನವಾಗದೆ ಮತ್ತೊಂದು ವಾಹನದೊಂದಿಗೆ ಅಪಘಾತ ಸಂಭವಿಸಿದರೆ ಸಂತ್ರಸ್ತರಿಗೆ ನೀಡಬೇಕಾದ ಪರಿಹಾರ ಮೊತ್ತವನ್ನು ವಿಮಾ ಕಂಪನಿಯೇ ಭರಿಸಬೇಕು ಎಂದು ಹೈಕೋರ್ಟ್ ಆದೇಶಿಸಿದೆ. ರಸ್ತೆ ಪಕ್ಕದಲ್ಲಿ ನಿಲ್ಲಿಸಿದ ಲಾರಿ ಇಂಡಿಕೇಟರ್ ಲೈಟ್ ಪ್ರದರ್ಶಿಸದ ಪರಿಣಾಮ ದ್ವಿಚಕ್ರ ವಾಹನ ಡಿಕ್ಕಿ ಹೊಡೆದು ಸವಾರ ಸಾವನ್ನಪ್ಪದ ಪ್ರಕರಣದಲ್ಲಿ ಹೈಕೋರ್ಟ್ ಈ ತೀರ್ಪು ನೀಡಿದೆ.

ಆಧಾರ: ಕನ್ನಡಪ್ರಭ, ದಿನಾಂಕ:04.10.2020

## 6. ತೃತೀಯ ಲಿಂಗಿಗಳಿಗೆ ಒಬಿಸಿ ಮೀಸಲು: ಸರ್ಕಾರ ಚಿಂತನೆ

ಸರ್ಕಾರಿ ನೇಮಕಾತಿಗಳಲ್ಲಿ ಮೀಸಲಾತಿ ಕಲ್ಪಿಸುವ ವೇಳೆ ತೃತೀಯ ಲಿಂಗಿಗಳಿಗೆ ಒಬಿಸಿ (ಹಿಂದುಳಿದ) ಕೆಟಗರಿ ಅಡಿಯಲ್ಲಿ ಪರಿಗಣಿಸುವ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ ಎಂದು ಸರ್ಕಾರ ಹೈಕೋರ್ಟ್‌ಗೆ ಮಾಹಿತಿ ನೀಡಿದೆ.

ರಾಜ್ಯ ವಿಶೇಷ ಮೀಸಲು ಕಾನ್‌ಸ್ಟೇಬಲ್ ಪಡೆ ಹಾಗೂ ಬ್ಯಾಂಡ್‌ಮೆನ್ ಹುದ್ದೆಗಳ ನೇಮಕಾತಿಯಲ್ಲಿ ತೃತೀಯ ಲಿಂಗಿಗಳಿಗೆ ಅವಕಾಶ ಕಲ್ಪಿಸಿರುವುದನ್ನು ಪ್ರಶ್ನಿಸಿ ಸಂಗಮ ಸ್ವಯಂಸೇವಾ ಸಂಸ್ಥೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು. ಅರ್ಜಿ ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕಾ ಅವರ ನೇತೃತ್ವದ ವಿಭಾಗೀಯ ಪೀಠದ ಮುಂದೆ ಈಚೆಗೆ ವಿಚಾರಣೆಗೆ ಬಂದಾಗ ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ರಜನೀಶ್ ಗೋಯೆಲ್ ಅವರು ಸಲ್ಲಿಸಿರುವ ಪ್ರಮಾಣ ಪತ್ರವನ್ನು ಸರ್ಕಾರಿ ವಕೀಲರು ನ್ಯಾಯಪೀಠಕ್ಕೆ ಒದಗಿಸಿದರು.

ವಾದ ಆಲಿಸಿದ ನ್ಯಾಯಪೀಠ ಪ್ರತಿಕ್ರಿಯಿಸಿ, ಸರ್ಕಾರ ನಿಜವಾಗಿಯೂ ಸರ್ಕಾರಿ ನೇಮಕಾತಿಗಳಲ್ಲಿ ಒಬಿಸಿ ಕೆಟಗರಿ ಅಡಿಯಲ್ಲಿ ತೃತೀಯ ಲಿಂಗಿಗಳಿಗೆ ಮೀಸಲಾತಿ ಕಲ್ಪಿಸುವ ಕೆಲಸ ಮಾಡಲಿದೆಯೇ ಎಂದು ಪ್ರಶ್ನಿಸಿತು. ಜೊತೆಗೆ, ಒಂದೊಮ್ಮೆ ಆಯೋಗ ರಚನೆಯಾದರೆ, ಭಾರತದ ಸಂವಿಧಾನ ಪರಿಚ್ಛೇದ 342–ಎ ಅನುಸಾರ ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಪಟ್ಟಿಗೆ ಕೆಲ ವರ್ಗದವರನ್ನು ಸೇರಿಸಲು ಆಯೋಗ ಯಾವ ರೀತಿಯ ಪಾತ್ರ ನಿರ್ವಹಿಸಲಿದೆ ಎಂಬ ಬಗ್ಗೆ ಮುಂದಿನ ವಿಚಾರಣೆ ವೇಳೆ ಉತ್ತರಿಸುವಂತೆ ಸರ್ಕಾರಿ ವಕೀಲರಿಗೆ ಸೂಚಿಸಿ ವಿಚಾರಣೆಯನ್ನು ಅಕ್ಟೋಬರ್ 19ಕ್ಕೆ ಮುಂದೂಡಿತು.

ಆಧಾರ: ಕನ್ನಡ ಪ್ರಭ ದಿನಾಂಕ:05.10.2020

## 7. ಜನ ಪ್ರತಿನಿಧಿಗಳ ವಿಚಾರಣೆಗೆ ಹೆಚ್ಚಿನ ಕೋರ್ಟ್ ಸ್ಥಾಪಿಸಿ

ಸಂಸದರು ಮತ್ತು ಶಾಸಕರ ವಿರುದ್ಧ ದಾಖಲಾಗಿರುವ ಪ್ರಕರಣಗಳ ವಿಚಾರಣೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ವಿಶೇಷ ಕೋರ್ಟ್‌ಗಳನ್ನು ಸ್ಥಾಪಿಸಬೇಕು ಎಂದು ಸುಪ್ರೀಂಕೋರ್ಟ್ ಕರ್ನಾಟಕ ಹೈಕೋರ್ಟ್‌ಗೆ ನಿರ್ದೇಶಿಸಿತು.

'ಸದ್ಯ, ಹಾಲಿ ಮತ್ತು ಮಾಜಿ ಸಂಸದರು ಮತ್ತು ಶಾಸಕರ ವಿರುದ್ಧ ಒಟ್ಟು 165 ಪ್ರಕರಣಗಳಿವೆ. ಇವುಗಳ ವಿಚಾರಣೆಗೆ ಒಂದೇ ವಿಶೇಷ ಕೋರ್ಟ್ ಸಾಲದು' ಎಂದು ಸುಪ್ರೀಂಕೋರ್ಟ್ ಅಭಿಪ್ರಾಯಪಟ್ಟಿತು.

ಅಮಿಕಸ್ ಕ್ಯೂರಿ, ಹಿರಿಯ ವಕೀಲ ವಿಜಯ್ ಹನ್ಸಾರಿಯಾ ಮತ್ತು ವಕೀಲ ಸ್ನೇಹಾ ಕಲಿಟ ಅವರು, 'ಕಳೆದ ಎರಡು ವರ್ಷಗಳಲ್ಲಿ ಜನಪ್ರತಿನಿಧಿಗಳ ವಿರುದ್ಧದ ಪ್ರಕರಣಗಳು ಹೆಚ್ಚಾಗಿವೆ. ಇವುಗಳ ಕಟ್ಟುನಿಟ್ಟಿನ ಮೇಲ್ವಿಚಾರಣೆ ಅಗತ್ಯವಾಗಿದೆ' ಎಂದು ತಿಳಿಸಿದರು.

ದೇಶದಾದ್ಯಂತ ಒಟ್ಟು ಪ್ರಕರಣಗಳ ಸಂಖ್ಯೆ 4,859ಕ್ಕೆ ಏರಿದೆ. ಮಾರ್ಚ್ 2020ರಲ್ಲಿ ಒಟ್ಟು 4,442 ಪ್ರಕರಣಗಳಿದ್ದವು. ಆಯಾ ವ್ಯಾಪ್ತಿಯ ಕೋರ್ಟ್‌ಗಳಿಗೇ ಪ್ರಕರಣ ಒಪ್ಪಿಸಿ ಅದ್ಯತೆ ಮೇರೆಗೆ ವಿಚಾರಣೆ ನಡೆಸಲು ಸೂಚಿಸಬಹುದು ಎಂದು ಅವರು ತಿಳಿಸಿದರು.

ಆಧಾರ: ಪ್ರಜಾವಾಣಿ, ದಿನಾಂಕ:06.10.2020

## 8. ಮಾತೃ ಭಾಷೆಯಲ್ಲೇ ಶಿಕ್ಷಣ: ಸುಪ್ರೀಂ

ಮಕ್ಕಳಿಗೆ ಮಾತೃಭಾಷಾ ಮಾಧ್ಯಮದಲ್ಲೇ ಶಿಕ್ಷಣ ನೀಡುವುದು ಅಗತ್ಯ ಎಂದು ಸುಪ್ರೀಂಕೋರ್ಟ್ ಅಭಿಪ್ರಾಯ ಪಟ್ಟಿದೆ. 1ರಿಂದ 6ನೇ ತರಗತಿವರೆಗೆ ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಕಡ್ಡಾಯಗೊಳಿಸಿ ಆಂಧ್ರಪ್ರದೇಶ ಸರ್ಕಾರ ಹೊರಡಿಸಿದ್ದ ಆದೇಶ ರದ್ದುಪಡಿಸಿರುವ ಹೈಕೋರ್ಟ್ ತೀರ್ಪಿಗೆ ತಡೆ ನೀಡಲು ನಿರಾಕರಿಸಿರುವ ನ್ಯಾಯಾಲಯ, ಶಿಕ್ಷಣದಲ್ಲಿ ಮಾತೃಭಾಷಾ ಮಾಧ್ಯಮದ ಅಗತ್ಯವನ್ನು ಪ್ರತಿಪಾದಿಸಿದೆ. ಸಿಜೆಐ ಎಸ್.ಎ.ಬೊಬ್ಡೆ ನೇತೃತ್ವದ ಪೀಠವು, 'ಭಾರತದಲ್ಲಿ ಮಾತ್ರವೇ ವಿದೇಶಿ ಭಾಷೆಯಲ್ಲಿ ಶಿಕ್ಷಣ ನೀಡುವ ವ್ಯವಸ್ಥೆ ಇದೆ. ಜಗತ್ತಿನ ಬೇರ್‍ಯಾವ ದೇಶದಲ್ಲಿಯೂ ಈ ಕ್ರಮ ಇಲ್ಲ" ಎಂದು ಅಸಮಾಧಾನ ವ್ಯಕ್ತಪಡಿಸಿತು.

ಈ ಹಿಂದೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡಲು ಕರ್ನಾಟಕ ಸರ್ಕಾರ ಮುಂದಾದಾಗ, ಮಕ್ಕಳ ಕಲಿಕಾ ಮಾಧ್ಯಮ ಆಯ್ಕೆ ಪೋಷಕರಿಗೆ ಬಿಟ್ಟ ವಿಚಾರ ಎಂದು ಸುಪ್ರೀಂ ಅಭಿಪ್ರಾಯಪಟ್ಟಿತ್ತು. ಅದೇ ಕೋರ್ಟ್ ಇದೀಗ ಆಂಧ್ರ ಸರ್ಕಾರದ ಪ್ರಕರಣದಲ್ಲಿ ಮಾತೃಭಾಷಾ ಮಾಧ್ಯಮಕ್ಕೆ ಆದ್ಯತೆ ನೀಡಿ ಅಭಿಪ್ರಾಯ ವ್ಯಕ್ತಪಡಿಸಿರುವುದು ಗಮನಾರ್ಹವಾಗಿದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲೂ ಮಾತೃಭಾಷೆಯಲ್ಲೇ ಶಿಕ್ಷಣ ನೀಡಲು ಉತ್ತೇಜಿಸಲಾಗಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:07.10.2020

## 9. ನ್ಯಾಯಾಧೀಶರ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದು

ಬಳ್ಳಾರಿ ಜೆಎಂಎಫ್ ನ್ಯಾಯಾಲಯದಲ್ಲಿ ಸಿವಿಲ್ ನ್ಯಾಯಾಧೀಶರೊಬ್ಬರ ವಿರುದ್ಧ ಖಾಸಗಿ ವ್ಯಕ್ತಿಯೊಬ್ಬರು ದಾಖಲಿಸಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಗೊಳಿಸಿದೆ. ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್, ಸಿವಿಲ್ ನ್ಯಾಯಾಧೀಶರಾದ ವಿಜಯ ಕುಮಾರ್ ಎಸ್. ಜತ್ಲಾ ವಿರುದ್ಧ ಮಂಜುನಾಥ್ ಎಂಬ ವ್ಯಕ್ತಿ ದಾಖಲಿಸಿದ್ದ ಕ್ರಿಮಿನಲ್ ಪ್ರಕರಣ ರದ್ದು ಕೋರಿ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಅದರ ವಿಚಾರಣೆ ಪೂರ್ಣಗೊಳಿಸಿ ತೀರ್ಪು ಕಾಯ್ದಿರಿಸಿದ್ದ ಸಿಜೆ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ನೀಡಿದೆ.

ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಸಿವಿಲ್ ನ್ಯಾಯಾಧೀಶ ವಿಜಯಕುಮಾರ್ ವಿರುದ್ಧ ಮಾಡಲಾಗಿದ್ದ ಆರೋಪಗಳನ್ನು ರದ್ದುಪಡಿಸಲಾಗಿದೆ. ಉಳಿದ ಆರೋಪಿಗಳ ವಿರುದ್ಧದ ವಿಚಾರಣೆ ಮುಂದುವರಿಯಲಿದೆ ಎಂದು ನ್ಯಾಯಪೀಠ ಹೇಳಿದೆ.

ಕ್ರಿಮಿನಲ್ ಅರ್ಜಿ ಸಂಬಂಧ ಮಂಜುನಾಥ್ ಸಲ್ಲಿಸಿದ್ದ ಪ್ರತಿಭಟನಾ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಾಧೀಶ ವಿಜಯಕುಮಾರ್ ಎಸ್.ಜತ್ಲಾ, ವಿಚಾರಣೆಯನ್ನು ರಿಮ್ಯಾಂಡ್ ಮಾಡಿದ್ದರು. ಆ ಕುರಿತು ಮಂಜುನಾಥ್, 2019ರ ಮೇ 25ರಂದು ಸಿವಿಲ್ ನ್ಯಾಯಾಧೀಶರ ವಿರುದ್ಧ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗೆ ಲಿಖಿತ ದೂರು ನೀಡಿದ್ದರು. ಅದಕ್ಕೆ 2019ರ ಜೂನ್ 13ರಂದು ಉತ್ತರ ನೀಡಿದ್ದ ಮುಖ್ಯ ನ್ಯಾಯಮೂರ್ತಿಗಳ ಕಾರ್ಯದರ್ಶಿ, 'ಸಿವಿಲ್ ನ್ಯಾಯಾಧೀಶರು ನ್ಯಾಯಾಂಗ ಆದೇಶ ಮಾಡಿದ್ದಾರೆ. ಅದಕ್ಕೆ ನ್ಯಾಯಾಂಗ ಪರಿಧಿಯಲ್ಲಿಯೇ ಪರಿಹಾರ ಕಂಡುಕೊಳ್ಳಬೇಕು. ರಿಮ್ಯಾಂಡ್ ಅರ್ಜಿ ಆದೇಶವನ್ನು ಸೂಕ್ತ ವೇದಿಕೆಯಲ್ಲಿ ಪ್ರಶ್ನಿಸಿಬಹುದು," ಎಂದು ಸಲಹೆ ಮಾಡಿದ್ದರು.

ಆ ಉತ್ತರವನ್ನೇ ದೂರು ದಾಖಲಿಸಲು ಅನುಮತಿ ಸಿಕ್ಕಿದೆ ಎಂದು ತಿಳಿದ ಮಂಜುನಾಥ್, ಸಿವಿಲ್ ನ್ಯಾಯಾಧೀಶರ ವಿರುದ್ಧ ಅಪರಾಧ ದಂಡ ಸಂಹಿತೆ (ಸಿಆರ್‌ಪಿಸಿ) ಸೆಕ್ಷನ್ 200 ಸೇರಿ ಹಲವು ಸೆಕ್ಷನ್‌ಗಳಡಿ ಬಳ್ಳಾರಿ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು. ಇದಕ್ಕೆ ಹೈಕೋರ್ಟ್ ಆಕ್ಷೇಪ ಎತ್ತಿ, ಮೊದಲಿಗೆ ವಿಚಾರಣೆಗೆ ತಡೆ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಆಧಾರ: ವಿಜಯ ಕರ್ನಾಟಕ, ದಿನಾಂಕ:08.10.2020

## 10. ತೆಲಂಗಾಣದಿಂದ ಕರ್ನಾಟಕಕ್ಕೆ ಕೃಷ್ಣಾಘಾತ

ಆಂಧ್ರಪ್ರದೇಶದಿಂದ ವಿಭಜನೆಗೊಂಡು ಪ್ರತ್ಯೇಕ ರಾಜ್ಯವಾದ ಬಳಿಕ ತೆಲಂಗಾಣ ಕೃಷ್ಣಾ ನದಿ ನೀರಿನಲ್ಲಿ ತನಗೆ ಸಿಗಬೇಕಿದ್ದ ನೀರಿನ ಅರ್ಹ ಪ್ರಮಾಣ ಸಿಗುತ್ತಿಲ್ಲ ಎಂದು ಕಾದಾಡುತ್ತಿರುವುದು ಹೊಸತೇನಲ್ಲ. ಈ ಹಿನ್ನೆಲೆಯಲ್ಲಿ, ನೀರಿನ ಮರುಹಂಚಿಕೆಯಾಗಬೇಕೆಂದು ಸುಪ್ರೀಂಕೋರ್ಟ್‌ನಲ್ಲೂ ಕಾನೂನು ಹೋರಾಟ ನಡೆಸಿದೆ.

ಸುಪ್ರೀಂಕೋರ್ಟ್‌ನಿಂದ ಪ್ರಕರಣ ಹಿಂತೆಗೆದುಕೊಂಡಲ್ಲಿ ಜಲ ಹಂಚಿಕೆ ವ್ಯಾಜ್ಯವನ್ನು ನ್ಯಾಯಾಧೀಕರಣಕ್ಕೆ ಹೊಸದಾಗಿ ಕಳುಹಿಸಿಕೊಡುತ್ತೇವೆ ಎಂದು ಕೇಂದ್ರ ಸರ್ಕಾರ ಸಲಹೆ ನೀಡಿರುವುದು ಕರ್ನಾಟಕದ ಮಟ್ಟಿಗೆ ಮತ್ತೊಂದು ಸುತ್ತಿನ ತಲೆನೋವಾಗಿ ಪರಿಣಮಿಸುವ ಲಕ್ಷಣ ಕಂಡುಬಂದಿದೆ.

ಕೃಷ್ಣಾ, ಗೋದಾವರಿ ನದಿ ವ್ಯಾಪ್ತಿಯ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಆಂಧ್ರ ಪ್ರದೇಶ ಸಿಎಂ ಜಗನ್‌ಮೋಹನ್ ರೆಡ್ಡಿ ಮತ್ತು ತೆಲಂಗಾಣ ಸಿಎಂ ಚಂದ್ರಶೇಖರ್ ರಾವ್ ಜೊತೆಗೆ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸಿದ ಸಭೆಯಲ್ಲಿ ಈ ಸಲಹೆ ನೀಡಿದ್ದಾರೆ.

ತೆಲಂಗಾಣ ಸರ್ಕಾರ ಕೇಂದ್ರದ ಅಭಿಪ್ರಾಯಕ್ಕೆ ಸಮ್ಮತಿಸಿದ್ದು, ಸುಪ್ರೀಂಕೋರ್ಟ್‌ನಿಂದ ಅರ್ಜಿ ಹಿಂಪಡೆದುಕೊಳ್ಳಲು ತೀರ್ಮಾನಿಸಿದೆ. ಈ ಬಗ್ಗೆ ಅಧಿಕೃತವಾಗಿ ಪತ್ರ ಮುಖೇನ ಮಾಹಿತಿ ನೀಡಿದ್ದಲ್ಲಿ ನ್ಯಾಯಾಧೀಕರಣದಲ್ಲಿ ವಿಚಾರಣೆ ನಡೆಸಲು ಸೂಚಿಸಬೇಕೋ ಅಥವಾ ಹೊಸದಾಗಿ ನ್ಯಾಯಾಧೀಕರಣ ರೂಪಿಸಬೇಕೋ ಎಂಬ ಬಗ್ಗೆ ಕಾನೂನು ಇಲಾಖೆಯಿಂದ ಅಭಿಪ್ರಾಯ ಪಡೆದುಕೊಳ್ಳಲಿದ್ದೇವೆ ಎಂದು ತೆಲಂಗಾಣಕ್ಕೆ ಕೇಂದ್ರ ಸರ್ಕಾರ ತಿಳಿಸಿದೆ.

**ರಾಜ್ಯದ ನಿಲುವೇನು**

ತೆಲಂಗಾಣದ ಸಮಸ್ಯೆಗಳು ಏನೇ ಇದ್ದರೂ, ಅದನ್ನು ಆಂಧ್ರದೊಂದಿಗೆ ಬಗೆಹರಿಸಿಕೊಳ್ಳಬೇಕು. ನ್ಯಾಯಾಧೀಕರಣಕ್ಕೆ ಪ್ರಕರಣ ಶಿಫಾರಸ್ಸು ಮಾಡಿ, ಜಲ ವ್ಯಾಜ್ಯದ ಮರುವಿಚಾರಣೆಗೆ ಅವಕಾಶ ನೀಡುವ ಅಧಿಕಾರವೇ ಕೇಂದ್ರ ಸರ್ಕಾರಕ್ಕಿಲ್ಲ. ಏಕೆಂದರೆ, 2010ರ ಐತೀರ್ಪಿನ ಬಳಿಕ ಸ್ಪಷ್ಟೀಕರಣ ಅರ್ಜಿಗಳ ಮೇಲೆ 2013ರಲ್ಲಿ ತೀರ್ಪು ಬಂದಿದೆ. ನದಿ ನೀರು ಹಂಚಿಕೆ ಈಗ ಮುಗಿದ ಅಧ್ಯಾಯವಾಗಿದ್ದರೂ, ಸುಪ್ರೀಂಕೋರ್ಟ್ ಅಂತಿಮ ತೀರ್ಪಷ್ಟೇ ಬಾಕಿಯಿದೆ. ಕೇಂದ್ರ ಸರ್ಕಾರ ನ್ಯಾಯಾಧೀಕರಣದ ಐತೀರ್ಪಿನ ಅಧಿಸೂಚನೆ ಪ್ರಕಟಿಸಬೇಕು. ಬದಲಿಗೆ, ನ್ಯಾಯಾಧೀಕರಣಕ್ಕೆ ಮರುವಿಚಾರಣೆ ಮಾಡಿ ಎಂದು ನಿರ್ದೇಶಿಸುವುದಲ್ಲ. 2014ರ ಆಂಧ್ರಪ್ರದೇಶ ಪುನರ್ ವಿಂಗಡಣೆ ಕಾಯ್ದೆಯಲ್ಲೂ ಜಲ ವ್ಯಾಜ್ಯ ಮರು ವಿಚಾರಣೆಯ ಉಲ್ಲೇಖವಿಲ್ಲ ಎಂದು ಕೇಂದ್ರದ ಮೇಲೆ ಒತ್ತಡ ಹೇರಲು ರಾಜ್ಯ ಸರ್ಕಾರ ಚಿಂತನೆ ನಡೆಸಿರುವ ಬಗ್ಗೆ ಉನ್ನತ ಮೂಲಗಳಿಂದ ತಿಳಿದುಬಂದಿದೆ.

**ತೆಲಂಗಾಣದ ವಾದವೇನು**

ಕೃಷ್ಣಾ ನ್ಯಾಯಾಧೀಕರಣದಲ್ಲಿ ಪ್ರಕರಣದ ವಿಚಾರಣೆ ನಡೆದಿದ್ದ ವೇಳೆ ತೆಲಂಗಾಣ ಪ್ರಾಂತ್ಯದ ಜಲ ಸಮಸ್ಯೆಗಳನ್ನು ಆಂಧ್ರಪ್ರದೇಶವು ನ್ಯಾಯಮೂರ್ತಿಗಳಿಗೆ ಸಮರ್ಥವಾಗಿ ತಿಳಿಯಪಡಿಸಲಿಲ್ಲ. ನದಿ ನೀರಿನಲ್ಲಿ ಅರ್ಹ ಪಾಲು ನಮಗೆ ಸಿಗುತ್ತಿಲ್ಲ. ನ್ಯಾಯಾಧೀಕರಣ ಪ್ರಕರಣವನ್ನು ಮತ್ತೊಮ್ಮೆ ವಿಚಾರಣೆ ನಡೆಸಿದರೆ

ಮಾತ್ರ ನಮಗೆ ಜಲನ್ಯಾಯ ದೊರಕಲು ಸಾಧ್ಯ ಎಂದು ತೆಲಂಗಾಣ ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ಪ್ರತಿಪಾದಿಸಿತ್ತು. ಇದನ್ನು ತೀಕ್ಷ್ಣವಾಗಿ ವಿರೋಧಿಸಿದ್ದ ಕರ್ನಾಟಕ ಮತ್ತು ಮಹಾರಾಷ್ಟ್ರ, ಆಂಧ್ರ–ತೆಲಂಗಾಣ ಮಧ್ಯೆ ಉದ್ಭವಿಸಿರುವ ಜಲ ಹಂಚಿಕೆ ಸಮಸ್ಯೆಗೆ ಕರ್ನಾಟಕ–ಮಹಾರಾಷ್ಟ್ರ ಹೊಣೆಗಾರರಲ್ಲ. ನಿಗದಿಪಡಿಸಿರುವ ನೀರಿನ ಪ್ರಮಾಣದಲ್ಲೇ ಅವರು ಹಂಚಿಕೆ ಮಾಡಿಕೊಳ್ಳಬೇಕು. ವಿನಾಕಾರಣ ನಮ್ಮನ್ನು ಈ ಪ್ರಕರಣದಲ್ಲಿ ಭಾಗಿದಾರರನ್ನಾಗಿ ಮಾಡಬಾರದು ಎಂದು ವಾದಿಸಿದ್ದವು.

ಹೊಸ ನ್ಯಾಯಾಧೀಕರಣ ರಚಿಸುವುದನ್ನು ನಾವು ವಿರೋಧಿಸುತ್ತೇವೆ. ತೆಲಂಗಾಣದ ಈ ಬೇಡಿಕೆಯೇ ಅತಾರ್ಕಿಕ. ಆಂಧ್ರ–ತೆಲಂಗಾಣ ಜಲ ಬಿಕ್ಕಟ್ಟು ನಮ್ಮ ತಲೆನೋವಿನ ವಿಷಯವು ಅಲ್ಲ. ಈ ನಿಟ್ಟಿನಲ್ಲಿ, ಕಾನೂನಾತ್ಮಕ ಅಂಶಗಳ ಬಗ್ಗೆ ಕೇಂದ್ರಕ್ಕೆ ವಿವರಣೆ ನೀಡಲು ರಾಜ್ಯ ಸರ್ಕಾರ ಮುಂದಾಗಲಿದೆ ಎಂದು ಮೋಹನ್ ಕಾತರಕಿ, ರಾಜ್ಯ ಪರ ಹಿರಿಯ ವಕೀಲ ಹೇಳಿದ್ದಾರೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:08.10.2020

## 11. ಅಭಿವ್ಯಕ್ತಿ ಸ್ವಾತಂತ್ರ್ಯದ ದುರುಪಯೋಗ: ಬೇಸರ ಹೊರಹಾಕಿದ ಸುಪ್ರೀಂ

ತಬ್ಲಿಘಿ ಜಮಾತ್ ಸಮಾವೇಶದ ಜೊತೆ ಕೊರೋನಾ ಸೋಂಕಿನ ನಂಟು ಕಲ್ಪಿಸಿ ಟಿವಿ ಮಾಧ್ಯಮಗಳು ಮಾಡಿದ ವರದಿಗಾರಿಕೆ ಬಗ್ಗೆ ಸುಪ್ರೀಂಕೋರ್ಟ್ ಆಕ್ಷೇಪ ವ್ಯಕ್ತಪಡಿಸಿದೆ. ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವು ಇತ್ತೀಚಿನ ದಿನಗಳಲ್ಲಿ ಅತಿ ಹೆಚ್ಚು ದುರ್ಬಳಕೆಗೆ ಒಳಗಾದ ಹಕ್ಕು ಎಂದು ಅಭಿಪ್ರಾಯಪಟ್ಟಿದೆ.

ಕೊರೋನಾ ಜೊತೆ ತಬ್ಲಿಘಿ ಜಮಾತ್ ನಂಟು ಕಲ್ಪಿಸುವ ಮೂಲಕ ಕೆಲವು ಮಾಧ್ಯಮಗಳು ಕೋಮು ದ್ವೇಷ ಹರಡಲು ಯತ್ನಿಸಿವೆ ಎಂದು ಆಕ್ಷೇಪಿಸಿ, ಜಮಾತ್ ಉಲೇಮಾ ಐ ಹಿಂದ್ ಸಲ್ಲಿಸಿದ ತಕರಾರು ಅರ್ಜಿಯ ವಿಚಾರಣೆ ನಡೆಸಿದ ತ್ರಿಸದಸ್ಯ ನ್ಯಾಯಪೀಠ ಈ ಕಳವಳ ಹೊರಹಾಕಿದೆ. ಮುಖ್ಯ ನ್ಯಾಯಮೂರ್ತಿ ಎಸ್.ಎ.ಬೊಬ್ಡೆ ನೇತೃತ್ವದ ಪೀಠದಲ್ಲಿ ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಮತ್ತು ವಿ.ರಾಮಸುಬ್ರಮಣಿಯನ್ ಇದ್ದರು.

'ತಬ್ಲಿಘಿ ಸಮಾವೇಶ ವಿಷಯದಲ್ಲಿ ಕೆಲವು ಮಾಧ್ಯಮಗಳು ದುರುದ್ದೇಶಪೂರಿತ ವರದಿ ಮಾಡಿದವು. ಆದರೂ ಕೇಂದ್ರ ಸರ್ಕಾರ ಇವುಗಳ ಸಮರ್ಥನೆಗೆ ನಿಂತಿದೆ. ಈ ಮಾಧ್ಯಮಗಳನ್ನು ಪ್ರಶ್ನೆ ಮಾಡಿರುವುದು ಸರಿಯಲ್ಲ. ಇದರಿಂದ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಹರಣವಾಗುತ್ತದೆಂದು ಪ್ರತಿಪಾದಿಸಿ ಕೇಂದ್ರ, ಅಫಿಡವಿಡ್ ಸಲ್ಲಿಸಿದೆ," ಎಂದು ಜಮಾತ್ ಪ್ರತಿನಿಧಿಸಿದ ಹಿರಿಯ ವಕೀಲ ದುಷ್ಯಂತ್ ದವೆ ಹೇಳಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ನ್ಯಾಯಪೀಠ, 'ಕೇಂದ್ರ ತನ್ನ ನಿಲುವನ್ನು ತಿಳಿಸಿದೆ. ಅಂತಹ ಸ್ವಾತಂತ್ರ್ಯ ಸರ್ಕಾರಕ್ಕೆ ಇದೆ. ಇಲ್ಲಿ ಅಭಿಪ್ರಾಯ ವ್ಯಕ್ತಪಡಿಸುವ ಮುಕ್ತ ಸ್ವಾತಂತ್ರ್ಯ ನಿಮಗೂ ಇದೆ. ಅದನ್ನು ಬಿಟ್ಟು ನಿಮ್ಮ ನಿಜವಾದ ಆಕ್ಷೇಪ ಏನು ತಿಳಿಸಿ," ಎಂದು ಪ್ರಶ್ನಿಸಿತು.

ಆಧಾರ: ವಿಜಯ ಕರ್ನಾಟಕ, ದಿನಾಂಕ:09.10.2020

## 12. ಅಪಘಾತ ಪುನರ್ ಸೃಷ್ಟಿಸಿ ಐತಿಹಾಸಿಕ ತೀರ್ಪು

ರಸ್ತೆ ಅಪಘಾತ ಪ್ರಕರಣವೊಂದರಲ್ಲಿ ವೈಜ್ಞಾನಿಕ ರೀತಿಯಲ್ಲಿ ಇಡೀ ಘಟನೆಯನ್ನು ಪುನರ್ ಸೃಷ್ಟಿಸಿ ಅದರ ಆಧಾರದ ಮೇಲೆ ತೀರ್ಪು ನೀಡುವ ಮೂಲಕ ಬೆಳಗಾವಿ ನ್ಯಾಯಾಲಯ, ದೇಶದಲ್ಲಿಯೇ ಹೊಸ ಇತಿಹಾಸ ಬರೆದಿದೆ.

ಸಾಮಾನ್ಯವಾಗಿ ರಸ್ತೆ ಅಪಘಾತ ಪ್ರಕರಣದಲ್ಲಿ ಕೋರ್ಟ್‌ಗಳು ದಾಖಲೆ ಆಧರಿಸಿ ತೀರ್ಪು ನೀಡುವುದು ವಾಡಿಕೆ. ಕೋರ್ಟ್‌ಗೆ ಸಲ್ಲಿಕೆಯಾದ ದಾಖಲೆಗಳ ಪ್ರಕಾರ ನಿರ್ಲಕ್ಷ್ಯ ಎಂಬುದು ಮೇಲ್ನೋಟಕ್ಕೆ ಸಾಬೀತಾಗುತ್ತಿದ್ದಂತೆ ಸಂಬಂಧಿಸಿದ ವಾಹನಗಳ ಮಾಲೀಕರಿಗೆ ಅಥವಾ ವಿಮಾ ಕಂಪನಿಗಳಿಗೆ ಪರಿಹಾರ ಪಾವತಿಸಲು ಆದೇಶಿಸುತ್ತವೆ. ಆದರೆ, ಬೆಳಗಾವಿಯ ಐದನೇ ಹೆಚ್ಚುವರಿ ಜಿಲ್ಲಾ

ಮತ್ತು ಸೆಷನ್ಸ್ ಹಾಗೂ ಹೆಚ್ಚುವರಿ ಎಂಎಸಿಟಿ ನ್ಯಾಯಾಲಯ, ಇದೇ ಮೊದಲ ಬಾರಿಗೆ ಮುಂಬೈ ಮೂಲದ ಆಟೊಮೋಟಿವ್ ರೀಸರ್ಚ್ ಸೆಂಟರ್ (ಐಸಿಎಸ್) ಅಶ್ಯೂರ್ ಸಂಸ್ಥೆಯ ಅಪಘಾತ ಘಟನೆಯ ಪುನರ್ ಸೃಷ್ಟಿ ವರದಿ ಆಧಾರದ ಮೇಲೆ ವೈಜ್ಞಾನಿಕ ವಿಶ್ಲೇಷಣೆ ಮಾಡಿ ತೀರ್ಪು ನೀಡಿದೆ.

ಇಂತಹ ತೀರ್ಪು ನೀಡಿರುವ ಬೆಳಗಾವಿಯ ನ್ಯಾಯಾಧೀಶ ಯಶವಂತ ತಾವರೆ, ಐಸಿಐಸಿಐ ಲೋಂಬಾರ್ಡ್ ಜನರಲ್ ವಿಮಾ ಕಂಪನಿಯ ಪರ ವಾದ ಮಂಡಿಸಿದ ಹುಬ್ಬಳ್ಳಿಯ ವಕೀಲರಾದ ಎಸ್.ಕೆ.ಕಾಯಕಮಠ, ಇಬ್ಬರೂ ಸಹ ಸ್ವತಃ ವಿಜ್ಞಾನದ ವಿಷಯ, ವಿಶೇಷವಾಗಿ ಭೌತಶಾಸ್ತ್ರದ ಅಧ್ಯಯನ ನಡೆಸಿರುವುದು ಕಾರಣ, ಅವರು ಪ್ರಕರಣವನ್ನು ಮಾಮೂಲಿಯಾಗಿ ಪರಿಗಣಿಸದೆ ವೈಜ್ಞಾನಿಕ ರೀತಿಯಲ್ಲಿ ವಿಶ್ಲೇಷಿಸಲು ಮುಂದಾಗಿದ್ದರಿಂದ ಈ ತೀರ್ಪು ಹೊರಬಿದ್ದಿದೆ.

**ವೈಜ್ಞಾನಿಕ ವರದಿ:** ಈ ಪ್ರಕರಣದ ವಿಚಾರಣೆ ವೇಳೆ, ವಿಮಾ ಕಂಪನಿ ಪ್ರತಿನಿಧಿಸುತ್ತಿದ್ದ ವಕೀಲ ಕಾಯಕಮಠ ಅವರು ವೈಜ್ಞಾನಿಕ ರೀತಿಯಲ್ಲಿ ವಿಶ್ಲೇಷಿಸಿದ ವರದಿ ಸಲ್ಲಿಸುವುದಾಗಿ ನ್ಯಾಯಾಲಯವನ್ನು ಕೋರಿದರು. ಅದಕ್ಕೆ ನ್ಯಾಯಾಧೀಶರು ಸಮ್ಮತಿಸಿದರು. ಅದರಲ್ಲಿ ಕಾರು ಮತ್ತು ಟ್ರಕ್ ನಡುವೆ ಸಂಭವಿಸಿದ ಅಪಘಾತವನ್ನು ದಾಖಲೆಗಳು ಹಾಗೂ ಮಾಹಿತಿ ಇಟ್ಟುಕೊಂಡು ಸಂಪೂರ್ಣವಾಗಿ ಪುನರ್ ಸೃಷ್ಟಿಸಲಾಯಿತು.

ಆ ವೇಳೆ ಕೈನೆಟಿಕ್ ಎನರ್ಜಿ ಸಿದ್ಧಾಂತ ಮತ್ತು ಚಲನೆಯ ನಿಯಮ, ನ್ಯೂಟನ್ ಲಾ ಆಫ್ ಮೋಷನ್ ಹಾಗೂ ಲಾ ಆಫ್ ಇನರ್ಷಿಯಾ ಸಿದ್ಧಾಂತಗಳನ್ನು ಆಧರಿಸಿ ಘಟನೆಯನ್ನು ಪುನರ್ ಸೃಷ್ಟಿಸಲಾಯಿತು. ಕಾರು ಚಲಿಸುತ್ತಿದ್ದ ವೇಗ ಹಾಗೂ ಲಾರಿಯ ವೇಗ ಮತ್ತು ಹೇಗೆ ಅಪಘಾತ ಘಟಿಸಿರಬಹುದು ಎಂಬ ಅಂದಾಜು ಲೆಕ್ಕಾಚಾರ ಹಾಕಿ ಮರು ಸೃಷ್ಟಿ ಮಾಡಲಾಯಿತು. ಆ ಪ್ರಕಾರ ಕಾರು ಸುಮಾರು 95 ಕಿ.ಮೀ ವೇಗ, ಲಾರಿ ಸುಮಾರು 38 ಕಿ.ಮೀ ವೇಗದಲ್ಲಿ ಚಲಿಸುತ್ತಿತ್ತು ಎಂಬ ತೀರ್ಮಾನಕ್ಕೆ ಬರಲಾಗಿದೆ.

**ಪ್ರಕರಣದ ಹಿನ್ನೆಲೆ:** 2013 ಫೆಬ್ರವರಿ 15ರಂದು ಹುಬ್ಬಳ್ಳಿ–ಧಾರವಾಡ ಬೈಪಾಸ್ ರಸ್ತೆಯ ಗಬ್ಬೂರು ಟೋಲ್ ಮತ್ತು ತಾರಿಹಾಳ ಟೋಲ್ ಮಧ್ಯದಲ್ಲಿ ಕಾರು ಮತ್ತು ಲಾರಿ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿತ್ತು. ಈ ಘಟನೆಯಲ್ಲಿ ಕಾರಿನಲ್ಲಿದ್ದ ಮೂವರು ಸಾವನ್ನಪ್ಪಿ ಒಬ್ಬ ವ್ಯಕ್ತಿ ಗಾಯಗೊಂಡಿದ್ದನು. ಈ ಬಗ್ಗೆ ಪೊಲೀಸರು ಕೇಸ್ ದಾಖಲಿಸಿಕೊಂಡು ಮಹಜರು ವರದಿ ಸಿದ್ಧಪಡಿಸಿದ ಬಳಿಕ ಪ್ರಕರಣದಲ್ಲಿ ಕಾರು ಹಾಗೂ ಲಾರಿ ಚಾಲಕರಿಬ್ಬರ ಮೇಲೂ ಆರೋಪ ಪಟ್ಟಿ ಸಲ್ಲಿಸಿದ್ದರು.

ಕಾರು ಅತಿ ವೇಗವಾಗಿ ಚಲಿಸಿ, ಚಾಲಕನ ನಿರ್ಲಕ್ಷ್ಯದಿಂದ ತಾನೇ ಲಾರಿಗೆ ಡಿಕ್ಕಿ ಹೊಡೆದಿದೆ. ಇದರಲ್ಲಿ ಲಾರಿ ಚಾಲಕನ ಪಾತ್ರವಿಲ್ಲ. ಪರಿಹಾರವನ್ನು ನೀಡಬೇಕಾಗಿಲ್ಲ ಎಂದು ಐಸಿಐಸಿ ವಿಮಾ ಕಂಪನಿಯ ವಕೀಲ ಎಸ್.ಕೆ.ಕಾಯಕಮಠ ವಾದಿಸಿದ್ದರು. ಅದಕ್ಕೆ ಪೂರಕವಾಗಿ ನ್ಯಾಯಮಂಡಳಿ ಮುಂದೆ ಘಟನೆಯ ಪುನರ್ ಸೃಷ್ಟಿ ವರದಿಯನ್ನು ಸಲ್ಲಿಸಲಾಯಿತು.

ಆ ವೈಜ್ಞಾನಿಕ ವರದಿಯನ್ನು ಆಧರಿಸಿ ನ್ಯಾಯಾಲಯ ಕಾರಿನ ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ. ಇದರಲ್ಲಿ ಲಾರಿ ಚಾಲಕನ ಪಾತ್ರವಿಲ್ಲ ಎಂದು ಆದೇಶಿಸಿದೆ. ಮೃತಪಟ್ಟ ಕಾರಿನ ವಿಮೆ ಕಂಪನಿ ಪರಿಹಾರ ನೀಡುವಂತೆ ಆದೇಶಿಸಿದೆ. ಕಾರು ಚಾಲಕನ ವಾರಸುದಾರರ ಪರಿಹಾರ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದ್ದು, ಕಾರಿಗೆ ಆದ ನಷ್ಟವನ್ನು ಕೇಳಿದ ಅರ್ಜಿಯನ್ನು ವಜಾಗೊಳಿಸಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:10.10.2020

## 13. ನ್ಯಾಯಾಂಗ–ಶಾಸಕಾಂಗ ಸಮರ ಮತ್ತೊಂದು ಹಂತಕ್ಕೆ

ಆಂಧ್ರಪ್ರದೇಶ ಹೈಕೋರ್ಟ್, ನ್ಯಾಯಾಧೀಶರು ಹಾಗೂ ತೀರ್ಪುಗಳ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ನಿಂದನಾತ್ಮಕ ಪೋಸ್ಟ್‌ಗಳನ್ನು ಮಾಡಿರುವ ಆಡಳಿತಾರೂಢ ವೈಎಸ್‌ಆರ್‌ಸಿಪಿ ಪಕ್ಷದ

ಮುಖಂಡರು, ಸಾಮಾಜಿಕ ಕಾರ್ಯಕರ್ತರು ಸೇರಿ ಒಟ್ಟು 49 ಮಂದಿ ವಿರುದ್ಧ ಸಿಬಿಐ ತನಿಖೆಗೆ ಆಂಧ್ರ ಹೈಕೋರ್ಟ್ ಆದೇಶಿಸಿದ್ದು, ಕಾರ್ಯಾಂಗ ಮತ್ತು ನ್ಯಾಯಾಂಗ ನಡುವಿನ ಸಮರ ಮತ್ತೊಂದು ಹಂತಕ್ಕೆ ತಲುಪಿದೆ.

ಸುಪ್ರೀಂಕೋರ್ಟ್ 2ನೇ ಹಿರಿಯ ನ್ಯಾಯಮೂರ್ತಿ ಎನ್.ವಿ. ರಮಣ, ಆಂಧ್ರಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಮತ್ತು ನಾಲ್ವರು ನ್ಯಾಯಾಧೀಶರ ವಿರುದ್ಧ ಆಂಧ್ರ ಸಿಎಂ ಜಗನ್ ಮೋಹನ್ ರೆಡ್ಡಿ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗೆ ಪತ್ರ ಮುಖೇನ ದೂರು ನೀಡಿದ ಎರಡೇ ದಿನಗಳಲ್ಲಿ ಆಂಧ್ರ ಹೈಕೋರ್ಟ್ ಈ ಆದೇಶ ಪ್ರಕಟಿಸಿದೆ. ನ್ಯಾಯಾಲಯದ ತೀರ್ಪುಗಳ ಬಗ್ಗೆ ತಪ್ಪಾಗಿ ಅರ್ಥೈಸಿ, ಆಕ್ಷೇಪಾರ್ಹ ವಿಮರ್ಶೆಗಳನ್ನು ಮಾಡಲಾಗಿದ್ದು, ಇದು ಹೈಕೋರ್ಟ್ ಪ್ರತಿಷ್ಠೆ, ಘನತೆಗೆ ಕಳಂಕ ತಂದಿದೆ ಎಂದು ನ್ಯಾಯಾಲಯ ಅಸಮಾಧಾನ ಹೊರಹಾಕಿದೆ.

ನ್ಯಾಯಾಂಗವನ್ನು ಟೀಕಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹಾಕಲಾಗಿದ್ದ ಪೋಸ್ಟ್‌ಗಳನ್ನು ಪ್ರಶ್ನಿಸಿ ವಕೀಲರೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸಿದ್ದ ಹೈಕೋರ್ಟ್, ರಾಜ್ಯ ಸರ್ಕಾರ ತನಿಖೆ ನಡೆಸಬೇಕು ಎಂದು ಹೇಳಿತ್ತು. ಅಪರಾಧ ತನಿಖಾ ದಳ ಸೂಕ್ತ ತನಿಖೆ ನಡೆಸದ ಹಿನ್ನೆಲೆಯಲ್ಲಿ ಸಿಬಿಐ ತನಿಖೆಗೆ ವಹಿಸುವಂತೆ ಮಾಡಲಾಗಿದ್ದ ಮನವಿಗೆ ಒಪ್ಪಿದ ಹೈಕೋರ್ಟ್ ಸಿಬಿಐ ತನಿಖೆಗೆ ಅನುಮತಿ ನೀಡಿದೆ. ಸಿಬಿಐ 8 ವಾರಗಳಲ್ಲಿ ವರದಿ ಸಲ್ಲಿಸಬೇಕಿದ್ದು, ರಾಜ್ಯ ಸರ್ಕಾರ ತನಿಖಾ ಸಂಸ್ಥೆಗೆ ಪೂರ್ಣ ಸಹಕಾರ ನೀಡಬೇಕೆಂದು ನಿರ್ದೇಶಿಸಲಾಗಿದೆ.

ಆಂಧ್ರ ವಿಧಾನಸಭೆ ಸ್ಪೀಕರ್ ತಮ್ಮಿನೇನಿ ಸೀತಾರಾಮ್, ಸಿಸಿಎಂ ನಾರಾಯಣ ಸ್ವಾಮಿ, ರಾಜ್ಯಸಭೆ ಸದಸ್ಯ ವಿಜಯಸಾಯಿ ರೆಡ್ಡಿ ಸೇರಿ ಹಲವು ಮುಖಂಡರು ನ್ಯಾಯಾಂಗದ ಬಗ್ಗೆ ಆಕ್ಷೇಪಾರ್ಹ ಪ್ರತಿಕ್ರಿಯೆ ನೀಡಿದ್ದಾರೆಂದು ಹೈಕೋರ್ಟ್ ವಿಚಾರಣೆ ಸಂದರ್ಭದಲ್ಲಿ ಹೇಳಿತ್ತು.

ನ್ಯಾಯಾಂಗದ ವಿರುದ್ಧ ಇಂತಹ ಕೆಟ್ಟ ರೀತಿಯ ವಾಗ್ದಾಳಿಗಳನ್ನು ವ್ಯವಸ್ಥಿತ ಒಳಸಂಚಿನ ಮೂಲಕ ನಡೆಸಲಾಗಿದೆಯೇ ಎಂದು ಸಿಬಿಐ ಪರಿಶೀಲಿಸಿ, ಪಿತೂರಿ ನಡೆದಿದೆ ಎಂಬುದು ಕಂಡುಕೊಂಡಲ್ಲಿ ಹುದ್ದೆ ಮತ್ತು ಸ್ಥಾನಮಾನವನ್ನು ಲೆಕ್ಕಿಸದೆ ಅಪರಾಧಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಲು ಮುಂದಾಗಬೇಕು.

ಆಧಾರ: ವಿಜಯವಾಣಿ, ದಿನಾಂಕ:13.10.2020

## 14. ಜಾಹೀರಾತು ತೆರಿಗೆ ಬಿಬಿಎಂಪಿಗೆ ವರ್ಗಾಯಿಸಲು ಆದೇಶ

ಜಾಹೀರಾತು ಫಲಕದಿಂದ ಸಂಗ್ರಹಿಸಿದ ರೂ.18 ಲಕ್ಷ ತೆರಿಗೆಯನ್ನು ಬಿಬಿಎಂಪಿಗೆ ವರ್ಗಾಯಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ. ಆದೇಶ ಪಾಲನೆ ಮಾಡಿರುವ ಸಂಬಂಧ ಅನುಸರಣಾ ವರದಿಯನ್ನು ಮುಂದಿನ ವಿಚಾರಣೆ (ನವೆಂಬರ್ 2) ವೇಳೆ ಸಲ್ಲಿಸುವಂತೆ ಆದೇಶ ನೀಡಿದೆ.

ಬಿಬಿಎಂಪಿ, ಲಭ್ಯ ಇರುವ ಸಾರ್ವಜನಿಕ ನಿಧಿ ಬಳಕೆ ಮಾಡಿಕೊಂಡು ಕೋವಿಡ್ ವಿರುದ್ಧ ಜಾಗೃತಿ ಸಂದೇಶ ಪ್ರದರ್ಶಿಸಲಾಗುವುದು. ಯಾವುದೇ ಖಾಸಗಿ ಕಂಪನಿಗಳ ಜಾಹೀರಾತಿಗೆ ಅವಕಾಶ ನೀಡುವುದಿಲ್ಲ ಎಂದು ಸರ್ಕಾರ ನ್ಯಾಯಾಲಯಕ್ಕೆ ತಿಳಿಸಿತ್ತು. ಆದರೆ, ಜಾಗೃತಿ ಸಂದೇಶದ ಜೊತೆಗೆ ಖಾಸಗಿ ಕಂಪನಿಗಳ ಜಾಹೀರಾತುಗಳನ್ನು ಅಳವಡಿಸಿದ ಕಾರಣ ಅನುಮತಿ ಹಿಂಪಡೆದ ನ್ಯಾಯಾಲಯ, ಫಲಕಗಳನ್ನು ತೆರವುಗೊಳಿಸಲು ಈ ಹಿಂದಿನ ವಿಚಾರಣೆ ವೇಳೆ ಆದೇಶಿಸಿತ್ತು.

ಆಧಾರ: ಪ್ರಜಾವಾಣಿ, ದಿನಾಂಕ:14.10.2020

## 15. ವರ್ಷದಲ್ಲಿ 46 ಸುಪ್ರೀಂಕೋರ್ಟ್ ತೀರ್ಪು ಕನ್ನಡಕ್ಕೆ ತರ್ಜುಮೆ

ಸುಪ್ರೀಂಕೋರ್ಟ್ ತನ್ನ ತೀರ್ಪುಗಳನ್ನು ವಿವಿಧ ಭಾಷೆಗಳಿಗೆ ಭಾಷಾಂತರಿಸಲು ಆರಂಭಿಸಿ ಒಂದು ವರ್ಷ ಕಳೆದಿದ್ದು, 46 ತೀರ್ಪುಗಳನ್ನು ಕನ್ನಡಕ್ಕೆ ಭಾಷಾಂತರಿಸಲಾಗಿದೆ. ಈವರೆಗೆ ಒಟ್ಟು 300 ತೀರ್ಪುಗಳು ಹಲವು ಭಾಷೆಗಳಿಗೆ ತರ್ಜುಮೆ ಆಗಿವೆ. ಈ ಪೈಕಿ 153 ಆದೇಶಗಳನ್ನು ಹಿಂದಿ ಭಾಷೆಗೆ, 36 ತಮಿಳು, 10 ಪಂಜಾಬಿ, 22 ಮರಾಠಿ, 18 ಮಲಯಾಳಂ ಮತ್ತು 46 ಆದೇಶಗಳನ್ನು ಬಂಗಾಳ, ತೆಲುಗು ಕನ್ನಡ ಮತ್ತು ಒಂದು ತೀರ್ಪನ್ನು ಉರ್ದು ಹಾಗೂ ನೇಪಾಳಿ ಭಾಷೆಗೆ ಭಾಷಾಂತರಿಸಲಾಗಿದೆ. ತೀರ್ಪುಗಳು ಸ್ಥಳೀಯ ಭಾಷಿಗರಿಗೂ ಅರ್ಥವಾಗುವಂತಿರಬೇಕು ಎಂಬ ಉದ್ದೇಶದಿಂದ ಈ ರೀತಿ ಮಾಡಲಾಗುತ್ತಿದೆ.

ಆಧಾರ: ಕನ್ನಡಪ್ರಭ, ದಿನಾಂಕ:20.10.2020

## 16. ಮಾಸ್ಕ್ ಧರಿಸದಿದ್ದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಿ: ಹೈಕೋರ್ಟ್

ಮಾಸ್ಕ್ ಧರಿಸದ ಮತ್ತು ಅಂತರ ಕಾಪಾಡದವರ ವಿರುದ್ಧ ರಾಜ್ಯ ಸರ್ಕಾರ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ಹೈಕೋರ್ಟ್ ಹೇಳಿದೆ. ಪ್ರತಿಭಟನೆಗಳನ್ನು ನಿರ್ಬಂಧಿಸಬೇಕು ಎಂದು ಕೋರಿ ಸಾಯಿದತ್ತ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ಹಲಸೂರು ಗೇಟ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 35 ಪ್ರತಿಭಟನೆಗಳು ನಡೆದಿವೆ. ಸೆಪ್ಟೆಂಬರ್ 25ರಂದು ನಡೆದ ಪ್ರತಿಭಟನೆಯ ಆಯೋಜಕರಲ್ಲಿ ಒಬ್ಬರಾದ ಹೋರಾಟಗಾರ ಮಾರುತಿ ಮಾನ್ಪಡೆ ಕೋವಿಡ್‌ನಿಂದ ಮೃತಪಟ್ಟಿದ್ದಾರೆ ಎಂದು ಅರ್ಜಿದಾರರ ಪರ ವಕೀಲರು ತಿಳಿಸಿದರು.

ಪ್ರತಿಭಟನೆಯ ಚಿತ್ರಗಳನ್ನು ನೋಡಿದರೆ ಮಾಸ್ಕ್ ಧರಿಸದ ಹಲವರು ಕಾಣಿಸುತ್ತಾರೆ. ನಿಯಮ ಪಾಲಿಸದವರ ವಿರುದ್ಧ ಸರ್ಕಾರ ಮತ್ತು ಸಂಬಂಧ ಪ್ರಾಧಿಕಾರ ಮುಲಾಜಿಲ್ಲದೆ ಕ್ರಮ ಕೈಗೊಳ್ಳಬೇಕು ಎಂದು ಪೀಠ ತಿಳಿಸಿತು.

ಆಧಾರ: ಪ್ರಜಾವಾಣಿ, ದಿನಾಂಕ:23.10.2020

## 17. ಪುರಸಭೆ, ಪ.ಪಂ ಮೀಸಲು ಪಟ್ಟಿಗೆ ಹೈಕೋರ್ಟ್ ಅಸ್ತು

ಎಲ್ಲಾ ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ಅಧ್ಯಕ್ಷ–ಉಪಾಧ್ಯಕ್ಷ ಚುನಾವಣೆಗೆ ಹಸಿರು ನಿಶಾನೆ ತೋರಿರುವ ಹೈಕೋರ್ಟ್, ನವೆಂಬರ್ 10ರೊಳಗೆ ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸಲು ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಗಳ ಮೀಸಲು ನಿಗದಿಪಡಿಸಿ ರಾಜ್ಯ ಸರ್ಕಾರ ಅಕ್ಟೋಬರ್ 8ರಂದು ಹೊರಡಿಸಿದ್ದ ಅಧಿಸೂಚನೆಗೆ ಅಕ್ಟೋಬರ್ 19ರಂದು ನೀಡಿದ್ದ ಮಧ್ಯಂತರ ಆದೇಶವನ್ನು ಹೈಕೋರ್ಟ್ ಹಿಂಪಡೆದಿದೆ. ನಿಗದಿತ ಮೀಸಲು ಪಟ್ಟಿ ಪ್ರಕಾರ, ಚುನಾವಣೆ ಮುಂದುವರಿಸಲು ಸರ್ಕಾರಕ್ಕೆ ಸೂಚನೆ ನೀಡಿದೆ.

ಮೀಸಲು ಪ್ರಶ್ನಿಸಿ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಪುರಸಭೆ, ದಾವಣಗೆರೆ ಜಿಲ್ಲೆಯ ಚನ್ನಗಿರಿ ಪುರಸಭೆ, ಕೊಡಗು ಜಿಲ್ಲೆಯ ಸೋಮವಾರಪೇಟೆ ಪಟ್ಟಣ ಪಂಚಾಯಿತಿ ಸೇರಿ ರಾಜ್ಯದ ಹಲವು ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ಚುನಾಯಿತ ಸದಸ್ಯರು, ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನದ ಆಕಾಂಕ್ಷಿಗಳು ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ವಾದ–ಪ್ರತಿವಾದ ಆಲಿಸಿದ ಬಳಿಕ ನ್ಯಾಯಪೀಠ, 'ನಗರಸಭೆ ಅಧ್ಯಕ್ಷ–ಉಪಾಧ್ಯಕ್ಷ ಮೀಸಲು ಅಧಿಸೂಚನೆಗೆ ನೀಡಲಾಗಿದ್ದ ಮಧ್ಯಂತರ ತಡೆ ನೀಡಿ ಚುನಾವಣೆ ನಡೆಸುವಂತೆ ವಿಭಾಗೀಯ ನ್ಯಾಯಪೀಠ ಆದೇಶಿಸಿದೆ. ಅದೇ ಆಧಾರದಲ್ಲಿ ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ಅಧ್ಯಕ್ಷರ ಚುನಾವಣೆಗಳು ನಡೆಯಲಿ" ಎಂದು ಆದೇಶಿಸಿತು.

ಪುರಸಭೆ, ಪಟ್ಟಣ ಪಂಚಾಯಿತಿ ಮೀಸಲು ಅಧಿಸೂಚನೆಗೆ ತಡೆ ನೀಡಿ ಅಕ್ಟೋಬರ್ 19ರಂದು ಹೊರಡಿಸಿದ್ದ ಮಧ್ಯಂತರ ಆದೇಶವನ್ನು ಹಿಂಪಡೆಯುತ್ತಿರುವುದಾಗಿ ನ್ಯಾಯಪೀಠ ಪ್ರಕಟಿಸಿತು.

'ರಾಜ್ಯದ ಎಲ್ಲಾ ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ನಡೆಯಲಿ. ಅರ್ಜಿದಾರರು ಪ್ರಶ್ನಿಸಿರುವ ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ಅಧ್ಯಕ್ಷ–ಉಪಾಧ್ಯಕ್ಷ ಚುನಾವಣೆಗಳು ಅರ್ಜಿಯ ಅಂತಿಮ ಫಲಿತಾಂಶಕ್ಕೆ ಒಳಪಡಲಿದೆ" ಎಂದು ನ್ಯಾ.ದೇವದಾಸ್ ಆದೇಶದಲ್ಲಿ ತಿಳಿಸಿದ್ದಾರೆ.

ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವಡಗಿ, 'ಮೀಸಲು ನಿಗದಿಪಡಿಸುವಾಗ ನಿಯಮಾವಳಿಗಳನ್ನು ಪಾಲಿಸಲಾಗಿದೆ. ಚುನಾವಣೆ ಪ್ರಕ್ರಿಯೆ ಪ್ರಾರಂಭವಾದ ನಂತರ ತಡೆಯಾಜ್ಞೆ ಸೂಕ್ತವಲ್ಲ. ಅರ್ಜಿಗಳು ಮೆರಿಟ್ ಆಧಾರದಲ್ಲಿ ವಿಚಾರಣಾ ಮಾನ್ಯತೆ ಹೊಂದಿರಬಹುದು. ಚುನಾವಣಾ ಪ್ರಕ್ರಿಯೆ ಪ್ರಾರಂಭಗೊಂಡ ಬಳಿಕ ನ್ಯಾಯಾಲಯ ಮಧ್ಯಪ್ರವೇಶ ಮಾಡುವಂತಿಲ್ಲ ಎಂದು ಸುಪ್ರೀಂಕೋರ್ಟ್ ಅನೇಕ ತೀರ್ಪುಗಳನ್ನು ನೀಡಿದೆ" ಎಂದು ಹೇಳಿದರು.

ನಗರಸಭೆ ಚುನಾವಣೆ ಸಂಬಂಧ ವಿಭಾಗೀಯಪೀಠ ಅಕ್ಟೋಬರ್ 21ರಂದು ನೀಡಿರುವ ಆದೇಶ ಪರಿಗಣಿಸಿ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ಅಧ್ಯಕ್ಷ–ಉಪಾಧ್ಯಕ್ಷರ ಚುನಾವಣೆಗೆ ಅನುಮತಿ ನೀಡಬೇಕು ಎಂದು ಕೋರಿದರು. ಇದನ್ನು ನ್ಯಾಯಪೀಠ ಮಾನ್ಯ ಮಾಡಿತು.

ಆಧಾರ: ವಿಜಯ ಕರ್ನಾಟಕ, ದಿನಾಂಕ:23.10.2020

## 18. ಮಾಸ್ಕ್: ವಿಶೇಷ ತಂಡ ರಚನೆಗೆ ನಿರ್ದೇಶನ

ಮಾಸ್ಕ್ ಧರಿಸಬೇಕು ಮತ್ತು ಅಂತರ ಕಾಪಾಡಬೇಕು ಎಂಬ ನಿಯಮದ ಕಡ್ಡಾಯ ಜಾರಿಗೆ ವಿಶೇಷ ತಂಡ ರಚನೆ ಮಾಡಬೇಕು ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ. ಲೇಟ್ಜ್‌ಕಿಟ್ ಫೌಂಡೇಷನ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕಾ ನೇತೃತ್ವದ ವಿಭಾಗೀಯ ಪೀಠ, 'ಬೆಂಗಳೂರಿನಲ್ಲಿ ಈ ನಿಯಮ ಜಾರಿಗೆ 198 ಮಾರ್ಷಲ್‌ಗಳನ್ನು ನೇಮಕ ಮಾಡಿ ಸುಮ್ಮನಾದರೆ ಸಾಲದು" ಎಂದು ಎಚ್ಚರಿಸಿತು.

ಮಾರ್ಷಲ್‌ಗಳು ಹೆಚ್ಚಿನ ಹೊರೆ ಅನುಭವಿಸುತ್ತಿದ್ದಾರೆ. 1.30 ಕೋಟಿ ಜನಸಂಖ್ಯೆ ಇರುವ ಇಡೀ ಬೆಂಗಳೂರನ್ನು 198 ಮಾರ್ಷಲ್‌ಗಳು ನಿಭಾಯಿಸಲು ಆಗುವುದಿಲ್ಲ. ಈ ನಿಯಮಗಳನ್ನು ಜಾರಿಗೊಳಿಸುವ ಉದ್ದೇಶಕ್ಕೆ ಮೀಸಲಾದ ತಂಡವೊಂದನ್ನು ರಚಿಸಬೇಕು ಎಂದು ತಿಳಿಸಿತು.

ರ್‍ಯಾಲಿ ಮತ್ತು ಪ್ರತಿಭಟನೆಗಳನ್ನು ನಡೆಸಲು ಅನುಮತಿ ನೀಡುವಾಗ ನಿರ್ದಿಷ್ಟ ಷರತ್ತುಗಳನ್ನು ವಿಧಿಸಬೇಕು. ಈ ನಿಯಮ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ಕೆಲ ಪೊಲೀಸ್ ಸಿಬ್ಬಂದಿಯನ್ನು ನಿಯೋಜನೆ ಮಾಡುವುದು ಸರ್ಕಾರದ ಕರ್ತವ್ಯ ಎಂದು ಪೀಠ ತಿಳಿಸಿತು.

ಆದೇಶ ಪಾಲಿಸಿದ ಕುರಿತು ಅನುಸರಣಾ ವರದಿ ಸಲ್ಲಿಸಬೇಕು ಎಂದು ತಿಳಿಸಿದ ಪೀಠ, ನವೆಂಬರ್ 5ಕ್ಕೆ ವಿಚಾರಣೆ ಮುಂದೂಡಿತು.

ಆಧಾರ: ಪ್ರಜಾವಾಣಿ, ದಿನಾಂಕ:24.10.2020

## 19. ಅಧಿಕಾರಿಗಳ ತಂಡ ನೇಮಿಸಲು ಆದೇಶ

ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಸೇರಿ ಕೋವಿಡ್ ನಿಯಂತ್ರಣ ನಿಯಮಗಳನ್ನು ನಗರದಲ್ಲಿ ಕಠಿಣ ರೀತಿಯಲ್ಲಿ ಜಾರಿಗೊಳಿಸಲು ಅಧಿಕಾರಿಗಳ ತಂಡ ನೇಮಿಸುವಂತೆ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ನಗರದಲ್ಲಿ ಕೋವಿಡ್–19 ಮಾರ್ಗಸೂಚಿಗಳ ಕಟ್ಟುನಿಟ್ಟು ಜಾರಿಗೆ ಬಿಬಿಎಂಪಿ ಹಾಗೂ ಸರ್ಕಾರಕ್ಕೆ ಅದೇಶಿಸಲು ಕೋರಿ ಸಲ್ಲಿಕೆಯಾಗಿದ್ದ ಹಲವು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ನಡೆಸಿದ ಸಿಜೆ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಅಕ್ಟೋಬರ್ 28 ರೊಳಗೆ ಅಧಿಕಾರಿಗಳ ತಂಡ ರಚಿಸಲು ನಿರ್ದೇಶಿಸಿದೆ.

ತಂಡದಲ್ಲಿ ನಾನಾ ಇಲಾಖೆಗಳ ಅಧಿಕಾರಿಗಳು ಸಾಕಷ್ಟು ಪ್ರಮಾಣದಲ್ಲಿರಬೇಕು. ಅವರಿಗೆ ಕೊರೋನಾ ನಿಯಂತ್ರಣ ಜಾರಿ ಜವಾಬ್ದಾರಿಯಷ್ಟೇ ನಿಗದಿಪಡಿಸಬೇಕು. ಬೆಂಗಳೂರಿನ ಎಲ್ಲಾ ಪ್ರದೇಶಗಳ ಮೇಲ್ವಿಚಾರಣೆ ನಡೆಸಲು ತಂಡಗಳನ್ನು ನಿಯೋಜಿಸಬೇಕು ಎಂದು ನ್ಯಾಯಪೀಠ ಆದೇಶದಲ್ಲಿ ತಿಳಿಸಿದೆ.

ಸಾರ್ವಜನಿಕ ಸಭೆ ಮತ್ತು ಮೆರವಣಿಗೆಗಳಿಗೆ ಅನುಮತಿ ಹಾಗೂ ನಿಯಂತ್ರಣ (ಬೆಂಗಳೂರು ನಗರ) ಆದೇಶ–2008 ಅಡಿ ಇನ್ನು ಮೆರವಣಿಗೆಗಳಿಗೆ ಅನುಮತಿ ನೀಡುವಾಗ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು ಎಂಬ ಷರತ್ತು ವಿಧಿಸಬೇಕು ಎಂದು ನ್ಯಾಯ ಪೀಠ ಹೇಳಿತು.

ಆಧಾರ: ವಿಜಯ ಕರ್ನಾಟಕ, ದಿನಾಂಕ:24.10.2020

## 20. ಗುಜರಾತ್ ಹೈಕೋರ್ಟ್ ಕಲಾಪ ನೇರ ಪ್ರಸಾರ

ದೇಶದಲ್ಲಿ ಮೊದಲ ಬಾರಿಗೆ ಗುಜರಾತ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ವಿಕ್ರಮ್‌ನಾಥ್ ನೇತೃತ್ವದ ನ್ಯಾಯಪೀಠ ವಿಚಾರಣಾ ಕಲಾಪಗಳ ನೇರ ಪ್ರಸಾರ ಆರಂಭಿಸಿತು. ಮುಕ್ತ ನ್ಯಾಯಾಲಯ ಮತ್ತು ನ್ಯಾಯದಾನದ ತತ್ವಗಳನ್ನು ಅನುಷ್ಠಾನಗೊಳಿಸುವ ದಿಸೆಯಲ್ಲಿ ನ್ಯಾಯಾಲಯಗಳ ಕಲಾಪಗಳನ್ನು ನೇರ ಪ್ರಸಾರ ಮಾಡಬೇಕು ಎಂದು ಕೋರಿ ನಿರ್ಮಾ ವಿಶ್ವವಿದ್ಯಾಲಯದ ಕಾನೂನು ಕಾಲೇಜಿನ ವಿದ್ಯಾರ್ಥಿ ಪೃಥ್ವಿರಾಜ್ ಸಿನ್ಹಾ ಝಲಾ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಪ್ರಸ್ತಾಪ ಮಾಡಿದ ನ್ಯಾಯಪೀಠ, ಈ ಮಹತ್ವದ ಕ್ರಮ ಕೈಗೊಂಡಿದೆ. ನ್ಯಾಯಾಲಯದ ಕಲಾಪವು ಯುಟ್ಯೂಬ್‌ನಲ್ಲಿ ನೇರ ಪ್ರಸಾರಗೊಂಡಿತು.

ಆಧಾರ:ವಿಜಯ ಕರ್ನಾಟಕ, ದಿನಾಂಕ:27.10.2020

## 21. ಕಲ್ಲಿದ್ದಲು ಹಗರಣ; ಮಾಜಿ ಕೇಂದ್ರ ಸಚಿವ ದಿಲೀಪ್‌ಗೆ ಜೈಲು

ಕಲ್ಲಿದ್ದಲು ಹಗರಣಕ್ಕೆ ಸಂಬಂಧಿಸಿದಂತೆ ವಾಜಪೇಯಿ ಸರ್ಕಾರದಲ್ಲಿ ಕಲ್ಲಿದ್ದಲು ಖಾತೆ ರಾಜ್ಯ ಸಚಿವರಾಗಿದ್ದ ದಿಲೀಪ್ ರಾಯ್‌ಗೆ ಸಿಬಿಐ ಕೋರ್ಟ್ 3 ವರ್ಷ ಜೈಲು ಶಿಕ್ಷೆ ವಿಧಿಸಿದ ಬೆನ್ನಲ್ಲೇ ಅವರಿಗೆ ಜಾಮೀನು ನೀಡಿ, ಮೇಲ್ಮನವಿ ಸಲ್ಲಿಸಲು 1 ತಿಂಗಳ ಕಾಲಾವಕಾಶ ನೀಡಿದೆ. ಜಾರ್ಖಂಡ್‌ನ ಕಲ್ಲಿದ್ದಲು ಗಣಿಗೆ ಸಂಬಂಧಿಸಿದಂತೆ ಸಚಿವರು ಅಕ್ರಮವೆಸಗಿದ ಆರೋಪ ಕೇಳಿ ಬಂದಿತ್ತು.

ಈ ಪ್ರಕರಣದ ವಿಚಾರಣೆ ನಡೆಸಿದ ವಿಶೇಷ ಸಿಬಿಐ ನ್ಯಾಯಾಧೀಶ ಭರತ್ ಪರಾಶರ್ ಅವರು, ಮಾಜಿ ಸಚಿವ ರಾಯ್ ಅವರಿಗೆ 3 ವರ್ಷ ಸಜೆ, 10 ಲಕ್ಷ ದಂಡ ವಿಧಿಸಿದರು. ಜೊತೆಗೆ ರಾಯ್ ಹಾಗೂ ಅವರ ಅವಧಿಯಲ್ಲಿ ಕಲ್ಲಿದ್ದಲು ಸಚಿವಾಲಯದಲ್ಲಿ ಹಿರಿಯ ಅಧಿಕಾರಿಗಳಾಗಿದ್ದ ಪ್ರದೀಪ್ ಕುಮಾರ್ ಬ್ಯಾನರ್ಜಿ, ನಿತ್ಯಾನಂದ ಗೌತಮ್‌ಗೆ ತಲಾ 3 ವರ್ಷ ಶಿಕ್ಷೆ ವಿಧಿಸಿದೆ.

ಆಧಾರ: ಕನ್ನಡ ಪ್ರಭ, ದಿನಾಂಕ:27.10.2020

## 22. ದೇಶದಲ್ಲಿಲ್ಲದ ಕಾನೂನಿನಡಿ ಮಗನ 'ಪಾಲನೆ ಹಂಚಿಕೆ'

ವಿಚ್ಛೇದಿತ ದಂಪತಿಯು ಮಗನ ಸುಪರ್ದಿಗಾಗಿ ಸುಪ್ರೀಂಕೋರ್ಟ್, ಹೈಕೋರ್ಟ್ ಮತ್ತು ಕೌಟುಂಬಿಕ ನ್ಯಾಯಾಲಯದಲ್ಲಿ ಸುದೀರ್ಘ ಕಾಲದಿಂದಲೂ ಕಾನೂನು ಹೋರಾಟ ನಡೆಸುತ್ತಿತ್ತು. ಅಪ್ಪ–ಅಮ್ಮನ ಜಗಳದಲ್ಲಿ ಕೂಸು ಬಡವಾಗಬಾರದು ಎಂಬ ಸದುದ್ದೇಶದಿಂದ ಮಕ್ಕಳ ಪಾಲನೆ ವಿಚಾರದಲ್ಲಿ ವಿದೇಶದಲ್ಲಿ ಪ್ರಚಲಿತದಲ್ಲಿರುವ ಹಾಗೂ ಭಾರತದಲ್ಲಿ ಕಾನೂನಿನ ಮಾನ್ಯತೆ ಇಲ್ಲದ 'ಪಾಲನೆ ಹಂಚಿಕೆ' ಎಂಬ ಪದ್ಧತಿಯಲ್ಲಿ ಹೈಕೋರ್ಟ್ ಪರಿಹಾರ ನೀಡಿದೆ.

ಪ್ರಕರಣದಲ್ಲಿ ಮಗನಿಗೆ 18 ವರ್ಷ ತುಂಬುವವರೆಗೂ ವಾಸ, ವಿದ್ಯಾಭ್ಯಾಸ, ಖರ್ಚು–ವೆಚ್ಚ ಹಬ್ಬ ಹರಿದಿನ ಹಾಗೂ ಜನ್ಮದಿನ ಆಚರಣೆ ಸೇರಿದಂತೆ ಮಗನ ಪಾಲನೆ, ಆರೈಕೆ ಮತ್ತು ಬೆಳವಣಿಗೆಯಲ್ಲಿ ತಂದೆ–ತಾಯಿ ಇಬ್ಬರೂ ಸಮಾನ ಜವಾಬ್ದಾರಿ ಹೊರಬೇಕು ಎಂದು ಹೈಕೋರ್ಟ್ ಅಪರೂಪದ ತೀರ್ಪು ಪ್ರಕಟಿಸಿದೆ.

ಈ ಪಾಲನೆ ಹಂಚಿಕೆ ಪದ್ಧತಿ ಸಂಬಂಧ ಭಾರತದಲ್ಲಿ ಯಾವುದೇ ಕಾನೂನು ಇಲ್ಲ. ಭಾರತದಲ್ಲಿ ಪಾಲನೆ ಹಂಚಿಕೆ ಪದ್ಧತಿಯನ್ನು ಅಳವಡಿಸಿಕೊಳ್ಳುವ ವಿಚಾರವಾಗಿ ಲಾ ಕಮಿಷನ್ ಆಫ್ ಇಂಡಿಯಾ ಸಮಾಲೋಚನಾ ವರದಿ ಬಿಡುಗಡೆಗೊಳಿಸಿ ತನ್ನ ಅಭಿಪ್ರಾಯ ವ್ಯಕ್ತಪಡಿಸಿದೆ. ಅದನ್ನು ಹೊರತುಪಡಿಸಿ ಭಾರತದಲ್ಲಿ ಈ ಪದ್ಧತಿ ಇಲ್ಲ.

**ತಾಯಿಯ ಸುಪರ್ದಿಗೆ ಸಿಕ್ಕಿದ್ದ ಮಗು:** ಉಷಾ ಮತ್ತು ಕಿರಣ್ ದಂಪತಿಗೆ (ಹೆಸರು ಬದಲಿಸಲಾಗಿದೆ) ವಿಚ್ಛೇದನ ಮಂಜೂರು ಮಾಡಿದ್ದ ಕೌಟಂಬಿಕ ನ್ಯಾಯಾಲಯ, ತಾಯಿಯೇ ಅಪ್ರಾಪ್ತ ಮಗನ ಪೋಷಕರಾಗುತ್ತಾರೆ. ಆಕೆಯ ಸುಪರ್ದಿಯಲ್ಲಿ ಮಗು ಇರಬೇಕು. ಕೆಲವೊಂದು ಷರತ್ತಿನ ಮೇಲೆ ತಂದೆ ಭೇಟಿ ಮಾಡಲು ಹಕ್ಕು ಹೊಂದಿರುತ್ತಾನೆ ಎಂದು 2014ರ ನವೆಂಬರ್ 21ರಂದು ಆದೇಶಿಸಿತ್ತು. ಅದನ್ನು ಪ್ರಶ್ನಿಸಿ 2015ರಲ್ಲಿ ಮಗುವಿನ ತಂದೆ ಹಾಗೂ ತಾಯಿ ಇಬ್ಬರೂ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

ಈ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಮತ್ತು ನ್ಯಾಯಮೂರ್ತಿ ಎನ್.ಸಂಜಯ್ ಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠ, ಪಾಲನೆಯ ಹಂಚಿಕೆ ಪರಿಕಲ್ಪನೆಯಡಿ 21 ನಿರ್ದೇಶನಗಳನ್ನು ನೀಡಿ ಅಪ್ರಾಪ್ತ ಮಗನ ಪಾಲನೆ ಹಾಗೂ ಆರೈಕೆಯ ಹಕ್ಕನ್ನು ಪೋಷಕರಿಬ್ಬರಿಗೂ ಸಮಾನವಾಗಿ ಹಂಚಿದೆ.

ಆಧಾರ: ಕನ್ನಡಪ್ರಭ, ದಿನಾಂಕ:28.10.2020

## 23. ಚುನಾವಣಾ ಫಲಿತಾಂಶ ಪ್ರಕಟಿಸುವಂತಿಲ್ಲ: ಸುಪ್ರೀಂ

ನಗರಸಭೆ ಅಧ್ಯಕ್ಷ ಉಪಾಧ್ಯಕ್ಷರ ಮೀಸಲಾತಿ ವಿವಾದ ಸುಪ್ರೀಂಕೋರ್ಟ್‌ವರೆಗೂ ಹೋಗಿದ್ದು, ನಿಗದಿಯಾಗಿದ್ದ ಹಾಸನ ನಗರಸಭೆ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆ ನಡೆಸಲು ಅವಕಾಶ ಕಲ್ಪಿಸಿದೆ. ಆದರೆ, ಚುನಾವಣಾ ಫಲಿತಾಂಶವನ್ನು ಪ್ರಕಟಿಸುವಂತಿಲ್ಲ ಎಂಬ ಷರತ್ತು ವಿಧಿಸಿದೆ. ಅಧ್ಯಕ್ಷ ಉಪಾಧ್ಯಕ್ಷರ ಮೀಸಲಾತಿ ನಿಗದಿಯಲ್ಲಿ ಅಕ್ರಮ, ಪಕ್ಷಪಾತ ಮಾಡಲಾಗಿದೆ ಎಂದು ಜೆಡಿಎಸ್ ಬೆಂಬಲಿತ ಹಾಸನ ನಗರಸಭೆ ಸದಸ್ಯರು ದಾಖಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್ ಏಕ ಸದಸ್ಯ ಪೀಠ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಗೆ ತಡೆಯಾಜ್ಞೆ ನೀಡಿತ್ತು. ಮೀಸಲಾತಿ ನಿಗದಿಯ ಪರಾವರ್ಶೆಗೆ ಮೂವರು ಪರಿಗಣಿತರ ಸಮಿತಿಯನ್ನು ರಚಿಸಿತ್ತು. ಆದರೆ, ರಾಜ್ಯ ಸರ್ಕಾರ ಏಕ ಸದಸ್ಯ ನ್ಯಾಯ ಪೀಠದ ತಡೆಯಾಜ್ಞೆ ವಿರುದ್ಧ ದ್ವಿ ಸದಸ್ಯ ನ್ಯಾಯಪೀಠಕ್ಕೆ ಮೇಲ್ಮನವಿ ಸಲ್ಲಿಸಿತ್ತು. ನ್ಯಾಯಪೀಠವು ಏಕ ಸದಸ್ಯ ನ್ಯಾಯಪೀಠದ ತಡೆಯಾಜ್ಞೆ ತೆರವುಗೊಳಿಸಿ ನವೆಂಬರ್ 2 ರೊಳಗೆ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆ ನಡೆಸಬೇಕೆಂದು ನಿರ್ದೇಶನ ನೀಡಿತ್ತು.

ಆಧಾರ: ಉದಯವಾಣಿ, ದಿನಾಂಕ:29.10.2020

## 24. ವ್ಯಾಜ್ಯ ನಿರ್ವಹಣೆಗೆ ಸರ್ಕಾರದ ಮಾರ್ಗಸೂಚಿ

ಸರ್ಕಾರಿ ಇಲಾಖೆಗಳು ನ್ಯಾಯಾಲಯಗಳ ವ್ಯಾಜ್ಯಗಳನ್ನು ಹೇಗೆ ನಿರ್ವಹಿಸಬೇಕು ಎಂಬುದರ ಕುರಿತು ರಾಜ್ಯ ಸರ್ಕಾರ ಹಲವು ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.

ಇಲಾಖೆಗಳು ಹೈಕೋರ್ಟ್‌ನಿಂದ ಸ್ವೀಕೃತವಾದ ತಕರಾರು ಅರ್ಜಿ ವಿವರಗಳನ್ನು ನಿಗದಿತ ರಿಜಿಸ್ಟಾರ್‌ನಲ್ಲಿ ದಾಖಲಿಸಿ ನಿರ್ವಹಿಸಬೇಕು. ಪ್ರಕರಣದ ಕುರಿತು ಅಗತ್ಯ ಕ್ರಮ ಕೈಗೊಳ್ಳುವಲ್ಲಿ ವಿಳಂಬ ಮಾಡಬಾರದು. ಯಾವುದೇ ನಿರ್ದಿಷ್ಟ ಸೂಚನೆಗಳಿಲ್ಲದ ತಡೆಯಾಜ್ಞೆಗಳನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ವ್ಯಾಜ್ಯಗಳ ಶೀಘ್ರ ವಿಚಾರಣೆಗಾಗಿ ಕಾನೂನು ಅಧಿಕಾರಿಗಳಿಂದ ಅಗತ್ಯ ಮೇಲ್ಮನವಿ ಸಲ್ಲಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ.

ಅಗತ್ಯವಿದ್ದ ಕಡೆಗಳಲ್ಲಿ ಮರು ಪರಿಶೀಲನೆ ಇಲ್ಲವೇ ಮರು ವಿಚಾರಣೆಗೆ ಮೇಲ್ಮನವಿ ಸಲ್ಲಿಸಬೇಕು. ಕೋರ್ಟ್ ತೀರ್ಪು ಸ್ವೀಕೃತವಾದ ಸಂದರ್ಭಗಳಲ್ಲಿ ಅದನ್ನು ನಿಗದಿತ ರಿಜಿಸ್ಟಾರ್‌ನಲ್ಲಿ ದಾಖಲಿಸಬೇಕು. ಯಾವುದೇ ತೀರ್ಪಿನಲ್ಲಿ ಕಾಲ ನಿಗದಿ ಮಾಡದ ಪಕ್ಷದಲ್ಲಿ ಅಗತ್ಯ ಮಾರ್ಪಡು ಕೋರಿಕೆ ಮನವಿಗಳನ್ನು ಎರಡು ವಾರಗಳ ಒಳಗಾಗಿ ಪೂರೈಸಬೇಕು. ಪ್ರತಿ ಇಲಾಖೆ ಅಥವಾ ಅಧಿಕಾರಿ ಯಾವುದೇ ವ್ಯಕ್ತಿಯ ಮನವಿ ಅಥವಾ ದೂರನ್ನು ಗರಿಷ್ಠ ಮೂರು ತಿಂಗಳ ಒಳಗಾಗಿ ವಿಚಾರಣೆ ನಡೆಸಿ ಮುಕ್ತಾಯಗೊಳಿಸಬೇಕು ಎಂದು ಸೂಚಿಸಲಾಗಿದೆ.

ಆಧಾರ: ಕನ್ನಡಪ್ರಭ, ದಿನಾಂಕ:08.11.2020

## 25. ಹಸಿರು ಪಟಾಕಿಗೆ ಕೋರ್ಟ್ ಅನುಮತಿ

ಕೊರೋನಾ ಹಿನ್ನೆಲೆಯಲ್ಲಿ ಪಟಾಕಿ ನಿಷೇಧ ಹೇರಿದ್ದ ಸರ್ಕಾರದ ತೀರ್ಮಾನದಿಂದ ಭಾರಿ ನಿರಾಸೆ ಅನುಭವಿಸಿದ್ದವರಿಗೆ, ಹೈಕೋರ್ಟ್ ಹಸಿರು ಪಟಾಕಿಗೆ ಅನುಮತಿ ನೀಡುವ ಮೂಲಕ ಕೊಂಚ ನಿಟ್ಟುಸಿರು ಬಿಡುವಂತೆ ಮಾಡಿದೆ.

ಕೋವಿಡ್ ಸೋಂಕು ಹೆಚ್ಚಳವಾಗುವ ಭೀತಿ ಹಿನ್ನೆಲೆಯಲ್ಲಿ ಪಟಾಕಿ ಮಾರಾಟ ನಿಷೇಧಿಸಬೇಕು ಎಂಬ ಬೇಡಿಕೆಯ ಬೆನ್ನಲ್ಲೇ ರಾಜ್ಯ ಹೈಕೋರ್ಟ್, ಹಸಿರು ಪಟಾಕಿಯ ಮಾರಾಟಕ್ಕೆ ಅನುಮತಿ ನೀಡಿದೆ. ಹಸಿರು ಪಟಾಕಿ ಹೆಸರಿನಲ್ಲಿ ಪರಿಸರಕ್ಕೆ ಹಾನಿ ಉಂಟುಮಾಡಬಲ್ಲ ಅಂಶಗಳನ್ನು ಹೊಂದಿರುವ ಪಟಾಕಿಗಳ ಮಾರಾಟಕ್ಕೆ ಅನುವು ಮಾಡಿಕೊಡಬಾರದು. ಈ ನಿಟ್ಟಿನಲ್ಲಿ ಸರ್ಕಾರ, ಜಿಲ್ಲಾಡಳಿತಗಳು, ಬಿಬಿಎಂಪಿ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕಟ್ಟುನಿಟ್ಟಿನ ನಿಗಾ ವಹಿಸಬೇಕು ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕಾ ನೇತೃತ್ವದ ನ್ಯಾಯಪೀಠ ಸೂಚನೆ ನೀಡಿದೆ.

ವಿಚಾರಣೆ ವೇಳೆ ನ್ಯಾಯಪೀಠ, ಹಸಿರು ಪಟಾಕಿಗಳನ್ನು ಸರಿಯಾಗಿ ವ್ಯಾಖ್ಯಾನಿಸಿಲ್ಲ ಎಂದು ಸರ್ಕಾರಿ ಆದೇಶದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿತ್ತು. ಈ ಹಿನ್ನೆಲೆಯಲ್ಲಿ ರಾತ್ರಿಯೇ ಹೊಸ ಅಧಿಸೂಚನೆ ಹೊರಡಿಸಿರುವ ಸರ್ಕಾರ, ಹಸಿರು ಪಟಾಕಿಗಳನ್ನು ವಿಜ್ಞಾನಿ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್ತು–ರಾಷ್ಟ್ರೀಯ ಪರಿಸರ ಮತ್ತು ಎಂಜಿನಿಯರಿಂಗ್ ಸಂಶೋಧನಾ ಸಂಸ್ಥೆ (ನೀರಿ) ಮಾರ್ಗಸೂಚಿಗಳ ಅನುಸಾರವೇ ತಯಾರಿಸಲಾಗಿದೆ ಎಂದು ಸ್ಪಷ್ಟನೆ ನೀಡಿತ್ತು. ಈ ನಡುವೆ ಸರ್ಕಾರಿ ವಕೀಲರು, ಬಿಬಿಎಂಪಿ ಈಗಾಗಲೇ ಪಟಾಕಿ ಮಳಿಗೆಗಳಿಗೆ ಪರವಾನಿಗಿ ವಿತರಿಸಿದೆ ಎಂಬ ವಿಷಯವನ್ನು ನ್ಯಾಯಪೀಠದ ಗಮನಕ್ಕೆ ತಂದರು. ಆಗ ನ್ಯಾಯಪೀಠ, ಪರವಾನಿಗಿ ನೀಡುವ ಮುನ್ನ ಮಾರ್ಗಸೂಚಿಗಳನ್ನು ಪಾಲಿಸಲಾಗಿದೆಯೇ ಎಂದು ಪ್ರಶ್ನಿಸಿದರು.

ಅದಕ್ಕೆ ಉತ್ತರಿಸಿದ ಬಿಬಿಎಂಪಿ ಪರ ವಕೀಲರು, ಗುರುತು ಮಾಡಿದ ನಿರ್ದಿಷ್ಟ ಸ್ಥಳಗಳಲ್ಲಿ ಮಾತ್ರ ಮಳಿಗೆ ಹಾಕಲು ಅವಕಾಶ ಕಲ್ಪಿಸಲಾಗಿದೆ ಎಂದರು.

**ಹಸಿರು ಪಟಾಕಿ ಆರಂಭವೆಲ್ಲಿ** :–2018 ಅಕ್ಟೋಬರ್‌ನಲ್ಲಿ ದೆಹಲಿಯಲ್ಲಿ ಹಸಿರು ಪಟಾಕಿಯನ್ನು ಬಳಸಲಾಗಿತ್ತು. ಈ ಪಟಾಕಿಗಳು ಸಿಡಿದಾಗ ಅಪಾಯದ ಪ್ರಮಾಣ ಕಡಿಮೆಯಿರುತ್ತದೆ. ಇವುಗಳನ್ನು ಹೆಚ್ಚು ಹಾನಿಕಾರಕವಲ್ಲದ ರಾಸಾಯನಿಕಗಳಿಂದ ತಯಾರಿಸಲಾಗುತ್ತದೆ. ದೆಹಲಿಯಲ್ಲಿ ಚಾಲ್ತಿಯಲ್ಲಿದ್ದು, ಕೇಂದ್ರ ಸರ್ಕಾರದ ತಂತ್ರಜ್ಞಾನದ ಸಚಿವಾಲಯದ ಅಡಿಯಲ್ಲಿ ಕೌನ್ಸಿಲ್ ಆಫ್ ಸೈಂಟಿಫಿಕ್ ಆ್ಯಂಡ್ ಇಂಡಸ್ಟ್ರಿಯಲ್ ರಿಸರ್ಚ್ ಸಂಸ್ಥೆಯ ಮೂಲಕ ಪರೀಕ್ಷಿಸಿ ಅಭಿವೃದ್ಧಿಪಡಿಸಿ ಫ್ಲವರ್ ಪಾಟ್, ಪೆನ್ಸಿಲ್, ಸ್ಪಾರ್ಕಲ್, ಚಕ್ರಗಳನ್ನು ತಯಾರಿಸಿ ಬಿಡುಗಡೆ ಮಾಡಿತು.

ಆಧಾರ: ವಿಶ್ವವಾಣಿ, ದಿನಾಂಕ:14.11.2020

## 26. ಮಾಧ್ಯಮ ವರದಿಗಾರಿಕೆಗೆ ಬ್ರೇಕ್ ಕೇಂದ್ರದ ಸಲಹೆ ಕೇಳಿದ ಕೋರ್ಟ್

ತನಿಖೆ ಅಥವಾ ಕೋರ್ಟ್ ವಿಚಾರಣೆ ಹಂತದಲ್ಲಿರುವ ಪ್ರಕರಣಗಳ ಬಗ್ಗೆ ಅತಿಯಾದ ಮಾಧ್ಯಮ ವರದಿಗಾರಿಕೆಗೆ ಅವಕಾಶ ನೀಡುವುದರಿಂದ ಆಗುವ ಹಾನಿಯ ಬಗ್ಗೆ ನಿಖರ ಅಭಿಪ್ರಾಯ ತಿಳಿಸುವಂತೆ ಕೇಂದ್ರ ಸರ್ಕಾರಕ್ಕೆ ಮುಂಬಯಿ ಹೈಕೋರ್ಟ್ ಸಲಹೆ ಮಾಡಿದೆ.

'ತನಿಖೆ ಅಥವಾ ವಿಚಾರಣೆ ಹಂತದಲ್ಲಿ ಮಾಧ್ಯಮಗಳ ಹಸ್ತಕ್ಷೇಪ ಉಂಟಾದರೆ ಪ್ರಕರಣದ ಗತಿಯೇ ಬದಲಾಗಬಹುದು. ಅಂತಹ ಹಾನಿಕಾರಕ ವರದಿಗಾರಿಕೆಯನ್ನು ನ್ಯಾಯಾಂಗ ನಿಂದನೆ ಕಾಯಿದೆ ವ್ಯಾಪ್ತಿಗೆ ಒಳಪಡಿಸಬಹುದಲ್ಲವೇ. ಈ ಎಲ್ಲಾ ಸಂಗತಿಗಳ ಬಗ್ಗೆ ನವೆಂಬರ್ 6ರ ಒಳಗೆ ನಿಮ್ಮ ಅಭಿಪ್ರಾಯ ತಿಳಿಸಿ," ಎಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ದೀಪಂಕರ್ ದತ್ತಾ ಮತ್ತು ನ್ಯಾಯಮೂರ್ತಿ ಜಿ.ಎಸ್.ಕುಲಕರ್ಣಿ ಅವರನ್ನು ಒಳಗೊಂಡ ನ್ಯಾಯಪೀಠ ಕೇಂದ್ರ ಸರ್ಕಾರವನ್ನು ಕೇಳಿದೆ.

'ಮಿತಿಮೀರಿ ವರದಿ ಮಾಡುವುದರಿಂದ ಆರೋಪಿಗಳಿಗೆ ರಕ್ಷಣೆ ಲಭಿಸಿದಂತಾಗುತ್ತದೆ. ಅಂತಹ ಆರೋಪಿಗಳಿಗೆ ಸಾಕ್ಷ್ಯ ನಾಶ ಮಾಡಲು ಅಥವಾ ತಪ್ಪಿಸಿಕೊಳ್ಳಲು ಇದರಿಂದ ಕುಮ್ಮಕ್ಕು ಸಿಗಬಹುದು ಅಥವಾ ದೋಷಾರೋಪಕ್ಕೆ ಗುರಿಯಾದ ವ್ಯಕ್ತಿ ಅಮಾಯಕನಾಗಿದ್ದರೆ ಅಂಥವರಿಗೂ ಏಕಪಕ್ಷೀಯ ವರದಿಗಾರಿಕೆಯಿಂದ ಅಪಾಯ ಒದಗಬಹುದು. ಇದಕ್ಕೆ ತಡೆ ಹಾಕಲು ಏನು ಮಾಡಬೇಕು ತಿಳಿಸಿ. ನಾವೇ ಏನಾದರೂ ಮಾಧ್ಯಮ ಮಾರ್ಗದರ್ಶಿ ಸೂತ್ರ ರಚಿಸಿ ಜಾರಿಗೊಳಿಸಬೇಕೆ ಎನ್ನುವ ಕುರಿತಾದರೂ ಸ್ಪಷ್ಟಪಡಿಸಿ," ಎಂದು ಕೇಳಿದೆ. ನಿಯಂತ್ರಣ ಹೇರುವ ಕುರಿತು ಸಲ್ಲಿಕೆಯಾಗಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಲಯ ಈ ಸಲಹೆ ನೀಡಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:30.11.2020

# ಭಾಗ–7

# ಹೊರ ರಾಜ್ಯಗಳ ಸುದ್ದಿಗಳು

## 1. ಮತಾಂತರ ನಿಷೇಧ ಸುಗ್ರೀವಾಜ್ಞೆ – ಉತ್ತರ ಪ್ರದೇಶ

'ಲವ್ ಜಿಹಾದ್'ಗೆ ಕಡಿವಾಣ ಹಾಕಲು ಉತ್ತರ ಪ್ರದೇಶ ಸರ್ಕಾರವು ಮತಾಂತರ ತಡೆ ಕಾಯಿದೆಯನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಲು ನಿರ್ಧರಿಸಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯು ವಿಧಿ ವಿರುದ್ಧ ಧರ್ಮಾಂತರಣ ವಿಧೇಯಕ 2020ಕ್ಕೆ ಅನುಮೋದನೆ ನೀಡಿದೆ.

ಮುಸ್ಲಿಂ ಯುವಕರು ಹಿಂದೂ ಯುವತಿಯರನ್ನು ಮತಾಂತರ ಮಾಡಿಸಿ ವಿವಾಹವಾಗುವುದನ್ನು 'ಲವ್ ಜಿಹಾದ್' ಎಂದು ಬಲಪಂಥೀಯ ಸಂಘಟನೆಗಳು ಕರೆಯುತ್ತಿವೆ. ಆದರೆ ಕಾನೂನಿನಲ್ಲಿ 'ಲವ್ ಜಿಹಾದ್' ಎಂಬ ಪದ ಬಳಕೆ ಇಲ್ಲ. ಭವಿಷ್ಯದಲ್ಲಿ ಎದುರಾಗಬಹುದಾದ ಕಾನೂನು ಸಂಘರ್ಷ ಗಮನದಲ್ಲಿಟ್ಟುಕೊಂಡು ನಾಜೂಕಿನ ನಡೆ ಇರಿಸಿರುವ ಯೋಗಿ ಸರ್ಕಾರವು, ಬಲವಂತದ ಮತಾಂತರ' ಎಂಬ ಪದ ಬಳಸಿದೆ.

ಉತ್ತರ ಪ್ರದೇಶ ಕಾನೂನು ಆಯೋಗವು ಇಂತಹ ಕಾನೂನು ರೂಪಿಸುವಂತೆ ಕಳೆದ ವರ್ಷವೇ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಕಾನೂನು ಇಲಾಖೆಯು ಸಾಕಷ್ಟು ಅಧ್ಯಯನ ನಡೆಸಿದ ಬಳಿಕ ಕರಡು ವಿಧೇಯಕ ಅಂತಿಮಗೊಳಿಸಿ ಸಂಪುಟದ ಒಪ್ಪಿಗೆಗೆ ರವಾನಿಸಿತ್ತು.

ಬಲವಂತದ ಮತಾಂತರ ಮತ್ತು ಲವ್ ಜಿಹಾದ್ ವಿರುದ್ಧ ಕೆಲವು ದಿನಗಳ ಹಿಂದೆ ಕಿಡಿಕಾರಿದ್ದ ಯೋಗಿ ಆದಿತ್ಯನಾಥ್ ಅವರು "ತಮ್ಮ ಸಹೋದರಿಯರ ಮತ್ತು ಹೆಣ್ಣುಮಕ್ಕಳ ಜೊತೆ ಚೆಲ್ಲಾಟವಾಡುವುದನ್ನು ನಿಲ್ಲಿಸದಿದ್ದರೆ ಅಂತಹವರಿಗೆ ರಾಮ್ ನಾಮ್ ಸತ್ಯ ಹೈ (ಅಂತಿಮ ಯಾತ್ರೆಯಲ್ಲಿನ ಘೋಷಣೆ)ಅನಿವಾರ್ಯವಾಗುತ್ತದೆ." ಎಂದು ಎಚ್ಚರಿಸಿದ್ದರು. ಬಿಜೆಪಿ ಆಡಳಿತವಿರುವ ಕರ್ನಾಟಕ, ಮಧ್ಯಪ್ರದೇಶ, ಹರಿಯಾಣ, ಅಸ್ಸಾಂ ಸರ್ಕಾರಗಳೂ 'ಲವ್ ಜಿಹಾದ್' ತಡೆಯಲು ಕಾನೂನು ರೂಪಿಸುವುದಾಗಿ ಘೋಷಿಸಿವೆ.

ಅಲಹಾಬಾದ್ ಹೈಕೋರ್ಟ್ ಕೆಲವು ದಿನಗಳ ಹಿಂದೆ ಮದುವೆಗಾಗಿಯೇ ನಡೆಯುವ ಮತಾಂತರವನ್ನು ಒಪ್ಪಲು ಸಾಧ್ಯವೇ ಇಲ್ಲ ಎಂದು ಹೇಳಿತು.

**ಉದ್ದೇಶಿತ ವಿಧೇಯಕದ ಪ್ರಕಾರ ಬಲವಂತದ ಮತಾಂತರಕ್ಕೆ ಶಿಕ್ಷೆ :**

- ಅಂತರ್ ಧರ್ಮಿಯ ವಿವಾಹದ ಪ್ರಕರಣಗಳಲ್ಲಿ ಬಲವಂತದ ಮತಾಂತರ ನಡೆದಿರುವುದು ತನಿಖೆಯಿಂದ ದೃಢಪಟ್ಟರೆ ಐದು ವರ್ಷ ಜೈಲು ಹಾಗೂ ರೂ.15,000 ದಂಡ.
- ಯಾವುದೇ ಧರ್ಮದ ಬಾಲಕಿಯರು, ಪರಿಶಿಷ್ಟ ಜಾತಿ/ಪಂಗಡದ ಮಹಿಳೆಯರನ್ನು ಬಲವಂತದಿಂದ ಮತಾಂತರ ಮಾಡಿರುವುದು ಸಾಬೀತಾದರೆ 2 ರಿಂದ 7 ವರ್ಷ ಜೈಲು ಹಾಗೂ ರೂ.25,000 ದಂಡ.
- ಸಾಮೂಹಿಕ ಮತಾಂತರವು ಜಾಮೀನು ರಹಿತ ಅಪರಾಧವಾಗಿದ್ದು, ಗರಿಷ್ಠ 10 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಬಹುದಾಗಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:25.11.2020.

## 2. ಸರ್ಕಾರಿ ಶಾಲೆಯಲ್ಲಿ ಕಲಿತವರಿಗೆ ಮೀಸಲು

ರಾಜ್ಯದ ಸರ್ಕಾರಿ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳಿಗೆ ವೈದ್ಯಕೀಯ ಶಿಕ್ಷಣದಲ್ಲಿ ಶೇಕಡ 7.5 ಮೀಸಲು ಕಲ್ಪಿಸುವ ಮಸೂದೆಗೆ ತಮಿಳುನಾಡು ರಾಜ್ಯಪಾಲ ಬನ್ವಾರಿಲಾಲ್ ಪುರೋಹಿತ್ ಒಪ್ಪಿಗೆ ನೀಡಿದ್ದಾರೆ. ಇದು ಈ ಶೈಕ್ಷಣಿಕ ವರ್ಷದಿಂದಲೇ ಅನ್ವಯವಾಗಲಿದೆ.

ಮಸೂದೆಗೆ ರಾಜ್ಯಪಾಲರು ಅಂಕಿತ ಹಾಕಲು ತಡಮಾಡಿದ್ದರಿಂದ ಮತ್ತು ಮೆಡಿಕಲ್ ಕಾಲೇಜ್‌ಗಳ ಪ್ರವೇಶ ಪ್ರಕ್ರಿಯೆ ಸದ್ಯವೇ ಆರಂಭವಾಗುವ ಕಾರಣ ಎಐಎಡಿಎಂಕೆ ಸರ್ಕಾರ ಮೀಸಲು ಜಾರಿಗೆ ಸರ್ಕಾರ ಕಾರ್ಯನಿರ್ವಾಹಕ ಆದೇಶ ಹೊರಡಿಸಿತ್ತು. ಈ ಬೆಳವಣಿಗೆಯ ಮರುದಿನವೇ ರಾಜ್ಯಪಾಲರು ಅಂಕಿತ ಹಾಕಿದ್ದಾರೆ.

ಸರ್ಕಾರಿ ಕಾಲೇಜುಗಳಲ್ಲಿ ಕಲಿತು ನೀಟ್ ಪಾಸಾದ ಸುಮಾರು 300 ವಿದ್ಯಾರ್ಥಿಗಳಿಗೆ ವೈದ್ಯಕೀಯ ಕಾಲೇಜ್ ಸೇರುವ ಹಾದಿ ಹೊಸ ಕಾನೂನಿಂದ ಸುಗಮವಾಗಲಿದೆ. ಇವರೆಲ್ಲ ಬಹುತೇಕ ಸಾಮಾಜಿಕ ಹಾಗೂ ಆರ್ಥಿಕವಾಗಿ ಶೋಷಿತ ವಿಭಾಗಗಳಿಗೆ ಸೇರಿದವರಾಗಿದ್ದಾರೆ. ಸರ್ಕಾರಿ ಖಾಸಗಿ ಮೆಡಿಕಲ್ ಕಾಲೇಜ್‌ಗಳಲ್ಲಿ ಅವರಿಗೆ ಪ್ರವೇಶ ಸಿಗಲಿದೆ.

**ರಾಜ್ಯಪಾಲರ ನಿಲುವು:** ವಿಧಾನ ಸಭೆ ಸೆಪ್ಟೆಂಬರ್‌ನಲ್ಲೆ ಮಸೂದೆಯನ್ನು ಅಂಗೀಕರಿಸಿತ್ತು. ಆದರೆ ಈ ಬಗ್ಗೆ ನಿರ್ಧಾರ ಕೈಗೊಳ್ಳಲು ಮೂರರಿಂದ ನಾಲ್ಕು ವಾರ ಪ್ರತಿಪಕ್ಷ ನಾಯಕ ಎಂ.ಕೆ. ಸ್ಟಾಲಿನ್‌ರಿಗೆ ತಿಳಿಸಿದ್ದರು. ಮಸೂದೆಯು ಸಂವಿಧಾನಕ್ಕೆ ಅನುಗುಣವಾಗಿದೆ ಎಂದು ಅಂಕಿತ ಹಾಕಿದ ನಂತರ ಪುರೋಹಿತ್ ಹೇಳಿದ್ದಾರೆ.

ಪ್ರತಿಷ್ಠೆ ಪ್ರಶ್ನೆ: ತಮಿಳುನಾಡು ವಿಧಾನ ಸಭೆಗೆ 7 ತಿಂಗಳಲ್ಲಿ ಚುನಾವಣೆ ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ವೈದ್ಯ ಶಿಕ್ಷಣದಲ್ಲಿ ಮೀಸಲಾತಿ ಕಲ್ಪಿಸುವುದು ಮುಖ್ಯಮಂತ್ರಿ ಕೆ.ಪಳನಿಸ್ವಾಮಿಗೆ ಪ್ರತಿಷ್ಠೆಯ ವಿಷಯವಾಗಿತ್ತು. ಬಿಜೆಪಿಯ ಮಿತ್ರಪಕ್ಷದಾಗಿದ್ದರೂ ಮಸೂದೆಗೆ ರಾಜ್ಯಪಾಲರ ಅನುಮತಿ ದೊರಕಿಸಿಕೊಳ್ಳುವಲ್ಲಿ ವಿಫಲವಾಗಿದ್ದಕ್ಕೆ ಪ್ರತಿಪಕ್ಷಗಳು ಪಳನಿಸ್ವಾಮಿಯನ್ನು ತೀವ್ರವಾಗಿ ಟೀಕಿಸಿದ್ದವು. ನೀಟ್ ಬರೆಯುವುದರಿಂದ ವಿನಾಯಿತಿ ಪಡೆಯಲು ರಾಜ್ಯ ಸರ್ಕಾರ ವಿಫಲವಾದ ನಂತರ ರಾಜ್ಯ ಸರ್ಕಾರ ಈ ಮೀಸಲಾತಿಗೆ ಆಸೆ ತೋರಿತ್ತು. ತಮಿಳುನಾಡಿನಲ್ಲಿ ಸುಮಾರು ಒಂದು ದಶಕದಿಂದ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪರೀಕ್ಷೆ ರದ್ದುಪಡಿಸಲಾಗಿತ್ತು. 12ನೇ ತರಗತಿ ಅಂಕದ ಅಧಾರದಲ್ಲಿ ಪ್ರವೇಶ ನೀಡಲಾಗುತ್ತಿತ್ತು.

ಆಧಾರ: ವಿಜಯ ವಾಣಿ, ದಿನಾಂಕ:31.11.2020

## 3. ಕೋವಿಡ್: ರಾಜ್ಯಸಭೆ ಸದಸ್ಯ ನಿಧನ

ಕೋವಿಡ್ ದೃಢ ಪಟ್ಟಿದ್ದ, ಗುಜರಾತ್‌ನ ರಾಜ್ಯಸಭೆ ಸದಸ್ಯ ಬಿಜೆಪಿಯ ಅಭಯ್ ಭಾರದ್ವಾಜ್(66) ಅವರು ಇಲ್ಲಿನ ಆಸ್ಪತ್ರೆಯಲ್ಲಿ ಬಹು ಅಂಗಾಂಗ ವೈಫಲ್ಯದಿಂದ ಮೃತಪಟ್ಟರು. ಕೋವಿಡ್‌ಗೆ ಚಿಕಿತ್ಸೆ ಪಡೆದಿದ್ದ ಅವರು ತದನಂತರ ತೀವ್ರ ಅನಾರೋಗಕ್ಕೆ ಒಳಗಾಗಿದ್ದು, ಅಕ್ಟೋಬರ್ 9 ರಿಂದ ಚಿಕಿತ್ಸೆ ಪಡೆಯುತ್ತಿದ್ದರು. ಈ ವರ್ಷದ ಜೂನ್‌ನಲ್ಲಿ ರಾಜ್ಯಸಭೆಗೆ ಆಯ್ಕೆಯಾಗಿದ್ದರು.

ಆಧಾರ: ಕನ್ನಡಪ್ರಭಾ, ದಿನಾಂಕ:31.11.2020

## 4. ಲವ್ ಜಿಹಾದ್ ಮಟ್ಟಹಾಕುವ ಸಂಕಲ್ಪ

ಲವ್ ಜಿಹಾದ್ ಹಾಗೂ ಅದರ ಮೂಲಕ ಉಗ್ರ ಸಂಘಟನೆಗಳನ್ನು ಬಲಪಡಿಸುವಂತಹ ಕೃತ್ಯಗಳನ್ನು ತಡೆಯುವ ನಿಟ್ಟಿನಲ್ಲಿ ಸುಗ್ರೀವಾಜ್ಞೆ ಮೂಲಕ ಮತಾಂತರ ನಿಷೇಧವನ್ನು ಜಾರಿಗೆ ತರಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ಉತ್ತರ ಪ್ರದೇಶ ಸರ್ಕಾರ ಈಗಾಗಲೇ ಸುಗ್ರೀವಾಜ್ಞೆ ಮೂಲಕ ಕಾನೂನು ಜಾರಿ ಮಾಡಿ ಮೊದಲ ಪ್ರಕರಣ ದಾಖಲಿಸಿದೆ. ಆದರೆ ರಾಜ್ಯದಲ್ಲಿ ಯಾವುದೇ ಸಿದ್ದತೆ ಆರಂಭವಾಗದಿರುವ ಹಿನ್ನೆಲೆಯಲ್ಲಿ ವಿಧಾನ ಮಂಡಲ ಅಧಿವೇಶನ ಮುಗಿದ ಕೂಡಲೇ ಸುಗ್ರೀವಾಜ್ಞೆ ಮೂಲಕವೇ ಜಾರಿಗೆ ತರಲಾಗುತ್ತದೆ.

ರಾಜ್ಯದಲ್ಲಿ 2019ರಲ್ಲೇ ಲವ್ ಜಿಹಾದ್ ಸದ್ದು ಮಾಡಿತ್ತು. ಕರ್ನಾಟಕ ಹಾಗೂ ಕೇರಳದಲ್ಲಿ ಸಾವಿರಾರು ಲವ್ ಜಿಹಾದ್ ಪ್ರಕರಣಗಳು ನಡೆದಿವೆ. ಅದರ ಮೂಲಕ ಭಯೋತ್ಪಾದನೆ ಚಟುವಟಿಕೆಗಳಿಗೆ ಕುಮ್ಮಕ್ಕು ನೀಡಲಾಗಿದೆ ಎಂಬ ದೂರುಗಳು ಇವೆ. ಆಗಿನಿಂದಲೂ ರಾಜ್ಯದಲ್ಲಿ ಯಾವುದೇ ಸಿದ್ದತೆ ಆರಂಭವಾಗದಿರುವ ಹಿನ್ನೆಲೆಯಲ್ಲಿ ವಿಧಾನ ಮಂಡಲ ಅಧಿವೇಶನ ಮುಗಿದ ಕೂಡಲೇ ಸುಗ್ರೀವಾಜ್ಞೆ ಮೂಲಕವೇ ಜಾರಿಗೆ ತರಲಾಗುತ್ತದೆ.

ರಾಜ್ಯದಲ್ಲಿ 2019ರಲ್ಲೇ ಲವ್ ಜಿಹಾದ್ ಸದ್ದು ಮಾಡಿತ್ತು. ಕರ್ನಾಟಕ ಹಾಗೂ ಕೇರಳದಲ್ಲಿ ಸಾವಿರಾರು ಲವ್ ಜಿಹಾದ್ ಪ್ರಕರಣಗಳೂ ನಡೆದಿವೆ. ಅದರ ಮೂಲಕ ಭಯೋತ್ಪಾದನೆ ಚಟುವಟಿಕೆಗಳಿಗೆ ಕುಮ್ಮಕ್ಕು ನೀಡಲಾಗಿದೆ ಎಂಬ ದೂರುಗಳು ಇವೆ. ಆಗಿನಿಂದಲೂ ರಾಜ್ಯದಲ್ಲಿ ಬಲವಂತದ ಮತಾಂತರ ನಿಷೇಧದ ಒತ್ತಡಗಳಿವೆ.

ಉತ್ತರ ಪ್ರದೇಶ ಹಾಗೂ ಹರಿಯಾಣ ಸರ್ಕಾರಗಳು ಲವ್ ಜಿಹಾದ್ ನಿಷೇಧಕ್ಕಾಗಿ ಕಾಯ್ದೆ ತರುವ ಬಗ್ಗೆ ಪ್ರಸ್ತಾಪ ಮಾಡಿದ ಸಂದರ್ಭದಲ್ಲೇ ರಾಜ್ಯದ ಬಿಜೆಪಿ ಮುಖಂಡರು ಇಲ್ಲಿಯೂ ಲವ್ ಜಿಹಾದ್ ನಿಷೇಧಿಸುವ ಮಾತನಾಡಿದ್ದರು. ಮಂಗಳೂರಿನಲ್ಲಿ ನಡೆದ ಬಿಜೆಪಿ ರಾಜ್ಯ ಕಾರ್ಯಕಾರಿಣಿಯಲ್ಲಿಯೂ ಮುಖ್ಯಮಂತ್ರಿ ಯಡಿಯೂರಪ್ಪ ಕಾನೂನು ತರುವ ಘೋಷಣೆ ಹೊರಡಿಸಿದ್ದರು. ಆದರೆ ನಂತರ ಸಂಬಂಧಟ್ಟ ಇಲಾಖೆಗೆ ಸರ್ಕಾರದ ಕಡೆಯಿಂದ ವಿಧೇಯಕ ಸಿದ್ದಪಡಿಸುವುದಕ್ಕೆ ಯಾವುದೇ ಸೂಚನೆ ಹೋಗಿಲ್ಲ. ವಿಧಾನ ಮಂಡಲ ಅಧಿವೇಶನ ಡಿಸೆಂಬರ್ 7 ರಂದು ಆರಂಭವಾಗಲಿದೆ. ಅಧಿವೇಶನದಲ್ಲಿ ವಿಧೇಯಕ ಮಂಡಿಸಲು ಸರ್ಕಾರ ಸಿದ್ದವಾಗಿಲ್ಲ. ಆದ್ದರಿಂದಲೇ ಅಧಿವೇಶನ ಮುಗಿದ ನಂತರ ಸುಗ್ರಿವಾಜ್ಞೆ ಮೂಲಕ ಜಾರಿ ಮಾಡಿ ಆರು ತಿಂಗಳೊಳಗೆ ನಡಯಲಿರುವ ವಿಧಾನಮಂಡಲದ ಜಂಟಿ ಅಥವಾ ಬಜೆಟ್ ಅಧಿವೇಶನದಲ್ಲಿ ವಿಧೇಯಕ ಮಂಡಿಸಿ ಕಾನೂನು ಜಾರಿಗೆ ನಿರ್ಧರಿಸಲಾಗಿದೆ.

ರಾಜ್ಯದಲ್ಲಿ ಮತಾಂತರ ನಿಷೇಧ ಕಾನೂನು ಜಾರಿಯಾಗದಿರುವುದಕ್ಕೆ ಉತ್ತರ ಪ್ರದೇಶದ ಸುಗ್ರಿವಾಜ್ಞೆ ಅಧ್ಯಯನ ನಡೆಯದಿರುವುದು, ಹರಿಯಾಣದಲ್ಲಿನ ಸಿದ್ಧತೆ ಬಗ್ಗೆ ಮಾಹಿತಿ ಪಡೆಯುವಲ್ಲಿ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣವೆನ್ನಲಾಗಿದೆ. ಉತ್ತರ ಪ್ರದೇಶದ ಸುಗ್ರೀವಾಜ್ಞೆ ಪ್ರತಿಯನ್ನು ಇನ್ನೂ ತರಿಸಿಕೊಂಡಿಲ್ಲ ಎಂದು ಸರ್ಕಾರದ ಉನ್ನತ ಮೂಲಗಳು ಖಚಿತಪಡಿಸಿವೆ.

ವಿಧಾನಮಂಡಲ ಅಧಿವೇಶನ ಮುಗಿದ ಕೂಡಲೇ ಉತ್ತರ ಪ್ರದೇಶದ ಸುಗ್ರೀವಾಜ್ಞೆಯನ್ನು ತರಿಸಿ ಅಲ್ಲಿಗಿಂತ ಒಂದಷ್ಟು ಭಿನ್ನವಾಗಿ ಕಾಯ್ದೆ ರೂಪಿಸುವ ಬಗ್ಗೆ ಸರ್ಕಾರ ತೀರ್ಮಾನಿಸಿದೆ. ಹರಿಯಾಣ ಸರ್ಕಾರ ರಚಿಸಿರುವ ತಜ್ಞರ ಸಮಿತಿಯ ತೀರ್ಮಾನಗಳ ಬಗ್ಗೆಯೂ ಮಾಹಿತಿ ಪಡೆಯಲಾಗುತ್ತದೆ.

ಕಾನ್ಪುರದಲ್ಲಿ 11 ಲವ್ ಜಿಹಾದ್ ಪ್ರಕರಣ ಬೆಳಕಿಗೆ ಬಂದ ತಕ್ಷಣವೇ ತನಿಖೆಯ ಜೊತೆಜೊತೆಗೆ ಕಾನೂನು ಆಯೋಗಕ್ಕೆ ಅಧ್ಯಯನ ನಡೆಸಲು ಸೂಚನೆ ನೀಡಲಾಯಿತು. ಮತಾಂತರದ ಜೊತೆಗೆ ಲವ್ ಜಿಹಾದ್ ತಡೆಯುವ ಬಗ್ಗೆ ಕಾನೂನು ಆಯೋಗ ನೇಪಾಳ, ಮ್ಯಾನ್ಮಾರ್, ಭೂತಾನ್, ಶ್ರೀಲಂಕಾ, ಪಾಕಿಸ್ತಾನದ ಕಾನೂನುಗಳನ್ನು ಅಧ್ಯಯನ ಮಾಡಿತು.

**ರಾಜ್ಯ ಸರ್ಕಾರದ ಯೋಚನೆಗಳೇನು:–**

- ಒಪ್ಪಿತ ಮತಾಂತರ ಮೂಲಕ ಮದುವೆ ಆಗುವವರಿಗೆ ಕಾನೂನಿನ ರಕ್ಷಣೆ.
- ಒತ್ತಾಯದಿಂದ ಮತಾಂತರ ಮಾಡುವಂತಿಲ್ಲ.

- ಮತಾಂತರ ಮೂಲಕ ಮದುವೆಗೆ ಬಲವಂತ ಮಾಡುವಂತಿಲ್ಲ.
- ಮತಾಂತರ ಆಗುವಂತೆ ಯಾವುದೇ ಆಸೆ–ಆಮಿಷ ತೋರಿಸುವಂತಿಲ್ಲ.
- ಉತ್ತರ ಪ್ರದೇಶಕ್ಕಿಂತ ಹೆಚ್ಚಿನ ದಂಡ ಹಾಗೂ ಜೈಲು ಶಿಕ್ಷೆ.
- ಲವ್ ಜಿಹಾದ್ ಮೂಲಕ ಮಹಿಳೆಯರ ಕಳ್ಳಸಾಗಣೆಯಾಗದಂತೆ ಎಚ್ಚರ.

ಆಧಾರ: ವಿಜಯವಾಣಿ, ದಿನಾಂಕ:02.12.2020.

## 5. ಜೀನ್ಸ್, ಟೀಶರ್ಟ್ ನಿಷೇಧ

ಇನ್ನು ಮುಂದೆ ಸರ್ಕಾರಿ ಕಚೇರಿಗೆ ಜೀನ್ಸ್–ಟೀ ಶರ್ಟ್, ಸ್ಲಿಪ್ಪರ್ ಧರಿಸಿ ಬರುವಂತೆಯೇ ಇಲ್ಲ. ಇದು ಮಹಾರಾಷ್ಟ್ರ ಸರ್ಕಾರ ತನ್ನ ಉದ್ಯೋಗಿಗಳಿಗೆ ಹೊಸತಾಗಿ ಜಾರಿ ಮಾಡಿದ ವಸ್ತ್ರ ಸಂಹಿತೆ. ಡಿಸೆಂಬರ್ 8 ರಂದು ಹೊರಡಿಸಲಾಗಿರುವ ಸುತ್ತೋಲೆಯಲ್ಲಿ ಈ ಅಂಶವನ್ನು ಉಲ್ಲೇಖಿಸಲಾಗಿದೆ. ಸರ್ಕಾರಿ ಉದ್ಯೋಗಿಗಳು, ನೌಕರರು ವಾರಕ್ಕೆ ಒಂದು ದಿನ ವಿಶೇಷವಾಗಿ ಖಾದಿ ವಸ್ತ್ರ ಧರಿಸಬೇಕು. ಈ ಮೂಲಕ ಆ ಉತ್ಪನ್ನಗಳಿಗೆ ಕೂಡ ಪ್ರೋತ್ಸಾಹ ನೀಡಿದಂತಾಗುತ್ತದೆ. ಮಹಿಳಾ ಉದ್ಯೋಗಿಗಳು ಸೀರೆ, ಸಲ್ವಾರ್, ಚೂಡಿದಾರ, ಕುರ್ತಾ, ಪ್ಯಾಂಟ್ ಧರಿಸಲು ಅವಕಾಶ ನೀಡಲಾಗಿದೆ. ಪುರುಷರು ಸ್ಲಿಪ್ಪರ್‌ಗಳ ಬದಲಾಗಿ ಶೂ ಧರಿಸಬೇಕು ಎಂದು ಸುತ್ತೋಲೆಯಲ್ಲಿ ಸೂಚಿಸಲಾಗಿದೆ. 'ಕೆಲಸದ ಜೊತೆಗೆ ಡ್ರೆಸ್ ಕೂಡ ಜನರ ಮೇಲೆ ಪ್ರಭಾವ ಬೀರುತ್ತದೆ. ಸದುಚಿತ ವಸ್ತ್ರಧರಿಸುವಂತೆ ಮಾಡುವುದೇ ಸರ್ಕಾರದ ಉದ್ದೇಶ' ಎಂದು ಅದರಲ್ಲಿ ಉಲ್ಲೇಖಿಸಲಾಗಿದೆ.

ಆಧಾರ: ಉದಯವಾಣಿ, ದಿನಾಂಕ:13.12.2020

## 6. ಉತ್ತರ ಪ್ರದೇಶಕ್ಕೆ ಲಸಿಕೆಯಲ್ಲಿ ಅಗ್ರಪಾಲು

ಭಾರತದಲ್ಲೂ ಲಸಿಕೆ ವಿತರಣೆಗೆ ಸಿದ್ಧತೆ ನಡೆದಿದ್ದು, 50+ವಯಸ್ಕರು, ಅಧಿಕ ರಕ್ತದೊತ್ತಡ, ಮಧುಮೇಹಿಗಳು ಮತ್ತು ಆರೋಗ್ಯ ಕಾರ್ಯಕರ್ತರಿಗೆ ಮೊದಲ ಹಂತದಲ್ಲಿ ಲಸಿಕೆ ನೀಡಲಾಗುತ್ತದೆ. ಇದರಲ್ಲಿ 50+ವಯಸ್ಕರರು ಉತ್ತರ ಪ್ರದೇಶದಲ್ಲಿ ಹೆಚ್ಚಿದ್ದು, ಆರಂಭದಲ್ಲಿ ಇಲ್ಲಿನವರೇ ಹೆಚ್ಚು ಲಸಿಕೆ ಪಡೆಯಲಿದ್ದಾರೆ.

| ಯಾವ ರಾಜ್ಯದ, ಎಷ್ಟು ಮಂದಿಗೆ ಲಸಿಕೆ | | |
|---|---|---|
| **ರಾಜ್ಯ** | **50+ ಜನಸಂಖ್ಯೆ** | **ಬಿಪಿ ಶುಗರ್ ಬಾಧಿತರು** |
| ಉತ್ತರ ಪ್ರದೇಶ | 3.63 ಕೋಟಿ | – |
| ಮಹಾರಾಷ್ಟ್ರ | 2.72 ಕೋಟಿ | 3.59 ಕೋಟಿ |
| ಪಶ್ಚಿಮ ಬಂಗಾಳ | 2.19 ಕೋಟಿ | 3,08 ಕೋಟಿ |
| ತಮಿಳುನಾಡು | 1.95 ಕೋಟಿ | – |
| ಬಿಹಾರ | 1.84 ಕೋಟಿ | 2.60 ಕೋಟಿ |
| ಕರ್ನಾಟಕ | 1.46 ಕೋಟಿ | 2.12 ಕೋಟಿ |

**50ನ ಒಳಗಿನವರಿಗೂ ಲಸಿಕೆ:** ಅಧಿಕ ರಕ್ತದೊತ್ತಡ, ಸಕ್ಕರೆ ಕಾಯಿಲೆಯಿಂದ ನರಳುತ್ತಿರುವ, 50 ವರ್ಷದೊಳಗಿನವರಿಗೂ ಲಸಿಕೆ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಕೋರೊನಾಗೆ ಇಂಥವರೇ ಹೆಚ್ಚು ಬಾಧಿತರಾಗುತ್ತಿದ್ದಾರೆ. ಈವರೆಗೂ ಲಸಿಕೆ ಕೊಡುವುದು ಕೇಂದ್ರ ಸರ್ಕಾರದ ಯೋಜನೆ, ಇಂಥವರು ದೇಶದಲ್ಲಿ ಒಟ್ಟು 4 ಕೋಟಿ ಮಂದಿ ಇದ್ದಾರೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ವರದಿಗಳನ್ನು ಮುಂದಿಟ್ಟುಕೊಂಡು ಲಸಿಕೆ ನೀಡಲು ತಯಾರಿ ನಡೆಸಿದೆ.

ಆಧಾರ: ಉದಯವಾಣಿ, ದಿನಾಂಕ:15.12.2020.

## 7. ರಾಜಸ್ಥಾನ ನಗರ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಕಾಂಗ್ರೆಸ್ ಮೇಲುಗೈ

ರಾಜಸ್ಥಾನದ ನಗರ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಆಡಳಿತಾರೂಢ ಕಾಂಗ್ರೆಸ್ ಪ್ರತಿಪಕ್ಷ ಬಿಜೆಪಿಗಿಂತ ಮುನ್ನಡೆ ಸಾಧಿಸಿದೆ. ರಾಜ್ಯದ 12 ಜಿಲ್ಲೆಗಳ 51 ನಗರ ಸ್ಥಳೀಯ ಸಂಸ್ಥೆಗಳ 1,775 ವಾರ್ಡಗಳಿಗೆ ಚುನಾವಣೆ ನಡೆದಿತ್ತು. ಒಟ್ಟು 7,249 ಅಭ್ಯರ್ಥಿಗಳು ಕಣದಲ್ಲಿದ್ದರು. ಕಾಂಗ್ರೆಸ್ 620, ಬಿಜೆಪಿ 548 ವಾರ್ಡ್‌ಗಳಲ್ಲಿ ಗೆಲುವು ಸಾಧಿಸಿದ್ದರೆ, ಪಕ್ಷೇತರರು 595 ವಾರ್ಡ್‌ಗಳಲ್ಲಿ ಗೆದ್ದಿದ್ದಾರೆ. ಬಿಎಸ್ಪಿ 7, ಸಿಪಿಐ ಮತ್ತು ಸಿಪಿಐ(ಎಂ) ತಲಾ ಎರಡು, ಆರ್‌ಎಲ್‌ಎಸ್‌ಪಿ ಒಂದು ಸ್ಥಾನ ಗೆದ್ದುಕೊಂಡಿವೆ. "17 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪಕ್ಷ ಸ್ಪಷ್ಟ ಬಹುಮತ ಸಾಧಿಸಿದೆ. ಉಳಿದ 24 ಕಡೆ ಪಕ್ಷೇತರ ನೆರವಿನಿಂದ ಅಧಿಕಾರ ಹಿಡಿಯುತ್ತೇವೆ. ಇದು ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಜನಪರ ಆಡಳಿತಕ್ಕೆ ಸಂದ ಮನ್ನಣೆ," ಎಂದು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಗೋವಿಂದ ಸಿಂಗ್ ದೋಸ್ತಾರಾ ತಿಳಿಸಿದ್ದಾರೆ. ಮತ ಏಣಿಕೆ ನಡೆದಿದ್ದು, ರಾಜ್ಯ ಚುನಾವಣಾ ಆಯೋಗವು ಅಧಿಕೃತವಾಗಿ ಫಲಿತಾಂಶ ಪ್ರಕಟಿಸಿದೆ. ಅಧ್ಯಕ್ಷರ ಚುನಾವಣೆ ಡಿಸೆಂಬರ್ 21 ರಂದು ನಡೆಯಲಿದೆ ಕಳೆದ ವಾರ ನಡೆದ ಪಂಚಾಯಿತಿ ಚುನಾವಣೆಗಳಲ್ಲಿ ಬಿಜೆಪಿ ಹೆಚ್ಚು ಸ್ಥಾನ ಗೆದ್ದುಕೊಂಡಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:15.12.2020.

## 8. ಉಚಿತ ಕೊರೋನಾ ಲಸಿಕೆಗೆ ಬಿಹಾರ ಸಂಪುಟ ಅಸ್ತು

ಚುನಾವಣೆ ವೇಳೆ ರಾಜ್ಯದ ಮತದಾರರಿಗೆ ನೀಡಿದ್ದ ವಾಗ್ದಾನದಂತೆ ಬಿಹಾರದ ನಿತೀಶ ಕುಮಾರ್ ನೇತೃತ್ವದ ಜೆಡಿಯು–ಬಿಜೆಪಿ ಮೈತ್ರಿ ಸರ್ಕಾರ ಉಚಿತವಾಗಿ ಕೊರೋನಾ ಲಸಿಕೆಯನ್ನು ಹಂಚಲು ಸಚಿವ ಸಂಪುಟದ ಅನುಮೋದನೆ ಪಡೆದಿದೆ.

ನಡೆದ ಸಭೆಯಲ್ಲಿ ಮುಂದಿನ ಐದು ವರ್ಷಗಳಲ್ಲಿ ರಾಜ್ಯಾದ್ಯಂತ 20 ಲಕ್ಷ ಉದ್ಯೋಗಾವಕಾಶ (ಸರ್ಕಾರ ಹಾಗೂ ಖಾಸಗಿ ಕ್ಷೇತ್ರ) ಸೃಷ್ಟಿಗೂ ಸಂಪುಟ ಸಮ್ಮತಿಸಿದೆ. ಕಳೆದ ಅಕ್ಟೋಬರ್‌ನಲ್ಲಿ ನಡೆದ ಬಿಹಾರ ವಿಧಾನಸಭೆ ಚುನಾವಣೆ ವೇಳೆ ಬಿಜೆಪಿ–ಜೆಡಿಯು ಮೈತ್ರಿಕೂಟ ಮತ್ತು ಆರ್‌ಜೆಡಿ ನೇತೃತ್ವದ ಮಹಘಟಬಂಧನ್ ನಡುವೆ ರಾಜ್ಯದಲ್ಲಿ ಉದ್ಯೋಗ ಸೃಷ್ಟಿಯ ವಿಷಯವೇ ಬಿರುಸಿನ ಪೈಪೋಟಿಗೆ ಕಾರಣವಾಗಿತ್ತು.

ಆರ್‌ಜೆಡಿಗೆ ಅಧಿಕಾರ ನೀಡಿದರೆ ಪ್ರಥಮ ಸಂಪುಟ ಸಭೆಯಲ್ಲಿಯೇ 10 ಲಕ್ಷ ಸರ್ಕಾರಿ ಹಾಗೂ ಕಾಯಂ ಉದ್ಯೋಗ ಸೃಷ್ಟಿಯ ಮಹತ್ವದ ಆದೇಶಕ್ಕೆ ಸಹಿ ಹಾಕುವುದಾಗಿ ಲಾಲು ಪುತ್ರ ಹಾಗೂ ಆರ್‌ಜೆಡಿ ಮುಖ್ಯಸ್ಥ ತೇಜಸ್ವಿ ಯಾದವ್ ಘೋಷಣೆ ಮಾಡಿದ್ದರು. ಕೊರೋನಾ ಸೋಂಕು ನಿಯಂತ್ರಣ ಹಾಗೂ ಲಸಿಕೆ ಪೂರೈಕೆ ವಿಷಯದಲ್ಲಿಯೂ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:16.12.2020.

## 9. ಕಾಶ್ಮೀರದಲ್ಲಿ ಮೂರು ಸ್ಥಾನ ಗೆದ್ದ ಕೇಸರಿ ಪಕ್ಷ

ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದಾದ ಬಳಿಕ ನಡೆದ ಮೊದಲ ಸ್ಥಳೀಯ ಸಂಸ್ಥೆ ಚುನಾವಣೆಯ ಫಲಿತಾಂಶ ಪ್ರಕಟವಾಗಿದ್ದು, ಇದೇ ಮೊದಲ ಬಾರಿಗೆ ಕಾಶ್ಮೀರದಲ್ಲಿ ಬಿಜೆಪಿ ಖಾತೆ ತೆರೆದಿದೆ.

ಜಿಲ್ಲಾ ಅಭಿವೃದ್ಧಿ ಮಂಡಳಿ(ಡಿಸಿಸಿ) ಚುನಾವಣೆಯಲ್ಲಿ ಬಿಜೆಪಿ ಎರಡನೇ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದು, ಕಾಶ್ಮೀರದಲ್ಲಿ ಕೇಸರಿ ಪಕ್ಷದ ಮೂವರು ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಕಾಕ್‌ಪೋರಾದಲ್ಲಿ ಬಿಜೆಪಿ ಅಭ್ಯರ್ಥಿ ಮುನ್ನಾ ಲತೀಫ್, ಖೋನ್‌ಮೋಹ್ 2ನಲ್ಲಿ ಇಜಾಜ್ ಹುಸೇನ್, ತುಲೈಲ್ ಕ್ಷೇತ್ರದಲ್ಲಿ ಇಜಾಜ್ ಅಹ್ಮದ್ ಖಾನ್ ಜಯಭೇರಿ ಬಾರಿಸಿದ್ದಾರೆ.

ಒಟ್ಟು 280 ಕ್ಷೇತ್ರಗಳ ಪೈಕಿ ನ್ಯಾಷನಲ್ ಕಾನ್ಫರೆನ್ಸ್ ವರಿಷ್ಠ ಫಾರೂಕ್ ಅಬ್ದುಲ್ಲಾ ನೇತೃತ್ವದ ಪೀಪಲ್ಸ್ ಅಲಯನ್ಸ್ ಫಾರ್ ಗುಪ್ಕರ್ ಡಿಕ್ಲರೇಷನ್ (ಪಿಎಜಿಡಿ) 103 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದರೆ, ಬಿಜೆಪಿ 75, ಕಾಂಗ್ರೆಸ್ 24, ಅಪ್ನಿ ಪಾರ್ಟಿ 10, ಇತರರು 66 ಕ್ಷೇತ್ರಗಳಲ್ಲಿ ಮುಂದಿವೆ.

ಜಮ್ಮು ಪ್ರಾಂತ್ಯದಲ್ಲಿ ಬಿಜೆಪಿಯ 72 ಸೀಟುಗಳ ಮುನ್ನಡೆ ಕಾಯ್ದುಕೊಂಡಿದ್ದಾರೆ, ಗುಪ್ಕರ್ ಮೈತ್ರಿ 37 ರಲ್ಲಿ ಗೆಲುವು ಸಾಧಿಸಿದೆ. ಕಾಶ್ಮೀರದಲ್ಲಿ ಗುಪ್ಕರ್ ಬರೊಬ್ಬರಿ 71 ಸೀಟುಗಳಲ್ಲಿ ಮುಂದಿದ್ದು, ಬಿಜೆಪಿ 3 ಸ್ಥಾನಗಳನ್ನು ತನ್ನದಾಗಿಸಿಕೊಂಡಿದೆ. 25 ದಿನಗಳ ಅವಧಿಯಲ್ಲಿ 280 ಕ್ಷೇತ್ರಗಳಿಗೆ 8 ಹಂತಗಳಲ್ಲಿ ಯಾವುದೇ ಹಿಂಸಾಚಾರ ಇಲ್ಲದೇ ಮತದಾನ ನಡೆದಿತ್ತು.

ಆಧಾರ: ಉದಯವಾಣಿ, ದಿನಾಂಕ:23.12.2020.

## 10. 21 ವರ್ಷದ ವಿದ್ಯಾರ್ಥಿನಿ ತಿರುವನಂತಪುರ ಮೇಯರ್

ಕೇರಳದ ರಾಜಧಾನಿ ತಿರುವನಂತಪುರಂ ಮೇಯರ್ ಆಗಿ 21 ವರ್ಷದ ಮಹಿಳೆ ಆರ್ಯಾ ರಾಜೇಂದ್ರನ್ ಅವರು ಆಯ್ಕೆಯಾಗುವ ಸಾಧ್ಯತೆ ನಿಚ್ಚಳವಾಗಿದೆ. ಇವರು ಭಾರತದ ಅತಿ ಕಿರಿಯ ಮೇಯರ್ ಎನಿಸಿಕೊಳ್ಳಲಿದ್ದಾರೆ.

ಇತ್ತೀಚಿನ ಮಹಾನಗರಪಾಲಿಕೆ ಚುನಾವಣೆಯಲ್ಲಿ ಮೂಡವನಮುಗಲ್ ವಾರ್ಡ್ ಸದಸ್ಯೆಯಾಗಿ ಆರ್ಯಾ ಆಯ್ಕೆಯಾಗಿದ್ದರು. ತಿರುವನಂತಪುರ ಪಾಲಿಕೆಯಲ್ಲಿ ಎಲ್‌ಡಿಎಫ್‌ಗೆ ಬಹುಮತ ದೊರೆತಿದ್ದು, ಆರ್ಯಾ ಅವರನ್ನು ಮೇಯರ್ ಆಗಿ ಚುನಾಯಿಸಲು ಸಿಪಿಎಂ ಜಿಲ್ಲಾ ಘಟಕ ನಿರ್ಣಯ ತೆಗೆದುಕೊಂಡಿದೆ. ಇದಕ್ಕೆ ರಾಜ್ಯ ಸಮಿತಿ ಅಂತಿಮ ಒಪ್ಪಿಗೆ ನೀಡಿದ ಬಳಿಕ ಅಧಿಕೃತ ಘೋಷಣೆ ಹೊರಬೀಳಲಿದೆ. ಆರ್ಯಾ ರಾಜೇಂದ್ರನ್ ಅವರು ತಿರುವನಂತಪುರದ ಅಲ್ ಸೈಂಟ್ಸ್ ಕಾಲೇಜಿನಲ್ಲಿ ಬಿಎಸ್‌ಸಿ 2 ನೇ ವರ್ಷ(ಗಣಿತ) ದ ವಿದ್ಯಾರ್ಥಿನಿಯಾಗಿದ್ದಾರೆ. ತಂದೆ ರಾಜೇಂದ್ರನ್ ಎಲೆಕ್ಟ್ರಿಷಿಯನ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ತಾಯಿ ಶ್ರೀಲತಾ ಎಲ್‌ಐಸಿ ಎಂಜೆಟ್ ಆಗಿದ್ದಾರೆ. ಮಧ್ಯಮವರ್ಗ ಕುಟುಂಬದಿಂದ ಬಂದಿರುವ ಆರ್ಯಾ ಅವರು ಸಿಪಿಎಂನ ವಿಧ್ಯಾರ್ಥಿ ಘಟಕದಲ್ಲಿ ಸಕ್ರಿಯರಾಗಿದ್ದಾರೆ. ಪಕ್ಷದ ಮಕ್ಕಳ ಘಟಕದಲ್ಲೂ ಕಾರ್ಯನಿರ್ವಹಿಸಿದ್ದರು. ಮೇಯರ್ ಆಗಲಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದ ಅವರು, 'ಅತ್ಯಂತ ಸಂತಸದಿಂದ ಈ ಹುದ್ದೆ ಸ್ವೀಕರಿಸಲಿದ್ದೇವೆ, ಶಿಕ್ಷಣವನ್ನು ಮುಂದುವರಿಸುವೆ. ರಾಜಕೀಯ ರಂಗದಲ್ಲೂ ಮುನ್ನಡೆಯಲಿದ್ದೇನೆ' ಎಂದರು.

ಆಧಾರ: ಕನ್ನಡಪ್ರಭ, ದಿನಾಂಕ:26.12.2020.

## 11. ಮಧ್ಯ ಪ್ರದೇಶದಲ್ಲೂ ಲವ್ ಜಿಹಾದ್ ನಿಷೇಧ

ಉತ್ತರಪ್ರದೇಶದ ಬಳಿಕ ಮಧ್ಯ ಪ್ರದೇಶ ಬಿಜೆಪಿ ಸರ್ಕಾರ ಕೂಡ ಲವ್ ಜಿಹಾದ್ ನಿಷೇಧ ಕಾನೂನು ಜಾರಿಗೊಳಿಸಲು ನಿರ್ಧರಿಸಿದೆ. ಈ ಕುರಿತಾದ ವಿಧೇಯಕಕ್ಕೆ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ನೇತೃತ್ವದ ಸಚಿವ ಸಂಪುಟ ಸರ್ವಾನು ಮತದ ಅಂಗೀಕಾರ ನೀಡಿದೆ. ಮಸೂದೆಗೆ ವಿಧಾನ ಸಭೆ ಒಪ್ಪಿಗೆ ನೀಡಿದರೆ ಕಾನೂನಾಗಿ ಜಾರಿಗೆ ಬರಲಿದೆ.

'ಧಾರ್ಮಿಕ ಸ್ವಾತಂತ್ರ್ಯ ಮಸೂದೆ–2020' ಹೆಸರಿನ ಈ ವಿಧೇಯಕ, ಕೇವಲ ಮದುವೆಯ ಉದ್ದೇಶಕ್ಕಾಗಿ ಮತಾಂತರಗೊಳಿಸಿದರೆ ಅಥವಾ ಇನ್ನಾವುದೋ ಕಾರಣಕ್ಕೆ ಬಲವಂತದ ಮತಾಂತರ ಮಾಡಿದರೆ 10 ವರ್ಷದವರೆಗೆ ಜೈಲು ಶಿಕ್ಷೆ ಹಾಗೂ ರೂ.1 ಲಕ್ಷವರೆಗೆ ದಂಡ ವಿಧಿಸುವ ಅಧಿಕಾರ ನೀಡಲಿದೆ.

ಈ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ರಾಜ್ಯ ಗೃಹ ಸಚಿವ ನರೋತ್ತಮ ಮಿಶ್ರಾ, 'ಇದು ಬೆದರಿಕೆ ಮೂಲಕ ಅಥವಾ ಪ್ರಲೋಭನೆ ಮೂಲಕ ಅಥವಾ ಇನ್ನಾವುದೋ ವಂಚನೆ ಮೂಲಕ ಬಲವಂತದ ಧಾರ್ಮಿಕ ಮತಾಂತರ ನಡೆಸುವ ವಿರುದ್ಧ ಜಾರಿಗೊಳಿಸುತ್ತಿರುವ ದೇಶದಲ್ಲೇ ಅತಿ ಬಲಿಷ್ಠ ಕಾನೂನು. ಕೇವಲ ಮದುವೆಗಾಗಿ ಮತಾಂತರಗೊಳಿಸಿದರೆ ಅದನ್ನು ಅಸಿಂಧುಗೊಳಿಸುವ ಅಂಶ ಇದರಲ್ಲಿದೆ ಎಂದು ಹೇಳಿದರು.

ಬಲವಂತದ ಮತಾಂತರ ಮಾಡುವ ವ್ಯಕ್ತಿಗಳು, ಸಂಘ–ಸಂಸ್ಥೆಗಳು ಶಿಕ್ಷೆಯ ವ್ಯಾಪ್ತಿಗೆ ಒಳಪಡಲಿವೆ. ಒಂದು ವೇಳೆ ಮತಾಂತರಕ್ಕೆ ಇಚ್ಛಿಸಿದ್ದಲ್ಲಿ 2 ತಿಂಗಳು ಮೊದಲೇ ಜಿಲ್ಲಾಡಳಿತಕ್ಕೆ ಅರ್ಜಿ ಸಲ್ಲಿಸಬೇಕು. ಸಲ್ಲಿಸದಿದ್ದರೆ ಆ ಮದುವೆ ರದ್ದಾಗಲಿದೆ. ಜೊತೆಗೆ 5 ವರ್ಷ ಜೈಲು ಹಾಗೂ ರೂ. 50 ಸಾವಿರ ದಂಡ ವಿಧಿಸಲಾಗುವುದು ಎಂಬ ಅಂಶವು ಮಸೂದೆಯಲ್ಲಿ ಇರಲಿದೆ ಎಂದರು.

'ಇದರಲ್ಲಿ 2 ರೀತಿಯ ಶಿಕ್ಷೆಗಳು ಇರಲಿವೆ. ಬಲವಂತದ ಮತಾಂತರ ಮಾಡಿದರೆ 1 ರಿಂದ 5 ವರ್ಷ ಜೈಲು ಹಾಗೂ ರೂ. 25 ಸಾವಿರವರೆಗೆ ದಂಡ ವಿಧಿಸುವುದು ಮೊದಲನೆಯ ಪ್ರಕಾರದ ಶಿಕ್ಷೆ.

**ಮಸೂದೆಯಲ್ಲೇನಿದೆ:–**

- ಮದುವೆಯ ಉದ್ದೇಶಕ್ಕಾಗಿ ಅಥವಾ ಬಲವಂತದ ಮತಾಂತರ ನಿಷಿದ್ಧ.
- ಮತಾಂತರಕ್ಕೆ ಇಚ್ಛಿಸಿದ್ದಲ್ಲಿ 2 ತಿಂಗಳ ಮೊದಲೇ ಮಾಹಿತಿ ನೀಡಬೇಕು.
- ಅರ್ಜಿಸಲ್ಲಿಸದೆ ಮತಾಂತರಗೊಂಡು ಮದುವೆಯಾದರೆ ಅಸಿಂಧು.

**ಉತ್ತರ ಪ್ರದೇಶದಲ್ಲಿ ಲವ್ ಜಿಹಾದ್ ಕಾಯ್ದೆಯಡಿ ಒಂದೇ ತಿಂಗಳಲ್ಲಿ 35 ಜನ ಅರೆಸ್ಟ್:–** ಉತ್ತರ ಪ್ರದೇಶದಲ್ಲಿ ಲವ್ ಜಿಹಾದ್ ಕಾಯ್ದೆ ಜಾರಿಯಾಗಿ ಒಂದು ತಿಂಗಳು ಪೂರ್ತಿಯಾಗಿದ್ದು, ನೂತನ ಕಾನೂನಿನಡಿ ದಿನಕ್ಕೆ ಒಬ್ಬರಂತೆ ಪೊಲೀಸರು ಬಂಧಿಸಿದ್ದಾರೆ. ಅಕ್ರಮ ಮತಾಂತರ ನಿಷೇಧ ಕಾಯ್ದೆ–2020 ಅನ್ನು ಸುಗ್ರೀವಾಜ್ಞೆ ರೂಪದಲ್ಲಿ ಜಾರಿ ಮಾಡಿದಾಗಿನಿಂದ ಈವರೆಗೆ 12 ಎಫ್‌ಐಆರ್ ದಾಖಲಿಸಲಾಗಿದೆ. ಕಾಯ್ದೆ ಜಾರಿಗೆ ಬಂದ ಮಾರನೇ ದಿನವೇ ಬರೇಲಿಯಲ್ಲಿ ಮೊದಲ ಕೇಸ್ ದಾಖಲಾಗಿತ್ತು. ವಿವಾಹದ ಕಾರಣಕ್ಕಾಗಿ ನಡೆಯುವ ಬಲವಂತದ ಮತಾಂತರದ ವಿರುದ್ಧ ಉತ್ತರ ಪ್ರದೇಶ ಸರ್ಕಾರ ನವೆಂಬರ್ 27 ರಂದು ಈ ಕಾಯ್ದೆ ಜಾರಿಗೊಳಿಸಿತ್ತು. ಈ ಕಾಯ್ದೆಯಡಿ ತಪ್ಪಿತಸ್ಥರಿಗೆ ಗರಿಷ್ಠ 10 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸುವ ಅವಕಾಶವಿದೆ.

ಆಧಾರ: ಕನ್ನಡಪ್ರಭ, ದಿನಾಂಕ:27.12.2020.

# ಭಾಗ–8

# ಅಂತರರಾಷ್ಟ್ರೀಯ ಸುದ್ದಿಗಳು

## 1. ನಾಸಾ ಬಾಹ್ಯಾಕಾಶ ನೌಕೆಗೆ ಕಲ್ಪನಾ ಚಾವ್ಲಾ ಹೆಸರು

2003ರ ಬಾಹ್ಯಾಕಾಶಯಾನದ ವೇಳೆ ಸಾವನ್ನಪ್ಪಿದ ಭಾರತೀಯ ಮೂಲದ ಗಗನಯಾತ್ರಿ ಕಲ್ಪನಾ ಚಾವ್ಲಾ ಅವರ ಹೆಸರನ್ನು ಬಾಹ್ಯಾಕಾಶ ನೌಕೆಯೊಂದಕ್ಕೆ ಇಡುವ ಮೂಲಕ ಅಮೆರಿಕ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ನಾಸಾ ಗೌರವ ಸಲ್ಲಿಸಿದೆ. ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಸರಕುಗಳನ್ನು ಹೊತ್ತ 'ಎಸ್.ಎಸ್.ಕಲ್ಪನಾ ಚಾವ್ಲಾ' ನೌಕೆ ವರ್ಜಿನಿಯಾ ಉಡಾವಣಾ ನೆಲೆಯಿಂದ ಹಾರಾಟ ಕೈಗೊಂಡಿದೆ. ಇದರಲ್ಲಿ ವೈಜ್ಞಾನಿಕ ಸಂಶೋಧನೆಗಳು, ತಂತ್ರಜ್ಞಾನ ಉಪಕರಣಗಳು, ರಾಸಾಯನಿಕ ಉತ್ಪನ್ನಗಳು ಸೇರಿದಂತೆ ಸುಮಾರು 3,628 ಕೆ.ಜಿ. ತೂಕದ ಸಾಮಗ್ರಿಗಳನ್ನು ಕಳುಹಿಸಿಕೊಡಲಾಗಿದೆ.

ಆಧಾರ: ಕನ್ನಡಪ್ರಭ, ದಿನಾಂಕ:04.10.2020

## 2. ಹೆಪಟೈಟಿಸ್ ಸಿ ಶೋಧಕರಿಗೆ ನೊಬೆಲ್

2020ನೇ ಸಾಲಿನ ಪ್ರತಿಷ್ಠಿತ ನೊಬೆಲ್ ಪ್ರಶಸ್ತಿ ಪುರಸ್ಕೃತರ ಘೋಷಣೆ ಪ್ರಕ್ರಿಯೆ ಆರಂಭವಾಗಿದ್ದು, ಮೊದಲ ದಿನವಾದ ಹೆಪಟೈಟಿಸ್ ಸಿ ವೈರಸ್ ಪತ್ತೆ ಮಾಡಿದ ಮೂವರು ಸಂಶೋಧಕರಿಗೆ ವೈದ್ಯಕೀಯ ನೊಬೆಲ್ ಪ್ರಶಸ್ತಿ ಪ್ರಕಟಿಸಲಾಗಿದೆ.

ಅಮೆರಿಕದ ಹಾರ್ವೆ ಜೆ. ಅಲ್ಟರ್, ಚಾರ್ಲ್ಸ್ ರೈಸ್, ಬ್ರಿಟನ್‌ನ ಮೈಕೆಲ್ ಹೂಟನ್ ಪ್ರಸಕ್ತ ಸಾಲಿನ ವೈದ್ಯಕೀಯ ನೊಬೆಲ್ ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ. ಪ್ರಶಸ್ತಿಯು ಚಿನ್ನದ ಪದಕ ಮತ್ತು ರೂ.8.38 ಕೋಟಿ ನಗದು ಬಹುಮಾನ ಹೊಂದಿದೆ. ನೊಬೆಲ್ ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ ಥಾಮಸ್ ಪರ್ಲಮಾನ್ ಪುರಸ್ಕೃತ ಹೆಸರು ಪ್ರಕಟಿಸಿದರು. ಅಕ್ಟೋಬರ್ 12ರವರೆಗೆ ಭೌತಶಾಸ್ತ್ರ, ರಸಾಯನ ಶಾಸ್ತ್ರ, ಸಾಹಿತ್ಯ, ಶಾಂತಿ ಮತ್ತು ಅರ್ಥಶಾಸ್ತ್ರ ವಿಭಾಗದ ಪುರಸ್ಕೃತರ ಹೆಸರು ಘೋಷಣೆಯಾಗಲಿದೆ.

ಆಲ್ಟರ್, ರೈಸ್ ಮತ್ತು ಹೂಟನ್ ಅವರ ಸಂಶೋಧನೆಗಳು ರಕ್ತದ ಮೂಲಕ ಹರಡುವ ಹೆಪಟೈಟಿಸ್‌ನ ಮುಖ್ಯ ಮೂಲವನ್ನು ವಿವರಿಸುವಲ್ಲಿ ಯಶಸ್ವಿಯಾಗಿವೆ. ಇವರ ಸಂಶೋಧನೆಗಳು ರಕ್ತ ಪರೀಕ್ಷೆ ಮತ್ತು ಹೊಸ ಔಷಧಗಳ ಸಂಶೋಧನೆಗಳಿಗೆ ಕಾರಣವಾಗಿ ತನ್ಮೂಲಕ ಪ್ರತಿವರ್ಷ ಲಕ್ಷಾಂತರ ಜನರ ಜೀವ ಉಳಿಸುವಲ್ಲಿ ನೆರವಾಗಿವೆ. ಹೊಸ ಆ್ಯಂಟಿ ವೈರೆಲ್ ಔಷಧ ಪತ್ತೆಗೂ ನೆರವಾಗಿದೆ. ಇತಿಹಾಸದಲ್ಲೇ ಮೊದಲ ಭಾರಿಗೆ ಹೆಪಟೈಟಿಸ್ ಅನ್ನು ಗುಣಮುಖ ಮಾಡಲು ಸಾಧ್ಯವಾಗಿದೆ.

ಮಲಿನವಾದ ವಸ್ತುಗಳಲ್ಲಿನ ವೈರಸ್, ನೀರು ಅಥವಾ ಆಹಾರದ ಮೂಲಕ ನಮ್ಮ ದೇಹವನ್ನು ಸೇರಿಕೊಂಡು ಮುಖ್ಯವಾಗಿ ಯಕೃತ್ ಮೇಲೆ ದಾಳಿ ನಡೆಸುತ್ತವೆ. ಇದರಿಂದಾಗಿ ಕ್ಯಾನ್ಸರ್ ಸೇರಿದಂತೆ ನಾನಾ ರೀತಿಯ ತೊಂದರೆ ಕಾಣಿಸುತ್ತದೆ. ಪ್ರತಿವರ್ಷ ವಿಶ್ವದಲ್ಲಿ 7 ಕೋಟಿಗೂ ಹೆಚ್ಚು ಜನ ಹೆಪಟೈಟಿಸ್‌ಗೆ ತುತ್ತಾಗುತ್ತಾರೆ ಮತ್ತು 4 ಲಕ್ಷ ಜನ ಸಾವನ್ನಪ್ಪುತ್ತಾರೆ.

ಆಧಾರ: ಕನ್ನಡಪ್ರಭ, ದಿನಾಂಕ:06.10.2020.

## 3. ಮಹಿಳಾ ವಿಜ್ಞಾನಿಗಳಿಗೆ ನೊಬೆಲ್

ಫ್ರಾನ್ಸ್‌ನ ವಿಜ್ಞಾನಿ ಇಮ್ಯಾನ್ಯುಯಲ್ ಚಾರ್ಪೆಂಟಿಯರ್ ಹಾಗೂ ಅಮೆರಿಕದ ವಿಜ್ಞಾನಿ ಜೆನ್ನಿಫರ್ ಎ. ಡೌಡ್ನಾ ಅವರಿಗೆ 2020ನೇ ಸಾಲಿನಲ್ಲಿ ರಸಾಯನ ಶಾಸ್ತ್ರದಲ್ಲಿ ನೀಡಲಾಗುವ ನೊಬೆಲ್ ಪ್ರಶಸ್ತಿ ಘೋಷಿಸಲಾಗಿದೆ. ಜಿನೋಮ್ ಎಡಿಟಿಂಗ್ ಒಳಗೊಂಡ ಸಿಆರ್‌ಐಎಸ್‌ಆರ್ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಿದ ಹಿನ್ನೆಲೆಯಲ್ಲಿ ಈ ಪ್ರಶಸ್ತಿ ನೀಡಲಾಗಿದೆ. ಮಾನವನ ಪ್ರತಿಯೊಂದು ಜೀವಕಣದಲ್ಲಿರುವ

ವಂಶವಾಹಿಯಲ್ಲಿನ ಡಿಎನ್‌ಎಯನ್ನು ನಿಗದಿತ ಅಂತರದಲ್ಲಿ ಕತ್ತರಿಸಿ ಇಡೀ ಡಿಎನ್‌ಎ ರಚನೆಯನ್ನು ತಮಗೆ ಬೇಕಾದಂತೆ ತಿದ್ದಿಕೊಳ್ಳುವ ತಂತ್ರಜ್ಞಾನಕ್ಕೆ ಜಿನೋಮ್ ಎಡಿಟಿಂಗ್ ಎಂದು ಕರೆಯುತ್ತಾರೆ. ಪ್ರಶಸ್ತಿ ವಿಜೇತರಿಗೆ ತಲಾ ಒಂದು ಚಿನ್ನದ ಪದಕ, ರೂ.8.2 ಕೋಟಿ ನಗದು ಪುರಸ್ಕಾರ ನೀಡಲಾಗುತ್ತದೆ.

ಆಧಾರ: ಉದಯವಾಣಿ, ದಿನಾಂಕ:08.10.2020

## 4. ಅಮೆರಿಕನ್ ಚುನಾವಣಾ ಕಣ

ನವೆಂಬರ್ 3ರಂದು ಅಮೆರಿಕದಲ್ಲಿ ಅಧ್ಯಕ್ಷೀಯ ಚುನಾವಣೆ ನಡೆಯಲಿದೆ. ಜಾಗತಿಕ ಶಕ್ತಿಯಾಗಿರುವ ಅಮೆರಿಕದಲ್ಲಿನ ಬದಲಾವಣೆಗಳು ಜಗತ್ತಿನ ಮೇಲೂ ಪ್ರಭಾವ ಬೀರುವುದರಿಂದ ಸಹಜವಾಗಿಯೇ ಎಲ್ಲಾ ರಾಷ್ಟ್ರಗಳ ಚಿತ್ತ ಅತ್ತ ಹರಿದಿದೆ. ಅಕ್ಟೋಬರ್ 22ರ ರಾತ್ರಿ 9ಗಂಟೆಗೆ(ಭಾರತೀಯ ಕಾಲಮಾನ: ಶುಕ್ರವಾರ ಬೆಳಿಗ್ಗೆ 7.30ಕ್ಕೆ) ಟ್ರಂಪ್ ಮತ್ತು ಬೈಡನ್ ಕೊನೆಯ ಅಧ್ಯಕ್ಷೀಯ ಚರ್ಚೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

**ಎರಡು ಪ್ರಮುಖ ಪಕ್ಷಗಳು:**–ಅಮೆರಿಕದ ರಾಜಕೀಯ ವ್ಯವಸ್ಥೆಯಲ್ಲಿ ಕೇವಲ ಎರಡು ಪಕ್ಷಗಳದ್ದೇ ಪಾರಮ್ಯವಿದೆ. ಇವೆರಡರಲ್ಲಿ ಒಂದು ಪಕ್ಷದವರೇ ಅಧಿಕಾರಕ್ಕೇರುತ್ತಾ ಬಂದಿರುತ್ತಾರೆ.

ರಿಪಬ್ಲಿಕನ್‌ರು ಬಲಪಂಥೀಯ ಧೋರಣೆಗಳಿಂದ ಗುರುತಿಸಿಕೊಂಡಿರುವ ರಿಪಬ್ಲಿಕನ್ ಪಕ್ಷದ ಈ ವರ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರಿಗೆ ಅಮೆರಿಕನ್ನರು ಮತ್ತೆ ನಾಲ್ಕು ವರ್ಷ ಆಡಳಿತ ನಡೆಸಲು ಅವಕಾಶ ಕೊಡುತ್ತಾರಾ ಕಾದುನೋಡಬೇಕಿದೆ. ರಿಪಬ್ಲಿಕನ್ ಪಕ್ಷವನ್ನು ಗ್ರಾಂಡ್ ಓಲ್ಡ್ ಪಾರ್ಟಿ (ಜಿಓಪಿ) ಎಂದು ಕರೆಯಲಾಗುತ್ತದೆ. ಕೆಲ ವರ್ಷಗಳಿಂದ ಈ ಪಕ್ಷ ಕಡಿಮೆ ತೆರಿಗೆ ಪದ್ದತಿ, ಗನ್ ಹಕ್ಕುಗಳು, ಕಠಿಣ ವಲಸಿಗ ನೀತಿ, ಅಮೆರಿಕನ್ನರಿಗೇ ಉದ್ಯೋಗ ಆದ್ಯತೆಯಂಥ ನೀತಿಗಳನ್ನು ಅನುಸರಿಸುತ್ತಾ ಬಂದಿದೆ. ರಿಪಬ್ಲಿಕನ್ ಪಕ್ಷಕ್ಕೆ ಶ್ವೇತವರ್ಣೀಯ ಮಧ್ಯಮವರ್ಗದ ಬೆಂಬಲ ಅಧಿಕವಿದ್ದು, ಈ ಪಕ್ಷ ಅಮೆರಿಕದ ಗ್ರಾಮೀಣ ಭಾಗಗಳಲ್ಲಿ ಪ್ರಖ್ಯಾತವಾಗಿದೆ. ಜಾರ್ಜ್ ಡಬ್ಲೂ ಬುಷ್, ರೊನಾಲ್ಡ್ ರೇಗನ್, ರಿಚರ್ಡ್ ನಿಕ್ಸನ್ ರಿಪಬ್ಲಿಕನ್ ಪಕ್ಷದಿಂದ ಅಧ್ಯಕ್ಷರಾಗಿದ್ದವರು.

ಡೆಮಾಕ್ರಾಟ್‌ಗಳು ತಮ್ಮನ್ನು ಪ್ರಗತಿಪರ ಧೋರಣೆಯ ಪಕ್ಷ ಎಂದು ಕರೆದುಕೊಳ್ಳುತ್ತಾರೆ. ಡೆಮಾಕ್ರಾಟಿಕ್ ಪಕ್ಷ ಎಡಚಿಂತನೆಯಿಂದ ಕೂಡಿದ್ದು ಚೀನಾದ ಪರವಿದೆ ಎನ್ನುವುದು ರಿಪಬ್ಲಿಕನ್ನರ ವಾದ. ಈ ಬಾರಿ ಡೆಮಾಕ್ರಾಟಿಕ್ ಪಾರ್ಟಿಯ ಅಭ್ಯರ್ಥಿಯಾಗಿ 77 ವರ್ಷದ ಜೋ ಬೈಡನ್ ಕಣದಲ್ಲಿದ್ದಾರೆ. ಇವರು ಈ ಹಿಂದೆ ಒಬಾಮಾ ಅವಧಿಯಲ್ಲಿ 8 ವರ್ಷಗಳವರೆಗೆ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದವರು. ಬೈಡನ್ ನಂತರ ಪಕ್ಷದಲ್ಲೀಗ ಎರಡನೇ ಪ್ರಮುಖ ಶಕ್ತಿಯಾಗಿ ಗುರುತಿಸಿಕೊಂಡಿರುವುದು ಭಾರತೀಯ ಮೂಲದ ಕಮಲಾ ಹ್ಯಾರಿಸ್, ಜಾನ್ ಎಫ್.ಕೆನಡಿ, ಜಿಮ್ಮಿ ಕಾರ್ಟರ್, ಬಿಲ್ ಕ್ಲಿಂಟನ್, ಬರಾಕ್ ಒಬಾಮಾ ಡೆಮಾಕ್ರಟಿಕ್ ಪಕ್ಷದ ಮೂಲಕ ಅಧ್ಯಕ್ಷರಾಗಿದ್ದ ನಾಯಕರು.

ಆಧಾರ: ಉದಯವಾಣಿ, ದಿನಾಂಕ:08.10.2020

## 5. ಅಮೆರಿಕದ ಲೂಯಿಸ್‌ಗೆ ನೊಬೆಲ್ ಸಾಹಿತ್ಯ ಪ್ರಶಸ್ತಿ

ಅಮೆರಿಕ ಕವಯಿತ್ರಿ ಲೂಯಿಸ್ ಗ್ಲುಕ್ ಅವತಿಗೆ ಪ್ರತಿಷ್ಠಿತ ನೊಬೆಲ್ ಪುರಸ್ಕಾರ ಲಭಿಸಿದೆ. ನೇರ, ನಿಷ್ಪಕ್ಷಪಾತ ಹಾಗೂ ರಾಜಿಯಾಗದ ನಿಲುವುಗಳನ್ನು ಹೊಂದಿದ ಕೃತಿಗಳನ್ನು ಬರೆದ ಕಾರಣಕ್ಕೆ ಅವರಿಗೆ ಈ ಗೌರವ ದೊರೆತಿದೆ.

ಪ್ರಶಸ್ತಿ ಘೋಷಣೆ ಮಾಡಿದ ಸ್ವಾಕ್ ಹೋಂನ ಸ್ವೀಡಿಸ್ ಅಕಾಡೆಮಿ, 'ವೈಯುಕ್ತಿಕ ಅಸ್ತಿತ್ವವನ್ನು ಸಾರ್ವತ್ರಿಕರಣಗೊಳಿಸುವ ನಿಷ್ಠೂರ ಸೌಂದರ್ಯದ ನಿಸ್ಸಂದಿಗ್ಧ ಕಾವ್ಯಾತ್ಮಕ ಧ್ವನಿ ಅವರಲ್ಲಿದೆ' ಎಂದು ಬಣ್ಣಿಸಿದೆ. ಪ್ರಶಸ್ತಿಯು ರೂ. 8.08 ಕೋಟಿ ನಗದು ಬಹುಮಾನ ಒಳಗೊಂಡಿದೆ. 77 ವರ್ಷದ

ಲೂಯಿಸ್ ಗ್ಲುಕ್ ಅವರು ಯೇಲ್ ವಿಶ್ವವಿದ್ಯಾಲಯದಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದರು. 1068 ರಲ್ಲಿ ಫಸ್ಟ್ ಬಾರ್ನ್ ಕೃತಿ ಮೂಲಕ ಅವರು ಸಾಹಿತ್ಯ ಲೋಕಕ್ಕೆ ಪಾದಾರ್ಪಣೆ ಮಾಡಿದ್ದರು. 1992ರಲ್ಲಿ ವೈಲ್ಡ್ ಐರಿಸ್ ಕವನ ಸಂಕಲನಕ್ಕೆ ಅವರಿಗೆ ಪ್ರತಿಷ್ಠಿತ ಪುಲಿಟ್ಜರ್ ಪ್ರಶಸ್ತಿಯೂ ಬಂದಿತ್ತು. 'ಅಮೆರಿಕ ಸಮಕಾಲೀನ ಸಾಹಿತ್ಯದ ಅತ್ಯಂತ ಪ್ರಮುಖ ಕವಿಗಳಲ್ಲಿ ಅವರು ಒಬ್ಬರು. ಅವರ ಕವಿತೆಗಳಲ್ಲಿ ಕಟು ವಿನೋದಗಳು ಇರುತ್ತವೆ' ಎಂದು ಸಮಿತಿ ಬಣ್ಣಿಸಿದೆ.

ಆಧಾರ: ಕನ್ನಡಪ್ರಭ,ದಿನಾಂಕ:09.10.2020

## 6. ವಿಶ್ವ ಆಹಾರ ಕಾರ್ಯಕ್ರಮಕ್ಕೆ ನೊಬೆಲ್ ಶಾಂತಿ ಪುರಸ್ಕಾರ

ವಿಶ್ವಸಂಸ್ಥೆಯ ವಿಶ್ವ ಆಹಾರ ಕಾರ್ಯಕ್ರಮಕ್ಕೆ 2020ನೇ ಸಾಲಿನ ಪ್ರತಿಷ್ಠಿತ ನೊಬೆಲ್ ಶಾಂತಿ ಪ್ರಶಸ್ತಿ ಸಂದಿದೆ. ವಿಶ್ವದಲ್ಲಿ ಹಸಿವು ಹೋಗಲಾಡಿಸಿ ಆಹಾರ ಭದ್ರತೆಯನ್ನು ಒದಗಿಸಲು ಈ ಯೋಜನೆ ಶ್ರಮಿಸುತ್ತಿದ್ದು, ಇದನ್ನು ಪರಿಗಣಿಸಿ ಶಾಂತಿ ಪುರಸ್ಕಾರ ಘೋಷಿಸಲಾಗಿದೆ.

ವಿಶ್ವ ಆಹಾರ ಕಾರ್ಯಕ್ರಮದಡಿ 88 ದೇಶಗಳ 10 ಕೋಟಿ ಜನರಿಗೆ ಅನ್ನಾಹಾರ ನೀಡಲಾಗುತ್ತದೆ. ಶಾಂತಿ ಪ್ರಶಸ್ತಿ ಘೋಷಣೆ ಮಾಹಿತಿ ಲಭಿಸುತ್ತಿದ್ದಂತೆಯೇ ಯೋಜನೆಯ ಮುಖ್ಯಸ್ಥ ಡೇವಿಡ್ ಬೇಸ್ಲಿ ಹರ್ಷ ವ್ಯಕ್ತಪಡಿಸಿದ್ದಾರೆ. 'ನನಗೆ ಅಚ್ಚರಿ ಹಾಗೂ ಆಘಾತ ಎರಡು ಆಯಿತು' ಎಂದು ಅವರು ಹೇಳಿದ್ದಾರೆ. 'ಕೊರೋನಾ ವೈರಸ್ ಹಾವಳಿಯಿಂದ ವಿಶ್ವದಲ್ಲಿ ಅನೇಕ ಜನರು ಸಂಕಷ್ಟಕ್ಕೀಡಾಗಿ ಊಟಕ್ಕೂ ಪರದಾಡುವ ಸ್ಥಿತಿ ಸೃಷ್ಟಿಯಾಗಿದೆ. ಸರ್ಕಾರಗಳು ಈ ವಿಶ್ವಸಂಸ್ಥೆ ಆಹಾರ ಕಾರ್ಯಕ್ರಮ ಯೋಜನೆಯನ್ನು ಬೆಂಬಲಿಸಿ ಧನ ಸಹಾಯ ನೀಡಬೇಕು. ಆಗ ಹಸಿದ ಹೊಟ್ಟೆಗಳಿಗೆ ಯೋಜನೆಯು ಅನ್ನ ಒದಗಿಸುತ್ತದೆ ಎಂದು ನೊಬೆಲ್ ಸಮಿತಿ ಕರೆ ನೀಡಿದೆ.

ಆಧಾರ: ಕನ್ನಡಪ್ರಭ, ದಿನಾಂಕ:10.10.2020

## 7. ಹಸಿವು ನೀಗಿಸಿದ ಸಂಸ್ಥೆಗೆ ಶಾಂತಿ ಪುರಸ್ಕಾರ

ಈ ಬಾರಿಯ ಬಹು ನಿರೀಕ್ಷಿತ ಶಾಂತಿ ನೊಬೆಲ್ ಪುರಸ್ಕಾರ ಯಾರಿಗೆ ಎಂಬ ಕುತೂಹಲಕ್ಕೆ ತೆರೆ ಬಿದ್ದಿದೆ. ವಿಶ್ವದ ನಾನಾ ಭಾಗಗಳಲ್ಲಿ, ಸಂಘರ್ಷ ಪೀಡಿತ ಪ್ರದೇಶಗಳಲ್ಲಿ ಕೋಟ್ಯಂತರ ಬಡ ಜನರ ಹಸಿವನ್ನು ನೀಗಿಸಿದ ವಿಶ್ವಸಂಸ್ಥೆಯ 'ವಿಶ್ವ ಆಹಾರ ಕಾರ್ಯಕ್ರಮ' ಸಂಸ್ಥೆಯನ್ನು(ಡಬ್ಲೂಎಫ್‌ಪಿ) 2020ನೇ ಸಾಲಿನ ನೊಬೆಲ್ ಶಾಂತಿ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ.

ಹಸಿವು ನಿವಾರಣೆ ನಿಟ್ಟಿನಲ್ಲಿ ಹಾಗೂ ಸಂಘರ್ಷ ಪೀಡಿತ ಪ್ರದೇಶದಲ್ಲಿ ಶಾಂತಿ ಸ್ಥಾಪಿಸುವ ಸಲುವಾಗಿ ನಡೆಸಿ ಪ್ರಯತ್ನಗಳನ್ನು ಗುರುತಿಸಿ ಈ ಸಂಸ್ಥೆಯನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ರೋಮ್‌ನಲ್ಲಿ ಮುಖ್ಯ ಕಚೇರಿ ಹೊಂದಿರುವ 'ಡಬ್ಲೂಎಫ್‌ಪಿ', ಕಳೆದ ವರ್ಷ 88 ದೇಶಗಳ 10 ಕೋಟಿ ಜನರಿಗೆ ಆಹಾರವನ್ನು ಒದಗಿಸಿದೆ. "ಈ ವರ್ಷದ ನೊಬೆಲ್ ಶಾಂತಿ ಪುರಸ್ಕಾರವನ್ನು ಈ ಸಂಸ್ಥೆಗೆ ನೀಡುವ ಮೂಲಕ ಹಸಿವಿನಿಂದ ಬಳಲುತ್ತಿರುವ ಕೋಟ್ಯಂತರ ಜನರತ್ತ ವಿಶ್ವದ ಜನತೆಯ ಗಮನ ಸೆಳೆದಂತಾಗಿದೆ," ಎಂದು ನಾರ್ವೆಯ ನೊಬೆಲ್ ಸಮಿತಿಯ ಅಧ್ಯಕ್ಷ ಬೆರಿಟ್ ರೀಸ್ ಆಂಡರ್‌ಸನ್ ಹೇಳಿದ್ದಾರೆ.

ಪ್ರಶಸ್ತಿಯು 10 ಮಿಲಿಯನ್ ಕ್ರೋನಾ (ಅಂದಾಜು ರೂ.8 ಕೋಟಿ) ನಗದು ಬಹುಮಾನ ಮತ್ತು ಚಿನ್ನದ ಪದಕವನ್ನು ಒಳಗೊಂಡಿರಲಿದೆ. ಡಿಸೆಂಬರ್ 10 ರಂದು ನಾರ್ವೆಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಕೊರೋನಾ ಸಾಂಕ್ರಾಮಿಕವು ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ಮೇಲು ಪ್ರಭಾವ ಬೀರುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

WFP 1961ರಲ್ಲಿ ಸ್ಥಾಪನೆಗೊಂಡ ಡಬ್ಲೂಎಫ್‌ಪಿ, ಆಹಾರ ಭದ್ರತೆಯ ಮೂಲಕ ಶಾಂತಿ ಪ್ರಕ್ರಿಯೆಗೆ ಪ್ರಯತ್ನಿಸುತ್ತದೆ. ಈ ನಿಟ್ಟಿನಲ್ಲಿ ಯುದ್ಧ ಮತ್ತು ಗಲಭೆ ಪೀಡಿತ ದೇಶಗಳಲ್ಲಿ ಬಹುಪಕ್ಷೀಯ ಮಾತುಕತೆ ನಡೆಸುತ್ತದೆ ಮತ್ತು ಆ ಭಾಗದ ಜನರಿಗೆ ಆಹಾರ ಭದ್ರತೆ ಒದಗಿಸುತ್ತದೆ. 2017ರಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಈ ಸಂಸ್ಥೆಗೆ ದಕ್ಷಿಣ ಕರೊಲಿನಾದ ಮಾಜಿ ರಾಜ್ಯಪಾಲ ಡೇವಿಡ್ ಬೀಸ್‌ಲೆ ಅವರನ್ನು ನಾಮ ನಿರ್ದೇಶನ ಮಾಡಿದ್ದರು. 2019ರಲ್ಲಿ ವಿಶ್ವಾದ್ಯಂತ 1.35 ಕೋಟಿ ಜನರು ತೀವ್ರ ಹಸಿವಿನಿಂದ ಬಳಲಿದ್ದರು. ಇತ್ತೀಚಿನ ವರ್ಷಗಳಲ್ಲೇ ಇದು ಅತ್ಯಧಿಕ ಎಂದು ಡಬ್ಲ್ಯೂಎಫ್‌ಪಿ ಹೇಳಿದೆ. ಕೊರೋನಾ ಸಾಂಕ್ರಾಮಿಕದಿಂದಾಗಿ ವಿಶ್ವಾದ್ಯಂತ ಹಸಿವಿನಿಂದ ಸಾಯುವವರ ಸಂಖ್ಯೆ ಮತ್ತಷ್ಟು ಹೆಚ್ಚಿದೆ ಎಂದು ಸಂಸ್ಥೆ ಹೇಳಿದ್ದು, ಈ ನಿಟ್ಟಿನಲ್ಲಿ ತನ್ನ ಜವಾಬ್ದಾರಿಯು ಹೆಚ್ಚಿರುವುದಾಗಿ ತಿಳಿಸಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:10.10.2020

## 8. ಗಡಿಯಲ್ಲಿ ನಿಲ್ಲದ ಚೀನಾ ತಂಟೆ

ಭಾರತದೊಂದಿಗಿನ ವಾಸ್ತವ ಗಡಿ ನಿಯಂತ್ರಣ ರೇಖೆ(ಎಲ್‌ಎಸಿ) ಬಳಿ ಚೀನಾ 60 ಸಾವಿರಕ್ಕೂ ಹೆಚ್ಚು ಸೈನಿಕರನ್ನು ನಿಯೋಜಿಸಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮೈಕ್ ಪೊಂಪಿಯೊ ಹೇಳಿದ್ದು, ನೆರೆಯ ರಾಷ್ಟ್ರಗಳ ಜೊತೆ ಚೀನಾ ಅನುಸರಿಸುತ್ತಿರುವ ಅಕ್ರಮಣಕಾರಿ ನೀತಿ ಹಾಗೂ ಕ್ವಾಡ್ ಸದಸ್ಯ ರಾಷ್ಟ್ರಗಳಿಗೆ ಬೆದರಿಕೆ ಒಡ್ಡುತ್ತಿರುವ ನಡೆಯನ್ನು ಅವರು ತೀವ್ರವಾಗಿ ಖಂಡಿಸಿದ್ದಾರೆ.

'ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆ, ಪ್ರಬಲ ಆರ್ಥಿಕತೆ ಹಾಗೂ ಒಂದೇ ಸ್ವರೂಪ ಹೊಂದಿರುವ ಕ್ವಾಡ್‌ನ ಸದಸ್ಯರ ಜೊತೆ ಕಳೆದ ವಾರ ಸಭೆ ನಡೆಸಿದೆವು. ಈ ನಾಲ್ಕು ರಾಷ್ಟ್ರಗಳು ಚೀನಾದ ಬೆದರಿಕೆಯನ್ನು ಎದುರಿಸುತ್ತಿವೆ. ಭಾರತದ ಎಲ್‌ಎಸಿ ಬಳಿ ಚೀನಾ 60 ಸಾವಿರ ಸೈನಿಕರನ್ನು ನಿಯೋಜಿಸಿದೆ. ಕೊರೋನಾ ಬಗ್ಗೆ ತನಿಖೆಗೆ ಆಗ್ರಹಿಸಿದ್ದಕ್ಕಾಗಿ ಆಸ್ಟ್ರೇಲಿಯಾಗೆ ಚೀನಾ ಬೆದರಿಕೆ ಹಾಕಿದೆ. ಕಳೆದ ಹಲವು ದಶಕಗಳಿಂದ ಚೀನಾ ಕಮ್ಯುನಿಸ್ಟ್ ಪಕ್ಷ ಅಮೆರಿಕದ ಮೇಲೆ ದಬ್ಬಾಳಿಕೆ ನಡೆಸಿದೆ. ಅವರು ನಮ್ಮ ಲಕ್ಷಾಂತರ ಉದ್ಯೋಗಗಳನ್ನು ಆಕ್ರಮಿಸಿದ್ದಾರೆ. ಚೀನಾ ವಿರುದ್ಧದ ಈ ಹೋರಾಟದಲ್ಲಿ ಮಿತ್ರರಾಷ್ಟ್ರಗಳಿಗೆ ಅಮೆರಿಕದ ಅಗತ್ಯ ಇದೆ. ಜಗತ್ತು ಜಾಗೃತಗೊಂಡಿದೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಾಯಕತ್ವದಲ್ಲಿ ಅಮೆರಿಕ ಒಗ್ಗಟ್ಟಾಗಿದ್ದು, ಅದು ಇಂಥ ಬೆದರಿಕೆಗಳನ್ನು ದೂರ ಮಾಡುತ್ತದೆ' ಎಂದು ಪಾಂಪಿಯೊ ಹೇಳಿದ್ದಾರೆ.

ಕ್ವಾಡ್ ಗ್ರೂಪ್ ಎಂದು ಕರೆಯಲ್ಪಡುವ ಇಂಡೋ-ಫೆಸಿಪಿಕ್ ಭಾಗದ ರಾಷ್ಟ್ರಗಳಾದ ಭಾರತ, ಜಪಾನ್, ಅಮೆರಿಕ ಮತ್ತು ಆಸ್ಟ್ರೇಲಿಯಾದ ವಿದೇಶಾಂಗ ಸಚಿವರು ಟೋಕಿಯೊದಲ್ಲಿ ಸಭೆ ನಡೆಸಿ, ಚೀನಾದ ಅಕ್ರಮಣಕಾರಿ ನಿಲುವು, ಶಾಂತಿ ಸ್ಥಾಪನೆ ಸೇರಿ ಹಲವು ಮಹತ್ವದ ವಿಚಾರಗಳ ಕುರಿತು ಚರ್ಚೆ ನಡೆಸಿದ್ದರು. ಇಂಡೋ-ಫೆಸಿಫಿಕ್ ದಕ್ಷಿಣ ಚೀನಾ ಸಮುದ್ರ ಮತ್ತು ಪೂರ್ವ ಲಡಾಖ್‌ನ ಎಲ್‌ಎಸಿ ಉದ್ದಕ್ಕೂ ಚೀನಾದ ಆಕ್ರಮಣಕಾರಿ ಮಿಲಿಟರಿ ನಡವಳಿಕೆಯ ಬಗ್ಗೆ ಸಭೆಯಲ್ಲಿ ಪ್ರಮುಖವಾಗಿ ಚರ್ಚಿಸಲಾಗಿತ್ತು.

ಆಧಾರ: ವಿಜಯವಾಣಿ, ದಿನಾಂಕ:11.10.2020

## 9. ಆರೋಗ್ಯ ಸೇತುಗೆ ಡಬ್ಲೂಎಚ್‌ಒ ಪ್ರಶಂಸೆ

ಕೊರೋನಾ ಸೋಂಕಿತರ ಸಂಪರ್ಕಗಳನ್ನು ಪತ್ತೆಹಚ್ಚಲು ಭಾರತ ಸರ್ಕಾರ ಅಭಿವೃದ್ಧಿಪಡಿಸಿರುವ ಆರೋಗ್ಯ ಸೇತು ಆ್ಯಪ್‌ಗೆ ವಿಶ್ವ ಆರೋಗ್ಯ ಸಂಸ್ಥೆ(ಡಬ್ಲೂಎಚ್‌ಒ) ಮೆಚ್ಚುಗೆ ವ್ಯಕ್ತಪಡಿಸಿದೆ.

'ಕೊರೋನಾ ವೈರಸ್ ಹರಡದಂತೆ ತಡೆಯಲು ನಾವು ಈಗಾಗಲೇ ಪ್ರಯೋಜನಕಾರಿಯೆಂದು ಸಾಬೀತಾದ ಮಾರ್ಗಗಳನ್ನು ಅಳವಡಿಸಿಕೊಳ್ಳಬೇಕಿದೆ. ಮೊಬೈಲ್ ಆ್ಯಪ್‌ನಂತಹ ತಾಂತ್ರಿಕ ಟೂಲ್‌ಗಳು ಈ ವಿಷಯದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಬಹುದು. ಭಾರತದಲ್ಲಿ ಅಭಿವೃದ್ಧಿಪಡಿಸಿದ ಆರೋಗ್ಯ

ಸೇತು ಆ್ಯಪ್‌ನ್ನು 15 ಕೋಟಿ ಜನ ಡೌನ್‌ಲೋಡ್ ಮಾಡಿಕೊಂಡಿದ್ದಾರೆ. ಕೊರೋನಾ ಹರಡುವುದನ್ನು ತಡೆಯುವಲ್ಲಿ ಇದು ಒಂದು ಉತ್ತಮ ತಂತ್ರಜ್ಞಾನ' ಎಂದು ವಿಶ್ವ ಆರೋಗ್ಯ ಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಟೆಡ್ರೋಸ್ ಅಧನೋಮ್‌ಗೆಬ್ರಿಯೇಸಸ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಆರೋಗ್ಯ ಸೇತು ಆ್ಯಪ್‌ನಿಂದ ಕೊರೋನಾ ಹರಡುವ ಕ್ಲಸ್ಟರ್‌ಗಳನ್ನು ಮೊದಲೇ ಗುರುತಿಸಲು ಸಾಧ್ಯವಾಗುತ್ತದೆ. ಅಲ್ಲಿ ಪರೀಕ್ಷೆಗಳನ್ನು ಹೆಚ್ಚಿಸಿ ಕೊರೋನಾ ನಿಯಂತ್ರಿಸಲು ಪ್ರಯತ್ನಿಸಲಾಗುತ್ತದೆ. ಭಾರತದಂತೆ ಜರ್ಮನಿಯಲ್ಲಿ ಕೊರೋನಾ ವಾರ್ನ್ ಆ್ಯಪ್, ಬ್ರಿಟನ್‌ನಲ್ಲಿ ಎನ್‌ಎಚ್‌ಎಸ್ ಕೋವಿಡ್–19 ಆ್ಯಪ್ ಮುಂತಾದ ತಾಂತ್ರಿಕ ಸಲಕರಣೆಗಳಿವೆ. ನಾವು ಈ ದೇಶಗಳ ಜೊತೆ ಸೇರಿ ಡಿಜಿಟಲ್ ಆ್ಯಪ್‌ಗಳ ಪ್ರಯೋಜನವನ್ನು ಅಳೆಯುವ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಈ ಹಿಂದೆ ಮುಂಬೈನ ಧಾರಾವಿ ಕೊಳಚೆ ಪ್ರದೇಶದಲ್ಲಿ ಕೊರೋನಾ ಹರಡುವುದನ್ನು ತಡೆದಿದ್ದಕ್ಕೆ ವಿಶ್ವ ಆರೋಗ್ಯ ಸಂಸ್ಥೆ ವ್ಯಾಪಕ ಮೆಚ್ಚುಗೆ ವ್ಯಕ್ತಪಡಿಸಿತ್ತು.

ಆಧಾರ: ಕನ್ನಡಪ್ರಭ, ದಿನಾಂಕ:14.10.2020

## 10. ಚುನಾವಣಾ ಕಣದಲ್ಲಿ ಡೊನಾಲ್ಡ್ ಟ್ರಂಪ್‌ಗೆ ಹಿನ್ನಡೆ

ಅಮೆರಿಕದ ಅಧ್ಯಕ್ಷೀಯ ಚುನಾವಣೆಗೆ ಕೇವಲ 16 ದಿನ ಬಾಕಿಯುಳಿದಿದ್ದು ಪುನರಾಯ್ಕೆ ಬಯಸಿರುವ ಹಾಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಪ್ರತಿಸ್ಪರ್ಧಿ ಜೋ ಬಿಡೆನ್‌ಗಿಂತ ಶೇ.9 ಮತಗಳ ಅಂತರದಿಂದ ಹಿನ್ನಡೆ ಅನುಭವಿಸುತ್ತಿದ್ದಾರೆ ಎಂದು ಸಮೀಕ್ಷೆಗಳು ಹೇಳಿವೆ.

ಟ್ರಂಪ್ ಮಹಿಳೆಯರ ಬೆಂಬಲ ಕಳೆದುಕೊಳ್ಳುತ್ತಿದ್ದಾರೆ. ಬಿಡೆನ್ ತಮ್ಮ ಉಪಾಧ್ಯಕ್ಷ ಅಭ್ಯರ್ಥಿಯಾಗಿ ಭಾರತ ಮೂಲದ ಕಮಲಾ ಹ್ಯಾರಿಸ್‌ರನ್ನು ಆಯ್ಕೆ ಮಾಡಿಕೊಂಡಿರುವುದು ದೊಡ್ಡ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎಂದು ಹೇಳಲಾಗಿದೆ. ಅಮೆರಿಕದ ಆಧುನಿಕ ಚುನಾವಣಾ ಇತಿಹಾಸದಲ್ಲೇ ಮೊದಲ ಬಾರಿಗೆ ಮಹಿಳಾ ಮತದಾರರು ಈ ರೀತಿಯಲ್ಲಿ ವ್ಯಾಪಕ ಬೆಂಬಲ ವ್ಯಕ್ತಪಡಿಸಿದ್ದಾರೆ. ನಗರ, ಉಪನಗರ, ಶ್ವೇತವರ್ಣೀಯರು, ಕಪ್ಪುವರ್ಣೀಯರು, ವಿದ್ಯಾವಂತರು, ಕಾರ್ಮಿಕರು ಹೀಗೆ ಎಲ್ಲ ವಿಭಾಗಗಳ ಮಹಿಳೆಯರು ಡೆಮಾಕ್ರಾಟಿಕ್ ಪಕ್ಷದ ಅಭ್ಯರ್ಥಿಗಳ ಪರವಾಗಿ ನಿಂತಿರುವುದು ಸ್ಪಷ್ಟವಾಗಿದೆ. ರುಟ್‌ಜರ್ಸ್ ವಿಶ್ವವಿದ್ಯಾಲಯದ ಅಮೆರಿಕನ್ ಮಹಿಳಾ ಮತ್ತು ರಾಜಕೀಯ ಕೇಂದ್ರದ ಪ್ರಕಾರ, ಬಿಡೆನ್ ಅಪಾರ ಮಹಿಳಾ ಬೆಂಬಲ ಗಳಿಸಿದ್ದಾರೆ. ಟ್ರಂಪ್‌ಗಿಂತ ಬಿಡೆನ್‌ರಿಗೆ ಹೆಚ್ಚಿನ ಮಹಿಳಾ ಮತದಾರರು ಬೆಂಬಲ ನೀಡುತ್ತಿದ್ದಾರೆ ಎಂದು ಫಾಕ್ಸ್ ನ್ಯೂಸ್ ಹೇಳಿದೆ.

**ಡೊನಾಲ್ಡ್ ಟ್ರಂಪ್ ಹತಾಶೆ:**–ಫ್ಲಾರಿಡಾ ಮತ್ತು ಜಾರ್ಜಿಯಾದಲ್ಲಿ ಟ್ರಂಪ್ ಮಾಡಿದ ಭಾಷಣಗಳು ಅವರ ಹತಾಶೆಯನ್ನು ಪ್ರತಿಬಿಂಬಿಸುವಂತಿದ್ದವು. ಜೋ ಬಿಡೆನ್ ಗೆದ್ದರೆ ಕಮ್ಯುನಿಸ್ಟ್ ಆಡಳಿತ ಬಂದಂತಾಗುತ್ತದೆ. ಕ್ರಿಮಿನಲ್ ವಲಸಿಗರ ಪ್ರವಾಹವೇ ಹರಿದು ಬರಲಿದೆ ಎಂಬ ಅವರ ಮಾತುಗಳು ಜನರನ್ನು ಭಾವನಾತ್ಮಕವಾಗಿ ಹೈಜಾಕ್ ಮಾಡುವ ತಂತ್ರ ಎಂದು ವಿಶ್ಲೇಷಿಸಲಾಗುತ್ತಿದೆ. ದೇಶದ ಅಧ್ಯಕ್ಷೀಯ ರಾಜಕಾರಣದಲ್ಲಿ ಅತ್ಯಂತ ಕೆಟ್ಟ ಅಭ್ಯರ್ಥಿ ವಿರುದ್ಧ ನಾನು ಸೆಣಸುತ್ತಿರುವುದರಿಂದ ಭಾರಿ ಒತ್ತಡ ಉಂಟಾಗಿದೆ. ನಾನು ಸೋಲುವುದನ್ನು ನೀವು ಊಹಿಸುತ್ತೀರಾ 'ಒಂದು ವೇಳೆ ಸೋತರೆ ನಾನು ದೇಶವನ್ನೇ ಬಿಟ್ಟು ಹೋಗಬೇಕಾಗಬಹುದು. ಏನಾಗುವುದೋ ನನಗೆ ಗೊತ್ತಿಲ್ಲ' ಎಂದು ಟ್ರಂಪ್ ಪ್ರಚಾರ ಸಭೆಯಲ್ಲಿ ಹೇಳಿದ್ದಾರೆ. ಬಿಡೆನ್ ಕುಟುಂಬ ಭ್ರಷ್ಟಾಚಾರಿ ಸಂಸ್ಥೆ ಎಂದು ಅವರು ವಾಗ್ದಾಳಿ ಮಾಡಿದ್ದಾರೆ. 'ಪ್ರತಿಪಕ್ಷಕ್ಕೆ ಮೌಲ್ಯಗಳ ಬಗ್ಗೆ ಕಿಂಚಿತ್ತೂ ಗೌರವವಿಲ್ಲ. ದೇಶವನ್ನು ಕಮ್ಯುನಿಸ್ಟ್ ಆಗಿ ಪರಿವರ್ತಿಸುವುದು ಅವರ ಉದ್ದೇಶವಾಗಿದೆ' ಎಂದು ಟ್ರಂಪ್ ಪುನರುಚ್ಚರಿಸಿದ್ದಾರೆ.

ಆಧಾರ: ವಿಜಯವಾಣಿ, ದಿನಾಂಕ:19.10.2020

## 11. ಅಮೆರಿಕವೇ ಅಗ್ರಗಣ್ಯ

ಏಷ್ಯಾ–ಫೆಸಿಫಿಕ್ ವಲಯದಲ್ಲಿ ಯಾರು ಪ್ರಭಾವಶಾಲಿ ಎನ್ನುವ ಸೂಚ್ಯಂಕ ಪಟ್ಟಿಯಲ್ಲಿ ಈಗ ಅಮೆರಿಕ ತನ್ನ ಅತ್ಯುನ್ನತ ಸ್ಥಾನ ಕಾಯ್ದುಕೊಂಡರು ಕೊರೋನಾ ನಿಭಾಯಿಸುವಲ್ಲಿ ಅದು ತಡವರಿಸಿರುವುದರಿಂದ ಅದರ ಪ್ರಭಾವ ತುಸು ಕುಗ್ಗಿದೆ. ಆದರೀಗ ಚೀನಾ ಅಮೆರಿಕವನ್ನು ಸಮೀಪಿಸುವ ಹಂತಕ್ಕೆ ಬಂದಿದೆ.

ಎರಡು ವರ್ಷಗಳ ಹಿಂದೆ ಅಮೆರಿಕವು ಚೀನಾಕ್ಕಿಂತ ಹತ್ತು ಅಂಕಗಳಷ್ಟು ಮುಂದಿತ್ತು. ಆದರೀಗ ಅಮೆರಿಕವು ಚೀನಾಕ್ಕಿಂತ 5.5 ಪಾಯಿಂಟ್‌ಗಳಷ್ಟೇ ಮುನ್ನಡೆಯಲ್ಲಿದೆ. ಸಿಡ್ನಿ ಮೂಲದ ಲೌವೇ ಇನ್ಸಿಟ್ಯೂಟ್ ಸಂಸ್ಥೆಯು 2020 ಸಾಲಿನಲ್ಲಿ ಏಷ್ಯಾದಲ್ಲಿ 26 ದೇಶಗಳ ಪ್ರಭಾವವೆಷ್ಟಿದೆ ಎಂಬುದರ ಸೂಚ್ಯಂಕ ರೂಪಿಸಿದೆ. ಅದರಂತೆ ಭಾರತವು ಅಮೆರಿಕ, ಚೀನಾ, ಜಪಾನ್ ನಂತರದ ನಾಲ್ಕನೇ ಸ್ಥಾನಕ್ಕೆ ತೃಪ್ತವಾಗಿದೆ.

ಭಾರತದ ಬಳಿಕ ಅನುಕ್ರಮವಾಗಿ ರಷ್ಯಾ, ಆಸ್ಟ್ರೇಲಿಯಾ, ದಕ್ಷಿಣ ಕೊರಿಯಾ, ಸಿಂಗಪೂರ್, ಥೈಲ್ಯಾಂಡ್ ಹಾಗೂ ಮಲೇಶ್ಯಾ ಸ್ಥಾನಗಳಿಸಿವೆ. ಸೋಂಕು ನಿಭಾಯಿಸುವಲ್ಲಿ ಕಳಪೆ ನಿರ್ವಹಣೆ, ವ್ಯವಹಾರಕ್ಕೆ ಸಂಬಂಧಿಸಿದ ಹಲವಾರು ವಿವಾದಗಳು ಹಾಗೂ ಬಹುರೀತಿಯ ವ್ಯವಹಾರ ಸಂಸ್ಥೆಗಳಿಂದ ಹಿಂದೆಸರಿಯುವುದರಿಂದ ಏಷ್ಯಾ–ಫೆಸೆಫಿಕ್ ವಲಯದಲ್ಲಿ ಟ್ರಂಪ್ ಅವರ ಪ್ರಭಾವ ಕುಗ್ಗಿದೆ ಎಂದು ಈ ಅಧ್ಯಯನದ ಮುಖ್ಯ ಸಂಶೋಧಕ ಹೆರ್ವಿ ಲೆಮಾಹೀಯು ಅಭಿಪ್ರಾಯಪಟ್ಟಿದ್ದಾರೆ.

ಅಮೆರಿಕದ ಆರ್ಥಿಕತೆಯು ಕೊರೋನಾ ಪೂರ್ವ ಸ್ಥಿತಿಗೆ ಬರಲು 2024ರವರೆಗೆ ಕಾಯಬೇಕಾಗುತ್ತದೆ. ಆದರೆ ಚೀನಾವು ಸೋಂಕಿನ ಪರಿಸ್ಥಿತಿಯನ್ನು ಸಮರ್ಥವಾಗಿ ನಿಗ್ರಹಿಸಿರುವುದರಿಂದ 2020ರಲ್ಲಿ ಆರ್ಥಿಕವಾಗಿ ಚೇತರಿಸಿಕೊಂಡಿರುವ ಜಗತ್ತಿನ ಏಕೈಕ ದೇಶವಾಗಿದೆ. ಇದರಿಂದ ಮುಂದಿನ ದಶಕಗಳಲ್ಲಿ ನೆರೆಹೊರೆಯ ದೇಶಗಳ ವಿರುದ್ಧ ಚೀನಾ ಸೆಟೆದು ನಿಲ್ಲುವುದಕ್ಕೆ ಅನುಕೂಲವಾಗಲಿದೆ.

ಚೀನಾದ ವೂಹಾನ್ ನಗರದಿಂದ ಸೋಂಕು ಹಬ್ಬಿರುವ ಕುರಿತಂತೆ ವಾದ–ಪ್ರತಿವಾದಗಳಲ್ಲದೆ, ಬೇರೆ ಯಾವುದೇ ಆರೋಪಗಳಿದ್ದರೂ ಸತತ ಮೂರು ವರ್ಷಗಳಲ್ಲಿ ಚೀನಾ ತನ್ನ ಎರಡನೇ ಸ್ಥಾನ ಕಾಯ್ದುಕೊಂಡಿರುವುದು ಇಲ್ಲಿ ಗಮನಾರ್ಹ, ನವೆಂಬರ್‌ನಲ್ಲಿ ಟ್ರಂಪ್ ಪುನರಾಯ್ಕೆಯಾದರೂ ಇದೇ ಟ್ರೆಂಡ್ ಮುಂದುವರೆಯುವುದು, ಅಮೆರಿಕವು ಈ ವಲಯದಲ್ಲಿ ಬಹಳ ಪ್ರಭಾವ ಶಾಲಿಯಾಗಿರುವುದರಿಂದ ಅದನ್ನು ಕೆಳಗಿಳಿಸಲು ಚೀನಾ ಹರಸಾಹಸವನ್ನೇ ಮಾಡಬೇಕಾಗುತ್ತದೆ ಎಂದವರು ಹೇಳಿದ್ದಾರೆ.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:20.10.2020

## 12. ದುಬೈ ಕನ್ನಡ ಶಾಲೆಗೆ 310 ಮಕ್ಕಳು ದಾಖಲು

ದುಬೈನಲ್ಲಿ, 'ಕನ್ನಡ ಮಿತ್ರರು' ಸಂಘಟನೆ ನಡೆಸುತ್ತಿರುವ ಉಚಿತ ಕನ್ನಡ ಶಾಲೆಗೆ, ಈ ವರ್ಷ 310 ಮಕ್ಕಳು ದಾಖಲಾಗಿದ್ದಾರೆ. ಆ ಮೂಲಕ, ಈ ಶಾಲೆಯು ಹೊರನಾಡಿನ ಕನ್ನಡಿಗರು ನಡೆಸುವ ವಿಶ್ವದ ಅತೀ ದೊಡ್ಡ ಕನ್ನಡ ಶಾಲೆ ಎಂಬ ಕೀರ್ತಿಗೆ ಪಾತ್ರವಾಗಿದೆ.

ದುಬೈನಲ್ಲಿ ನೆಲೆಸಿರುವ ಕನ್ನಡಿಗರ ಮಕ್ಕಳು ಅಲ್ಲಿಯ ಶಾಲೆಗಳಲ್ಲಿ ಇಂಗ್ಲೀಷ್, ಅರಬ್ಬಿ, ಪರ್ಷಿಯಾ ಮುಂತಾದ ಭಾಷೆ ಕಲಿಯಬೇಕು. ಮಾತೃಭಾಷೆಯ ಅಭಿಮಾನ ಹೊಂದಿರುವ ಕನ್ನಡಿಗರೆಲ್ಲರೂ ಸೇರಿ 'ಕನ್ನಡ ಮಿತ್ರರು' ಸಂಘಟನೆ ಕಟ್ಟಿಕೊಂಡಿದ್ದು, ಕಳೆದ 6 ವರ್ಷಗಳಿಂದ ಉಚಿತ ಕನ್ನಡ ಶಾಲೆ ನಡೆಸುತ್ತಿದ್ದಾರೆ. ವಾರಾಂತ್ಯದಲ್ಲಿ ನಡೆಯುವ ಈ ಶಾಲೆಯಲ್ಲಿ ಮಕ್ಕಳು ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಹಂತದಲ್ಲಿ ಕನ್ನಡ ಕಲಿಯುತ್ತಾರೆ. 6 ತಿಂಗಳ ಕನ್ನಡ ಕೋರ್ಸ್ ಇದಾಗಿದ್ದು ಕಡೆಯಲ್ಲಿ ಪರೀಕ್ಷೆ ನಡೆಸಲಾಗುತ್ತದೆ. ಕರ್ನಾಟಕ ಕನ್ನಡ ಸಾಧಕರನ್ನು ದುಬೈಗೆ ಆಹ್ವಾನಿಸಿ ಮಕ್ಕಳಿಗೆ ಪ್ರಮಾಣ ಪತ್ರ ವಿತರಣೆ

ಮಾಡಲಾಗುತ್ತದೆ. ಶಿಕ್ಷಣ ಇಲಾಖೆಯ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಶಿಕ್ಷಕರಿಗೆ ತರಬೇತಿ ಕೊಡಿಸಲಾಗಿದ್ದು, ಅವರು ಯಾವುದೇ ವೇತನ ಪಡೆಯದೇ ಪಾಠ ಬೋಧಿಸುತ್ತಿದ್ದಾರೆ.

'ದುಬೈನಲ್ಲಿ ಹೆಚ್ಚು ಕೇರಳಿಗರು ನೆಲೆಸಿದ್ದು ಜನಸಂಖ್ಯೆಯ ಆಧಾರದ ಮೇಲೆ ದುಬೈನ ಶಾಲೆಗಳಲ್ಲಿ ಮಲೆಯಾಳಂ ಭಾಷೆಯನ್ನು ಕಲಿಸುವ ಅವಕಾಶವಿದೆ. ಆದರೆ ಕನ್ನಡಿಗರು ಕಡಿಮೆ ಸಂಖ್ಯೆಯಲ್ಲಿದ್ದು ನಮ್ಮ ಮಕ್ಕಳಿಗೆ ಕನ್ನಡ ಕಲಿಯುವ ಅವಕಾಶವಿಲ್ಲ. ಈ ಶಾಲೆ ನಮ್ಮ ಮಕ್ಕಳ ಕನ್ನಡ ಕಲಿಕೆಯ ದಾಹ ನೀಗಿಸಿದೆ. ಕನ್ನಡ ಬಲ್ಲ ಕಾಸರಗೋಡಿನ ವಲಸಿಗರೂ ತಮ್ಮ ಮಕ್ಕಳಿಗೆ ಕನ್ನಡ ಕಲಿಸುತ್ತಿದ್ದಾರೆ' ಎಂದು ಕನ್ನಡ ಮಿತ್ರರು ಸಂಘಟನೆ ಸಂಚಾಲಕ, ಮಳವಳ್ಳಿ ಮೂಲದ ಎ.ಎನ್.ಭಾನುಕುಮಾರ್ ಹೇಳಿದರು.

2014ರಲ್ಲಿ ಶಾಲೆ ಆರಂಭಗೊಂಡಾಗ 20 ಮಕ್ಕಳು ಸೇರ್ಪಡೆಯಾಗಿದ್ದರು. ನಾಲ್ಕು ವರ್ಷಗಳ ಕಾಲ ಸುತ್ತೂರು ಶ್ರೀಗಳ ಸಹಾಯದಿಂದ ದುಬೈನಲ್ಲಿರುವ ಜೆಎಸ್‌ಎಸ್ ಶಾಲಾ ಕಟ್ಟಡದಲ್ಲಿ ತರಗತಿ ನಡೆಸಲಾಯಿತು. ಈಗ ರಾಜ್ಯಸಭಾ ಸದಸ್ಯ ಪ್ರಭಾಕರ ಕೋರೆ ಅವರ ಸಹಾಯದೊಂದಿಗೆ ಬೇರೊಂದು ಕಟ್ಟಡಕ್ಕೆ ಸ್ಥಳಾಂತರಗೊಂಡಿದೆ. 2019ರಲ್ಲಿ ಮಕ್ಕಳ ಸಂಖ್ಯೆ 220ಕ್ಕೆ ಏರಿಕೆಯಾಗಿತ್ತು. ಕೋವಿಡ್ ಅವಧಿಯಲ್ಲೂ ಈಗ ಮಕ್ಕಳ ದಾಖಲಾತಿ ಸಂಖ್ಯೆ 310ಕ್ಕೆ ಏರಿಕೆಯಾಗಿದೆ.

ವಲಸಿಗರು ತಮ್ಮ ಜನ್ಮಭೂಮಿಯ ಶಾಲೆಗಳಿಗೂ ಸಹಾಯ ಮಾಡಿದ್ದಾರೆ. ಮೈಸೂರು, ಬಳ್ಳಾರಿ, ಕಲಬುರ್ಗಿ, ಚಿತ್ರದುರ್ಗ, ದಾವಣಗೆರೆ ಜಿಲ್ಲೆಯ ಹಲವು ಸರ್ಕಾರಿ ಶಾಲೆಗಳಿಗೆ ಕಂಪ್ಯೂಟರ್, ಲ್ಯಾಪ್‌ಟಾಪ್, ಪ್ರಿಂಟರ್, ಪ್ರೊಜೆಕ್ಟರ್‌ಗಳನ್ನು ದೇಣಿಗೆಯಾಗಿ ನೀಡಿದ್ದಾರೆ.

ಆಧಾರ: ಪ್ರಜಾವಾಣಿ, ದಿನಾಂಕ:01.11.2020

## 13. ಸೇನೆ ವಾಪಸಾತಿಗೆ ಭಾರತ–ಚೀನಾ ಒಪ್ಪಿಗೆ

ಮಹತ್ವದ ಬೆಳವಣಿಗೆಯೊಂದರಲ್ಲಿ ಭಾರತ ಮತ್ತು ಚೀನಾ ದೇಶಗಳು ವಾಸ್ತವ ನಿಯಂತ್ರಣ ರೇಖೆಯಿಂದ ಸೇನೆ ವಾಪಸ್ಸು ತೆಗೆದು ಕೊಳ್ಳಲು ನಿರ್ಧರಿಸಿವೆ. ಈ ಕುರಿತಂತೆ ಸುದ್ದಿಸಂಸ್ಥೆ 'ಎಎನೈ' ವರದಿ ಮಾಡಿದ್ದು ಸೇನೆ ವಾಪಸಾತಿಗಾಗಿ ಮೂರು ಹಂತಗಳ ಪ್ರಕ್ರಿಯೆ ಮಾಡುವ ಬಗ್ಗೆ ನಿರ್ಧರಿಸಲಾಗಿದೆ. ನವೆಂಬರ್ 6ರಂದು ಚುಶುಲ್‌ನಲ್ಲಿ ನಡೆದ 8ನೇ ಹಂತದ ಕಾರ್ಪ್ಸ್ ಕಮಾಂಡರ್‌ಗಳ ಸಭೆಯಲ್ಲಿ ಈ ಬಗ್ಗೆ ತೀರ್ಮಾನಿಸಲಾಗಿದೆ ಎಂದು ಹೇಳಲಾಗಿದೆ. ಪೂರ್ವ ಲಡಾಕ್‌ನಲ್ಲಿರುವ ಪ್ಯಾಂಗಾಂಗ್ ಲೇಕ್ ಬಳಿಯಿಂದ ಎರಡೂ ದೇಶಗಳು ಸೇನೆ ವಾಪಸ್ಸು ಕರೆಸಿಕೊಳ್ಳಬೇಕು. ಏಪ್ರಿಲ್–ಮೇ ಅವಧಿಗಿಂತ ಹಿಂದೆ ಇದ್ದ ಪರಿಸ್ಥಿತಿ ಬರಬೇಕು ಎಂದು ನಿರ್ಧರಿಸಲಾಗಿದೆ ಎಂದು ಹೇಳಲಾಗಿದೆ.

ಈ ಪ್ರಕ್ರಿಯೆ ಮಾತುಕತೆ ನಡೆದ ದಿನದಿಂದ ಒಂದು ವಾರದಲ್ಲೇ ಮುಗಿಯಬೇಕು ಎಂಬ ತೀರ್ಮಾನವನ್ನೂ ತೆಗೆದುಕೊಳ್ಳಲಾಗಿದೆ. ಈ ಅವಧಿಯಲ್ಲಿ ಪ್ಯಾಂಗಾಂಗ್ ಲೇಕ್‌ನಲ್ಲಿರುವ ಶಸ್ತ್ರ ಸಜ್ಜಿತ ಯೋಧರು, ವಾಸ್ತವ ನಿಯಂತ್ರಣ ರೇಖೆಯಿಂದ ದೂರ ಸರಿಯಬೇಕು ಎಂಬ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸದ್ಯದಲ್ಲೇ ಮತ್ತೊಂದು ಸಂಭವವು ಇದೆ.

**ಡ್ರೋಣ್ ಮೂಲಕ ನಿಗಾ:** ಸೇನೆ ವಾಪಸ್ಸು ಕರೆಸಿಕೊಳ್ಳುವ ಪ್ರಕ್ರಿಯೆಯನ್ನು ನಿಗಾ ಇಡುವ ಸಂಬಂಧ ಮಾನವ ರಹಿತ ವಿಮಾನ ವಾಹನ ಬಳಸಿಕೊಳ್ಳಬೇಕು. ಈ ಬಗ್ಗೆ ಜಂಟಿಯಾಗಿ ಕಾರ್ಯಚರಣೆ ಮಾಡಬೇಕು ಎಂಬ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ.

ಚೀನಾ ಜೊತೆಗಿನ ಸಂಘರ್ಷದ ನಡುವೆಯೇ ಭಾರತೀಯ ಸೇನಾ ಮುಖ್ಯಸ್ಥ ಜ.ಮನೋಜ್ ಮುಕುಂದ್ ನರವಾಣೆ ಅವರು ಉತ್ತರಾಖಂಡದಲ್ಲಿರುವ ಎಲ್‌ಎಸಿಗೆ ಭೇಟಿ ನೀಡಿ ಪರಿಸ್ಥಿತಿ ಪರಾಮರ್ಶೆ ನಡೆಸಿದ್ದಾರೆ.

ಆಧಾರ: ಉದಯವಾಣಿ, ದಿನಾಂಕ:12.11.2020

## 14. ಮಹಾಮಾರಿ ಕೊರೋನಾ ಮತ್ತೆ ಉಲ್ಬಣ, ಯೂರೋಪ್ ತಲ್ಲಣ

ನಮ್ಮ ದೇಶ ಹಾಗೂ ರಾಜ್ಯದಲ್ಲಿ ಕೊರೋನಾ ಸೋಂಕಿನ ಪ್ರಕರಣಗಳು ಇಳಿಮುಖವಾಗುತ್ತಿವೆ ಎಂದು ಸರ್ಕಾರ ಹೇಳುತ್ತಿದ್ದು, ಬಹುತೇಕ ನಿರ್ಬಂಧಗಳನ್ನು ತೆಗೆದುಹಾಕಲಾಗುತ್ತಿದೆ. ಮತ್ತೊಂದೆಡೆ ಈ ಚಳಿಗಾಲದಲ್ಲಿ ಮತ್ತೊಂದು ಸುತ್ತಿನ ಸೋಂಕಿನ ಅಲೆ ಏಳಲಿದೆ ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ.

ಆದರೆ ಯೂರೋಪಿನ ಹಲವು ದೇಶಗಳಲ್ಲಿ ಕೊರೋನಾ ಪಿಡುಗು ಮತ್ತೆ ಉಲ್ಬಣಿಸಿದೆ. ಅಲ್ಲಿ ನಿರ್ಬಂಧಗಳನ್ನು ಸಡಿಲಿಸಿ ಸಹಜ ಜನಜೀವನಕ್ಕೆ ಅವಕಾಶ ಮಾಡಿಕೊಟ್ಟ ಬೆನ್ನಲ್ಲೇ ಸೋಂಕಿನ ಪ್ರಮಾಣ ಗಣನೀಯವಾಗಿ ಹೆಚ್ಚಳ ಕಂಡಿದೆ. ಈ ಹಿನ್ನೆಲೆಯಲ್ಲಿ ಅನೇಕ ದೇಶಗಳಲ್ಲಿ ಮತ್ತೆ ನಾನಾ ಬಗೆಯ ನಿರ್ಬಂಧಗಳನ್ನು ಜಾರಿಗೆ ತರಲಾಗಿದೆ. ಮುಖ್ಯವಾಗಿ ಫ್ರಾನ್ಸ್ ಮತ್ತು ಜರ್ಮನಿ ದೇಶಗಳಲ್ಲಿ ಈ ನಿರ್ಬಂಧಗಳನ್ನು ವಿಧಿಸಲಾಗಿದೆ. ಜರ್ಮನಿಯಲ್ಲಿ ರೆಸ್ಟೋರೆಂಟ್ ಮತ್ತು ಬಾರ್‌ಗಳನ್ನು ಬಂದ್ ಮಾಡಲಾಗಿದೆ. ಫ್ರಾನ್ಸ್‌ನಲ್ಲಿ ಕೊರೋನಾ ನಿಯಮಗಳನ್ನು ಮತ್ತೆ ಬಿಗಿಗೊಳಿಸಲಾಗಿದ್ದು, ದೇಶವ್ಯಾಪಿ ಲಾಕ್‌ಡೌನ್ ಬಳಿಕ ಕಳೆದ ನಾಲ್ಕು ತಿಂಗಳ ಕಾಲ ನಿರ್ಬಂಧಗಳನ್ನು ಸಡಿಲಿಸಿ ಕೊರೋನಾ ನಿಯಂತ್ರಿಸಬಹುದೇ ಎಂಬುದನ್ನು ಪ್ರಾಯೋಗಿಕವಾಗಿ ನೋಡಲಾಯಿತು. ಆದರೆ ಇದು ಪ್ರಯೋಜನವಾಗಿಲ್ಲ ಎಂಬುದಕ್ಕೆ ಅಲ್ಲಿ ಹೆಚ್ಚುತ್ತಿರುವ ಸೋಂಕಿನ ಪ್ರಮಾಣ ಹಾಗೂ ಆಸ್ಪತ್ರೆಗೆ ದಾಖಲಾಗುತ್ತಿರುವ ಜನರ ಸಂಖ್ಯೆಯೇ ಸಾಕ್ಷಿ.

ಹಲವಾರು ವಿಧದ ನಿರ್ಬಂಧಗಳನ್ನು ವಿಧಿಸುವ ಅನಿವಾರ್ಯತೆ ಉಂಟಾಗಿದೆ. ಕಳೆದ ಬಾರಿ ಪಶ್ಚಿಮ ಯೂರೋಪಿನ ಬಹುತೇಕ ದೇಶಗಳಲ್ಲಿ ಸಂಚಾರ ನಿರ್ಬಂಧ ವಿಧಿಸಲಾಗಿತ್ತು ವ್ಯಾಪಾರ, ವಹಿವಾಟು ಬಂದ್ ಮಾಡಲಾಗಿತ್ತು. ಆದರೆ ಈ ಸುತ್ತಿನಲ್ಲಿ ಶಾಲೆಗಳು ತೆರೆದಿರುತ್ತವೆ ಹಾಗೂ ಕೆಲವು ಆರ್ಥಿಕ ಚಟುವಟಿಕೆಗಳು ಎಂದಿನಂತಿವೆ.

ದೇಶದಲ್ಲಿ ಮತ್ತೆ ಲಾಕ್‌ಡೌನ್ ಜಾರಿಗೆ ತರದೆ ಬೇರೆ ದಾರಿಯೇ ಇಲ್ಲ, ಎಂದು ಫ್ರಾನ್ಸ್ ಅಧ್ಯಕ್ಷ ಎಮ್ಯಾನ್ಯುಯೆಲ್ ಮ್ಯಾಕ್ರಾನ್ ಅವರು ದೇಶವನ್ನುದ್ದೇಶಿಸಿ ಮಾಡಿದ ಪ್ರಸಾರ ಭಾಷಣದಲ್ಲಿ ಸ್ಪಷ್ಟಪಡಿಸಿದರು. ಕೊರೋನಾ ಪ್ರಕರಣಗಳಲ್ಲಿ ನಿರಂತರ ಹೆಚ್ಚಳ ಮತ್ತು ಆಸ್ಪತ್ರೆಗಳಲ್ಲಿ ಸ್ಥಳಾವಕಾಶದ ಕೊರತೆ ಇರುವುದರಿಂದ ನಮಗಿರುವುದು ಇದೊಂದೇ ಮಾರ್ಗ' ಎಂದು ಅವರು ಹೇಳಿದರು.

ಆಧಾರ:ವಿಶ್ವವಾಣಿ, ದಿನಾಂಕ:30.11.2020

## 15.ವೀಸಾ ಮಿತಿ ಸಡಿಲಿಸಿದ ಅಮೆರಿಕ

ಉದ್ಯೋಗ ವೀಸಾ ನೀಡಿಕೆಯಲ್ಲಿ ಪ್ರತಿ ದೇಶದ ಮೇಲೆ ಹೇರಲಾಗಿದ್ದ ಶೇಕಡ 7ರ ಮಿತಿಯನ್ನು ತೆಗೆದು ಹಾಕುವುದಕ್ಕೆ ಸಂಬಂಧಿಸಿದ ಮಸೂದೆಯೊಂದನ್ನು ಅಮೆರಿಕದ ಸೆನೆಟ್ ಅಂಗೀಕರಿಸಿದೆ. ಕುಟುಂಬ ಆಧರಿತ ವೀಸಾ ಸಂಖ್ಯೆ ಹೆಚ್ಚಳಕ್ಕೂ ಮಸೂದೆ ಸಮ್ಮತಿಸಿದೆ. ಇದು ಅಮೆರಿಕದಲ್ಲಿ ಕೆಲಸ ಮಾಡುತ್ತಿರುವ ಸಾವಿರಾರು ಭಾರತೀಯ ಐಟಿ ಉದ್ಯೋಗಿಗಳ ಬ್ಯಾಕ್‌ಲಾಗ್ ನಿವಾರಣೆಗೆ ನೆರವಾಗಲಿದೆ. ಅವರು ಗ್ರೀನ್ ಕಾರ್ಡ್ ಪಡೆಯಲು ಸಾಧ್ಯವಾಗಲಿದೆ.

'ಉನ್ನತ ಕೌಶಲ ವಲಸಿಗರ ನ್ಯಾಯ ಕಾನೂನು ಮಸೂದೆ'ಯನ್ನು ಅಂಗೀಕರಿಸಲಾಗಿದೆ. ಇದರಿಂದ ವೀಸಾ ಲಭ್ಯತೆಯು ಶೇಕಡ 7ರಿಂದ ಶೇಕಡ 15ಕ್ಕೆ ಏರಿಕೆಯಾಗಲಿದೆ. ಎಚ್1ಬಿ ವೀಸಾದ ಮೇಲೆ ಅಮೆರಿಕಕ್ಕೆ ಆಗಮಿಸಿರುವ ಸಾವಿರಾರು ಭಾರತೀಯ ಐಟಿ ಉದ್ಯೋಗಿಗಳು ಗ್ರೀನ್‌ಕಾರ್ಡ್‌ಗಾಗಿ ಹಲವು ದಶಕಗಳಿಂದ ಕಾಯುತ್ತಿದ್ದಾರೆ. ಗ್ರೀನ್ ಕಾರ್ಡ್ ಪಡೆದರೆ ಅಮೆರಿಕದಲ್ಲಿ ಖಾಯಂ ಆಗಿ ನೆಲೆಸಲು ಅನುಮತಿ ಸಿಗುತ್ತದೆ. 2019ರ ಜುಲೈ 10ರಂದು ಅಮೆರಿಕದ ಹೌಸ್ ಆಫ್ ರೆಪ್ರಸೆಂಟೇಟಿವ್ಸ್ ಈ ಮಸೂದೆಯನ್ನು ಅಂಗೀಕರಿಸಿತ್ತು. ರಿಪಬ್ಲಿಕನ್ ಸೆನೆಟರ್ ಮೈಕ್ ಲೀ ಮಸೂದೆಯನ್ನು ಮಂಡಿಸಿದ್ದರು.

**ಭಾರತ ಐಟಿ ಉದ್ಯಮಕ್ಕೆ ಅನುಕೂಲ:** ಅಮೆರಿಕದ ಹೊಸ ಕಾಯ್ದೆಯಿಂದ ಭಾರತದ ಐಟಿ ಉದ್ಯಮಕ್ಕೆ ಭಾರಿ ಅನುಕೂಲವಾಗಲಿದೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜಾರಿ ಮಾಡಿದ್ದ ಕಠಿಣ ಕಾನೂನುಗಳಿಂದ ಐಟಿ ಉದ್ಯೋಗಿಗಳಿಗೆ ವೀಸಾ ಪಡೆಯುವುದು ಕಠಿಣವಾಗಿತ್ತು. ಎಚ್1ಬಿ ವೀಸಾ ನವೀಕರಣಕ್ಕೂ ಸಮಸ್ಯೆ ಉಂಟಾಗಿತ್ತು. ಭಾರತೀಯರು ಅಮೆರಿಕದ ಗ್ರೀನ್ ಕಾರ್ಡ್ ಪಡೆಯಲು ದಶಕಗಳ ಕಾಲ ಕಾಯಬೇಕಿತ್ತು. ಈಗ ಈ ಸಮಸ್ಯೆಗಳು ಸ್ವಲ್ಪ ಮಟ್ಟಿಗೆ ನಿವಾರಣೆ ಆಗಲಿವೆ.

**ಕಾಯ್ದೆಯ ಪ್ರಮುಖಾಂಶ:–**

- ಗರಿಷ್ಠ ಶೇ. 7ಕ್ಕೆ ಮಿತಿ ಸಡಿಲಿಕೆ
- ವೀಸಾ ಪ್ರಮಾಣ ಶೇ.15ಕ್ಕೆ ಏರಿಕೆ
- ಸಾವಿರಾರು ಭಾರತೀಯ ಐಟಿ ನೌಕರರಿಗೆ ಅನುಕೂಲ

ಆಧಾರ: ವಿಜಯವಾಣಿ, ದಿನಾಂಕ:04.12.2020.

# ಭಾಗ–9

# ಪ್ರಶಸ್ತಿಗಳು

## 1. 15 ಪ್ರಶಸ್ತಿಗಳೊಂದಿಗೆ ಕರ್ನಾಟಕಕ್ಕೆ ಅಗ್ರಸ್ಥಾನ

ರಾಷ್ಟ್ರೀಯ ನವೋದ್ಯಮ ಪ್ರಶಸ್ತಿಗಳಿಗಾಗಿ 'ನವೋದ್ಯಮ ಭಾರತ' ವತಿಯಿಂದ ಇತ್ತೀಚೆಗೆ ನಡೆಸಲಾದ ಸ್ಪರ್ಧೆಯಲ್ಲಿ ಕರ್ನಾಟಕದ ನವೋದ್ಯಮಗಳು ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ತಮ್ಮದಾಗಿಸಿಕೊಂಡಿವೆ ಎಂದು ಐಟಿ–ಬಿಟಿ ಸಚಿವರು ಆದ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ಸ್ಪರ್ಧೆಯಲ್ಲಿ ಕರ್ನಾಟಕ ರಾಜ್ಯದಿಂದ ಅತ್ಯಧಿಕ ಅರ್ಜಿಗಳು ಸಲ್ಲಿಕೆಯಾಗುವ ಜೊತೆಗೆ ಪ್ರಶಸ್ತಿಗಳೂ ಲಭಿಸಿವೆ. ರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳಿಗೆ ಪಾತ್ರವಾಗಿರುವ 36 ನವೋದ್ಯಮಗಳ ಪೈಕಿ ಕರ್ನಾಟಕ ರಾಜ್ಯದ 14 ನವೋದ್ಯಮಗಳು, 1 ವೇಗವರ್ಧಕ (ಆಕ್ಸಲರೇಟರ್) ಕರ್ನಾಟಕ ರಾಜ್ಯಕ್ಕೆ ಸೇರಿದ್ದಾಗಿದೆ ಎಂದು ಹೇಳಿದರು.

ಈ ಸ್ಪರ್ಧೆಗೆ ದೇಶದಾದ್ಯಂತ ಇರುವ ನವೋದ್ಯಮಗಳಿಂದ ಸಲ್ಲಿಕೆಯಾಗಿದ್ದ 1,641 ಅರ್ಜಿಗಳ ಪೈಕಿ 418 ಅರ್ಜಿಗಳು ಕರ್ನಾಟಕ ರಾಜ್ಯದಿಂದ ಸಲ್ಲಿಕೆಯಾಗಿದ್ದವು. ಇದು ಒಟ್ಟಾರೆ ಸಲ್ಲಿಕೆಯಾದ ಅರ್ಜಿಗಳ ಪೈಕಿ ಶೇ. 26ರಷ್ಟಿರುವುದು ಗಮನಾರ್ಹ ಅಂಶ. ಕೃಷಿ, ಶಿಕ್ಷಣ, ಇಂಧನ, ಉದ್ದಿಮೆ ತಾಂತ್ರಿಕತೆಗಳು, ಆರೋಗ್ಯ, ಬಾಹ್ಯಾಕಾಶ, ಪ್ರವಾಸೋದ್ಯಮ, ನಗರ ಸೇವೆಗಳು ಸೇರಿದಂತೆ ಇತ್ಯಾದಿ ವಲಯಗಳಲ್ಲಿ ಹೆಚ್ಚಿನ ಸಂಖ್ಯೆಯ ಅರ್ಜಿಗಳು ಸಲ್ಲಿಕೆಯಾಗಿದ್ದವು ಎಂದು ವಿವರಿಸಿದರು.

ಈಗ ರಾಷ್ಟ್ರೀಯ ಮಟ್ಟದಲ್ಲಿ ವಿಜೇತರಾಗಿರುವ 14 ಉದ್ಯಮಗಳ ಪೈಕಿ 11 ನವೋದ್ಯಮಗಳು ಕರ್ನಾಟಕ ನವೋದ್ಯಮ ಕೋಶದಿಂದ ನಡೆಸಲಾಗಿದ್ದ ಎಲಿವೇಟ್/ಐಡಿಯಾ 2ಪಿಒಸಿ ಅನುದಾನ ಕಾರ್ಯಕ್ರಮಗಲ್ಲಿ ಗಮನ ಸೆಳೆದು ಜಯಗಳಿಸಿದ್ದವು ಎಂದು ತಿಳಿಸಿದರು.

ರಾಷ್ಟ್ರೀಯ ಆಹ್ವಾನಕ್ಕೆ ಸ್ಪಂದಿಸಿ ಕರ್ನಾಟಕ ಸರ್ಕಾರದ ಪರಿಪೋಷಕಗಳು (ಇನ್ ಕ್ಯುಬೇಟರ್ಸ್), ಹೊಸ ತಲೆಮಾರಿನ ಪರಿಪೋಷಣಾ ಜಾಲ (ನೈನ್) ಸಂಸ್ಥೆಗಳು, ಉತ್ಕೃಷ್ಟತಾ ಕೇಂದ್ರಗಳು ಮತ್ತು ತಾಂತ್ರಿಕ ವ್ಯಾಪಾರೋದ್ಯಮ ಪರಿಪೋಷಕಗಳ (ಟಿಬಿಐ) ಮೂಲಕ ವೆಬಿನಾರ್ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದು ರಾಜ್ಯದಿಂದ ಹೆಚ್ಚಿನ ಪ್ರಮಾಣದಲ್ಲಿ ಅರ್ಜಿ ಸಲ್ಲಿಸಲು ಕಾರಣವಾಯಿತು ಎಂದು ಹೇಳಿದರು.

ಆಧಾರ: ಉದಯವಾಣಿ, ದಿನಾಂಕ:08.10.2020

## 2. ಬೆಂಗಳೂರಿನ ಬಾಲಕನಿಗೆ ಅಂತರರಾಷ್ಟ್ರೀಯ ಪ್ರಶಸ್ತಿ

ಅಂತರರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ನ್ಯಾಚುರಲ್ ಹಿಸ್ಟರಿ ಮ್ಯೂಸಿಯಮ್‌ನಿಂದ (ಅ.14) ಆಯೋಜಿಸಲಾಗಿದ್ದ 2020 ವನ್ಯಜೀವಿ ಛಾಯಾಗ್ರಾಹಕ ಪ್ರಶಸ್ತಿ ಆಸ್ಕರ್ ಆಫ್ ವೈಲ್ಡ್‌ಲೈಫ್ ಫೋಟೋಗ್ರಾಫಿಗೆ ಬೆಂಗಳೂರಿನ 9 ವರ್ಷದ ಪ್ರತಿಭಾವಂತ ಬಾಲಕ ವಿದ್ಯುನ್ ಆರ್.ಹೆಬ್ಬಾರ್ ಪಾತ್ರನಾಗಿದ್ದು, ಆನ್‌ಲೈನ್ ಮೂಲಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬೆಂಗಳೂರಿನ ಬಿಜಿಎಸ್ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನಲ್ಲಿ ನಾಲ್ಕನೇ ತರಗತಿ ಓದುತ್ತಿರುವ ವಿದ್ಯುನ್ ಹೆಬ್ಬಾರ್ ತೆಗೆದಿರುವ ಜೇಡರ ಬಲೆಯ ಸಿಟಿ ಸಿಗ್ನೇಚರ್ ಚಿತ್ರ ಈ ಅಂತರರಾಷ್ಟ್ರೀಯ ಪ್ರಶಸ್ತಿಗೆ ಪಾತ್ರವಾಗಿದೆ. ಈ ಚಿತ್ರವು ರನ್ನರ್ ಅಪ್ ಸ್ಥಾನ ಪಡೆದಿದೆ.

ಆಧಾರ: ವಿಶ್ವವಾಣಿ, ದಿನಾಂಕ:15.10.2020

## 3. ಕೆಎಸ್‌ಆರ್‌ಟಿಸಿಗೆ ಪ್ರಶಸ್ತಿ

ಕೆಎಸ್‌ಆರ್‌ಟಿಸಿಯ ಉಪಕ್ರಮಗಳಾದ ಸ್ತ್ರೀಶೌಚಾಲಯ ಮತ್ತು ಮೊಬೈಲ್ ಫೀವರ್ ಕ್ಲಿನಿಕ್‌ಗಳಿಗೆ ರಾಷ್ಟ್ರೀಯ ಸಾರ್ವಜನಿಕ ಉದ್ದಿಮೆಗಳ ಅತ್ಯುತ್ತಮ ಪ್ರಶಸ್ತಿ ಸಮಾಜದ ಅಭಿವೃದ್ಧಿಗಾಗಿ ಸಾಮಾಜಿಕ ಕಳಕಳಿ ವರ್ಗದಲ್ಲಿ ಲಭಿಸಿದೆ.

ವರ್ಚುವಲ್ ಸಮ್ಮೇಳನದಲ್ಲಿ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ.ಕಳಸದ ಅವರು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿ, ಕೊರೋನಾ ಪರಿಸ್ಥಿತಿಯಲ್ಲೂ ನಮ್ಮ ಸಿಬ್ಬಂದಿ ಕೊರೋನಾ ವಾರಿಯರ್ಸ್‌ಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ನಮ್ಮ ಸಿಬ್ಬಂದಿಗೆ ಹಾಗೂ ಸೋಂಕಿನಿಂದ ತಮ್ಮ ಪ್ರಾಣ ಕಳೆದುಕೊಂಡ ಸಿಬ್ಬಂದಿ ಹಾಗೂ ಅವರ ಕುಟುಂಬದವರಿಗೆ ಈ ಪ್ರಶಸ್ತಿಯನ್ನು ಸಮರ್ಪಿಸುತ್ತೇನೆ.

ನಮ್ಮ ಸಾರಿಗೆ ನಿಗಮವು ಅತ್ಯಂತ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾಗ್ಯೂ ನಾವು ನಮ್ಮ ಕಾರ್ಯದಿಂದ ವಿಮುಖರಾಗದೆ ಎಂದಿನಂತೆ ಶ್ರಮ ವಹಿಸಿ ಕಾರ್ಯನಿರ್ವಹಿಸಿರುವುದರಿಂದ ಈ ಪ್ರಶಸ್ತಿ ಸಿಕ್ಕಿದೆ. ಪ್ರಶಸ್ತಿ ಪುರಸ್ಕಾರಗಳು ನಮ್ಮ ಜವಾಬ್ದಾರಿಯನ್ನು ಹೆಚ್ಚಿಸುವುದರ ಜೊತೆಗೆ ಸಾಮಾಜಿಕ ಬದ್ಧತೆಯಿಂದ ಇನ್ನೂ ಹೆಚ್ಚಿನ ಮಟ್ಟದಲ್ಲಿ ಕಾರ್ಯನಿರ್ವಹಿಸಲು ಪ್ರೋತ್ಸಾಹಿಸುತ್ತದೆ.

ಸ್ತ್ರೀ ಶೌಚಾಲಯ ಮತ್ತು ಮೊಬೈಲ್ ಫೀವರ್ ಕ್ಲಿನಿಕ್ ಈ ಎರಡೂ ಉಪಕ್ರಮಗಳನ್ನು ನಿಗಮದ ಅನುಪಯುಕ್ತ ಬಸ್ಸನ್ನು ಉಪಯೋಗಿಸಿಕೊಂಡು ನಿರ್ಮಿಸಿದ್ದು, ರಾಷ್ಟ್ರೀಯ ಮಟ್ಟದಲ್ಲಿ ಸದರಿ ಉಪಕ್ರಮಗಳ ಬಗ್ಗೆ ಒಳ್ಳೆಯ ಅಭಿಪ್ರಾಯ ಹಾಗೂ ಮಾನ್ಯತೆ ದೊರಕಿರುವುದು ಸಂತಸದ ಸಂಗತಿ. ಸಮ್ಮೇಳನದಲ್ಲಿ ಈ ಉಪಕ್ರಮಗಳ ನಿರ್ಮಾಣ, ವೆಚ್ಚ, ಉಪಯೋಗ, ಕಾರ್ಯನಿರ್ವಹಣೆ ಬಗ್ಗೆ ಮಾಹಿತಿ ವಿನಿಮಯ ಮಾಡಿಕೊಳ್ಳಲಾಯಿತು ಎಂದು ತಿಳಿಸಿದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:15.10.2020

## 4. ನರಸಿಂಗ್ ಹುಣಜೆಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ

ನರಸಿಂಗ್ ಹುಣಜೆ ಭಾಲ್ಕಿ ಫಿಲಂ ಪ್ರೊಡಕ್ಷನ್ ಅಡಿಯಲ್ಲಿ ನಟಿಸಿ ನಿರ್ದೇಶಿಸಿರುವ, ಸೆಪ್ಟೆಂಬರ್ 2018ರಲ್ಲಿ ಬಿಡುಗಡೆಯಾದ 'ಬಿಂದಾಸ್ ಜೀವನ' ಮರಾಠಿ ಚಲನಚಿತ್ರಕ್ಕೆ 11ನೇ ದಾದಾಸಾಹೇಬ್ ಫಾಲ್ಕೆ ಗೋಲ್ಡನ್ ಕ್ಯಾಮೆರಾ ಅವಾರ್ಡ್ 2019ರ ಬೆಸ್ಟ್ ಡಿಬೆಟ್ ಡೈರೆಕ್ಟರ್ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಮುಂಬೈನಲ್ಲಿ ನಡೆದ ಪ್ರಶಸ್ತಿ ಪುರಸ್ಕಾರ ಸಮಾರಂಭದಲ್ಲಿ ದಾದಾಸಾಹೇಬ್ ಫಾಲ್ಕೆ ಗೋಲ್ಡನ್ ಕ್ಯಾಮೆರಾ ಅವಾರ್ಡ್ 2019ರ ಅಧ್ಯಕ್ಷ ಮುಕೇಶ ಕನ್ಹೇರಿ ಅವರು ಪ್ರಶಸ್ತಿ ಪತ್ರ ನೀಡಿ ಗೌರವಿಸಿದ್ದಾರೆ.

ಆಧಾರ: ಉದಯವಾಣಿ, ದಿನಾಂಕ:17.10.2020

## 5. ರಾಜ್ಯದ 65 ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ಗರಿ

ರಾಜ್ಯ ಸರ್ಕಾರ ಪ್ರತಿ ವರ್ಷ ನೀಡುವ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪ್ರಕಟಗೊಂಡಿದ್ದು, 65 ಸಾಧಕರನ್ನು ಪ್ರಶಸ್ತಿಗೆ ಗುರುತಿಸಲಾಗಿದೆ. ಅದರಲ್ಲೂ ಮಾಗಿದ ಎಲೆಮರೆ ಸಾಧಕರಿಗೆ ಆದ್ಯತೆ ನೀಡಿರುವುದು ಈ ಬಾರಿಯ ವಿಶೇಷ. ಸುಪ್ರೀಂಕೋರ್ಟ್ ವಕೀಲ ಕೆ.ಎನ್.ಭಟ್, ವಿಜ್ಞಾನಿ ಪ್ರೊ.ಉಡುಪ ಶ್ರೀನಿವಾಸ, ಕಬಡ್ಡಿ ಆಟಗಾರ್ತಿ ಉಷಾರಾಣಿ ಮುಂತಾದವರು ಪುರಸ್ಕೃತ ಪಟ್ಟಿಯಲ್ಲಿದ್ದಾರೆ. ಧರ್ಮಸ್ಥಳದ ಧರ್ಮೋತ್ಥಾನ ಟ್ರಸ್ಟ್, ಬಳ್ಳಾರಿ ದೇವದಾಸಿ ಸ್ವಾವಲಂಬನ ಕೇಂದ್ರ ಸೇರಿ ಐದು ಸಂಸ್ಥೆಗಳಿಗೆ ಪ್ರಶಸ್ತಿ ಸಂದಿದೆ.

ಈ ಬಾರಿ ಅರ್ಜಿ ಹಾಕದ ಶೇ.30 ಮಂದಿಗೆ ಪ್ರಶಸ್ತಿ ಲಭಿಸಿರುವುದು ಅಚ್ಚರಿಯೇ ಸರಿ. ಸಾಮಾಜಿಕ ನ್ಯಾಯ ಪರಿಪಾಲನೆ, ಪ್ರತಿ ಜಿಲ್ಲೆಗೂ ಆದ್ಯತೆ, 60 ವರ್ಷಕ್ಕೆ ಮೀರಿದವರನ್ನೇ ಆಯ್ಕೆ ಮಾಡುವುದು

ಸೇರಿದಂತೆ ಆದಷ್ಟು ಗೊಂದಲ ಮೂಡದಂತೆ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಪಟ್ಟಿ ಸಿದ್ಧಪಡಿಸುವಲ್ಲಿ ಆಯ್ಕೆ ಸಮಿತಿ ಹರಸಾಹಸಪಟ್ಟು, ತಕ್ಕಮಟ್ಟಿಗೆ ಯಶಸ್ಸು ಸಾಧಿಸಿದೆ.

ಜೊತೆಗೆ ಸಮಾಜದಲ್ಲಿ ಯುವಕರನ್ನು ಜೋಡಿಸಿ ಕೆಲಸ ಮಾಡುತ್ತಿರುವ ಸಂಘಟನೆಗಳನ್ನು ಗುರುತಿಸಿ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡುವ ಮೂಲಕ ಆ ಸಂಘಟನೆಗಳಿಗೆ ಇನ್ನೊಂದಷ್ಟು ಹೊಣೆಗಾರಿಕೆ ಹೆಚ್ಚಿಸಲಾಗಿದೆ. ಪ್ರಶಸ್ತಿಗಾಗಿ ಒಟ್ಟು 1788 ಅರ್ಜಿಗಳು ಸಲ್ಲಿಕೆಯಾಗಿದ್ದವು. ಇದರಲ್ಲಿ ಬಹುಪಾಲು ಬೆಂಗಳೂರಿನಿಂದಲೇ ಬಂದಿತ್ತು. ಇದನ್ನು 65ಕ್ಕೆ ಇಳಿಸಲಾಗಿದೆ. ಈಗ ಆಯ್ಕೆಯಾದವರ ಪೈಕಿ ಶೇ.30 ಹೆಸರನ್ನು ಸರ್ಕಾರ ತಾನೇ ಹುಡುಕಿ, ಶೋಧಿಸಿ, ಸೋಸಿ ಅಚ್ಚರಿ ಮೂಡಿಸಿದೆ. ಹಾಗೆಯೇ, ಜಾತಿ ಸಮೀಕರಣಕ್ಕೆ ಒತ್ತು ನೀಡಿ ಹಳಿತಪ್ಪದಂತೆ ಎಚ್ಚರಿಕೆ ವಹಿಸಲಾಗಿದೆ.

ಪ್ರತಿವರ್ಷ ರಾಜ್ಯೋತ್ಸವ ಪಟ್ಟಿ ಪ್ರಕಟವಾಗುತ್ತಿದ್ದಂತೆ ಒಂದಷ್ಟು ಅಸಮಾಧಾನದ ಕಿಡಿಹೊತ್ತಿಕೊಳ್ಳುತ್ತಿತ್ತು. ಪ್ರಾದೇಶಿಕ ಅಸಮಾನತೆ, ಜಿಲ್ಲಾ ಪ್ರಾತಿನಿಧ್ಯದ ಕೊರತೆ ಬಗ್ಗೆ ಟೀಕೆ ಕೇಳಿ ಬರುತ್ತಿತ್ತು. ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿತ್ತು. ಬಳಿಕ ನ್ಯಾಯಾಲಯ ಸರ್ಕಾರದಿಂದ ಮಾರ್ಗಸೂಚಿ ಪಡೆದು, ಅದರ ಪ್ರಕಾರವೇ ನಡೆಯುವಂತೆ ಚೌಕಟ್ಟು ರೂಪಿಸಿಕೊಟ್ಟಿದ್ದು ಅದರಂತೆಯೇ ಪಾಲನೆಯಾಗಿರುವುದು ಕಂಡುಬಂದಿದೆ.

ಪ್ರತಿಭಾಸಂಪನ್ನರಾದವರನ್ನು ಪ್ರಾದೇಶಿಕ, ಸಾಮಾಜಿಕ, ಹಾಗೂ ನ್ಯಾಯದೊಡನೆ ಪಾರದರ್ಶಕವಾಗಿ ಆಯ್ಕೆ ಮಾಡಬೇಕೆಂಬ ಸಂದೇಶ ಸಮಿತಿಗೆ ಸರ್ಕಾರದ ಕಡೆಯಿಂದ ಪದೇ ಪದೇ ಇತ್ತೆಂಬುದು ವಿಶೇಷ.

ಅಂತಿಮವಾಗಿ ಅಂದುಕೊಂಡಂತೆ ಸಾಮಾಜಿಕ ನ್ಯಾಯ, ಜಿಲ್ಲಾ ಪ್ರಾತಿನಿಧ್ಯ, ಕ್ಷೇತ್ರವಾರು ಪ್ರಾತಿನಿಧ್ಯಕ್ಕೆ ಸಮಾನ ಅವಕಾಶ ನೀಡಲಾಗಿದೆ. ಕೃಷಿ–3, ಕ್ರೀಡೆ–2, ಚಲನಚಿತ್ರ–2, ಚಿತ್ರಕಲೆ–1, ಜನಪದ–3, ನ್ಯಾಯಾಂಗ–2, ನೃತ್ಯ–1, ಪರಿಸರ–2, ಬಯಲಾಟ–2, ಮಾಧ್ಯಮ–2, ಯಕ್ಷಗಾನ–2, ಯೋಗ–1, ರಂಗಭೂಮಿ–3, ವಿಜ್ಞಾನ–ತಂತ್ರಜ್ಞಾನ–2, ವೈದ್ಯಕೀಯ–4, ಶಿಕ್ಷಣ–6, ಶಿಲ್ಪಕಲೆ–1, ಸಂಕೀರ್ಣ–4, ಸಂಗೀತ–5, ಸಂಘ–ಸಂಸ್ಥೆ–5, ಸಮಾಜ ಸೇವೆ–4, ಸಹಕಾರ–1, ಸಾಹಿತ್ಯ–5, ಹೊರನಾಡ ಕನ್ನಡಿಗ–2, ವಿಶೇಷ ಚೇತನ–2 ಸೇರಿದಂತೆ 65 ಮಂದಿಯನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಜಿಲ್ಲಾವಾರು ಗಮನಿಸಿದರೆ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗೆ 5, ಬೆಂಗಳೂರು ನಗರಕ್ಕೆ 7, ಚಿಕ್ಕಮಗಳೂರು, ಮೈಸೂರು, ಶಿವಮೊಗ್ಗಕ್ಕೆ ತಲಾ ಮೂರು ಪ್ರಶಸ್ತಿ ಸಂದಿವೆ. ಉಳಿದಂತೆ ಯಾವುದೇ ಜಿಲ್ಲೆಗಳು ಪ್ರಶಸ್ತಿಯಿಂದ ವಂಚಿತವಾಗದಂತೆ ನೋಡಿಕೊಳ್ಳಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಸಿ.ಟಿ.ರವಿ, 65ನೇ ರಾಜ್ಯೋತ್ಸವ ಪ್ರಯುಕ್ತ ಸುದ್ದಿಗೋಷ್ಠಿಯಲ್ಲಿ ಪ್ರಶಸ್ತಿ ಪಟ್ಟಿ ಪ್ರಕಟಿಸಿದರು. ಅರ್ಜಿ ಸಲ್ಲಿಸದ ಸಾಧಕರನ್ನು ಪರಿಗಣಿಸಲಾಗಿದೆ. ಸಾಮಾಜಿಕ ಮತ್ತು ಪ್ರಾದೇಶಿಕ ನ್ಯಾಯ ಸಲ್ಲಿಸುವಾಗ ಕೆಲವು ಸಾಧಕರಿಗೆ ಪ್ರಶಸ್ತಿ ಸಿಗಬಹುದು. ಅರ್ಹತೆ ಜೊತೆ ಸಾಮಾಜಿಕ ನ್ಯಾಯದಡಿ, ವೈವಿಧ್ಯತೆ, ಎಲ್ಲಾ ಸಮುದಾಯದ ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡಲಾಗುತ್ತಿದ್ದು, ರಾಜ್ಯದ ಎಲ್ಲ ಜಿಲ್ಲೆಗಳನ್ನು ಪರಿಗಣಿಸಲಾಗಿದೆ. ವಿಶೇಷ ಸಾಧನೆ ಮಾಡಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಅಧಿಕೃತ ಪ್ರಶಸ್ತಿಯನ್ನು ಪಡೆದವರನ್ನು ಹೊರತುಪಡಿಸಿ ಉಳಿದವರಿಗೆ ವಯೋಮಿತಿ 60 ಅನ್ನು ಮೀರಿರಬೇಕು ಎಂಬ ನಿಯಮ ಹಾಕಿಕೊಳ್ಳಲಾಗಿತ್ತು. ಕ್ರೀಡೆ ಹೊರತುಪಡಿಸಿ ಉಳಿದವರಿಗೆ 60ರ ವಯೋಮಿತಿ ದಾಟಿದೆ ಎಂದು ದೃಢಪಡಿಸಿಕೊಂಡಿದ್ದೇವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, ಸಲಹಾ ಸಮಿತಿ ಸದಸ್ಯರಾದ ಡಾ.ವಾಮನಾಚಾರ್ಯ, ಸಾಹಿತಿ ದೊಡ್ಡರಂಗೇಗೌಡ, ಇಲಾಖೆಯ ಕಾರ್ಯದರ್ಶಿ ರಶ್ಮಿ ಮಹೇಶ್, ನಿರ್ದೇಶಕ ರಂಗಪ್ಪ ಮತ್ತಿತರರು ಉಪಸ್ಥಿತರಿದ್ದರು.

ಆಧಾರ: ವಿಜಯವಾಣಿ, ದಿನಾಂಕ:29.10.2020

## 6. ರಾಜ್ಯದ ಪ್ರತಿಷ್ಠಿತ ಕ್ರೀಡಾಪ್ರಶಸ್ತಿ ಪ್ರದಾನ

ಮೂರು ವರ್ಷಗಳಿಂದ ಬಾಕಿ ಉಳಿದಿದ್ದ ರಾಜ್ಯದ ಪ್ರತಿಷ್ಠಿತ ಕ್ರೀಡಾ ಪ್ರಶಸ್ತಿಗಳಾದ ಏಕಲವ್ಯ, ಕರ್ನಾಟಕ ಕ್ರೀಡಾರತ್ನ, ಜೀವಮಾನ ಸಾಧನೆ ಹಾಗೂ ಕ್ರೀಡಾಪೋಷಕ ಪ್ರಶಸ್ತಿಗಳನ್ನು ರಾಜ್ಯ ಕ್ರೀಡಾ ಸಚಿವ ಸಿ.ಟಿ.ರವಿ ಬಿಡುಗಡೆಗೊಳಿಸಿದರು. ಅವರು 2017, 2018, 2019ನೇ ಸಾಲಿನ ಪ್ರಶಸ್ತಿಗಳನ್ನು ಒಮ್ಮೆಗೆ ಪ್ರಕಟಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏಕಲವ್ಯ ಪ್ರಶಸ್ತಿಗೆ 2017ನೇ ಸಾಲಿನಲ್ಲಿ 14 ಜನ, 2018ನೇ ಸಾಲಿನಲ್ಲಿ 9 ಮತ್ತು 2019ನೇ ಸಾಲಿನಲ್ಲಿ 8 ಮಂದಿ ಕ್ರೀಡಾಪಟುಗಳು ಸೇರಿ 31 ಜನರನ್ನು ಆಯ್ಕೆ ಮಾಡಲಾಗಿದೆ. ಜೀವಮಾನ ಸಾಧನೆ ಪ್ರಶಸ್ತಿಗೆ 2017ನೇ ಸಾಲಿನಲ್ಲಿ ಇಬ್ಬರು, 2018ನೇ ಸಾಲಿನಲ್ಲಿ ಇಬ್ಬರು, 2019ನೇ ಸಾಲಿನಲ್ಲಿ ಇಬ್ಬರು ಸೇರಿದಂತೆ 6 ಜನರನ್ನು ಆಯ್ಕೆ ಮಾಡಲಾಗಿದೆ ಎಂದರು.

ಮಹತ್ವದ ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿಗೆ 2017 ನೇ ಸಾಲಿನಲ್ಲಿ 11, 2018ನೇ ಸಾಲಿನಲ್ಲಿ 7 ಮತ್ತು 2019ನೇ ಸಾಲಿನಲ್ಲಿ 9 ಜನ ಸೇರಿ 27 ಕ್ರೀಡಾಪಟುಗಳನ್ನು ಆಯ್ಕೆ ಮಾಡಲಾಗಿದೆ. ಕ್ರೀಡಾಪೋಷಕ ಪ್ರಶಸ್ತಿಗೆ 2017ನೇ ಸಾಲಿನಲ್ಲಿ 2 ಸಂಸ್ಥೆ, 2018ನೇ ಸಾಲಿನಲ್ಲಿ 1 ಸಂಸ್ಥೆ ಮತ್ತು 2019ನೇ ಸಾಲಿನಲ್ಲಿ 2 ಸಂಸ್ಥೆ ಸೇರಿ 5 ಸಂಸ್ಥೆಗಳು ಆಯ್ಕೆಯಾಗಿವೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ನವೆಂಬರ್ 2ರಂದು ವಿಧಾನಸೌಧ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆಯುವ ಸಮಾರಂಭದಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕೇಂದ್ರ ಸಚಿವರಾದ ಡಿ.ವಿ.ಸದಾನಂದಗೌಡ, ನಿರ್ಮಲಾ ಸೀತಾರಾಮನ್, ಮಾಜಿ ಪ್ರಧಾನಿ ಎಚ್.ಡಿ.ದೇವೆಗೌಡ ಉಪಸ್ಥಿತರಿರುವರು. ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ, ಡಾ. ಸಿ.ಎನ್.ಅಶ್ವತ್ಥನಾರಾಯಣ, ಲಕ್ಷ್ಮಣ ಸವದಿ, ಸಚಿವರಾದ ಆರ್.ಅಶೋಕ್, ಎಸ್.ಸುರೇಶ್‌ಕುಮಾರ್, ವಿ.ಸೋಮಣ್ಣ, ಎಸ್.ಟಿ.ಸೋಮಶೇಖರ್, ಭೈರತಿ ಬಸವರಾಜ್ ಸೇರಿದಂತೆ ಅನೇಕರು ಭಾಗವಹಿಸಲಿದ್ದಾರೆ.

**ಪ್ರಶಸ್ತಿಯಲ್ಲಿನ ವಿವರ:–** ಏಕಲವ್ಯ ಪ್ರಶಸ್ತಿ ಹಿರಿಯ ಕ್ರೀಡಾಪಟುಗಳು ಮತ್ತು ತರಬೇತುದಾರರ ಜೀವಮಾನ ಸಾಧನೆ ಪ್ರಶಸ್ತಿಯನ್ನು 1992 ರಿಂದ ನೀಡಲಾಗುತ್ತಿದೆ. ಏಕಲವ್ಯ ಪ್ರಶಸ್ತಿಯಲ್ಲಿ ಏಕಲವ್ಯನ ಕಂಚಿನ ಪ್ರತಿಮೆ, ಸ್ಕ್ರಾಲ್, ಸಮವಸ್ತ್ರ ಮತ್ತು ರೂ. 2 ಲಕ್ಷ ನಗದು ಬಹುಮಾನ ಇರುತ್ತದೆ. ಜೀವಮಾನ ಸಾಧನೆ ಪ್ರಶಸ್ತಿಯಲ್ಲಿ ಪ್ರಶಸ್ತಿ ಫಲಕ, ಸಮವಸ್ತ್ರ ರೂ 1.50 ಲಕ್ಷ ಇರಲಿದೆ. ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ ವಿಜೇತರಿಗೆ ಪ್ರಶಸ್ತಿ ಫಲಕ, ಸ್ಕ್ರಾಲ್, ಸಮವಸ್ತ್ರ ಮತ್ತು ರೂ. 1 ಲಕ್ಷ ನಗದು ಬಹುಮಾನ ನೀಡಲಾಗುವುದು. ಕ್ರೀಡಾ ಕ್ಷೇತ್ರಕ್ಕೆ ಕೊಡುಗೆ ನೀಡುತ್ತಿರುವ ಸಂಸ್ಥೆಗಳಿಗೆ ನೀಡಲಾಗುವ ಕ್ರೀಡಾಪೋಷಕ ಪ್ರಶಸ್ತಿಯಲ್ಲಿ ಪ್ರಶಸ್ತಿ ಪತ್ರ ಮತ್ತು ರೂ. 5 ಲಕ್ಷ ನಗದು ಬಹುಮಾನ ಇರಲಿದೆ.

ಆಧಾರ: ಉದಯವಾಣಿ, ದಿನಾಂಕ:02.11.2020

## 7. 2028 ಒಲಿಂಪಿಕ್ಸ್‌ನಲ್ಲಿ ದೇಶದ ಕೀರ್ತಿಪಾತಕೆ ಹಾರಿಸಿ: ಸಿಎಂ

ಕ್ರೀಡಾಪಟುಗಳು 2028ರಲ್ಲಿ ಲಾಸ್ ಎಂಜಲೀಸ್‌ನಲ್ಲಿ ನಡೆಯುವ ಒಲಿಂಪಿಕ್ಸ್‌ನಲ್ಲಿ ಭಾರತದ ಕೀರ್ತಿ ಪತಾಕೆಯನ್ನು ಹಾರಿಸಬೇಕು ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಹೇಳಿದ್ದಾರೆ.

2017, 18 ಹಾಗೂ 19ನೇ ಸಾಲಿನ ಏಕಲವ್ಯ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಏಕಲವ್ಯ ಎಂದಾಕ್ಷಣ ನೆನಪಾಗುವುದು ಗುರುದಕ್ಷಿಣೆಯಾಗಿ ತನ್ನ ಹೆಬ್ಬೆರಳನ್ನೇ ನೀಡಿದ ಶ್ರೇಷ್ಠ ವ್ಯಕ್ತಿ. ಅವರ ಹೆಸರಿನಲ್ಲಿ ಪ್ರಶಸ್ತಿ ನೀಡುತ್ತಿರುವುದು ಹೆಮ್ಮೆಯ ವಿಷಯ ಕ್ರೀಡಾ ಪಟುಗಳು ಇದೊಂದೇ ಪ್ರಶಸ್ತಿಗೆ ತೃಪ್ತರಾಗದೆ ದೇಶವನ್ನು ವಿಶ್ವದಲ್ಲಿ ಬೆಳಗುವಂತೆ ಶ್ರಮ ವಹಿಸಬೇಕು. ಪ್ರಧಾನಿ ನರೇಂದ್ರ ಮೋದಿ ಆಶಯದಂತೆ ವಿಶ್ವ ಮಟ್ಟದಲ್ಲಿ ನಿಮ್ಮ ಸಾಧನೆ ತೋರಬೇಕೆಂದು ಹೇಳಿದರು.

ಪುರಾಣದಲ್ಲಿ ಬರುವ ಏಕಲವ್ಯ ನಿರಂತರ ಸಾಧನೆಯಿಂದ ಏನೆಲ್ಲ ಸಾಧಿಸಬಹುದು ಎನ್ನುವುದಕ್ಕೆ ಉದಾಹರಣೆ. ತರಬೇತುದಾರರು ಹೆಚ್ಚಿನ ಕ್ರೀಡಾಪಟುಗಳನ್ನು ಗುರುತಿಸಿ ಗೌರವಿಸುವ ಕೆಲಸ ಮಾಡುತ್ತಿದೆ. ಕೇಂದ್ರ ಸರ್ಕಾರದ ಖೇಲೊ ಇಂಡಿಯಾ, ಫಿಟ್ ಇಂಡಿಯಾ ಯೋಜನೆಗಳನ್ನು ರಾಜ್ಯದಲ್ಲಿ ಯಶಸ್ವಿಯಾಗಿ ಜಾರಿಗೊಳಿಸಲಾಗುತ್ತಿದೆ. ರಾಜ್ಯದ ಕ್ರೀಡಾಪಟುಗಳು ಹೆಚ್ಚಿನ ಶ್ರಮವಹಿಸಿ 2028ರ ಒಲಂಪಿಕ್ಸ್‌ನಲ್ಲಿ ದೇಶದ ಕೀರ್ತಿ ಪತಾಕೆ ಹಾರಿಸುವ ಕೆಲಸ ಮಾಡಬೇಕು, ಅದಕ್ಕೆ ಅಗತ್ಯವಿರುವ ಎಲ್ಲ ನೆರವು ನೀಡಲು ರಾಜ್ಯ ಸರ್ಕಾರ ಸಿದ್ಧವಿದೆ ಎಂದು ಹೇಳಿದರು.

ರಾಷ್ಟ್ರೀಯ ಸೇವಾ ಯೋಜನೆ ಅಡಿಯಲ್ಲಿ ವಿಶೇಷ ಸೇವೆ ಸಲ್ಲಿಸಿದ ವಿದ್ಯಾರ್ಥಿಗಳು ಹಾಗೂ ಸಾಧಕರಿಗೆ ಪ್ರಶಸ್ತಿ ನೀಡಲಾಗುತ್ತಿದೆ ಎಂದು ಹೇಳಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕ್ರೀಡಾ ಸಚಿವ ಸಿ.ಟಿ.ರವಿ ಮಾತನಾಡಿ, ಇದುವರೆಗೂ ಕ್ರೀಡೆ ಪಠ್ಯದ ಭಾಗವಾಗಿರಲಿಲ್ಲ. ನೂತನ ಶಿಕ್ಷಣ ನೀತಿಯಲ್ಲಿ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮ ಸೇರಿರುವುದರಿಂದ ಮನೆಗಳಲ್ಲೂ ಕ್ರೀಡೆಗೆ ಮುಕ್ತ ಅವಕಾಶ ಇದೆ. ಮುಂದಿನ ವರ್ಷದಿಂದ ನೂತನ ಪಠ್ಯ ಕ್ರಮ ಜಾರಿಗೆ ಬರುತ್ತದೆ. ಏಕಲವ್ಯ ದ್ರೋಣಾಚಾರ್ಯರ ಸಾಂಪ್ರಾದಾಯಿಕ ಶಿಷ್ಯ ಅಲ್ಲದಿದ್ದರೂ ಅವರನ್ನು ಗುರು ಎಂದು ಸ್ವೀಕರಿಸಿ ಬಿಲ್ವ ವಿದ್ಯೆ ಕಲಿತರು. ಈಗ ಬೆರಳು ಕೊಡುವ ಏಕಲವ್ಯರು ಇಲ್ಲ. ಆದರೆ, ಶಿಷ್ಯ ಸಾಧನೆ ಮಾಡಿದರೆ ಹೆಮ್ಮೆ ಪಡುವ ಗುರುಗಳು ಇದ್ದಾರೆ ಎಂದು ಹೇಳಿದರು.

ಖೇಲೊ ಇಂಡಿಯಾ ಯೋಜನೆಯನ್ನು ರಾಜ್ಯದಲ್ಲಿ ಯಶಸ್ವಿಯಾಗಿ ಜಾರಿಗೆ ತರಲಾಗುತ್ತಿದೆ. ಕ್ರೀಡಾ ಚಟುವಟಿಕೆ ಹೆಚ್ಚಿಸಲು ಜಕ್ಕೂರಿನಲ್ಲಿ ತರಬೇತಿ ನೀಡಲಾಗುತ್ತಿದೆ. ದೇಶದಲ್ಲಿಯೇ ಅತಿ ಹೆಚ್ಚು ಸಿಂಥೆಟಿಕ್ ಕ್ರೀಡಾಂಗಣ ಹೊಂದಿರುವ ರಾಜ್ಯ ನಮ್ಮದು, 2028ರ ಲಾಸ್ ಎಂಜಲೀಸ್ ಓಲಂಪಿಕ್ಸ್‌ನಲ್ಲಿ ಭಾರತ ಪ್ರಮುಖ ಹತ್ತು ರಾಷ್ಟ್ರಗಳಲ್ಲಿ ಒಂದು ಆಗಬೇಕೆನ್ನುವ ಹಂಬಲ ಪ್ರಧಾನಿಯವರದ್ದಾಗಿದೆ. ಕ್ರೀಡಾ ಕ್ಷೇತ್ರದಲ್ಲಿ ಭಾರತ ಬಲವಾಗಬೇಕು ಎನ್ನುವುದು ಭಾರತೀಯರ ಹಂಬಲವಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ 31 ಕ್ರೀಡಾ ಪಟುಗಳಿಗೆ ಏಕಲವ್ಯ ಪ್ರಶಸ್ತಿ. 27 ಗ್ರಾಮೀಣ ಕ್ರೀಡಾ ಪಟುಗಳಿಗೆ ಕ್ರೀಡಾರತ್ನ ಪ್ರಶಸ್ತಿ ಹಾಗೂ ಐವರಿಗೆ ಕ್ರೀಡಾ ಪೋಷಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ರಾಷ್ಟ್ರ ನಿರ್ಮಾಣದಲ್ಲಿ ಕ್ರೀಡೆ ಮಹತ್ವದ ಪಾತ್ರ ವಹಿಸುತ್ತದೆ. ದೇಶ ಬಲಿಷ್ಠವಾಗಲು ಕ್ರೀಡೆ ಬಲಿಷ್ಠವಾಗಬೇಕು. ಕ್ರೀಡೆ ಮೂಲಕ ದೇಶದ ಆರ್ಥಿಕ ಶಕ್ತಿ ಹೆಚ್ಚಿಸಬೇಕು. ಕ್ರೀಡೆಯಲ್ಲಿ ಸಾಮರಸ್ಯ ಬೆಳೆಸಲು ಸಾಧ್ಯವಾಗುತ್ತದೆ. ಕ್ರೀಡಾಪಟುಗಳು ಎಲ್ಲರಿಗೂ ಮಾದರಿಯಾಗಬೇಕು ಎಂದು ಶಾಸಕ ರಿಜ್ವಾನ್ ಅರ್ಷದ್ ಹೇಳಿದರು. ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಾ.ಅಶ್ವತ್ಥನಾರಾಯಣ, ಕಂದಾಯ ಸಚಿವ ಆರ್.ಅಶೋಕ್, ರಾಜ್ಯ ಓಲಂಪಿಕ್ಸ್ ಸಂಸ್ಥೆ ಅಧ್ಯಕ್ಷ ಗೋವಿಂದರಾಜು ಉಪಸ್ಥಿತರಿದ್ದರು.

ಆಧಾರ: ಉದಯವಾಣಿ, ದಿನಾಂಕ:03.11.2020

## 8. ಸಾಲುಮರದ ತಿಮ್ಮಕ್ಕಳಿಗೆ ಗೌರವ ಡಾಕ್ಟರೇಟ್

ಕರ್ನಾಟಕ ಕೇಂದ್ರೀಯ ವಿವಿ ಸಾಲುಮರದ ತಿಮ್ಮಕ್ಕ ಅವರಿಗೆ ಬೆಂಗಳೂರಿನ ಅವರ ನಿವಾಸದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ವಿವಿ ಕುಲಪತಿ ಪ್ರೊ.ಎಚ್.ಎಂ.ಮಹೇಶ್ವರಯ್ಯ, ಪ್ರೊ.ರಾಜೇಶ್ವರಿ ಮಹೇಶ್ವರಯ್ಯ, ವಿಕ್ರಮ ವಿಜಾಜಿ, ಪ್ರೊ.ಬಿ.ಬಿ.ಪೂಜಾರಿ, ಸಹಾಯಕ ಕುಲಸಚಿವ ಅಜೀಂ ಬಾಷಾ ಉಪಸ್ಥಿತರಿದ್ದರು.

ಆಧಾರ: ಕನ್ನಡಪ್ರಭ, ದಿನಾಂಕ:08.11.2020

## 9. ಕನ್ನಡ ಭಾಷೆಗೂ ತಂತ್ರಜ್ಞಾನದ ವೇಗ

ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆ. ಕನ್ನಡ ಏಳ್ಗೆಗೆ ಸರ್ಕಾರ ಕಟಿಬದ್ಧವಾಗಿದ್ದು, ನಾಡಿನೆಲ್ಲೆಡೆ ಕನ್ನಡ ಪರ ವಾತಾವರಣಕ್ಕೆ ಪ್ರಥಮ ಆದ್ಯತೆ ನೀಡಲಾಗಿದೆ ಎಂದು ಸಿಎಂ ಯಡಿಯೂರಪ್ಪ ತಿಳಿಸಿದರು.

ರವೀಂದ್ರ ಕಲಾಕ್ಷೇತ್ರದಲ್ಲಿ ಕನ್ನಡ–ಸಂಸ್ಕೃತಿ ಇಲಾಖೆ ಏರ್ಪಡಿಸಿದ್ದ ಸಮಾರಂಭದಲ್ಲಿ 2020ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಪ್ರದಾನಿಸಿ ಮಾತನಾಡಿ, 'ನಾಡು–ನುಡಿ, ಸಂಸ್ಕೃತಿಯು ಅಸ್ಮಿತೆಯ ಪ್ರತೀಕ. ಮಾತೃಭಾಷೆ ಹಾಗೂ ಜನ್ಮಭೂಮಿ ಕೂಡ ನಮ್ಮೆಲ್ಲರಿಗೂ ಮಾತೃಸ್ವರೂಪವಾಗಿದೆ. ಹೆತ್ತ ತಾಯಿಗೆ ಸಲ್ಲುವ ಗೌರವಾದರಗಳು ನಾವು ಹುಟ್ಟಿದ ನಾಡು, ಭಾಷೆಗೆ ಸಲ್ಲಲೇಬೇಕು," ಎಂದು ಪ್ರತಿಪಾದಿಸಿದರು.

'ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ಬದುಕು ಶರವೇಗದಲ್ಲಿ ಸಾಗುತ್ತಿದೆ. ಅದರ ವೇಗದಲ್ಲೇ ನಮ್ಮ ಭಾಷೆಯನ್ನು ಸಜ್ಜುಗೊಳಿಸಬೇಕಿದೆ. ಕನ್ನಡ ಭಾಷೆ, ಸಾಹಿತ್ಯದ ಬೆಳವಣಿಗೆಗೆ ಅಗತ್ಯ ವಾತಾವರಣ ಕಲ್ಪಿಸಲು ರೂಪಿಸಲಾಗಿರುವ ವರ್ಷವಿಡೀ ಕನ್ನಡ ಕಾಯಕ ವರ್ಷಾಚರಣೆ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಸರ್ಕಾರ ಬದ್ಧವಾಗಿದೆ," 'ಕನ್ನಡ ನಮ್ಮೆಲ್ಲರ ಹೃದಯದ ಭಾಷೆಯಾಗಿದೆ. ಅದನ್ನು ದೈನಂದಿನ ವ್ಯವಹಾರದಲ್ಲಿ ಬಳಸಬೇಕು, ಆಗ ಮಾತ್ರ ಭಾಷೆ ಬೆಳೆಯುತ್ತದೆ. ಭಾಷೆಯ ಸತ್ವವೂ ಮತ್ತಷ್ಟು ಗಟ್ಟಿಗೊಳ್ಳುತ್ತದೆ," ಎಂದು ವಿವರಿಸಿದರು.

ಕನ್ನಡ–ಸಂಸ್ಕೃತಿ ಸಚಿವ ಸಿ.ಟಿ.ರವಿ ಮಾತನಾಡಿ, 'ಪ್ರಸ್ತುತ ವರ್ಷದ ರಾಜ್ಯೋತ್ಸವ ಪ್ರಶಸ್ತಿಗೆ ಮುತ್ತುಗಳನ್ನು ಹೆಕ್ಕಿ ತೆಗೆದಿದ್ದೇವೆ. ಎಲೆಮರೆ ಕಾಯಿಯಂತಿದ್ದ ಸಾಧಕರನ್ನು ಗುರುತಿಸಿದ ತೃಪ್ತಿ ಇದೆ. ಇನ್ನಷ್ಟು ಮುತ್ತುಗಳು ಹೊರಗುಳಿದಿರುವುದು ನಿಜ. ಮುಂದಿನ ದಿನಗಳಲ್ಲಿ ಇತರ ಸಾಧಕರನ್ನು ಗುರುತಿಸುವ ಕೆಲಸವನ್ನು ಸರ್ಕಾರ ಮಾಡಲಿದೆ." ಎಂದು ಭರವಸೆ ನೀಡಿದರು.

ಕನ್ನಡ–ಸಂಸ್ಕೃತಿ ಇಲಾಖೆ ಕಲಾವಿದರಿಗೆ ನೆರವು ನೀಡಲು ರೂಪಿಸಿರುವ ಆ್ಯಪ್‌ನ್ನು ಸಚಿವ ಸಿ.ಟಿ.ರವಿ ಬಿಡುಗಡೆ ಮಾಡಿದರು. 65 ಪ್ರಶಸ್ತಿ ಪುರಸ್ಕೃತಿ ಪೈಕಿ ಇಬ್ಬರು ಅನಾರೋಗ್ಯ ಕಾರಣಕ್ಕೆ ಗೈರಾಗಿದ್ದರು. ಡಿಸಿಎಂ. ಲಕ್ಷಣ ಸವದಿ, ಸಂಸದ ತೇಜಸ್ವಿ ಸೂರ್ಯ, ಶಾಸಕ ಉದಯ್ ಗರುಡಾಚಾರ್, ಕನ್ನಡ–ಸಂಸ್ಕೃತಿ ಇಲಾಖಾ ಕಾರ್ಯದರ್ಶಿ ವಿ.ರಶ್ಮಿಮಹೇಶ್, ನಿರ್ದೇಶಕ ಎಸ್.ರಂಗಪ್ಪ ಹಾಜರಿದ್ದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:08.11.2020

## 10. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರದಾನ

ಕರ್ನಾಟಕದಲ್ಲಿ ಇರುವಷ್ಟು ವಿಫುಲ ಮತ್ತು ವೈವಿಧ್ಯಮಯ ಸಾಹಿತ್ಯ ದಕ್ಷಿಣ ಭಾರತದ ಇತರ ಭಾಗಗಳಲ್ಲಿ ಇಲ್ಲ. ಆಧುನಿಕ ಮತ್ತು ಪ್ರಾಚೀನ ಸಾಹಿತ್ಯದ ಎಲ್ಲ ಪ್ರಕಾರದಲ್ಲಿಯೂ ಕನ್ನಡದ ಲೇಖಕರು ಮುಂಚೂಣಿಯಲ್ಲಿದ್ದಾರೆ. ಕಾವ್ಯ ಮತ್ತು ಕವಿತೆ ಕ್ಷೇತ್ರದ ಉನ್ನತ ಪರಂಪರೆ ಕನ್ನಡದಲ್ಲಿದೆ ಎಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಶ್ವರಂ, ಜಿ.ವೆಂಕಟೇಶ ಹೇಳಿದ್ದಾರೆ.

ರವೀಂದ್ರ ಕಲಾ ಕ್ಷೇತ್ರದಲ್ಲಿ ಪ್ರೊ..ಕೆ.ಜಿ.ನಾಗರಾಜಪ್ಪ, ಬಾಬು ಕೃಷ್ಣಮೂರ್ತಿ, ಉಷಾ.ಪಿ.ರೈ, ಡಾ. ವೀರಣ್ಣ ರಾಜೂರ ಮತ್ತು ಪ್ರೊ. ಲಕ್ಷ್ಮಣ ತೆಲಗಾವಿ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ 2019ನೇ ವರ್ಷದ ಗೌರವ ಪ್ರಶಸ್ತಿ ಪ್ರದಾನ ಮಾಡಿ. ಅವರು ಮಾತನಾಡುತ್ತಿದ್ದರು. ರಾಜ್ಯದ ಎಲ್ಲ ಭಾಗಗಳಿಂದಲೂ ಅತ್ಯುತ್ತಮ ವಿದ್ವಾಂಸರು, ಸಂಶೋಧಕರು ಬಂದಿದ್ದಾರೆ. ಕನ್ನಡ ಸಾಹಿತ್ಯ ತನ್ನ ಸೀಮೆಯನ್ನು ವಿಸ್ತರಿಸಿಕೊಂಡು ಸಾಗಿದೆ ಎಂದು ಅವರು ಅಭಿಪ್ರಾಯ ಪಟ್ಟರು.

ಆಧಾರ: ಕನ್ನಡಪ್ರಭ, ದಿನಾಂಕ:24.11.2020

# ಭಾಗ–10

# ಶ್ರದ್ಧಾಂಜಲಿ

## 1. ರಾಮ್ ವಿಲಾಸ್ ಪಾಸ್ವಾನ್, ಕೇಂದ್ರ ಸಚಿವರು.

ಕೇಂದ್ರದ ಹಾಲಿ ಸಚಿವರಾಗಿದ್ದ ಶ್ರೀ ರಾಮ್ ವಿಲಾಸ್ ಪಾಸ್ವಾನ್ ಅವರು ದಿನಾಂಕ: 05.07.1946ರಂದು ಬಿಹಾರದ ಕಗಾರಿಯಾ ಜಿಲ್ಲೆಯ ಶಹರ್‌ಬನ್ನಿ ಗ್ರಾಮದಲ್ಲಿ ಜನಿಸಿದ್ದರು. ಎಂ.ಎ. ಹಾಗೂ ಕಾನೂನು ಪದವೀಧರರಾಗಿದ್ದ ಶ್ರೀಯುತರು 1969ರಲ್ಲಿ ಬಿಹಾರ ವಿಧಾನಸಭೆ ಸದಸ್ಯರಾಗಿ ಆಯ್ಕೆಯಾಗಿದ್ದು, 1977ರಲ್ಲಿ ಮೊದಲ ಬಾರಿಗೆ ಹಾಜಿಪುರ ಕ್ಷೇತ್ರದಿಂದ 6ನೇ ಲೋಕಸಭೆಗೆ ಆಯ್ಕೆಯಾಗಿ ಸತತವಾಗಿ 9 ಬಾರಿ ಲೋಕಸಭೆಯ ಸದಸ್ಯರಾಗಿ ಹಾಗೂ 2 ಬಾರಿ ರಾಜ್ಯ ಸಭಾ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು, ಆರು ಬಾರಿ ವಿವಿಧ ಖಾತೆಗಳ ಕೇಂದ್ರ ಸಚಿವರಾಗಿಯೂ ಸೇವೆ ಸಲ್ಲಿಸಿದ್ದ ಶ್ರೀ ಪಾಸ್ವಾನ್ ಅವರು ಒಂದು ದೇಶ ಒಂದು ಪಡಿತರ ಚೀಟಿ ಜಾರಿಯಾಗಲು ಕಾರಣಕರ್ತರಾಗಿದ್ದರು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಜೈಲು ವಾಸ ಅನುಭವಿಸಿದ್ದ ಶ್ರೀಯುತರು ಶೋಷಿತ ವರ್ಗಗಳ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಿದ್ದರು. ಶ್ರೀಯುತರು 1990ರಲ್ಲಿ ಮಂಡಲ್ ವರದಿಯ ಜಾರಿಯಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ದೂರದೃಷ್ಟಿಯುಳ್ಳ ನಾಯಕರು ಹಾಗೂ ಉತ್ತಮ ಸಂಸದೀಯ ಪಟು ಆಗಿದ್ದ ಶ್ರೀ ರಾಮ್ ವಿಲಾಸ್ ಪಾಸ್ವಾನ್ ಅವರು ದಿನಾಂಕ 08.10.2020ರಂದು ನಿಧನ ಹೊಂದಿರುತ್ತಾರೆ.

ಆಧಾರ: ಸಂತಾಪ ಸೂಚನಾ ನಿರ್ಣಯ

## 2. ಡಾ॥ ವೈ.ನಾಗಪ್ಪ, ಮಾಜಿ ಸಚಿವರು

ರಾಜ್ಯದ ಮಾಜಿ ಸಚಿವರಾಗಿದ್ದ ಡಾ॥ ವೈ.ನಾಗಪ್ಪ ಅವರು ದಿನಾಂಕ:24.08.1934 ರಂದು ಹರಿಹರದಲ್ಲಿ ಜನಿಸಿದ್ದು, ಎಂ.ಬಿ.ಬಿಎಸ್., ಎಂ.ಡಿ. ವ್ಯಾಸಂಗ ಮಾಡಿದ್ದು ವೈದ್ಯರಾಗಿದ್ದರು. 1989 ರಲ್ಲಿ ಹರಿಹರ ವಿಧಾನಸಭಾ ಕ್ಷೇತ್ರದಿಂದ ಮೊದಲ ಬಾರಿಗೆ 9ನೇ ವಿಧಾನಸಭೆಗೆ ಆಯ್ಕೆಯಾಗಿದ್ದು, 1999ರಲ್ಲಿ 11 ಹಾಗೂ 2004ರಲ್ಲಿ 12ನೇ ವಿಧಾನಸಭೆಗೆ ಇದೇ ಕ್ಷೇತ್ರದಿಂದ ಪುನರಾಯ್ಕೆಗೊಂಡಿದ್ದರು. 2004ರಲ್ಲಿ ಸಮಾಜ ಕಲ್ಯಾಣ ಸಚಿವರಾಗಿದ್ದ ಶ್ರೀಯುತರು, ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಗಳ ಅಧ್ಯಕ್ಷರಾಗಿ, ಹರಿಹರದ ಕಾಳಿದಾಸ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ, ವಿಶ್ವೇಶ್ವರಯ್ಯ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾಗಿ, ಕುವೆಂಪು ವಿಶ್ವವಿದ್ಯಾಲಯ ಹಾಗೂ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿಯೂ ಸೇವೆಯನ್ನು ಸಲ್ಲಿಸಿದ್ದರು.

ಶೋಷಿತರ ಧ್ವನಿಯಾಗಿದ್ದ ಡಾ॥ ವೈ.ನಾಗಪ್ಪರವರು ದಿನಾಂಕ:27.10.2020ರಂದು ನಿಧನ ಹೊಂದಿರುತ್ತಾರೆ.

ಆಧಾರ: ಸಂತಾಪ ಸೂಚನಾ ನಿರ್ಣಯ

## 3. ಬಸವಂತ್ ಐರೋಜಿ ಪಾಟೀಲ್, ಮಾಜಿ ಸದಸ್ಯರು

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಸವಂತ್ ಐರೋಜಿ ಪಾಟೀಲ್ ಅವರು ದಿನಾಂಕ:05.08.1946ರಂದು ಕಾಂಗ್ರಲಿಯಲ್ಲಿ ಜನಿಸಿದ್ದು, ಬಿ.ಎ., ಬಿ.ಕಾಂ. ಮತ್ತು ಕಾನೂನು ಪದವೀಧರರಾಗಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದ ಶ್ರೀಯುತರು 1983ರಲ್ಲಿ ಉಚಗಾಂವ ವಿಧಾನಸಭಾ ಕ್ಷೇತ್ರದಿಂದ 7ನೇ ವಿಧಾನ ಸಭೆಗೆ ಆಯ್ಕೆಯಾಗಿದ್ದು, ನಂತರ 8, 9 ಮತ್ತು 10ನೇ ವಿಧಾನ ಸಭೆಗೆ ಅದೇ ಕ್ಷೇತ್ರದಿಂದ ಸತತವಾಗಿ ಪುನರಾಯ್ಕೆಗೊಂಡಿದ್ದರು.

ಬಸವಂತ್ ಐರೋಜಿ ಪಾಟೀಲ್ ಅವರು ದಿನಾಂಕ:04.10.2020ರಂದು ನಿಧನ ಹೊಂದಿರುತ್ತಾರೆ.

ಆಧಾರ: ಸಂತಾಪ ಸೂಚನಾ ನಿರ್ಣಯ

## 4. ಕೆ.ಮಲ್ಲಪ್ಪ, ಮಾಜಿ ಸದಸ್ಯರು

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಕೆ.ಮಲ್ಲಪ್ಪ ಅವರು ದಿನಾಂಕ 15.04.1929ರಂದು ನಂದಿಗಾವಿಯಲ್ಲಿ ಜನಿಸಿದ್ದರು. ಸಾಮಾಜಿಕ ಸೇವೆಗಳಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರು ಕುಸ್ತಿಪಟುವಾಗಿದ್ದರು. ಹರಿಹರ ವಿಧಾನ ಸಭಾ ಕ್ಷೇತ್ರದಿಂದ 1983ರಲ್ಲಿ 7ನೇ ವಿಧಾನ ಸಭೆಗೆ ಹಾಗೂ 1985ರಲ್ಲಿ ಮಾಯಕೊಂಡ ವಿಧಾನ ಸಭಾ ಕ್ಷೇತ್ರದಿಂದ 8ನೇ ವಿಧಾನ ಸಭೆಗೆ ಆಯ್ಕೆಗೊಂಡಿದ್ದ ಶ್ರೀಯುತರು ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ಮಲ್ಲಪ್ಪ ಅವರು ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಹಾಗೂ ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿಯೂ ಸಹ ಸೇವೆ ಸಲ್ಲಿಸಿದ್ದರು.

ಹಿರಿಯ ಗಾಂಧಿವಾದಿ ಶ್ರೀ ಕೆ.ಮಲ್ಲಪ್ಪ ಅವರು ದಿನಾಂಕ:12.10.2020ರಂದು ನಿಧನ ಹೊಂದಿರುತ್ತಾರೆ.

ಆಧಾರ: ಸಂತಾಪ ಸೂಚನಾ ನಿರ್ಣಯ

## 5. ರತನ್ ಕುಮಾರ್ ಕಟ್ಟೆಮಾರ್, ಮಾಜಿ ಸದಸ್ಯರು.

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ರತನ್ ಕುಮಾರ್ ಕಟ್ಟೆಮಾರ್ ಅವರು 1939ರಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದ ಶ್ರೀಯುತರು 1967ರಲ್ಲಿ ಮೂಡಬಿದ್ರಿ ವಿಧಾನ ಸಭಾ ಕ್ಷೇತ್ರದಿಂದ 4ನೇ ವಿಧಾನ ಸಭೆಗೆ ಚುನಾಯಿತಗೊಂಡಿದ್ದರು.

ಸಾಮಾಜಿಕ ಸೇವೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದ ಶ್ರೀ ರತನ್ ಕುಮಾರ್ ಕಟ್ಟೆಮಾರ್ ಅವರು ದಿನಾಂಕ:07.11.2020ರಂದು ನಿಧನ ಹೊಂದಿರುತ್ತಾರೆ.

ಆಧಾರ: ಸಂತಾಪ ಸೂಚನಾ ನಿರ್ಣಯ

## 6. ಡಾ॥ ಜಿ.ಎಸ್. ಆಮೂರ, ಕನ್ನಡ ಸಾಹಿತಿ

ಆಧುನಿಕ ಕನ್ನಡ ಸಾಹಿತ್ಯದ ಅಗ್ರಮಾನ್ಯ ವಿಮರ್ಶಕರಾಗಿದ್ದ ಡಾ॥ ಜಿ.ಎಸ್. ಆಮೂರ ಅವರು ದಿನಾಂಕ: 08.05.1925ರಂದು ಹಾನಗಲ್ ತಾಲ್ಲೂಕಿನ ಬೊಮ್ಮನಹಳ್ಳಿಯಲ್ಲಿ ಜನಿಸಿದ್ದರು. ಆಂಗ್ಲ ಭಾಷೆಯಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದ ಶ್ರೀಯುತರು ವೃತ್ತಿಯಲ್ಲಿ ಪ್ರಾಧ್ಯಾಪಕರಾಗಿದ್ದರು. ಕನ್ನಡ ಸಾಹಿತ್ಯವನ್ನು ಆಂಗ್ಲ ಭಾಷೆಗೆ ಪರಿಚಯಿಸುವ ಮೂಲಕ ಜಾಗತಿಕ ಮಟ್ಟದಲ್ಲಿ ಕನ್ನಡಕ್ಕೆ ಮನ್ನಣೆಯನ್ನು ತಂದುಕೊಟ್ಟಿದ್ದರು. ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ 50ಕ್ಕೂ ಅಧಿಕ ಕೃತಿಗಳನ್ನು ರಚಿಸಿದ್ದು, ಪಂಪ, ರಾಜ್ಯೋತ್ಸವ, ಕೇಂದ್ರ ಸಾಹಿತ್ಯ ಅಕಾಡೆಮಿ, ಅಂಬಿಕಾತನಯ ದತ್ತ, ಮಾಸ್ತಿ, ಆಳ್ವಾಸ್ ನುಡಿಸಿರಿ, ನೃಪತುಂಗ ಹಾಗೂ ಇನ್ನಿತರೆ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದ ಶ್ರೀಯುತರು ಕರ್ನಾಟಕ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದರು.

ನಿರಂತರ ಓದು, ಬರವಣಿಗೆಯನ್ನು ರೂಢಿಸಿಕೊಂಡಿದ್ದ ಡಾ॥ ಜಿ. ಎಸ್. ಆಮೂರ ಅವರು ದಿನಾಂಕ:28.09.2020ರಂದು ನಿಧನ ಹೊಂದಿರುತ್ತಾರೆ.

ಆಧಾರ: ಸಂತಾಪ ಸೂಚನಾ ನಿರ್ಣಯ

## 7. ಡಾ॥ ವಿ.ಎಸ್. ಸೋಂದೆ, ಶಿಕ್ಷಣ ತಜ್ಞ

ಸಹಕಾರಿ ಧುರೀಣ ಡಾ॥ ವಿ.ಎಸ್. ಸೋಂದೆ ಅವರು ದಿನಾಂಕ:28.12.1930ರಂದು ಶಿರಸಿಯಲ್ಲಿ ಜನಿಸಿದ್ದು, ಬಿ.ಎಸ್ಸಿ. ಪದವೀಧರರಾಗಿದ್ದರು. ಶ್ರೀಯುತರು ಸಹಕಾರಿ ಹಾಗೂ ಶೈಕ್ಷಣಿಕ ಕ್ಷೇತ್ರಗಳ ಅಭಿವೃದ್ಧಿಗೆ ಕಂಕಣಬದ್ಧರಾಗಿದ್ದು, ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಅರ್ಬನ್ ಬ್ಯಾಂಕಿನ ನಿರ್ದೇಶಕರಾಗಿ 65 ವರ್ಷಗಳ ಕಾಲ ಸತತವಾಗಿ ಕಾರ್ಯನಿರ್ವಹಿಸಿರುವುದು ಸಹಕಾರ ಕ್ಷೇತ್ರದ ಸಾಧನೆ. ಸದರಿ ಬ್ಯಾಂಕಿನ ಅಧ್ಯಕ್ಷರಾಗಿ, ಹಲವಾರು ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಾಗಿ, ಶಿರಸಿ ನಗರಸಭೆಯ ಸದಸ್ಯರಾಗಿ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಹಾಗೂ ಇನ್ನಿತರೆ ಹಲವಾರು ಉನ್ನತ ಸಂಸ್ಥೆಗಳ ಸದಸ್ಯರಾಗಿ ಜನೋಪಯೋಗಿ ಕೆಲಸಗಳನ್ನು ಮಾಡಿದ್ದರು. ಶ್ರೀಯುತರು ಸಹಕಾರ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಸಲ್ಲಿಸಿದ್ದ ಸೇವೆಯನ್ನು ಗುರುತಿಸಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಸರ್ಕಾರ ಗೌರವಿಸಿತ್ತು. ಶ್ರೀಯುತರು ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಹಾಗೂ ರಾಜ್ಯ ಮಟ್ಟದ ಹಲವಾರು ಸಂಘ ಸಂಸ್ಥೆಗಳ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ನೆನಪಿನ ಖಜಾನೆ ಎಂದೇ ಖ್ಯಾತರಾಗಿದ್ದ ಡಾ॥ವಿ.ಎಸ್.ಸೋಂದೆ ಅವರು ದಿನಾಂಕ: 10.10.2020 ರಂದು ನಿಧನ ಹೊಂದಿರುತ್ತಾರೆ.

ಆಧಾರ: ಸಂತಾಪ ಸೂಚನಾ ನಿರ್ಣಯ

## 8. ರವಿ ಬೆಳಗೆರೆ, ಹಿರಿಯ ಪತ್ರಕರ್ತ

ಹಿರಿಯ ಪತ್ರಕರ್ತರಾಗಿದ್ದ ಶ್ರೀ ರವಿ ಬೆಳಗೆರೆ ಅವರು ಬಳ್ಳಾರಿ ಜಿಲ್ಲೆಯಲ್ಲಿ ದಿನಾಂಕ:15.03.1958 ರಂದು ಜನಿಸಿದ್ದು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರದ ಸ್ನಾತಕೋತ್ತರ ಪದವೀಧರರಾಗಿದ್ದರು. ಪ್ರಾಧ್ಯಾಪಕರಾಗಿ ವೃತ್ತಿ ಆರಂಭಿಸಿದ್ದ ಶ್ರೀಯುತರು ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ ಸೇರಿದಂತೆ ಹಲವು ಪತ್ರಿಕೆಗಳಲ್ಲಿ ಪತ್ರಕರ್ತರಾಗಿ ಕಾರ್ಯನಿರ್ವಹಿಸಿದ್ದರು. 1995ರಲ್ಲಿ ಹಾಯ್ ಬೆಂಗಳೂರು ಪತ್ರಿಕೆಯನ್ನು ಪ್ರಾರಂಭಿಸಿದ್ದರು. ಕಾದಂಬರಿ, ಕಥಾ ಸಂಕಲನ, ಜೀವನ ಕಥನ ಸೇರಿದಂತೆ ಸುಮಾರು 70 ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಪ್ರಾರ್ಥನಾ ಶಿಕ್ಷಣ ಸಂಸ್ಥೆಯ ಸ್ಥಾಪಕರಾಗಿದ್ದ ಶ್ರೀಯುತರು ಪತ್ರಿಕೋದ್ಯಮದ ಅನುಪಮ ಸೇವೆಗಾಗಿ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಮಾಧ್ಯಮ ಅಕಾಡೆಮಿಯ ಜೀವಮಾನ ಸಾಧನೆ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಹಲವು ಪುರಸ್ಕಾರಗಳಿಗೆ ಭಾಜನರಾಗಿದ್ದರು. ಕನ್ನಡ ಚಿತ್ರರಂಗದಲ್ಲಿ ಸಂಭಾಷಣಕಾರರಾಗಿ, ನಟರಾಗಿ, ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದ ಶ್ರೀಯುತರು ಕಿರುತೆರೆಯಲ್ಲಿಯೂ ಹಲವಾರು ಕಾರ್ಯಕ್ರಮಗಳನ್ನು ನಿರೂಪಣೆ ಮಾಡಿದ್ದರು.

ತನಿಖಾ ಪತ್ರಿಕೋದ್ಯಮ ಮತ್ತು ವಿಭಿನ್ನ ರೀತಿಯ ಬರವಣಿಗೆಗೆ ಖ್ಯಾತರಾಗಿದ್ದ ಶ್ರೀ ರವಿ ಬೆಳಗೆರೆ ಇವರು ದಿನಾಂಕ: 12.11.2020ರಂದು ನಿಧನ ಹೊಂದಿರುತ್ತಾರೆ

ಆಧಾರ: ಸಂತಾಪ ಸೂಚನಾ ನಿರ್ಣಯ

## 9. ಅಹ್ಮದ್ ಪಟೇಲ್, ರಾಜ್ಯ ಸಭಾ ಸದಸ್ಯರು

ರಾಜ್ಯ ಸಭಾ ಸದಸ್ಯ, ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಅಹ್ಮದ್ ಪಟೇಲ್ ಅವರು ನಿಧನರಾಗಿದ್ದು, ಅವರಿಗೆ 71 ವರ್ಷ ವಯಸ್ಸಾಗಿತ್ತು. ಪಟೇಲ್ ಅವರಿಗೆ ಕೊರೋನಾ ಸೋಂಕು ದೃಢಪಟ್ಟ ಹಿನ್ನೆಲೆಯಲ್ಲಿ ಕೊನೆಯುಸಿರೆಳೆದರು ಎಂದು ಅವರ ಪುತ್ರ ಫೈಸಲ್ ಪಟೇಲ್ ತಿಳಿಸಿದ್ದಾರೆ.

ಕಾಂಗ್ರೆಸ್‌ನ ಹಿರಿಯ ನಾಯಕ ಹಾಗೂ ಗಾಂಧಿ ಕುಟುಂಬದ ಆಪ್ತರಾಗಿದ್ದ ಅಹ್ಮದ್ ಪಟೇಲ್ ಅವರು ಕಾಂಗ್ರೆಸ್ ಪಕ್ಷ ಖಜಾಂಜಿ ಹಾಗೂ ಸೋನಿಯಾಗಾಂಧಿ ಅವರ ರಾಜಕೀಯ ಕಾರ್ಯದರ್ಶಿ ಆಗಿದ್ದರು.

ವರಿಷ್ಠರ ಬಲಗೈ ಬಂಟ: ಯುಪಿಎ ಯುಗದಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರ ರಾಜಕೀಯ ಕಾರ್ಯದರ್ಶಿಯಾದರು. ಆದ್ದರಿಂದಲೇ ಅವರನ್ನು ಸೋನಿಯಾ ಅವರ ಬಲಗೈ ಬಂಟ ಎಂದೇ ಹೇಳಲಾಗುತ್ತಿತ್ತು. 16 ವರ್ಷಗಳ ಕಾಲ ಸೋನಿಯಾ ಗಾಂಧಿಗೆ ಪಟೇಲ್ ರಾಜಕೀಯ ಕಾರ್ಯದರ್ಶಿಯಾಗಿದ್ದರು. ಇತ್ತೀಚೆಗೆ ರಾಜಾಸ್ಥಾನದಲ್ಲಿ ಸಚಿನ್ ಪೈಲಟ್ ಮತ್ತು 19 ಕಾಂಗ್ರೆಸ್ ಶಾಸಕರ ಬಂಡಾಯ ಪರಿಹರಿಸಲು ಪಟೇಲ್ ಸಹಾಯ ಮಾಡಿ ಅಶೋಕ್ ಗೆಹ್ಲೋಟ್ ಸರ್ಕಾರವನ್ನು ಉಳಿಸಿದ್ದರು.

ಆಧಾರ: ವಿಜಯವಾಣಿ, ದಿನಾಂಕ:26.11.2020

## 10. ಮಾಜಿ ರಾಜ್ಯಪಾಲೆ ಮೃದಲಾ ನಿಧನ

ಗೋವಾದ ಮಾಜಿ ರಾಜ್ಯಪಾಲರಾದ ಮೃದುಲಾ ಸಿನ್ಹಾ ಅವರು ದಿಲ್ಲಿಯ ಏಮ್ಸ್ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ಬಿಹಾರದವರಾದ ಮೃದುಲಾ ಅವರು ಹಿಂದಿ ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿದ್ದು, ಅನೇಕ ಕೃತಿಗಳನ್ನು ರಚಿಸಿದ್ದಾರೆ. ಗೋವಾದ ಮೊದಲ ಮಹಿಳಾ ರಾಜ್ಯಪಾಲರೆಂಬ ಹಿರಿಮೆ ಇವರದ್ದಾಗಿದೆ. ಜನಸಂಘದ ಜೊತೆ ಗುರುತಿಸಿಕೊಂಡು ಆಗಿನಿಂದಲೂ ರಾಜಕೀಯದ ನಂಟು ಹೊಂದಿದ್ದರು. ಮೃದುಲಾ ಅವರ ನಿಧನಕ್ಕೆ ರಾಷ್ಟ್ರಪತಿ ವೆಂಕಯ್ಯ ನಾಯ್ಡು, ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಸೇರಿದಂತೆ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:19.11.2020

# ಭಾಗ–11

# ಪ್ರಮುಖ ಲೇಖನಗಳು

## 1. ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸಿದ ಹೋರಾಟಗಾರ

ಸೋಮಪ್ಪ ರಾಯಪ್ಪ ಬೊಮ್ಮಾಯಿ ರಾಜ್ಯ ಕಂಡ ಅಪರೂಪದ ಮುಖ್ಯಮಂತ್ರಿ ಬಡವರ ಪರ ನಿಲುವಿನಿಂದಾಗಿ ರಾಯಿಸ್ಟ್ ಎಂದೇ ಖ್ಯಾತರಾದವರು. ಕೇಂದ್ರ ಸರ್ಕಾರ ತನಗಾಗದ ರಾಜ್ಯ ಸರ್ಕಾರಗಳನ್ನು ಮನತೋಚಿದಂತೆ ಕಿತ್ತೆಸೆದು ರಾಷ್ಟ್ರಪತಿ ಆಡಳಿತ ಹೇರುವ ಪ್ರಜಾಪ್ರಭುತ್ವ ವಿರೋಧಿ ಕ್ರಮಕ್ಕೆ ಕಡಿವಾಣ ಹಾಕಿದ ಧೀಮಂತ ಅವರು. ಕೇಂದ್ರ ಮಾನವ ಸಂಪನ್ಮೂಲ ಸಚಿವರಾಗಿದ್ದಾಗ ಬಜೆಟ್ ಅನುದಾನ ದುಪ್ಪಟ್ಟುಗೊಳಿಸುವ ಮೂಲಕ ಉನ್ನತ ಶಿಕ್ಷಣದ ಬೆಳವಣಿಗೆಗೆ ನಾಂದಿ ಹಾಡಿದ ದೂರಗಾಮಿ ಚಿಂತಕ ಕೂಡ.

ಇಂದಿನ ಯುವ ರಾಜಕಾರಣಿಗಳಿಗೆ ಪ್ರೇರಣಾದಾಯಕ ವ್ಯಕ್ತಿತ್ವ ಎಸ್.ಆರ್. ಬೊಮ್ಮಾಯಿ ಅವರದ್ದು. ಚದುರಿ ಹೋದ ಪಕ್ಷಗಳನ್ನು ಒಗ್ಗೂಡಿಸಿ ಬಲಾಢ್ಯ ಜನತಾ ಪರಿಹಾರ ಸಂಘಟಿಸಿದ ಶ್ರೇಯ ಅವರಿಗೆ ಸಲ್ಲುತ್ತದೆ. ಮಾಹಿತಿ–ತಂತ್ರಜ್ಞಾನ ಕ್ಷೇತ್ರದಲ್ಲಿ ರಾಜ್ಯವು ಬೆಳವಣಿಗೆ ಸಾಧಿಸುವಲ್ಲಿ ಅವರ ಕೊಡುಗೆ ಸ್ಮರಣೀಯ.

ಸಾಮೂಹಿಕ ನಾಯಕ್ವದ ಪ್ರತಿಪಾದಕ, ದೂರದೃಷ್ಟಿಯುಳ್ಳ ನೀತಿಗಳ ನಿರೂಪಕ ಎಸ್.ಆರ್. ಬೊಮ್ಮಾಯಿ ಅವರ ವೈಚಾರಿಕ ಸಂಪತ್ತನ್ನು ಬಹಳ ಜನ ಗುರುತಿಸಿಲ್ಲ. ಬಹುಶ: ಅವರ ಸರಳ ವ್ಯಕ್ತಿತ್ವವೇ ಇದಕ್ಕೆ ಕಾರಣ ಇದ್ದಿರಬಹುದು. ರಾಜ್ಯ ಹಾಗೂ ರಾಷ್ಟ್ರ ರಾಜಕಾರಣದಲ್ಲಿ ಉತ್ತುಂಗ ಸ್ಥಾನಕ್ಕೇರಿದರು ಅವರು ಜನಸಾಮಾನ್ಯರಂತೆ ತಲಸ್ಪರ್ಶಿಯಾಗಿ ಬದುಕಿದರು.

ಬೊಮ್ಮಾಯಿ ಜನಿಸಿದ್ದು ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕಿನ ಕಾರಡಗಿಯಲ್ಲಿ 1924 ಜೂನ್ 6 ರಂದು. ತಂದೆ ರಾಯಪ್ಪಗೌಡ, ತಾಯಿ ಶಿವಮ್ಮ, ಶಿಗ್ಗಾಂವಿ ತಾಲ್ಲೂಕಿನ ಕಮಡೊಳ್ಳಿಯವರು. ಹುಬ್ಬಳ್ಳಿಯ ಸೋದರಮಾವನ ಮನೆಯಲ್ಲಿದ್ದು ಕಲಿತದ್ದು ಕಾನೂನು ಪದವಿ, ಸೋದರಮಾವ 1952ರಲ್ಲೇ ಶಿಗ್ಗಾಂವಿಯಿಂದ ಶಾಸಕರಾಗಿದ್ದರು. ಬೊಮ್ಮಾಯಿ ಸಾರ್ವಜನಿಕ ಜೀವನಕ್ಕೆ ಬರಲು ಇವರೇ ಪ್ರೇರಣೆ. ಮುಂದೆ ಹೆಣ್ಣು ಕೊಟ್ಟ ಮಾವ ಕೂಡ ಅದರು.

ಬೊಮ್ಮಾಯಿ ಮೊದಲ ಬಾರಿಗೆ ವಿಧಾನ ಸಭೆಗೆ ಪದಾರ್ಪಣೆ ಮಾಡಿದ್ದು, 1967ರಲ್ಲಿ ಧಾರವಾಡ ಜಿಲ್ಲೆಯ ಕುಂದಗೋಳ ಕ್ಷೇತ್ರದಿಂದ ವಿಧಾನ ಸಭೆಗೆ ಸ್ಪರ್ಧಿಸಿ ಸೋತರು. ನಂತರ ಸ್ಥಳೀಯ ಸಂಸ್ಥೆಗಳ ಮೂಲಕ ವಿಧಾನ ಪರಿಷತ್ತಿಗೆ ಆಯ್ಕೆಯಾದರು. ಆಗ ರಾಮಕೃಷ್ಣ ಹೆಗಡೆ ವಿರೋಧ ಪಕ್ಷದ ನಾಯಕರಾದರೆ ಬೊಮ್ಮಾಯಿ ಉಪ ನಾಯಕ.

ಪ್ರಚಾರ ಮಾಡದೆಯೇ ಚುನಾವಣೆ ಗೆಲ್ಲಲು ಸಾಧ್ಯವೇ ಇಂತಹ ಅಪರೂಪದ ಜಯ ಬೊಮ್ಮಾಯಿ ಅವರಿಗೆ ಲಭಿಸಿದ್ದು 1978ರ ವಿಧಾನಸಭೆ ಚುನಾವಣೆಯಲ್ಲಿ ಜನತಾ ಪಕ್ಷದಿಂದ ಹುಬ್ಬಳ್ಳಿ ಗ್ರಾಮಾಂತರ ಕ್ಷೇತ್ರದಿಂದ ಸ್ಪರ್ಧಿಸಿದ ಸಂದರ್ಭದಲ್ಲಿ ಅವರಿಗೆ ಲಘು ಹೃದಯಾಘಾತವಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಿದರು. ಮತಕ್ಷೇತ್ರಕ್ಕೆ ಕಾಲಿಡಲು ಆಗಲೇ ಇಲ್ಲ. ಆದರೂ ಬೊಮ್ಮಾಯಿ ಜಯಗಳಿಸಿ, ವಿಧಾನ ಸಭೆಯಲ್ಲಿ ವಿರೋಧಪಕ್ಷದ ನಾಯಕರಾದರು.

**ಪಕ್ಷದ ಶಿಸ್ತಿನ ಸಿಪಾಯಿ:** ರಾಜ್ಯದ ರಾಜಕೀಯ ಇತಿಹಾಸದಲ್ಲೇ 1983ರ ವಿಧಾನಸಭೆ ಚುನಾವಣೆ ಮಹತ್ತರವಾದುದು. ಆಗ ಕ್ರಾಂತಿ ರಂಗ ಹಾಗೂ ಜನತಾಪಕ್ಷ ಒಂದುಗೂಡಿದವು. ಈ ಒಗ್ಗಟ್ಟಿಗೆ ಕಾರಣೀಕರ್ತರು ಬೊಮ್ಮಾಯಿ.

ಈ ಚುನಾವಣೆಯಲ್ಲಿ ಹೆಚ್ಚು ಸ್ಥಾನಗಳಿಸಿದ ಜನತಾರಂಗವು ಪಕ್ಷೇತರರು ಹಾಗೂ 18 ಸ್ಥಾನಗಳನ್ನು ಪಡೆದ ಬಿಜೆಪಿ ಬೆಂಬಲದೊಡನೆ ಸರ್ಕಾರ ರಚಿಸಿತು. ಆಗ ನಾನು ಹಳಿಯಾಳ ವಿಧಾನಸಭೆ ಕ್ಷೇತ್ರದಿಂದ ಮೊದಲ ಸಲ ಶಾಸಕನಾಗಿ ಆಯ್ಕೆಯಾಗಿದ್ದೆ. ಈ ಸಂದರ್ಭದಲ್ಲಿ ರಾಮಕೃಷ್ಣ ಹೆಗಡೆ ಅವರೇ

ಮುಖ್ಯಮಂತ್ರಿಯಾಗಲು ಸೂಕ್ತವೆಂದು ಪಕ್ಷದ ಹೈಕಮಾಂಡ್ ನಿರ್ಧಾರ ಮಾಡಿತ್ತು. ಬೊಮ್ಮಾಯಿ ಯಾವಾಗಲೂ ಪಕ್ಷದ ಶಿಸ್ತಿನ ಸಿಪಾಯಿ. ಹೆಗಡೆ ಅವರಿಗೆ ಸಂಪೂರ್ಣ ಬೆಂಬಲ ಕೊಟ್ಟರು.

ಹೆಗಡೆ ಸಂಪುಟದಲ್ಲಿ ಬೊಮ್ಮಾಯಿ ಕೈಗಾರಿಕಾ ಸಚಿವರಾಗಿದ್ದರು. ಪ್ರಾಯಶ: ಆ ಅವಧಿಯಲ್ಲಿ ಕರ್ನಾಟಕದ ಕೈಗಾರಿಕಾ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವ ದೊರಕಿತೆಂದರೆ ತಪ್ಪಲ್ಲ. ಬೆಂಗಳೂರಿನ ಪೀಣ್ಯದ ಕೈಗಾರಿಕಾ ಅಭಿವೃದ್ಧಿ ಪ್ರದೇಶ ಎರಡು ಮತ್ತು ಮೂರನೆಯ ಹಂತ ಹಾಗೂ ಜಿಗಣಿ ಕೈಗಾರಿಕಾ ಪ್ರದೇಶದ ಅಭಿವೃದ್ಧಿ ಈ ಕಾಲದಲ್ಲಿ ನಡೆಯಿತು. ಇನ್ನು ರಾಜ್ಯದಲ್ಲಿ ಮಾಹಿತಿ–ತಂತ್ರಜ್ಞಾನದ ಹರಿಕಾರರೆಂದರೆ ಅದು ನಿಸ್ಸಂಶಯವಾಗಿ ಬೊಮ್ಮಾಯಿ ಅವರೇ ರಾಜ್ಯಕ್ಕೆ ಟೆಕ್ಸಾಸ್ ಇನ್ಸ್ಟ್ರುಮೆಂಟ್ ಕಂಪನಿ ಬರುವಲ್ಲಿ ಅವರ ಪಾತ್ರ ಪ್ರಮುಖ. ಈ ಬೆಳವಣಿಗೆಯಿಂದಲೇ ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನದ ಚಟುವಟಿಕೆಗಳು ಪ್ರಾರಂಭವಾದವು.

**ರಾಯಿಸ್ಟ್ ಬೊಮ್ಮಾಯಿ:** ಬೊಮ್ಮಾಯಿ ವಿದ್ಯಾರ್ಥಿ ದೆಸೆಯಿಂದಲೂ ಎಂ.ಎನ್.ರಾಯ್ ತತ್ತ್ವಗಳಿಗೆ ಮನಸೋತವರು. 'ಬ್ರಿಟಿಷರ ವಿರುದ್ಧ ನಡೆಸಿದ್ದಕ್ಕಿಂತ ಹೆಚ್ಚಿನ ಹೋರಾಟವನ್ನು ಭಾರತದಲ್ಲಿರುವ ಬಡತನದ ವಿರುದ್ಧ ಮಾಡಬೇಕಾಗಿದೆ' ಎಂಬ ರಾಯ್ ಮಾತುಗಳು ಬೊಮ್ಮಾಯಿ ಅವರ ಮೇಲೆ ಪ್ರಭಾವ ಬೀರಿದ್ದವು. ಇದು ಅವರ ಆಡಳಿತದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿತ್ತು.

1985ರಲ್ಲಿ ರಾಮಕೃಷ್ಣ ಹೆಗಡೆ ಸಂಪುಟದಲ್ಲಿ ಬೊಮ್ಮಾಯಿ ಕಂದಾಯ ಸಚಿವರಾದರು. ಸ್ವಲ್ಪ ದಿನ ಹಣಕಾಸು ಹಾಗೂ ಯೋಜನಾ ಸಚಿವರು ಆದರು. ಆಗ ನಾನು ಸಣ್ಣ ಕೈಗಾರಿಕಾ ಸಚಿವನಾಗಿ ಬೊಮ್ಮಾಯಿ ಕಾರ್ಯಶೀಲತೆಯನ್ನು ನೋಡುತ್ತಿದ್ದೆ, ಅವರು ಕಂದಾಯ ಸಚಿವರಾಗಿದ್ದಾಗ ಕರ್ನಾಟಕ ತೀವ್ರ ಬರಗಾಲ ಎದುರಿಸಿತ್ತು. ಸಂಪನ್ಮೂಲದ ಕೊರತೆ ಇತ್ತು. ಗ್ರಾಮೀಣ ಜನತೆಗೆ ಉದ್ಯೋಗವಿರಲಿಲ್ಲ. ಉತ್ತರ ಕರ್ನಾಟಕದಲ್ಲಿ ಕೂಲಿಕಾರ್ಮಿಕರು ಗುಳೆ ಹೊರಟರು. ಈ ಸಂದರ್ಭದಲ್ಲಿ ಬೊಮ್ಮಾಯಿ ರಾಜ್ಯ ನೆನಪಿಸಿಕೊಳ್ಳುವಂಥ ಕಾರ್ಯಗಳನ್ನು ಮಾಡಿದರು. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ರಚಿಸಿದರು. ಜಲಾನಯನ ಅಭಿವೃದ್ಧಿ ಯೋಜನೆ ಜಾರಿಗೊಳಿಸಿದರು. ಹಳ್ಳಿಗಳಲ್ಲಿ ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಿದರು.

ಆಶ್ಚರ್ಯಕರ ರೀತಿಯಲ್ಲಿ ಬರಗಾಲ ನಿರ್ವಹಣೆಗೆ ರಾಜ್ಯ ಸರ್ಕಾರ ಸಂಪನ್ಮೂಲ ಸಂಗ್ರಹಿಸಿತು. ಆಗ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಕರ್ನಾಟಕಕ್ಕೆ ಭೇಟಿ ನೀಡಿ ಬರಗಾಲ ನಿರ್ವಹಣೆಗೆ ಮಾಡಿದ್ದ ಕಾರ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

**ಒಲಿದ ಮುಖ್ಯಮಂತ್ರಿ ಸ್ಥಾನ:** ಈ ಮಧ್ಯೆ ಮುಖ್ಯಮಂತ್ರಿ ಹೆಗಡೆ ಕದ್ದಾಲಿಕೆ ಪ್ರಕರಣದಲ್ಲಿ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಟ್ಟರು. ಆಗ ಬೊಮ್ಮಾಯಿ ರಾಜ್ಯದ ಹನ್ನೊಂದನೇಯ ಮುಖ್ಯಮಂತ್ರಿಗಳಾದರು. ಮುಖ್ಯಮಂತ್ರಿ ಸ್ಥಾನಕ್ಕೆ ನಾಲ್ಕೈದು ಹೆಸರುಗಳಿದ್ದರು ನಾವೆಲ್ಲ ಶಾಸಕರು ಗಟ್ಟಿಯಾಗಿ ಬೊಮ್ಮಾಯಿ ಪರ ನಿಂತೆವು. ಅವರಿಗೆ ನನ್ನನ್ನು ಕಂಡರೆ ವಿಶೇಷ ಪ್ರೀತಿ ಮತ್ತು ವಿಶ್ವಾಸ. ಅವರು ಮುಖ್ಯಮಂತ್ರಿಯಾಗಿದ್ದಾಗ ಯುವ ಶಾಸಕನಾಗಿದ್ದ ನನಗೆ ವಸತಿ ಮತ್ತು ನಗರಾಭಿವೃದ್ಧಿ ಖಾತೆಯನ್ನು ನೀಡಿ ನನ್ನ ಸಾಮರ್ಥ್ಯವನ್ನು ಪರೀಕ್ಷೆಗೆ ಒಡ್ಡಿದರು. ಅವರ ಸಂಪುಟದಲ್ಲಿ ದೇವೇಗೌಡ, ಜೆ.ಎಚ್.ಪಟೇಲ್, ಎಂ.ಚಂದ್ರಶೇಖರ, ಸಿದ್ದರಾಮಯ್ಯ, ಸಿಂಧ್ಯಾ, ಪ್ರಕಾಶ, ಜಾಲಪ್ಪ ಮೊದಲಾದ ಕ್ರಿಯಾಶೀಲ ಸಚಿವರಿದ್ದರು.

ನಂತರದ ದಿನಗಳಲ್ಲಿ ವಿ.ಪಿ.ಸಿಂಗ್, ದೇವಿಲಾಲ್, ಲಾಲ್ ಪ್ರಸಾದ್ ಯಾದವ್ ಬಿಜು ಪಟ್ನಾಯಕ್ ಸೇರಿ ಜನತಾದಳ ಮಾಡಲು ತೀರ್ಮಾನ ಮಾಡಿದರು. 1989ರಲ್ಲಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ಭಾರಿ ಜನಸಮೂಹದ ಎದುರು ಬೊಮ್ಮಾಯಿ ನೇತೃತ್ವದಲ್ಲಿ ಜನತಾದಳದ ಉದಯವಾಯಿತು. ಆದರೆ, ದೇವೇಗೌಡರು 23 ಶಾಸಕರೊಡನೆ ಜನತಾ ಪಕ್ಷದಲ್ಲೇ ಉಳಿದರು.

**ಐತಿಹಾಸಿಕ ತೀರ್ಪು:** ಬದಲಾದ ಈ ರಾಜಕೀಯ ಪರಿಸ್ಥಿತಿಯಲ್ಲಿ ನಮ್ಮ ಕೆಲವು ಶಾಸಕರು ವಿರೋಧಿ ಪಕ್ಷದ ಗುಂಪಿನೊಂದಿಗೆ ಕೈಜೋಡಿಸಿ, ಮುಖ್ಯಮಂತ್ರಿಯವರಲ್ಲಿ ತಮಗೆ ವಿಶ್ವಾಸವಿಲ್ಲ ಎಂದರು. ಆ ದಿನ ರಾತ್ರಿ ನಾನು ಬೊಮ್ಮಾಯಿ ಅವರ ಅಧಿಕೃತ ನಿವಾಸ ಬಾಲೂಬ್ರೂಯಿಯಲ್ಲಿ ಅವರ ಜೊತೆಗಿದ್ದೆ.

ವಿಧಾನ ಸಭೆಯಲ್ಲಿ ಬಹುಮತ ಸಾಬೀತು ಮಾಡುತ್ತೇನೆ ಎಂದು ಬೊಮ್ಮಾಯಿ ಲಿಖಿತ ಮನವಿ ಸಲ್ಲಿಸಿದರು. ರಾಜ್ಯಪಾಲರು ಪಕ್ಷಪಾತಿಯಾಗಿ ವರ್ತಿಸಿ, ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿದರು. ರಾಜ್ಯದ ಜನತಾದಳ ನೇತೃತ್ವದ ಸರ್ಕಾರವನ್ನು 1994ರ ಏಪ್ರಿಲ್ 21 ರಂದು ವಜಾಗೊಳಿಸಿದರು. ಬೊಮ್ಮಾಯಿ ಸುಪ್ರೀಂಕೋರ್ಟ್ ಮೆಟ್ಟಿಲು ಹತ್ತಿದರು. 1994 ಮಾರ್ಚ್ 11 ರಂದು ಸುಪ್ರೀಂಕೋರ್ಟ್ ತೀರ್ಪು ಕೊಟ್ಟಿತು. ಯಾವುದೇ ಚುನಾಯಿತ ಸರ್ಕಾರದ ಹಣೆಬರಹವನ್ನು ಅಲ್ಲಿನ ಶಾಸನಸಭೆ ಮಾತ್ರ ನಿರ್ಣಯಿಸಬೇಕು. ಒಂದೊಮ್ಮೆ ರಾಜ್ಯಪಾಲರು ರಾಜ್ಯ ಸರ್ಕಾರವನ್ನು ವಜಾಗೊಳಿಸಿದರೆ, ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಮಂಡಿಸಿ ಇದಕ್ಕೆ ಅನುಮೋದನೆ ಪಡೆಯಬೇಕು ಎಂದು ಒಂಭತ್ತು ನ್ಯಾಯಮೂರ್ತಿಗಳನ್ನು ಒಳಗೊಂಡ ಸಂವಿಧಾನ ಪೀಠ ಮಹತ್ವಪೂರ್ಣ ತೀರ್ಪುಕೊಟ್ಟಿತು.

ಆದರೆ, ಕಾಲ ಮಿಂಚಿದ್ದರಿಂದ ಈ ತೀರ್ಪು ಆಧರಿಸಿ ಬೊಮ್ಮಾಯಿ ಅವರಿಗೆ ಮತ್ತೆ ಮುಖ್ಯಮಂತ್ರಿಯಾಗುವ ಅವಕಾಶ ಸಿಗಲಿಲ್ಲ. ದೇಶದ ಪ್ರಜಾಪ್ರಭುತ್ವದ ಬೆಳವಣಿಗೆಗೆ ಈ ತೀರ್ಪು ಅಮೂಲ್ಯವಾದ ಕಾಣಿಕೆ ನೀಡಿತು. ಸಂವಿಧಾನ ನಿರ್ಮಾಪಕರ ಆಶಯವನ್ನು ಎತ್ತಿ ಹಿಡಿಯಿತು ಇಂತಹ ಮಹತ್ವದ ತೀರ್ಪು ಬರಲು ಐದು ವರ್ಷಗಳ ಕಾಲ ಹೋರಾಟ ಮಾಡಿದ ಬೊಮ್ಮಾಯಿ ಅವರನ್ನು ಕರ್ನಾಟಕ ಮಾತ್ರವಲ್ಲ. ದೇಶದ ಎಲ್ಲ ನಾಯಕರುಗಳು ಒಂದಲ್ಲ ಒಂದು ಸಮಯದಲ್ಲಿ ಜ್ಞಾಪಿಸಿಕೊಳ್ಳುತ್ತಾರೆ. ಈ ಐತಿಹಾಸಿಕ ತೀರ್ಪಿನಿಂದಾಗಿ ಶಾಸನ ರಚನಾ ಸಭೆಗಳಿಗೆ ಹಿಂದೆಂದೂ ಇಲ್ಲದ ಪ್ರಾಮುಖ್ಯ ಹಾಗೂ ರಾಜ್ಯ ಸರ್ಕಾರಗಳಿಗೆ ಸ್ಥಿರತೆ ದೊರೆಯಿತು.

ರಾಜ್ಯಪಾಲರನ್ನು ಬಳಸಿಕೊಂಡು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳನ್ನು ಮನತೋಚಿದಂತೆ ಕಿತ್ತೆಸೆಯುವ ಕೆಟ್ಟ ಸಂಪ್ರದಾಯಕ್ಕೆ ತೆರೆ ಎಳೆಯಿತು.

**ಶಿಕ್ಷಣಕ್ಕೆ ದುಪ್ಪಟ್ಟು ಬಜೆಟ್ಟು:** ಮುಖ್ಯಮಂತ್ರಿಯಾಗಿದ್ದ ದೇವೇಗೌಡ 1996ರಲ್ಲಿ ಅನಿರೀಕ್ಷಿತವಾಗಿ ದೇಶದ ಪ್ರಧಾನ ಮಂತ್ರಿಗಳಾದರು. ಅವರ ಸಚಿವ ಸಂಪುಟದಲ್ಲಿ ಬೊಮ್ಮಾಯಿ ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆ ಸಚಿವರಾದರು. ಕೇಂದ್ರ ಸರ್ಕಾರ ತನ್ನ ಬಜೆಟ್‌ನಲ್ಲಿ ಶಿಕ್ಷಣ ವಲಯಕ್ಕೆ ಶೇ.3ರಷ್ಟು ಹೆಚ್ಚಿಸಿತು. 1990 ರಿಂದ 1996ರವರೆಗೆ ಬೊಮ್ಮಾಯಿ ಜನತಾದಳದ ರಾಷ್ಟ್ರೀಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದರು. ಕಾಲಾನಂತರದಲ್ಲಿ ಮತ್ತೆ ಜನತಾದಳ ಹಾಗೂ ಜಾತ್ಯತೀತ ಜನತಾದಳ ಎಂದು ಕವಲು ಒಡೆಯಿತು. ಈ ನಡುವೆ ಜೆ.ಎಚ್.ಪಟೇಲ್ ಹಾಗೂ ರಾಮಕೃಷ್ಣ ಹೆಗಡೆ ನಿಧನರಾದರು.

ಬೊಮ್ಮಾಯಿ ಅವರ ಧರ್ಮಪತ್ನಿ ಗಂಗಮ್ಮ ಅನಾರೋಗ್ಯದಿಂದ 2002ರಲ್ಲಿ ಇಹಲೋಕ ತ್ಯಜಿಸಿದರು. ಬೊಮ್ಮಾಯಿ ಅವರ ಇಬ್ಬರು ಹೆಣ್ಣುಮಕ್ಕಳು ಗಂಡಂದಿರ ಜೊತೆ ನೆಮ್ಮದಿಯಿಂದಿದ್ದಾರೆ. ಇಬ್ಬರು ಗಂಡು ಮಕ್ಕಳಲ್ಲಿ ಒಬ್ಬರು ಕೈಗಾರಿಕೋದ್ಯಮಿ, ಮತ್ತೊಬ್ಬರು ಇಂದಿನ ಗೃಹ ಸಚಿವ ಬಸವರಾಜ ಬೊಮ್ಮಾಯಿ., ಗಂಗಮ್ಮ ಬೊಮ್ಮಾಯಿ ಅವರ ಸೋದರಮಾವನ ಮಗಳಾದರೂ ಧರ್ಮಪತ್ನಿಯಾಗಿ ಪತಿಯ ಬೆಳವಣಿಗೆಗೆ ಪ್ರೇರಕ ಶಕ್ತಿಯಾಗಿ ನಿಂತಿದ್ದರು. ಗ್ರಾಮೀಣ ಪ್ರದೇಶದಿಂದ ಬಂದಿದ್ದರೂ ಬೊಮ್ಮಾಯಿ ದಂಪತಿ ಅತಿಥಿ ಸತ್ಕಾರದಲ್ಲಿ ಎತ್ತಿದ ಕೈ. ಬೊಮ್ಮಾಯಿ ತಮ್ಮ ತಾಯಿ ಶಿವಮ್ಮ ಅವರನ್ನು ನೆನೆದು ಭಾವುಕರಾದ ಹಲವು ಪ್ರಸಂಗಗಳು ನನ್ನ ನೆನಪಿನಲ್ಲಿದೆ.

ಆತ್ಮೀಯರೆಲ್ಲ ತೊರೆದು ಹೋದ ಮೇಲೆ ಬೊಮ್ಮಾಯಿ ಏಕಾಂಗಿಯಾದರು. ಮನೆಯಲ್ಲಿ ಬಿದ್ದು ಮೂಳೆ ಮುರಿದಿತ್ತು. ಅನೇಕ ಸಲ ಅವರನ್ನು ಈ ಸಂದರ್ಭದಲ್ಲಿ ನಾನು ಹೋಗಿ ನೋಡಿದ್ದೇನೆ, ಎಂದು ತಮ್ಮ ನೋವನ್ನು ಕುರಿತು ಮಾತನಾಡಿದವರಲ್ಲ. ದೇಶದ ಪರಿಸ್ಥಿತಿ ಕುರಿತು ಆತಂಕ ವ್ಯಕ್ತಪಡಿಸುತ್ತಿದ್ದರು. 2007 ಅಕ್ಟೋಬರ್ 10ರಂದು ಬೊಮ್ಮಾಯಿ ಇಹಲೋಕ ತ್ಯಜಿಸಿದರು.

**ಲೇಖಕರು: ಆರ್. ವಿ. ದೇಶಪಾಂಡೆ**
**ಮಾಜಿ ಸಚಿವರು ಹಾಗೂ ಶಾಸಕರು**
**ಆಧಾರ: ವಿಜಯವಾಣಿ, ದಿನಾಂಕ:10.10.2020**

## 2. The Gokak movement and Kannada pride

The Gokak agitation was important step forward in safeguarding Kannada, but subsequent developments have set us on a path away from the landmark movement's objective, writes Rajendra Chenni

The Gokak agitation of the 1980s, described as one of the biggest language-centric movements in post-independent India, had its origin in the much contested three languages formula, which was adopted on the recommendations of several education commissions.

The most contentious aspect of this proposal was offering Sanskrit as the first language in Karnataka high schools until the Gokak movement raised a huge protest against it.

Sanskrit was directly offered at the high school level, with the option to answer examinations in Kannada or English. Surprisingly, Sanskrit students were found to score high marks and thereby secured higher ranks in the SSLC examinations.

**The language question:-**This led to a situation in which Kannada, the state language, was the last choice of many students, especially in the English-medium schools. Kannadiga students were not required to study their native language or mother tongue at all in high school.

The then Chief Minister D Devaraj Urs took a decision to correct the anomaly by moving Sanskrit from the first language to the group of third languages, while Kannada and all languages of the land (including minority languages) were brought to the group of first and second languages.

It has to be said emphatically that at no stage were language other than Kannada made to lost the constitutionally assured status and protection, because the myth circulated then-which still survives-is that these languages were marginalised that these languages were marginalised by the hegemony of Kannada.

After Urs lost power in 1980, the new Chief Minister R Gundu Rao brought Sanskrit back to the first language group.

Writers and hundreds of Kannada organisations began protests against the move and the government decided to constitute a committee under the Chairmanship of Jnanpith awardee Prof VK Gokak to look into the issue.

Interestingly there was suspicion that the committee would favour Sanskrit and protests were held with the slogan Gokak, Go Back. However the Gokak Committee Report (January 27, 1981) not only rejected the inclusion of Sanskrit as a first language, but went on to recommend Kannada as the sole first language at the high school level and made Kannada compulsory at the primary level from Class 3 onwards.

The delay and reluctance of the state government, to implement the Gokak committee Report led to the Gokak movement which spread across the state.

Outside Kannada literary circles and organisations, the response was tepid to begin with. But the iconic actor Rajkumar's entry turned it into a mass movement overnight.

The visuals of the protests across the state provide incredible evidence of the fervor and the energy of the movement. There was also some rioting, which led to the death of seven persons in the police firing. The state government had to yield.

**Seminal debates:-**In retrospect, the Gokak movement provoked seminal debates over the need for education in the mother tongue, the hegemony of English, the cultural politics involving Sanskrit and most importantly, the status of the state language vis-a-vis other mother tongues. Scholars have also seen the Gokak movement as the public manifestation of the fissures in Kannada identity.

Janpith awardee UR Ananthamurthy misread it as "mass hysteria". Some scholars cautioned against the movement's vulnerability to communal discourses, linguistic hegemony and violence, as witnessed in the Cauvery and anti-Urdu riots.

**Changing context:-**The legacy of the Gokak movement has to be constantly reformulated in the radically changing context of migrant labour, Bengalurus cosmopolitanism, and the ambivalent nature of globalisation, all set within the framework of an inclusive federalism and democracy.

The complex issues were given a short shrift in the judgements of the Karnataka High Court and the constitutional bench of the Supreme Court when minority institutions and others questioned the orders passed by the state government in the aftermath of the movement.

While the judgements uphold the right of the child (parent by proxy) to choose a language and medium of instruction, courts also in the hearing and obiter dicta advocated English in the language and logic of global capitalism.

As many Kannada writers have said, this provided an impetus to the private institutions to promote English in schools. As the Kothari Commission feared, the education system itself may perpetuate inequalities and hierarchies through such happenings.

*(The writer is a literary and cultural critic based in Shivamogga)*

## 3. ಕನ್ನಡ ಕಾಯಕ ವರ್ಷ: ಆಶಯ ಒಳ್ಳೆಯದು, ಅನುಷ್ಠಾನ ಮುಖ್ಯ

65ನೇ ಕನ್ನಡ ರಾಜ್ಯೋತ್ಸವದ ವೇಳೆ ಮುಖ್ಯಮಂತ್ರಿ ಯಡಿಯೂರಪ್ಪ ಅವರು ರಾಜ್ಯದಲ್ಲಿ ಒಂದು ವರ್ಷ "ಕನ್ನಡ ಕಾಯಕ ವರ್ಷ" ಆಚರಿಸುವ ಘೋಷಣೆ ಮಾಡಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ ರೂಪಿಸಿದ ಈ ಕಾರ್ಯಕ್ರಮದ ಸಂಪೂರ್ಣ ರೂಪರೇಷೆಗಳು ಇನ್ನಷ್ಟೇ ಪ್ರಕಟವಾಗಬೇಕಿದೆ. ಈ ಕಾರ್ಯಕ್ರಮದಡಿ ಬ್ಯಾಂಕುಗಳಲ್ಲಿ ಕನ್ನಡ ಬಳಸಲು ಪ್ರೋತ್ಸಾಹ ನೀಡುವುದು. ಸರ್ಕಾರದ ಇಲಾಖೆಗಳಲ್ಲಿ ಕನ್ನಡದಲ್ಲಿ ಅಧಿಕೃತ ವ್ಯವಹಾರಗಳನ್ನು ನಡೆಸುವುದು, ಕೇಂದ್ರ ಸರ್ಕಾರಿ ಇಲಾಖೆಗಳಲ್ಲಿ ಕನ್ನಡಕ್ಕೆ ಒತ್ತು ನೀಡುವುದು, ರಾಜ್ಯದಲ್ಲಿರುವ ಅನ್ಯ ಭಾಷಿಕರಿಗೆ ಕನ್ನಡ ಕಲಿಸಲು ಒತ್ತು ನೀಡುವುದು, ಜನರಿಗೆ ಮೊಬೈಲ್ ಮುಂತಾದ ತಾಂತ್ರಿಕ ವೇದಿಕೆಗಳಲ್ಲಿ ಕನ್ನಡವನ್ನು ಸುಲಭವಾಗಿ ಬಳಸಲು ಸಾಧ್ಯವಾಗುವಂತೆ ಮಾಡಲು ಯೂನಿಕೋಡ್ ಬಳಸುವಂತೆ ಪ್ರಚಾರ ಮಾಡುವುದು, ಬೋರ್ಡ್‌ಗಳಲ್ಲಿ ಕನ್ನಡ ಬಳಸುವಂತೆ ಮಾಡುವುದು ಹೀಗೆ ಒಂದು ವರ್ಷದಲ್ಲಿ ಹಲವಾರು ಕೆಲಸ ಮಾಡುವ ಗುರಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ನಾಗಾಭರಣ ಹಂಚಿಕೊಂಡಿದ್ದಾರೆ. ಇದೊಂದು ಉತ್ತಮ ಆಶಯದ ಯೋಜನೆ, ಕನ್ನಡದಲ್ಲಿ ವ್ಯವಹರಿಸುವುದಕ್ಕೆ ಕೀಳರಿಮೆ ಹೊಂದಿದ್ದ ಸ್ಥಿತಿಯಿಂದ ಕನ್ನಡದಲ್ಲಿ ವ್ಯವಹರಿಸುವುದು ಮುಖ್ಯ ಎಂಬುದನ್ನು ಅರಿತುಕೊಂಡಿರುವ ಜಾಗೃತ ಸ್ಥಿತಿಗೆ ಕನ್ನಡಿಗರು ತಲುಪುತ್ತಿರುವ ಈ ಹೊತ್ತಿನಲ್ಲಿ ಎಲ್ಲಾ ರಂಗಗಳಲ್ಲಿ ಕನ್ನಡದ ಬಳಕೆಗೆ ಸರ್ಕಾರದಿಂದಲೂ ಪ್ರೋತ್ಸಾಹ ದೊರೆತರೆ ಈ ವರ್ಷದ ಕನ್ನಡ ರಾಜ್ಯೋತ್ಸವ ಮಾಸ ಖಂಡಿತ ಅರ್ಥಪೂರ್ಣವಾಗಲಿದೆ.

ಸಮಸ್ಯೆಯಿರುವುದು ಎಲ್ಲಿ ಅಂದರೆ, ಇಂತಹ ಅನೇಕ ಕಾರ್ಯಕ್ರಮಗಳನ್ನು ಈ ಹಿಂದೆಯೂ ಸರ್ಕಾರ ಘೋಷಿಸಿತ್ತು. ಕನ್ನಡ ಅಭಿವೃದ್ಧಿ ಪ್ರಾಧಿಕಾರವಂತೂ ಸರ್ಕಾರಿ ಇಲಾಖೆಗಳಲ್ಲಿ ಆಡಳಿತಕ್ಕೆ ಕನ್ನಡ ಬಳಸಬೇಕೆಂದು, ಬ್ಯಾಂಕುಗಳು ಗ್ರಾಹಕರಿಗೆ ಕನ್ನಡದಲ್ಲಿ ಸೇವೆ ನೀಡಬೇಕೆಂದು, ಕೇಂದ್ರ ಸರ್ಕಾರದ ಅಂಚೆ, ವಿಮೆ, ರೈಲ್ವೆ ಮುಂತಾದ ವಿಭಾಗಗಳಲ್ಲಿ ಕನ್ನಡದಲ್ಲಿ ಎಲ್ಲ ಸೇವೆಗಳು ಸಿಗುವಂತಾಗಬೇಕು ಎಂದು ಪತ್ರಗಳ ಮೇಲೆ ಪತ್ರ ಬರೆದಿದೆ. ರಾಜ್ಯದಲ್ಲಿ ಅಂಗಡಿ ಮುಂಗಟ್ಟುಗಳು ಬೋರ್ಡ್‌ಗಳು ಕನ್ನಡದಲ್ಲಿ ಇರಲೇಬೇಕೆಂದು ವರ್ಷದ ಹಿಂದೆ ಸರ್ಕಾರ ಆದೇಶ ಕೂಡ ಹೊರಡಿಸಿದೆ. ಆದರೆ ಇವ್ಯಾವುವೂ ಇಲ್ಲಿಯವರೆಗೆ ಅನುಷ್ಠಾನಕ್ಕೆ ಬಂದಿಲ್ಲ. ಹೀಗಾಗಿ ಈಗಿನ 'ಕನ್ನಡ ಕಾಯಕ ವರ್ಷ' ಕಾರ್ಯಕ್ರಮವು ಅನುಷ್ಠಾನಕ್ಕೆ ಬಂದಿಲ್ಲ. ಹೀಗಾಗಿ ಈಗಿನ 'ಕನ್ನಡ ಕಾಯಕ ವರ್ಷ' ಕಾರ್ಯಕ್ರಮವು ಹಿಂದಿನ ಕಾರ್ಯಕ್ರಮಗಳಂತಾಗುತ್ತದೆಯೇ ಎಂಬ ಅನುಮಾನ ಸಕಾರಣವಾಗಿಯೇ ಎಲ್ಲರ ಮನದಲ್ಲೂ ಏಳುತ್ತದೆ. ಹಾಗಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಸರ್ಕಾರದ ಮೇಲಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ ರೂಪಿಸಿದ ಈ ಕಾರ್ಯಕ್ರಮದ ಅನುಷ್ಠಾನದ ಜವಾಬ್ದಾರಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಿ ಕೈತೊಳೆದುಕೊಳ್ಳಬಾರದು. ಏಕೆಂದರೆ ಈ ಪ್ರಾಧಿಕಾರಕ್ಕೆ ಸೀಮಿತ ಅಧಿಕಾರವಿದೆ.

ಕನ್ನಡ ಕಾಯಕ ವರ್ಷದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಇನ್ನೊಂದು ಸಮಸ್ಯೆಯಿರುವುದು ತ್ರಿಭಾಷಾ ನೀತಿಯದು. ಕೇಂದ್ರ ಸರ್ಕಾರ ಎಲ್ಲಾ ರಾಜ್ಯಗಳಲ್ಲೂ ಶಿಕ್ಷಣ ಹಾಗೂ ಆಡಳಿತದಲ್ಲಿ ಇಂಗ್ಲೀಷ್–ಹಿಂದಿ ಹಾಗೂ ಸ್ಥಳೀಯ ಭಾಷೆಯನ್ನು ಬಳಕೆ ಮಾಡಬೇಕೆಂಬ ತ್ರಿಭಾಷಾ ಸೂತ್ರವನ್ನು ಹೊಂದಿದೆ. ಇದರಡಿ ಎಲ್ಲಾ ರಾಜ್ಯಗಳಲ್ಲೂ ಇಂಗ್ಲೀಷ್‌ಗೆ ಹೇಗಿದ್ದರೂ ಸಹಜವಾಗಿಯೇ ಒತ್ತು ಸಿಗುತ್ತಿದೆ. ಆದರೆ ಕೇಂದ್ರ ಸರ್ಕಾರವು ಬ್ಯಾಂಕು ಹಾಗೂ ಕೇಂದ್ರ ಸರ್ಕಾರಿ ಇಲಾಖೆಗಳ ಸೇವೆಗಳಲ್ಲಿ ಹಿಂದಿಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತದೆ. ಅದರ ಪರಿಣಾಮವಾಗಿ ಪ್ರಾದೇಶಿಕ ಭಾಷೆಯಾದ ಕನ್ನಡಕ್ಕೆ ಸಂಪರ್ಕ ಭಾಷೆಯಾಗಿ ನಿರೀಕ್ಷಿತ ಒತ್ತು ಸಿಗುತ್ತಿಲ್ಲ. ಹಿಂದಿಯ ಬಳಕೆಯನ್ನು ಉತ್ತೇಜಿಸುವ ಅಧಿಕೃತ ಕಾರ್ಯಕ್ರಮವನ್ನೇ ಹೊಂದಿರುವ ಕೇಂದ್ರ ಸರ್ಕಾರದ ಎದುರು ಕನ್ನಡ ಕಾಯಕ ವರ್ಷದ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಹೇಗೆ ಕನ್ನಡಕ್ಕೆ ಪ್ರೋತ್ಸಾಹ ನೀಡುತ್ತದೆ ಎಂಬುದು ಕುತೂಹಲದ ಸಂಗತಿ. ಕನಿಷ್ಠ ಪಕ್ಷ ಬ್ಯಾಂಕ್, ಅಂಚೆ ಕಛೇರಿ, ರೈಲ್ವೆ ಹಾಗೂ ವಿಮಾ ಕಚೇರಿಗಳಲ್ಲಿ ಕನ್ನಡದಲ್ಲಿ ಸೇವೆ ಬಯಸುವವರಿಗೆಲ್ಲ ಅದು ಅನಾಯಾಸವಾಗಿ ಸಿಗುವಂತೆ ಮಾಡಿದರೂ ಈ ಯೋಜನೆ ತಕ್ಕಮಟ್ಟಿಗೆ ಸಾರ್ಥಕವಾದಂತೆಯೇ.

ಇನ್ನು ಯೂನಿಕೋಡ್ ಬಳಸಲು ಪ್ರೋತ್ಸಾಹ ನೀಡುತ್ತೇವೆ ಎನ್ನುತ್ತಿರುವ ಸರ್ಕಾರ, ಯೂನಿಕೋಡ್ ಬಳಸುವುದಕ್ಕೆ ಇರುವ ಸಮಸ್ಯೆಗಳನ್ನು ಮೊದಲು ಬಗೆಹರಿಸಬೇಕಿದೆ. ಆಗ ತಾಂತ್ರಿಕ ವೇದಿಕೆಗಳಲ್ಲಿ ತನ್ನಿಂತಾನೇ ಕನ್ನಡದ ಬಳಕೆ ಹೆಚ್ಚುತ್ತದೆ.

ಆಧಾರ:ಕನ್ನಡಪ್ರಭ, ದಿನಾಂಕ:03.11.2020

## 4. 343ನೇ ವಿಧಿ ಬದಲಿಸುವುದೇ ಪರಿಹಾರ

ಕಾನೂನು, ಅಧಿಸೂಚನೆ ಅಥವಾ ಮಾಹಿತಿಗಳನ್ನು ಕೇಂದ್ರ ಸರ್ಕಾರವು ಕನ್ನಡದಲ್ಲಿ ಏಕೆ ನೀಡುತ್ತಿಲ್ಲ. ಈ ಪ್ರಶ್ನೆಗೆ ಸಂವಿಧಾನದ ಒಂದು ಅಂಶವನ್ನು ಗಮನಿಸಬೇಕು. 343ನೇ ವಿಧಿ ಪ್ರಕಾರ ಹಿಂದಿಯು ಭಾರತದ ಅಧಿಕೃತ ಭಾಷೆ. ಕೇಂದ್ರ ಸರ್ಕಾರದ ಆಡಳಿತ ಭಾಷೆ. ಹಿಂದಿಯೇತರ ಜನರಿಗೆ ಇಂಗ್ಲೀಷ್ ಇರುತ್ತದೆ. ಮುಂದಿನ ದಿನಗಳಲ್ಲಿ ಅದನ್ನು ಬೇಕಾದರೆ ತೆಗೆಯಬಹುದು. ಈ ವಿಧಿಯನ್ವಯ ಎಲ್ಲವನ್ನು ಕೇಂದ್ರ ಸರ್ಕಾರವು ಹಿಂದಿ, ಇಂಗ್ಲೀಷ್‌ನಲ್ಲಿ ಮಾತ್ರ ನೀಡುತ್ತಿದೆ. ಇದು ಸರಿಯಲ್ಲ. ನಾವಿರುವುದು ಪ್ರಜಾಪ್ರಭುತ್ವದಲ್ಲಿ. ಪ್ರತಿಯೊಂದು ಮಾಹಿತಿಯನ್ನು ನಮ್ಮ ಜನರು ತಮ್ಮದೇ ಭಾಷೆಯಲ್ಲಿ ಪಡೆಯಬೇಕು.

ಕೇಂದ್ರ ಸರ್ಕಾರದ ಕಾಯಿದೆ, ಆದೇಶ, ಅಧಿಸೂಚನೆ, ವರದಿ ಮತ್ತು ಮಾಹಿತಿಗಳೆಲ್ಲವೂ ಕನ್ನಡದಲ್ಲೂ ಇರಬೇಕು. ಇದು ಸಾಧ್ಯವಾಗಲು ಸಂವಿಧಾನದ 343ನೇ ವಿಧಿ ಬದಲಿಸುವುದೊಂದೇ ಪರಿಹಾರ. ಈ ವಿಧಿಗೆ ತಿದ್ದುಪಡಿ ತಂದರೇ, ಕನ್ನಡ ಸೇರಿದಂತೆ ಹಿಂದಿಯೇತರ ಭಾಷಿಗರ ಸಮಸ್ಯೆಗಳು ನಿವಾರಣೆಯಾಗುತ್ತವೆ.

ಸಂವಿಧಾನದಲ್ಲಿ ಕನ್ನಡವು ಸೇರಿದಂತೆ 22 ಭಾಷೆಗಳಿಗೆ ದೇಶದ ಅಧಿಕೃತ ಭಾಷೆಯ ಸ್ಥಾನ ನೀಡಲಾಗಿದೆ. ಆದರೆ ಇದು ಕಣ್ಣೊರೆಸುವ ತಂತ್ರ. ಕರೆನ್ಸಿಯಲ್ಲಿ ಬಿಟ್ಟರೇ ಬೇರೆಲ್ಲೂ ಈ ಭಾಷೆಗಳು ಕಾಣಿಸುವುದಿಲ್ಲ. ಭಾರತ ಅನ್ನೋದು ಒಕ್ಕೂಟ ವ್ಯವಸ್ಥೆ. ಅಮೆರಿಕಾದಲ್ಲಿ ಫೆಡರಲ್ ಸರ್ಕಾರವಿದ್ದಂತೆ, ನಮ್ಮಲ್ಲಿ ಒಕ್ಕೂಟ ಸರ್ಕಾರ ಅಥವಾ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಎರಡು ಸಮಾನ. ಕೇಂದ್ರ ಸರ್ಕಾರ ಬಾಸ್ ಅಥವಾ ಅಪ್ಪ–ಅಮ್ಮ ಎಂಬುದಾಗಿ ಸಂವಿಧಾನದಲ್ಲಿ ಎಲ್ಲೂ ಇಲ್ಲ. ರಾಜ್ಯ–ಕೇಂದ್ರ ಸರ್ಕಾರಗಳೆರಡನ್ನೂ ಸಮಾನಾಂತರದಲ್ಲಿ ಇಡಲಾಗಿದೆ. ಕೆಲಸಗಳ ವಿಂಗಡಣೆಯಾಗಿದೆ.

ಒಂದಿಷ್ಟು ಅಂಶಗಳನ್ನು ಕೇಂದ್ರ ಪಟ್ಟಿ, ಜಂಟಿ ಪಟ್ಟಿ ಮತ್ತು ರಾಜ್ಯ ಪಟ್ಟಿ ಎಂದು ವಿಂಗಡಿಸಲಾಗಿದೆ. ಕೇಂದ್ರ ಸರ್ಕಾರವು 90 ಅಂಶಗಳಲ್ಲಿ ಕಾನೂನುಗಳನ್ನು ರೂಪಿಸುತ್ತದೆ. ರಾಜ್ಯ ಪಟ್ಟಿಯಲ್ಲಿ ರಾಜ್ಯ ಸರ್ಕಾರಗಳು ಕಾನೂನುಗಳನ್ನು ಮಾಡುತ್ತದೆ. ಜಂಟಿ ಪಟ್ಟಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾನೂನು ರೂಪಿಸುತ್ತವೆ. ಮಹತ್ವದ ರಕ್ಷಣೆ. ವಿದೇಶಾಂಗ ವ್ಯವಹಾರ, ರೈಲ್ವೆ ತೆರಿಗೆ ಇವೆಲ್ಲವು ಕೇಂದ್ರ ಪಟ್ಟಿಯಲ್ಲಿ ಬರುತ್ತವೆ. ಕೃಷಿ, ಶಿಕ್ಷಣ ಮತ್ತಿತರ ಅಂಶಗಳು ಜಂಟಿ ಪಟ್ಟಿಯಲ್ಲಿ ಬರುತ್ತದೆ. ಜಂಟಿ ಪಟ್ಟಿಯಲ್ಲಿ ಬರುವ 50 ಅಂಶಗಳು ಸೇರಿದಂತೆ ಕೇಂದ್ರ ಸರ್ಕಾರವು 150–160 ಅಂಶಗಳ ಮೇಲೆ ಕಾನೂನನ್ನು ರೂಪಿಸುತ್ತವೆ. ಇವೆಲ್ಲವು ಕನ್ನಡವು ಸೇರಿದಂತೆ ಭಾರತೀಯ ಭಾಷೆಗಳಲ್ಲಿ ಪ್ರಕಟವಾಗಬೇಕು.

ರಾಷ್ಟ್ರೀಯ ಶಿಕ್ಷಣ ನೀತಿಯ ಕರಡು ಇತ್ತೀಚೆಗೆ ಬಿಡುಗಡೆಯಾಯಿತು. ಜಂಟಿ ಪಟ್ಟಿಯಲ್ಲಿ ಶಿಕ್ಷಣ ಇದ್ದರು. ಹಿಂದಿ ಮತ್ತು ಇಂಗ್ಲೀಷ್‌ನಲ್ಲಷ್ಟೇ ಕೇಂದ್ರ ಸರ್ಕಾರವು ಶಿಕ್ಷಣ ನೀತಿಯನ್ನು ಪ್ರಕಟಿಸಿತು. ತಮಿಳುನಾಡಲ್ಲಿ ಕೆಲವರು ಹೈಕೋರ್ಟ್ ಸೂಚನೆಯ ಮೇರೆಗೆ ಭಾರತೀಯ ಭಾಷೆಗಳಲ್ಲಿ ಅದು ಬಂತು.

160 ಅಂಶಗಳಲ್ಲಿನ ಕಾನೂನುಗಳನ್ನು ಜನರಿಗೆ ಅರ್ಥವಾಗುವ ಭಾಷೆಯಲ್ಲಿ ಕೊಡದೇ ಹೋದರೆ, ಜನರಿಗೆ ಆಡಳಿತವು ದೂರವಾಗುತ್ತದೆ. ಆಡಳಿತವು ಹತ್ತಿರವಾಗದೋದು ನಮ್ಮ ಭಾಷೆಯಲ್ಲಿ ಮಾಹಿತಿ ಸಿಕ್ಕಿದಾಗ ಮಾತ್ರ. ನನ್ನ ಭಾಷೆಯಲ್ಲಿಯೇ ಮಾಹಿತಿ ಬೇಕು ಅನ್ನೋದು ಕೇವಲ ಭಾವನಾತ್ಮಕ ವಿಚಾರ, ಜನರ ಭಾಷೆಯಲ್ಲಿಯೇ ಮಾಹಿತಿ ಸಿಕ್ಕಾಗ ಆಡಳಿತ ಪರಿಣಾಮಕಾರಿಯಾಗುತ್ತದೆ. ಕಾನೂನುಗಳು ಜನರಿಗೆ ಅರ್ಥವಾಗುತ್ತವೆ. ಆಡಳಿತದಲ್ಲಿ ಪಾರದರ್ಶಕತೆ ತರಲು ನಮ್ಮ ಭಾಷೆಯ ಬಳಕೆ ಅಗತ್ಯವಿದೆ.

ಕಾನೂನುಗಳನ್ನು ಜನರ ಭಾಷೆಗೆ ತರದೇ ಹೋದರೆ, ಕಾನೂನು ರೂಪಿಸುವ ಪ್ರಕ್ರಿಯೆಯಿಂದ ಜನರು ದೂರವಾಗುತ್ತಾರೆ. ಪ್ರಜಾಪ್ರಭುತ್ವದಲ್ಲಿ ಜನರು ಜನರಿಗಾಗಿ ಕಾನೂನು ರೂಪಿಸಬೇಕು. ಜನರ ಭಾಷೆ ಬಳಕೆಯಾಗದೆ ಹೋದರೆ ಫಲವೇನು? ಕೃಷಿ ಕಾಯಿದೆ ಹಿಂದಿ ಅಥವಾ ಇಂಗ್ಲೀಷ್‌ನಲ್ಲಿ ಇದ್ದರೆ

ಇತರರ ಪಾಡೇನು? ಯಾರಿಗೆ ಅರ್ಥವಾಗುತ್ತದೆ? ಪರಿಸರ ಕಾಯಿದೆ ಕುರಿತಾಗಿ ಹೈಕೋರ್ಟ್ ಸೂಚನೆ ನೀಡಿದ ಬಳಿಕವಷ್ಟೇ ಭಾರತೀಯ ಭಾಷೆಗಳಲ್ಲಿ ತರ್ಜುಮೆಗೆ ಕೇಂದ್ರ ಸರ್ಕಾರವು ಮುಂದಾಗಿದೆ.

**ಅಡುಗೆ ಮನೆ ಭಾಷೆ ಕನ್ನಡ ಆಗದಿರಲಿ:** ಸಂವಿಧಾನದ 343ನೇ ವಿಧಿಯ ಪ್ರಕಾರ ಬರೀ ಹಿಂದಿ, ಇಂಗ್ಲೀಷ್‌ನಲ್ಲಿ ಮಾಹಿತಿ ನೀಡಿದರೆ ಸಾಕು ಎನ್ನುವ ಕೇಂದ್ರದ ಧೋರಣೆ ಸರಿಯಲ್ಲ. ಸಂವಿಧಾನದ ಆಚೆಗೆ ಕೋರ್ಟ್ ತೀರ್ಮಾನ ತೆಗೆದುಕೊಳ್ಳಲಾಗದು. ಒಂದು ವೇಳೆ, 343ರ ಪ್ರಕಾರ ಕೇಂದ್ರದ ಕ್ರಮ ಸರಿಯಾಗಿದೆ ಎಂದು ಕೋರ್ಟ್ ತೀರ್ಪು ಬಂದು ಬಿಟ್ಟರೇ, ನಮ್ಮ ಭಾಷೆಯಲ್ಲಿ ಯವುದೂ ಸಿಗುವುದಿಲ್ಲ. ಕನ್ನಡವು ಅಡುಗೆ ಮನೆ ಭಾಷೆಯಾಗುತ್ತದೆ. ಕನ್ನಡ ಉಳಿಯಲು ಬಳಕೆಯನ್ನು ಹೆಚ್ಚಿಸಬೇಕು. ಆಡಳಿತ, ಶಿಕ್ಷಣದಲ್ಲಿ ಕನ್ನಡ ಬಲವಾಗಬೇಕು.

ಕನ್ನಡದಲ್ಲಿ ಮಾಹಿತಿ ಸೇರಿದಂತೆ ಪ್ರತಿಯೊಂದಕ್ಕೂ ಹೋರಾಟ ಮಾಡಬೇಕು. ಕೋರ್ಟ್‌ಗೆ ಹೋಗಬೇಕು ಅನ್ನುವ ಸ್ಥಿತಿ ನಿರ್ಮಾಣವಾಗಿದೆ.

**ಇಂಗ್ಲೀಷ್‌ನ ಅವಲಂಬನೆ ತಗ್ಗಿಸಬಹುದೇ:–** 'ನಿಮಗೆ ಕನ್ನಡದಲ್ಲಿ ಮಾಹಿತಿ ಕೊಡುವುದಿಲ್ಲ. ಬೇಕಾದರೆ ಹಿಂದಿ ಜೊತೆಗೆ ಇಂಗ್ಲೀಷ್‌ನಲ್ಲಿ ಮಾಹಿತಿ ನೀಡುತ್ತೇವೆ," ಎಂದು ಕೇಂದ್ರ ಸರ್ಕಾರ ಹೇಳುತ್ತಿದೆ. 'ಇಂಗ್ಲೀಷಲ್ಲ, ಕನ್ನಡದಲ್ಲೇ ಮಾಹಿತಿ ಕೊಡಿ," ಅನ್ನುವುದು ನಮ್ಮ ಒತ್ತಾಯ, ನಮ್ಮ ಹೋರಾಟವನ್ನು ಒಳಗಿನಿಂದ ನೋಡಿದರೆ, ಅದು ಇಂಗ್ಲೀಷ್ ವಿರುದ್ಧವೇ ಆಗಿದೆ. ನಾವು ಇಂಗ್ಲೀಷನ್ನು ಓಡಿಸಬೇಕು ಎಂದರೆ, ಹಿಂದಿಯನ್ನು ಎಲ್ಲಾ ಕಡೆ ನಿಲ್ಲಿಸುವ ಕೇಂದ್ರದ ಮನಸ್ಥಿತಿ ದೂರವಾಗಬೇಕು. ಆಗಷ್ಟೇ ಇಂಗ್ಲೀಷ್ ಪ್ರಭಾವ ತಗ್ಗಿಸಲು ಸಾಧ್ಯ. ಕನ್ನಡ, ತೆಲುಗು, ತಮಿಳು ಮತ್ತಿತರ ಭಾರತೀಯ ಭಾಷೆಗಳ ಬಳಕೆಯನ್ನು ಹೆಚ್ಚಿಸುವ ಮೂಲಕ ಇಂಗ್ಲೀಷ್‌ನ ಅವಲಂಬನೆ ತಗ್ಗಿಸಬಹುದು.

**ಲೇಖಕರು:– ಅರುಣ್ ಜಾವಗಲ್**
**ಕನ್ನಡ ಪರ ಯುವ ಚಿಂತಕ**
**ಆಧಾರ: ವಿಜಯ ಕರ್ನಾಟಕ, ದಿನಾಂಕ:08.11.2020**

## 5. ಸರ್ಕಾರಿ ನೌಕರರು – ಸಾರ್ವಜನಿಕರ ನಡುವೆ ಸಂವಹನ ಕೊರತೆ ಏಕೆ

ಪ್ರಾಸ್ತಾವಿಕವಾಗಿ ಎರಡು ಸಣ್ಣ ಕಥೆಗಳನ್ನು ಹೇಳುತ್ತೇನೆ, ನೋಡಿ..

ಒಂದು: ಸರ್ಕಾರದ ಇಲಾಖೆಯೊಂದರಿಂದ ಸಾಮೂಹಿಕ ಗಿಡ ನೆಡುವ ಕೆಲಸದ ಗುತ್ತಿಗೆ ನೀಡಲಾಗಿತ್ತು. ಈ ಕೆಲಸಕ್ಕೆ ಮೂವರು ಕಾರ್ಮಿಕರ ತಂಡವೊಂದನ್ನು ರಚಿಸಲಾಗಿತ್ತು. ಮೊದಲಿನವನು ಗುಂಡಿ ತೆಗೆದರೆ ಎರಡನೇಯವನು ಗಿಡವನ್ನು ಅದರಲ್ಲಿಡಬೇಕು ಮೂರನೇಯವನು ಮುಚ್ಚುತ್ತಾ ಹೋಗಬೇಕು. ಒಂದು ದಿನ ಗಿಡ ಇಡುವ ಕಾರ್ಮಿಕ ಯಾವುದೋ ಕಾರಣಕ್ಕೆ ಬಂದಿರಲಿಲ್ಲ. ಉಳಿದಿಬ್ಬರು ತಮ್ಮ ಕೆಲಸ ಮಾಡಿ ಮುಗಿಸಿದರು. ಫಲಿತಾಂಶ?

ಎರಡು: ಹಳ್ಳಿಗನೊಬ್ಬ ನಗರ ಪಾಲಿಕೆಗೆ ಬಂದಿದ್ದ, ಯಾರೋ ಒಬ್ಬರು ಅವನ ಕೆಲಸವಾಗಬೇಕಾದರೆ 'ಮೇಯರ್' ಅವರನ್ನು ಭೇಟಿಯಾಗಿ ನಿವೇದಿಸಿಕೊಳ್ಳುವಂತೆ ಸಲಹೆ ನೀಡಿದ್ದರಂತೆ, ಕಷ್ಟಪಟ್ಟು ಪಾಲಿಕೆ ಕಚೇರಿಗೆ ತಲುಪಿದವನು ಎದುರಿಗೆ ಸಿಕ್ಕ ವ್ಯಕ್ತಿಯ ಬಳಿ ಸ್ವಾಮಿ, ಇಲ್ಲಿ ಮೇಯೋರು (ಮೇಯರ್ ಎಂದು ಸ್ಪಷ್ಟವಾಗಿ ಹೇಳಲು ಬಾರದೆ) ಎಲ್ಲಿದ್ದಾರೆಂದು ಕೇಳಿದನಂತೆ. ಹಾಗೇ ಕೇಳಿದ ವ್ಯಕ್ತಿ ಪಾಲಿಕೆಯಲ್ಲಿ ಕಡತಗಳ ಹಿಂದೆ ಓಡಾಡಿ ಮಾಡಿಸಿ ಕೊಡುವ ಮಧ್ಯವರ್ತಿಯಾಗಿದ್ದ. ಮಧ್ಯವರ್ತಿಯ ಉತ್ತರ ಹೀಗಿತ್ತು.: ಇಲ್ಲಿರುವ ಎಲ್ಲರೂ ಮೇಯೋರೇ, ಏನಾಗಬೇಕು ಹೇಳು ಪಾಪ, ಹಳ್ಳಿಮುಗ್ಧ ವಿಷಯ ತಿಳಿಸಿದ. ಅವನಿಂದ ಒಂದಿಷ್ಟು ವಸೂಲಿ ಮಾಡಿ ಏನೋ ಹೇಳಿ ಕಳುಹಿಸಿದನಂತೆ. ಕೆಲಸ ಆಯಿತೋ ಇಲ್ಲವೋ, ಅದು ಬೇರೆ ವಿಷಯ.

ಈಗ ವಿಷಯಕ್ಕೆ ಬರೋಣ. ಇಂದಿನ ಕಾಲಘಟ್ಟದಲ್ಲಿ ಜನರ ಮನಸ್ಥಿತಿಯು, ಸರ್ಕಾರಿ ನೌಕರರು ನಮ್ಮ ನಿಮ್ಮಂತೆ ಮನುಷ್ಯರೇ ಎನ್ನುವುದನ್ನು ಮರೆಯುವಷ್ಟು ಹದಗೆಟ್ಟಿದೆ. ಇವರಿಬ್ಬರ ನಡುವಿನ ಸಂವಹನದ ಕೊರತೆಗೆ ಸರ್ಕಾರಿ ನೌಕರರಷ್ಟೇ ಕಾರಣರಲ್ಲ. ಇತರರ ಪಾಲು ಇದೆಯೆಂಬುದು ಅನುಭವಿಸಿದವರಿಗಷ್ಟೇ ಗೊತ್ತು. ಸರ್ಕಾರಿ ಹುದ್ದೆಗೆ ನೇಮಕಾತಿಗಳಲ್ಲಿ ಈ ರೀತಿಯಲ್ಲಿ ಮಾಡಲಾಗುತ್ತದೆ. ಒಂದು: ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ, ಎರಡು: ಸರ್ಕಾರಿ ನೌಕರರು ಸೇವೆಯಲ್ಲಿರುವಾಗ ಮೃತಪಟ್ಟರೆ ಅವರ ಅವಲಂಬಿತರಿಗೆ ಸಿಗುವ ನೇರ ನೇಮಕಾತಿ. ಮೂರು: ಒಂದು ವರ್ಗದ ಹುದ್ದೆಗೆ ನೇಮಕಗೊಂಡು ಬೇರೊಂದು ಹುದ್ದೆಗೆ ಬದಲಾವಣೆ ಮಾಡಿಕೊಳ್ಳುವವರು. ನಾಲ್ಕು: ಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕವಾಗಿ ನೇಮಕವಾಗುವವರು. ಇವರಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯಡಿ ನೇಮಕಾತಿ ಆಗುವವರಿಗೆ ಇರುವಷ್ಟು ಬದ್ಧತೆ ಬೇರೆಯವರಿಗೆ ಇರುವುದಿಲ್ಲ. ನಾಲ್ಕನೇ ವರ್ಗದಡಿ ಬರುವ ಗುತ್ತಿಗೆ ಆಧಾರದ ನೌಕರಿಗೆ ಯಾವ ಸೇವಾ ನಿಯಮಗಳು ಅನ್ವಯಿಸದೇ ಇರುವುದರಿಂದ ಅವರು ಕೆಲಸ ಮಾಡಿದರು – ಮಾಡದಿದ್ದರು ಮಧ್ಯವರ್ತಿಗಳಾಗಿ ಕೆಲಸ ಮಾಡಿದರೂ, ಅವರ ಹೆಸರಿನಲ್ಲಿ ಬೇರಿನ್ಯಾರೋ ಅಥವಾ ಇನ್ಯಾರದೋ ಹೆಸರಿನಲ್ಲಿ ಅವರೋ ಆಡುವ ಆಟಗಳಿಗೆ ಬಲಿಪಶುವಾಗುವವರು ಇನ್ಯಾರೋ. ಇದಿಷ್ಟು ವ್ಯವಸ್ಥೆಯ ಒಂದು ಮಗ್ಗುಲಾದರೆ ಸರ್ಕಾರಿ ನೌಕರರು ಭ್ರಷ್ಟರೆನಿಸಲು, ಸಿಡುಕರಾಗಲು ಮೇಲ್ನೋಟಕ್ಕೆ ಕಾಣಿಸದ ಅದೆಷ್ಟೋ ಕಾರಣಗಳಿವೆ.

ಮೇಲೆ ಹೇಳಿದ ಕಥೆಗಳಲ್ಲಿ ಮೊದಲಿನದು ಸರ್ಕಾರಿ ಕೆಲಸವನ್ನು ಬಾಧ್ಯತೆ ಇಲ್ಲದವರ ಕೈಯಲ್ಲಿ ಕೊಟ್ಟರೆ ತೆರಿಗೆದಾರರ ಹಣ ಹೇಗೆ ಪೋಲಾಗುತ್ತದೆನ್ನುವುದಕ್ಕೆ, ಜವಾಬ್ದಾರಿಯೆಂಬುದು ಗೊತ್ತೇ ಇಲ್ಲದ ನೌಕರರಿಗೆ ಉದಾಹರಣೆ. ಎರಡನೇಯದು, ಸರ್ಕಾರದ ಯಾವುದೇ ಯೋಜನೆಯಿರಲಿ, ನಿಜವಾದ ಫಲಾನುಭವಿಗೆ ತಲುಪುವಲ್ಲಿ ಮಧ್ಯವರ್ತಿಗಳು ಹೇಗೆಲ್ಲಾ ಅಡ್ಡಿಯಾಗುತ್ತಾರೆ ಎಂಬುದಕ್ಕೆ ಉದಾಹರಣೆ ಯಾಗಿದೆ. ಸರ್ಕಾರಗಳು ಯೋಜನೆಗಳನ್ನು ರಾಜಕೀಯ ಲಾಭದ ದೃಷ್ಟಿಯಿಂದ ತರುವುದು, ಅವುಗಳಲ್ಲಿ ಏನಾದರೂ ಒಂದು ಸಣ್ಣ ರಂಧ್ರವನ್ನುಳಿಸಿ ನಾಯಕರಿಗೂ, ಮಧ್ಯವರ್ತಿಗಳಿಗೊಂದಿಷ್ಟು ಲಾಭ ಮಾಡಿಕೊಡುವುದು ನಿರಂತರವಾಗಿ ನಡೆದಿದೆ. ಮೊದಲಿನವರಿಗಿಂತ ಎರಡನೇ ವರ್ಗದವರು ಹೆಚ್ಚು ಅಪಾಯಕಾರಿ. ಹೆಚ್ಚಿನ ಸರ್ಕಾರಿ ಕಚೇರಿಗಳಲ್ಲಿ ಇಂತಹ ಮಧ್ಯವರ್ತಿಗಳಿರುತ್ತಾರೆ. ಸಾರ್ವಜನಿಕರಲ್ಲಿ

ಸರ್ಕಾರಿ ಕಚೇರಿಗಳ ಬಗ್ಗೆ ಇರುವ ಅಭಿಪ್ರಾಯಗಳೇ ಇವರ ಬಂಡವಾಳ. ಕಂದಾಯ ಕಚೇರಿಗಳಲ್ಲಿ, ಸ್ಥಳೀಯ ಸಂಸ್ಥೆಗಳ ಕಚೇರಿಗಳಲ್ಲಿ ಇದು ಹೆಚ್ಚು. ಕೆಲವು ಕಚೇರಿಗಳಲ್ಲಿ ಅಲ್ಲಿನ ನೌಕರರೇ ಮಧ್ಯವರ್ತಿಗಳ ಕೆಲಸ ಮಾಡುವುದಿದೆ. ಹೀಗಾದಾಗ ಸರ್ಕಾರಿ ನೌಕರರು/ಅಧಿಕಾರಿಗಳು ಎಷ್ಟೇ ಪ್ರಾಮಾಣಿಕವಾಗಿದ್ದರೂ, ಅವರಿಗೆ ತಿಳಿಯದೆ ನಡೆಯುವ ಕೆಲವು ಘಟನೆಗಳು ನೌಕರರ/ಅಧಿಕಾರಿಗಳ ಬಗ್ಗೆ ಜನರಲ್ಲಿ ತಪ್ಪು ಅಭಿಪ್ರಾಯಕ್ಕೆ ಕಾರಣವಾಗುತ್ತದೆ. ನನ್ನ ಸರ್ಕಾರಿ ಸೇವಾವಧಿಯ ಅನುಭವಗಳ ಜೊತೆ ನನ್ನ ಮೇಲಿನ ಅಧಿಕಾರಿಗಳ ಜೊತೆಗೆ ಹಾಗೂ ನಾಗರಿಕನಾಗಿ ಇತರ ಇಲಾಖೆಗಳೊಡನೆ ವ್ಯವಹರಿಸುವಾಗ ಆದ ಅನುಭವಗಳು ಹೀಗಿವೆ. ವಿಕಲಚೇತನರಿಗೆ, ವಯೋವೃದ್ಧರಿಗೆ ಮತ್ತು ವಿಧವೆಯರಿಗೆ ಸರ್ಕಾರದ ವತಿಯಿಂದ ನೀಡುವ ಮಾಸಿಕ ವೇತನವನ್ನು ಪಡೆಯಲು ಸರ್ಕಾರಿ ಆಸ್ಪತ್ರೆಯಿಂದ ಪ್ರಮಾಣಪತ್ರದ ಅಗತ್ಯವಿದೆ. ಸಾಮಾನ್ಯವಾಗಿ ಇದನ್ನು ನೀಡಲು ಯಾವುದೇ ಶಿಫಾರಸ್ಸು ಅಗತ್ಯವಿರುವುದಲ್ಲ. ಆದರೆ ಆಸ್ಪತ್ರೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದ. ಓರ್ವ ವ್ಯಕ್ತಿ ಪದೇ ಪದೇ ಕಚೇರಿಗೆ ಬಂದು ಹೋಗುತ್ತಿದ್ದ. ಒಮ್ಮೆ ಕೇಳಿಬಂದ ಸುದ್ದಿ ನಿಜಕ್ಕೂ ಅಘಾತಕಾರಿ. ನೀಡಲ್ಪಡುವ ಪ್ರಮಾಣಪತ್ರಕ್ಕೂ ನನಗೂ ಯಾವ ಸಂಬಂಧವಿಲ್ಲದಿದ್ದರೂ. ಮಧ್ಯವರ್ತಿಯಾಗಿ ವ್ಯವಹರಿಸುತ್ತಿದ್ದ ಆ ಗುತ್ತಿಗೆ ನೆಲೆಯ ಉದ್ಯೋಗಿ ನನ್ನ ಹೆಸರು ಹೇಳಿ ಹಣವನ್ನು ವಸೂಲಿ ಮಾಡಿ ಕಿಸಿಗೆ ಇಳಿಸುತ್ತಿದ್ದನಂತೆ. ಊರೆಲ್ಲಾ ಪ್ರಚಾರವೇನಿತ್ತೆಂದರೆ ವಸೂಲಾಗುವ ಮೊತ್ತ ನನಗೆ ಸೇರುತ್ತದಂತೆ. ಆಗಿಂದಾಗ್ಗೆ ರಾಜಕಾರಣಿಗಳು ನಡೆಸುವ ಸಾರ್ವಜನಿಕ ಸಂಪರ್ಕ ಸಭೆ, ಪ್ರತಿಭಟನಾ ಸಭೆಗಳಲ್ಲಿ ಜನರ ಎದುರು ಅಧಿಕಾರಿಗಳನ್ನು ಏಕವಚನದಲ್ಲಿ ಗದರಿಸುವುದು, ಜನರನ್ನು ಆಕರ್ಷಿಸಲು ಕಾನೂನಿನಲ್ಲಿ ಇಲ್ಲದಿದ್ದರೂ ಅಪರಿಪಕ್ವ ಆದೇಶಗಳು ಇರುವುದಾಗಿ ಬಿಂಬಿಸುವುದು. ಇದನ್ನು ನಂಬಿದ ಕೆಲವರು ನಾಯಕರು ಹೇಳಿದ್ದು ಸರಿಯಿದೆ, ಅಧಿಕಾರಿಗಳು ಲಂಚಕ್ಕಾಗಿ ಪೀಡಿಸುತ್ತಾರೆಂದು ಭಾವಿಸುವುದು, ನಡೆಯುತ್ತಿರುತ್ತದೆ. ಈ ಕಾರಣಕ್ಕೆ ನಾಯಕರೆನಿಸಿಕೊಂಡವರ ಪ್ರಚಾರದ ತೆವಲಿಗೆ ಅಧಿಕಾರಿಗಳು ಕೆಟ್ಟವರಾಗುತ್ತಾರೆ.

ಹಿಂದೊಮ್ಮೆ ಮುಖ್ಯಮಂತ್ರಿ ಪರಿಹಾರ ನಿಧಿಯಲ್ಲಿ ಸ್ವಲ್ಪ ಮೊತ್ತವನ್ನು ಜಿಲ್ಲಾ ವೈದ್ಯಾಧಿಕಾರಿಯವರ ಅಧೀನದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯ ಸಮಿತಿಗೆ ನೀಡಲಾಗುತ್ತಿತ್ತು. ಸಾಮಾನ್ಯವಾಗಿ ಶಾಸಕರು ತಮ್ಮ ವ್ಯಾಪ್ತಿಗೆ ಬರುವವರು ಸಲ್ಲಿಸಿದ ಅರ್ಜಿಗಳನ್ನು ಶಿಫಾರಸ್ಸಿನೊಂದಿಗೆ ಮುಖ್ಯ ಮಂತ್ರಿಗಳ ಕಚೇರಿಗೆ ಕಳುಹಿಸುವುದು ವಾಡಿಕೆ. ಅಲ್ಲಿಂದ ಮಂಜೂರಾದ ಚೆಕ್ ಆಯಾ ತಾಲ್ಲೂಕಿನ ತಹಸೀಲ್ದಾರರಿಗೆ ಬರುತ್ತದೆ, ಮಂಜೂರಾದ ಬಗ್ಗೆ ಮಾಹಿತಿ ಶಿಫಾರಸ್ಸು ಮಾಡಿದ ಶಾಸಕರಿಗೆ ಬರುತ್ತದೆ. ಇಂತಹ ಕೋರಿಕೆ ಅರ್ಜಿಗಳನ್ನು ಒಬ್ಬರಿಗಿಂತ ಹೆಚ್ಚು ಕಡೆ ಕೊಡಬಾರದೆಂದು ನಿಯಮವಿದ್ದರೂ, ಓರ್ವ ವ್ಯಕ್ತಿ ಜಿಲ್ಲೆ ಮತ್ತು ರಾಜ್ಯ ಎರಡೂ ಕಡೆ ಅರ್ಜಿ ಕೊಟ್ಟಿದ್ದ ಜಿಲ್ಲಾ ಮಟ್ಟದಲ್ಲಿ ಐದು ಸಾವಿರ, ರಾಜ್ಯ ಮಟ್ಟದಲ್ಲಿ, ಶಾಸಕರ ಶಿಫಾರಸ್ಸಿನ ಮೇಲೆ ಇಪ್ಪತ್ತೈದು ಸಾವಿರ, ಏಕಕಾಲದಲ್ಲಿ ಮಂಜೂರಾಯಿತು. ಜಿಲ್ಲಾ ಕಚೇರಿಯಿಂದ ಐದು ಸಾವಿರ ಮಂಜೂರಾದ ಪತ್ರ ತಲುಪಿದ ದಿನದಂದೇ ಶಾಸಕರ ಪ್ರಕಟಣೆ ಪತ್ರಿಕೆಗಳಲ್ಲಿ ಪ್ರಕಟವಾಯ್ತು. ತಮಾಷೆ ನೋಡಿ, ಆ ವ್ಯಕ್ತಿ, ಆಸ್ಪತ್ರೆಗೆ ಬಂದು ಗಲಾಟೆ ಮಾಡಿದ್ದೇ ಮಾಡಿದ್ದು, ಶಾಸಕರು ಇಪ್ಪತ್ತೈದು ಮಂಜೂರಾಗಿರುವ ಹೇಳಿಕೆ ಕೊಟ್ಟಿದ್ದಾರೆ. ನೀವು ಐದು ಸಾವಿರ ಎನ್ನುತ್ತೀರಿ, ಇಪ್ಪತ್ತು ಸಾವಿರ ನೀವು ತಿಂದು ಹಾಕಿದ್ದೀರಿ, ಇತ್ಯಾದಿ. ಇದನ್ನು ವಿವರಿಸಿ ಹೇಳುವಷ್ಟರಲ್ಲಿ ಸುಸ್ತಾಗಿ ಹೋಯಿತು. ಜನರ ದೃಷ್ಟಿಯಲ್ಲಿ ಎಲ್ಲರೂ ಲಂಚಕೋರರು. ತಾಳ್ಮೆಯಿಂದ ಕೇಳುವ ವ್ಯವಧಾನವಿಲ್ಲ.

ಸರ್ಕಾರಿ ಆಸ್ಪತ್ರೆಯಲ್ಲಿ ಹುಟ್ಟಿದ ಮಕ್ಕಳ ಜನನ ಪ್ರಮಾಣ ಪತ್ರವನ್ನು ಒಂದು ವರ್ಷದವರೆಗೆ ಆಯಾ ಸರ್ಕಾರಿ ಆಸ್ಪತ್ರೆಗಳಲ್ಲಿ ನೀಡುವ ನಿಯಮವಿದೆ. ಜನನದ ಹದಿನಾಲ್ಕು ದಿನದೊಳಗೆ ಅರ್ಜಿ ಸಲ್ಲಿಸಿದರೆ ಪ್ರಮಾಣ ಪತ್ರ ನೀಡುವುದು ಸುಲಭವಾಗುವ ಕಾರಣ, ಆಸ್ಪತ್ರೆಯಿಂದ ಬಿಡುಗಡೆಯಾಗುವಾಗಲೇ ಎಲ್ಲಾ ವಿವರಗಳನ್ನೊಳಗೊಂಡ ಅರ್ಜಿಯಲ್ಲಿ ತಾಯಿಯ ಸಹಿ ಪಡೆದು ಕಳುಹಿಸಲಾಗುತ್ತಿತ್ತು. ಮಗುವಿನ ಹೆಸರು ಸೇರಿದಂತೆ, ಮಗುವಿಗೆ ಸಂಬಂಧಿಸಿದ ವಿವರಗಳನ್ನು ಸಲ್ಲಿಸುವ ಮೊದಲ ಅಧಿಕಾರವಿರುವುದು ತಾಯಿಗೆ. ಬದಲಾವಣೆಗೆ ಅವಕಾಶವಿದ್ದರೂ ಅದಕ್ಕೆ ಕಠಿಣ ನಿಯಮಗಳಿರುವುದರಿಂದ, ಆರಂಭದಲ್ಲೇ ಸರಿಯಾಗಿ ಪರಿಶೀಲಿಸಿ ಪ್ರಮಾಣ ಪತ್ರ ನೀಡಲಾಗುತ್ತಿತ್ತು.

ಒಂದು ದಿನ ಓರ್ವ ಮಹಾನುಭಾವ ಆಸ್ಪತ್ರೆ ಕಚೇರಿಗೆ ಬಂದು ದೊಡ್ಡ ಸ್ವರದಲ್ಲಿ ಎಗರಾಡತೊಡಗಿದ. ಅವನ ಮಾತಿನ ಮುಖ್ಯಾಂಶ ಇಷ್ಟೇ. ಆತ ಕಳೆದ ಕೆಲವು ವರ್ಷಗಳಿಂದ ಕೊಲ್ಲಿ ರಾಷ್ಟ್ರದಲ್ಲಿದ್ದನಂತೆ, ಮಗುವಿನ ಜನನವಾಗುವಾಗ ವಿದೇಶದಲ್ಲಿ ಇದ್ದವನ ಒಪ್ಪಿಗೆ ಇಲ್ಲದೆ ಹೆಸರು ಇಟ್ಟದ್ದು ತಾಯಿಯ ತಪ್ಪಂತೆ, ಪ್ರಮಾಣ ಪತ್ರ ಕೊಟ್ಟದ್ದು. ಆಸ್ಪತ್ರೆಯ ತಪ್ಪಂತೆ. ಅವನ ಆಯ್ಕೆಯ ಹೆಸರು ನಮೂದಿಸಿ ಹೊಸದಾಗಿ ಪ್ರಮಾಣ ಪತ್ರ ನೀಡಬೇಕಂತೆ. ಆತನ ಬೆಂಬಲಕ್ಕೆ ಕೆಲವು ಮರಿ ಘುಡಾರಿಗಳು ಬೇರೆ ಬಂದಿದ್ದರು. ಬರೇ ಸಾರ್ವಜನಿಕರ ಬಗ್ಗೆ ಮಾತ್ರ ಹೇಳುತ್ತೇನೆಂದು ತಿಳಿಯಬೇಡಿ, ನೌಕರರ ವಲಯದಲ್ಲಿರುವ ಕಪ್ಪು ಕುರಿಗಳ ಕಥೆಗಳನ್ನೂ ಸ್ವಲ್ಪ ಕೇಳಿ: ಆಸ್ಪತ್ರೆಯ ಪ್ರಯೋಗ ಶಾಲೆಯ ನೌಕರನೊಬ್ಬ ದಿನಾ ತಡವಾಗಿ ಬರುತ್ತಿದ್ದ. ಸದರಿ ವಿಭಾಗದಲ್ಲಿ ಪರೀಕ್ಷೆ ನಡೆಸಿದ ವರದಿಯನ್ನು ಪಡೆಯಲು ಒಬ್ಬರು ಕಾದುಕುಳಿತ್ತಿದ್ದರು. ಬಹಳ ಹೊತ್ತು ಕಾದ ಬಳಿಕ ಆತನ ಆಗಮನವಾಯ್ತು. ಆತನಿಗಾಗಿ ಕಾದು ಕುಳಿತವರು ಸಲುಗೆಯಿಂದ ಕೇಳಿದರು, ತಡವಾಯಿತೇ? ವೈದ್ಯರು ನೀವು ಬಂದಿದ್ದೀರಾ ಎಂಬುದನ್ನು ನೋಡಲು ಹಲವು ಬಾರಿ ಬಂದು ಹೋದರು. ಅದಕ್ಕೆ ಆತನ ಉತ್ತರ ಹೀಗಿತ್ತು. ನನಗೆ ಸಂಬಳ ಕೊಡುವುದು ಅವರಲ್ಲ, ಸರ್ಕಾರ, ಅವರೇನು ಕೇಳುವುದು, ಸರ್ಕಾರ ಕೇಳಲಿ, ಹೇಳುತ್ತೇನೆ. ವರದಿಗಾಗಿ ಕಾದುಕುಳಿತವರಿಗೆ ಈ ಉತ್ತರ ಸಹಿಸಲಾಗದೆ ಕೇಳಿಯೇ ಬಿಟ್ಟರು: ಓ, ಹೌದಲ್ವಾ, ಸರ್ಕಾರ ಎಂದರೆ ಯಾರು ಗೊತ್ತಾ? ತೆರಿಗೆ ಕೊಡುವ ನಾವು, ನಾನು ಕೇಳುತ್ತಿದ್ದೇನೆ, ಏಕೆ ತಡವಾಯಿತು? ಹೀಗೆ ತರ್ಕಬದ್ಧವಾಗಿ ಪ್ರಶ್ನೆ ಮಾಡುವ ನಾಗರಿಕರಿದ್ದರೆ, ಉದ್ಧಟತನಕ್ಕೆ ಸ್ವಲ್ಪ ಲಗಾಮು ಹಾಕಬಹುದು. ಸದಾ ಏನಾದರೂ ಅಪೇಕ್ಷಿಸುವ ನೌಕರರು ಕಡತಗಳನ್ನು ಇತ್ಯರ್ಥಗೊಳಿಸಲು ಇನ್ನಿಲ್ಲದ ತಪ್ಪುಗಳನ್ನು ಹುಡುಕುತ್ತಾರೆ. ಪಕ್ಕದ ಮೇಜಿನ ಕಡತ ಎತ್ತಿ ವಿಲೇ ಮಾಡುವ ಬದಲಿ ಕಡತ ಬಂದಿಲ್ಲವೆನ್ನುವವರೂ ಇದ್ದಾರೆ. ಊಹಾತ್ಮಕ ಆಕ್ಷೇಪಣೆಯೊಂದಿಗೆ ಆಟವಾಡುವವರೂ ಇದ್ದಾರೆ. ಒಂದೆರಡು ಉದಾಹರಣೆ: ದೇವಸ್ಥಾನಕ್ಕೆ ಸಂಬಂಧಿಸಿದ ಅರ್ಜಿ ಕೊಟ್ಟರೆ, ಆಸ್ತಿ ಯಾರ ಹೆಸರಿನಲ್ಲಿ ಇದೆಯೇ ಅವರೇ (ದೇವರೇ) ಸಹಿ ಮಾಡಬೇಕಂತೆ. ದಕ್ಷಿಣೆ ಕೊಟ್ಟರೆ ಯಾವ ಷರತ್ತು ಇಲ್ಲ. ಉದ್ದೇಶಪೂರ್ವಕ ತಪ್ಪಾಗಿರಲಿ, ಆಕಸ್ಮಿಕ ತಪ್ಪಾಗಿರಲಿ, ಪೊಲೀಸರು ಆರೋಪಿಯನ್ನು ಸಾರ್ವಜನಿಕ ಸ್ಥಳದಲ್ಲಿ ಬಯ್ಯುವುದು, ಹೊಡೆಯುವುದು ತಪ್ಪೇ ತಾನೆ?

ಸರ್ಕಾರಿ ಕಚೇರಿಯಲ್ಲಿ ಕಡತಗಳನ್ನು ಮಂಜೂರು ಮಾಡಿಸಿಕೊಳ್ಳಲು ಲಂಚ ಕೊಡುವವರು, ಒಂದೋ ಅವರ ಕಡತ ಕಾನೂನುಬಾಹಿರವಿರಬೇಕು ಅಥವಾ ಸರದಿಗಾಗಿ ಕಾಯುವಷ್ಟು ತಾಳ್ಮೆಯಿಲ್ಲದಿರಬೇಕು ತಪ್ಪು ತಮ್ಮದೇ ಆಗಿರುವಾಗ ಲಂಚ ಕೊಟ್ಟು ಹಿಂದಿನಿಂದ ದೂಷಿಸುವುದೇಕೆ?

ಪುನಃ ಆಸ್ಪತ್ರೆಯ ವಿಚಾರಕ್ಕೆ ಬರುವುದಾದರೆ, ಖಾಸಗಿ ಆಸ್ಪತ್ರೆಯಲ್ಲಿ ಭಾರಿ ಮೊತ್ತದ ಶುಲ್ಕ ಪಾವತಿಸಿ ದಿನವಿಡೀ ಕಾಯುವವರಿಗೆ, ಸರ್ಕಾರಿ ಆಸ್ಪತ್ರೆಯಲ್ಲಿ ತೀವ್ರ ಸಿಬ್ಬಂದಿ ಕೊರತೆ, ಸೀಮಿತ ಸೌಲಭ್ಯಗಳ ನಡುವೆ ಸೇವೆ ನೀಡಲು ಹೆಣಗಾಡುವವರ ಪರಿಶ್ರಮ ಅರ್ಥವಾಗುವುದಿಲ್ಲ. ಸಣ್ಣ ತಪ್ಪಾದರೂ, ಮಾಧ್ಯಮಗಳು ಸರ್ಕಾರಿ ಆಸ್ಪತ್ರೆಯ ಹೆಸರು ಬರದಂತೆ ತೇಲಿಸಿ ಬಿಡುತ್ತಾರೆ. ಇವೆಲ್ಲದಕ್ಕಿಂತ ವಿಭಿನ್ನ ಆಯಾಮದ ಒಂದು ಘಟನೆಯೊಂದಿಗೆ ಮುಗಿಸುತ್ತೇನೆ. ಯಾವುದೋ ಖಾಸಗಿ ಕೆಲಸದ ಮೇಲೆ ಪೊಲೀಸ್ ಠಾಣೆಗೆ ಹೋಗಿದ್ದೆ. ಅಲ್ಲಿ ಓರ್ವ ಲಾರಿ ಚಾಲಕನ ವಿಚಾರಣೆ ನಡೆಯುತ್ತಿತ್ತು. ಆತ ದಂಡ ಸಂಹಿತೆಯ ನಿಯಮವೊಂದನ್ನು ಉಲ್ಲೇಖಿಸಿ ಅದರಂತೆ ಆರೋಪ ಪಟ್ಟಿ ದಾಖಲಿಸಲು ಪೊಲೀಸ್ ಇನ್ಸ್‌ಪೆಕ್ಟರಿಗೆ ಸಲಹೆ ನೀಡುತ್ತಿದ್ದ. ಕಾರಣವೇನೆಂದರೆ, ಆತ ಹೇಳಿದ ನಿಯಮದಡಿ ಕೇವಲ ದಂಡವಂತೆ, ಬೇರೆ ನಿಯಮದಡಿ ದಾಖಲಿಸಿದರೆ ದಂಡದ ಜೊತೆಗೆ ಜೈಲುಶಿಕ್ಷೆ ಇರುವುದಂತೆ. ಅಪರಾಧ ಮಾಡುವುದು ತಪ್ಪೆಂಬ ಕೀಳರಿಮೆ ಕೂಡಾ ಇಲ್ಲದೆ ಪೊಲೀಸರಿಗೆ ಸಲಹೆ ನೀಡುವ ಬುದ್ಧಿವಂತರಿದ್ದಾರೆ.

**ಲೇಖಕರು:– ಮೋಹನದಾಸ ಕಿಣಿ**

**ಆಧಾರ: ವಿಶ್ವವಾಣಿ, ದಿನಾಂಕ:09.11.2020**

## 6. ಗಾಂಧೀಜಿಯ ಬೆಳಗಾವಿ ಭೇಟಿ

ಬೆಳಗಾವಿಯಲ್ಲಿ ಬಹಿರಂಗ ಸಭೆ 9ನೇ ನವೆಂಬರ್ 1920ರಂದು ನಡೆಯಿತು. ಈ ಸಾರ್ವಜನಿಕ ಬಹಿರಂಗ ಸಭೆಯಲ್ಲಿ ಗಾಂಧೀಜಿ ಹೀಗೆ ಹೇಳಿದರು. ಮಾರುತಿ ಗುಡಿಯಲ್ಲಿ ನಾನು ಕಂಡ ದೃಶ್ಯದಿಂದ ನನ್ನ ಮೇಲಾದ ಪ್ರಭಾವವನ್ನು ಶಬ್ದಗಳಿಂದ ವರ್ಣಿಸಲಾರೆ. ಪೂನಾದಲ್ಲಿಯೂ ನನಗೆ ಇಂಥದೇ ಅನುಭವ ಆಗಿತ್ತು. ಜನ ತಮ್ಮ ಪ್ರೀತಿಯನ್ನು ತಮ್ಮ ಒಡವೆಗಳನ್ನು ನನ್ನ ಮೇಲೆ ಮಳೆಗರೆದರು. ಅವರಿಗೆ ಗೊತ್ತು ರಾಮರಾಜ್ಯ ಪಡೆಯಲು ಸ್ವರಾಜ್ಯ ಸಂಪಾದಿಸಲು ನಾನು ಒಡವೆಗಳನ್ನು ಕೇಳಿದ್ದೇನೆ. ನಮ್ಮ ಕೋಟೀಶ್ವರರು ಇದಕ್ಕೆ ಸಮನಾಗಿ ಏನೂ ಕೊಟ್ಟಿಲ್ಲ. ಅವರ ಕಾಲಿಗೆ ಬಿದ್ದು ದಾನ ಕೇಳಿದಾಗ ಸ್ವಲ್ಪ ಅವರ ಮನಸ್ಸು ಕರಗಬಹುದು ಅಷ್ಟೇ. ಹೆಂಗಸರಿಗೆ ನಾನು ಏನೂ ಭಿನ್ನಹ ಮಾಡಬೇಕಾಗಿರಲಿಲ್ಲ. ಸ್ವಯಂ ಪ್ರೇರಣೆಯಿಂದ ಪ್ರೀತಿಯಿಂದ ನಾನು ಕೇಳಿದ್ದನ್ನೆಲ್ಲ ಕೊಟ್ಟರು. ಈ ಪ್ರೀತಿಯ ಕಾಣಿಕೆಗೆ ಕೋಟಿಗಟ್ಟಲೇ ದಾನ ಸಮ ಅಲ್ಲ.

ಶಹಾಪುರದಲ್ಲಿ ಜನರು ನಿಧಿ ಅರ್ಪಿಸಿದ್ದು, ಆನಂತರ ಖಾನಾಪುರ, ನಂದಗಡ, ಅಳ್ನಾವರ, ಹಳ್ಯಾಳಗಳ ಪ್ರವಾಸ ಮುಗಿಸಿಕೊಂಡು ಮರುದಿವಸ 10ನೇ ನವೆಂಬರ್ 1920ರಂದು ಗಾಂಧೀಜಿ ಧಾರವಾಡಕ್ಕೆ ತೆರಳಿದರು.

**ಧಾರವಾಡ ಭೇಟಿ (10ನೇ ನವೆಂಬರ್ 1920):** ಮಹಾತ್ಮ ಗಾಂಧೀಜಿಯವರು ಧಾರವಾಡಕ್ಕೆ 10ನೇ ನವೆಂಬರ್ 1920ರಂದು ಮುಂಜಾನೆ ತಲುಪಿಕೊಂಡರು. ಅವರೊಡನೆ ಶೌಕತ್ ಅಲಿಯವರೂ ಬಂದಿದ್ದರು. ಅವರು ಮೊದಲನೆಯ ದಿನ ಉಳ ಬಸಪ್ಪನ ಗುಡ್ಡದ ದೇವಸ್ಥಾನದ ಮುಂಭಾಗದಲ್ಲಿ ಸ್ಟೇಶನ್ ರೋಡಿನ ಮಗ್ಗಿನ ಬಯಲಿನಲ್ಲಿ ಸಾರ್ವಜನಿಕ ಭಾಷಣ ಮಾಡಿದರು. ಮರುದಿನ ಮುಂಜಾನೆ ಇಂದಿನ ಎಮ್ಮಿಕೇರಿ ಬಸ್ ನಿಲ್ದಾಣದ ಹಿಂಭಾಗದಲ್ಲಿರುವ ಅಂದಿನ ಧಾರವಾಡ ನಗರ ಸಭೆಯ ಅಧ್ಯಕ್ಷರಾಗಿದ್ದ ನಾರಾಯಣ ಕರಗುದರಿಯವರ ಮನೆಯ ಹತ್ತಿರವಿರುವ ಗಾಯಕವಾಡ ಬಂಗ್ಲೆಯಲ್ಲಿ ಅವರ ಜೊತೆಗೆ ಸಂಭಾಷಣೆಯಲ್ಲಿ ತೊಡಗಿದ್ದರು. ಮರುದಿನ ಧಾರವಾಡದಿಂದ ಹುಬ್ಬಳ್ಳಿಗೆ 11ನೇ ನವೆಂಬರ್ 1920ರಂದು ಪ್ರವಾಸ ಕೈಕೊಂಡರು.

ಧಾರವಾಡ ಜಿಲ್ಲೆಯ ಹುಬ್ಬಳ್ಳಿಯಲ್ಲಿ 11ನೇ ನವೆಂಬರ್ 1920ರಂದು ಶ್ರೀ ಸಿದ್ಧಾರೂಡ ಸ್ವಾಮೀಜಿಗೆ ಖಾದಿ ತೊಡಿಸಿದರು ಗಾಂಧೀಜಿ. ಇದು ಧಾರವಾಡ ಜಿಲ್ಲೆಯಲ್ಲಿ ಗಾಂಧೀಜಿ ಹೆಜ್ಜೆಗುರುತು. 1920ರಲ್ಲಿ ಶ್ರೀ ಸಿದ್ಧಾರೂಡ ಸ್ವಾಮೀಜಿಗೆ ಖಾದಿ ತೊಡಿಸಿದ ಬಾಪೂಜಿ. ಸದಾ ಕಡಿಮೆ ಬಟ್ಟೆ ತೊಟ್ಟು ಬದುಕಿ ಬಾಳಿದ ಹುಬ್ಬಳ್ಳಿಯ ಶ್ರೀ ಸಿದ್ಧಾರೂಢರಿಗೆ ಮಹಾತ್ಮ ಗಾಂಧೀಜಿ ತಮ್ಮ ಪ್ರೀತಿಯ ಖಾದಿ ತೊಡಿಸಿದ ಬಾಪೂಜಿ. ಸದಾ ಕಡಿಮೆ ಬಟ್ಟೆ ತೊಟ್ಟು ಬದುಕಿ ಬಾಳಿದ ಹುಬ್ಬಳ್ಳಿಯ ಶ್ರೀ ಸಿದ್ಧಾರೂಢರಿಗೆ ಮಹಾತ್ಮಾ ಗಾಂಧೀಜಿ ತಮ್ಮ ಪ್ರೀತಿಯ ಖಾದಿ ತೊಡಿಸುವ ಮೂಲಕ ಗೌರವ ಸಲ್ಲಿಸಿದರಲ್ಲದೇ, ಆ ಎರಡು ಅಪ್ರತಿಮ ಮೇರು ವ್ಯಕ್ತಿತ್ವಗಳು ಒಂದಾದ ಕ್ಷಣವನ್ನು ಕಣ್ತುಂಬಿಕೊಳ್ಳುವ ಭಾಗ್ಯ ಹಲವಾರು ಹುಬ್ಬಳ್ಳಿಗರಿಗೆ ಒಲಿದು ಬಂದಿತ್ತು. 1920ರಲ್ಲಿ ಹುಬ್ಬಳ್ಳಿಗೆ ಮಹಾತ್ಮ ಗಾಂಧೀಜಿ ಆಗಮಿಸಿದಾಗ ಕಾಂಗ್ರೆಸ್ ಸಭೆಗೆ ಅಧ್ಯಕ್ಷರನ್ನಾಗಿ ಯಾರನ್ನು ನೇಮಿಸಬೇಕು ಎಂದು ಇಡೀ ಊರಿನಲ್ಲಿ ಚರ್ಚೆ ನಡೆಯಿತು. ಆಗ ಎಲ್ಲರೂ ಶ್ರೀ ಸಿದ್ಧಾರೂಢ ಸ್ವಾಮೀಜಿ ಅವರೇ ಇದಕ್ಕೆ ಅರ್ಹ ಸೂಕ್ತ ವ್ಯಕ್ತಿ ಎಂದು ಹಲವರು ಸಲಹೆ ನೀಡಿದರು. ಆಗ ಹೆಚ್ಚಿನವರು ಈ ಮಾತನ್ನು ಒಪ್ಪಿಕೊಂಡು ಶ್ರೀ ಸಿದ್ಧಾರೂಢರ ಬಳಿ ಹೋಗಿ ಅವರನ್ನು ಒಪ್ಪಿಸಿದರು.

ಆಗ ಸಭೆಯ ದಿನ ಹುಬ್ಬಳ್ಳಿಗೆ ಆಗಮಿಸಿದ ಮಹಾತ್ಮ ಗಾಂಧೀಜಿ ಅವರು ಶ್ರೀ ಸಿದ್ಧಾರೂಢ ಎಂದರೆ ಯಾರು, ಅವರನ್ನು ನಾನು ನೋಡಬೇಕು ಎಂದರು. ಮಠಕ್ಕೆ ಬಂದಾಗ ನೂರಾರು ಭಕ್ತರೊಂದಿಗೆ ಅರೆಬೆತ್ತಲೆಯಾಗಿ ಮಠದ ಊಟದ ಹಾಲಿನಲ್ಲಿ ಪ್ರಸಾದ ಸ್ವೀಕರಿಸುತ್ತಿದ್ದ ಶ್ರೀ ಸಿದ್ಧಾರೂಢರನ್ನು 'ಇವರೇ ಸಿದ್ಧಾರೂಢರು' ಎಂದು ಗಾಂಧೀಜಿ ಅವರಿಗೆ ಜನರು ಪರಿಚಯಿಸಿದರು. ಶ್ರೀಸಿದ್ಧಾರೂಢರೊಂದಿಗೆ ಮಾತುಕತೆ ನಡೆಸಿದ ಗಾಂಧೀಜಿ ಹೆಚ್ಚು ಕಡಿಮೆ ತಮ್ಮದೇ ಜೀವನ ಶೈಲಿಯನ್ನು ಅಳವಡಿಸಿಕೊಂಡಿದ್ದ ಸಿದ್ಧಾರೂಢರನ್ನು ಭೇಟಿ ಮಾಡಿದ್ದಕ್ಕೆ ತುಂಬಾ ಸಂತಸಗೊಂಡಿದ್ದರು. ಆದರೆ

ಗಾಂಧೀಜಿ ಅವರಿಗೆ ಒಂದು ಸಮಸ್ಯೆ ಎದುರಾಗಿತ್ತು. ಸದಾ ಅರೆಬೆತ್ತಲೆಯಾಗಿರುವ ಇಂತಹ ದೊಡ್ಡ ವ್ಯಕ್ತಿಗೆ ಖಾದಿ ತೊಡಿಸುವುದು ಹೇಗೆ ಎಂದು ಪ್ರಶ್ನಿಸಿದರು. ಆಗ ಶ್ರೀ ಸಿದ್ಧಾರೂಢರ ಬಳಿ ಜನರು ಹೋಗಿ ಈ ಸಮಸ್ಯೆ ಹೇಳಿಕೊಂಡಾಗ ನಾನು ಗಾಂಧೀಯಂಥ ವ್ಯಕ್ತಿಗಾಗಿ ಖಾದಿ ತೊಡುವುದಷ್ಟೇ ಅಲ್ಲ, ದೇಶಕ್ಕಾಗಿ ಏನು ಬೇಕಾದರೂ ಮಾಡಲು ಸಿದ್ಧನಿದ್ದೇನೆ. ನಾನು ಸನ್ಯಾಸಿಯಾದ ಮಾತ್ರಕ್ಕೆ ನನಗೆ ದೇಶ ಬೇಡವೇ ಎಂದು ಪ್ರಶ್ನಿಸಿದರು.

ಅಂತಿಮವಾಗಿ ಹುಬ್ಬಳ್ಳಿಯ ಕೊಪ್ಪಿಕರ್ ರಸ್ತೆಯಲ್ಲಿರುವ ಸಂಯುಕ್ತ ಕರ್ನಾಟಕ ಪತ್ರಿಕೆ ಕಚೇರಿಯ ಆವರಣದಲ್ಲಿ ನಡೆದ ಕಾಂಗ್ರೆಸ್ ಸಭೆಯಲ್ಲಿ ಭಾಗವಹಿಸಿದ್ದ ಶ್ರೀ ಸಿದ್ಧಾರೂಢರು, ದೇಶಕ್ಕಾಗಿ ಗಾಂಧೀಜಿಯಂಥ ಶ್ರೇಷ್ಠ ವ್ಯಕ್ತಿಯೊಂದಿಗೆ ಎಲ್ಲರೂ ಹೆಜ್ಜೆ ಹಾಕಬೇಕು ಎಂದು ಕರೆಕೊಟ್ಟಿದ್ದರು. ಈ ಎಲ್ಲ ಮಾಹಿತಿಯನ್ನು ಶ್ರೀ ಸಿದ್ಧಾರೂಢ ಮಠದ ಆಡಳಿತ ಮಂಡಳಿ ಸಂಗ್ರಹಿಸಿಟ್ಟುಕೊಂಡಿದೆ.

ಧಾರವಾಡದಿಂದ 11ನೇ ನವೆಂಬರ್ 1920ರಂದು ಹುಬ್ಬಳ್ಳಿ, ಗದಗಗೆ ಆಗಮಿಸಿದರು. ಈ ಎರಡು ಊರುಗಳಲ್ಲಿ 12 ಸಾವಿರ ರೂಪಾಯಿ ಕೂಡಿತ್ತು. ಗದಗಿನಿಂದ ಬಾಗಲಕೋಟೆಗೆ ಮತ್ತು ಬಿಜಾಪುರಕ್ಕೆ ಹೋಗುವ ಕಾರ್ಯಕ್ರಮವಿತ್ತು. ಆದರೆ ದೇವಲ್ಸ್ ಸರ್ಕಸ್‌ನ ಮಾಜಿ ವ್ಯವಸ್ಥಾಪಕರಾದ ರಾಮಭಾವುಪಟವರ್ಧನ ಎಂಬುವರು ಗಾಂಧೀಜಿಯವರನ್ನು ಕಂಡು ಸಾಂಗ್ಲಿಯ ಜನ ಲೋಕಮಾನ್ಯರ ಸ್ಮಾರಕಕ್ಕೆ ಒಂದು ಲಕ್ಷ ರೂಪಾಯಿ ಕೂಡಿಸಿದ್ದಾರೆ ಎಂದು ಹೇಳಿ ಗಾಂಧಿಯವರನ್ನು 12 ನವೆಂಬರ್ 1920ರಂದು ಸಾಂಗ್ಲಿಗೆ ಕರೆದೊಯ್ದರು. ನಿಪ್ಪಾಣಿ, ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಗದಗಗಳ ಪ್ರವಾಸದ ಒಂದು ಮಹತ್ವದ ಘಟನೆ ಎಂದರೆ ಎರಡು–ಮೂರು ರಾಷ್ಟ್ರೀಯ ಶಾಲೆ ಮತ್ತು ಖಾದಿ ಅಂಗಡಿಗಳ ಪ್ರಾರಂಭ.

ಆ ಕಾಲದಲ್ಲಿ ಸುಮಾರಾಗಿ 1918–1919ರ ಕಾಲದಲ್ಲಿ ಕರ್ನಾಟಕವೂ ಸೇರಿದಂತೆ ಇಡೀ ಭಾರತವನ್ನು ಜಾಗತಿಕವಾಗಿ ಹಬ್ಬಿದ 'ಸ್ಪ್ಯಾನಿಷ್ ಪ್ಲೂ' ಎಂಬ ಸಾಂಕ್ರಾಮಿಕ ಮಹಾಮಾರಿಯಿಂದ ನರಳಿತ್ತು. ಹಾಗೆಯೇ ಬ್ರಿಟಿಷರ ಸರ್ಕಾರದ ಸಾಮ್ರಾಜ್ಯ ವಿಸ್ತರಣಾವಾದ ಹಾಗೂ ದುರಾಡಳಿತದಿಂದ ದೇಶದ ಸಂಪತ್ತೆಲ್ಲಾ ಬರಡಾಗುವುದರ ಜೊತೆಗೆ ಸ್ಥಳೀಯ ಕರಕುಶಲತೆಗಳು, ಗ್ರಾಮೀಣ ಗುಡಿ ಕೈಗಾರಿಕೆಗಳು ಅವನತಿಯ ಹಂತವನ್ನು ತಲುಪಿತ್ತು. ಇಂತಹ ಅತ್ಯಂತ ಜಟಿಲವಾದ ಪರಿಸ್ಥಿತಿಯಲ್ಲಿ ಗಾಂಧೀಜಿ ತಮ್ಮ ನೇತೃತ್ವದ ಮೂಲಕ ನವ ಚೈತನ್ಯದ ಬೆಳಕನ್ನು ನೀಡಿದ್ದರು. ಸರ್ವಧರ್ಮ ಸಮಭಾವ, ಐಕ್ಯತೆ, ಸೋದರತೆ, ಸ್ವದೇಶಿ ಹಾಗೂ ಸತ್ಯಾಗ್ರಹದ ಅರಿವನ್ನು ನೀಡಿ ಗಾಂಧೀಜಿ ಜನರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿದ್ದರು. ಇದರಿಂದಾಗಿಯೇ ಗಾಂಧೀಯುಗದ ಮಹಾ ಚಳುವಳಿಯಾಗಿ ಅಸಹಕಾರದ ಆಂದೋಲನವು ಗಾಢವಾದ ಪರಿಣಾಮಗಳನ್ನುಂಟು ಮಾಡಿತು.

ಈಗ ಅದೇ ಗಾಂಧೀಜಿ ಅಸಹಕಾರ ಆಂದೋಲನದ (1920–2020ಕ್ಕೆ) ಶತಮಾನದ ನೆನಪಿನಲ್ಲಿ ನಾವಿದ್ದೇವೆ. ಈಗ ಭಾರತವನ್ನು ಹಾಗೂ ಮಾನವತೆಯನ್ನು ಕೋವಿಡ್–19 ಎಂಬ ಮಹಾಮಾರಿಯು ವಿಶ್ವವ್ಯಾಪಿ ಕಾಡುತ್ತಾ ಇದೆ. ಭಾರತದ ಗಡಿಯಲ್ಲಿ ಚೀನಾದ ವಿಸ್ತರಣಾವಾದಿ ಯುದ್ಧೋನ್ಮಾದವು ನಡೆದಿದೆ. ಇದಲ್ಲದೆಯೇ ಚೀನಾದೇಶದ ವಸ್ತುಗಳು, ತಂತ್ರಾಂಶಗಳು ಹಾಗೂ ಉದ್ಯಮಗಳು ನಮ್ಮ ದೇಶದಲ್ಲಿರುವ ಅವಕಾಶಗಳನ್ನು ಆರ್ಥಿಕತೆಯನ್ನು ಕಬಳಿಸುವ ಹಂತದಲ್ಲಿವೆ.

ಈ ಎಲ್ಲಾ ಸಂದಿಗ್ಧತೆಗಳ ಸಂದರ್ಭದಲ್ಲಿ ನಮಗೆ ಗಾಂಧೀಜಿ ತೋರಿಸಿ ಕೊಟ್ಟಿರುವ ಅಭಯ ಪ್ರಜ್ಞೆಯ ಸಹಿತವಾದ ಮಾನವೀಯತೆ, ಸತ್ಯಾಗ್ರಹ, ಸ್ವದೇಶಿ, ಸ್ವಸಹಾಯ, ಸ್ವಾವಲಂಬನೆ, ಸಮಭಾವ, ನೈರ್ಮಲ್ಯ, ಆರೋಗ್ಯಮಯ ಜೀವನ ಹಾಗೂ ಸರ್ವೋದಯಗಳ ಕಾಯಕದ ಮಾರ್ಗ, ಶ್ರಮ, ಸಂಸ್ಕೃತಿಯ ಮೌಲ್ಯವನ್ನು ಉದ್ದೀಪನಗೊಳಿಸಿದ್ದರು. ಇವು ನಮಗೆಲ್ಲಾ ದಾರಿದೀಪವಾಗಬೇಕು. ಮುಂಬರುವ ತಲೆಮಾರುಗಳ ಜನ, ರಕ್ತ, ಮಾಂಸಗಳಿಂದಾದ ಇಂತಹ ವ್ಯಕ್ತಿಯೊಬ್ಬ ಈ ಭೂಮಿಯ ಮೇಲೆ ನಡೆದಾಡಿದ್ದನೆಂಬುದನ್ನು ಬಹುಶಃ ಗಾಂಧೀಯವರನ್ನು ಕುರಿತು ಹೇಳಿದ್ದರು. 'My life is my message' ಎಂಬ ಮಾತನ್ನು ಸ್ವತಃ ಗಾಂಧೀಜಿ ಹೇಳಿದ್ದರು. 'ನನ್ನ ಬದುಕೇ ನನ್ನ ಸಂದೇಶ'ವೆಂದು

ಪ್ರಾಯಶಃ ಗಾಂಧೀಜಿಯವರ ಸಮಕಾಲೀನರಿಗಾರಿಗೂ ಹೇಳಲು ಸಾಧ್ಯವಾಗುತ್ತಿರಲಿಲ್ಲ. ಅಂಥ ಬದುಕನ್ನು ಬದುಕಿದವರು ಗಾಂಧೀಜಿ. ಭಯೋತ್ಪಾದನೆ, ಯುದ್ಧದ ಕಾರ್ಮೋಡಗಳು ಕವಿಯುತ್ತಿರುವ ಇಂದಿನ ಸಂದರ್ಭದಲ್ಲಿ ಗಾಂಧಿ ಚಿಂತನೆಯ ಪ್ರಸ್ತುತತೆ ಮತ್ತೊಮ್ಮೆ ಮುನ್ನೆಲೆಗೆ ಬರುತ್ತಿದೆ.

**ಲೇಖಕರ:– ಡಾ.ಬಿ.ಎಸ್. ಬಸೆಟ್ಟಿ**
**ಆಧಾರ: ವಿಶ್ವವಾಣಿ, ದಿನಾಂಕ:12.11.2020**

## 7. ಚುನಾವಣಾ ಆಯೋಗಕ್ಕೊಂದು ಕೋವಿಡ್ ಟೆಸ್ಟ್

ಚುನಾವಣಾ ಆಯೋಗದಲ್ಲಿ ಕೆಲಸ ಮಾಡಿದ ಅಥವಾ ಚುನಾವಣೆಯ ಕೆಲಸಕ್ಕೆ ನಿಯೋಜನೆಗೊಳ್ಳುವ ಯಾರಿಗಾದರೂ ಬಿಹಾರಕ್ಕೆ ಹೋಗಿ ಎಂದರೆ ಒಂದು ಕ್ಷಣ ಯೋಚಿಸುವ ಕಾಲವಿತ್ತು. ವೈಯಕ್ತಿಕವಾಗಿ ಬಿಹಾರದಲ್ಲಿ ಹಲವು ವರ್ಷಗಳ ಕಾಲ ಚುನಾವಣಾ ಕೆಲಸಕ್ಕೆ ತೊಡಗಿದ್ದರಿಂದ, ನನಗೆ ಈ ಅನುಭವ ಚೆನ್ನಾಗಿಯೇ ಇದೆ.

ಈ ರೀತಿ ಬಿಹಾರ ಚುನಾವಣೆ ಎಂದರೆ ಮೂಗು ಮುರಿಯುವುದಕ್ಕೆ ಕಾರಣವು ಇದೆ. ಕೆಲ ದಶಕಗಳ ಹಿಂದೆ ಇಡೀ ರಾಷ್ಟ್ರದಲ್ಲಿ ನಡೆಯುತ್ತಿದ್ದ ಚುನಾವಣೆ ಒಂದು ಭಾಗವಾದರೆ, ಬಿಹಾರದ ಚುನಾವಣೆಯೇ ಇನ್ನೊಂದು ಭಾಗ. ಬಿಹಾರದಲ್ಲಿ ಚುನಾವಣೆ ಎಂದರೆ, ಅಲ್ಲಿ ಗಲಭೆ, ಗಲಾಟೆ, ಅಧಿಕಾರಿಗಳ ಮೇಲೆ ದಾಳಿ, ಮತಗಟ್ಟೆಯ ಬಳಿ ಮಾರಾಮಾರಿ ಸಾಮಾನ್ಯ ಎನ್ನುವಂತಾಗಿತ್ತು. ಇದಿಷ್ಟೇ ಅಲ್ಲದೇ, ಅಲ್ಲಿನ ಚುನಾವಣೆ ವೇಳೆ ಬಳಸುವ ಮತ ಪೆಟ್ಟಿಗೆಗಳನ್ನೇ ಕದ್ದುಕೊಂಡು ಹೋಗುವ ಸ್ಥಿತಿಯಿತ್ತು.

ಇದನ್ನು ನಿಯಂತ್ರಿಸಲು ಅಲ್ಲಿನ ಚುನಾವಣಾ ಆಯೋಗ ಹತ್ತು ಹಲವು ರೀತಿಯಲ್ಲಿ ಪ್ರಯತ್ನಪಟ್ಟರೂ ಸಾಧ್ಯವಾಗುತ್ತಿರಲಿಲ್ಲ. ಪ್ರತಿ ಬಾರಿಯ ಚುನಾವಣೆ ನಡೆದಾಗಲೂ ಬಿಹಾರದಲ್ಲಿ ರಕ್ತಪಾತವಿಲ್ಲದೇ ಚುನಾವಣಾ ಸಮಾಪ್ತಿಯಾದ ಇತಿಹಾಸವೇ ಇರಲಿಲ್ಲ. ಕೇವಲ ರಾಜಕೀಯ ಪಕ್ಷಗಳ ಕಾರ್ಯಕರ್ತರು ಮಾತ್ರವಲ್ಲದೇ, ಚುನಾವಣಾ ಕೆಲಸಕ್ಕೆ ನಿಯುಕ್ತಿ ಹೊಂದುವ ಅಧಿಕಾರಿಗಳ ವಿರುದ್ಧವು ಅನೇಕ ಬಾರಿ ಹಲ್ಲೆಯಾಗಿರುವ ನಿದರ್ಶನಗಳು ನಮ್ಮ ಮುಂದಿವೆ. ಒಂದು ಹಂತದಲ್ಲಿ ಬಿಹಾರ ಚುನಾವಣಾ ಕಾರ್ಯಕ್ಕೆ ಅಧಿಕಾರಿಗಳನ್ನು ನಿಯೋಜನೆ ಮಾಡಿದ್ದಾರೆ ಎಂದರೆ, ಅದು ಅಧಿಕಾರಿಗಳಿಗೆ ಶಿಕ್ಷೆ ಎನ್ನುವ ರೀತಿಯಲ್ಲಿ ಮಾತುಗಳು ಕೇಳಿಬರುತ್ತಿದ್ದವು.

ಬಿಹಾರದಲ್ಲಿ ಚುನಾವಣಾ ಪ್ರಕ್ರಿಯೆಯನ್ನು ಬದಲಾಯಿಸಲು ಸಾಧ್ಯವೇ ಇಲ್ಲ ಎನ್ನುವ ಸ್ಥಿತಿಯಲ್ಲಿದ್ದಾಗ, ಕೇಂದ್ರ ಚುನಾವಣಾ ಆಯೋಗದ ಅಧ್ಯಕ್ಷರಾಗಿ ಟಿ.ಎನ್.ಶೇಷನ್ ನೇಮಕಗೊಂಡಾಗ, ಚುನಾವಣಾ ಪ್ರಕ್ರಿಯೆಯಲ್ಲಿ ಹತ್ತು ಹಲವು ಬದಲಾವಣೆ ತಂದರು. ಅದರಲ್ಲಿ ಬಿಹಾರದಲ್ಲಿ ಶಾಂತಿಯುತ ಮತದಾನಕ್ಕೆ ಅಗತ್ಯ ಭದ್ರತೆಯನ್ನು ನೀಡಿದ್ದೂ ಸಹ ಒಂದು ಎಂದರೆ ತಪ್ಪಾಗುವುದಿಲ್ಲ. ಮತಪೆಟ್ಟಿಗೆ ಕಳವು ಹಾಗೂ ಅಧಿಕಾರಿಗಳ ಮೇಲಾಗುತ್ತಿದ್ದ ಹಲ್ಲೆಯನ್ನು ತಪ್ಪಿಸುವ ಉದ್ದೇಶದಿಂದ ಶೇಷನ್ ಅವರು ಪ್ಯಾರಾ ಮಿಲಿಟರಿ ಫೋರ್ಸ್ ಬಳಸಿದರು. ಈ ರೀತಿ ಸೇನೆಯ ನೆರವಿನೊಂದಿಗೆ ಬಿಹಾರದಲ್ಲಿ ಶಾಂತಿಯುತ ಮತದಾನ ಪ್ರಕ್ರಿಯೆಗೆ ನಾಂದಿ ಹಾಡಿತ್ತು. ಅಂತಹ ಪರಿಸ್ಥಿತಿಯಿಂದ ಇಂದು, ಸುಸೂತ್ರವಾಗಿ, ಕೊರೋನಾ ನಡುವೆಯೂ ಯಶಸ್ವಿಯಾಗಿ ಚುನಾವಣೆ ಮುಗಿಸುವ ಹಂತಕ್ಕೆ ಆಯೋಗ ಬಂದಿದೆ. ಇದಿಷ್ಟೇ ಅಲ್ಲದೇ, ಇಡೀ ದೇಶಕ್ಕೆ ಮಾದರಿಯಗುವ ರೀತಿಯಲ್ಲಿ ಚುನಾವಣೆ ನಡೆಸಿದ ಕೀರ್ತಿಗೆ ಆಯೋಗ ಪಾತ್ರವಾಗಿದೆ. ಗೂಂಡಾಗಿರಿಯ ಚುನಾವಣಾ ಪ್ರಕ್ರಿಯೆಯಿಂದ ಈ ಮಾದರಿ ಚುನಾವಣಾ ಪ್ರಕ್ರಿಯೆ ತನಕ ಸಾಗಿರುವ ದಾರಿ ನಿಜಕ್ಕೂ ಅದ್ಭುತ. ಬಿಹಾರ ವಿಧಾನಸಭೆ ಚುನಾವಣೆ ಹಲವು ರೀತಿಯಲ್ಲಿ ಅಭೂತ ಪೂರ್ವವಾಗಿತ್ತು. ಮೊದಲನೆಯದಾಗಿ, ಕೋವಿಡ್–19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಈಗ ಚುನಾವಣೆ ನಡೆಸುವುದು ಸಾಧ್ಯವೇ ಎಂಬ ಬಗ್ಗೆಯೇ ಅನುಮಾನಗಳಿದ್ದವು. ನಂತರ ಹಲವಾರು ರಾಜಕೀಯ ಪಕ್ಷಗಳು ಕೂಡ ಚುನಾವಣೆ ಮುಂದೂಡುವಂತೆ ಕೂಗೆಬ್ಬಿಸಿದ್ದವು.

ಭಾರತದ ಚುನಾವಣಾ ಆಯೋಗ (ಇಸಿಐ) ಮೊದಲಿಗೆ ಚುನಾವಣೆ ನಡೆಸುವ ಬಗ್ಗೆ ಕೆಲ ಅನುಮಾನಗಳನ್ನು ಹೊಂದಿದ್ದರೂ, ನಂತರ ಬೇರೆ ಬೇರೆ ದೇಶಗಳಲ್ಲಿ ಯಶಸ್ವಿಯಾಗಿ ಸಾರ್ವತ್ರಿಕ ಚುನಾವಣೆ ನಡೆಸಿದ್ದನ್ನು ನೋಡಿ ಧೈರ್ಯ ತಂದುಕೊಂಡಿತ್ತು. ವಿಶೇಷವಾಗಿ, ದಕ್ಷಿಣ ಕೊರಿಯಾದಂತಹ ದೇಶಗಳು ಕೊರೋನಾದ ನಡುವೆಯೇ ನಡೆಸಿದ ಚುನಾವಣೆಯಲ್ಲಿ ಹಿಂದೆಂದಿಗಿಂತ ಹೆಚ್ಚು ಮತದಾರರು ಮತಗಟ್ಟೆಗಳಿಗೆ ಬಂದು ವೋಟು ಹಾಕಿದ್ದರು. ಒಟ್ಟು 34 ದೇಶಗಳು ತಮ್ಮ ದೇಶದ ಶಾಸನ ಸಭೆಗಳಿಗೆ ಅಥವಾ ಅಧ್ಯಕ್ಷ ಸ್ಥಾನಕ್ಕೆ ಈ ಅವಧಿಯಲ್ಲಿ ಚುನಾವಣೆ ನಡೆಸಿದ್ದವು.

ಆದರೂ ಅಪಾಯ ಮೈಮೇಲೆಳೆದುಕೊಳ್ಳದಿರಲು ಚುನಾವಣಾ ಆಯೋಗ ಬೇರೆ ಬೇರೆ ದೇಶಗಳ ಚುನಾವಣಾ ಆಯೋಗಗಳನ್ನು ಸಂಪರ್ಕಿಸಿ ಅವು ಚುನಾವಣೆ ನಡೆಸುವಾಗ ಎದುರಿಸಿದ ಸಮಸ್ಯೆ ಹಾಗೂ ನಂತರದ ಪರಿಣಾಮಗಳನ್ನು ಅಧ್ಯಯನ ಮಾಡಿತು. ನಂತರ ನಮ್ಮ ದೇಶದಲ್ಲೇ ರಾಜ್ಯ ಸಭೆ ಮತ್ತು ವಿವಿಧ ರಾಜ್ಯಗಳಲ್ಲಿ ವಿಧಾನ ಪರಿಷತ್ ಚುನಾವಣೆಗಳನ್ನು ಕೋವಿಡ್–19 ಮಾರ್ಗಸೂಚಿಯಡಿ ನಡೆಸಿ ನೋಡಿತು. ಆಗ ಅದಕ್ಕೊಂದು ವಿಶ್ವಾಸ ಮೂಡಿತು.

ಬೇರೆ ದೇಶಗಳ ಮಾಹಿತಿ ಹಾಗೂ ಇಲ್ಲಿನದೇ ಅನುಭವದೊಂದಿಗೆ ಆಗಸ್ಟ್ ತಿಂಗಳಿನಲ್ಲಿ ಬಿಹಾರದ ವಿಧಾನಸಭೆ ಚುನಾವಣೆಗೆಂದೇ ಚುನಾವಣಾ ಆಯೋಗ ಕೋವಿಡ್ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿತ್ತು. ಸ್ಯಾನಿಟೈಸರ್, ಸಾಮಾಜಿಕ ಅಂತರ ಮುಂತಾದ ಸಾಮಾನ್ಯ ಕ್ರಮಗಳ ಜೊತೆಗೆ ಪ್ರತಿ ಮತಗಟ್ಟೆಗಳಲ್ಲಿ ಮತದಾನ ಮಾಡುವ ಗರಿಷ್ಠ ಮತದಾರರ ಸಂಖ್ಯೆಯನ್ನು 1500 ರಿಂದ 1000ಕ್ಕೆ ಇಳಿಸುವಂತಹ ಮಹತ್ವದ ಬದಲಾವಣೆಯನ್ನು ಮಾಡಿತು. ಅದರಿಂದಾಗಿ ಬಿಹಾರಕ್ಕೆ 40,000 ಹೆಚ್ಚುವರಿ ಮತಗಟ್ಟೆಗಳು ಸೇರ್ಪಡೆಯಾದವು. ಅಲ್ಲಿಗೆ ಹೆಚ್ಚುವರಿ ಇವಿಎಂಗಳನ್ನು ಪೂರೈಸಬೇಕಾಯಿತು. ಮತ ಎಣಿಕೆ ಕೇಂದ್ರಗಳಲ್ಲಿ ಜನಸಂದಣಿಯಾಗುವುದನ್ನು ತಪ್ಪಿಸಲು ಪ್ರತಿ ಹಾಲ್‌ನಲ್ಲಿ ಹಾಕುತ್ತಿದ್ದ ಟೇಬಲ್‌ಗಳ ಸಂಖ್ಯೆಯನ್ನು 14 ರಿಂದ 7 ಇಳಿಸಲಾಯಿತು.

ಚುನಾವಣಾ ಪ್ರಚಾರ ಕೈಗೊಳ್ಳುವಾಗ ಅಭ್ಯರ್ಥಿಗಳು ಮನೆ ಮನೆ ಪ್ರಚಾರಕ್ಕೆ ಗರಿಷ್ಠ 5 ಜನರೊಂದಿಗೆ ಮಾತ್ರ ಹೋಗಬಹುದು ಎಂದು ನಿರ್ಬಂಧ ವಿಧಿಸಲಾಯಿತು. ಬೆಂಗಾವಲು ವಾಹನಗಳ ಸಂಖ್ಯೆಯನ್ನು 10ರ ಬದಲು ಐದಕ್ಕೆ ಸೀಮಿತಗೊಳಿಸಲಾಯಿತು. ವಿಪತ್ತು ನಿರ್ವಹಣಾ ಪ್ರಾಧಿಕಾರ ನಿಯಮಕ್ಕೆ ಅನುಗುಣವಾಗಿ ಸಾರ್ವಜನಿಕ ಪ್ರಚಾರ ಸಭೆಯಲ್ಲಿ ಪಾಲ್ಗೊಳ್ಳಬಹುದಾದವರ ಗರಿಷ್ಠ ಸಂಖ್ಯೆಯನ್ನು ನಿಗದಿಪಡಿಸಲಾಯಿತು. ನಾಮಪತ್ರ ಸಲ್ಲಿಕೆ, ಅಫಿಡೆವಿಟ್ ಸಲ್ಲಿಕೆ ಹಾಗೂ ಭದ್ರತಾ ಠೇವಣಿಯಿರಿಸಲು ಆನ್‌ಲೈನ್ ಸೌಕರ್ಯ ನೀಡಲಾಯಿತು.

ಕೊರೋನಾ ಹಿನ್ನೆಲೆಯಲ್ಲಿ ಮತದಾನ ಮಾಡಲು ಬರುವವರ ಸಂಖ್ಯೆ ಬಹಳ ಕಡಿಮೆಯಾಗಬಹುದು ಎಂದು ವಿರೋಧ ಪಕ್ಷಗಳು ಆಕ್ಷೇಪ ಎತ್ತಿದ್ದವು. ಅದಕ್ಕೆ ಉತ್ತರವಾಗಿ ಚುನಾವಣಾ ಆಯೋಗ 80 ವರ್ಷ ಮೀರಿದವರಿಗೆ, ಕೋವಿಡ್ ರೋಗಿಗಳಿಗೆ, ವಿಕಲಚೇತನರಿಗೆ ಹಾಗೂ ಅಗತ್ಯ ಸೇವೆಗಳಲ್ಲಿರುವ ನೌಕರರಿಗೆ ಅಂಚೆ ಮತದಾನದ ಆಯ್ಕೆ ನೀಡಿತು. ಜೊತೆಗೆ ಈಗಿರುವ ಪ್ರಸಿದ್ಧ ಸ್ವೀಪ್ (ಸಿಸ್ಟಮ್ಯಾಟಿಕ್ ವೋಟರ್ ಎಜುಕೇಶನ್ ಫಾರ್ ಎಲೆಕ್ಟೋರಲ್ ಪಾರ್ಟಿಸಿಪೇಶನ್) ಕಾರ್ಯಕ್ರಮವನ್ನು ಬಳಸಿಕೊಳ್ಳಲು ಅವಕಾಶ ನೀಡಿತು. ಹೀಗಾಗಿ ಬಿಹಾರದ ಚುನಾವಣೆಯಲ್ಲಿ ಮತದಾನ ತೃಪ್ತಿಕರ ಪ್ರಮಾಣದಲ್ಲೇ ಆಗಿದೆ. ಅದರೊಂದಿಗೆ ಚುನಾವಣಾ ಆಯೋಗದ ನಿಲುವು ಸರಿ ಎಂಬುದು ಸಾಬೀತಾಗಿದೆ.

ಜನರು ಒಂದೆಡೆ ಸೇರುವುದನ್ನು ತಪ್ಪಿಸಲು ಡಿಜಿಟಲ್ ಪ್ರಚಾರ ನಡೆಸಬೇಕು ಎಂಬ ಚುನಾವಣಾ ಆಯೋಗದ ನಿಯಮದ ಬಗ್ಗೆ ಕೆಲ ರಾಜಕೀಯ ಪಕ್ಷಗಳು ಆಕ್ಷೇಪ ಎತ್ತಿದ್ದವು. ಬಿಜೆಪಿಯವರ ಬಳಿ ತಾಂತ್ರಿಕ ಹಾಗೂ ಹಣಕಾಸು ಸೌಕರ್ಯಗಳು ಜಾಸ್ತಿಯಿರುವ ಕಾರಣ ಡಿಜಿಟಲ್ ಪ್ರಚಾರದಿಂದ ಅನಗತ್ಯವಾಗಿ ಬಿಜೆಪಿಗೆ ಲಾಭ ಮಾಡಿಕೊಟ್ಟಂತಾಗುತ್ತದೆ ಎಂಬುದು ಅವುಗಳ ತಕರಾರಾಗಿತ್ತು. ಹಾಗೆಯೇ, ನಮ್ಮ ದೇಶದ ಚುನಾವಣಾ ಪ್ರಚಾರದಲ್ಲಿ ದೊಡ್ಡ ದೊಡ್ಡ ರ್‍ಯಾಲಿಗಳು ಬಹಳ ಮುಖ್ಯ ಪಾತ್ರ ವಹಿಸುತ್ತವೆ. ವರ್ಚುವಲ್ ರ್‍ಯಾಲಿಗಳು ಅಂತಹ ಸಾರ್ವಜನಿಕ ರ್‍ಯಾಲಿಗೆ ಸಮವಾಗಲು ಸಾಧ್ಯವೇ ಎಂಬ ಅನುಮಾನ ಎಲ್ಲರಿಗೂ ಇತ್ತು. ಆನ್‌ಲೈನ್ ರ್‍ಯಾಲಿಗಳಿಗೆ ಅವುಗಳದೇ ಆದ ಮಿತಿಗಳಿರುವುದು ನಿಜ. ಇಂಟರ್‌ನೆಟ್ ಸೌಕರ್ಯವಿಲ್ಲದ ಕುಗ್ರಾಮಗಳನ್ನು, ಗುಡ್ಡಗಾಡು ಪ್ರದೇಶಗಳನ್ನು ಹಾಗೂ ಅರಣ್ಯ ಪ್ರದೇಶಗಳನ್ನು ಅವುಗಳ ಮೂಲಕ ತಲುಪುವುದು ಸಾಧ್ಯವಿಲ್ಲ. ಅದರಲ್ಲೂ, ಬಿಹಾರದಲ್ಲಿ ಇಂಟರ್‌ನೆಟ್ ಇರುವುದು ಶೇ.37ರಷ್ಟು ಭಾಗದಲ್ಲಿ ಮಾತ್ರ. ಅಲ್ಲಿ ಸ್ಮಾರ್ಟ್‌ಫೋನ್ ಬಳಕೆದಾರರ ಸಂಖ್ಯೆ ಶೇ.27 ಮಾತ್ರ ಇದೆ.

ಇನ್ನು, ವರ್ಚುವಲ್ ರ್‍ಯಾಲಿಗಳಲ್ಲಿ ಬಿಜೆಪಿ ಎತ್ತಿದ ಕೈ ಎಂಬುದು ನಿಜವೇ. ಆದರೆ, ಚುನಾವಣೆ ಘೋಷಿಸಿದ ಮೇಲೆ ಎಲ್ಲ ಪಕ್ಷಗಳು ಸಾಕಷ್ಟು ಸಾರ್ವಜನಿಕ ರ್‍ಯಾಲಿಗಳನ್ನೇ ಆಯೋಜಿಸಿದವು. ಅದು ಚುನಾವಣಾ ಆಯೋಗಕ್ಕೆ ಕಳವಳ ಉಂಟುಮಾಡಿತ್ತು. ನಂತರ ನಿಯಮ ಉಲ್ಲಂಘನೆ ಮಾಡಿದವರ ವಿರುದ್ಧ ಆಯೋಗ ಬಿಗಿಯಾದ ಕ್ರಮ ಕೂಡ ತೆಗೆದುಕೊಂಡಿತು.

ಆಯೋಗ ಇನ್ನೂ ಕೆಲವು ಸವಾಲುಗಳನ್ನು ಎದುರಿಸಿತ್ತು. ಸುಳ್ಳು ಸುದ್ದಿ ಮತ್ತು ಪ್ರೊಪಗ್ಯಾಂಡಾಗಳು ಅವುಗಳಲ್ಲೊಂದು. ಇವೆರಡರ ವಿರುದ್ಧವೂ ಆಯೋಗ ಕಠಿಣ ಕ್ರಮ ತೆಗೆದುಕೊಂಡಿತು. ಸೋಷಿಯಲ್ ಮೀಡಿಯಾಗಳ ಜೊತೆಗೆ ಈ ವಿಷಯದಲ್ಲಿ ಒಪ್ಪಂದ ಮಾಡಿಕೊಂಡು, ಸಮಸ್ಯಾತ್ಮಕ ಪೋಸ್ಟ್‌ಗಳನ್ನು ತೆಗೆದುಹಾಕಲು ವ್ಯವಸ್ಥೆ ಮಾಡಿತು.

ಇತ್ತೀಚೆಗೆ ಅಮೆರಿಕಾದ ವಾಲ್‌ಸ್ಟ್ರೀಟ್ ಜರ್ನಲ್ ಪತ್ರಿಕೆ ಪ್ರಕಟಿಸಿದ ತನಿಖಾ ವರದಿಯಲ್ಲಿ ಫೇಸ್‌ಬುಕ್ ಹೇಗೆ ರಾಜಕೀಯ ಪಕ್ಷಪಾತಿಯಾಗಿ ವರ್ತಿಸುತ್ತದೆ ಎಂಬುದನ್ನು ಬುಕ್ ಇಂಡಿಯಾ ಹಲವಾರು ಸಂದರ್ಭಗಳಲ್ಲಿ ಆಡಳಿತಾರೂಢ ಪಕ್ಷಗಳ ನಾಯಕರು ಪ್ರಕಟಿಸುವ ಆಕ್ಷೇಪಾರ್ಹ ಪೋಸ್ಟ್‌ಗಳನ್ನು ತೆಗೆದುಹಾಕದೆ ಹಾಗೇ ಬಿಡುತ್ತಿತ್ತು. ಹೀಗಾಗಿ ಸಾಮಾಜಿಕ ಜಾಲತಾಣಗಳ ವಿರುದ್ಧ ಕ್ರಮ ಕೈಗೊಳ್ಳುವ ವಿಷಯದಲ್ಲಿ ಹಾಗೂ ರಾಜಕೀಯ ಪಕ್ಷಗಳು ಮತ್ತು ಸಾಮಾಜಿಕ ಜಾಲತಾಣಗಳ ಚಟುವಟಿಕೆಗಳ ವಿಷಯದಲ್ಲಿ ಚುನಾವಣಾ ಆಯೋಗದ ನಡೆಯನ್ನು ರಾಜಕೀಯ ಪಕ್ಷಗಳು ಪ್ರಶ್ನಿಸಿದ್ದವು. ಹೀಗಾಗಿ ಚುನಾವಣಾ ಆಯೋಗ ಸ್ವಯಂಪ್ರೇರಿತ ನೀತಿ ಸಂಹಿತೆಯನ್ನು ರೂಪಿಸಿತ್ತು.

ಇನ್ನು, ಮತ ಎಣಿಕೆಯ ದಿನ ನಡೆದ, ಹಿಂದೆಂದೂ ಕೇಳರಿಯದ ವಿದ್ಯಮಾನವೆಂದರೆ ಚುನಾವಣಾ ಆಯೋಗ ಒಂದಲ್ಲ ಎರಡಲ್ಲ ನಾಲ್ಕು ಬಾರಿ ಪತ್ರಿಕಾಗೋಷ್ಠಿ ನಡೆಸಿ ಸಂಭವನೀಯ ಅನುಮಾನಗಳನ್ನು ಬಗೆಹರಿಸಲು ಯತ್ನಿಸಿದ್ದು, ವಿಶೇಷವಾಗಿ, ಗೆಲುವಿನ ಅಂತರ ಬಹಳ ಕಡಿಮೆಯಿದ್ದಾಗ ಉದ್ಭವಿಸುವ ಅನುಮಾನ ಹಾಗೂ ಗೊಂದಲಗಳನ್ನು ಆಯೋಗ ಸಮರ್ಥವಾಗಿ ಬಗೆಹರಿಸಿತು. ಮಧ್ಯಾಹ್ನ ನಡೆಸಿದ ಮೊದಲ ಪತ್ರಿಕಾಗೋಷ್ಠಿಯಲ್ಲಿ ಕೋವಿಡ್ ಸಂಬಂಧಿ ವಿಶೇಷ ಕ್ರಮಗಳಿಂದಾಗಿ ಮತ ಎಣಿಕೆ ನಿಧಾನವಾಗಲಿದೆ ಮತ್ತು ಮಧ್ಯರಾತ್ರಿಯವರೆಗೂ ನಡೆಯಬಹುದು ಎಂದು ಹೇಳಿತು. ಬಿಹಾರದ ಮುಖ್ಯ ಚುನಾವಣಾಧಿಕಾರಿ ಮತಗಟ್ಟೆಗಳಲ್ಲಿ ಜನಸಂದಣಿ ಹೆಚ್ಚಾಗುವುದನ್ನು ತಪ್ಪಿಸಲು ಶೇ.40ರಷ್ಟು ಹೆಚ್ಚುವರಿ ಮತಗಟ್ಟೆಗಳನ್ನು ಸ್ಥಾಪಿಸಲಾಗಿತ್ತು ಎಂದು ಮಾಹಿತಿ ನೀಡಿದರು. ಅದರರ್ಥ, ಹೆಚ್ಚುವರಿ 40,000 ಇವಿಎಂಗಳ ಮತ ಎಣಿಕೆ ಮಾಡಲು ಪ್ರತಿ ಇವಿಎಂಗೆ 20ರಿಂದ 30 ನಿಮಿಷ ಹೆಚ್ಚು ಬೇಕಾಗುತ್ತಿತ್ತು. ಇನ್ನು, ಮತ ಎಣಿಕೆ ಕೇಂದ್ರಗಳಲ್ಲಿ ಎಣಿಕೆ ಮೇಜುಗಳ ಸಂಖ್ಯೆಯನ್ನು ಒಂದೊಂದು ಕೊಠಡಿಯಲ್ಲಿ 14 ರಿಂದ 7ಕ್ಕೆ ಇಳಿಸಲಾಗಿತ್ತು. ಅದೇ ವೇಳೆ, ಮತ ಎಣಿಕೆ ಸುತ್ತುಗಳು ಮತ್ತು ಫಲಿತಾಂಶ ಪ್ರಕಟಿಸುವ ಸುತ್ತುಗಳನ್ನು ಶೇ.40 ರಿಂದ ಶೇ.50ರಷ್ಟು ಹೆಚ್ಚಿಸಲಾಗಿತ್ತು. ಆಯೋಗ ಈ ಸ್ಪಷ್ಟನೆ ನೀಡಿದ ಮೇಲೆ ಚುನಾವಣಾ ಅಕ್ರಮಗಳ ಬಗ್ಗೆ ಸಾಮಾನ್ಯವಾಗಿ ಬಹಳ ಬೇಗ ಹರಡುವ ವದಂತಿಗಳಿಗೆ ಮೊದಲೇ ತಣ್ಣೀರು ಎರುಚಿದಂತಾಯಿತು.

ನಂತರ, ಮಧ್ಯರಾತ್ರಿ ಗೆದ್ದ ಅಭ್ಯರ್ಥಿಗಳ ಪಟ್ಟಿಯಲ್ಲಿ ವ್ಯತ್ಯಾಸ ಕಾಣಿಸುತ್ತಿದೆ ಎಂದು ಇನ್ನೊಂದು ದೊಡ್ಡ ಆಕ್ಷೇಪ ಕೇಳಿಬಂತು. ಹಾಗೆಯೇ, ಸುಮಾರು 10 ಕ್ಷೇತ್ರಗಳಲ್ಲಿ ಫಲಿತಾಂಶ ಘೋಷಿಸಲು ಆಗುತ್ತಿರುವ ವಿಳಂಬದ ಬಗ್ಗೆಯೂ ಆಕ್ಷೇಪ ಕೇಳಿಬಂತು. ಗೆದ್ದ ಅಭ್ಯರ್ಥಿಗಳ ಪಟ್ಟಿಯಲ್ಲಿನ ವ್ಯತ್ಯಾಸದ ಬಗ್ಗೆ ಪ್ರತಿ ಪ್ರಕರಣವನ್ನು ಸೂಕ್ತವಾಗಿ ತನಿಖೆ ನಡೆಸಲಾಗುವುದು ಎಂದು ಆಯೋಗ ಭರವಸೆ ನೀಡಿತು. ಇನ್ನು, ಫಲಿತಾಂಶ ಪ್ರಕಟಣೆ ವಿಳಂಬದ ವಿಷಯಕ್ಕೆ ಬಂದರೆ, ಅಭ್ಯರ್ಥಿಗಳು ಅಂಚೆ ಮತಗಳನ್ನು ಮರು ಎಣಿಕೆ ಮಾಡುವಂತೆ ಕೇಳುವುದು ಹಾಗೂ ಇವಿಎಂಗಳು ತೋರಿಸುವ ಮತಗಳ ಸಂಖ್ಯೆಯನ್ನು ಹೊಸತಾಗಿ ಕೂಡಿಸಲು ಕೇಳುವುದು ಸರ್ವೇಸಾಮಾನ್ಯ. ಹೀಗಾಗಿ ಒಂದಷ್ಟು ವಿಳಂಬವಾಗುತ್ತದೆ. ತಿರಸ್ಕೃತವಾದ ಅಂಚೆ ಮತಗಳ ಸಂಖ್ಯೆಗಿಂತ ಗೆಲುವಿನ ಅಂತರ ಕಡಿಮೆಯಿದ್ದರೆ ಅವುಗಳನ್ನು ಮರು ಎಣಿಕೆ ಮಾಡುವುದು ಕಡ್ಡಾಯ. ಒಂದು ಕ್ಷೇತ್ರದಲ್ಲಂತೂ ಕೇವಲ 12 ಮತಗಳ ಅಂತರದಿಂದ ಗೆಲುವು

ನಿರ್ಧರಿಸುವ ರಾಜಸ್ಥಾನದ ಪ್ರಕರಣ ನೆನಪಾಗಬೇಕು. ಅಲ್ಲಿನ ಕಾಂಗ್ರೆಸ್ ಪಕ್ಷದ ರಾಜ್ಯಾಧ್ಯಕ್ಷರಾಗಿದ್ದ ಸಿ.ಪಿ.ಜೋಶಿ ಅವರು 2018ರಲ್ಲಿ ಕೇವಲ 1 ಮತದ ಅಂತರದಿಂದ ಸೋತಿದ್ದರು. ಅದನ್ನು ಅವರು ಗೌರವದಿಂದ ಒಪ್ಪಿಕೊಂಡಿದ್ದರು.

2019ರ ಸಾರ್ವತ್ರಿಕ ಚುನಾವಣೆಯಲ್ಲಿ ಕೆಲ ಗಂಭೀರ ಪ್ರಶ್ನೆಗಳು ಎದ್ದಿದ್ದರಿಂದ ಚುನಾವಣಾ ಆಯೋಗದ ಇಮೇಜ್‌ಗೆ ಧಕ್ಕೆ ಉಂಟಾಗಿತ್ತು. ಅದನ್ನು ಸರಿಪಡಿಸಿಕೊಂಡು ತನ್ನ ದಕ್ಷತೆಯನ್ನು ಸಾಬೀತುಪಡಿಸಲು ಬಿಹಾರದ ಚುನಾವಣೆಯು ಚುನಾವಣಾ ಆಯೋಗಕ್ಕೆ ಉತ್ತಮ ಅವಕಾಶವಾಗಿತ್ತು. ಎಲ್ಲಾ ದೇಶಗಳು ಪರಸ್ಪರರಿಂದ ಪಾಠಗಳನ್ನು ಕಲಿಯಲು ಎದುರು ನೋಡುತ್ತಿರುವ ಈ ಹೊತ್ತಿನಲ್ಲಿ ಚುನಾವಣೆಗಳನ್ನು ಯಶಸ್ವಿಯಾಗಿ ನಡೆಸುವುದಕ್ಕೆ ಬಿಹಾರದ ವಿಧಾನಸಭೆ ಚುನಾವಣೆ ಒಂದು ಅತ್ಯುತ್ತಮ ಉದಾಹರಣೆಯಾಗಬಲ್ಲದು.

**ಲೇಖಕರು:– ಎಸ್.ವೈ.ಖುರೇಷಿ.**

**ನಿವೃತ್ತ ಮುಖ್ಯ ಚುನಾವಣಾ ಆಯುಕ್ತ**

**ಆಧಾರ: ವಿಶ್ವವಾಣಿ, ದಿನಾಂಕ:18.11.2020**

## 8. ನ್ಯಾಯಾಂಗದ ವಿಡಂಬನೆ ಅವಹೇಳನಕಾರಿ ಆಗದಿರಲಿ

'ಅತಿ ಸರ್ವತ್ರ ವರ್ಜಯೇತ್' ಎಂಬ ವಿವೇಕವಾಣಿಗೆ ಕನ್ನಡಿ ಹಿಡಿದಂತಿದೆ ಕುನಾಲ್ ಕಮ್ರಾ ದುಸ್ಸಾಹಸ. ಪತ್ರಕರ್ತ ಅರ್ನಬ್ ಗೋಸ್ವಾಮಿಯವರಿಗೆ ಜಾಮೀನು ಕೊಟ್ಟು ಬಿಡುಗಡೆಗೊಳಿಸಿದ ಸುಪ್ರೀಂ ಕೋರ್ಟಿನ ಆದೇಶವನ್ನು ಲೇವಡಿ ಮಾಡುವ ನಿಟ್ಟಿನಲ್ಲಿ ಕುನಾಲ್ ನೀಡಿರುವ ಹೇಳಿಕೆಗಳಿಂದ ನ್ಯಾಯಾಂಗ ನಿಂದನೆಯಾಗಿದೆ ಎಂದು ಅಟಾರ್ನಿ ಜನರಲ್ ಅಭಿಪ್ರಾಯಪಟ್ಟು, ಆ ಬಗ್ಗೆ ಕ್ರಮ ಕೈಗೊಳ್ಳಲು ಸಮ್ಮತಿ ಸೂಚಿಸಿದ್ದಾರೆ. ಸಾಮಾನ್ಯವಾಗಿ ನ್ಯಾಯಾಂಗ ನಿಂದನೆ ನಡಾವಳಿ ನ್ಯಾಯಾಲಯ ಹಾಗೂ ಆರೋಪಿತ ಮಧ್ಯೆ ಸೀಮಿತ. ಖಾಸಗಿ ವ್ಯಕ್ತಿಯೊಬ್ಬರು ಆ ಬಗ್ಗೆ ಸುಪ್ರೀಂಕೋರ್ಟಿನಲ್ಲಿ ಪ್ರಕರಣ ದಾಖಲಿಸಬೇಕಾದರೆ ಅಟಾರ್ನಿ ಜನರಲ್, ಯಾವುದೇ ಹೈಕೋರ್ಟಿನಲ್ಲಾದರೆ ಅಡ್ವೋಕೇಟ್ ಜನರಲ್‌ರ ಸಮ್ಮತಿ ಅಗತ್ಯ. ಕೆಲವು ನ್ಯಾಯಾಧೀಶರುಗಳ ಬಗ್ಗೆ ಆರೋಪ ಮಾಡಿ ಜಗನ್ಮೋಹನ್ ರೆಡ್ಡಿ ಬರೆದಿರುವ ಪತ್ರದ ವಿಚಾರವಾಗಿ ಅವರ ವಿರುದ್ಧ ನ್ಯಾಯಾಂಗ ನಿಂದನಾ ಅರ್ಜಿ ಸಲ್ಲಿಸಲು ಅಟಾರ್ನಿ ಜನರಲ್ ಅವರ ಸಮ್ಮತಿ ಕೋರಲಾಗಿತ್ತು. ಆದರೆ ಅಟಾರ್ನಿ ಜನರಲ್ ಸಮ್ಮತಿ ಕೊಡಲು ನಿರಾಕರಿಸಿದರು–ಕಾರಣ ಜಗನ್ ಪತ್ರ ಭಾರತದ ಮುಖ್ಯ ನ್ಯಾಯಮೂರ್ತಿಗಳ ಮುಂದೆ ಪರಿಶೀಲನೆಗಾಗಿ ಕಾದಿದೆ, ಹಾಗಿರುವಾಗ ಖಾಸಗಿ ವ್ಯಕ್ತಿಯೋರ್ವರು ಅರ್ಜಿ ಸಲ್ಲಿಸುವುದು ಸೂಕ್ತವಲ್ಲ ಎಂದು ಕುನಾಲ್ ಕಮ್ರಾ ಪ್ರಕರಣದಲ್ಲಿ ಸಮ್ಮತಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸುವಾಗ ಅಟಾರ್ನಿ ಜನರಲ್ ಬಹಳ ಗಂಭೀರ ಹಾಗೂ ಚಿಂತಾಜನಕ ಅಂಶಗಳನ್ನು ಗಮನಿಸಿದ್ದಾರೆ.

ಸಂಕ್ಷಿಪ್ತವಾಗಿ ಹೇಳಬೇಕಾದರೆ, ಕುನಾಲ್ ಟ್ವಿಟರ್‌ನಲ್ಲಿ, 'ಸುಪ್ರೀಂ ಕೋರ್ಟನ್ನು , 'ಗೌರವಾನ್ವಿತ' ಎಂದು ಸಂಭೋಧಿಸುವ ಕಾಲ ಹೋಗಿದೆ, ಯಾಕೆಂದರೆ ಆ ಸಂಸ್ಥೆಯಿಂದ ಗೌರವ ಬಹಳ ಹಿಂದೆಯೇ ಹೊರಹೋಗಿದೆ' ಎಂದು ಬರೆದುಕೊಂಡಿದ್ದಾರೆ. ಅಂತೆಯೇ ನಮ್ಮ ದೇಶದ ಸುಪ್ರೀಂಕೋರ್ಟ್ ಒಂದು ಸುಪ್ರೀಂ ಜೋಕ್ ಎಂದು ಸಹ ಹೇಳಿದ್ದಾರೆ. ಸಾಲದೇನೋ ಎಂಬಂತೆ ಸುಪ್ರೀಂಕೋರ್ಟನ್ನು ಕೇಸರಿ ಮತ್ತು ಹಸಿರು ಬಣ್ಣಗಳಲ್ಲಿ ಚಿತ್ರಿಸಿ ಆಡಳಿತರೂಢ ಬಿಜೆಪಿ ಪಕ್ಷದ ಧ್ವಜವನ್ನು ಕೋರ್ಟಿನ ಮೇಲೆ ಹಾರುತ್ತಿರುವಂತೆ ತೋರ್ಪಡಿಸಿದ್ದಾರೆ. ಅರ್ನಬ್ ಗೋಸ್ವಾಮಿ ಅವರಿಗೆ ಜಾಮೀನು ಕೊಟ್ಟು ಆದೇಶ ಹೊರಡಿಸಿದ ನ್ಯಾಯಮೂರ್ತಿ ಧನಂಜಯ್ ಚಂದ್ರಚೂಡ್ ಅವರನ್ನು ವಿಮಾನದಲ್ಲಿನ ಪರಿಚಾರಕರಿಗೆ ಹೋಲಿಸಿ, ಅವರು ಫಸ್ಟ್ ಕ್ಲಾಸ್ ಪ್ರಯಾಣಿಕರಿಗೆ ಮಾತ್ರ ಮಣೆ ಹಾಕುತ್ತಿದ್ದಾರೆ ಎಂದು ಹರಿಹಾಯ್ದಿದ್ದಾರೆ. ಇವೆಲ್ಲವನ್ನೂ ಗಣನೆಗೆ ತೆಗೆದುಕೊಂಡು ಪರಿಶೀಲನೆಯ ನಂತರ ಅಟಾರ್ನಿ ಜನರಲ್ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಲು ಸಮ್ಮತಿ ಸೂಚಿಸಿದ್ದಾರೆ. ಈ ಲೇಖನ ಬರೆಯುತ್ತಿರುವಾಗಲೇ ಕುನಾಲ್ ಕಮ್ರಾ ಅಟಾರ್ನಿ ಜನರಲ್ ಪತ್ರಕ್ಕೆ ಪ್ರತಿಕ್ರಿಯಿಸಿದ್ದಾರೆ. ತಮ್ಮ ಟ್ವೀಟ್‌ಗಳನ್ನು ಸಮರ್ಥಿಸಿಕೊಂಡು, ಯಾವುದೇ ಕಾರಣಕ್ಕೂ ಕ್ಷಮೆಯಾಚಿಸುವುದಿಲ್ಲ ಎಂದಿದ್ದಾರೆ ಎಂದು ವರದಿ ಮಾಡಲಾಗಿದೆ.

ವಾಕ್‌ಸ್ವಾತಂತ್ರ್ಯ ನಮ್ಮ ಸಂವಿಧಾನದಲ್ಲಿ ಎಲ್ಲ ಪ್ರಜೆಗಳಿಗೂ ಲಭ್ಯ. ಆದರೆ ಅತಿಮುಖ್ಯವಾಗಿ ಗಮನಿಸಲೇಬೇಕಾದ ಅಂಶವೇನೆಂದರೆ ಅಂಥ ವಾಕ್‌ಸ್ವಾತಂತ್ರ್ಯ ನ್ಯಾಯಾಂಗ ನಿಂದನೆಯ ಕಾನೂನಿಗೆ ಒಳಪಟ್ಟಿದೆ. ಅರ್ಥಾತ್ ವಾಕ್‌ಸ್ವಾತಂತ್ರ್ಯದ ಬಳಕೆಯ ನೆಪದಲ್ಲಿ ಅಕ್ಷೇಪಾರ್ಹ ಹೇಳಿಕೆಗಳನ್ನು ನೀಡಿ ನ್ಯಾಯಾಂಗದ ನಿಂದನೆಗೆ ಅವಕಾಶವಿಲ್ಲವೆಂದು ಸಂವಿಧಾನದ ಪರಿಚ್ಛೇದ 19(2)ದಲ್ಲಿ ಸ್ಪಷ್ಟಪಡಿಸಲಾಗಿದೆ. ನಮ್ಮ ಈ ಸಂವಿಧಾನಿಕ ನಿಯಮ ಅಮೆರಿಕದ ಸಾಂವಿಧಾನಿಕ ಚೌಕಟ್ಟಿಗೆ ವಿರುದ್ಧವಾಗಿ ಕಂಡು ಬರಬಹುದು. ಅಮೆರಿಕದ ಸಂವಿಧಾನದಲ್ಲಿ ವಾಕ್‌ಸ್ವಾತಂತ್ರ್ಯಕ್ಕೆ ಚ್ಯುತಿ ಬರುವಂಥ ಯಾವುದೇ ಕಾನೂನನ್ನು ಶಾಸಕಾಂಗ ಮಾಡುವಂತಿಲ್ಲ ಎಂಬ ಲಕ್ಷ್ಮಣರೇಖೆಯನ್ನು ಹಾಕಲಾಗಿದೆ. ಎಲ್ಲಿಯೇ ಇಲ್ಲದ ವಾಕ್‌ಸ್ವಾತಂತ್ರ್ಯ ಅಮೆರಿಕದ ಸಂವಿಧಾನದಡಿ ಲಭ್ಯ ಎಂಬುದು ಪ್ರಚಲಿತ ಅಭಿಪ್ರಾಯ. ಸಂವಿಧಾನದಲ್ಲಿಯೇ ಶಾಸಕಾಂಗಕ್ಕೆ ಕಡಿವಾಣ ಹಾಕಿರುವಂತಹ ಅಮೆರಿಕದಲ್ಲೂ ನ್ಯಾಯಾಂಗದ ನಿಂದನೆಯಾಗಬಹುದಂಥ ವಾಗ್ದಾಳಿಗೆ ಕಡಿವಾಣ ಹಾಕಬೇಕು ಎಂಬ ಸೂತ್ರವನ್ನು ಅಳವಡಿಸಿಕೊಳ್ಳಲಾಗಿದೆ. ನ್ಯಾಯಮೂರ್ತಿ ಫೀಲಿಕ್ಸ್ ಫ್ರಾಂಕ್ಫರ್ಟರ್ 1941ರಲ್ಲಿ ಬ್ರಿಡ್ಜಸ್ ವಿರುದ್ಧ

ಕ್ಯಾಲಿಫೋರ್ನಿಯಾ ಪ್ರಕರಣದಲ್ಲಿನ ತಮ್ಮ ಅಸಮ್ಮತ ಅಭಿಪ್ರಾಯದಲ್ಲಿ ನ್ಯಾಯಾಂಗ ನಿಂದನೆಗೆ ಶಿಕ್ಷೆ ವಿಧಿಸುವುದು ಸೆನ್ಸಾರ್ಶಿಪ್ ಆಗುವುದಿಲ್ಲ. ಹಿಂದೆಯೇ ನಡೆದಂಥ ಅಪರಾಧಕ್ಕೆ ಶಿಕ್ಷೆಯಷ್ಟೇ ಎಂದು ವ್ಯಾಖ್ಯಾನಿಸಿದ್ದಾರೆ. ಇಂಥ ನೀತಿಯಿಂದ ವಾಕ್‌ಸ್ವಾತಂತ್ರ್ಯಕ್ಕೆ ಯಾವುದೇ ಚ್ಯುತಿ ಆಗುವುದಿಲ್ಲ ಎಂದು ಸ್ಪಷ್ಟವಾಗಿ ಅಭಿಪ್ರಾಯ ಪಟ್ಟಿದ್ದಾರೆ. ಅವರ ಈ ಅಭಿಪ್ರಾಯದ ನಂತರದ ದಿನಗಳಲ್ಲಿ ಸಾಕಷ್ಟು ಮನ್ನಣೆ ಪಡೆದಿದೆ. ಹೀಗಿರುವಾಗ ಸಂವಿಧಾನದಲ್ಲಿಯೇ ಹಾಕಿರುವ ಚೌಕಟ್ಟಿಗೆ ವ್ಯತಿರಿಕ್ತವಾಗಿ ನಮ್ಮ ದೇಶದಲ್ಲಿ ವಾಕ್‌ಸ್ವಾತಂತ್ರ್ಯದ ಬಳಕೆಯ ನೆಪದಲ್ಲಿ ನ್ಯಾಯಾಂಗವನ್ನು ಹೀಯಾಳಿಸುವುದು ಅಕ್ಷಮ್ಯ.

ನಮ್ಮ ನ್ಯಾಯಾಲಗಳ ಮೇಲೆ ಟೀಕಾಪ್ರಹಾರಕ್ಕೆ ಟೊಂಕ ಕಟ್ಟಿ ನಿಂತಿರುವ ಬುದ್ಧಿಜೀವಿಗಳ ವಾದವೇನೆಂದರೆ ನ್ಯಾಯಾಂಗ ನಿಂದನೆ ಎಂಬ ವಿಚಾರವೇ ಇಂದಿನ ಸಮಾಜಕ್ಕೆ ಪ್ರಸಕ್ತವಲ್ಲ. ಹಾಗಾಗಿ ಕಾನೂನಿನ ಆ ಶಾಖೆಯನ್ನು ಕೈಬಿಡುವ ಕಾಲ ಬಂದಿದೆ ಎಂದು. ಇಂಥ ವಾದಕ್ಕೆ ಪುಷ್ಟಿ ಸಿಗುವುದು 1899ರಲ್ಲಿ ಪ್ರಿವಿ ಕೌನ್ಸಿಲ್ ಇತ್ಯರ್ಥಿಸಿದ ಮೆಕ್ಲೋಡ್ ವಿರುದ್ಧ ಸೇಂಟ್ ಅಬಿನ್ ಎಂಬ ಪ್ರಕರಣದಲ್ಲಿನ ಅಭಿಪ್ರಾಯ. ನ್ಯಾಯಾಂಗ ನಿಂದನೆ ಎಂಬುದು ಸಮಕಾಲೀನ ವಿಚಾರಧಾರೆಗೆ ವಿರುದ್ಧವಾದರೂ ವರ್ಣೀಯ ಜನಸಂಖ್ಯೆ ಇರುವ ಕೆಲವು ಸಣ್ಣ ದ್ವೀಪಗಳಲ್ಲಿ ನ್ಯಾಯಾಂಗದ ಗೌರವ ಕಾಪಾಡಲು ಅವಶ್ಯ ಎಂಬ ಶೋಚನೀಯ ಹೇಳಿಕೆ ಆ ತೀರ್ಪಿನಲ್ಲಿದೆ. ನಮ್ಮ ಸುಪ್ರೀಂ ಕೋರ್ಟ್ ಅಂಥ ವಾದವನ್ನು ಖಡಾಖಂಡಿತವಾಗಿ ತಿರಸ್ಕರಿಸಿ, 1969ರಲ್ಲಿ ಇತ್ಯರ್ಥವಾದ ಪರ್ಸ್ಪೆಕ್ಟಿವ್ ಪಬ್ಲಿಕೇಷನ್ಸ್ ಪ್ರಕರಣದಲ್ಲಿ, ನ್ಯಾಯಾಂಗ ನಿಂದನೆಗೆ ಶಿಕ್ಷೆ ವಿಧಿಸುವುದು ನಮ್ಮ ದೇಶದಲ್ಲಿ ಪ್ರಸಕ್ತ ಎಂದು ವಿಶ್ಲೇಷಿಸಿದೆ. 2002ರ ಅರುಂಧತಿ ರಾಯ್ ಪ್ರಕರಣದಲ್ಲಿ ನ್ಯಾಯಾಂಗ ನಿಂದನೆ ಕಾಯ್ದೆ ಇತರ ದೇಶಗಳಲ್ಲಿನ ಬೆಳವಣಿಗೆಗಳನ್ನು ಗಣನೆಗೆ ತೆಗೆದುಕೊಂಡು, ನಮ್ಮ ದೇಶದ ಸಾಮಾಜಿಕ–ಆರ್ಥಿಕ ಹಿನ್ನೆಲೆಗೆ ತಕ್ಕಂತೆ ರೂಪಿಸಲಾಗಿದೆ ಎಂದು ಅಭಿಪ್ರಾಯಪಟ್ಟಿದೆ. 1978ರಲ್ಲಿ ಇತ್ಯರ್ಥವಾದ ರಾಮ್ ದಯಾಳ್ ಮರ್ಕಹಾರ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಗ್ರಾಮೀಣ ಪ್ರದೇಶಗಳ ಜನತೆಯ ಚಿಂತನೆ ಹಾಗೂ ಅಭಿಪ್ರಾಯಗಳ ಮೇಲೆ ಪರಿಣಾಮ ಬೀರಿ, ಅವರಲ್ಲಿ ನ್ಯಾಯಾಂಗದ ಬಗ್ಗೆ ತಪ್ಪು ಭಾವನೆ ಮೂಡಿಸುವಂಥ ಹೇಳಿಕೆಗಳು ನ್ಯಾಯಾಂಗ ನಿಂದನೆಯಾಗುತ್ತವೆ ಎಂದು ತೀರ್ಪಿತ್ತಿದೆ. ಬಡತನ, ಅನಕ್ಷರತೆ ಆದಿಯಾಗಿ ಹಲವು ಪಿಡುಗುಗಳಿಂದ ಬಳಲುತ್ತಿರುವ ನಮ್ಮ ಸಮಾಜದಲ್ಲಿ ಸೋಷಿಯಲ್ ಮೀಡಿಯಾದ ಮೂಲಕ ನ್ಯಾಯಾಂಗದ ಬಗ್ಗೆ ಅವಹೇಳನಕಾರಿ ಹೇಳಿಕೆಗಳನ್ನು ಹರಿಬಿಟ್ಟು ಜನರನ್ನು ಪ್ರಭಾವಿಸುವ ಕೃತ್ಯ ಅಪರಾಧವೇ ಸರಿ. ಇದರ ಸಾರಾಂಶವೇನೆಂದರೆ ನಮ್ಮ ದೇಶದ ಜನಸಾಮಾನ್ಯರಲ್ಲಿ ನ್ಯಾಯಾಂಗದ ಬಗ್ಗೆ ನಕಾರಾತ್ಮಕ ಕಲ್ಪನೆ ಮೂಡಿಸಬಹುದಾದ ಯಾವುದೇ ಹೇಳಿಕೆ ನ್ಯಾಯಾಂಗದ ನಿಂದನೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ವೀಕ್ಷಿಸಿದಾಗ ಅಪರಿಮಿತ ವಾಕ್‌ಸ್ವಾತಂತ್ರ್ಯದ ಪ್ರತಿಪಾದಕರ ವಾದವು ವಿತಂಡವಾದ ಎಂಬುದರಲ್ಲಿ ಯಾವುದೇ ಸಂಶಯ ಇರುವುದಿಲ್ಲ.

ನ್ಯಾಯಾಲಯಗಳು ಹಾಗೂ ನ್ಯಾಯಾಧೀಶರುಗಳ ಬಗ್ಗೆ ಬೇಜವಾಬ್ದಾರಿಯಿಂದ ಹಾಗೂ ನ್ಯಾಯಾಧೀಶರುಗಳ ಬಗ್ಗೆ ಬೇಜವಾಬ್ದಾರಿಯಿಂದ ವಾಗ್ದಾಳಿ ನಡೆಸುವುದರಿಂದ ನ್ಯಾಯಾಧೀಶರುಗಳ ಮನಃಸ್ಥಿತಿಯ ಮೇಲೆ ವ್ಯತಿರಿಕ್ತ ಪರಿಣಾಮ ಆಗುವುದು ಸಹಜ. ಹಿಂದೊಂದು ಕಾಲದಲ್ಲಿ ಇಂಗ್ಲೆಡ್ ದೇಶದಲ್ಲಿ ಲಾರ್ಡ್ ಡೆನ್ನಿಂಗ್ ಒಂದು ನಿಲುವು ತೆಗೆದುಕೊಂಡಿದ್ದರು, ಟೀಕಾಟಿಪ್ಪಣಿಗಳು ಸಾಮಾನ್ಯ ಜನರ ಮೇಲೆ ಪರಿಣಾಮ ಬೀರಬಹುದೇ ಹೊರತು, ನ್ಯಾಯಾಧೀಶರುಗಳ ಮೇಲೆ ಅಲ್ಲ ಎಂದು. ಆ ಅಭಿಪ್ರಾಯವನ್ನು ಒಪ್ಪದ ಅಲ್ಲಿನ ಸರ್ವೋಚ್ಚ ನ್ಯಾಯಪೀಠವಾಗಿದ್ದ 'ಹೌಸ್ ಅಫ್ ಲಾರ್ಡ್ಸ್'ನಲ್ಲಿ ಲಾರ್ಡ್ ಡಿಲ್ಹಾರ್ನ್ 'ನ್ಯಾಯಾಧೀಶರು ಮನುಷ್ಯ ಮಾತ್ರದವರೇ ಆದ್ದರಿಂದ ಟೀಕಾಟಿಪ್ಪಣಿಗಳು ಅವರ ಮೇಲೆ ಪ್ರಭಾವ ಬೀರುವುದು ಸಹಜ' ಎಂಬ ಮಹತ್ತರವಾದ ಅಭಿಪ್ರಾಯ ಮಂಡಿಸಿದ್ದಾರೆ. ಹೀಗಿರುವಾಗ ನ್ಯಾಯಾಧೀಶರನ್ನು ಅನಗತ್ಯ ಟೀಕಾಪ್ರಹಾರಕ್ಕೆ ಗುರಿಪಡಿಸುವುದು ಸಲ್ಲ.

ನಮ್ಮ ಕಾನೂನು ವ್ಯವಸ್ಥೆಯಲ್ಲಿ ಇತ್ಯರ್ಥವಾಗಿ ಮುಕ್ತಾಯಗೊಂಡಿರುವ ಪ್ರಕರಣಗಳಲ್ಲಿನ ತೀರ್ಪುಗಳ ಹಾಗೂ ಆದೇಶಗಳ ಬಗ್ಗೆ ನ್ಯಾಯೋಚಿತವಾದ ಟೀಕೆ–ಟಿಪ್ಪಣಿಗಳಿಗೆ ಅವಕಾಶವಿದೆ. ಹೀಗೆ

ಉಚಿತವಾದ ಹಾಗೂ ರಚನಾತ್ಮಕವಾದ ಟೀಕೆ–ಟಿಪ್ಪಣಿಗಳನ್ನು ಸಮಂಜಸವಾದ ಶಬ್ದಗಳನ್ನು ಉಪಯೋಗಿಸಿ ಮಾಡಿರುವ ನಿದರ್ಶನಗಳು ನಮ್ಮಲ್ಲಿ ಸಾಕಷ್ಟಿವೆ. ಸೈದ್ಧಾಂತಿಕ ಮಟ್ಟದಲ್ಲಿ ನ್ಯಾಯಾಲಯದ ಯಾವುದೇ ಆದೇಶವನ್ನು ಖಂಡಿಸಿ, ವಿಮರ್ಶಿಸುವುದು ಪ್ರಜಾಪ್ರಭುತ್ವದ ಅಡಿಪಾಯಗಳಲ್ಲೊಂದು. ಈ ಹಕ್ಕನ್ನು ಗೌರವಪೂರ್ಣವಾಗಿ ಉಪಯೋಗಿಸಿಕೊಂಡು ರಚನಾತ್ಮಕ ಟೀಕೆ–ಟಿಪ್ಪಣಿಗಳಲ್ಲಿ ತೊಡಗಿಸಿಕೊಳ್ಳುವುದು ಜವಾಬ್ದಾರಿಯುತ ನಾಗರಿಕರ ಲಕ್ಷಣವಾಗಿರುತ್ತದೆ. ಸಕಾರಾತ್ಮಕ, ಹಾಸ್ಯ ಪ್ರಜ್ಞಾಯುಕ್ತ ವಿಡಂಬನೆಗೂ ಸಾಕಷ್ಟು ಅವಕಾಶವಿದೆ.

ನಮ್ಮ ದೇಶದ ಅಟಾರ್ನಿ ಜನರಲ್ ಆಗಿದ್ದ ಸಿ.ಕೆ.ದಫ್ತರಿಯವರ ಹಾಸ್ಯ ಪ್ರಜ್ಞೆ ಪ್ರಖ್ಯಾತವಾದದ್ದು. ಒಮ್ಮೆ ಅವರು ನ್ಯಾಯಾಲಯದಲ್ಲಿ ವಾದ ಮಾಡುತ್ತಿರುವಾಗ ಕ್ಷಣಗಳ ನಂತರ ನ್ಯಾಯಾಧೀಶರುಗಳ ಮೇಜಿನ ಮೇಲಿದ್ದ ಒಂದು ಸಣ್ಣ ದೀಪ ಹತ್ತಿಕೊಂಡಾಗ ದಫ್ತರಿಯವರು ಹೇಳಿದರಂತೆ: 'ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಬೆಳಕು ಬಂದಿದೆ ಎಂದು, ಇಂತಹ ಉತ್ತಮ ಅಭಿರುಚಿಯ ವಿಡಂಬನೆ ಮಾಡುವ ಬದಲು ಹಾಸ್ಯಕ್ಕೂ ಅಪಹಾಸ್ಯಕ್ಕೂ ಇರುವ ವ್ಯತ್ಯಾಸ ಮರೆತು ಎಡವಿದ್ದಾರೆ ಕುನಾಲ್. ಅಟಾರ್ನಿ ಜನರಲ್ ಪತ್ರ ನಮ್ಮೆಲ್ಲರಿಗೂ ಎಚ್ಚರಿಕೆಯ ಗಂಟೆ ಮೊಳಗಿಸಿದೆ. ನಮ್ಮ ಹಕ್ಕು ಬಾಧ್ಯತೆಗಳನ್ನು ಅರಿತು ಮಾಡುವ ಧನಾತ್ಮಕ ಟೀಕೆ 'ಠೀಕ್ ಹೈ' ಎಂಬ ಪ್ರಬುದ್ಧತೆ ಮೆರೆಯೋಣ.

**ಲೇಖಕರ:– ರಾಘವೇಂದ್ರ ಎಸ್. ಶ್ರೀವತ್ಸ**
**ಸುಪ್ರೀಂಕೋರ್ಟ್, ವಕೀಲರು.**
**ಆಧಾರ: ವಿಶ್ವವಾಣಿ, ದಿನಾಂಕ:19.11.2020**

## 9. ಮಾನವೀಯತೆ ಸಂವಿಧಾನದ ಆಶಯ

ಬಾಬಾ ಸಾಹೇಬ್ ಅಂಬೇಡ್ಕರ್ ನೇತೃತ್ವದಲ್ಲಿ ರಚನೆಯಾದ ಭಾರತದ ಸಂವಿಧಾನವು 1949ರ ನವೆಂಬರ್ 26ರಂದು ಕಾನೂನಾತ್ಮಕವಾಗಿ ಅಂಗೀಕರಿಸಿ ದೇಶಕ್ಕೆ ಸಮರ್ಪಿಸಲಾಯಿತು. ಭಾರತದ ಸಂವಿಧಾನದ ಪ್ರಸ್ತಾವನೆಯೆಂದರೆ 'ನಾವು ಭಾರತದ ಜನತೆ ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಜಾತ್ಯಾತೀತ, ಪ್ರಜಾಸತಾತ್ಮಕ, ಗಣರಾಜ್ಯವಾನ್ನಾಗಿ ಕಟ್ಟಲು, ಸಂಕಲ್ಪ ಮಾಡಿರುವುದಾಗಿರುತ್ತದೆ ಮತ್ತು ಅದರ ಎಲ್ಲಾ ನಾಗರಿಕರಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯವನ್ನು ವಿಚಾರ ಹಾಗೂ ಅಭಿವ್ಯಕ್ತಿ, ನಂಬುಗೆ ಹಾಗೂ ಇಷ್ಟಾಶಕ್ತಿಯನ್ನು ಪೂಜಿಸುವ ಸ್ವಾತಂತ್ರ್ಯವನ್ನು, ಸ್ಥಾನಮಾನ ಹಾಗೂ ಅವಕಾಶಗಳ ಸಮಾನತೆಯನ್ನು ಹಾಗೂ ಪ್ರತಿಯೊಬ್ಬ ವ್ಯಕ್ತಿಯ ಗೌರವ ರಕ್ಷಣೆ ಹಾಗೂ ದೇಶದ ಏಕತೆ ಹಾಗೂ ಸಮಗ್ರತೆಯ ದೃಷ್ಟಿಯಿಂದ ಅವರೆಲ್ಲರ ನಡುವೆ ಭ್ರಾತೃತ್ವ ನಿರ್ಮಿಸುವ ಉದ್ದೇಶದಿಂದ 26ನೇ ನವೆಂಬರ್ 1949ರಂದು ನಮ್ಮ ಸಂವಿಧಾನಿಕ ಸಭೆಯಲ್ಲಿ ಅಂಗೀಕರಿಸಿ ಕಾನೂನು ಸಮ್ಮತವಾಗಿ ನಮಗಾಗಿ ಸಂವಿಧಾನವನ್ನು ನೀಡಲ್ಪಟ್ಟಿತ್ತು.' 1950ರ ಜನವರಿ 26ರಂದು ಅದು ಆಚರಣೆಗೆ ಬಂದಿತು.

ಸಂವಿಧಾನದ ಬಗ್ಗೆ ಅಂಬೇಡ್ಕರ್‌ರವರ ವಿಚಾರಧಾರೆಯೆಂದರೆ ಒಳ್ಳೆಯ ಸರ್ಕಾರವು ಕಾನೂನು ಪಾಲನೆ ಮತ್ತು ಒಳ್ಳೆಯ ಆಡಳಿತಕ್ಕೆ ನಾಂದಿಯಾಗಬೇಕೆಂಬುದಾಗಿತ್ತು. 'ಮನುಜ ಕುಲವೆಲ್ಲಾ ಒಂದೇ, ಯಾರ ಜಾತಿ ಧರ್ಮವನ್ನು ನಂಬಬೇಡ ಮಾನವ ಧರ್ಮವೆಲ್ಲಾ ಒಂದೇ, ಅದರಲ್ಲಿ ಪ್ರೀತಿ ಇರಿಸಿ, ಗೌರವಿಸಿ ಎಂಬುದಾಗಿತ್ತು.'

ಅಂಬೇಡ್ಕರ್ ವಿರಚಿತ ಸಂವಿಧಾನ ಮಾನವ ಹಕ್ಕುಗಳ ರಕ್ಷಣೆಗೆ ಬದ್ಧವಾದ ಸಂವಿಧಾನವಾಗಿದೆ. 'ಸಿಹಿಗಿಂತ ಕಹಿಯನ್ನೇ ಉಂಡ ಮಹಾನ್ ಕ್ರಾಂತಿಕಾರಿ ಹೋರಾಟಗಾರ ಅಂಬೇಡ್ಕರ್' ಅವರ ನೇತೃತ್ವದಲ್ಲಿ ಬರೆದಿರುವ ಸಂವಿಧಾನದ ಮಹತ್ವದ ತಿರುಳಾದ 'ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು' ಎಂಬ ಧ್ಯೇಯ ಧೋರಣೆಗಳು ಮಾನವೀಯ ಸಿದ್ಧಾಂತಕ್ಕೆ ಬದ್ಧವಾಗಿದೆ. ಅಂಬೇಡ್ಕರ್ ಹುಟ್ಟಿ ಬೆಳೆದ ಪರಿಸ್ಥಿತಿ, ಅನುಭವಿಸಿದ ಚಿತ್ರಹಿಂಸೆ, ತಾರತಮ್ಯ, ಅವಹೇಳನಗಳು ಮತ್ತು ಅವಮಾನಗಳು ಅವರ ಲೋಕಜ್ಞಾನದ ಅರಿವೆಗೆ ಕಾರಣವಾದುದಲ್ಲದೆ ಸಂವಿಧಾನದ ಪ್ರತಿಯೊಂದು ವ್ಯಾಖ್ಯಾನಕ್ಕೂ ಬಂಗಾರದ ಒಪ್ಪವನ್ನು ಕೊಡಲು ಕಾಣಿಕೆಯಾಯಿತು. ಆದರೆ ಮಾಡಬಾರದ್ದನ್ನು ಮಾಡುವ ಆಡಳಿತಗಾರರು ಮತ್ತು ಆಳೂವವರಿಂದ ಆಗಬಾರದ್ದು ಆಗುತ್ತಿದೆ. ಇದು ದುರಂತ, ದುರದೃಷ್ಟ ಮತ್ತು ವಿಷಾದನೀಯ.

ಭಾರತದ ಸಂವಿಧಾನವು ಅತ್ಯಂತ ಪರಿಪೂರ್ಣವಾದ ಶ್ರೇಷ್ಠ ಮತ್ತು ಜಗತ್ತಿನ ಅದ್ವಿತೀಯ ಗುಣಗಳಿಂದಾರಿಸಿದ ಶ್ರೇಷ್ಠ ಗ್ರಂಥ. ಭಾರತದ ಸಂವಿಧಾನದ ಪ್ರಸ್ತಾವನೆಯಂತೆ ದೇಶವನ್ನು ಸಾರ್ವಭೌಮ ಸಮಾಜವಾದಿ, ಜಾತ್ಯಾತೀತ, ಪ್ರಜಾಸತ್ತಾತ್ಮಕ, ಗಣರಾಜ್ಯವನ್ನಾಗಿ ಕಟ್ಟಲು ಸಂಕಲ್ಪ ಮಾಡಿದುದಲ್ಲದೆ ಪ್ರಜೆಗಳಿಗೆ ಕಾನೂನಾತ್ಮಕ ಸಂವಿಧಾನವನ್ನು ನೀಡಿದೆ. ದೇಶದ ಎಲ್ಲಾ ನಾಗರಿಕರಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯವನ್ನು ಅಲ್ಲದೆ ಅಭಿವ್ಯಕ್ತಿ ನಂಬುಗೆ ಮತ್ತು ಇಚ್ಛಾಶಕ್ತಿಯನ್ನು ಪೂಜಿಸುವ ಸ್ಥಾನಮಾನ ಮತ್ತು ಅವಕಾಶ ಸಮಾನತೆಯನ್ನು ಕಲ್ಪಿಸಿದೆ. ಸಂವಿಧಾನದ ಶ್ರೇಷ್ಠತೆ ಅದರ ವ್ಯಾಪ್ತಿಯಲ್ಲಿಯೇ ಉಳಿಯಬೇಕೆನ್ನುವ ದೃಷ್ಟಿಯಿಂದ ಯಾವುದೇ ಸರ್ಕಾರ ತನ್ನ ಇಚ್ಛೆಗೆ ತಕ್ಕಂತೆ ಅದನ್ನು ಬದಲಾಯಿಸುವುದಕ್ಕೆ ಎಡೆ ಮಾಡಿಕೊಡದಂತೆ ಮುನ್ನೆಚ್ಚರಿಕೆ ವಹಿಸಿ ರಚಿಸಲಾದ ಮೌಲ್ಯಾಧಾರಿತ ಕೃತಿಗೆ ನಾವು ಅಂಬೇಡ್ಕರ್ ತಂಡಕ್ಕೆ ಸದಾ ಅಭಿನಂದನೆಯನ್ನು ಸಲ್ಲಿಸುತ್ತಿರಬೇಕು.

ಪ್ರಪಂಚದ ಮೂಲ ಪ್ರಪ್ರಥಮ ಲಿಖಿತ ಸಂವಿಧಾನಕ್ಕೆ 110 ವರ್ಷವಾಗಿದೆ. ಅನೇಕ ರಾಷ್ಟ್ರಗಳಿಗೆ ಅದೇ ಮಾದರಿಯಗಿದೆ. ನಮ್ಮ ಪಾರ್ಲಿಮೆಂಟ್ ಅಥವಾ ಸಂಸತ್ ಮತ್ತು ಸರ್ಕಾರದ ಸಂಯುಕ್ತ ವ್ಯವಸ್ಥೆಯು ಬ್ರಿಟಿಷ್ ಸಂಸತ್‌ನ ಮಾದರಿಯಲ್ಲಿದೆ. ಮೂಲಭೂತ ಹಕ್ಕುಗಳು ಮತ್ತು ಸುಪ್ರೀಂ ಕೋರ್ಟ್ ಅಮೆರಿಕಾ ದೇಶದ ಮಾದರಿ. ಸಂಯುಕ್ತ ಗಣತಂತ್ರ ರಾಷ್ಟ್ರದ ರೀತಿ ನೀತಿ ಕೆನಡಾ ದೇಶದ ವಿಧಾನ. ಅಧಿಕಾರ ವಿಕೇಂದ್ರಿಕರಣ ಆದೇಶಗಳ ನಿರ್ದೇಶನ ಐರಿಷ್, ಆಸ್ಟ್ರೇಲಿಯ ಮತ್ತು ಸ್ಪೇನ್ ಮಾದರಿಯನ್ನು

ಹೋಲುತ್ತದೆ. ಈ ಎಲ್ಲಾ ಸಂವಿಧಾನಗಳ ಒಳಿತುಗಳನ್ನು ಸ್ವೀಕರಿಸಿ ಭಾರತೀಯ ಸಂಸ್ಕೃತಿಗೆ ಪೋಣಿಸಿ ಬರೆದು ಕೇವಲ 280 ಪುಟಗಳಲ್ಲಿ ಮುದ್ರಿತವಾಗಿರುವ ನಮ್ಮ ಲಿಖಿತ ಸಂವಿಧಾನದ ಪವಿತ್ರ ಗ್ರಂಥವೇ ಸರಿ. ಅಂಬೇಡ್ಕರ್‌ರವರು ಭವಿಷ್ಯದ ಯೋಜನೆ ಮತ್ತು ಯೋಚನೆಗಳ ಬಗ್ಗೆ ನಿರ್ದಿಷ್ಟ ಭವಿಷ್ಯವನ್ನು ನುಡಿದಿದ್ದರು. ಅದೇನೆಂದರೆ 'ಈ ಸಂವಿಧಾನ ಸರಿಯಾಗಿ ಜಾರಿಯಾಗದಿದ್ದರೆ, ಸಂವಿಧಾನವನ್ನು ದೂರಬೇಡಿ. ಜಾರಿಗೊಳಿಸುವವರನ್ನೇ ದೂರಬೇಕು'. ಖಡಾ ಖಂಡಿತವಾಗಿ ಹೇಳಿದ ಮಾತು. ಮುಂದುವರಿಯುತ್ತಾ ಸ್ವತಂತ್ರ್ಯ ಭಾರತದ ಜನ ನನ್ನನ್ನು 'ಸಂವಿಧಾನ ಶಿಲ್ಪಿ'ಯೆಂದು ಕರೆಯುತ್ತಾರೆ. ಆದರೆ ನಾನೊಂದು ಬಾಡಿಗೆಯ ಕುದುರೆ. ನನಗೆ ಇಷ್ಟವಿಲ್ಲದ್ದನ್ನು ಸಂವಿಧಾನದಲ್ಲಿ ಅಳವಡಿಸುವ ಪ್ರಮೇಯವೂ ಬಂದೊಗಿತ್ತು. ಅವರು ಅಂದು ಕಳವಳಗೊಂಡ ವಿಚಾರಗಳು ಇಂದು ಸತ್ಯವಾಗುತ್ತಿದೆ. ಅಳತೆ ಇಲ್ಲದಿದ್ದರೆ ಔಷಧಿ ಕೂಡಾ ವಿಷವಾಗುತ್ತದೆ ಎಂಬ ತೀರ್ಮಾನದ ಸಿದ್ಧಾಂತವನ್ನು ಸರಳವಾಗಿ ಹೇಳಿದ್ದರು. ಈ ಹಿನ್ನೆಲೆಯಲ್ಲಿ ನಾವು ಯಾವತ್ತು ಕಾರ್ಯಾಂಗ ಮತ್ತು ಶಾಸಕಾಂಗದ ಕಾರ್ಯ ನಿರ್ವಹಣೆಯನ್ನು ವಿಮರ್ಶಿಸಿಬೇಕೇ ಹೊರತು ಯಾವ ಕಾರಣಕ್ಕೂ ಸಂವಿಧಾನವನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಿ ಪರಾಮರ್ಶಿಸಬಾರದು. ಅಲ್ಲದೆ ನಾವು ಅಕ್ಷರಕ್ಕೂ ಆಚರಣೆಗೂ ನಿಕಟ ಮೈತ್ರಿ ಮತ್ತು ಸಾಮರಸ್ಯವಿದೆಯೇ ಎಂಬುದನ್ನು ಪರಾಮರ್ಶಿಸಬೇಕು. ನಮ್ಮ ಪ್ರಜಾಪ್ರಭುತ್ವದ ಅಳಿವು ಉಳಿವಿನ ಹಿಂದೆ ನೂರಾರು ವರ್ಷಗಳ ತ್ಯಾಗ ಬಲಿದಾನಗಳ ಇತಿಹಾಸವಿದೆ. ಈ ದೇಶ ಪ್ರಜಾಪ್ರಭುತ್ವ ಗಣರಾಜ್ಯವಾಗಿ ಬೆಳೆದಿರುವುದು ಸ್ಮರಣಾರ್ಹ ಮತ್ತು ಚರಿತ್ರಾರ್ಹ. ಅದಲ್ಲದೇ ವಿವಿಧ ಭಾಷೆ, ಸಂಸ್ಕೃತಿ, ಧರ್ಮಗಳನ್ನು ಹೊಂದಿದ್ದರು ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿ ತೋರಿಸಿದೆ. ಪ್ರಸ್ತುತ ನಮ್ಮಲ್ಲಿ ಬೇರೂರಿರುವ ದೌರ್ಬಲ್ಯದ ಶಕುನವೆಂದರೆ ವಿಶಾಲವಾದ ಅರ್ಥವಿರುವ ಧರ್ಮವನ್ನು ಆಂಗ್ಲಭಾಷೆಯಲ್ಲಿ 'ರಿಲಿಜನ್' ಮತ ಎಂದು ಅರ್ಥೈಸಿಕೊಂಡಿರುವುದು ನಮ್ಮ ರಾಷ್ಟ್ರಕ್ಕೆ ಅಪಾರ ಹಾನಿಯಾಗಿದೆ. ಮೂಲಭೂತ ತಿರುಳು 'ವಸುದೈವ ಕುಟುಂಬಕಂ' ಎಂಬ ಮಾತೇ ಧರ್ಮದ ತಿರುಳು. ಧರ್ಮವನ್ನು ಮನುಷ್ಯನ ಒಳಿತಿಗಾಗಿ ಇವೆಯಷ್ಟೇ ಹೊರತು ಶೋಷಣೆಗೆ ಗುರಿಪಡಿಸುವುದಕ್ಕಲ್ಲ ಎಂಬುದು ಅಂಬೇಡ್ಕರ್ ದೃಢ ನಿರ್ಧಾರವಾಗಿತ್ತು.

ಪ್ರಜಾಪ್ರಭುತ್ವಕ್ಕಿರುವ ಅನೇಕ ವ್ಯಾಖ್ಯಾನಗಳಲ್ಲಿ ಅಬ್ರಾಹಂಲಿಂಕನ್‌ರವರ ದೃಷ್ಟಿಕೋನದ ಪ್ರಕಾರ ಸರ್ಕಾರ ಎಂದರೆ ಪ್ರಜೆಗಳಿಂದ, ಪ್ರಜೆಗಳಿಗಾಗಿ ಮತ್ತು ಪ್ರಜೆಗಳಿಗೋಸ್ಕರ ಆದರೆ 'ಅಂಬೇಡ್ಕರ್ ವ್ಯಾಖ್ಯಾನದ ಪ್ರಕಾರ ರಕ್ತಪಾತವಿಲ್ಲದೆ, ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರುವ ಸರ್ಕಾರದ ಒಂದು ಸ್ವರೂಪ ಮತ್ತು ಕ್ರಮ ಬದ್ಧತೆಯೇ ಪ್ರಜಾಪ್ರಭುತ್ವದ ಅಂಬೇಡ್ಕರ್ ತತ್ವಗಳು' ರಾಜಕೀಯ ನಿಲುವುಗಳು ಆರ್ಥಿಕ ಮತ್ತು ಧರ್ಮ ನಿಷ್ಠೆಗಳು ಅವರ ಪ್ರಜಾಪ್ರಭುತ್ವದ ಕಲ್ಪನೆಯಿಂದ ರೂಪುಗೊಂಡಿದೆ.

ಪ್ರಜಾಪ್ರಭುತ್ವದ ಯಶಸ್ಸಿನಲ್ಲಿ ಪ್ರಜ್ಞಾವಂತ ಪ್ರಜೆಗಳ ಪಾತ್ರವೇ ದೊಡ್ಡದು ಚುನಾಯಿತ ಪ್ರತಿನಿಧಿಗಳು ಜನರಿಂದ ನೇರವಾಗಿ ಆರಿಸಿ ಬರುವುದರಿಂದ ಜನ ಸಾಮಾನ್ಯರ ಕಷ್ಟ ಸುಖಗಳ ಅನುಭವ ಅವರಿಗಿರಬೇಕು ಎಂಬ ಅಭಿಪ್ರಾಯ ಅವರದ್ದಾಗಿತ್ತು. ಪ್ರಜಾಪ್ರಭುತ್ವ ಮಾದರಿಯಲ್ಲಿ. ಅನುವಂಶೀಯ ಆಡಳಿತವಿರಕೂಡದು. ಎಲ್ಲಾ ನಾಯಕರು ಚುನಾವಣೆಗಳನ್ನು ಎದುರಿಸುವ ಮೂಲಕ ಸಾಮಾನ್ಯ ಜನಗಳಿಂದ ಒಪ್ಪಿಗೆ ಪಡೆಯಬೇಕು. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಸರ್ಕಾರವು ದೇಶದ ಸಮಸ್ತ ಶೋಷಿತರ ಸಂಕಷ್ಟಗಳನ್ನು ದೂರ ಮಾಡಬೇಕಲ್ಲದೇ ಅವರ ಹಿತಾಸಕ್ತಿಗಳನ್ನು ರಕ್ಷಿಸಬೇಕಾಗುತ್ತದೆ.

ಸಮಾನತೆ ಮತ್ತು ಭ್ರಾತೃತ್ವದ ತಳಹದಿಗೆ ಒತ್ತು ನೀಡಿದ್ದ ಅಂಬೇಡ್ಕರ್ 'ರಾಜಕಾರಣದಲ್ಲಿ ನಾವು ಒಬ್ಬನಿಗೆ ಒಂದು ಮತ, ಆ ಮತಕ್ಕೆ ಒಂದು ಮೌಲ್ಯ ಎಂಬ ತತ್ವವನ್ನು ಒಪ್ಪಿಕೊಂಡಿದ್ದೇವೆ. ಆದರೆ ಸಾಮಾಜಿಕ, ಆರ್ಥಿಕ, ವ್ಯವಸ್ಥೆಯಲ್ಲಿ ಒಬ್ಬ ಮನುಷ್ಯನಿಗೆ ಒಂದು ಮೌಲ್ಯವೆಂಬ ತತ್ವವನ್ನು ತಿರಸ್ಕರಿಸುತ್ತಲೇ ಬಂದಿದ್ದೇವೆ'. ಪ್ರಜಾಪ್ರಭುತ್ವದಲ್ಲಿ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಮತ್ತು ಸಾಮಾಜಿಕ ನ್ಯಾಯವು ದೇಶದ ಅಭಿವೃದ್ಧಿಯ ತಳಹದಿಯಾಗಬೇಕು ಎಂಬುದು ಅವರ ತೀಕ್ಷ್ಣ ಮತ್ತು ದೃಢವಾದ ಪ್ರತಿಪಾದನೆಯಾಗಿತ್ತು. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸರ್ಕಾರಗಳು ದೇಶದಲ್ಲಿರುವ ಸಮಸ್ಯೆಗಳನ್ನು ಮರೆಮಾಚಿ ವೈಭವೀಕರಣದ

ಚಿತ್ರಣಗಳನ್ನು ಮಾತ್ರ ಜನರ ಮುಂದಿಟ್ಟರೆ ಸಮಾಜ ಮತ್ತು ದೇಶದ ಬದಲಾವಣೆ ಮತ್ತು ಅಭಿವೃದ್ಧಿ ಅಸಾಧ್ಯ. ಸರ್ವಾಧಿಕಾರ ತತ್ತ್ವ, ವಂಶಪಾರಂಪರ್ಯ, ಕುಟುಂಬ ರಾಜಕಾರಣಕ್ಕೆ ಕುಮ್ಮಕ್ಕನ್ನು ನೀಡಿ ಪುಷ್ಟಿ ನೀಡುವುದು ತರವಲ್ಲ. ಸಂಸತ್‌ಗೆ ಹೋಗುವವರು ಅಸಂವಿಧಾನಿಕ ಭಾಷೆಯನ್ನು ಬಳಸುವುದು ತರವಲ್ಲ.

ಮತದಾನ ಕೇವಲ ಹಕ್ಕಲ್ಲ, ಕರ್ತವ್ಯವೂ ಹೌದು ಹಾಗೂ ಅನಿವಾರ್ಯ. ಮತದಾನದ ಹಕ್ಕಿಗೆ ಸಂಬಂಧಿಸಿದಂತೆ ಲಿಂಗ, ಸಂಪತ್ತು, ವಿದ್ಯಾರ್ಹತೆ ಇವುಗಳನ್ನು ಆಧರಿಸಿ, ಯಾವುದೇ ತಾರತಮ್ಯವಿಲ್ಲ. ಸ್ತ್ರೀ ಪುರುಷರಿಗೆ ಸಂವಿಧಾನದ ನೀಡಿರುವ ಸಮಾನ ಅವಕಾಶ. ದೇಶದ ಭವಿಷ್ಯ ಮತ್ತು ಭಾವೀ ಜನಾಂಗದ ಭವಿಷ್ಯವು ಕೂಡಾ ನಮ್ಮೆಲ್ಲರ ಪ್ರತಿಯೊಂದು ಮತದಲ್ಲಿಯೂ ಅಡಗಿದೆ. ಈ ಒಂದು ಮತಕ್ಕೆ ದೇಶದ ಇತಿಹಾಸವನ್ನೇ ಬದಲಿಸುವ ಶಕ್ತಿ ಇದೆ. 'ಸಮಾಜ ಮತ್ತು ದೇಶದ ಅಭ್ಯುದಯಕ್ಕೆ ಕಾರಣವಾದ ಏಕೈಕ ಕಾರ್ಯ ಚುನಾವಣೆ. ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಸಂವಿಧಾನ ತನ್ನ ಪ್ರಜೆಗಳಿಗೆ ನೀಡಿದ ಬಹು ದೊಡ್ಡ ಕೊಡುಗೆ ಮತದಾನ'. ದೇಶದ ಏಳಿಗೆಗೆ ನಮ್ಮ ಕೈಯಲ್ಲಿರುವ ಶಕ್ತಿಯುತ ಆಯುಧ. ಪ್ರಜಾಸತ್ತಾತ್ಮಕವಾದ ಸರ್ಕಾರ ರಚನೆಯಲ್ಲಿ ಪ್ರತಿಯೊಂದು ಮತವು ಮಹತ್ವದ ಪಾತ್ರವನ್ನು ವಹಿಸುತ್ತದೆ.

ಯಾವ ಕಾರಣಕ್ಕೂ ವಿವೇಚನಾರಹಿತರಾಗಿ ಮೂಲಭೂತ ವಾದಿಗಳಂತೆ ಧರ್ಮಾಂಧರಾಗಿ, ಮತಭ್ರಾಂತ ರೀತಿಗೆ ಪರಿವರ್ತನೆ ಮಾಡದೇ ಇರಬೇಕಾಗಿರುವುದು ಇಂದಿನ ಅಗತ್ಯ ಮತ್ತು ಅನಿವಾರ್ಯ, ಸಂವಿಧಾನ ನೀಡಿದ ಹಕ್ಕಿಗೆ ಚ್ಯುತಿ ಬಾರದಂತೆ ನಡೆದುಕೊಳ್ಳಬೇಕು. ದೇಶ ಮುಂದುವರಿಯಲು ಈ ಕರ್ತವ್ಯವನ್ನು ಪಾಲಿಸಬೇಕು. 'ಅತ್ಯಂತ ಕಳವಳಕಾರಿ ಅಪಾಯಕಾರಿ ವಿಚಾರವೆಂದರೆ ನಗರ ಪ್ರದೇಶದ ವಿದ್ಯಾವಂತ, ಸಮೃದ್ಧ, ಅರ್ಹ ಯುವಕರಲ್ಲಿ ದೇಶ ಪ್ರೇಮವಿದೆ. ಆದರೆ ಮತದಾನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿಲ್ಲ.' ಅವರ ನಿರುತ್ಸಾಹಕ್ಕೆ ಕಣದಲ್ಲಿರುವ ಅಸಮರ್ಥ ಅಭ್ಯರ್ಥಿಗಳ ಬಗ್ಗೆ ಇರುವ ಬೇಸರ ಮತ್ತು ಅತೃಪ್ತಿ ಮುಖ್ಯ ಕಾರಣವೆಂಬುದು ಒಂದು ಅಧಿಕೃತ ಹೇಳಿಕೆ ಮತ್ತು ಪ್ರಕಟಣೆ. ಆದರೆ ಪ್ರತಿಯೊಬ್ಬ ಪ್ರಜೆಯೂ ಮತಚಲಾವಣೆಯ ಬಗ್ಗೆ ನಿರ್ಧಾರ ಮಾಡುವಾಗ 'ಪ್ರಥಮ ಆದ್ಯತೆ ರಾಷ್ಟ್ರ ಪ್ರೇಮವಾಗಿರಬೇಕು. ದ್ವಿತೀಯ ಆದ್ಯತೆ ಪಕ್ಷನಿಷ್ಠೆ, ತದನಂತರ ಅಭ್ಯರ್ಥಿ ಮತ್ತು ಧನ ದೌಲತ್ತಿಗೆ ಪ್ರಾಶಸ್ತ್ಯವನ್ನು ಕೊಡದೆ ಅದು ಗೌಣವಾಗಿರಬೇಕು'. ಅಂತೆಯೇ ದೇಶವನ್ನು ಪ್ರೀತಿಸುವ ಯಾವ ಪ್ರಜೆಯೂ ಅನ್ಯಾಯವನ್ನು ಸಹಿಸದೆ ಪವಿತ್ರವಾದ ಮತದಾನದ ಕರ್ತವ್ಯದಿಂದ ದೂರ ಉಳಿಯಬಾರದು.

ಸಂವಿಧಾನವು ಭಾರತೀಯ ಪ್ರಜೆಗಳಿಗೆ ಹಕ್ಕನ್ನು ಕೊಟ್ಟಿರುವಂತೆ ಕರ್ತವ್ಯಗಳನ್ನು ವಿಧಿಸಿದೆ. ನಾವು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸಬೇಕು. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಹಮ್ಮಿಕೊಂಡ ಆದರ್ಶಗಳನ್ನು ಪಾಲಿಸಬೇಕು. ದೇಶದ ಸಾರ್ವಭೌಮತ್ವ ಮತ್ತು ಅಖಂಡತೆಯನ್ನು ಎತ್ತಿಹಿಡಿಯಬೇಕು ಮತ್ತು ರಕ್ಷಿಸಬೇಕು. ಅವಶ್ಯಕತೆ ಇದ್ದರೆ ರಾಷ್ಟ್ರರಕ್ಷಣೆ ಮತ್ತು ಸೇವೆಗೆ ಸಿದ್ಧರಿರಬೇಕು. ಭ್ರಾತೃತ್ವ ಭಾವನೆ ಮತ್ತು ಸ್ತ್ರೀಯರಲ್ಲಿ ಅಗೌರವದಿಂದ ನಡೆದುಕೊಳ್ಳಬಾರದು. ವಿಭಿನ್ನ ಸಂಸ್ಕೃತಿಯನ್ನು ರಕ್ಷಿಸಬೇಕು. ಪರಿಸರ ಮತ್ತು ವನ್ಯಜೀವಿ ರಕ್ಷಣೆ, ವೈಜ್ಞಾನಿಕ ದೃಷ್ಟಿ, ಮಾನವೀಯತೆ ಸುಧಾರಣೆಯಲ್ಲಿ ಆಸಕ್ತಿ ತೋರಬೇಕು. ಹಿಂಸಾ ಪ್ರವೃತ್ತಿಯಿಂದ ದೂರವಿರಬೇಕು. ವ್ಯಕ್ತಿಗತ ಮತ್ತು ಸಾಂಘಿಕ ಚಟುವಟಿಕೆಯಲ್ಲಿ ಭಾಗವಹಿಸಬೇಕು. ಆದರೆ ಇಂದು ಅನೇಕ ಸ್ತರಗಳಲ್ಲಿ ನಾವು ಕೇವಲ ಹಕ್ಕುಗಳಿಗಾಗಿ ಹೋರಾಡಿ ಕರ್ತವ್ಯಗಳನ್ನು ಮರೆತಿರುವುದು ದುರಂತ ಮತ್ತು ದುರದೃಷ್ಟ.

ಇವೆಲ್ಲವನ್ನು ಕ್ರೋಢೀಕರಿಸುವಾಗ ಸಂವಿಧಾನದ ಪ್ರಸ್ತಾವನೆ, ಉದ್ದೇಶ ಮತ್ತು ಅರ್ಥವೇನೆಂದರೆ ನಮ್ಮ ಸಂವಿಧಾನ ಜನರಿಂದ, ಜನರಿಗಾಗಿ ನೀಡಲ್ಪಟ್ಟಿದ್ದು ಎಂಬುದು ಸ್ಪಷ್ಟವಾಗುತ್ತದೆ. ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಜಾತ್ಯಾತೀತ, ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ಕಟ್ಟುವುದು ಸಂವಿಧಾನದ ಉದ್ದೇಶ. ಸಾರ್ವಭೌಮ ರಾಷ್ಟ್ರವೆಂದರೆ ಇದೊಂದು ಸ್ವತಂತ್ರ ರಾಷ್ಟ್ರವಾಗಿದ್ದು ಯಾವುದೇ ಅನ್ಯ ದೇಶಗಳ ನಿಯಂತ್ರಣಕ್ಕೆ ಒಳಪಟ್ಟಿಲ್ಲ. 'ಸಮಾಜವಾದಿ ಎಂಬ ಪದ ಸಮಾನತೆಯನ್ನು ಸೂಚಿಸುತ್ತದೆ. ಭಾರತದ ಪ್ರತಿಯೊಬ್ಬ ಸ್ತ್ರೀ, ಪುರುಷರಿಗೆ ಸಮಾನತೆ ಮತ್ತು ಗೌರವದಿಂದ ಜೀವಿಸುವ ಹಕ್ಕು ಇರುವುದು ಖಚಿತವಾಗುತ್ತದೆ. ಜಾತ್ಯಾತೀತ ಎಂಬ ಪದದ ಅರ್ಥ ಸರ್ಕಾರವು ಯಾವುದೇ ಜಾತಿ ಅಥವಾ

ಧರ್ಮವನ್ನು ರಾಷ್ಟ್ರದ ಧರ್ಮ ಅಥವಾ ಜಾತಿಯನ್ನಾಗಿ ಬಿಂಬಿಸಬಾರದು. ಗಣರಾಜ್ಯವೆಂದರೆ ಸರ್ಕಾರದ ಮುಖ್ಯಸ್ಥ, ಜನರಿಂದ ಆಯ್ಕೆಯಾದ ವ್ಯಕ್ತಿಯಾಗಿರಬೇಕೇ ಹೊರತು ವಂಶಪಾರಂಪಾರಿಕವಾಗಿ ಆ ಸ್ಥಾನವನ್ನು ಅಲಂಕರಿಸಬಾರದು.'

ನಮ್ಮ ಸಂವಿಧಾನ ಅಭೂತಪೂರ್ವವಾಗಿದೆ. ಪ್ರತಿಯೊಬ್ಬ ನಾಗರಿಕನೂ ಸಂವಿಧಾನದ ಚೌಕಟ್ಟಿನಲ್ಲಿ ಕರ್ತವ್ಯ ಮತ್ತು ಜವಾಬ್ದಾರಿಯನ್ನು ಪಾಲಿಸಿ ಸಂವಿಧಾನವನ್ನು ಗೌರವಿಸುವುದು ಆದ್ಯತೆಯಾಗಬೇಕು. ತನ್ಮೂಲಕ ಸ್ವಸ್ಥ ಸಮಾಜ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಭಾಗೀದಾರರಾಗಬೇಕಾಗಿದೆ. ಭಾರತದ ಭವಿಷ್ಯ ಯಾವ ದಿಕ್ಕಿಗೆ ಸಾಗಬೇಕೆಂಬುದನ್ನು ನಾವೇ ನಿರ್ಧರಿಸಬೇಕಾಗಿದೆ. ಪ್ರಜಾಪ್ರಭುತ್ವವನ್ನು ಪವಿತ್ರಗೊಳಿಸಬೇಕಾಗಿದೆ. ಕಾನೂನು ಮತ್ತು ನಿಯಮ ಉಲ್ಲಂಘನೆಗಳು ಪ್ರಜಾಪ್ರಭುತ್ವದ ಅತ್ಯಂತ ದೊಡ್ಡ ಶತ್ರುಗಳಾಗಿವೆ. ಹಕ್ಕುಗಳು ಮತ್ತು ಕರ್ತವ್ಯಗಳು ಸರಿಯಾಗಿ ಚಾಲನೆಯಾದರೆ ಮಾತ್ರ ಪ್ರಜಾಪ್ರಭುತ್ವ ಊರ್ಜಿತವಾಗುತ್ತದೆ. ಭಾರತ ತನ್ನದೇ ಆದ ಅತ್ಯಂತ ಶ್ರೇಷ್ಠ ಸಂವಿಧಾನವನ್ನು ರಚಿಸಿ ಕಾನೂನು ಬದ್ಧಗೊಳಿಸಿ ಪ್ರಜಾಸತಾತ್ಮಕ ಗಣರಾಜ್ಯವಾಯಿತು. ಆದರೆ ಭಾರತೀಯರಲ್ಲಿ ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವಲ್ಲಿ ಗಮನಾರ್ಹ ಸಾಧನೆ ಮಾಡುವಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ರಾಜಕಾರಣ ಧ್ರುವೀಕರಣವಾಗುವಂತೆ ಭಾಸವಾಗುತ್ತಿದೆ. ಪ್ರಜಾತಂತ್ರದ ನಾಲ್ಕನೇ ಆಧಾರಸ್ತಂಭ ಪತ್ರಿಕಾರಂಗ ಮತ್ತು ದೃಶ್ಯ ಮತ್ತು ಸಂವಹನ ಮಾಧ್ಯಮ ನಿಷ್ಪಕ್ಷಪಾತವಾದ ಪ್ರಜಾಪ್ರಭುತ್ವಕ್ಕೆ ಮೆರಗು ಬರುತ್ತದೆ. ಇನ್ನೊಂದು ಪ್ರಾಮುಖ್ಯ ವಿಚಾರ ನಮ್ಮ ದೇಶದಲ್ಲಿ 'ಧರ್ಮಕ್ಕೆ ರಾಜಕೀಯ ಬರಬಾರದು ರಾಜಕೀಯಕ್ಕೆ ಧರ್ಮ ಬರಬೇಕು.

**ಲೇಖಕರು:– ಚೇರ್ಕಾಡಿ ಸಚ್ಚಿದಾನಂದಶೆಟ್ಟಿ**

**ಆಧಾರ: ವಿಶ್ವವಾಣಿ, ದಿನಾಂಕ:24.11.2020**

## 10. Bequeathed to us 71 years ago today, the Constitution is India's bedrock of stability and growth

After Independence, India adopted its Constitution on November 26, 1949. Today is the 71st anniversary of this important historical event that laid the foundation of independent India. The juncture of India's Independence was an extremely challenging moment. A nation had just been formed after a painful separation of one part of the erstwhile unified territory.

The challenges came from multiple directions. On the one hand was a newly formed nation with myriad of problems like poverty, large scale illiteracy and the agonising suffering of a ling colonial rule. But on the other hand was the aspiration of the new Indian polity, the deep desire to take the newly formed nation to great heights.

Our great leaders who steered us through the struggle of Independence had foresight of what our polity should be. The Constitution was expected to shape a nation, nurture a society and guide future generations for times to come. The Drafting Committee of the Constitution held 141 meetings over a period of 2 years 11 months and 17 days, and gave us the basic draft comprising a Preamble, 395 Articles and 8 scheduled. This was indeed the foetus from this the polity of our great nation was born.

Since its adoption, the 'Constitution of the country has stood firmly to maintain the nation, and at the same time has shown flexibility to ensure the much required socio-economic transformation. Several amendments have also been made in the Constitution according to the times. At present, our Constitution has more than 400 Articles and 12 Schedules.

Today, Indian democracy not only stands strong in the face of many challenges time throws in its way, but has also carved out a unique identity for itself at the global level-credit for which goes to the strong structure and institutional set up provided by our Constitution. The Constitution of India provided for socio-economic and political democracy. It underlines the commitment of the people of India to achieve various national goals with peaceful and democratic approach.

As a matter of fact, our Constitution is not just a legal document, but it is an important instrument that protects the freedom of all sections of society and provided every citizen the right of equality without discriminating on the basis of caste, creed, sex, region, sector language and ensures that nation remains on the path of progress and prosperity.

Even with a large number of voters and an ongoing continual election process, our democracy has never fallen prey to instability; instead the successful conduct of elections proves that our democracy has withstood the test of time. During this democratic journey spread over seven decades. 17 Lok Sabha and more than 300 state assembly elections have

taken place in the country. Indian democracy has demonstrated to the world, how political power can be transferred in a peaceful manner.

The separation of powers among the state components has been well defined in Indian Constitution. The domains of the three organs of the state namely legislature, executive and judiciary have their own distinct and independent identity, and they are sovereign in their respective sphere.

The Constitution of India lays special emphasis on the interests of citizens and the provisions of fundamental rights, as enshrined from Article 12 of Article 35 in Part III of the Constitution are a major evidence of this. These provisions ensure that all the citizens of India are treated equally thus work as a unifying force. Today our Constitution guarantees six fundamental rights, right to freedom of religion and right to constitutional remedies.

Our Constitution along with the fundamental rights also impose a number of fundamental duties on its citizens. Citizens should also adhere to certain basic norms of democratic conduct and behaviour, as rights and duties go hand in hand. We have our rights and they will always remain with us but if we as citizens are able to adhere to our duties and act accordingly, this certainly will century be the century of India.

**Author: Om Birla,**
**Hon'ble Lok Sabha Speaker,**
**Courtsey:- Times of India, Dated:26.11.2020**

## 11. ಸಂವಿಧಾನವೇ ನಮ್ಮ ಪ್ರಗತಿಯ ಬುನಾದಿ

ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ಭಾರತದ ಆತ್ಮ ನಾವು ಅಂಗೀಕರಿಸಿದ 'ಸಂವಿಧಾನ'ವಾಗಿದೆ. ಈ ಹಿನ್ನೆಲೆಯಲ್ಲೇ ನವೆಂಬರ್ 26ರಂದು ಸಂವಿಧಾನ ದಿನ ಎಂದು ಆಚರಿಸಲಾಗುತ್ತದೆ. ನಮ್ಮನ್ನೆಲ್ಲ ಪೊರೆಯುತ್ತಿರುವ ನಮ್ಮ ಸಂವಿಧಾನದ ರಚನೆ, ಅದರ ಮಹತ್ವ ಮತ್ತು ನಾಗರಿಕರಾಗಿ ನಾವು ಮಾಡಬೇಕಾದ ಕರ್ತವ್ಯಗಳ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ.

1949 ನವೆಂಬರ್ 26ರಂದು ಭಾರತವು ತನ್ನ ಸಂವಿಧಾನವನ್ನು ಅಂಗೀಕರಿಸಿತು. ಅದೊಂದು ಐತಿಹಾಸಿಕ ದಿನ. ಸ್ವತಂತ್ರ ಭಾರತಕ್ಕೆ ಭದ್ರ ಬುನಾದಿ ಹಾಕಿದ ಈ ಮಹತ್ವದ ಐತಿಹಾಸಿಕ ಘಟನೆಯ 71ನೇ ವಾರ್ಷಿಕೋತ್ಸವ ಇಂದು. ಡಾ:ರಾಜೇಂದ್ರ ಪ್ರಸಾದ್, ಪಂಡಿತ್ ಜವಾಹರ್ ಲಾಲ ನೆಹರು, ಡಾ:ಭೀಮರಾವ್ ಅಂಬೇಡ್ಕರ್, ಸರ್ದಾರ್ ವಲ್ಲಭಭಾಯಿ ಪಟೇಲ್, ಸುಚೇತಾ ಕೃಪಲಾನಿ, ಸರೋಜಿನಿ ನಾಯ್ಡು, ಬಿ.ಎನ್.ರಾವ್, ಪಂಡಿತ ಗೋವಿಂದ ವಲ್ಲಭ ಪಂತ್, ಶರತ್ಚಂದ್ರ ಬೋಸ್, ರಾಜಗೋಪಾಲಾಚಾರಿ, ಎನ್.ಗೋಪಾಲಸ್ವಾಮಿ ಐಯ್ಯಂಗಾರ್, ಡಾ:ಶ್ಯಾಮಾಪ್ರಸಾದ್ ಮುಖರ್ಜಿ, ಗೋಪಿನಾಥ್ ಬರ್ದೊಲೊಯ್, ಜೆ.ಬಿ.ಕೃಪಲಾನಿಯಂಥ ಗಣ್ಯರು ಸಂವಿಧಾನ ರಚನೆಗೆ ಕೊಡುಗೆ ನೀಡಿದರು. ವಿಶ್ವದ ಸಂವಿಧಾನಗಳನ್ನು ಅಧ್ಯಯನ ಮಾಡಿದ ನಂತರ ಭಾರತದ ಸಂವಿಧಾನದ ಬಗ್ಗೆ ವ್ಯಾಪಕ ಚರ್ಚೆಗಳು ನಡೆದವು. ಸಂವಿಧಾನವನ್ನು ಕರಡನ್ನು ಸಿದ್ದಪಡಿಸುವಾಗ ವಿಸ್ತೃತವಾಗಿ ಚರ್ಚಿಸಿರುವುದು ಸಂವಿಧಾನದ ಕರಡು ಸಮಿತಿಯಿಂದಲೇ ತಿಳಿಯುತ್ತದೆ. ಸಂವಿಧಾನವನ್ನು ರೂಪಿಸಿದವರು ಅದರ ಕರಡು ಸಮಿತಿಯು ಒಟ್ಟು 141 ಸಭೆ ನಡೆಸಿತು. 2 ವರ್ಷ, 11 ತಿಂಗಳು, 17 ದಿನಗಳ ನಂತರ ಒಂದು ಪೀಠಿಕೆ, 395 ವಿಧಿಗಳು ಮತ್ತು 8 ಅನುಚ್ಛೇದಗಳೊಂದಿಗೆ ಸ್ವತಂತ್ರ ಭಾರತದ ಸಂವಿಧಾನದ ಕರಡು ಸಿದ್ಧವಾಯಿತು.

ದೇಶದ ಮೂಲ ಸಂವಿಧಾನವು ಬಹಳ ದೂರ ಸಾಗಿ ಬಂದಿದೆ ಮತ್ತು ಈ ಅವಧಿಯಲ್ಲಿ ಕಾಲಕಾಲಕ್ಕೆ ಸಂವಿಧಾನಕ್ಕೆ ಹಲವಾರು ತಿದ್ದುಪಡಿಗಳನ್ನು ಮಾಡಲಾಗಿದೆ. ಪ್ರಸ್ತುತ ನಮ್ಮ ಸಂವಿಧಾನವು ನಾನೂರಕ್ಕೂ ಹೆಚ್ಚು ವಿಧಿಗಳು ಮತ್ತು ಹನ್ನೆರಡು ಅನುಚ್ಛೇದಗಳನ್ನು ಹೊಂದಿದ್ದು ದೇಶದ ನಾಗರಿಕರ ಆಕಾಂಕ್ಷೆಗಳು ಹಾಗೂ ಸಮುದಾಯದ ಅಗತ್ಯಗಳಿಗೆ ಅನುಗುಣವಾಗಿ ಆಡಳಿತದ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ. ಭಾರತದ ಪ್ರಜಾಪ್ರಭುತ್ವವು ಅನೇಕ ಸವಾಲುಗಳನ್ನು ಎದುರಿಸುತ್ತಲೇ ಇಂದಿಗೂ ದೃಢವಾಗಿ ನಿಂತಿರುವುದು ಮಾತ್ರವಲ್ಲದೆ ಜಾಗತಿಕವಾಗಿ ಒಂದು ಅನನ್ಯವಾದ ಗುರುತು ಮೂಡಿಸಿದೆ. ಇದರ ಸಂಪೂರ್ಣ ಶ್ರೇಯ ನಮ್ಮ ಸಂವಿಧಾನದ ಒದಗಿಸಿದ ಬಲವಾದ ರಚನೆ ಮತ್ತು ಸಾಂಸ್ಥಿಕತೆಗೆ ಸಲ್ಲುತ್ತದೆ. ಭಾರತದ ಸಂವಿಧಾನವು ಸಾಮಾಜಿಕ–ಆರ್ಥಿಕ ಮತ್ತು ರಾಜಕೀಯ ಪ್ರಜಾಪ್ರಭುತ್ವವನ್ನು ಒದಗಿಸುತ್ತದೆ. ಶಾಂತಿಯುತವಾಗಿ ಮತ್ತು ಪ್ರಜಾಪ್ರಭುಸತ್ತಾತ್ಮಕವಾಗಿ ರಾಷ್ಟ್ರೀಯ ಗುರಿಗಳನ್ನು ಸಾಧಿಸುವ ಭಾರತದ ಜನರ ಬದ್ಧತೆಯನ್ನು ಇದು ಒತ್ತಿ ಹೇಳುತ್ತದೆ.

**ಇದು ಕೇವಲ ಕಾನೂನು ದಾಖಲೆಯಲ್ಲ:** ನಮ್ಮ ಸಂವಿಧಾನವು ಕೇವಲ ಕಾನೂನಿನ ದಾಖಲೆ ಮಾತ್ರವಲ್ಲ. ಇದು ಸಮಾಜದ ಎಲ್ಲಾ ವರ್ಗಗಳ ಸ್ವಾತಂತ್ರ್ಯವನ್ನು ರಕ್ಷಿಸುವ ಮತ್ತು ಜಾತಿ, ಮತ, ಲಿಂಗ, ಪ್ರದೇಶ, ಪಂಥ ಅಥವಾ ಭಾಷೆಯ ಆಧಾರದ ಮೇಲೆ ತಾರತಮ್ಯ ಮಾಡದೆ ಪ್ರತಿಯೊಬ್ಬ ನಾಗರಿಕರಿಗೂ ಸಮಾನ ಹಕ್ಕನ್ನು ಒದಗಿಸುವ ಪ್ರಮುಖ ಸಾಧನವಾಗಿದೆ. ರಾಷ್ಟ್ರವು ಪ್ರಗತಿ ಮತ್ತು ಸಮೃದ್ಧಿಯ ಹಾದಿಯಲ್ಲಿ ಸಾಗಲು ದಾರಿದೀಪವಾಗಿದೆ. ದೂರದೃಷ್ಟಿ ಹೊಂದಿದ್ದ ನಮ್ಮ ಸಂವಿಧಾನದ ಶಿಲ್ಪಿಗಳು ಭಾರತದ ರಾಷ್ಟ್ರೀಯತೆಯ ಮೇಲೆ ಸಂಪೂರ್ಣ ವಿಶ್ವಾಸ ಹೊಂದಿದ್ದರು ಎಂಬುನ್ನು ಇದು ತೋರಿಸುತ್ತದೆ. ಕಳೆದ ಏಳು ದಶಕಗಳಿಂದ ಜಾರಿಯಲ್ಲಿರುವ ಈ ಸಂವಿಧಾನದ ಮೂಲಕ ನಾವು ಅನೇಕ ಮೈಲಿಗಲ್ಲುಗಳನ್ನು ಸಾಧಿಸಿದ್ದೇವೆ. ವಿಶ್ವದ ಅತಿ ದೊಡ್ಡ ಮತ್ತು ಯಶಸ್ವಿ ಪ್ರಜಾಪ್ರಭುತ್ವ ಎಂಬ ಗೌರವ ನಮಗಿದೆ. ಬೃಹತ್ ಸಂಖ್ಯೆಯ ಮತದಾರರನ್ನು ಹೊಂದಿದ್ದರೂ ನಮ್ಮ ನಿರಂತರ ಚುನಾವಣಾ ಪ್ರಕ್ರಿಯೆ, ಪ್ರಜಾಪ್ರಭುತ್ವವು ಎಂದಿಗೂ ಅಸ್ಥಿರಗೊಂಡಿಲ್ಲ ಬದಲಾಗಿ ಚುನಾವಣೆಗಳ ಯಶಸ್ವಿ ಪ್ರಕ್ರಿಯೆಗಳು ನಮ್ಮ

ಪ್ರಜಾಪ್ರಭುತ್ವವು ಕಾಲದ ಪರೀಕ್ಷೆಯಲ್ಲಿ ಗೆದ್ದಿದೆ ಎಂಬುದನ್ನು ಸಾಬೀತು ಪಡಿಸುತ್ತವೆ. ಪ್ರಜಾಪ್ರಭುತ್ವದ ಏಳು ದಶಕಗಳ ಈ ಪ್ರಯಾಣದಲ್ಲಿ ದೇಶದಲ್ಲಿ 17 ಲೋಕಸಭೆ ಮತ್ತು 300ಕ್ಕೂ ಹೆಚ್ಚು ರಾಜ್ಯ ವಿಧಾನಸಭಾ ಚುನಾವಣೆಗಳು ನಡೆದಿವೆ. ಚುನಾವಣೆಗಳಲ್ಲಿ ಹೆಚ್ಚುತ್ತಿರುವ ಮತದಾರರ ಭಾಗವಹಿಸುವಿಕೆಯು ನಮ್ಮ ಪ್ರಜಾಪ್ರಭುತ್ವದ ಯಶಸ್ವಿಗೆ ಸಾಕ್ಷಿಯಾಗಿದೆ. ರಾಜಕೀಯ ಅಧಿಕಾರವನ್ನು ಹೇಗೆ ಶಾಂತಿಯುತ ಮತ್ತು ಪ್ರಜಾಸತ್ತಾತ್ಮಕ ರೀತಿಯಲ್ಲಿ ವರ್ಗಾಯಿಸಬಹುದು ಎಂಬುದನ್ನು ಭಾರತದ ಪ್ರಜಾಪ್ರಭುತ್ವವು ಜಗತ್ತಿಗೆ ತೋರಿಸಿ ಕೊಟ್ಟಿದೆ.

**ಪ್ರತ್ಯೇಕ ಅಧಿಕಾರಿಗಳ ವ್ಯಾಖ್ಯಾನ:** ಭಾರತ ಸಂವಿಧಾನದಲ್ಲಿ ರಾಜ್ಯಗಳಿಗೆ ಪ್ರತ್ಯೇಕ ಅಧಿಕಾರಗಳನ್ನು ಸೂಕ್ತವಾಗಿ ವ್ಯಾಖ್ಯಾನಿಸಲಾಗಿದೆ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಎಂಬ ಮೂರು ಅಂಗಗಳು ತಮ್ಮದೇ ಆದ ವಿಶಿಷ್ಟ ಮತ್ತು ಸ್ವತಂತ್ರ ಗುರುತನ್ನು ಹೊಂದಿವೆ ಮತ್ತು ಅವು ಆಯಾ ಕ್ಷೇತ್ರದಲ್ಲಿ ಸಾರ್ವಭೌಮವಾಗಿವೆ. ಇದರಿಂದಾಗಿ, ಅವು ಪರಸ್ಪರ ಅಧಿಕಾರ ವ್ಯಾಪ್ತಿಯನ್ನು ಅತಿಕ್ರಮಿಸುವುದಿಲ್ಲ. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂಸತ್ತು ಸರ್ವೋಚ್ಚವಾಗಿದೆ. ಆದರೆ, ಅದು ತನ್ನದೇ ಆದ ಮಿತಿಗಳನ್ನು ಹೊಂದಿದೆ. ಸಂಸತ್ತು ಸಂವಿಧಾನಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತದೆ. ಸಂಸತ್ತಿಗೆ ಸಂವಿಧಾನಕ್ಕೆ ತಿದ್ದುಪಡಿ ಮಾಡುವ ಅಧಿಕಾರವಿದೆ. ಆದರೆ, ಅದರ ಮೂಲರಚನೆಯಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಲು ಸಾಧ್ಯವಿಲ್ಲ. ಸಂವಿಧಾನವು ಜಾರಿಗೆ ಬಂದಾಗಿನಿಂದ ನೂರಕ್ಕೂ ಹೆಚ್ಚು ತಿದ್ದುಪಡಿಗಳು ಆಗಿವೆ. ಹಲವು ತಿದ್ದುಪಡಿಗಳ ನಂತರವೂ ಅದರ ಮೂಲ ಆಶಯಕ್ಕೆ ಧಕ್ಕೆಯಾಗಿಲ್ಲ.

**ನಾಗರಿಕ ಹಿತಾಸಕ್ತಿಗೆ ಒತ್ತು:** ಭಾರತದ ಸಂವಿಧಾನವು ನಾಗರಿಕರ ಹಿತಾಸಕ್ತಿಗಳಿಗೆ ವಿಶೇಷ ಒತ್ತು ನೀಡುತ್ತದೆ. ಸಂವಿಧಾನದ ಭಾಗ–III ರಲ್ಲಿನ 12 ರಿಂದ 35ನೇ ವಿಧಿಯವರೆಗೆ ಪ್ರತಿಪಾದಿಸಲಾಗಿರುವ ಮೂಲಭೂತ ಹಕ್ಕುಗಳ ನಿಬಂಧನೆಗಳು ಇದಕ್ಕೆ ಸಾಕ್ಷಿಯಾಗಿವೆ. ಈ ನಿಬಂಧನೆಗಳು ಭಾರತದ ಎಲ್ಲಾ ನಾಗರಿಕರಿಗೆ ಸಮಾನಹಕ್ಕು ನೀಡುತ್ತವೆ. ಹೀಗಾಗಿ ಒಂದು ಒಗ್ಗಟ್ಟಿನ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತದೆ. ಮೂಲ ಸಂವಿಧಾನವು ನಾಗರಿಕರಿಗೆ ಏಳು ಮೂಲಭೂತ ಹಕ್ಕುಗಳನ್ನು ಒದಗಿಸಿದೆ. ಆದರೆ ಆಸ್ತಿಯ ಹಕ್ಕನ್ನು ಸಂವಿಧಾನದ 44ನೇ ತಿದ್ದುಪಡಿ ಕಾಯ್ದೆಯ ಮೂಲಕ ಬೇರ್ಪಡಿಸಿ ಸಂವಿಧಾನದ ಕಾನೂನು ಹಕ್ಕುಗಳ ಅಡಿಯಲ್ಲಿ ಇರಿಸಲಾಯಿತು. ಹೀಗಾಗಿ ಪ್ರಸ್ತುತ ನಮ್ಮ ಸಂವಿಧಾನವು ನಾಗರಿಕರಿಗೆ ಆರು ಮೂಲಭೂತ ಹಕ್ಕುಗಳನ್ನು ನೀಡುತ್ತದೆ. ಅವುಗಳೆಂದರೆ ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ಶೋಷಣೆಯ ವಿರುದ್ಧದ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು, ಸಂಸ್ಕೃತಿ ಮತ್ತು ಶೈಕ್ಷಣಿಕ ಹಕ್ಕುಗಳು ಮತ್ತು ಸಾಂವಿಧಾನಿಕ ಪರಿಹಾರಗಳ ಹಕ್ಕು. ನಾಗರಿಕರು ಸಾಂಸ್ಕೃತಿಕ ವೈವಿಧ್ಯತೆಯನ್ನು ಹೊಂದಿದ್ದರೂ ಈ ಹಕ್ಕುಗಳ ಮೂಲಕ ಅವರನ್ನು ಒಂದೇ ವೇದಿಕೆಯಲ್ಲಿ ತರಲು ಸಂವಿಧಾನವು ಪ್ರಯತ್ನಿಸಿದೆ. ವಾಸ್ತವವಾಗಿ ನಮ್ಮ ನಾಗರಿಕರಿಗೆ ಒದಗಿಸಲಾದ ಹಕ್ಕುಗಳು ನಮ್ಮ ಸಂವಿಧಾನದ ಆಶಯಗಳೇ ಆಗಿವೆ.

**ಮೂಲಭೂತ ಕರ್ತವ್ಯಗಳು:** ನಮ್ಮ ಸಂವಿಧಾನವು ನಾಗರಿಕರಿಗೆ ಮೂಲಭೂತ ಹಕ್ಕುಗಳನ್ನು ನೀಡಿರುವಂತೆಯೇ, ಅವರಿಗೆ ಹಲವಾರು ಮೂಲಭೂತ ಹಕ್ಕುಗಳನ್ನು ವಿಧಿಸಿದೆ. ಮೂಲಭೂತ ಹಕ್ಕುಗಳನ್ನು ಮೂಲ ಸಂವಿಧಾನದಲ್ಲಿಯೇ ಒದಗಿಸಲಾಗಿದೆ. ಆದಾಗ್ಯೂ ಕಾಲಾನಂತರ ಭಾರತದ ನಾಗರಿಕರಿಗೆ ನೀಡಲಾಗಿರುವ ಕೆಲವು ಮೂಲಭೂತ ಹಕ್ಕುಗಳ ಜೊತೆಗೆ ಮೂಲಭೂತ ಕರ್ತವ್ಯಗಳನ್ನು ಸಹ ಹೊಂದಿರಬೇಕು ಎಂದು ಭಾವಿಸಲಾಯಿತು. ಇದನ್ನು ಜಾರಿಗೆ ತರಲು ಸಂವಿಧಾನದ 42ನೇ ತಿದ್ದುಪಡಿಯ ಮೂಲಕ ಸಂವಿಧಾನದಲ್ಲಿ ಮೂಲಭೂತ ಕರ್ತವ್ಯಗಳನ್ನು ಸೇರಿಸಲಾಗಿದೆ. ಇಂದು ನಮ್ಮ ಸಂವಿಧಾನದ 51 (ಎ) ವಿಧಿಯ ಅಡಿಯಲ್ಲಿ ಒಟ್ಟು 11 ಮೂಲಭೂತ ಕರ್ತವ್ಯಗಳನ್ನು ಉಲ್ಲೇಖಿಸಲಾಗಿದೆ. ಇದರಲ್ಲಿ 42ನೇ ತಿದ್ದುಪಡಿಯ ಮೂಲಕ 2002ರಲ್ಲಿ ಸೇರಿಸಲಾಗಿದೆ. ನಮ್ಮ ಸಂವಿಧಾನದಲ್ಲಿ ಪ್ರತಿಪಾದಿಸಿರುವ ಮೂಲಭೂತ ಕರ್ತವ್ಯಗಳು ದೇಶದ ನಾಗರಿಕರಿಗೆ ಸಂಪೂರ್ಣ ಅಧಿಕಾರ ಸಿಗದಂತೆ ನೋಡಿಕೊಳ್ಳಲು ಉದ್ದೇಶಿಸಿದೆ.

ಸಂವಿಧಾನವು ನೀಡಿರುವ ಮೂಲಭೂತ ಹಕ್ಕುಗಳ ಜೊತೆಗೆ, ಅವರು ಪ್ರಜಾಸತ್ತಾತ್ಮಕ ನಡವಳಿಕೆಯ ಕೆಲವು ಮೂಲಭೂತ ನಿಯಮಗಳನ್ನು ಹಕ್ಕುಗಳಂತೆ ಪಾಲಿಸಬೇಕು. ಹಕ್ಕುಗಳು ಮತ್ತು ಕರ್ತವ್ಯಗಳು ಜೊತೆ ಜೊತೆಯಾಗಿರುತ್ತವೆ.

ಈ ದೃಷ್ಟಿಕೋನದಲ್ಲಿ ನೋಡಿದಾಗ ಇಂದು ನಮ್ಮ ದೇಶ ಎದುರಿಸುತ್ತಿರುವ ಸವಾಲುಗಳು ಮತ್ತು ನಾವು ನಿಗದಿಪಡಿಸಿರುವ ಉನ್ನತ ಗುರಿಗಳನ್ನು ಸಾಧಿಸಲು ನಮ್ಮ ನಾಗರಿಕರಲ್ಲಿ ರಾಷ್ಟ್ರಕ್ಕಾಗಿ ಸಮರ್ಪಣೆ ಮತ್ತು ಕರ್ತವ್ಯಗಳ ಪಾಲನೆ ಮುಖ್ಯವಾಗಿದೆ. ನಾವು ಇಪ್ಪತ್ತೊಂದನೇ ಶತಮಾನವನ್ನು ಭಾರತದ ಶತಮಾನವನ್ನಾಗಿ ಮಾಡಲು, ಭಾರತದ ಪ್ರತಿಯೊಬ್ಬ ಪ್ರಜೆಯೂ ದೇಶವನ್ನು ಮುಂದೆ ಕೊಂಡೊಯ್ಯಲು ಹೆಚ್ಚಿನ ಕರ್ತವ್ಯ ಪ್ರಜ್ಞೆಯೊಂದಿಗೆ ಕೊಡುಗೆ ನೀಡಬೇಕು. ಅದು ನವಭಾರತದ ಪರಿಕಲ್ಪನೆಯಾಗಿರಲಿ ಅಥವಾ ಆತ್ಮನಿರ್ಭರ ಭಾರತದ ಗುರಿಯಾಗಿರಲಿ. ದೇಶದ ನಾಗರಿಕರು ತಮ್ಮ ಸಾಂವಿಧಾನಿಕ ಕರ್ತವ್ಯಗಳ ಬಗ್ಗೆ ಸಂಪೂರ್ಣ ಸಮರ್ಪಣೆ ಮತ್ತು ಪ್ರಜ್ಞೆ ಹೊಂದಿದಾಗ ಈ ಎಲ್ಲಾ ಗುರಿಗಳನ್ನು ಸಾಧಿಸಬಹುದು. ದೇಶದ ಪ್ರತಿಯೊಬ್ಬ ನಾಗರಿಕನೂ ವಿಶೇಷವಾಗಿ ನಮ್ಮ ಯುವಕರು ಸಂವಿಧಾನದಲ್ಲಿ ಪ್ರತಿಪಾದಿಸಿರುವ ತಮ್ಮ ಮೂಲಭೂತ ಕರ್ತವ್ಯಗಳ ಬಗ್ಗೆ ಜಾಗೃತರಾಗಿರುತ್ತಾರೆ ಮತ್ತು ಅವರ ಕೆಲಸಗಳಲ್ಲಿ ಇದು ಪ್ರತಿಫಲಿಸುತ್ತದೆ ಎಂದು ನಾನು ಆಶಿಸುತ್ತೇನೆ.

ಇಂದಿಗೆ, ನಮ್ಮ ಸಂವಿಧಾನವನ್ನು ಅಂಗೀಕರಿಸಿ 71 ವರ್ಷಗಳು ಕಳೆದಿವೆ. ಈ ಸಂದರ್ಭದಲ್ಲಿ ನಮ್ಮ ಸಂವಿಧಾನವನ್ನು ರೂಪಿಸಿದ ದಾರ್ಶನಿಕರಿಗೆ ನಮನ ಸಲ್ಲಿಸಬೇಕು. ಸಾಂವಿಧಾನಿಕ ತತ್ವಗಳಿಗೆ ಬದ್ಧರಾಗಲು ಮತ್ತು ಶಾಂತಿ, ಸಾಮರಸ್ಯ ಮತ್ತು ಭ್ರಾತೃತ್ವದ ಆಧಾರದಲ್ಲಿ 'ಏಕ್ ಭಾರತ್' ನಿರ್ಮಿಸುವ ದಿಕ್ಕಿನಲ್ಲಿ ರಾಷ್ಟ್ರವನ್ನು ಕೊಂಡೊಯ್ಯಲು ನಾವು ಪಣತೊಡಬೇಕು. ವಾಸ್ತವವಾಗಿ ಇಂದು, ಭಾರತದ ಪ್ರಜೆಯಾಗಿ ನಮ್ಮ ಸಂವಿಧಾನವು ನೀಡಿರುವ ಹಕ್ಕುಗಳಿಗಿಂತ ಕರ್ತವ್ಯಗಳ ಪಾಲನೆಯ ಬಗ್ಗೆ ನಾವು ಹೆಚ್ಚು ಗಮನಹರಿಸಬೇಕಾಗಿದೆ. ನಮಗಿರುವ ಹಕ್ಕುಗಳು ಯಾವಾಗಲೂ ನಮ್ಮೊಂದಿಗೆ ಇರುತ್ತವೆ. ಆದರೆ ನಾಗರಿಕರಾದ ನಾವು ನಮ್ಮ ಕರ್ತವ್ಯಗಳನ್ನು ಪಾಲಿಸಬೇಕು. ಆಗ ಈ ಶತಮಾನವು ಖಂಡಿತವಾಗಿಯೂ ಭಾರತದ ಶತಮಾನವಾಗಿರುತ್ತದೆ.

**ನಮ್ಮ ಸಂವಿಧಾನದ ಏಕ ಭಿನ್ನ:** ಭಾರತದ ಸಂವಿಧಾನವು ಎಲ್ಲರಿಗೂ ಸಮಾನತೆಯನ್ನು ನೀಡುತ್ತದೆ ಮತ್ತು ಕಾನೂನಿನ ಸುರಕ್ಷತೆಯನ್ನು ಒದಗಿಸುತ್ತದೆ. ಇದು ದೀನದಲಿತರು ಅಥವಾ ತುಳಿತಕ್ಕೊಳಗಾದವರು, ಹಿಂದುಳಿದವರು ಅಥವಾ ವಂಚಿತರು ಹೀಗೆ ಪ್ರತಿ ನಾಗರಿಕನಿಗೂ ಮೂಲಭೂತ ಹಕ್ಕುಗಳನ್ನು ಖಾತರಿಪಡಿಸುತ್ತದೆ. ಸಂವಿಧಾನವು ಅವರ ಮೂಲಭೂತ ಹಕ್ಕುಗಳನ್ನು ರಕ್ಷಿಸುತ್ತದೆ ಮತ್ತು ಅವರ ಹಿತಾಸಕ್ತಿಗಳನ್ನು ಕಾಪಾಡುತ್ತದೆ.

"ಸ್ವಾತಂತ್ರ್ಯದ ನಂತರ ಕೋಟ್ಯಂತರ ಜನರು ಹೊಸ ಸಮಯದಲ್ಲಿದ್ದ ಪ್ರತಿಕೂಲ ಪ್ರಗತಿಯ ಕನಸು ಕಂಡಾಗ ಮತ್ತು ಆ ಸಮಯದಲ್ಲಿದ್ದ ಪ್ರತಿಕೂಲ ಪರಿಸ್ಥಿತಿಗಳ ಹೊರತಾಗಿಯೂ ಅವರ ಮನೋಬಲ ಹೆಚ್ಚಾಗಿದ್ದಾಗ, ಎಲ್ಲರಿಗೂ ಸ್ವೀಕಾರಾರ್ಹವಾದ ಸಂವಿಧಾನವನ್ನು ನೀಡುವುದು ಸುಲಭದ ಕೆಲಸವಾಗಿರಲಿಲ್ಲ." ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

**ವಿಶ್ವದ ಅತಿ ದೊಡ್ಡ ಸಂವಿಧಾನ:** ಭಾರತದ ಸಂವಿಧಾನವು ವಿಶ್ವದ ಯಾವುದೇ ಸಾರ್ವಭೌಮ ದೇಶದ ಸಂವಿಧಾನಕ್ಕಿಂತಲೂ ದೊಡ್ಡದಾಗಿದೆ. ಪ್ರಸ್ತುತ ಸಂವಿಧಾನವು ಒಂದು ಪೀಠಿಕೆ. 395 ವಿಧಿಗಳೊಂದಿಗೆ 22 ಭಾಗಗಳು, 12 ಷೆಡ್ಯೂಲ್‌ಗಳು, ಅನುಬಂಧಗಳು ಮತ್ತು 104 ತಿದ್ದುಪಡಿಗಳನ್ನು ಹೊಂದಿದೆ.

**ಕೈಬರಹದಲ್ಲಿದೆ ಮೊದಲ ಪ್ರತಿ:** ಭಾರತದ ಸಂವಿಧಾನದ ಮೊದಲ ಪ್ರತಿ ಕೈ ಬರಹದಲ್ಲಿದೆ. ಕ್ಯಾಲಿಗ್ರಾಫರ್ ಪ್ರೇಮ್ ಬಿಹಾರಿ ನಾರಾಯಣ್ ರೈಜಾದಾ ಇಂಗ್ಲಿಷ್ ಅವೃತ್ತಿಯನ್ನು ಇಟಾಲಿಕ್ ಶೈಲಿಯಲ್ಲಿ ಸಿದ್ದಪಡಿಸಿದರೆ, ಪಶ್ಚಿಮ ಬಂಗಾಳದ ಶಾಂತಿನಿಕೇತನದ ಕಲಾ ಭವನದ ನಂದಲಾಲ್ ಬೋಸ್ ಮತ್ತು

ಅವರ ತಂಡ ಸಚಿತ್ರ ವಿವರಣೆ ಕೊಟ್ಟಿದೆ. ಸಂವಿಧಾನದ ಮೂಲ ಹಿಂದಿ ಮತ್ತು ಇಂಗ್ಲೀಷ್ ಪ್ರತಿಗಳನ್ನು ಹೀಲಿಯಂ ತುಂಬಿದ ಪೆಟ್ಟಿಗೆಗಳಲ್ಲಿ ಭಾರತದ ಸಂಸತ್ತಿನ ಗ್ರಂಥಾಲಯದಲ್ಲಿ ಇರಿಸಲಾಗಿದೆ. ಕೈ ಬರಹದ ದಾಖಲೆಯಿಂದ, ಡೆಹ್ರಾಡೂನ್‌ನ ಹತಿಬರ್ಕಲಾದಲ್ಲಿದ್ದ ಸರ್ವೇ ಆಫ್ ಇಂಡಿಯಾದ ಉತ್ತರ ಮುದ್ರಣ ಕಚೇರಿಯಲ್ಲಿ ಲಿಥೊಗ್ರಫಿ ಮುದ್ರಣವನ್ನು ಬಳಸಿ 1000 ಪ್ರತಿಗಳನ್ನು ಮುದ್ರಿಸಲಾಯಿತು. ಮೊದಲ ಮುದ್ರಿತ ಪ್ರತಿಯು ಗಟ್ಟಿರಟ್ಟಿನದಾಗಿದೆ.

**ಲೇಖಕರು:–ಓಂ ಬಿರ್ಲಾ,**
**ಲೋಕಸಭೆಯ ಸಭಾಧ್ಯಕ್ಷರು**
**ಆಧಾರ:ವಿಜಯ ಕರ್ನಾಟಕ, ದಿನಾಂಕ: 26.11.2020**

## 12. 'ಸಂವಿಧಾನ' ಇದು ಕರ್ತವ್ಯಗಳನ್ನು ಪಾಲಿಸುವ ಸಮಯ

ಭಾರತವು ಹಲವು ಧರ್ಮ, ಭಾಷೆ, ಸಂಸ್ಕೃತಿಗಳ ಬೀಡು. ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದ ಶ್ರೇಷ್ಠ ನಾಡು. ಸುಮಾರು 130 ಕೋಟಿ ಜನಸಂಖ್ಯೆಯನ್ನು ಹೊಂದಿರುವ ಬೃಹತ್ ರಾಷ್ಟ್ರದಲ್ಲಿ ಶಾಂತಿ ಸುವ್ಯವಸ್ಥೆ ನೆಲೆಸಬೇಕಾದರೆ ಸುಭದ್ರ ಅಡಿಪಾಯ ಇರಲೇಬೇಕು. ಅಂತಹ ಸುಭದ್ರ ಅಡಿಪಾಯ ನಮ್ಮ ರಾಷ್ಟ್ರದ ಸಂವಿಧಾನ. ಸರ್ಕಾರವು ಯಾವ ನಿಯಮಗಳಿಗೆ ಅನುಸಾರವಾಗಿ ಆಡಳಿತ ನಡೆಸಬೇಕು, ಪ್ರಜೆಗಳಿಗೆ ಯಾವ ಬಗೆಯ ಹಕ್ಕು ಕರ್ತವ್ಯಗಳಿವೆ ಇತ್ಯಾದಿ ವಿವರಗಳನ್ನು ತಿಳಿಸುವ ಆಡಳಿತಾತ್ಮಕ ಸಂಕಲನವನ್ನು 'ಸಂವಿಧಾನ' ಎನ್ನುವರು. ಈ ಬೃಹತ್ ಸಂವಿಧಾನ ರಚಿಸುವ ಪೂರ್ವದಲ್ಲಿ ಜಗತ್ತಿನ ಇತರ ರಾಷ್ಟ್ರಗಳಾದ ಅಮೆರಿಕ, ಬ್ರಿಟನ್, ಕೆನಡಾ ಐರ್ಲೆಂಡ್ ಮುಂತಾದ ಪ್ರಜಾಪ್ರಭುತ್ವ ರಾಷ್ಟ್ರಗಳ ಸಂವಿಧಾನಗಳನ್ನು ಎರವಲು ಪಡೆಯಲಾಗಿದೆ. ಅವುಗಳಲ್ಲಿ ನಮ್ಮ ದೇಶಕ್ಕೆ ಅನ್ವಯಿಸುವ ಉತ್ತಮ ಅಂಶಗಳನ್ನು ಹೆಕ್ಕಿ ತೆಗೆದು ಅಳವಡಿಸಿಕೊಳ್ಳಲಾಗಿದೆ.

**ಪ್ರಜಾಪ್ರಭುತ್ವದ ಅಡಿಗಲ್ಲು:–** ಭಾರತದ ಸಂವಿಧಾನವು ಎಲ್ಲಾ ಪ್ರಜೆಗಳಿಗೆ ವ್ಯಕ್ತಿಗತವಾಗಿ ಮತ್ತು ಸಾಮೂಹಿಕವಾಗಿ ಅಮೂಲ್ಯವಾದ ಮೂಲಭೂತ ಹಕ್ಕನ್ನು ಕೊಡುತ್ತದೆ ಮತ್ತು ಸೂಚಿಸುತ್ತದೆ. ಇವೇ ನಮ್ಮ ಪ್ರಜಾಪ್ರಭುತ್ವದ ಅಡಿಗಲ್ಲಾಗಿವೆ ಹಾಗೂ ನೈತಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಜವಾಬ್ದಾರಿಯವಾಗಿವೆ. ಭಾರತ ಸಂವಿಧಾನದಡಿ ನಮ್ಮ ರಾಷ್ಟ್ರದ ಪ್ರಜೆಗಳ ಬೌದ್ಧಿಕ, ನೈತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಅಗತ್ಯವಾದ ಹಕ್ಕುಗಳು ಕೊಡಲ್ಪಟ್ಟಿವೆ. ಈ ಹಕ್ಕುಗಳು ಪ್ರಜೆಗಳ ಅಸ್ತಿತ್ವ ಮತ್ತು ಸರ್ವಾಂಗೀಣ ಅಭಿವೃದ್ಧಿಗೆ ಮೂಲಭೂತ ಅಥವಾ ಅತ್ಯವಶ್ಯಕವಾದುದರಿಂದ ಈ ಹಕ್ಕುಗಳನ್ನು 'ಮೂಲಭೂತ' ಹಕ್ಕುಗಳು ಎಂದು ಕರೆಯಲಾಗಿದೆ. ಈ ಹಕ್ಕುಗಳು ನಮ್ಮ ಪ್ರಜಾಪ್ರಭುತ್ವದ ಪ್ರಮುಖ ಅಡಿಗಲ್ಲಾಗಿವೆ. ಈ ಹಕ್ಕು ಮತ್ತು ಸ್ವಾತಂತ್ರ್ಯ ಸಂವಿಧಾನದ ಅವಿಭಾಜ್ಯ ಅಂಗವಾಗಿರುವುದರಿಂದ ಸಾಮಾನ್ಯ ಸನ್ನಿವೇಶಗಳಲ್ಲಿ ಇವುಗಳನ್ನು ನಿರಾಕರಿಸಲು ಅಥವಾ ಮೀರಲು ಸಾಧ್ಯವಾಗುವುದಿಲ್ಲ.

**1. ಸಮಾನತೆಯ ಹಕ್ಕು:–** (14,15,16,17,18 ನೇ ಪರಿಚ್ಛೇದದಲ್ಲಿ ವಿವರಿಸಲಾಗಿದೆ)

- ವಿಧಿ 14– ಕಾನೂನಿನ ಮುಂದೆ ಸರ್ವರೂ ಸಮಾನರು,
- ಕಾನೂನಿಗಿಂತ ಶ್ರೇಷ್ಠರು ಯಾರೂ ಇಲ್ಲ. ಹಾಗಾಗಿ
- ಕಾನೂನಿಗೆ ಸರ್ವರೂ ತಲೆಬಾಗಲೇ ಬೇಕು.
- ವಿಧಿ 14–ಕಾನೂನಿನ ಅನ್ವಯ ಎಲ್ಲರೂ ಸಮಾನರು.
- ವಿಧಿ 15–ಜಾತಿ, ಲಿಂಗ, ಭಾಷೆ ಹುಟ್ಟಿದ ಸ್ಥಳದ ಆಧಾರದ ಮೇಲೆ ತಾರತಮ್ಯವನ್ನು ನಿಷೇಧಿಸಿದೆ.
- ವಿಧಿ 16–ಸಾರ್ವಜನಿಕ ಹುದ್ದೆಗಳಲ್ಲಿ ಸಮಾನ ಪಡೆಯುವ ಅವಕಾಶ.
- ವಿಧಿ 17– ಅಸ್ಪೃಶ್ಯತೆ ನಿಷೇಧಿಸಲಾಗಿದೆ.
- ವಿಧಿ 18– ಮಿಲಿಟರಿ ಮತ್ತು ಸರ್ಕಾರಿ ಬಿರುದುಗಳನ್ನು ಬಿಟ್ಟು ಉಳಿದ ಬಿರುದುಗಳ ರದ್ದತಿ.

**2. ಸ್ವಾತಂತ್ರ್ಯದ ಹಕ್ಕು (ವಿಧಿ 19–22):–**

19ರಿಂದ 22ರ ವರೆಗಿನ ವಿಧಿಗಳು ಸ್ವಾತಂತ್ರ್ಯದ ಹಕ್ಕನ್ನು ವಿವರಿಸುತ್ತವೆ. 19ನೇ ವಿಧಿಯನ್ನು ಸಂವಿಧಾನದ ಆತ್ಮ ಮತ್ತು ಹೃದಯ ಎನ್ನಲಾಗಿದೆ. 19 ನೇ ವಿಧಿಯು ಆರು ಸ್ವಾತಂತ್ರ್ಯಗಳ ಹಕ್ಕನ್ನು ನೀಡಿದೆ.

19, 20, 21, 22ನೇ ಪರಿಚ್ಛೇದಗಳಲ್ಲಿ ಅವುಗಳನ್ನು ವಿವರಿಸಲಾಗಿದೆ. ಸಂವಿಧಾನದ 21ರಿಂದ 22ನೇ ವಿಧಿಗಳು ವೈಯುಕ್ತಿಕ ಸ್ವಾತಂತ್ರ್ಯದ ಬಗ್ಗೆ ವಿವರಣೆಗಳನ್ನು ನೀಡಿವೆ. ಮೂಲಭೂತ ಹಕ್ಕುಗಳಲ್ಲೇ

ವೈಯುಕ್ತಿಕ ಹಕ್ಕುಗಳಿಗೆ ಅತ್ಯಂತ ಮಹತ್ವ ಸ್ಥಾನವಿದೆ. ಸಂವಿಧಾನದ 19ನೇ ವಿಧಿಯಡಿ ದತ್ತವಾಗಿರುವ ವೈಯುಕ್ತಿಕ ಸ್ವಾತಂತ್ರ್ಯದ ಹಕ್ಕುಗಳೆಂದರೆ, ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ, ಅಸ್ತ್ರಗಳಿಲ್ಲದೆ ಶಾಂತಿಯುತವಾಗಿ ಒಂದೆಡೆ ಸೇರುವ ಸ್ವಾತಂತ್ರ್ಯ, ಭಾರತದದ್ಯಾಂತ ಸಂಚರಿಸುವ ಸ್ವಾತಂತ್ರ್ಯ, ಸಂಘ–ಸಂಸ್ಥೆಗಳನ್ನು ರಚಿಸುವ ಸ್ವಾತಂತ್ರ್ಯ, ಭಾರತದ ಯಾವುದೇ ವೃತ್ತಿಯನ್ನು ನಡೆಸುವ ಅಥವಾ ಯಾವುದೇ ವಾಣಿಜ್ಯ ವ್ಯವಹಾರದಲ್ಲಿ ತೊಡಗುವ ಹಕ್ಕು.

**3. ಶೋಷಣೆಯ ವಿರುದ್ಧದ ಹಕ್ಕು:–** (23, 24ನೇ ಪರಿಚ್ಛೇದದಲ್ಲಿ ವಿವರಿಸಲಾಗಿದೆ)

- ಮಾನವರನ್ನು ಮಾರಾಟ ಮಾಡುವುದು ಹಾಗೂ ಅನೈತಿಕ ಕಾರ್ಯಗಳಿಗೆ ತೊಡಗಿಸುವುದನ್ನು ನಿಷೇಧಿಸಲಾಗಿದೆ.
- 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಹಾನಿಕಾರಕ ವೃತ್ತಿಗಳಲ್ಲಿ ತೊಡಗಿಸುವುದನ್ನು ನಿಷೇಧಿಸಲಾಗಿದೆ.

5. **ಧಾರ್ಮಿಕ ಸ್ವಾತಂತ್ರ್ಯದ ಹಕ್ಕು:–** (25, 26, 27, 28ನೇ ಪರಿಚ್ಛೇದದಲ್ಲಿ ವಿವರಿಸಲಾಗಿದೆ)
   - ಯಾವುದೇ ಧರ್ಮವನ್ನು ಸ್ವೀಕರಿಸುವ, ಆಚರಿಸುವ ಮತ್ತು ಪ್ರಚಾರ ಮಾಡುವ ಹಕ್ಕು.
   - ಯಾವುದೇ ನಿರ್ದಿಷ್ಟ ಧರ್ಮವನ್ನು ಪ್ರಚಾರ ಮಾಡಲು ತೆರಿಗೆ ನೀಡುವಿಕೆಯಿಂದ ಸ್ವಾತಂತ್ರ್ಯ.
   - ಧಾರ್ಮಿಕ ವಿಷಯಗಳ ನಿರ್ವಹಣೆಯ ಸ್ವಾತಂತ್ರ್ಯ.
   - ಶೈಕ್ಷಣಿಕ ಸಂಸ್ಥೆಗಳಲ್ಲಿ ಧಾರ್ಮಿಕ ಬೋಧನೆ ಅಥವಾ ಪೂಜಾ ಸಮಾರಂಭಗಳಲ್ಲಿ ಹಾಜರಾಗುವಿಕೆಯಿಂದ ವಿನಾಯಿತಿ.

6. **ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು:–**(29, 30ನೇ ಪರಿಚ್ಛೇದದಲ್ಲಿ ವಿವರಿಸಲಾಗಿದೆ)
   - ಅಲ್ಪ ಸಂಖ್ಯಾತರ ಭಾಷೆ ಮತ್ತು ಸಂಸ್ಕೃತಿ ರಕ್ಷಣೆ.
   - ಅಲ್ಪ ಸಂಖ್ಯಾತರು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ನಿರ್ವಹಿಸುವ ಹಕ್ಕು.
   - ಶೈಕ್ಷಣಿಕ ಸಂಸ್ಥೆಗಳಲ್ಲಿ ಧರ್ಮ, ಜನಾಂಗ, ಜಾತಿ ಅಥವಾ ಭಾಷೆಯ ಆಧಾರದ ಮೇಲೆ ಪ್ರವೇಶ ನಿರಾಕರಿಸುವುದರ ಮೇಲೆ ನಿಷೇಧ.

7. **ಸಂವಿಧಾನಾತ್ಮಕ ಪರಿಹಾರದ ಹಕ್ಕು:– (ವಿಧಿ–32)** ಮೇಲಿನ ಎಲ್ಲಾ ಹಕ್ಕುಗಳ ಅನುಷ್ಠಾನಕ್ಕೆ ಸಾಂವಿಧಾನಿಕ ಪರಿಹಾರವನ್ನು ಪಡೆಯುವ ಅವಕಾಶವನ್ನು ಕಲ್ಪಿಸಿಕೊಡುತ್ತದೆ. ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಅವರು 32ನೇ ವಿಧಿಯನ್ನು ಸಂವಿಧಾನದ ಆತ್ಮ ಮತ್ತು ಹೃದಯ ಎಂದು ಕರೆದರು.

**ಮೂಲಭೂತ ಕರ್ತವ್ಯಗಳು 11:–** ಮೂಲಭೂತ ಕರ್ತವ್ಯಗಳನ್ನು ಭಾರತ ಸಂವಿಧಾನಕ್ಕೆ ರಷ್ಯಾ ದೇಶದ ಸಂವಿಧಾನದಿಂದ ಎರವಲು ಪಡೆದಿದ್ದೇವೆ. 1976ನೇ ಇಸವಿಯಲ್ಲಿ ಸಂವಿಧಾನಕ್ಕೆ 42 ನೇ ತಿದ್ದುಪಡಿ ತರುವುದರ ಮೂಲಕ ಭಾರತ ಸಂವಿಧಾನಕ್ಕೆ ಮೂಲಭೂತ ಕರ್ತವ್ಯಗಳ ಪಟ್ಟಿಯನ್ನು ಸೇರಿಸಲಾಯಿತು. ಭಾರತ ಸಂವಿಧಾನದಲ್ಲಿ 4–ಎ ಭಾಗದಲ್ಲಿನ 51(ಎ) ವಿಧಿಯಡಿಯಲ್ಲಿ 10 ಮೂಲಭೂತ ಕರ್ತವ್ಯಗಳನ್ನು ಸೇರಿಸಲಾಯಿತು. ನಂತರ 86ನೇ ಸಂವಿಧಾನ ತಿದ್ದುಪಡಿ ಮಸೂದೆ–2002ರ ಮೇರೆಗೆ 11ನೇ ಮೂಲಭೂತ ಕರ್ತವ್ಯವನ್ನು ಸೇರಿಸಲಾಯಿತು. ಅವುಗಳನ್ನು ಪಾಲಿಸುವುದು ಭಾರತದ ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಅವುಗಳೆಂದರೆ,

- ಸಂವಿಧಾನಕ್ಕೆ ನಿಷ್ಠೆ ತೋರಿಸುವುದು ಮತ್ತು ಸಂವಿಧಾನದ ಆದರ್ಶಗಳನ್ನು ಹಾಗೂ ಸಂಸ್ಥೆಗಳನ್ನು, ರಾಷ್ಟ್ರೀಯ ಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.
- ಸ್ವಾತಂತ್ರ್ಯ ಚಳುವಳಿಯ ಆದರ್ಶಗಳನ್ನು ಪಾಲಿಸುವುದು.
- ಭಾರತದ ಸಾರ್ವಭೌಮತ್ವ, ಏಕತೆ ಮತ್ತು ಸಮಗ್ರತೆಯನ್ನು ಎತ್ತಿಹಿಡಿಯುವುದು ಮತ್ತು ರಕ್ಷಿಸುವುದು.
- ದೇಶ ರಕ್ಷಣೆ ಮಾಡುವುದು ಹಾಗೂ ಅಗತ್ಯವೆನಿಸಿದಾಗ ದೇಶ ರಕ್ಷಣೆಗೆ ಮುಂದಾಗುವುದು.
- ಭಾಷೆ, ಧರ್ಮ ಮತ್ತು ಪ್ರಾದೇಶಿಕ ಅಥವಾ ವಿಭಾಗೀಯ ವಿಭಿನ್ನತೆಯನ್ನು ಮೀರಿ ಭಾರತದ ಎಲ್ಲಾ ಜನರೊಂದಿಗೆ ಸಾಮರಸ್ಯ ಮತ್ತು ಭ್ರಾತೃತ್ವದ ಹುರುಪನ್ನು ಹೆಚ್ಚಿಸುವುದು ಮತ್ತು ಮಹಿಳೆಯರ ಗೌರವಕ್ಕೆ ಧಕ್ಕೆ, ಪ್ರತಿಷ್ಠೆಗೆ ಭಂಗ ತರುವ ಆಚರಣೆಗಳನ್ನು ಕೈ ಬಿಡುವುದು.
- ನಮ್ಮ ಸಮ್ಮಿಶ್ರ ಸಂಸ್ಕೃತಿಯ ಮೌಲ್ಯ ಮತ್ತು ಶ್ರೀಮಂತ ಪರಂಪರೆಯನ್ನು ರಕ್ಷಿಸುವುದು.
- ಅರಣ್ಯ ಸರೋವರಗಳು, ನದಿಗಳು ಮತ್ತು ವನ್ಯ ಪ್ರಾಣಿಗಳಿಂದ ಕೂಡಿರುವ ಪ್ರಕೃತಿಯನ್ನು ರಕ್ಷಿಸಿ, ಬೆಳವಣಿಗೆ ಮಾಡುವುದು.
- ವೈಜ್ಞಾನಿಕ ಮನೋಭಾವನೆ, ಮಾನವೀಯತೆ, ಶೋಧನಾ ಹುರುಪು ಮತ್ತು ಸುಧಾರಣಾ ಭಾವನೆಯನ್ನು ಬೆಳೆಸುವುದು.
- ಸಾರ್ವಜನಿಕ ಆಸ್ತಿಯನ್ನು ರಕ್ಷಿಸುವುದು.
- ದೇಶವು ಸತತವಾಗಿ ಮೇಲ್ಮಟ್ಟದ ಪ್ರಯತ್ನ ಮತ್ತು ಸಾಧನೆಗೇರಲು ವೈಯುಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳ ಎಲ್ಲಾ ಕ್ಷೇತ್ರಗಳಲ್ಲೂ ಉತ್ಕೃಷ್ಟತೆಗಾಗಿ ಪ್ರಯತ್ನಿಸುವುದು.
- 6ರಿಂದ 14 ನೇ ವಯಸ್ಸಿನ ನಡುವಿನ ಮಕ್ಕಳಿಗೆ ಶೈಕ್ಷಣಿಕ ಅವಕಾಶಗಳನ್ನು ಕಲ್ಪಿಸುವುದು.

**ಹಕ್ಕುಗಳ ಮೂಲ ಕರ್ತವ್ಯದಲ್ಲಿದೆ:–** ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಮಾತಿನಲ್ಲಿ ಹೇಳುವುದಾದರೆ ಹಕ್ಕುಗಳ ನಿಜವಾದ ಮೂಲ ಇರುವುದು ಕರ್ತವ್ಯಗಳಲ್ಲಿ, ದೇಶದ ಪ್ರಜೆಗಳೆಲ್ಲರೂ ತಮ್ಮ–ತಮ್ಮ ಕರ್ತವ್ಯಗಳನ್ನು ನಿಭಾಯಿಸಿದರೆ ಹಕ್ಕುಗಳ ಉಲ್ಲಂಘನೆ ಆಗುವುದೇ ಇಲ್ಲ. ಕರ್ತವ್ಯಗಳನ್ನು ನಿಭಾಯಿಸದೆ ಕೇವಲ ಹಕ್ಕುಗಳನ್ನು ಮಾತ್ರ ಚಲಾಯಿಸಲು ಸಾಧ್ಯವಾಗಲಾರದು. ಮೂಲಭೂತ ಕರ್ತವ್ಯಗಳು ಜನರಿಗೆ ಅವರ ನೈತಿಕ ಹೊಣೆಗಾರಿಕೆಯನ್ನು ನೆನಪಿಸಿಕೊಡುತ್ತದೆ. ಸಂವಿಧಾನದ ಆಶಯ ನೆರವೇರಬೇಕಾದರೆ ಹಾಗೂ ಪ್ರಜಾತಂತ್ರ ಸಫಲವಾಗಬೇಕಾದರೆ ಮೂಲಭೂತ ಹಕ್ಕುಗಳು ಹಾಗೂ ಕರ್ತವ್ಯಗಳನ್ನು ದೇಶದ ಪ್ರತಿಯೊಬ್ಬ ನಾಗರಿಕನೂ ಪರಿಪಾಲಿಸಬೇಕು.

**ಹಕ್ಕು–ಕರ್ತವ್ಯಗಳ ಸಮತೋಲನ:–** ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿದಾಗ ಹಿಂದೆಂದಿಗಿಂತಲೂ ಪ್ರಸ್ತುತದಲ್ಲಿ ಮೂಲಭೂತ ಕರ್ತವ್ಯಗಳ ಬಗ್ಗೆ ಗಮನ ನೀಡಬೇಕಾದ ಕಾಲ ಬಂದಿದೆ. ದೇಶದ ಉದ್ದಗಲಕ್ಕೂ ಪಸರಿರುವ ಬಹು ಸಂಸ್ಕೃತಿಯ ಶ್ರೀಮಂತ ಪರಂಪರೆಯನ್ನು ಕಾಪಾಡಲು ಮೂಲಭೂತ ಕರ್ತವ್ಯಗಳನ್ನು ಪರಿಪಾಲಿಸಲೇ ಬೇಕಾದ ಅನಿವಾರ್ಯತೆ ಇದೆ. ಮೂಲಭೂತ ಕರ್ತವ್ಯಗಳಿಗೆ ಬದ್ಧರಾಗಿ ನಡೆದುಕೊಂಡರೆ ಪ್ರಜೆಗಳಲ್ಲಿ ಸೋದರತ್ವ ಬೆಳೆಯುತ್ತದೆ, ತನ್ಮೂಲಕ ದೇಶದ ಏಕತೆ ಗಟ್ಟಿಯಾಗುತ್ತದೆ. ಶಾಂತಿ, ಸುವ್ಯವಸ್ಥೆ ನೆಲೆಸಿ ಜನರ ಜೀವನಮಟ್ಟ ಸುಧಾರಿಸುತ್ತದೆ. ಹಾಗಾದಾಗ ಮಾತ್ರ ಬಲಿಷ್ಠ ಸಮಾಜವನ್ನು ಕಟ್ಟಲು ಸಾಧ್ಯ. ಏಳು ದಶಕಗಳ ಅವಧಿಯಲ್ಲಿ ಮೂಲಭೂತ ಹಕ್ಕುಗಳ ಬಗ್ಗೆ ದೊಡ್ಡ ಮಟ್ಟದ ಆದ್ಯತೆ ನೀಡಲಾಗಿದೆ. ಈಗ ಮೂಲಭೂತ ಕರ್ತವ್ಯಗಳ ಬಗ್ಗೆಯೂ ಗಮನ ನೀಡುವ ಸಂದರ್ಭ ಬಂದಿದೆ. ಪ್ರತಿವರ್ಷ ನವೆಂಬರ್ 26ರಂದು 'ಸಂವಿಧಾನ ದಿನ' ದಿಂದು ಆಚರಿಸುವುದಾಗಿ ಸರ್ಕಾರ

ಘೋಷಿಸಿದೆ. ತನ್ಮೂಲಕ ಮೂಲಭೂತ ಕರ್ತವ್ಯಗಳ ಬಗ್ಗೆ ದೇಶವಾಸಿಗಳೆಲ್ಲರ ಗಮನ ಹರಿಯುವಂತೆ ಮಾಡಲಾಗಿದೆ. ಬಹುಕಾಲದಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಸಂವಿಧಾನದ ವಿಧಿಯೊಂದರ ಮೇಲೆ ಬೆಳಕು ಹರಿಸುವ ಸಮಯ ಈಗ ಬಂದಿದೆ. ದೇಶದ ನಾಗರಿಕರು ಮೂಲಭೂತ ಕರ್ತವ್ಯ ಹಾಗೂ ಹಕ್ಕುಗಳ ನಡುವೆ ಸಮತೋಲನ ಸಾಧಿಸುವ ಆಶಯದೊಂದಿಗೆ ಈ ಸಂವಿಧಾನ ದಿನವನ್ನು ಅರ್ಥಪೂರ್ಣವಾಗಿಸೋಣ.

**ಲೇಖಕರು:ನ್ಯಾ. ವಿ.ಶ್ರೀಶಾನಂದ,**
**ಹೈಕೋರ್ಟ್ ನ್ಯಾಯಾಧೀಶರು,**
**ಆಧಾರ: ಕನ್ನಡ ಪ್ರಭ, ದಿನಾಂಕ:26.11.2020.**

# 13. ಸಂವಿಧಾನದ ಬದಲಾವಣೆ ಹೇಗೆ

ಕೆಲವು ಸಮಯದ ಹಿಂದೆ ಉತ್ತರ ಕನ್ನಡದ ಸಂಸದರಾದ ಅನಂತಕುಮಾರ ಹೆಗಡೆಯವರು "ನಾವು ಸಂವಿಧಾನ ಬದಲಾಯಿಸಲಿಕ್ಕೆ ಬಂದವರು" ಎಂಬರ್ಥದ ಮಾತನ್ನು ಆಡಿದಾಗ ಭಾರಿ ಕೋಲಾಹಲವಾಯಿತು. ಆನಂತರ ಅವರು, "ಯಾರಿಗಾದರೂ ನೋವಾದರೆ ವಿಷಾಧಿಸುವೆ" ಎಂಬ ಕ್ಷಮಾಪಣೆಯನ್ನು ಸಂಸತ್ತಿನಲ್ಲಿ ಕೇಳಿದರು.

ಅನಂತಕುಮಾರ ಹೆಗಡೆಯವರ ಮೇಲೆ ಮುಗಿಬಿದ್ದವರ ಉದ್ದೇಶ ಸ್ಪಷ್ಟ. ಭಾರತೀಯ ಜನತಾ ಪಕ್ಷ ಅನುಸೂಚಿತ ಜಾತಿ ಮತ್ತು ಪಂಗಡಗಳಿಗೆ, ಹಿಂದುಳಿದ ವರ್ಗಗಳಿಗೆ ಮತ್ತು ಅಲ್ಪಸಂಖ್ಯಾತರಿಗೆ ಸಂವಿಧಾನದತ್ತವಾಗಿರುವ ಮೀಸಲಾತಿ ಇತ್ಯಾದಿ ಹಕ್ಕುಗಳನ್ನು ರದ್ದು ಮಾಡುವ ಗುಪ್ತ ಕಾರ್ಯಸೂಚಿ ಹೊಂದಿದೆ ಎಂದು ಬಿಂಬಿಸುವುದು. ಇವತ್ತಿನ ರಾಜಕೀಯ ಪರಿಸ್ಥಿತಿಯಲ್ಲಿ ಯಾವುದೇ ರಾಜಕೀಯ ಪಕ್ಷ ಆ ರೀತಿ ಯೋಚಿಸಲಿಕ್ಕೂ ಶಕ್ಯವಿಲ್ಲ. ಮೋದಿಯವರೇ ಒಮ್ಮೆ ಸಂಸತ್ತಿನಲ್ಲಿ ಹೇಳಿದಂತೆ, ಉಳಿದ ಕ್ಷೇತ್ರಗಳಲ್ಲಿ ಅವರಿಗಿರುವ ತಿಳುವಳಿಕೆಯನ್ನು ಪ್ರಶ್ನಿಸಬಹುದು. ಆದರೆ ರಾಜಕೀಯ ತಿಳಿವಳಿಕೆಯ ವಿಷಯದಲ್ಲ. ಬಿಜೆಪಿ ಈ ವರ್ಗಗಳಲ್ಲಿ ತನ್ನ ಪ್ರಾಬಲ್ಯ ಹೆಚ್ಚಿಸಿಕೊಳ್ಳಲು ಎಲ್ಲ ಪ್ರಯತ್ನ ಮಾಡುತ್ತಿದೆ. ವಿಶೇಷವೆಂದರೆ ಸಂವಿಧಾನದ ಆರ್ಟಿಕಲ್ 334, ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆಗಳಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಮೀಸಲಾತಿಯನ್ನು ಕೇವಲ ಹತ್ತು ವರ್ಷಗಳಿಗೆ ನಿಗದಿ ಮಾಡಿತ್ತು. ಇನ್ನು ಪ್ರತಿ ಹತ್ತು ವರ್ಷಕ್ಕೊಮ್ಮೆ ತಿದ್ದುಪಡಿ ಮಾಡಿ ಎಪ್ಪತ್ತು ವರ್ಷಗಳವರೆಗೆ ಅಂದರೆ 2030ರ ವರೆಗೆ ವಿಸ್ತರಿಸಲಾಗಿದೆ. ಹೀಗಿರುವಾಗ ಸಂವಿಧಾನವನ್ನು ಬದಲಾಯಿಸುವುದು ವಾಸ್ತವವಾಗಿ ಆಗುವಂತದ್ದಲ್ಲ. ತಾತ್ವಿಕವಾಗಿ (theoretically) ಸಂವಿಧಾನವನ್ನು ಬದಲಾಯಿಸಬಹುದೇ ಎನ್ನುವ ಪ್ರಶ್ನೆಗೆ ಉತ್ತರ ಕಂಡು ಹಿಡಿಯುವ ಪ್ರಯತ್ನವೆ ಈ ಲೇಖನ.

ಅಷ್ಟಕ್ಕೂ ಸಂವಿಧಾನ ಎಂದರೇನು? ಪಂಡಿತರ ವ್ಯಾಖ್ಯಾನ ಬದಿಗಿಟ್ಟು ಸರಳ ಭಾಷೆಯಲ್ಲಿ ಅರ್ಥ ಮಾಡಿಕೊಳ್ಳೋಣ. ದೇಶದ ಶಾಸನಾತ್ಮಕ, ಆಡಳಿತಾತ್ಮಕ, ನ್ಯಾಯಾಂಗ, ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ದೇಹಕ್ಕೆ ಹೋಲಿಸಿದರೆ ಸಂವಿಧಾನ ಅದರ ಅಸ್ಥಿಪಂಜರ ಎನ್ನಬಹುದು.

ಈ ವ್ಯವಸ್ಥೆಯ ಆಧಾರವೂ ಹೌದು. ಆವರಣವೂ ಹೌದು. ಅದುವೇ ಶಕ್ತಿಯನ್ನು ಕೊಡುವಂತಹದ್ದು. ಅದೇ ಮಿತಿಯನ್ನು ವಿಧಿಸುವಂತಹದ್ದು, ಸಂವಿಧಾನವನ್ನು ಬದಲಾಯಿಸಬಾರದು ಎಂದರೆ ಅದಕ್ಕೆ ಒಂದು ನಿರ್ದಿಷ್ಟತೆ ಖಚಿತತೆ ಇರಬೇಕು. ಅದಕ್ಕಾಗಿ ಲಿಖಿತ ರೂಪ ಅವಶ್ಯ. ವಿಶೇಷವೆಂದರೆ ಪ್ರಜಾಪ್ರಭುತ್ವದ ತವರೆನಿಸಿದ ಇಂಗ್ಲೆಂಡಿನಲ್ಲಿ ಲಿಖಿತ ಸಂವಿಧಾನವೇ ಇಲ್ಲ.

ಇನ್ನು ಭಾರತದ ಸಂವಿಧಾನ ಹೇಗೆ ಅಸ್ತಿತ್ವಕ್ಕೆ ಬಂತು ಎನ್ನುವುದನ್ನು ನೋಡೋಣ. Cabinet Mission Plan ಪ್ರಕಾರ ಅಖಂಡ ಭಾರತಕ್ಕೆ 1946 ಡಿಸೆಂಬರ್ 9 ರಂದು ಸಂವಿಧಾನ ಸಭೆ (Constituent Assembly) ಅಸ್ತಿತ್ವಕ್ಕೆ ಬಂತು. ದೇಶ ವಿಭಜನೆಯ ತೀರ್ಮಾನವಾದ ನಂತರ Indian Independence Act 1947 ಇದರ ಕೆಳಗೆ ಪುನರ್ಘಟಿತವಾಯಿತು. ಕೆಳಗಿನ ವಿಷಯಗಳನ್ನು ಗಮನಿಸಬೇಕು.

1) ಸಂವಿಧಾನ ಸಭೆಯ ಸದಸ್ಯರು ನೇರವಾಗಿ ಜನರಿಂದ ಚುನಾಯಿತರಾಗಿರಲಿಲ್ಲ. ಅದರ 299 ಸದಸ್ಯರಲ್ಲಿ 229 ಜನ ಬ್ರಿಟಿಷ್ ಆಡಳಿತದ ಪ್ರಾಂತಗಳ ಶಾಸನಸಭೆಗಳಿಂದ, 70 ಜನ ವಿವಿಧ ರಾಜರಿಂದ ನೇಮಕವಾದವರು.

2) ಸಭೆಯಲ್ಲಿ ಅಂದಿನ ಕಾಂಗ್ರೆಸ್ ಪಕ್ಷದ ಪಾರಮ್ಯವಿತ್ತು. ವಿವಿಧ ಧರ್ಮ, ಜಾತಿ ಮತ, ಸಂಪ್ರದಾಯ, ಗುಂಪು, ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತಿತ್ತು.

3) ಹೀಗಿದ್ದರೂ ಕಾಂಗ್ರೆಸ್ ಪ್ರಮುಖವಾಗಿ ಮೇಲ್ವರ್ಗದ ಹಿಂದುಗಳ ಪಕ್ಷ ಎನ್ನುವ ಹಾಗೆ ಇತ್ತು. ಹಿಂದುಳಿದ ವರ್ಗಗಳಿಗೆ ನೀಡಿದ ಸವಲತ್ತುಗಳು ಅವರ ಉದಾರವಾದಿ ನಿಲುವಿನ ಪ್ರತಿಫಲವೇ ವಿನಃ ಆ ವರ್ಗಗಳ ರಾಜಕೀಯ ಶಕ್ತಿಯ ಪರಿಣಾಮವೆನ್ನುವಂತಿಲ್ಲ.

4) ಸಂವಿಧಾನ ಸಭೆಯಲ್ಲಿ ಅನೇಕ ವರ್ಚಸ್ವಿ ನಾಯಕರಿದ್ದರು. ವಿದ್ವಾಂಸರು ಇದ್ದರು. ಆದರೂ ತಮ್ಮ ಹಿನ್ನೆಲೆ ಮತ್ತು ವಿದ್ಯಾಭ್ಯಾಸದಿಂದಾಗಿ ಪಾಶ್ಚಾತ್ಯ ಚಿಂತನೆಗಳಿಂದ ಪ್ರಭಾವಿತರಾಗಿದ್ದರು.

5) ಕಾಂಗ್ರೆಸ್ ತಕ್ಕಮಟ್ಟಿಗೆ ಸಾಮೂಹಿಕ ನಾಯಕತ್ವವಿದ್ದರೂ ಬಹುಶಃ ಮಧ್ಯಮ ಎಡ ಎನ್ನುವ ಧೋರಣೆ ಹೊಂದಿದ್ದ ಜವಾಹರಲಾಲ್ ನೆಹರೂರವರು ತಮ್ಮ ನಿಲುವನ್ನು ಸಾಧಿಸುವ ಸಾಮರ್ಥ್ಯ ಮತ್ತು ಪ್ರವೃತ್ತಿ ಹೊಂದಿದ್ದರು.

6) ಸಂವಿಧಾನ ಸಭೆಯಲ್ಲಿ ವಿಸ್ತೃತ ಮತ್ತು ವಿಚಾರಪೂರ್ಣ ಚರ್ಚೆಗಳು ನಡೆಯುತ್ತಿದ್ದವು. ಆದರೆ ರಾಜಕೀಯ ಅನುಕೂಲ ಮತ್ತು ಹೊಂದಾಣಿಕೆ ನಡೆಯುತ್ತಿತ್ತು.

ಇಂತಹ ಸಂವಿಧಾನ ಸಭೆ ಹೀಗೆ ಸಿದ್ದಪಡಿಸಿದ ಸಂವಿಧಾನದ ಸಿಂಧುತ್ವ ಏನು? ಪೀಠಿಕೆಯಲ್ಲಿ "We the People of India" ಅಂದರೆ ಸಾಕೆ? ಒಂದು ಸಂವಿಧಾನ ಹೇಗೆ ಸಿಂಧುತ್ವ ಪಡೆಯುತ್ತದೆ? ಹೆಲ್ಮೆಟ್ ಇಲ್ಲದೆ ಹೋಗುವಾಗ ಪೊಲೀಸರು ದಂಡ ಹಾಕಿದರೆ ಅದರ ಸಿಂಧುತ್ವ ಮೋಟಾರು ವಾಹನ ಕಾಯಿದೆಯ ನಿಯಮದಿಂದ (rules) ಬರುತ್ತದೆ. ನಿಯಮದ ಸಿಂಧುತ್ವ ಕಾಯಿದೆಯಿಂದ (Act) ಬರುತ್ತದೆ. ಕಾಯಿದೆಯ ಸಿಂಧುತ್ವ ಸಂವಿಧಾನದಿಂದ ಬರುತ್ತದೆ. ಸಂವಿಧಾನದ ಸಿಂಧುತ್ವ ಎಲ್ಲಿಂದ ಬರುತ್ತದೆ?

ಸಂವಿಧಾನ ಮತ್ತು ಅದು ಆಧರಿಸಿರುವ ಕಾನೂನಿನ ವ್ಯವಸ್ಥೆಯ ಸಿಂಧುತ್ವ ಕುರಿತು ಬಹಳ ಸಿದ್ಧಾಂತಗಳಿವೆ. ಪ್ರಸ್ತುತ ನಾವು ಬಹುಮಾನ್ಯವಾದ ಪ್ರೊಫೆಸರ್ ಹೆಚ್.ಎಲ್.ಎ. ಹಾರ್ಟನ ಸಿದ್ಧಾಂತವನ್ನು ಪರಿಗಣಿಸಬಹುದು. (ರಾಲ್ಫ್ ಸೆಟ್ಟೋರಿಯಸ್ ಮತ್ತು ಇನ್ನಿತರೆ ಟೀಕೆಗಳ ಹೊರತಾಗಿಯೂ) ಇದರ ಪ್ರಕಾರ ಸಿಂಧುತ್ವದ ಹೃದಯದಲ್ಲಿರುವುದು ಪ್ರಜೆಗಳ 'ಪ್ರಜಾಪೂರ್ವಕ ಸ್ವೀಕೃತಿ'. ನಮ್ಮ ಸಂವಿಧಾನಕ್ಕೆ ಸಂಬಂಧಿಸಿದಂತೆ ಜನಾಭಿಪ್ರಾಯ ಸಂಗ್ರಹಣೆ ಆಗಿಲ್ಲ. ಕಳೆದ ಎಪ್ಪತ್ತು ವರ್ಷಗಳಿಂದ ಸಂವಿಧಾನವನ್ನು ಪಾಲಿಸಿಕೊಂಡು ಬಂದಿದ್ದರಿಂದ ಪ್ರಜ್ಞಾಪೂರ್ವಕ ಸ್ವೀಕೃತಿ ಆಗಿದೆ ಎನ್ನಬಹುದೆ? ಎಷ್ಟು ಮಂದಿಗೆ ಸಂವಿಧಾನದ ಬಗ್ಗೆ ಗೊತ್ತಿದೆ? ಆದರೆ ಸದ್ಯದ ವ್ಯವಸ್ಥೆಯನ್ನು ಕೆಲವು ಬಂಡುಕೋರರು ಮತ್ತು ನಕ್ಸಲೀಯರನ್ನು ಬಿಟ್ಟರೆ ಉಳಿದವರೆಲ್ಲ ಒಪ್ಪಿಕೊಂಡಿದ್ದಾರೆ ಎನ್ನಬಹುದು. ಆದರೆ ಅರ್ಥಮಾಡಿಕೊಂಡು ಆಯ್ಕೆಯಿದೆ ಎಂದು ತಿಳಿದು ಒಪ್ಪಿಕೊಂಡಿದ್ದಾರೆ ಎನ್ನಲಾಗದು.

ಪ್ರೊ: ಹಾರ್ಟನ ಪ್ರಕಾರ ಬದಲಾವಣೆಗೆ ಅನುವು ಮಾಡಿಕೊಡುವುದು ಕಾನೂನು ವ್ಯವಸ್ಥೆಯ ಸಿಂಧುತ್ವದ ಒಂದು ಲಕ್ಷಣ. ನಮ್ಮ ಸಂವಿಧಾನದಲ್ಲಿ ಆರ್ಟಿಕಲ್ 368 ತಿದ್ದುಪಡಿಗೆ ಅನುವು ಮಾಡಿಕೊಡುತ್ತದೆ. ಸಂವಿಧಾನವನ್ನು ಎಷ್ಟರ ಮಟ್ಟಿಗೆ ಬದಲಾಯಿಸಬಹುದು? ಸಂಸತ್ತು ಸಂವಿಧಾನವನ್ನು ಬದಲಾಯಿಸಬಹುದು, ಆದರೆ ಅದರ ಮೂಲ ಹಂದರವನ್ನು ಬದಲಾಯಿಸುವಂತಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ಕೇಶವಾನಂದ ಭಾರತಿ ಪ್ರಕರಣದಲ್ಲಿ ತೀರ್ಪು ಕೊಟ್ಟಿದೆ. ಈ ತೀರ್ಪನ್ನು ಮಿನರ್ವ ಮಿಲ್ಸ್ ಇತ್ಯಾದಿ ಪ್ರಕರಣಗಳಲ್ಲಿ ಅನುಸರಿಸಲಾಗಿದೆ. ಆದರೆ ಇದೇ ಅಂತಿಮ ಎನ್ನುವಂತಿಲ್ಲ. ಯಾಕೆಂದರೆ 11 ನ್ಯಾಯಾಧೀಶರ ಗೋಲಕನಾಥ ತೀರ್ಪಿನಲ್ಲಿ ಸಂವಿಧಾನ ಬದಲಾವಣೆಯ ಮುಖಾಂತರ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸುವಂತಿಲ್ಲ ಎಂಬ ಅಂಶವನ್ನು ಸರ್ವೋಚ್ಚ ನ್ಯಾಯಾಲಯ 13 ನ್ಯಾಯಾಧೀಶರ ಕೇಶವಾನಂದ ಭಾರತಿ ಪ್ರಕರಣದಲ್ಲಿ ಮೂಲಭೂತ ಹಕ್ಕುಗಳನ್ನು ಬದಲಾಯಿಸಬಹುದು. ಆದರೆ ಮೂಲಭೂತ ಹಂದರವನ್ನು ಬದಲಾಯಿಸುವಂತಿಲ್ಲ ಎಂದು ಬದಲಾಯಿಸಿತು. ಸರ್ವೋಚ್ಚ ನ್ಯಾಯಾಲಯ ತನ್ನ ತೀರ್ಮಾನವನ್ನು ಬದಲಾಯಿಸಿದ ಅನೇಕ ಉದಾಹರಣೆಗಳಿವೆ. ಅದಲ್ಲದೆ ಮೂಲಭೂತ ಹಂದರದ ಅಂಶಗಳಲ್ಲಿ ಬದಲಾವಣೆ ಬೇಕಾಗಬಹುದು. ಉದಾಹರಣೆಗೆ ಮೂಲಭೂತ

ಹಂದರದ ಒಂದು ಲಕ್ಷಣವೆನಿಸಿದ ಸಂಸದೀಯ ಪದ್ಧತಿಗೆ ಬದಲಾಗಿ ಅಧ್ಯಕ್ಷೀಯ ಪದ್ಧತಿ ಅನುಸರಿಸಬೇಕೆಂದು ಬೇಡಿಕೆ ಬಲವಾಗುತ್ತ ಇದೆ.

ಒಟ್ಟಿನಲ್ಲಿ ಸಂವಿಧಾನ ಬದಲಾಯಿಸಬೇಕೆಂಬ ಅಥವಾ ಬದಲಾಯಿಸಬಾರದೆಂಬ ಹಠ ಸರಿಯಲ್ಲ. ಎಲ್ಲವೂ ಆಯಾ ಕಾಲದ ಸಮಾಜದ ಇಚ್ಛೆ ಮತ್ತು ಮೌಲ್ಯಗಳ ಮೇಲೆ ಅವಲಂಬಿಸಿದೆ.

ಆಧಾರ:ವಿಜಯಕರ್ನಾಟಕ, ದಿನಾಂಕ:02.12.2020

# 14. DEMOCRACY AS THE DNA OF OUR COUNTRY

The spirit of democracy was always part of the Indian ethos. The people of ancient India not only knew about the system but also practised it in one way or another.

It is a happy coincidence that when Prime Minister Narendra Modi is performing Bhoomi Puja for the New Parliament Building Complex in the cational capital, we as a nation are celebrating the 100th anniversary of the conduct of the first elections in India. It may be noted that the first general elections were held in British India in 1920 to elect members to what was called the Imperial Legislative Council and the Provincial Councils. They were the first polls in the country's modern history. The new Central Legislative Assembly, which was the lower chamber of the Imperial Legislative council,was based in Delhi; it had 104 elected seats, of which 66 were contested and 38 were reserved for Europeans elected through the Chambers of Commerce.

Interestingly, women in British India got equal franchise a little before their British counterparts. Historical records suggest that between 1919 and 1929, all of the British provinces as well as most of the princely states granted women the right to vote and in some cases, allowed them to contest local elections, Again, notably the Gangotri of universal suffrage in modern India happens to be in Gujarat. It was Rajkot State that granted full universal suffrage in1923.

Years ago, when I had the occasion of interacting with a few renowned researchers in democeracy at a US university, I was aghast by the way they were rating Indian democray below that of the system in Haiti. When asked, a researcher-academic told me. we rate it below because you have had the draconian rule of Emergency a few decades before!" I was taken aback by this response and that prompted me to elaborately explain how democracy is a part of India's DNA and never in the past was any ruler able to impose an authoritarian rule for a long period all over the country.

Seen in this backdrop, although tragic, it may not be surprising to note that the global discourse about democracy has been largely oblivious to the democratic traditions ingrained in Indian culture.

This ignorance of foreigners not withstanding, the fact remains that a democratic spirit was always part of the Indian ethos. One of the principal reasons for the survival of the Indian civilization is the theoretical foundation of this spirit, which could easily be traced back to our long history of sustainable pluralism and spiritual democracy. At no point of time in India's history was the concept of a theoratic state a part of our ethos. There are several instances of Hindu Kings largeherartedly welcoming visitors and traders from across the seas and ensuring that they enjoy complete freedom of worship. With notions such as ekam sat vipra bahuda vadanti(the truth is one, but knowledgeable and wise persons interpret the same

differently) firmly rooted in the essentially Hindu ethos, no foreigners belonging to an alien way of worship ever faced any discrimination here.

Undoubtedly, democracy in India has evolved with the spirit of accommodation as its central pillar. As a consequence, a democratic approach that negates monopolist or hegemonic tendencies has remained a part of the popular and hence, the political culture of India. Renowned political scientist Robert A Dahl, in fact, emphatically endorses this reality when he says that democracy is the 'national ideology of India' It is a well known and widely accepted fact that the people of ancient India not only knew about democracy but also practiced it in one way or another. Ancient Indian scriptures. such as Aitareya Brahmana are replete with references suggesting that apart from monarchy, republics too existed in India in the 4th century BCE. In fsct, Dr B R Ambedakar had once famously observerd,'there was a time when India was studded with republics and even where there were monarchies, they were either elected or limited. They were never absolute, Historian and scholar Steve Muhlberger has pointed out:" By the time of Panini (5th century BCE), there was a tecnology for the process of corporate decision-making. Panini gives us the terms for vote, decsions reached by voting and the completion of a quorum."

Choosing leaders or rulers by voting was prevalent in India for several centuries. Janapadas and Mahajanapadas existed some 2,500 years ago and there are instances where, in the past, some of the rahas were also chosen by the janas or the people. Many Buddhist scholars have also pointed out as to how rules of parliamentary procedures were applied by the Buddha to the meetings of the sanghas during his lifetime.

While all these are historical facts, it is also true that India needs to be more vocal about this history a of democracy at the local level. These days, to be democratic is not enough; one has to articulately engage in advocacy of democracy, India can do so effectively on the global platforms in three ways. Firstly, by playing a bigger role in the untied Nations" Democracy fund , an organization of which our nation is prime donor. Scecondly, should also try and contribute in political party building in new and emerging democracies. Thirdly, India should take the lead and cultivate concepts like development democracy and provide leadership to developing countries from amongst the democratic nations.

**Writer: Vinay Sahasabuddhe,**
**President , ICCR and BJP Rajyasabha , MP,**
**Courtsey:- Indian Express, dt.10.12.2020**

## 15. ಭವಿಷ್ಯದ ಅಗತ್ಯಗಳಿಗಾಗಿ ಹೊಸ ಪಾರ್ಲಿಮೆಂಟ್

ಎಲ್ಲಾ ದೇಶಕ್ಕೂ ಒಂದು ಸಂದೇಶ ನೀಡುವುದಕ್ಕಿರುತ್ತದೆ. ಒಂದು ಉದ್ದೇಶ ಈಡೇರಿಸುವುದಕ್ಕಿರುತ್ತದೆ. ಒಂದು ಗುರಿ ತಲುಪುವುದಕ್ಕಿರುತ್ತದೆ. ಅಂತೆಯೇ, ಭಾರತದ ಧ್ಯೇಯ 'ಮಾನವಕುಲಕ್ಕೆ ಮಾರ್ಗದರ್ಶನ' ಮಾಡುವುದು. ಹೀಗೆಂದು ಸ್ವಾಮಿ ವಿವೇಕಾನಂದರು ಬಹಳ ಹಿಂದೆಯೇ ಘಂಟಾಘೋಷವಾಗಿ ಹೇಳಿದ್ದರು. ಅದೇ ರೀತಿ ಭಾರತವು ತನ್ನ ಸಂಸದೀಯ ಪ್ರಜಾಪ್ರಭುತ್ವದ ಮೂಲಕ ಸಾಮಾಜಿಕ ಕಲ್ಯಾಣದ ಉದ್ದೇಶವನ್ನು ಸಾಧಿಸಲು ಸಾಕಷ್ಟು ಶ್ರಮಿಸುತ್ತಾ ಬಂದಿದೆ.

ನಿನ್ನೆ ಒಂದು ಐತಿಹಾಸಿಕ ದಿನ. ಪ್ರಧಾನಿ ನರೇಂದ್ರ ಮೋದಿ ಅವರು ಅತ್ಯಾಧುನಿಕ ತ್ರಿಭುಜಾಕೃತಿಯ ಹೊಸ ಸಂಸತ್ ಭವನಕ್ಕೆ ಶಿಲಾನ್ಯಾಸ ಮಾಡಿದರು. 1,224 ಸಂಸದರು ಕುಳಿತುಕೊಳ್ಳಬಹುದಾದ ಭವ್ಯ ಕಟ್ಟಡವದು. ಆತ್ಮನಿರ್ಭರ ಭಾರತದ ಪ್ರತೀಕವಾಗಿ ತಲೆಯೆತ್ತಲಿರುವ ಈ ಹೊಸ 'ಪ್ರಜಾಪ್ರಭುತ್ವದ ದೇಗುಲ' ಈಗಾಗಲೇ ಇರುವ ಸುಂದರ ವೃತ್ತಾಕಾರದ ಸಂಸತ್ ಭವನದ ಮೂಲಸೌಕರ್ಯಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸಲಿದೆ. ನಮ್ಮ ಹಳೆಯ ಸಂಸತ್ ಭವನವನ್ನು 1912–13ರಲ್ಲಿ ವಿನ್ಯಾಸ ಮಾಡಿದವರು ಎಡ್ವಿನ್ ಲ್ಯೂಟನ್ಸ್ ಹಾಗೂ ಹರ್ಬರ್ಟ್ ಬೇಕರ್. ಮಧ್ಯಪ್ರದೇಶದ ಮೊರೇನಾದಲ್ಲಿರುವ ಚೌಸಾತ್ ಯೋಗಿನಿ ದೇಗುಲದಿಂದ ಸ್ಫೂರ್ತಿ ಪಡೆದು ಆ ವಿನ್ಯಾಸ ಮಾಡಿದ್ದರು. 1927ರಲ್ಲಿ ಉದ್ಘಾಟನೆಯಾದ ಈ ಸಂಸತ್ ಭವನ ಭಾರತದ ಅತ್ಯಂತ ಹಳೆಯ ಪಾರಂಪಾರಿಕ ಕಟ್ಟಡಗಳಲ್ಲಿ ಒಂದು. ಈಗ ಹೊಸ ಕಟ್ಟಡ ಪ್ರತಿಯೊಬ್ಬ ಭಾರತೀಯನ ಸ್ವಾಭಿಮಾನದ ಪ್ರತೀಕವಾಗಿ, 'ಏಕ ಭಾರತ ಶ್ರೇಷ್ಠ ಭಾರತ' ಎಂಬ ಧ್ಯೇಯದೊಂದಿಗೆ 2022ರ ಚಳಿಗಾಲದ ಅಧಿವೇಶನದೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ನಾವೀಗ ಬಳಸುತ್ತಿರುವ ಸಂಸತ್ ಭವನದಲ್ಲಿನ ಕೊರತೆಗಳ ಬಗ್ಗೆ ಬಹಳ ವರ್ಷಗಳಿಂದ ಕಳಕಳಿ ವ್ಯಕ್ತವಾಗುತ್ತಿತ್ತು. ಅದರಲ್ಲೂ ಕಳೆದ ಮಳೆಗಾಲದ ಅಧಿವೇಶನವನ್ನು ಕೋವಿಡ್–19 ಮಹಾಮಾರಿಯ ಕಾಲದಲ್ಲಿ ನಡೆಸಿದಾಗ ಈ ಸಂಸತ್ ಭವನದ ಇತಿಮಿತಿಗಳು ಇನ್ನಷ್ಟು ಢಾಳಾಗಿ ಅನುಭವಕ್ಕೆ ಬಂದವು. ಈ ಸಂಸತ್ ಭವನದಲ್ಲಿರುವ ಲೋಕಸಭೆ, ರಾಜ್ಯಸಭೆ ಹಾಗೂ ಸೆಂಟ್ರಲ್ ಹಾಲ್‌ಗಳು ಕ್ರಮವಾಗಿ 552, 245 ಹಾಗೂ 436 ಜನ ಕುಳಿತುಕೊಳ್ಳಬಹುದಾದ ಸಾಮರ್ಥ್ಯ ಹೊಂದಿವೆ. ಹೆಚ್ಚಿನ ಆಸನಗಳ ನಡುವೆ ಇನ್ನೊಂದು ಡೆಸ್ಕ್ ಹಾಕಲು ಜಾಗವಿಲ್ಲ.

ಆದರೆ, ಹೊಸ ಸಂಸತ್ ಭವನದಲ್ಲಿ ಈಗಿನ ಹಾಗೂ ಭವಿಷ್ಯದ ಅಗತ್ಯಗಳಿಗೆ ತಕ್ಕಂತೆ ಸಕಲ ವ್ಯವಸ್ಥೆಗಳಿರುತ್ತದೆ. ಎರಡೂ ಸದನಗಳಲ್ಲೂ ಬೇಕಾದಷ್ಟು ಆಸನಗಳನ್ನು ಹಾಕಲು ಜಾಗವಿರುತ್ತದೆ. ಜಂಟಿ ಕಲಾಪ ನಡೆಸುವುದಕ್ಕೆ ದೊಡ್ಡ ಹಾಲ್ ಇರುತ್ತದೆ. ಅದಕ್ಕಿಂತ ಹೆಚ್ಚಾಗಿ 2026ರಲ್ಲಿ ನಡೆಯುವ ಸಂಸದೀಯ ಕ್ಷೇತ್ರಗಳ ಮರುವಿಂಗಡಣೆಯಲ್ಲಿ ಸಂಸತ್ ಸದಸ್ಯರ ಸಂಖ್ಯೆ ಹೆಚ್ಚಿದರೆ ಆಗ ಲೋಕಸಭೆಯಲ್ಲಿ 888 ಸದಸ್ಯರು ಕುಳಿತುಕೊಳ್ಳಲು ಹಾಗೂ ರಾಜ್ಯಸಭೆಯಲ್ಲಿ 384 ಆಸನಗಳನ್ನು ಹಾಕಲು ಸಾಧ್ಯವಾಗುವಂತೆ ಹೊಸ ಸಂಸತ್ ಭವನ ನಿರ್ಮಾಣವಾಗುತ್ತದೆ. 130 ಕೋಟಿ ಜನಸಂಖ್ಯೆಯ ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವದ ಎಂಬ ಹೆಗ್ಗಳಿಕೆಗೆ ತಕ್ಕಂತೆ ಈ ಸಂಸತ್ ಭವನವೂ ಬೃಹತ್ತಾಗಿಯೇ ಇರಲಿದೆ.

ನಮ್ಮ ದೇಶಕ್ಕೆ ಸಂವಿಧಾನವೇ ಪರಮೋಚ್ಚವೆಂಬುದು ಎಲ್ಲರಿಗೂ ಗೊತ್ತು. ಇದೊಂದು ಜೀವಂತ ದಾಖಲೆ. ಸುಪ್ರೀಂಕೋರ್ಟ್ ಹೇಳುವಂತೆ ಅಥವಾ ಸಂಸತ್ತಿಗೆ ತೋಚಿದಂತೆ ಸಂವಿಧಾನ ಬದಲಾಗುವುದಿಲ್ಲ. ನ್ಯಾಯಾಂಗ, ಕಾರ್ಯಾಂಗ ಹಾಗೂ ಶಾಸಕಾಂಗಗಳೂ ಸಂವಿಧಾನದ ಮಕ್ಕಳು. ಇವುಗಳ ಅಧಿಕಾರ ಹಾಗೂ ಕಾರ್ಯವಿಧಾನಗಳು ಸಂವಿಧಾನದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿವೆ.

ಈ ಐತಿಹಾಸಿಕ ಸಂದರ್ಭದಲ್ಲಿ ನಾನು ನವೆಂಬರ್ 26ರಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾರತದ ಎಲ್ಲಾ ಶಾಸನಾ ಸಭೆಗಳ ಸದಸ್ಯರ 80ನೇ ಅಧಿವೇಶನವನ್ನುದ್ದೇಶಿಸಿ ಮಾತನಾಡಿದ ವೇಳೆ ಭಿತ್ತಿದ್ದ ಕೆಲ ಹೊಸ ಚಿಂತನೆಗಳನ್ನು ಮತ್ತೊಮ್ಮೆ ನೆನಪಿಸಲು ಬಯಸುತ್ತೇನೆ. ದೇಶದ ಜನರ

ಒಳಿತಿಗಾಗಿ ಶಾಸನ ಸಭೆಗಳ ಸದಸ್ಯರು ಈ ವಿಷಯಗಳ ಮೇಲೆ ಮತ್ತೊಮ್ಮೆ ಗಂಭೀರವಾಗಿ ಗಮನ ಹರಿಸಿ ಇವುಗಳ ಜಾರಿಗೆ ಕಾರ್ಯಪ್ರವೃತ್ತರಾಗುವ ಅಗತ್ಯವಿದೆ.

1. ನಮ್ಮ ಕಾಯಿದೆಗಳು, ನಿಯಮಗಳು ಹಾಗೂ ಮಾರ್ಗದರ್ಶಿ ಸೂತ್ರಗಳನ್ನು ಜನಸಾಮಾನ್ಯರು ಅರ್ಥ ಮಾಡಿಕೊಳ್ಳುವುದು ಕಷ್ಟವೆಂಬುದು ನಮಗೆ ಗೊತ್ತಿದೆ. ಕಾಯಿದೆ ಕಾನೂನುಗಳು ಬಹಳ ಸಂಕೀರ್ಣವಾಗಿರುತ್ತದೆ ಎಂಬ ದೂರು ಈ ಕಾಯಿದೆಗಳಷ್ಟೇ ಹಳೆಯದು. ಇವುಗಳಲ್ಲಿ ಬಳಸುವ ತಾಂತ್ರಿಕ ಭಾಷೆಗಳು ಜನರನ್ನು ಗೊಂದಲಕ್ಕೀಡು ಮಾಡುತ್ತದೆ. ಬಹಳಷ್ಟು ದೇಶಗಳಲ್ಲೀಗ ಸರಳ ಇಂಗ್ಲೀಷ್ ಅಭಿಯಾನ ಆರಂಭವಾಗಿದೆ. ಬ್ರಿಟನ್, ಆಸ್ಟ್ರೇಲಿಯಾ, ಕೆನಡಾ, ನ್ಯೂಜಿಲೆಂಡ್, ಅಮೆರಿಕಾ ಮುಂತಾದ ಅನೇಕ ದೇಶಗಳು ತಮ್ಮ ಕಾನೂನುಗಳ ಭಾಷೆಯನ್ನು ಸರಳಗೊಳಿಸುತ್ತಿವೆ. ಭಾರತದಲ್ಲಿ ಈ ಕೆಲಸ ಇನ್ನೂ ಆರಂಭವಾಗಿಲ್ಲ. ಜನರ ಒಳಿತಿನ ದೃಷ್ಟಿಯಿಂದ ಕಾಯಿದೆ, ನಿಯಮಗಳು ಹಾಗೂ ಮಾರ್ಗದರ್ಶಿ ಸೂತ್ರಗಳನ್ನು ಜನರಿಗೆ ಸುಲಭವಾಗಿ ಅರ್ಥವಾಗುವಂತೆ ಸರಳವಾದ ಭಾಷೆಯಲ್ಲಿ ರೂಪಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಿದೆ.

2. ಕಾಯಿದೆಯ ಪುಸ್ತಕಗಳನ್ನು ಅನಗತ್ಯವಾಗಿ ಭಾರಗೊಳಿಸುತ್ತಿರುವ, ಕೆಲಸಕ್ಕೆ ಬಾರದ ಹಾಗೂ ಇತರ ಕಾಯಿದೆಗಳ ಜೊತೆಗೆ ಘರ್ಷಣೆಗಿಳಿಯುವ ನಿರುಪಯುಕ್ತ ಹಳೆಯ ಕಾಯಿದೆಗಳನ್ನು ರದ್ದುಗೊಳಿಸಲು ಕೇಂದ್ರ ಸರಕಾರ ಹೊರಟಿವೆ. ಈ ಕಾಯಿದೆಗಳು ದೇಶದ ಅಭಿವೃದ್ಧಿಗೂ ಸುಗಮ ಆಡಳಿತಕ್ಕೂ ತೊಡಕಾಗಿವೆ. ಹೇಗೆ ಕಾನೂನು ರೂಪಿಸುವುದು ಶಾಸನ ಸಭೆಗಳ ಸದಸ್ಯರ ನಿತ್ಯ ಕೆಲಸವಾಗಿದೆಯೋ ಹಾಗೆಯೇ ನಿರುಪಯುಕ್ತ ಕಾಯಿದೆಗಳನ್ನು ಗುರುತಿಸಿ ರದ್ದುಪಡಿಸುವ ಕೆಲಸವು ಕಾಲಕಾಲಕ್ಕೆ ಆಗಬೇಕು. ಅಂತಹದ್ದೊಂದು ಪರಾಮರ್ಶೆ ವ್ಯವಸ್ಥೆ ಜಾರಿಗೆ ಬಂದರೆ ನಮ್ಮ ಕಾನೂನು ಪುಸ್ತಕಗಳು ತೆಳುವಾಗುತ್ತವೆ. ಈ ಉದ್ದೇಶ ಈಡೇರಿಸಲು ಇಲ್ಲಿಯವರೆಗೆ 1486 ನಿರುಪಯುಕ್ತ ಕೇಂದ್ರ ಸರಕಾರಿ ಕಾಯಿದೆಗಳನ್ನು ಸಂಸತ್ತು ರದ್ದುಪಡಿಸಿದೆ. ಇದೇ ಹೆಜ್ಜೆಯನ್ನು ಎಲ್ಲಾ ರಾಜ್ಯ ಸರಕಾರಗಳು ಇರಿಸುವ ಅಗತ್ಯವಿದೆ.

3.ಇತ್ತೀಚೆಗೆ ಕೇಂದ್ರ ಸರಕಾರದ ಮಟ್ಟದಲ್ಲಿ ಕಾಯಿದೆಗಳನ್ನು ತಿದ್ದುಪಡಿ ಮಾಡುವಾಗ ಅದಕ್ಕೆ 'ಸೂರ್ಯಾಸ್ತ ನಿಯಮ'(ಸನ್‌ಸೆಟ್ ಕ್ಲಾಸ್) ಅಳವಡಿಸಿಕೊಳ್ಳುವ ವ್ಯವಸ್ಥೆ ಆರಂಭವಾಗಿದೆ. (ಉದಾಹರಣೆಗೆ, ಖನಿಜಗಳ ಕಾಯಿದೆ ತಿದ್ದುಪಡಿ–2020). ಈ ನಿಯಮವನ್ನು ಎಲ್ಲಾ ತಿದ್ದುಪಡಿ ಕಾಯಿದೆಗಳಲ್ಲಿ ಸೇರಿಸಬೇಕಿದೆ. ಏಕೆಂದರೆ ಸಾಮಾನ್ಯ ನಿಯಮಗಳ ಕಾಯಿದೆ –1897ರ ಸೆಕ್ಷನ್ 6ಎ ಪ್ರಕಾರ ತಿದ್ದುಪಡಿ ಕಾಯಿದೆಗಳು ಜಾರಿಗೆ ಬಂದಾಗ ಮಾತೃ ಕಾಯಿದೆಯಲ್ಲಿ ಲೀನಗೊಳ್ಳುತ್ತವೆ. ಆಗ ಅಂತಹ ತಿದ್ದುಪಡಿ ಕಾಯಿದೆಗಳನ್ನು ಮುಂದೆ ರದ್ದುಗೊಳಿಸಿದರೆ ಮಾತೃ ಕಾಯಿದೆಯಲ್ಲಿ ಅವುಗಳ ನಿಯಮಗಳು ಹಾಗೇ ಜಾರಿಯಲ್ಲಿರುತ್ತದೆ. ಈ ಸಮಸ್ಯೆ ಬಗೆಹರಿಸಿಕೊಳ್ಳಲು ಎಲ್ಲ ರಾಜ್ಯಗಳು 'ಸೂರ್ಯಾಸ್ತ ನಿಯಮ'ವನ್ನು ಕಾಯಿದೆಗಳ ತಿದ್ದುಪಡಿ, ಕಾಯಿದೆಗಳ ರದ್ದತಿ ಹಾಗೂ ಸಾಮಾನ್ಯ ಕಾಯಿದೆಯಲ್ಲಿ ಸೇರಿಸಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಆಗ ಅಂತಹ ಕಾಯಿದೆಗಳನ್ನು ಔಪಚಾರಿಕವಾಗಿ ರದ್ದುಪಡಿಸುವ ಅಗತ್ಯ ತಲೆದೋರುವುದಿಲ್ಲ.

4. ಸಂಸತ್ತಿನ ಎರಡು ಸದನಗಳೂ ಸೇರಿದಂತೆ ನಮ್ಮ ದೇಶದಲ್ಲಿರುವ ಎಲ್ಲಾ ಶಾಸನ ಸಭೆಗಳನ್ನು ಡಿಜಿಟಲೀಕರಣಗೊಳಿಸಬೇಕು ಎಂದು ಪ್ರಧಾನಿ ಒತ್ತಿ ಹೇಳಿದ್ದಾರೆ. ಇದಕ್ಕಾಗಿ ಕೇಂದ್ರ ಹಾಗೂ ರಾಜ್ಯ ಮಟ್ಟದ ಸಿಂಗಲ್ ಡ್ಯಾಶ್ ಬೋರ್ಡ್ ಇರಬೇಕೆಂದು ಪ್ರತಿಪಾದಿಸಿದ್ದಾರೆ. ಡಿಜಿಟಲ್ ಇಂಡಿಯಾ ಯೋಜನೆಯಡಿ ಜಾರಿಗೆ ತಂದಿರುವ ನ್ಯಾಷನಲ್ ಇ–ಧಾನ್ ಆ್ಯಪ್ ಮೂಲಕ ಅದನ್ನು ಸಾಧಿಸಲು ಸಾಧ್ಯವಿದೆ. 2022ರ ಚಳಿಗಾಲದ ಅಧಿವೇಶನದೊಳಗೆ ಸಂಸತ್ತಿನ ಸಂಪೂರ್ಣ ಕಲಾಪವನ್ನು ಡಿಜಿಟಲೀಕರಣಗೊಳಿಸಲು ಇದೊಂದು ಸುವರ್ಣಾವಕಾಶ. ಏಕೆಂದರೆ, ಹೊಸ ಸಂಸತ್ ಭವನದಲ್ಲಿ ಎಲ್ಲ ಡಿಜಿಟಲ್ ಮೂಲಸೌಕರ್ಯಗಳಿರುತ್ತದೆ. ಸಂಸತ್ತಿನ ಎರಡು ಸದನಗಳಿಗಾಗಿ 'ಇ–ಸಂಸದ್' ಹಾಗೂ ಎಲ್ಲ

ರಾಜ್ಯಗಳ ವಿಧಾನಮಂಡಲಕ್ಕಾಗಿ 'ಇ–ಧಾನ್' ಎಂಬ ಎರಡು ಯೋಜನೆಗಳನ್ನು ಈಗಾಗಲೇ ಕೇಂದ್ರ ಸರಕಾರ ಆರಂಭಿಸಿದೆ.

ಹಾಗೆಯೇ ಅನಗತ್ಯವಾಗಿ ಅವಿಶ್ವಾಸ ಗೊತ್ತುವಳಿ ಮಂಡಿಸುವ ಪರಿಪಾಠಗಳನ್ನು ತೊಡೆದುಹಾಕಿ ತೀರಾ ಅಗತ್ಯವಿದ್ದಾಗ ಅಥವಾ ಅರ್ಥಪೂರ್ಣ ಸಂದರ್ಭದಲ್ಲಿ ಮಾತ್ರ ಅವಿಶ್ವಾಸ ಗೊತ್ತುವಳಿ ಮಂಡಿಸುವಂತೆ ನಿಯಮ ಜಾರಿಗೊಳಿಸುವ ಬಗ್ಗೆಯು ರಚನಾತ್ಮಕ ಚರ್ಚೆ ನಡೆಯಬೇಕಿದೆ. ಜರ್ಮನಿಯಲ್ಲಿರುವಂತೆ ನಮ್ಮಲ್ಲೂ ಸ್ಥಿರ ಸರಕಾರ ಹಾಗೂ ಉತ್ತಮ ಆಡಳಿತವನ್ನು ಖಾತ್ರಿಗೊಳಿಸುವ ರೀತಿಯಲ್ಲಿ ಅವಿಶ್ವಾಸ ಅಥವಾ ವಿಶ್ವಾಸ ಗೊತ್ತುವಳಿಯನ್ನು ಮಂಡಿಸಲು ಸಂವಿಧಾನಕ್ಕೆ ತಿದ್ದುಪಡಿ ತಂದು, ಶಾಸನಸಭೆಗಳ ನಿಯಮಗಳಲ್ಲಿ ಸೇರ್ಪಡೆಗೊಳಿಸಲು ಸಾಧ್ಯವಿದೆ.

ಜರ್ಮನಿಯ ಸಂವಿಧಾನದ 67ನೇ ಪರಿಚ್ಛೇದದ ಪ್ರಕಾರ ಅವಿಶ್ವಾಸ ಗೊತ್ತುವಳಿ ಮಂಡಿಸಬೇಕಾದರೆ ಪರ್ಯಾಯ ವ್ಯವಸ್ಥೆಯನ್ನು ಸೂಚಿಸಬೇಕಾಗುತ್ತದೆ. ಈ ನಿಯಮದ ಪ್ರಕಾರ, ಒಂದು ಸರಕಾರದ ಬಹುಮತಕ್ಕೆ ಪರೀಕ್ಷೆ ಎದುರಾದಾಗ –ಅಂದರೆ ಅವಿಶ್ವಾಸ ಗೊತ್ತುವಳಿ ಮಂಡಿಸುವಾಗ– ಅವಿಶ್ವಾಸ ಗೊತ್ತುವಳಿ ಮಂಡಿಸುವವರು ಪರ್ಯಾಯ ವ್ಯವಸ್ಥೆಯ ಬಗ್ಗೆಯೂ ಸದನಕ್ಕೆ ತಿಳಿಸಿಕೊಡಬೇಕಾಗುತ್ತದೆ. ಇದರೊಂದಿಗೆ ನಮ್ಮ ದೇಶದ ಕಟ್ಟಕಡೆಯ ವ್ಯಕ್ತಿಗೂ ಪ್ರಜಾಸತ್ತಾತ್ಮಕ ಮೌಲ್ಯಗಳ ಅಡಿ ಉತ್ತಮ ಸೇವೆ ಸಲ್ಲಿಸುವ ವಾಗ್ದಾನವನ್ನು ಇನ್ನೊಮ್ಮೆ ನೀಡೋಣ.

**ಲೇಖಕರು: ಪ್ರಹ್ಲಾದ ಜೋಶಿ,**
**ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವರು.**
**ಆಧಾರ:ವಿಶ್ವವಾಣಿ, ದಿನಾಂಕ:11.12.2020**

## 16. ಸಭಾಪತಿ ಪೀಠದ ಗೌರವ ಬಹುಮುಖ್ಯ

ಪ್ರಜಾಪ್ರಭುತ್ವ ಮತ್ತು ಸಂಸದೀಯ ವ್ಯವಸ್ಥೆಯಲ್ಲಿ ವಿಧಾನ ಪರಿಷತ್‌ನ ಸಭಾಪತಿ ಸ್ಥಾನಕ್ಕೆ ಅತ್ಯುನ್ನತ ಗೌರವವಿದೆ. ವಿಶ್ವಾಸ–ಅವಿಶ್ವಾಸ ಸೋಲು–ಗೆಲುವು ಏನೇ ಇದ್ದರೂ ಯಾವುದೇ ಹಂತದಲ್ಲೂ ಈ ಸ್ಥಾನದ ಗೌರವಕ್ಕೆ ಚ್ಯುತಿ ಬರಬಾರದು. ಅಷ್ಟೇ ಅಲ್ಲ ಸ್ಥಾನದಲ್ಲಿ ಕೂರುವವರ ನೈತಿಕತೆಯು ಬಹುಮುಖ್ಯ. ಹೀಗೆಂದವರು 8 ವರ್ಷಗಳ ಕಾಲ ಮೇಲ್ಮನೆ ಸಭಾಪತಿಯಾಗಿ ಕೆಲಸ ಮಾಡಿದ್ದ ಡಿ.ಹೆಚ್. ಶಂಕರಮೂರ್ತಿ ಅವರು. ಪ್ರಸ್ತುತ ವಿಧಾನ ಪರಿಷತ್ ಸಭಾಪತಿ ಪ್ರತಾಪ್ ಚಂದ್ರಶೆಟ್ಟಿ ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆ ಪ್ರಯತ್ನ ನಡೆದಿರುವ ಹಿನ್ನೆಲೆಯಲ್ಲಿ ಡಿ.ಹೆಚ್.ಎಸ್ ಅವರನ್ನು ಸಂದರ್ಶಿಸಿತು. ಅವರ ಅಭಿಪ್ರಾಯದ ಪ್ರಮುಖಾಂಶಗಳು ಹೀಗಿವೆ.

**ತಿರಸ್ಕರಿಸುವ ಹಕ್ಕು ಇದೆ:**–ಕರ್ನಾಟಕ ವಿಧಾನಪರಿಷತ್‌ನ ಅವಿಶ್ವಾಸ ನಿರ್ಣಯದ ವಿದ್ಯಮಾನಗಳು ನಾನು ಗ್ರಹಿಸಿದಂತೆ ಪ್ರಜಾಪ್ರಭುತ್ವದ ಅವಹೇಳನ ಎನಿಸುತ್ತದೆ. ಮೇಲ್ಮನೆಯ ನಿಯಮ, ನಡಾವಳಿ ಸ್ಪಷ್ಟವಾಗಿದೆ ಸದನದ ಯಾವುದೇ ಒಬ್ಬ ಸದಸ್ಯರು ಸಭಾಪತಿ ವಿರುದ್ದ ಅವಿಶ್ವಾಸ ನಿರ್ಣಯ ಮಂಡಿಸಲು ಸ್ವತಂತ್ರ್ಯರು. ಇದರಲ್ಲಿ ಎರಡು ಮಾತಿಲ್ಲ. ಈ ಅವಿಶ್ವಾಸ ನಿರ್ಣಯ ಕಾನೂನಾತ್ಮಕವಾಗಿ ಸರಿಯಿಲ್ಲ ಎನಿಸಿದಲ್ಲಿ ತಮ್ಮ ಕಚೇರಿಯಲ್ಲೇ ಅದನ್ನು ತಿರಸ್ಕರಿಸುವ ಸಂಪೂರ್ಣ ಹಕ್ಕು ಸಭಾಪತಿ ಅವರಿಗಿದೆ.

**ಪೀಠ ಅಲಂಕರಿಸುವಂತಿಲ್ಲ:**–ಆದರೆ ಇದಕ್ಕೆ ಜೀವಬರುವುದು 14 ದಿನಗಳ ನಂತರ ಈ ಕಾಲಾವಧಿಯೂ ಕುತೂಹಲಕಾರಿ ಗೊತ್ತುವಳಿ ತಂದವರು ಮನಸ್ಸು ಬದಲಿಸಿ ಹಿಂಪಡೆಯಲು ಬಯಸಿದರೆ ಎಂಬ ಕಾರಣಕ್ಕೆ ನಿಯಮದಲ್ಲೇ ಅವಕಾಶ ಕಲ್ಪಿಸಲಾಗಿದೆ. 14 ದಿನಗಳ ಬಳಿಕ ಸಭಾಪತಿ ಸದನದಲ್ಲಿ ಈ ಒಂದೇ ವಿಷಯ (ನೋಟಿಸ್ ಟು ದಿ ಸಬ್ಜೆಕ್ಟ್) ಮಂಡನೆಯಾಗಿ ಅಗತ್ಯವಿದ್ದಲ್ಲಿ ಚರ್ಚೆಯಾಗುತ್ತದೆ. ಆದರೆ ಯಾರ ವಿರುದ್ಧ ಅವಿಶ್ವಾಸ ಮಂಡನೆಯಾಗಿರುತ್ತದೋ ಅವರು ಸಭಾಪತಿ ಸ್ಥಾನ ಅಲಂಕರಿಸುವಂತಿಲ್ಲ ಬದಲಿಗೆ ಸದಸ್ಯ ಸ್ಥಾನದಲ್ಲಿ ಕುಳಿತು ಮತದಾನ ಮಾಡಬಹುದು. ಉಪಸಭಾಪತಿ ಕಲಾಪ ನಡೆಸುಕೊಡುತ್ತಾರೆ.

**ಗೌರವ ಪ್ರಶ್ನೆಯೂ ಹೌದು:–** ನನ್ನ ಗಮನಕ್ಕೆ ಬಂದಂತೆ ಪರಿಷತ್‌ನಲ್ಲಿ ಸದ್ಯಕ್ಕೆ ಸಂಖ್ಯಾಬಲದ ಸರ್ಕಸ್ ನಡೆದಿದೆ. ಮೇಲ್ನೋಟಕ್ಕೆ ಇದ್ದದ್ದು ತಮ್ಮ ಪರವಾಗಿಲ್ಲ ಎನಿಸಿದರೆ, ಸಭಾಪತಿಯಾದವರು ಒಂದು ಕ್ಷಣವು ಪೀಠದಲ್ಲಿ ಮುಂದುವರೆಯುವುದು ಸಮಂಜಸವಲ್ಲ. ಅದು ಪ್ರಜಾಪ್ರಭುತ್ವಕ್ಕೆ ಅಪಮಾನ ಮಾಡಿದಂತೆ. ಜೊತೆಗೆ ನೈತಿಕತೆಯ ಪ್ರಶ್ನೆಯೂ ಎದುರಾಗುತ್ತದೆ. ಅದೇನೇಯಿದ್ದರೂ ಸಭಾಪತಿ ಪೀಠಕ್ಕೆ ನಮ್ಮ ಸಂವಿಧಾನ ಮತ್ತು ಸಂಸದೀಯ ವ್ಯವಸ್ಥೆಯಲ್ಲಿ ಅತ್ಯಮೂಲ್ಯ ಗೌರವವಿದೆ. ಅದನ್ನು ಕಾಪಾಡುವುದು ಪೀಠದಲ್ಲಿದ್ದವರ ಗುರುತರ ಜವಬ್ದಾರಿ ಆಗಿರುತ್ತದೆ.

**ಸಿ.ಎಂ ನಮಸ್ಕರಿಸುವ ಪದ್ದತಿ:**–ಸದನಕ್ಕೆ ಮುಖ್ಯಮಂತ್ರಿಯವರು ಪ್ರವೇಶ ಮತ್ತು ನಿರ್ಗಮನದ ವೇಳೆ ಸಭಾಪತಿ ಸ್ಥಾನಕ್ಕೆ ಕೈ ಮುಗಿಯುವ ಸಂಪ್ರದಾಯವಿದೆ. ಆದರೆ ಸಭಾಪತಿ ಪ್ರತಿ ನಮಸ್ಕಾರದ ಪದ್ಧತಿ ಇಲ್ಲ. ಹಾಗಾಗಿ ಈ ಪೀಠಕ್ಕೆ ನಮ್ಮ ವ್ಯವಸ್ಥೆಯಲ್ಲಿ ಎಂತಹ ಮಹತ್ವ ಇದೆ ಎಂದು ಅರ್ಥೈಸಿಕೊಳ್ಳಬಹುದು. ಇಂದಿನ ದಿನಗಳಲ್ಲಿ ಪೀಠದ ಮಹತ್ವ ಮತ್ತಷ್ಟು ವೃದ್ಧಿಸುವಂತಹ ಪೂರಕ ವಿದ್ಯಮಾನಗಳ ನಡೆಯಬೇಕಿದೆ.

**ಮಹತ್ವದ ಮಂಗಳವಾರ:**–ಇನ್ನು ಕಲಾಪ ಸಲಹಾ ಸಮಿತಿಯಲ್ಲಿ ಆಡಳಿತ ಪ್ರತಿಪಕ್ಷ ಸದಸ್ಯರು ಅಧಿವೇಶನ ನಡೆಯುವ ಇಲ್ಲವೆ ಅಂತ್ಯಗೊಳಿಸುವ ಬಗ್ಗೆ ತಮ್ಮ–ತಮ್ಮ ಪ್ರಸ್ತಾವನೆ ಮಂಡಿಸಿರಬಹುದು. ಅದು ನಿರ್ಣಯ ಆಗಿರುತ್ತದೆ ಎಂದೇನಿಲ್ಲ. ವಿಶೇಷ ಅಧಿವೇಶನ ನಡೆದಲ್ಲಿ ಅದಕ್ಕೆ ಸಭಾಪತಿ ಹಾಜರಾಗುವರೋ ಇಲ್ಲವೋ ಅಥವಾ ಬಂದು ಮತ್ತೆ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲೂಬಹುದು. ಹಾಗಾದಲ್ಲಿ ದೇಶದ ಇತಿಹಾಸದಲ್ಲಿ ಮೊದಲ ಬಾರಿಗೆ ಇಂತಹ ಪ್ರಕರಣ ದಾಖಲಾಗುವುದಷ್ಟೇ ಅಲ್ಲ ಸಂವಿಧಾನ ಬಿಕ್ಕಟ್ಟಿಗೂ ನಾಂದಿಯಾಗಲಿದೆ.

**ರಾಜಕೀಯ ಲೆಕ್ಕಚಾರ ದೌರ್ಭಾಗ್ಯ:–** ಈ ಸ್ಥಾನದ ಭವಿಷ್ಯವನ್ನು ರಾಜಕೀಯ ಲೆಕ್ಕಚಾರದಡಿ ನೋಡುವುದು ದೌರ್ಭಾಗ್ಯದ ಸಂಗತಿ. ಜೊತೆಗೆ ಭಂಡತನವು ಆಗಬಹುದು. ನಾನು ಕೂಡ 8 ವರ್ಷ ಮೇಲ್ಮನೆ ಸಭಾಪತಿ ಸ್ಥಾನ ನಿರ್ವಹಿಸಿದ್ದೇನೆ. ನನ್ನ ವಿರುದ್ಧವು ಅಂದು ಕಾಂಗ್ರೆಸ್ ಸದಸ್ಯ ವಿ.ಎಸ್.ಉಗ್ರಪ್ಪ ಅವರು ಅವಿಶ್ವಾಸ ನಿರ್ಣಯ ತಂದಿದ್ದರು. ಆದರೆ ಅಂದು ನನಗೆ ಸಂಖ್ಯಾಬಲದ ವಿಶ್ವಾಸವಿತ್ತು. ಅದರಲ್ಲಿ ಯಶಸ್ಸನ್ನು ಕಂಡಿದ್ದೆ. ಆದರೆ ಈವತ್ತಿನ ಸ್ಥಿತಿ ಸಭಾಪತಿ ಸ್ಥಾನದಲ್ಲಿರುವವರಿಗೆ ಪೂರಕವಾಗಿದೆಯೇ ಎನ್ನುವುದೇ ಪ್ರಶ್ನಾರ್ಹ. ಇಲ್ಲ ಎಂದಾದಲ್ಲಿ ಕುರ್ಚಿ ಗೌರವ ಕಾಪಾಡುವ ಜೊತೆಗೆ ನೈತಿಕತೆ ಪ್ರಶ್ನೆಯಾಗಿ ಪರಿಗಣಿಸಿ ರಾಜೀನಾಮೆ ಕೊಡುವುದು ಒಳ್ಳೆಯದು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:13.12.2020.

## 17. ಅವಿಶ್ವಾಸ ನಿರ್ಣಯಕ್ಕೆ ಮರುಜೀವ

1993ರಲ್ಲಿ ಶಾಸನಸಭೆ ಅಧಿವೇಶನದಲ್ಲಿದ್ದ ಸಂದರ್ಭ. ಆಗಿನ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ವಿರುದ್ಧ ಭಿನ್ನಮತೀಯರ ಚಟುವಟಿಕೆ ನಿರ್ಣಾಯಕ ಘಟ್ಟ ತಲುಪಿತ್ತು. ಕಾಂಗ್ರೆಸ್ ಶಾಸಕಾಂಗ ಪಕ್ಷ ಸ್ಪಷ್ಟವಾಗಿ ಎರಡು ಹೋಳುಗಳಾಗಿದ್ದವು. ಈ ಸಮಯವನ್ನು ನೋಡಿಕೊಂಡು ಭಿನ್ನಮತೀಯ ಶಾಸಕರು ಕಂದಾಯ ಮಂತ್ರಿ ಸ್ಥಾನದಿಂದ ಕೆಳಗಿಳಿದಿದ್ದ ಎಂ.ರಾಜಶೇಖರ ಮೂರ್ತಿ ಅವರ ನಿವಾಸದಲ್ಲಿ ಸೇರಿ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವ ತೀರ್ಮಾನಕ್ಕೆ ಬಂದರು. ಭಿನ್ನಮತೀಯ ಶಾಸಕರ ವಕ್ತಾರರಾದ ಎ.ಕೆ.ಅನಂತಕೃಷ್ಣ ಹಾಗೂ ಡಾ:ಎ.ಬಿ.ಮಲಕಾರೆಡ್ಡಿ ಅವರು ಸಭೆಯ ಕಲಾಪದ ವಿವರಗಳನ್ನು ಪತ್ರಕರ್ತರ ಮುಂದೆ ವಿವರಿಸಿ ನಾಯಕತ್ವದಲ್ಲಿ ವಿಶ್ವಾಸ ಕಮರಿಹೋಗಿರುವುದರಿಂದ ಅವಿಶ್ವಾಸ ನಿರ್ಣಯ ಮಂಡನೆಗೆ ತೀರ್ಮಾನಿಸಲಾಗಿದೆ ಎಂದು ಸಾರಿದರು. ಇದರ ಪ್ರಕಾರ ನಿರ್ಣಯದ ಪ್ರಸ್ತಾವವೂ ಸಭೆಯಲ್ಲಿ ಮಂಡನೆಯಾಗಿ ಸಭಾಧ್ಯಕ್ಷ ವಿ.ಎಸ್ ಕೌಜಲಗಿ  ಅವರು ಸಾಕಷ್ಟು ಚರ್ಚೆಯ ನಂತರ ನಿರ್ಣಯದ ಮೇಲೆ ಚರ್ಚೆಗೆ ಅವಕಾಶ ಕಲ್ಪಿಸುವ ಭರವಸೆ ನೀಡಿದರು. ಆಗಿನ ವಿಧಾನಸಭೆಯ ಕಲಾಪ ಕಾಂಗ್ರೆಸ್ ಪಕ್ಷದ ಭಿನ್ನಮತದಿಂದಾಗಿ ಸಾರ್ವಜನಿಕರ ಕುತೂಹಲವನ್ನು ಕೆರಳಿಸುತ್ತಿತ್ತು. ಬಂಗಾರಪ್ಪ ಅವರು ಪದಚ್ಯುತಿಗೊಂಡ ನಂತರ ಕಾಂಗ್ರೆಸ್ ಶಾಸಕಾಂಗ ಪಕ್ಷ ಒಡೆದ ಮನೆಯಾಗಿತ್ತು. ಇದಕ್ಕೆ ಮುಖ್ಯ ಕಾರಣ ನಾಯಕರ ಸ್ವಪ್ರತಿಷ್ಠತೆ ಜೊತೆಗೆ ಮಂತ್ರಿ ಸ್ಥಾನ ದಕ್ಕದ್ದೇ ಇರುವ ಅತೃಪ್ತಿ. ಇದಲ್ಲದೆ ಬಂಗಾರಪ್ಪನವರ ಸರ್ಕಾರದ ಕಾಲದಲ್ಲಿ ಜರುಗಿದ ಕ್ಲಾಸಿಕ್ ಕಂಪ್ಯೂಟರ್ ಪ್ರಕರಣ, ಪಿಸಿ ಡೆಂಟಲ್ ಕಾಲೇಜ್ ಪ್ರಕರಣಗಳನ್ನು ಸಿಬಿಐ ತನಿಖೆಗೆ ಒಪ್ಪಿಸುವ ನಿರ್ಧಾರ ಸಾಕಷ್ಟು ಪ್ರಮಾಣದಲ್ಲಿ ಕ್ರೋಧವನ್ನು ಸೃಷ್ಟಿಸಿತ್ತು. ವಿಧಾನ ಸಭೆಯಲ್ಲಿ ಈ ಪ್ರಸ್ತಾಪ ಚರ್ಚೆಗೆ ಬಂದಾಗಲೆಲ್ಲಾ ಅದಕ್ಕೆ ಅಡ್ಡಿಪಡಿಸುವ ನಾನಾ ರೀತಿಯ ಬೆಳವಣಿಗೆಗಳು ನಡೆದವು. ಹೀಗಾಗಿ ನಿರ್ಣಯದ ಮೇಲಿನ ಕಲಾಪ ಗದ್ದಲದಲ್ಲಿಯೇ ಮುಳುಗಿಹೋಗಿತ್ತು. ಪ್ರತಿಪಕ್ಷದಲ್ಲಿದ್ದ ರಾಮಕೃಷ್ಣ ಹೆಗಡೆ ಅವರು ಕೂಡ ಆ ಚರ್ಚೆಯಲ್ಲಿ ಪಾಲ್ಗೊಂಡು "ಕಳೆದ ಚುನಾವಣೆಯಲ್ಲಿ ಜನಾದೇಶ ನಿಮ್ಮ ಪಕ್ಷದ ಪರವಾಗಿದೆ. ಹೇಗಿದ್ದರೂ ಚುನಾವಣೆಗೆ ಒಂದೂವರೆ ವರ್ಷ ಬಾಕಿ ಇದೆ. ಹೇಗೋ ಹೊಂದಾಣಿಕೆ ಮಾಡಿಕೊಂಡು ಹೋಗುವುದು ನಿಮಗೆ ಸೂಕ್ತ. ಪ್ರತಿಪಕ್ಷದ ನಾಯಕನಾಗಿ ನಿರ್ಣಯ ಬೆಂಬಲಿಸುವುದು ಬೇರೆ ಮಾತು, ಜನರ ದೃಷ್ಟಿಯಿಂದ ಸರ್ಕಾರ ಇರಬೇಕು." ಎಂದು ಹೇಳುತ್ತಿದ್ದಂತೆಯೇ ಸಿಡಿದೆದ್ದ ಬಂಗಾರಪ್ಪನವರು "ಇಷ್ಟೆಲ್ಲಾ ಉಪದೇಶ ಹೇಳುವ ಬದಲು ಸರ್ಕಾರಕ್ಕೆ ನಮ್ಮ ಬೆಂಬಲವಿದೆ ಎಂದು ಹೇಳಿಬಿಡಿ. ಇದರಲ್ಲಿ ಮುಚ್ಚುಮರೆ ಏಕೆ. ಪ್ರತಿಪಕ್ಷಗಳು ಸರ್ಕಾರದ ಜೊತೆ ಒಪ್ಪಂದ ಮಾಡಿಕೊಂಡಿರುವುದು ಜನರಿಗೆ ಗೊತ್ತಾಗಿ ಹೋಗಲಿ.

ಈ ನಾಟಕ ಸಾಕು. ಶಾಸಕರ ಅಭಿಪ್ರಾಯಕ್ಕೆ ಮನ್ನಣೆ ಸಿಗಬೇಕು" ಎಂದು ರೇಗುವ ದಾಟಿಯಲ್ಲಿ ಮಾತನಾಡಿ ಸುಮ್ಮನಾದರು. ಮೊಯಿಲಿ ಅವರು ಸದನದಲ್ಲಿದ್ದರೂ ಈ ವಿಚಾರದ ಬಗ್ಗೆ ಏನನ್ನೂ ಹೇಳಲಿಲ್ಲ. ಅಧಿವೇಶನದ ಕೊನೆಯ ದಿನ ಕಲಾಪ ಮುಂದೂಡುವ ಸಂದರ್ಭದಲ್ಲಿ ಭಿನ್ನಮತೀಯ ಶಾಸಕರು ನಿರ್ಣಯವನ್ನು ಮತಕ್ಕೆ ಹಾಕಿ ತೀರ್ಪು ನೀಡುವಂತೆ ಒತ್ತಾಯಿಸಿದಾಗ ಮಾತಿನ ಚಕಮಕಿ ಭುಗಿಲೆದ್ದಿತು. ಸದನದ ಕಲಾಪ ಗದ್ದಲಕ್ಕೆ ರಾಜ್ಯ ತಿರುಗಿತು. ಆ ಸಂದರ್ಭದಲ್ಲಿ ಏನು ಜರುಗುತ್ತಿದೆ ಎಂದು ಯಾರೊಬ್ಬರಿಗೂ ತಿಳಿಯಲಿಲ್ಲ. ಅಧಿವೇಶನವಂತೂ ಅನಿರ್ದಿಷ್ಟಾವಧಿಗೆ ಮುಂದಕ್ಕೆ ಹೋಯಿತು.

ಇದಾದ ನಂತರ ಭಿನ್ನಮತೀಯ ಶಾಸಕರ ಪರವಾಗಿ ವಕ್ತಾರರಾದ ಡಾ:ಮಲಕಾರೆಡ್ಡಿ ಅವರು ಪತ್ರಕರ್ತರ ಜೊತೆ ಮಾತನಾಡಿ, ಸರ್ವಾಧಿಕಾರಿ ಧೋರಣೆಯನ್ನು ಒಪ್ಪಲು ಸಾಧ್ಯವಿಲ್ಲ. ಸರ್ಕಾರ ಹಾಗೂ ನಾಯಕತ್ವದ ಮೇಲೆ ನಮಗೆ ವಿಶ್ವಾಸವಿಲ್ಲ. ಹೀಗಾಗಿಯೇ ನಾವು ನಿರ್ಣಯವನ್ನು ಮಂಡಿಸಿದ್ದವು. ಈ ನಿರ್ಣಯದ ಬಗ್ಗೆ ಸ್ಪೀಕರ್ ಇನ್ನೂ ತೀರ್ಮಾನ ಕೊಟ್ಟಿಲ್ಲ. ಹೀಗಾಗಿ ಈ ನಿರ್ಣಯ ಜೀವಂತವಾಗಿದೆ. ಮುಂದಿನ ಅಧಿವೇಶನದಲ್ಲಿ ಇದನ್ನು ಮತ್ತೆ ಪ್ರಸ್ತಾಪ ಮಾಡಿ ನಾಯಕತ್ವದ ಪದಚ್ಯುತಿಗೆ ಪಟ್ಟು ಹಿಡಿಯುವುದು ಖಂಡಿತ ಎಂದು ಘೋಷಿಸಿದರು. ಇದಾದ ಮೇಲೆ ಸಾಕಷ್ಟು ಬೆಳವಣಿಗೆಗಳು ರಾಜಕಾರಣದಲ್ಲಿ ಜರುಗಿದವು. ಮಂತ್ರಿಮಂಡಲದ ಪುನರಾಚನೆಯು ಜರುಗಿತು. ನಿಗಮ ಮಂಡಳಿಗಳ

ಅಧ್ಯಕ್ಷರ ನೇಮಕವು ಜರುಗಿತು. ಆದರೂ ಭಿನ್ನಮತ ಕರಗಲಿಲ್ಲ. ಮತ್ತೊಂದು ಅಧಿವೇಶನ ಆರಂಭವಾಗುವ ದಿನ ಭಿನ್ನಮತೀಯ ಶಾಸಕರು ರಾಜಶೇಖರಮೂರ್ತಿ ಅವರ ನಿವಾಸದಲ್ಲಿ ಮತ್ತೆ ಸಮಾವೇಶಗೊಂಡರು. ಭಿನ್ನಮತ ಮೊದಲಿನಷ್ಟು ಪ್ರಖರತೆಯನ್ನು ಉಳಿಸಿಕೊಂಡಿರಲಿಲ್ಲ. ಹಲವಾರು ಮಂದಿ ಶಾಸಕರು ನಿಷ್ಠಾವಂತರ ಗುಂಪಿಗೆ ಸ್ಥಳಾಂತರಗೊಂಡಿದ್ದರು. ಸಭೆಯ ಕಲಾಪಗಳನ್ನು ವಿವರಿಸಿದ ಅನಂತಕೃಷ್ಣ ಮತ್ತು ಮಲಕಾರೆಡ್ಡಿ ಅವರು ಕಾಂಗ್ರೆಸ್ ಪಕ್ಷದ ಐಕ್ಯಮತ್ಯದ ಬಗ್ಗೆ ವಿವರಣೆ ನೀಡಿ "ಹೈಕಮಾಂಡ್ ಸೂಚನೆಯನ್ನು ನಾವೆಲ್ಲರೂ ಸರ್ಕಾರದ ಜೊತೆ ಸಹಕರಿಸುತ್ತೇನೆ" ಎಂದು ಹೇಳಿದರು. ಮಲಕಾರೆಡ್ಡಿ ಅವರಿಗೆ ಹಿಂದೆ ಹೇಳಿದ್ದ ಅವಿಶ್ವಾಸ ನಿರ್ಣಯದ ವಿಚಾರ ಬಹುಶ: ಮರೆತುಹೋಗಿತ್ತು. ಪತ್ರಕರ್ತರೊಬ್ಬರು ಅದನ್ನು ನೆನಪಿಸಿದಾಗ ಕೊಂಚ ಗೊಂದಲಕ್ಕೊಳಗಾದಂತೆ ಕಂಡ ಮಲಕಾರೆಡ್ಡಿ ಅವರು ದಾಖಲೆಗಳನ್ನು ನೋಡಿ ಈ ಬಗ್ಗೆ ಉತ್ತರಿಸುವೆ ಬಹುಶ: ಇನ್ನೊಬ್ಬ ವಕ್ತಾರ ಅನಂತಕೃಷ್ಣ ಅವರಿಗೆ ಈ ವಿಚಾರ ಹೆಚ್ಚು ಗೊತ್ತಿರಬೇಕು ಎಂದು ಹೇಳಿ ಜಾರಿಕೊಳ್ಳಲು ಯತ್ನಿಸಿದರು. ಆದರೆ, ಮಾರನೆಯ ದಿನ ತಪ್ಪದಂತೆ ಮಲಕಾರೆಡ್ಡಿ ಅವರು ಅನಂತಕೃಷ್ಣ ಅವರ ಜೊತೆ ಮಾತುಕತೆ ನಡೆಸಿ ಹಿಂದೆ ಪ್ರಸ್ತಾಪಿಸಿದ ಅವಿಶ್ವಾಸ ನಿರ್ಣಯ ಜೀವಂತವಾಗಿದೆ ಎಂಬ ಘೋಷಣೆಯನ್ನು ಒಪ್ಪಿಕೊಂಡರು. ಇದರ ಪರಿಣಾಮವೆಂದರೆ ಶಾಸನಸಭೆಯ ಮೊದಲ ದಿನವೇ ಹಿಂದಿನ ನಿರ್ಣಯದ ಮೇಲೆ ರೂಲಿಂಗ್ ಕೊಡುವಂತೆ ಭಿನ್ನಮತೀಯರು ಪಟ್ಟು ಹಿಡಿಯಲು ಯೋಚಿಸಿದರು.

ಆದರೆ, ಹೈಕಮಾಂಡ್ ಸೂಚನೆಗೆ ಗೌರವಿಸಿ ಹಿಂದಿನಂತೆ ಪಟ್ಟು ಹಿಡಿಯುವ ಬದಲು ಕೇವಲ ಸದನದಲ್ಲಿ ಮಾತಿನ ಚಕಮಕಿ ನಡೆಸುವುದರೊಂದಿಗೆ ಪ್ರಕರಣ ಮುಕ್ತಾಯವಾಯಿತು. ಅಂದ ಹಾಗೆ ಕಡೆಗೂ ಆ ಅವಿಶ್ವಾಸ ನಿರ್ಣಯದ ಗತಿ ಏನಾಯಿತು ಎಂಬುದು ತಿಳಿಯಲೇ ಇಲ್ಲ.

ಸ್ಪೀಕರ್ ಕೌಜಲಗಿ ಅವರನ್ನು ಎಷ್ಟೇ ಕಾಡಿದರೂ "ಬಿಡಿ, ಅದೆಲ್ಲ ಮುಗಿದ ಕಥೆ. ಹೊಸ ಕಥೆ ಬಂದಾಗ ನೋಡೋಣ" ಎಂದು ಕಣ್ಣು ಮಿಟುಕಿಸಿ ಸುಮ್ಮನಾಗುತ್ತಿದ್ದದ್ದು ಹಲವು ಸಾಧ್ಯತೆ ಮತ್ತು ಆದ್ಯತೆಗಳ ದಿಕ್ಸೂಚಿಯಾಗಿತ್ತು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ:18.12.2020

## 18. ಮಂಕಾಯಿತೇಕೆ ನಾಡಿನ ಮೇಲ್ಮನೆ

ನಮ್ಮ ನಾಡಿನ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿಗೆ ಭಾರತದ ಪ್ರಜಾತಾಂತ್ರಿಕ ಭೂಪಟದಲ್ಲಿ ಮಹತ್ವದ ಸ್ಥಾನವಿದೆ. ವಿಧಾನಸೌಧದ ಬಾಹ್ಯ ಸೌಂದರ್ಯ, ಭವ್ಯತೆಗಳಷ್ಟೇ ಅದರ ಅಂತರಂಗದ ಕಳಕಳಿ, ಆಶಯ ಕೂಡ ಮುಖ್ಯ ಸಂಗತಿ. ನಾಡಿನ ಪ್ರಜೆಗಳ ಆಶೋತ್ತರಗಳನ್ನು ಪ್ರತಿನಿಧಿಸಲು ಆಯ್ಕೆಯಾದವರ ನಡೆ–ನುಡಿ, ಸಂಸ್ಕೃತಿ, ಭಾಷೆ, ಜ್ಞಾನ, ವಿದ್ಯೆ, ಸಭ್ಯತೆ ಅವರೆದೆಯಲ್ಲಿನ ಕರುಣೆ, ಜನಪರ ನಿಲುವುಗಳು ಅಲ್ಲಿಂದ ಫಲಿಸಬೇಕಾದ ಕನ್ನಡಿಗಳು, ನಮ್ಮೆರಡೂ ಮಾತಿನ ಮನೆಗಳಾದ ಮೇಲ್ಮನೆ, ಕೆಳಮನೆಗಳಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಆ ಜನಸಮುದಾಯ ನೋಡುತ್ತದೆ, ತಿಳಿಯುತ್ತದೆ, ಸ್ಫೂರ್ತಿ ಪಡೆಯುತ್ತದೆ. ಕೆಲವೊಮ್ಮೆ ಅನುಸರಿಸುತ್ತದೆ. ಆಯಾ ನಾಡಿನ ಸಾಹಿತಿಗಳು, ಚಿಂತಕರು, ಕಲಾವಿದರು ಮಾಡುವ ಟೀಕೆ ಟಿಪ್ಪಣಿ, ವಿಮರ್ಶೆಗಳಿಗೆ ಅಂಜಿಬಾಳುವ ಜನಪ್ರತಿನಿಧಿಗಳು ನಿಜವಾದ ಪ್ರಜಾಪ್ರಭುತ್ವವಾದಿಗಳಾಗಿರುತ್ತಾರೆ. ಅಂತಹ ಎಚ್ಚರವಿರುವ ನಾಡುಗಳಲ್ಲಿ ಮಾತ್ರವೇ ಪ್ರಜಾಪ್ರಭುತ್ವ ಜೀವಂತವಾಗಿದೆ. ಇನ್ನುಳಿದ ಕಡೆ ಅದು ಪ್ರೇತರೂಪಿಯಾಗಿದೆಯಷ್ಟೆ.

ನನ್ನ ಪುಸ್ತಕಗಳಾದ **'ರಿ ಟಾಕಿಂಗ್ ಶಾಪ್'** ಹಾಗೂ ಆಥೆನ್ಸಿನ ರಾಜ್ಯಾಡಳಿತ ಕುರಿತ ಅಧ್ಯಯನಕ್ಕಾಗಿ ನನ್ನದೇ ಆಸಕ್ತಿ ಖರ್ಚಿನಲ್ಲಿ ಇಂಗ್ಲೆಂಡ್ ಹಾಗೂ ಗ್ರೀಸ್ ದೇಶಗಳ ಪಾರ್ಲಿಮೆಂಟ್‌ಗಳನ್ನು ಹೊಕ್ಕಿ ಬಂದಿರುವೆ. ಅಲ್ಲಿನ ಶಾಸಕರಿಗೆ ವಿಧಿಸಿರುವ ಕಟ್ಟುಪಾಡು ಕಂಡು ಬೆರಗಾದೆ. ಯಾವುದೇ ಮನುಷ್ಯ ಅಲ್ಲಿ ಶಾಸಕನಾಗಿರುವ ಅವಧಿ ಅವನು ತನ್ನನ್ನು ತಾನು ಅತಿ ಎಚ್ಚರದಿಂದ ಪ್ರದರ್ಶಿಸಿಕೊಳ್ಳಬೇಕಾದ ಅಮೂಲ್ಯ ಅವಧಿಯಾಗಿರುತ್ತದೆ. ಅವನ ಉಡುಪು, ಶಿಷ್ಟಾಚಾರ, ಮಾತುಕತೆ, ಆರ್ಥಿಕ ಸ್ವಚ್ಚತೆ, ವೈಯಕ್ತಿಕ ಜೀವನ ಸಾರ್ವಜನಿಕ ನಡವಳಿಕೆ ಇವೆಲ್ಲವನ್ನೂ ಕುಶಲತೆಯಿಂದ ನಿಭಾಯಿಸಲೇಬೇಕಾದ ಜೀವನದ ಅತಿ ಜವಾಬ್ದಾರಿ ಕಾಲವಾಗಿರುತ್ತದೆ. ಆತ ಜನರ ಸ್ವತ್ತಾಗಿರುತ್ತಾನೆ. ಸರ್ಕಾರಕ್ಕೆ, ಸಮಾಜಕ್ಕೆ, ಸಮಾಜಕ್ಕೆ ಉತ್ತರದಾಯಿಯಾಗಿರುತ್ತಾನೆ. ಆತ ಒಂದೊಮ್ಮೆ ತಪ್ಪಿ ನಡೆದರೆ ಮತದಾರರ ವಿಶ್ವಾಸಕ್ಕೆ ಭಂಗ ತಂದರೆ ತಾನು ಕೂರುವ ಸಭೆಗಳ ಪಾವಿತ್ರ್ಯತೆಗೆ ಕಳಂಕ ತಂದರೇ ಭಾರೀ ಬೆಲೆ ತರಬೇಕಾಗುತ್ತದೆ. ಆತನನ್ನು ಯಾವ ರಾಜಕೀಯ ಪಕ್ಷಗಳು ಜಾತಿ ಧರ್ಮಗಳು ಹಣಕಾಸುಗಳು ರಕ್ಷಿಸಲಾರವು. ಆದರೆ ನಾವಿಲ್ಲಿ ಏನಾಗಿದ್ದೇವೆ? ಎಷ್ಟೆಲ್ಲ ಮಹನೀಯರ, ಪ್ರಾತಃಸ್ಮರಣೀಯರ ಶ್ರಮ, ಔದಾರ್ಯ ಹಾಗೂ ಪ್ರಜಾಪ್ರೇಮದ ಅದ್ಭುತ ಮೌಲ್ಯದ ಪವಿತ್ರ ತಳಹದಿಯ ಮೇಲೆ ಮೂಡಿದ ಕಟ್ಟಡದಲ್ಲಿ ತಾವು ಕೂತು ಕೆಲಸ ಮಾಡುತ್ತಿದ್ದೀವಿ ಎಂಬುದನ್ನೇ ಮರೆಯುತ್ತಿದ್ದೇವೆ. ಬೇರು ಮರೆತ ಟೊಳ್ಳು ಮರಗಳಾಗುತ್ತಿದ್ದೇವೆ.

ಇತ್ತೀಚೆಗಷ್ಟೇ ಸನ್ಮಾನ್ಯ ಪ್ರಧಾನಿ ನರೇಂದ್ರ ಮೋದಿ ಅವರು ಹೊಸ ಸಂಸತ್ ಭವನದ ಶಿಲಾನ್ಯಾಸ ಮಾಡಿದ್ದಾರೆ. ನವ ಭಾರತಕ್ಕಾಗಿ, ಹೊಸ ಶಾಸನಗಳ ರಚನೆಯ ಮುನ್ನುಡಿ ಬರೆಯಲು ತವಕಿಸುತ್ತಿದ್ದಾರೆ. ಆದರೆ ನಮ್ಮ ಶಾಸಕರು ಮಾಡುತ್ತಿರುವುದೇನು? ಹಲವು ಮುತ್ಸದ್ಧಿಗಳು, ಜನ ಸೇವಕರು, ಪ್ರಜಾಪ್ರಭುತ್ವ ಪ್ರೇಮಿಗಳು, ಸಂಕಲ್ಪಿಸಿ ಕನಸು ಕಂಡು ತಮ್ಮವರಿಗೆ ನಾಗರಿಕ ಪ್ರಜಾಸತ್ತಾತ್ಮಕ ಆಡಳಿತ ನೀಡಲು, ಉತ್ತಮೋತ್ತಮ ಶಾಸನ ರೂಪಿಸಲು ಕಟ್ಟಡದ ಶಾಸನಸಭೆಗಳು, ಅದಕ್ಕೆ ಕುಂದುಂಟು ಮಾಡುವ ನಡತೆಯನ್ನು ಸಹಿಸಬಾರದು. ಆಗಾಗ ಅಲ್ಲಲ್ಲಿ ಜಾರ್ಖಂಡ್, ಛತ್ತೀಸ್‌ಗಢ ಮುಂತಾದ ಕಡೆ ವಿಧಾನ ಸಭೆಗಳಲ್ಲಿ ಶಾಸಕರ ಕಿತ್ತಾಟ, ನೂಕಾಟ, ಹೊಡೆದಾಟಗಳ ಬಗ್ಗೆ ಕೇಳುತ್ತಿದ್ದೀವಿ. ಚಾಣಕ್ಯನಂತಹ ಮೇರುಗುರುವಿನ ಪರಂಪರೆ ನಮ್ಮದು. ರಾಜ, ಮಂತ್ರಿ ಹೇಗೆ ಜನರೆದುರು ತಮ್ಮನ್ನು ಪ್ರದರ್ಶಿಸಿಕೊಳ್ಳಬೇಕೆಂದು ಜಗತ್ತಿಗೇ ಆತ ಹೇಳಿಕೊಟ್ಟಿದ್ದಾನೆ. ಮಹಾಭಾರತ, ರಾಮಾಯಣ ಜಗತ್ತಿನ ಸಾರ್ವಕಾಲಿಕ ಶ್ರೇಷ್ಠ ಕೃತಿಗಳು. ಅವು ಕೂಡ ರಾಜಧರ್ಮ, ಆದರ್ಶ ರಾಜ, ಪ್ರಜಾರಾಜ್ಯಗಳ ಮಾತನ್ನಾಡಿವೆ. ಮಹಾಜ್ಞಾನಿ ಸಾಕ್ರೆಟೀಸ್ ಮಹಾಶಯ ತನ್ನ ಮೇರುಗ್ರಂಥ ರಿಪಬ್ಲಿಕ್‌ನಲ್ಲಿ ಶಾಸಕನ ಭಾಷೆ, ಸಂಸ್ಕಾರ, ನಡವಳಿಕೆಗಳ ಬಗ್ಗೆ ಸುದೀರ್ಘ ಅಧ್ಯಾಯಗಳನ್ನೇ ಬರೆದಿದ್ದಾನೆ. ಶಾಸನಸಭೆಗಳು ಪ್ರಜಾ ರಾಜ್ಯದ ದೇವಾಲಯಗಳು ಎಂದಿದ್ದಾನೆ. ಯೂರೋಪ್ ಖಂಡಕ್ಕೆ ಆಡಳಿತದ ಪಟ್ಟುಗಳನ್ನು

ಕಲಿಸಿದ ಇಟಲಿಯ ಮುಸಲೋನಿ ಕೂಡ ಶಾಸನಸಭೆಗಳು ಪ್ರಜಾಪ್ರಭುತ್ವಕ್ಕೆ ಹಿಡಿದ ಕನ್ನಡಿ. ಅದು ಕೊಳೆಯಾಗದಿರಲಿ ಎಂದಿದ್ದಾನೆ. ಹೀಗೆ ಜಗತ್ತೇ ಗೌರವಿಸುವ ಶಾಸನಸಭೆಗಳು ನಮ್ಮ ನಡವಳಿಕೆಗಳಿಂದ ಮಲಿನಗೊಳ್ಳುತ್ತಿರುವುದು ದುಃಖದ ವಿಚಾರ.

ಮೇಲ್ಮನೆಗಳೇಂದರೆ ಹಿರಿಯರು, ಪ್ರಾಜ್ಞರು ನೆರೆದು ಜನರ ಒಳಿತನ್ನು ಚಿಂತಿಸುವ ತಾಣಗಳಾಗಿ ಈಗ ಉಳಿದಿವೆಯೇ? ಒಂದೊಮ್ಮೆ ಕೆಳಮನೆಯಲ್ಲಿ ವಾಗ್ವಾದಗಳಾದರೂ, ಮೇಲ್ಮನೆಯಲ್ಲಿ ಗುಣಮಟ್ಟದ ಚರ್ಚೆ, ಪ್ರತಿಪಕ್ಷದವರನ್ನು ಗೌರವಾದರಗಳಿಂದ ಕಂಡು ಪರಸ್ಪರ ಭಿನ್ನಾಭಿಪ್ರಾಯಗಳನ್ನು ಸಹನೆಯಿಂದ ತಾಳುವ ವಾತಾವರಣವಿರಬೇಕು. ನಾನು ಅನೇಕ ಮುತ್ಸದಿಗಳ ಜೊತೆ ಒಡನಾಡಿದವನು, ನಾನು ಸದನಕ್ಕೆ ಬಂದು ಹೆಚ್ಚುಕಮ್ಮಿ ನಾಲ್ಕು ದಶಕಗಳೇ ಸಂದಿವೆ. ಗಂಗೆ ಕಾವೇರಿಗಳಲ್ಲಿ ಸಾಕಷ್ಟು ನೀರು ಹರಿದುಹೋಗಿವೆ. ಶಾಸಕರು ಜನರು ಏನೆಂದುಕೊಂಡಾರು ಎಂದು ಚಿಂತಿಸುವುದನ್ನು ಬಿಟ್ಟ ಹಾಗಿದೆ. ಕೈ ಕೈ ಮಿಲಾಯಿಸುವ ಹಂತಕ್ಕೆ ಹೋಗುವುದು ನಮ್ಮೆಲ್ಲರ ಪತನ ಸೂಚಿಸುತ್ತದೆ. ಮಂಗಳವಾರ ಸದನದಲ್ಲಾದ ವಿದ್ಯಮಾನ ಕರ್ನಾಟಕದ ಎಲ್ಲಾ ಶಾಸಕರು ಜನರ ಕ್ಷಮೆ ಬೇಡುವಂತೆ ಮಾಡಿದೆ. ರಾಜಕೀಯ ಶಾಸ್ತ್ರದ ಪಟ್ಟುಗಳನ್ನು ಜಗತ್ತಿಗೆ ತಿಳಿಸಿದ ನಮ್ಮ ಭವ್ಯ ನೆಲದ ಸತ್ವ ಅಳಿಯಿತೇ ಮಂಕಾಯಿತೇಕೆ ಮೇಲ್ಮನೆ? ವಿಚಾರದ ವೇದಿಕೆ ಬೀದಿ ಜಗಳದ ಮಟ್ಟಕ್ಕೆ ಇಳಿದುದರಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ತಪ್ಪು ಇದೆ. ಇದೀಗ ನಾವೆಲ್ಲ ಅತ್ಮಾವಲೋಕನ ಮಾಡಿಕೊಳ್ಳಬೇಕಾದ ಸಮಯ ಮಂಕಾಗುತ್ತಿರುವ ಮೇಲ್ಮನೆ ಕಂಡು ಮನಸ್ಸು ಭಾರವಾಗಿದೆ.

ಆಧಾರ:ವಿಜಯಕರ್ನಾಟಕ, ದಿನಾಂಕ:19.12.2020

## 19. ಮೇಲ್ಮನೆಯ ಆಶಯಗಳಿಗೆ ತಿಲಾಂಜಲಿಯ ಕಾಲ

ಕರ್ನಾಟಕದ ವಿಧಾನಪರಿಷತ್‌ಗೆ ಶತಮಾನಗಳ ಇತಿಹಾಸವಿದೆ. ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜರ ಆಡಳಿತದ ಅವಧಿಯಲ್ಲಿ 1907ರಲ್ಲಿ ವಿಧಾನ ಪರಿಷತ್ ಸ್ಥಾಪನೆಗೊಂಡಿತು. ಅಲ್ಲಿಂದ ಇಲ್ಲಿಯವರೆಗೆ ಸದಸ್ಯರಾದ ಅನೇಕ ಮಹನೀಯರು ಪರಿಷತ್ ಮೌಲ್ಯ ಮತ್ತು ಪರಂಪರೆಗೆ ಕಿಂಚಿತ್ತೂ ಚ್ಯುತಿ ಬರದಂತೆ ನಡೆದುಕೊಂಡಿದ್ದರು. ಆದರೆ ಕಳೆದ ವಾರ ವಿಧಾನ ಪರಿಷತ್‌ನಲ್ಲಿ ನಡೆದ ಘಟನಾವಳಿಗಳು ನಿಜಕ್ಕೂ ದೇಶವೇ ನಾಚಿ ತಲೆತಗ್ಗಿಸುವಂತಹ ಲಜ್ಜೆಗೆಟ್ಟ ನಡೆ. ಇಂತಹ ಅಪ್ರಬುದ್ಧ ನಡೆ, ಅವಿವೇಕದ ವರ್ತನೆಯಿಂದ ವಿಧಾನ ಪರಿಷತ್ ಸ್ಥಾಪನೆಯ ಉದ್ದೇಶ ಸಂಪೂರ್ಣ ಮಣ್ಣುಪಾಲಾಗುತ್ತದೆ. ಪ್ರಜ್ಞಾವಂತರು, ಪ್ರಬುದ್ಧರ ಸದನ ಆಗಬೇಕಾಗಿದ್ದ ವಿಧಾನ ಪರಿಷತ್ ರಣಾಂಗಣವಾಯಿತು. ಇಂಥ ಅಹಿತಕರ ಘಟನಾವಳಿಗಳನ್ನು ಗಮನಿಸಿದಾಗ–

ಹಂದೆಯ ಕೈಲಿ ಚಂದ್ರಾಯುಧವಿದ್ದು ಫಲವೇನು?

ಅಂಧಕನ ಕೈಲಿ ದರ್ಪಣವಿದ್ದು ಫಲವೇನು?

ಮರ್ಕಟನ ಕೈಲಿ ಮಾಣಿಕ್ಯವಿದ್ದು ಫಲವೇನು?

ಎನ್ನುವ ಬಸವಣ್ಣನವರ ವಚನದ ಸಾಲುಗಳು ನೆನಪಿಗೆ ಬರುತ್ತವೆ.

ಎಪ್ಪತ್ತಮೂರು ವರ್ಷಗಳ ಭಾರತೀಯ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ ಅನೇಕ ಸ್ಥಿತ್ಯಾಂತರಗಳಿಗೆ ಸಾಕ್ಷಿಯಾಗಿದೆ. ಇಂತಹ ಸ್ಥಿತ್ಯಾಂತರಗಳ ಪ್ರಕ್ರಿಯೆಯಲ್ಲಿ ನೈಜ ಜನತಾಂತ್ರಿಕ ಆಶಯಗಳು, ರಾಷ್ಟ್ರದ ಸಾಮಾಜಿಕ–ಆರ್ಥಿಕ–ರಾಜಕೀಯ ಬದುಕಿನ ಗುಣಾತ್ಮಕ ಬದಲಾವಣೆಗೆ ಪೂರಕವಾಗಿ ಪರಿಪಕ್ವಗೊಳ್ಳಬೇಕು ಎನ್ನುವುದು ಜನತಂತ್ರದಲ್ಲಿ ನಂಬಿಕೆಯುಳ್ಳವರ ನಿರೀಕ್ಷೆ. ದುರಂತ ಎಂದರೆ, ಸಂವಿಧಾನ ರಚನೆಗೊಂಡ ನಂತರದ ಅವಧಿಯಲ್ಲಿ ಇಂತಹ ನಿರೀಕ್ಷೆಗಳು ಸುಳ್ಳಾಗಲಾರಂಭಿಸಿವೆ. ದಶಕದಿಂದ ದಶಕಕ್ಕೆ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಅಡಿಪಾಯ ದುರ್ಬಲಗೊಳ್ಳಲಾರಂಭಿಸಿದೆ. ಒಂದು ರಾಷ್ಟ್ರದ ಭವಿಷ್ಯದ ಹಣೆಬರಹವನ್ನು ನಿರ್ಧರಿಸಬೇಕಾದ ನೆಲೆಗಳಲ್ಲಿ ಅನಪೇಕ್ಷಿತ ವ್ಯಕ್ತಿ ಮತ್ತು ಶಕ್ತಿಗಳು ವಿಜೃಂಭಿಸಲಾರಂಭಿಸಿದೆ. ಸಂವಿಧಾನದ ಕಟ್ಟುಪಾಡುಗಳನ್ನು ತಮ್ಮ ಮೂಗಿನ ನೇರಕ್ಕೆ ಅರ್ಥೈಸಿಕೊಳ್ಳುವ ಪರಿಪಾಠ ಪ್ರತಿಯೊಂದು ರಾಜಕೀಯ ಪಕ್ಷದಿಂದ ಆರಂಭಗೊಂಡಿದೆ. ರಾಜ್ಯಸಭೆ ಹಾಗೂ ನಾಮ ನಿರ್ದೇಶನಗೊಳ್ಳುವ ವ್ಯಕ್ತಿಗಳ ಪರಂಪರೆಯನ್ನು ನೋಡಿದಾಗ ದಿಗ್ಭ್ರಮೆಯಾಗುತ್ತಿದೆ. ಸಂವಿಧಾನದ ಆಶಯಗಳನ್ನು ತಮಗೆ ತಿಳಿದಂತೆ ಅರ್ಥೈಸುವ ತುಘಲಕಿ ಮನಃಸ್ಥಿತಿ ಪ್ರತಿಯೊಂದು ರಾಜಕೀಯ ಪಕ್ಷದ ನಾಯಕತ್ವದಿಂದ ಅಭಿವ್ಯಕ್ತಗೊಳ್ಳುತ್ತಿದೆ.

ಭಾರತೀಯ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ ವಿಶಾಲ ನೆಲೆಯಲ್ಲಿ ಇಂಗ್ಲೆಂಡಿನ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ತದ್ರೂಪು. ಭಾರತದ ಸಂಸತ್ತಿನ ಸ್ವರೂಪ ಹೆಚ್ಚು ಕಡಿಮೆ ಬ್ರಿಟಿಷ್ ಸಂಸತ್‌ನ ಬೈಕಾಮರಲ್ ಸ್ವರೂಪವನ್ನೇ ಹೋಲುತ್ತದೆ. ಇಂಗ್ಲೆಂಡಿನ ಸಂಸತ್ ಎರಡು ಚೇಂಬರ್‌ಗಳ ಆಡಳಿತ ವ್ಯವಸ್ಥೆಯನ್ನು ಹೊಂದಿದೆ. ಜನರಿಂದ ಮತದಾನದ ಮೂಲಕ ಆಯ್ಕೆಗೊಳ್ಳುವ ನೆಲೆಯನ್ನು 'ಹೌಸ್ ಆಫ್ ಕಾಮನ್ಸ್' ಎಂದು ಕರೆದರೆ, ವಿವಿಧ ಕ್ಷೇತ್ರಗಳ ಮೇಧಾವಿಗಳಿಂದ ರಚನೆಗೊಂಡ ನೆಲೆಯನ್ನು 'ಹೌಸ್ ಆಫ್ ಲಾರ್ಡ್ಸ್' ಎಂದು ಕರೆಯುತ್ತಾರೆ. ಬ್ರಿಟಿಷ್ ಸಂವಿಧಾನದ ಆಶಯದಂತೆ ಈ ಎಲ್ಲ ಸದಸ್ಯರು ಸ್ವತಂತ್ರ ಮನೋಧರ್ಮ ಹೊಂದಿದವರಾಗಿರಬೇಕು. 'ಹೌಸ್ ಆಫ್ ಕಾಮನ್ಸ್' ಸದಸ್ಯರು ಪ್ರತಿ ನಿರ್ಧಾರಕ್ಕೆ ಕಣ್ಣುಮುಚ್ಚಿ ಸಮ್ಮತಿ ಸೂಚಿಸುವ ಮನಃಸ್ಥಿತಿ ಹೊಂದಿದವರಾಗಿರಕೂಡದು. ಗಂಭೀರ ಚಿಂತನ–ಮಂಥನಗಳ ಮೂಲಕ 'ಹೌಸ್ ಆಫ್ ಕಾಮನ್ಸ್' ರೂಪಿಸುವ ನೀತಿ–ನಿರ್ಧಾರ, ಕಾಯಿದೆ–ಕಾನೂನುಗಳನ್ನು ಸತ್ಯದ ಒರೆಗಲ್ಲಿಗೆ ಹಚ್ಚಿ ನೋಡುವ ನಿಷ್ಠುರ ಮನೋಧರ್ಮ ಹೊಂದಿರಬೇಕು. ತಮ್ಮ ಅನುಭವ, ಮೇಧಾಶಕ್ತಿ ಹಾಗೂ ವೃತ್ತಿಪರತೆಯ ಲಾಭಗಳನ್ನು ರಾಷ್ಟ್ರದ ಪುನರ್ ನಿರ್ಮಾಣಕ್ಕೆ ವಿನಿಯೋಗಿಸುವ ಬದ್ಧತೆ ಅವರಿಗಿರಬೇಕು. ಈ ಹಿನ್ನೆಲೆಯಲ್ಲಿ ಸಾಹಿತ್ಯ–ಸಂಸ್ಕೃತಿ, ವಿಜ್ಞಾನ–ತಂತ್ರಜ್ಞಾನ,

ವೈದ್ಯಕೀಯ, ಕಾನೂನು, ಶಿಕ್ಷಣ, ಸೇನಾಪಡೆ, ಕ್ರೀಡೆ, ವಿದೇಶಾಂಗ ನೀತಿ, ಸಾರ್ವಜನಿಕ ಸಂಪರ್ಕ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಸಹಕಾರ, ಕ್ರೀಡೆ, ಚಿತ್ರರಂಗ ಹೀಗೆ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಪ್ರಾವೀಣ್ಯ ಮೆರೆದವರಿಗೆ ಮಾತ್ರ 'ಹೌಸ್ ಆಫ್ ಲಾರ್ಡ್ಸ್'ನ ಸದಸ್ಯತ್ವ ನೀಡಬೇಕು.

ಇಂಗ್ಲೆಂಡಿನ ಸಂಸತ್ ಮಾದರಿಯಲ್ಲಿಯೇ 'ಹೌಸ್ ಆಫ್ ಕಾಮನ್ಸ್' ಮತ್ತು 'ಹೌಸ್ ಆಫ್ ಲಾರ್ಡ್ಸ್' ಒಳಗೊಂಡು ಭಾರತದ ಸಂಸತ್ ರೂಪುಗೊಂಡಿದೆ. ಸಂವಿಧಾನದ 79ನೇ ವಿಧಿ ಅನ್ವಯ ಭಾರತದ ಸಂಸತ್ ಲೋಕಸಭೆ (house of people) ಮತ್ತು ರಾಜ್ಯಸಭೆ (the council of states) ರಚನೆಗೊಂಡಿದೆ. ಲೋಕಸಭೆಯಲ್ಲಿ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಆಯ್ಕೆಗೊಂಡ 545 ಸದಸ್ಯರಿದ್ದರೆ, ರಾಜ್ಯಸಭೆಯಲ್ಲಿ 238 ಮಂದಿ ಸದಸ್ಯರನ್ನು 29 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಗಳಿಂದ ಆಯ್ಕೆ ಮಾಡಲಾಗುವುದು. ಉಳಿದ ಹನ್ನೆರಡು ಸದಸ್ಯರನ್ನು ರಾಷ್ಟ್ರಪತಿಗಳು ನಾಮ ನಿರ್ದೇಶನ ಮಾಡುವರು. ಈ ಹನ್ನೆರಡು ಮಂದಿ ಸಾಹಿತ್ಯ, ಲಲಿತಕಲೆ, ಪತ್ರಿಕೋದ್ಯಮ, ಚಿತ್ರರಂಗ, ವಿಜ್ಞಾನ–ತಂತ್ರಜ್ಞಾನ, ವೈದ್ಯಕೀಯ, ಕ್ರೀಡೆ, ಕಾನೂನು ಹೀಗೆ ವಿವಿಧ ಕ್ಷೇತ್ರಗಳಲ್ಲಿ ಅಪ್ರತಿಮ ಸಾಧನೆಗೈದವರಾಗಿರಬೇಕು.

ಇನ್ನು ರಾಜ್ಯಸಭೆ ಮಾದರಿಯಲ್ಲಿ ವಿಧಾನ ಪರಿಷತ್‌ಗಳನ್ನು ಹೊಂದುವ ಅವಕಾಶವನ್ನು ಸಂವಿಧಾನ ಎಲ್ಲ ರಾಜ್ಯಗಳಿಗೂ ನೀಡಿದೆ. ಭಾರತದ 29 ರಾಜ್ಯಗಳಲ್ಲಿ ಕೇವಲ ಏಳು ರಾಜ್ಯಗಳು ಮಾತ್ರ ವಿಧಾನ ಪರಿಷತ್ ವ್ಯವಸ್ಥೆಯನ್ನು ಹೊಂದಿದೆ. ಕರ್ನಾಟಕ, ಆಂಧ್ರಪ್ರದೇಶ, ಬಿಹಾರ, ಜಮ್ಮು–ಕಾಶ್ಮೀರ, ಮಹಾರಾಷ್ಟ್ರ, ತೆಲಂಗಾಣ ಮತ್ತು ಉತ್ತರಪ್ರದೇಶ ರಾಜ್ಯಗಳನ್ನು ಹೊರತುಪಡಿಸಿದರೆ ಉಳಿದ 22 ರಾಜ್ಯಗಳು ವಿಧಾನ ಪರಿಷತ್ ವ್ಯವಸ್ಥೆಯನ್ನು ಕೈಬಿಟ್ಟಿವೆ.

1986ರ ಏಪ್ರಿಲ್ ತಿಂಗಳಲ್ಲಿ ತಮಿಳುನಾಡಿನ ಮುಖ್ಯಮಂತ್ರಿ ಆಗಿದ್ದ ಎಂ.ಜಿ.ರಾಮಚಂದ್ರನ್, ಚಿತ್ರನಟಿ ವೆನ್ನಿರಾಡೈ ನಿರ್ಮಲ ಅವರನ್ನು ವಿಧಾನ ಪರಿಷತ್ತಿಗೆ ನಾಮಕರಣ ಮಾಡಿದ್ದರು. ಆಕೆ 1986ರ ಏಪ್ರಿಲ್ 23ರಂದು ಪ್ರಮಾಣ ವಚನ ಸ್ವೀಕರಿಸಬೇಕಿತ್ತು. ಡಿಎಂಕೆ ಬೆಂಬಲಿತ ವಕೀಲ ಸುಂದರರಾಜನ್ ವೆನ್ನಿರಾಡೈ ನಿರ್ಮಲರನ್ನು ನಾಮಕರಣ ಮಾಡಿರುವುದನ್ನು ಪ್ರಶ್ನಿಸಿ ಹೈಕೋರ್ಟ್‌ನ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ವೆನ್ನಿರಾಡೈ ನಿರ್ಮಲ insolvent ಆಗಿದ್ದಾರೆ. ಹೀಗೆ insolvency ತೆಗೆದುಕೊಂಡಿರುವ ವ್ಯಕ್ತಿಯೊಬ್ಬರು ಸಂವಿಧಾನದ 102(1)(ಸಿ) ಅನ್ವಯ ಸಂಸತ್ ಹಾಗೂ ವಿಧಾನ ಮಂಡಲ ಪ್ರವೇಶಿಸುವಂತಿಲ್ಲ ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲಿ ಅಭಿಪ್ರಾಯಿಸಿದ್ದರು. ಆಗ ತಮಿಳುನಾಡು ರಾಜ್ಯಪಾಲರಾಗಿದ್ದ ಸುಂದರ್ ಲಾಲ್ ಖುರಾನ ವೆನ್ನಿರಾಡೈ ನಿರ್ಮಲ insolvent ಎಂದು ಗೊತ್ತಿದ್ದು ಅವರನ್ನು ನಾಮಕರಣ ಮಾಡಿದ್ದು ಏಕೆ ಎಂದು ಪ್ರಶ್ನಿಸಿ, ನಿರ್ಮಲ ನಾಮಕರಣ ತಿರಸ್ಕರಿಸಿದ್ದರು. ಇದರಿಂದ ಕುಪಿತಗೊಂಡ ಎಂ.ಜಿ.ರಾಮಚಂದ್ರನ್ ವಿಧಾನ ಪರಿಷತ್ತನ್ನೇ ರದ್ದುಪಡಿಸುವ ನಿರ್ಧಾರ ಕೈಗೊಂಡಿದ್ದರು. ಅದರಂತೆ 1986ರ ಮೇ 14ರಂದು ತಮಿಳುನಾಡು ವಿಧಾನ ಸಭೆ ವಿಧಾನ ಪರಿಷತ್ ರದ್ದು ಮಾಡಬೇಕೆಂದು ನಿರ್ಣಯ ಕೈಗೊಂಡು, ನಿರ್ಣಯವನ್ನು ಕೇಂದ್ರ ಸರಕಾರಕ್ಕೆ ಕಳುಹಿಸಿತ್ತು. ಇದರನ್ವಯ ಕೇಂದ್ರ ಸರ್ಕಾರ 1986ರ ನವೆಂಬರ್ 1ರಂದು ಕಾನೂನು ಪ್ರಕ್ರಿಯೆಯ ಮೂಲಕ ವಿಧಾನ ಪರಿಷತ್ ರದ್ದುಪಡಿಸಿತು. ಆಂಧ್ರಪ್ರದೇಶದಲ್ಲಿ ವಿಧಾನಸಭೆಯ ಕೆಲವು ರೀತಿ ನಿರ್ಧಾರಗಳನ್ನು ವಿಧಾನ ಪರಿಷತ್ ರದ್ದುಪಡಿಸಿತು ಎನ್ನುವ ಕಾರಣಕ್ಕೆ ಅಂದಿನ ಮುಖ್ಯಮಂತ್ರಿ ಎನ್.ಟಿ.ರಾಮರಾವ್ ವಿಧಾನ ಪರಿಷತ್ತನ್ನೇ ರದ್ದುಪಡಿಸಿದ್ದರು.

ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ 1907ರಲ್ಲಿ ಪ್ರಜಾಪ್ರತಿನಿಧಿ ಸಭೆಯ ಜೊತೆಗೆ ವಿಧಾನ ಪರಿಷತ್ ಸ್ಥಾಪಿಸುವ ನಿರ್ಧಾರ ಕೈಗೊಂಡಿದ್ದರು. ಆರಂಭದಲ್ಲಿದ್ದ 15 ಸದಸ್ಯರ ಸಂಖ್ಯಾಬಲವನ್ನು 1923ರ ವೇಳೆಗೆ 50ಕ್ಕೇರಿಸಲಾಯಿತು. ವಿವಿಧ ಕ್ಷೇತ್ರಗಳಲ್ಲಿ ಮಹತ್ತರ ಸಾಧನೆ ಮಾಡಿದ ಅಧಿಕಾರೇತರ ಸದಸ್ಯರು 8 ಮತ್ತು ಅಧಿಕಾರಿ ವರ್ಗದಿಂದ 20 ಸದಸ್ಯರನ್ನು ಚುನಾವಣೆಯ ಮೂಲಕ

ಆಯ್ಕೆ ಮಾಡಲಾಗುತ್ತಿತ್ತು. ಪ್ರಜಾಪ್ರತಿನಿಧಿ ಸಭೆಯ ಎಲ್ಲ ನೀತಿ ನಿರ್ಧಾರಗಳನ್ನು ಒರೆಗಲ್ಲಿಗೆ ಹಚ್ಚುವ ಪರಮಾಧಿಕಾರ ಮಹಾರಾಜರ ಪರಿಕಲ್ಪನೆಯ ವಿಧಾನ ಪರಿಷತ್‌ಗಿತ್ತು.

ಇಷ್ಟೊಂದು ಪ್ರಗತಿಪರ ಹಾಗೂ ವೈಚಾರಿಕ ಚಿಂತನೆಯ ವಿಧಾನ ಪರಿಷತ್ ಸ್ವಾತಂತ್ರ್ಯ ನಂತರ ಭಿನ್ನರೂಪ ತಾಳಿತು. ವಿಧಾನಸಭೆಯ ಒಟ್ಟು ಸದಸ್ಯರ ಸಂಖ್ಯಾಬಲದ ಮೂರನೇ ಒಂದು ಭಾಗದಷ್ಟು ವಿಧಾನ ಪರಿಷತ್ ಸದಸ್ಯರಿರಬೇಕು. ಅದರಂತೆ ಕರ್ನಾಟಕ ವಿಧಾನ ಪರಿಷತ್ ಸದಸ್ಯ ಬಲ 75 ಇದರಲ್ಲಿ ಮೂರನೇ ಒಂದು ಭಾಗ ಸದಸ್ಯರು ವಿಧಾನ ಸಭೆಯಿಂದ (25), ಮೂರನೇ ಒಂದು ಭಾಗ ಸದಸ್ಯರು ಸ್ಥಳೀಯ ಸಂಸ್ಥೆಗಳಿಂದ (25), 12ನೇ ಒಂದು ಭಾಗ ಸದಸ್ಯರು ಪದವೀಧರ ಕ್ಷೇತ್ರದಿಂದ(6), 12ನೇ ಒಂದು ಭಾಗ ಸದಸ್ಯರು ಶಿಕ್ಷಕರ ಕ್ಷೇತ್ರದಿಂದ(6), 6ನೇ ಒಂದು ಭಾಗ ಸದಸ್ಯರನ್ನು (12) ರಾಜ್ಯಪಾಲರು ನಾಮನಿರ್ದೇಶನ ಮಾಡಲು ಸಂವಿಧಾನ ಅವಕಾಶ ಕಲ್ಪಿಸಿದೆ. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಾಗದ ಸಣ್ಣಪುಟ್ಟ ಸಮುದಾಯಗಳಿಗೆ, ವಿವಿಧ ಕ್ಷೇತ್ರಗಳಲ್ಲಿ ಮಹತ್ತರ ಸೇವೆ ಸಲ್ಲಿಸಿದ ಮೇಧಾವಿಗಳಿಗೆ ಶಾಸಕಾಂಗ ಪ್ರಕ್ರಿಯೆಯಲ್ಲಿ ಭಾಗವಹಿಸಿ ರಾಜ್ಯದ ಅಭ್ಯುದಯಕ್ಕೆ ಕೊಡುಗೆ ನೀಡಲು ಅವಕಾಶವನ್ನು ಸಂವಿಧಾನ ಕಲ್ಪಿಸಿದೆ. ಆದರೆ ಇತ್ತೀಚಿನ ದಶಕಗಳಲ್ಲಿ ಸಂವಿಧಾನದ ಸದಾಶಯಗಳನ್ನು ಜನನಾಯಕರ ಮೂಗಿನ ನೇರಕ್ಕೆ ಅರ್ಥೈಸಲಾಗುತ್ತಿದೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ವಿಧಾನ ಪರಿಷತ್‌ಗೆ ನಾಮಕರಣ ಮಾಡಬೇಕಾದ ಸಂವಿಧಾನದ ನಿರ್ದೇಶನಕ್ಕೆ ತಿಲಾಂಜಲಿ ನೀಡಿ ಸಾಧಕರ ಹೆಸರಿನಲ್ಲಿ ಪಕ್ಷಗಳ ಕಾರ್ಯಕರ್ತರನ್ನು ವಿಧಾನ ಪರಿಷತ್‌ಗೆ ನಾಮಕರಣ ಮಾಡುವ ಕೆಟ್ಟ ಸಂಪ್ರದಾಯ ಆರಂಭವಾಗಿದೆ.

ಒಂದೆರಡು ದಶಕಗಳಿಗೆ ಮೊದಲು ಇಂತಹ ಪರಿಸ್ಥಿತಿ ಇರಲಿಲ್ಲ. ಸಾರ್ವಜನಿಕ ಕ್ಷೇತ್ರದಲ್ಲಿ ಗುಣಾತ್ಮಕ ಸಾಧನೆ ಮಾಡಿದವರನ್ನೇ ಗುರುತಿಸಿ ವಿಧಾನ ಪರಿಷತ್‌ಗೆ ನಾಮಕರಣ ಮಾಡಲಾಗುತ್ತಿತ್ತು. ಶಿಕ್ಷಣ ತಜ್ಞರಾದ ಎಂ.ಪಿ.ಎಲ್.ಶಾಸ್ತ್ರಿ, ಎಚ್.ನರಸಿಂಹಯ್ಯ, ಜಲವರ್ಣ ಕಲಾವಿದ ರುಮಾಲೆ ಚೆನ್ನಬಸಪ್ಪ, ಕಾದಂಬರಿಕಾರ ಬಸವರಾಜ ಕಟ್ಟೀಮನಿ, ನೇತ್ರ ತಜ್ಞ ಡಾ: ಎಂ.ಸಿ.ಮೋದಿ, ಸಂಗೀತ ದಿಗ್ಗಜರಾದ ಡಾ: ಮಲ್ಲಿಕಾರ್ಜುನ ಮನ್ಸೂರ್, ಡಾ: ಗಂಗೂಬಾಯಿ ಹಾನಗಲ್, ಜನಪದ ತಜ್ಞ ಡಾ: ಎಚ್. ಎಲ್.ನಾಗೇಗೌಡ, ಪತ್ರಕರ್ತ ಖಾದ್ರಿ ಶಾಮಣ್ಣ, ಸಮಾಜ ಸೇವಕ ವಿದ್ಯಾಧರ ಗುರೂಜಿ, ಸಾಹಿತಿಗಳಾದ ಡಾ. ಚಂದ್ರಶೇಖರ ಕಂಬಾರ, ಎಂ.ಅಕಬರ ಅಲಿ, ಗೋರೂರು ರಾಮಸ್ವಾಮಿ ಐಯ್ಯಂಗಾರ್, ಚಿತ್ರನಟ ಅನಂತ್‌ನಾಗ್, ರಂಗ ಕಲಾವಿದೆ ಬಿ.ಜಯಮ್ಮ, ಕಾರ್ಮಿಕ ನಾಯಕ ಮೈಕಲ್ ಫರ್ನಾಂಡೀಸ್, ಡಾ.ಏಜಾಸುದ್ದೀನ್ ಹೀಗೆ ಸಾರ್ವಜನಿಕ ಬದುಕಿಗೆ ನಿರ್ದಿಷ್ಟ ಕ್ಷೇತ್ರದಲ್ಲಿ ಮಹತ್ವದ ಕೊಡುಗೆ ನೀಡಿದ ಮಹನೀಯರನ್ನು ನಾಮಕರಣ ಮಾಡುತ್ತಿದ್ದ ಸತ್ಸಂಪ್ರದಾಯವನ್ನು ಕಾಪಾಡಿಕೊಂಡು ಬರಲಾಗಿತ್ತು.

ದುರಂತವೆಂದರೆ ಇತ್ತೀಚಿನ ದಶಕಗಳಲ್ಲಿ ರಾಜ್ಯಸಭೆ ಮತ್ತು ವಿಧಾನ ಪರಿಷತ್ತಿನ ಸ್ಥಾಪನೆಯ ಆಶಯಗಳು ಮಣ್ಣುಪಾಲಾಗುತ್ತಿದೆ. ರಾಜ್ಯಸಭೆ ಮತ್ತು ವಿಧಾನ ಪರಿಷತ್ತು ರಿಯಲ್ ಎಸ್ಟೇಟ್, ಕ್ಯಾಪಿಟೇಷನ್, ಲಿಕ್ಕರ್, ಅಕ್ರಮ ಗಣಿಗಾರಿಕೆ, ಚಿನ್ನ– ಬೆಳ್ಳಿ ವ್ಯಾಪಾರಿಗಳು ಮತ್ತು ಔದ್ಯಮಿಕ ಜಗತ್ತಿನ ಅಧಿಪತಿಗಳ ಆಡುಂಬೊಲವಾಗಿದೆ. ಇನ್ನು ಮುಂದೆ ಹೋಗಿ ಈ ಎರಡು ಸಾಂವಿಧಾನಿಕ ಸಂಸ್ಥೆಗಳು, ಸಂತತಿ ವಾರಸುದಾರರ ರಾಜಕೀಯ ಚಕ್ರಾಧಿಪತ್ಯದ ವಿಸ್ತರಣೆಯ ನೆಲೆಯೂ ಆಗಿದೆ. ಭಾರತದ ಬ್ಯಾಂಕ್‌ಗಳಿಗೆ ಸಾವಿರಾರು ಕೋಟಿ ರೂಪಾಯಿ ವಂಚಿಸಿದ ವಿಜಯ್ ಮಲ್ಯ, ಎರಡು ಬಾರಿ ರಾಜ್ಯಸಭಾ ಸದಸ್ಯರಾಗಿದ್ದಾರೆ. ಅಕ್ರಮ ಗಣಿಗಾರಿಕೆ ಆರೋಪದಲ್ಲಿ ಜೈಲುವಾಸ ಅನುಭವಿಸಿದವರು ವಿಧಾನ ಪರಿಷತ್ ಸದಸ್ಯರಾಗಿದ್ದುದಲ್ಲದೇ ಸಚಿವರೂ ಆಗಿದ್ದರು. ಇಂಥ ನಿದರ್ಶನಗಳು ಬೇಕಾದಷ್ಟಿವೆ. ಇನ್ನು ಒಂದೇ ಕುಟುಂಬದವರು ವಿಧಾನಸಭೆ– ವಿಧಾನ ಪರಿಷತ್ ಸದಸ್ಯರಾಗಿರುವ ಎಷ್ಟೋ ನಿದರ್ಶನಗಳು ಇಲ್ಲಿವೆ.

ಇದು ಇತ್ತೀಚಿನ ದಿನಗಳಲ್ಲಿ ಕಂಡುಬರುತ್ತಿರುವ ವಿಧಾನ ಪರಿಷತ್ತಿನ ಸ್ವರೂಪ. ಒಂದು ಕಡೆ ಲಾಭಕೋರರಿಗೆ ಸಾಂವಿಧಾನಿಕ ರಕ್ಷಣೆ ಕೊಡುವ ವಿಧಾನ ಪರಿಷತ್, ಇನ್ನೊಂದು ಕಡೆ ಸಂತತಿಯ ಚಕ್ರಾಧಿಪತ್ಯದ ವಿಸ್ತರಣೆಗೆ ವೇದಿಕೆಯಾಗಿದೆ. ಇದರ ಜೊತೆಗೆ ವಿಧಾನ ಸಭಾ ಚುನಾವಣೆಯಲ್ಲಿ

ತಿರಸ್ಕೃತಗೊಂಡವರು ವಿಧಾನ ಪರಿಷತ್ ಪ್ರವೇಶಿಸುವುದು ಸಾಮಾನ್ಯವಾಗಿದೆ. ವಿಧಾನ ಸಭೆಯ ತಪ್ಪು–ಒಪ್ಪುಗಳನ್ನು ಅಗ್ನಿಪರೀಕ್ಷೆಗೆ ಗುರಿಪಡಿಸಿ, ಜನಹಿತಕ್ಕೆ ಪೂರಕವಾದ ಕಾನೂನು ಕಟ್ಟಳೆಗಳನ್ನು ರೂಪಿಸಬೇಕಾದ ವಿಧಾನ ಪರಿಷತ್ ತನ್ನ ಮೂಲಭೂತ ಆಶಯವನ್ನು ಈಡೇರಿಸುವುದು ಸಾಧ್ಯವೇ ಆಗಿಲ್ಲ ಎನ್ನುವುದು ಇತ್ತೀಚಿನ ಅಹಿತಕರ ಘಟನಾವಳಿಗಳಿಂದ ಸಾಬೀತಾಗಿದೆ. ಪ್ರಸಕ್ತ ಹಿನ್ನೆಲೆಯಲ್ಲಿ ವಿಧಾನ ಪರಿಷತ್ ಇರಬೇಕೇ ಬೇಡವೇ ಅನ್ನುವುದು ಚರ್ಚಾರ್ಹ.

**ಲೇಖಕರು: ಮಹದೇವ್ ಪ್ರಕಾಶ್,**

**ಹಿರಿಯ ಪರ್ತಕರ್ತರು**

**ಆಧಾರ:ವಿಜಯ ಕರ್ನಾಟಕ, ದಿನಾಂಕ:30.12.2021**

## 20. ರೈತಬಿಕ್ಕಟ್ಟು ಪರಿಹಾರಕ್ಕೆ ಪಂಚಸೂತ್ರ

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಕಾನೂನುಗಳನ್ನು ವಾಪಸ್ಸು ಪಡೆಯಬೇಕೆಂದು ಆಗ್ರಹಿಸಿ ರೈತರು ದಿಲ್ಲಿಯ ಹೊರವಲಯದಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ. ಇದರ ಮಧ್ಯೆಯೇ ಎಸ್‌ಬಿಐ ಇಕೋರ್ಯಾಪ್ ವರದಿಯೊಂದು ಬಿಡುಗಡೆಯಾಗಿದ್ದು, ಈಗ ನಡೆಯುತ್ತಿರುವ ಬಿಕ್ಕಟ್ಟನ್ನು ಅಂತ್ಯಗೊಳಿಸುವ ಸಂಬಂಧ ಪಂಚಸೂತ್ರಗಳನ್ನು ಅದು ಶಿಫಾರಸ್ಸು ಮಾಡಿದೆ. ಕೃಷಿ ಉತ್ಪನ್ನಗಳ ಮಾರಾಟ ಮತ್ತು ದಾಸ್ತಾನು ಶೈಲಿಯನ್ನು ಬದಲಿಸುವ ಗುರಿಯೊಂದಿಗೆ ಕೇಂದ್ರ ಸರ್ಕಾರ ಕಳೆದ ಸೆಪ್ಟೆಂಬರ್‌ನಲ್ಲಿ ಮೂರು ಕಾನೂನುಗಳನ್ನು ಜಾರಿಗೆ ತಂದಿತು. ಈ ಕಾನೂನುಗಳ ಪ್ರಕಾರ, ರೈತರು ಮುಕ್ತವಾಗಿ ಯಾವುದೇ ಅನುಮತಿ ಇಲ್ಲದೇ ಅಥವಾ ಸ್ಟಾಕ್ ಲಿಮಿಟ್ ಇಲ್ಲದೇ ಎಲ್ಲೆಡೆ ಮಾರಾಟ ಮಾಡಲು ಅನುಮತಿ ದೊರೆಯಲಿದೆ. ಆದರೆ, ಈ ಹೊಸ ಕಾನೂನುಗಳಿಂದಾಗಿ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ವ್ಯವಸ್ಥೆ ಕೊನೆಯಾಗುವ ಆತಂಕ ರೈತರಿಗಿದೆ. ಹಾಗಾಗಿ, ಅವರು ಈ ಕಾನೂನುಗಳನ್ನು ಕೈಬಿಡುವಂತೆ ಆಗ್ರಹಿಸುತ್ತಿದ್ದಾರೆ.

**1.ಬೆಲೆಗೆ ಬದಲಿಗೆ ಪ್ರಮಾಣ ಖಾತರಿ ನೀಡಿ:–** ಕನಿಷ್ಠ ಬೆಂಬಲ (ನಿಗದಿ) ಖಾತರಿ ಬದಲಿಗೆ ಸರ್ಕಾರವು ಕಾಯಿದೆಯ ಮೂಲಕ ಪ್ರಮಾಣ ಖಾತರಿಯನ್ನು ರೈತರಿಗೆ ಒದಗಿಸಬೇಕು ಎಂದು ಎಸ್‌ಬಿಐ ಹೇಳಿದೆ. ಕ್ಷಾಮ, ನೆರೆ ಮತ್ತಿತರ ಪರಿಸ್ಥಿತಿಗಳನ್ನು ಹೊರತುಪಡಿಸಿ ಉತ್ಪನ್ನ ಖರೀದಿ ಪ್ರಮಾಣವು ಕನಿಷ್ಠ ಕಳೆದ ವರ್ಷಕ್ಕೆ ಹೋಲಿಸಿ, ಅಷ್ಟೇ ಪ್ರಮಾಣದ ಖಾತರಿಯನ್ನು ಒದಗಿಸಬೇಕು.

ಖರೀದಿ ಟ್ರೇಂಡ್ ಸೂಚನೆ ಪ್ರಕಾರ, ಒಟ್ಟು ಗೋಧಿ ಉತ್ಪಾದನೆಯಲ್ಲಿ ಶೇ.25 ರಿಂದ ಶೇ.35 ರಷ್ಟು ಮಾತ್ರ ಕಳೆದ ಮೂರು ವರ್ಷಗಳಲ್ಲಿ ಖರೀದಿಸಲಾಗಿದೆ. ಅದು ಕೂಡ ಪಂಜಾಬ್ ಮತ್ತು ಹರಿಯಾಣದಲ್ಲಿ ಮಾತ್ರವೇ ಅತಿ ಹೆಚ್ಚು ಖರಿದಿಯಾಗಿದೆ. ಅದೇ ವೇಳೆ, ಅಕ್ಕಿ ಖರೀದಿ ಪ್ರಮಾಣ ಶೇ. 30 ರಿಂದ ಶೇ. 40ರಷ್ಟು ಇದ್ದು, ತೆಲಂಗಾಣ, ಪಂಜಾಬ್, ಹರಿಯಾಣ ಮತ್ತು ಕೇರಳದಲ್ಲಿ ಹೆಚ್ಚಿನ ಖರೀದಿ ಸಂಭವಿಸಿದೆ ಎಂದು ವರದಿ ತಿಳಿಸಿದೆ.

ಖಾರೀಫ್ ಬೆಳೆಯಲ್ಲಿ ಪಂಜಾಬ್ ಭತ್ತದ ಉತ್ಪಾದನೆಯಲ್ಲಿ ಮೂರನೇ ಸ್ಥಾನದಲ್ಲಿದ್ದರೂ ಶೇ. 55ರಷ್ಟು ದಾಸ್ತಾನನ್ನು ದಾಖಲಿಸಿದೆ. ಭತ್ತ ಉತ್ಪಾದನೆಯ ಪ್ರಮುಖ ರಾಜ್ಯಗಳಾದ ಪಶ್ಚಿಮ ಬಂಗಾಳ, ಉತ್ತರ ಪ್ರದೇಶದಲ್ಲಿ ಈ ಪ್ರಮಾಣ ಕ್ರಮವಾಗಿ ಶೇ.8ರಷ್ಟಿದೆ. ಹೀಗಿದ್ದಾಗ್ಯೂ, ಸರ್ಕಾರದ ಖರೀದಿ ಹೆಚ್ಚಾಗಿ ಪಂಜಾಬ್, ಹರಿಯಾಣ ಹಾಗೂ ಇತರ ಕೆಲವು ರಾಜ್ಯಗಳಿಗೆ ಹೆಚ್ಚು ಕೇಂದ್ರೀತವಾಗಿದೆ. ಮಂಡಿಗಳಾಚೆ ಖಾಸಗಿ ಖರೀದಿದಾರರಿಗೆ ತೆರಿಗೆ ರಹಿತ ಖರೀದಿಗೆ ಉತ್ತೇಜನ ನೀಡುವುದರಿಂದ ಮಂಡಿಗಳು ಮಾಯವಾಗಿ ಸರ್ಕಾರದಿಂದ ಖರೀದಿ ನಿಂತುಹೋಗುವ ಆತಂಕವನ್ನು ರೈತರು ಎದುರಿಸುತ್ತಿದ್ದಾರೆ.

**2.ಕನಿಷ್ಠ ಬೆಂಬಲ ಬೆಲೆಯನ್ನು ಫ್ಲೋರ್ ಪ್ರೈಸ್ ಆಗಿ ರೂಪಾಂತರಿಸಿ:–**ಎಸ್‌ಬಿಐ ರಿಪೋರ್ಟ್ ಸೂಚಿಸಿರುವ ಮತ್ತೊಂದು ಸುಧಾರಣೆ ಅಂಶವಿದು. ಈಗ ಚಾಲ್ತಿಯಲ್ಲಿರುವ ಎಂಎಸ್ಪಿ (ಕನಿಷ್ಠ ಬೆಂಬಲ ಬೆಲೆ)ಯನ್ನು ನ್ಯಾಷನಲ್ ಅಗ್ರಿಕಲ್ಚರ್ ಮಾರ್ಕೆಟ್(ಇಎನ್‌ಎಎಂ) ಪೋರ್ಟಲ್‌ನ ಹರಾಜಿನ ಫ್ಲೋರ್ ಪ್ರೈಸ್(ಉತ್ಪಾದನಾ ವೆಚ್ಚಕ್ಕಿಂತ ಹೆಚ್ಚಿನ ಬೆಲೆ) ಆಗಿ ಪರಿವರ್ತಿಸಲು ಸಲಹೆ ನೀಡಿದೆ. ಇಎನ್‌ಎಎಂ ಪ್ಯಾನ್ ಇಂಡಿಯಾ ಎಲೆಕ್ಟ್ರಾನಿಕ್ ಟ್ರೇಡಿಂಗ್ ಪೋರ್ಟಲ್ ಆಗಿದ್ದು. ಕೃಷಿ ಉತ್ಪನ್ನ ಮಾರಾಟಕ್ಕಾಗಿ ಇದು ಈಗಾಗಲೇ ಚಾಲ್ತಿಯಲ್ಲಿರುವ ಎಪಿಎಂಸಿ ಮಂಡಿಗಳ ಜೊತೆ ಸಂಪರ್ಕವನ್ನು ಸಾಧಿಸುತ್ತದೆ. ವ್ಯಾಪಾರದ ಅನುಕೂಲಕ್ಕಾಗಿ ಮತ್ತು ಉತ್ಪನ್ನಗಳ ಗುಣಮಟ್ಟದ ಆಧಾರದ ಮೇಲೆ ಪಾರದರ್ಶಕ ಹರಾಜು ಪ್ರಕ್ರಿಯೆಯ ಮೂಲಕ ಉತ್ತಮ ಬೆಲೆ ಒದಗಿಸಲು ಸಾಮಾನ್ಯ ಆನ್‌ಲೈನ್ ಮಾರುಕಟ್ಟೆ ವೇದಿಕೆಯನ್ನು ಒದಗಿಸಲು ಇದು ನೆರವಾಗುತ್ತದೆ. ಸದ್ಯ ಇಎನ್‌ಎಎಂನಲ್ಲಿ ಸಾವಿರ ಎಪಿಎಂಸಿ ಮಂಡಿಗಳು, ರೂ 1,45 ಲಕ್ಷ ವ್ಯಾಪಾರಿಗಳು ಮತ್ತು 1.67 ಕೋಟಿ ರೈತರು ನೋಂದಣಿ ಮಾಡಿಕೊಂಡಿದ್ದಾರೆ.

ಇಎನ್‌ಎಎಂ ಪೋರ್ಟಲ್‌ನ ಹರಾಜಿನಲ್ಲಿ ಎಂಎಸ್ಪಿಯನ್ನು ಫ್ಲೋರ್ ಪ್ರೈಸ್ ಆಗಿ ರೂಪಾಂತರಿಸುವುದು ಸಮಸ್ಯೆಯನ್ನು ಸಂಪೂರ್ಣವಾಗಿ ಪರಿಹರಿಸುವುದಿಲ್ಲ ಎಂಬ ವಾಸ್ತಾವಾಂಶವನ್ನು ರಿಪೋರ್ಟ್ ಹೊರ ಹಾಕಿದೆ. ಯಾಕೆಂದರೆ, ಸದ್ಯದ ಮಾಹಿತಿಯ ಪ್ರಕಾರ ಇಎನ್‌ಎಎಂನಲ್ಲಿ ಹರಾಜಿನಲ್ಲಿ ದೊರೆಯುತ್ತಿರುವ ಬೆಲೆಯು ಕನಿಷ್ಠ ಬೆಂಬಲಗಿಂತಲೂ ಕಡಿಮೆ ಇದೆ.

**3.ಎಪಿಎಂಸಿ ಮಾರುಕಟ್ಟೆ ಮೂಲಸೌಕರ್ಯಗಳನ್ನು ಬಲಪಡಿಸಿ:–** ಕೃಷಿ ಉತ್ಪನ್ನ ಮಾರುಕಟ್ಟೆ(ಎಪಿಎಂಸಿ)ಗಳ ಮೂಲಸೌಕರ್ಯವನ್ನು ಹೆಚ್ಚಿಸುವ ಮತ್ತು ಬಲವರ್ಧಿಸುವ ಕೆಲಸ ನಿರಂತರವಾಗಿರಬೇಕು ಎಂದು ಎಸ್‌ಬಿಐ ವರದಿ ಹೇಳಿದೆ. ಒಂದು ಅಂದಾಜಿನ ಪ್ರಕಾರ, ಸುಗ್ಗಿಯ ಮತ್ತು ಸುಗ್ಗಿಯ ನಂತರದ ನಷ್ಟದಿಂದಾಗಿ ಸಿರಿಧಾನ್ಯಗಳಿಗೆ ವಿತ್ತೀಯ ನಷ್ಟವು ಸುಮಾರು ರೂ. 27,000 ಕೋಟಿ ಮತ್ತು ಎಣ್ಣೆಕಾಳು ಮತ್ತು ದ್ವಿದಳ ಧಾನ್ಯಗಳ ನಷ್ಟವು ಕ್ರಮವಾಗಿ 10,000 ಕೋಟಿ ಮತ್ತು 5,000 ಕೋಟಿ ರೂಪಾಯಿ ಆಗಿದೆ. ಉತ್ಪಾದನೆಯ ನಂತರ ಉತ್ಪನ್ನವನ್ನು ಬಹು ಸುತ್ತಿನ ಸುಗ್ಗಿ ನಂತರದ ಕಾರ್ಯಚರಣೆಗೆ ಒಳಪಡಿಸಬೇಕಾಗುತ್ತದೆ. ಗ್ರಾಹಕನನ್ನು ತಲುಪುವ ಮುಂಚೆ ಅನೇಕ ಪ್ರಕ್ರಿಯೆಗಳು ನಡೆಯುತ್ತವೆ. ಅದರಲ್ಲಿ ದಾಸ್ತಾನು ಕೂಡ ಪ್ರಮುಖವಾಗಿದೆ. ಪ್ರತಿ ಹಂತದ ಪ್ರಕ್ರಿಯೆಯ ವೇಳೆಯಲ್ಲೂ ಒಂದಿಷ್ಟು ಹಾನಿಯಾಗುವುದರ ಮೂಲಕ ಆಹಾರ ಲಭ್ಯತೆಯ ಕುಸಿತಕ್ಕೆ ಕಾರಣವಾಗುತ್ತದೆ.

2015ರ ವರದಿಯ ಪ್ರಕಾರ, ಸುಗ್ಗಿ ಮತ್ತು ಸುಗ್ಗಿ ನಂತರ ಕಾರ್ಯಾಚರಣೆ, ನಿರ್ವಹಣೆ ಮತ್ತು ಧಾನ್ಯಗಳು, ಶೇ.3.1 ರಿಂದ 10 ರಷ್ಟು ಎಣ್ಣೆಕಾಳುಗಳೂ, ಶೇ.6.7 ರಿಂದ 15.9 ರಷ್ಟು ಹಣ್ಣುಗಳು ಮತ್ತು ಶೇ.6.4 ರಿಂದ 12.4 ರಷ್ಟು ತರಕಾರಿಗಳು ನಷ್ಟಕ್ಕೀಡಾಗಿವೆ.

**4. ಒಪ್ಪಂದ ಒಕ್ಕಲುತನ ಸಂಸ್ಥೆ ಸ್ಥಾಪಿಸಿ:–** ಒಕ್ಕಲುತನವು ರೈತ ಮತ್ತು ಖರೀದಿದಾರರ ನಡುವಿನ ಒಪ್ಪಂದವಾಗಿರುತ್ತದೆ. ಅದು ಉತ್ಪಾದನೆ, ಗುಣಮಟ್ಟ ಅಥವಾ ಅಗತ್ಯವಿರುವ ಉತ್ಪನ್ನದ ಶ್ರೇಣಿ, ನಿಯಮಗಳು ಮತ್ತು ಪೂರ್ವ ನಿರ್ಧಾರಿತ ಬೆಲೆಗೆ ವಿತರಣೆಯ ಸಮಯವನ್ನು ಒಳಗೊಂಡಿರುತ್ತದೆ.

ಒಪ್ಪಂದ ಒಕ್ಕಲುತನದ ಸಂಸ್ಥೆಯನ್ನು ಸ್ಥಾಪಿಸುವುದರಿಂದ ರೈತರು ಬೆಲೆ ನಿಗದಿಯ ವಿಶೇಷ ಹಕ್ಕನ್ನು ಪಡೆದುಕೊಳ್ಳಬಹುದು ಅಥವಾ ನಿರ್ಧರಿಸಬಹುದು. ವಿಶೇಷವಾಗಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ ತುಂಬ ನೆರವಾಗುತ್ತದೆ ಎಂದು ಎಸ್‌ಬಿಐ ವರದಿಯಲ್ಲಿ ತಿಳಿಸಲಾಗಿದೆ ದೊಡ್ಡ ಸಂಸ್ಥೆಗಳು ಸಣ್ಣ ಬೆಳೆಗಾರರನ್ನು ಅನುಕೂಲಕರ ಪರಿಸ್ಥಿತಿಗಳೊಂದಿಗೆ ಆಕರ್ಷಿಸುತ್ತವೆ ಮತ್ತು ನಂತರ ಅವು ತಮ್ಮ ಪಟ್ಟು ಬಿಗಿಗೊಳಿಸುವುದರಿಂದ ದೊಡ್ಡ ಖರೀದಿದಾರರೊಂದಿಗೆ ವ್ಯವಹರಿಸಲು ಒಪ್ಪಂದ ಒಕ್ಕಲುತನದ ಸಂಸ್ಥೆ ನೆರವು ಒದಗಿಸಬಹುದು. ಮಾರುಕಟ್ಟೆ ಮತ್ತು ಬೆಲೆ ಸ್ಥಿರತೆಯೊಂದಿಗೆ ಸರಬರಾಜು ಚೈನ್‌ಗೆ ಬೆಳೆಗಾರರಿಗೆ ಅವಕಾಶ ಒದಗಿಸುವುದರ ಜೊತೆಗೆ ತಾಂತ್ರಿಕ ನೆರವು ನೀಡುವಲ್ಲಿ ಒಪ್ಪಂದದ ಒಕ್ಕಲುತನ ಪ್ರಮುಖ ಪಾತ್ರವಹಿಸುತ್ತದೆ.

**5. ಕೆಸಿಸಿ ನಿಯಮಗಳು ಸರಳವಾಗಿರಲಿ:–** 1998ರಲ್ಲಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಕಿಸಾನ್ ಕ್ರೆಡಿಟ್ ಕಾರ್ಡ್(ಕೆಸಿಸಿ) ಯೊಜನೆಯನ್ನು ಜಾರಿಗೆ ತಂದಿತು. ಬ್ಯಾಂಕುಗಳ ಏಕರೂಪ ನಿಯಮಗಳ ಮೂಲಕ ರೈತರು ಹೊಂದಿದ ಭೂ ಆಧಾರದ ಮೇಲೆ ಕೆಸಿಸಿ ಕಾರ್ಡ್‌ಗಳನ್ನು ವಿತರಿಸಲಾಯಿತು.

ಕೆಸಿಸಿ ಕಾರ್ಡ್ ಮೂಲಕ ರೈತರು ಕಿರು ಅವಧಿಗೆ ಶೇ.4ರ ದರದಲ್ಲಿ ಸಾಲವನ್ನು ಪಡೆದುಕೊಳ್ಳಬಹುದು. ಸಕಾಲದಲ್ಲಿ ಸಾಲ ಮರುಪಾವತಿ ಮಾಡಿದರೆ ಈ ಮಿತಿಯನ್ನು ಮೂರು ಲಕ್ಷ ರೂಪಾಯಿವರೆಗೂ ವಿಸ್ತರಿಸಬಹುದು. ಕಾರ್ಡ್ ಹೊಂದಿದ ರೈತರಿಗೆ ವಿಮೆ ಸೌಲಭ್ಯವಿದ್ದು, ಸೂಚಿತ ಬೆಳೆಗಳಿಗೆ ಅದು ರಕ್ಷಣೆಯನ್ನು ಒದಗಿಸುತ್ತದೆ.

ಮಾರ್ಚ್ ಅಂತ್ಯಕ್ಕೆ 6.7 ಕೋಟಿ ಸಕ್ರಿಯ ಕೆಸಿಸಿ ಕಾರ್ಡ್ ಬಳಕೆದಾರರಿಗೆ ರೂ. 7,09,500 ಕೋಟಿ ಕೆಸಿಸಿ ಸಾಲವನ್ನು ನೀಡಲಾಗಿದೆ. ಅಂದರೆ, ಒಟ್ಟು ನೀಡಲಾದ ಸಾಲದ ಮೊತ್ತದಲ್ಲಿ ಈ

ಪ್ರಮಾಣವು ಶೇ.40ರಷ್ಟಾಗುತ್ತದೆ. ಫೆಬ್ರವರಿ–ಏಪ್ರಿಲ್ ಅವಧಿಯಲ್ಲಿ ಬ್ಯಾಂಕುಗಳು 75 ಲಕ್ಷ ಕೆಸಿಸಿ ಅರ್ಜಿಗಳನ್ನು ಪಡೆದುಕೊಂಡಿದ್ದು. ಈ ಪೈಕಿ 36 ಲಕ್ಷ ಕಾರ್ಡ್‌ಗಳನ್ನು ರೈತರಿಗೆ ನೀಡಲಾಗಿದೆ.

ಹೀಗಿದ್ದಾಗ್ಯೂ, ಬೆಳೆ ನಷ್ಟ ಅನಿಯಂತ್ರಿತ ಬೆಲೆಗಳು, ಸಾಲ ಮನ್ನಾ ಮತ್ತು ಕೆಸಿಸಿಗೆ ಸಂಬಂಧಿಸಿದ ಕಠಿಣ ನಿಯಮಗಳಿಂದಾಗಿ ಬ್ಯಾಂಕುಗಳ ಕೆಸಿಸಿ ಬಂಡವಾಳವು ಹೆಚ್ಚಿನ ಒತ್ತಡಕ್ಕೆ ಒಳಗಾಗಿದೆ. ಆದ್ದರಿಂದ ಎಸ್‌ಬಿಐ ಇಕೋರ್ಯಾಪ್ ವರದಿ ಹೇಳುವುದು ಏನೆಂದರೆ, ಆರ್‌ಬಿಐ ಸರ್ಕಾರದ ಜೊತೆ ಸೇರಿ, ಕಾರ್ಯಾಚರಣೆಯಲ್ಲಿ ವ್ಯವಸ್ಥಿತವಾಗಿ ಸರಳತೆಯನ್ನು ಪರಿಚಯಿಸಬೇಕು. ಭಾರತದಲ್ಲಿ ಕೃಷಿ ಪೂರೈಕೆ ಚೈನ್‌ಗೆ ಉತ್ತೇಜನ ನೀಡಲು ನಿರ್ದಿಷ್ಟವಾಗಿ ಸಾಲ ಪ್ರಾರಂಭಿಕರಿಗೆ ತಮ್ಮ ಸಾಲದ ನಿರ್ದಿಷ್ಟ ಶೇಕಡವಾರು ಮೊತ್ತವನ್ನು ನಿಗದಿಪಡಿಸುವಂತೆ ಬ್ಯಾಂಕುಗಳಿಗೆ ನಿರ್ದೇಶನ ನೀಡಬೇಕು ಎಂದು ಸೂಚಿಸುತ್ತದೆ. ಪ್ರಸಕ್ತ ಯೋಜನೆಯನ್ನು ಪರಿಷ್ಕರಿಸುವ ಮೂಲಕ ರೈತರ ಆದಾಯದಲ್ಲಿ ಕನಿಷ್ಠ ಶೆ.35ರಷ್ಟು ಹೆಚ್ಚಳವಾಗಬಹುದು ಎಂಬ ಲೆಕ್ಕಾಚಾರವನ್ನು ಎಸ್‌ಬಿಐ ವರದಿ ಹಾಕಿದೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:30.12.2020

## 21. ಕರ್ನಾಟಕ ವಿಧಾನ ಪರಿಷತ್ತಿನ ರಚನೆ, ಆಶಯ ಹಾಗೂ ಪೀಠದ ಮಹತ್ವ

114 ವರ್ಷಗಳ ಇತಿಹಾಸವುಳ್ಳ ವಿಧಾನ ಪರಿಷತ್ತು ಸರ್ವ ಶ್ರೇಷ್ಠ ಹೆಮ್ಮೆಯ ಪರಂಪರೆಯನ್ನು ಹೊಂದಿದೆ. ಹಿರಿಯರ ಮನೆ, ಮೇಲ್ಮನೆ, ಚಿಂತಕರ ಛಾವಡಿ ಎಂದೆಲ್ಲ ಕರೆಯಲ್ಪಡುವ ಕರ್ನಾಟಕ ವಿಧಾನ ಪರಿಷತ್ತು 1907ರಲ್ಲಿ ರಚನೆಗೊಂಡ ದೇಶದ ಮೊದಲ ಶಾಸನ ಸಭೆ ಎಂಬ ಹಗ್ಗಳಿಕೆಗೆ ಪಾತ್ರವಾಗಿರುತ್ತದೆ.

ವಿಧಾನ ಪರಿಷತ್ತಿನ ರಚನೆ ಹಾಗೂ ಸ್ಥಾಪನೆಯ ಇತಿಹಾಸವನ್ನು ಹೇಳುವುದಾದರೆ, ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ 1907ರಲ್ಲಿ ಪ್ರಜಾಪ್ರತಿನಿಧಿ ಸಭೆಯ ಜೊತೆಗೆ ವಿಧಾನ ಪರಿಷತ್ತನ್ನು ಸ್ಥಾಪಿಸುವ ನಿರ್ಧಾರ ಕೈಗೊಂಡಿದ್ದರು. ಪ್ರಜಾಪ್ರತಿನಿಧಿ ಸಭೆಯ ಎಲ್ಲಾ ನೀತಿ ನಿರ್ಧಾರಗಳನ್ನು ಒರೆಗಲ್ಲಿಗೆ ಹಚ್ಚುವ ಪರಮಾಧಿಕಾರ ಮಹಾರಾಜರ ಪರಿಕಲ್ಪನೆಯು ವಿಧಾನ ಪರಿಷತ್‌ಗಿತ್ತು. ಅಲ್ಲಿಂದ ಇಲ್ಲಿಯವರೆಗೆ ಸದಸ್ಯರಾದ ಅನೇಕ ಮಹನೀಯರು ಪರಿಷತ್‌ನ ಮೌಲ್ಯ, ಹಿರಿಮೆ ಮತ್ತು ಗರಿಮೆಯನ್ನು ಹೆಚ್ಚಿಸಿರುತ್ತಾರೆ.

ಪ್ರಜಾಪ್ರಭುತ್ವದಲ್ಲಿ ಸಂವಿಧಾನವೇ ಸೂಕ್ತ ಮಾರ್ಗಸೂಚಿ. ಅದನ್ನು ಅನುಸರಿಸುವುದೇ ಜನಪ್ರತಿನಿಧಿಗಳ ಕರ್ತವ್ಯ. ಸಹಜವಾಗಿ ವಿಧಾನ ಪರಿಷತ್ತಿಗೆ ವಿಧಾನ ಸಭಾ ಕ್ಷೇತ್ರ, ಸ್ಥಳೀಯ ಸಂಸ್ಥೆ, ಪದವೀಧರರ ಕ್ಷೇತ್ರ, ಶಿಕ್ಷಕರ ಕ್ಷೇತ್ರ ಹಾಗೂ ನಾಮನಿರ್ದೇಶನ ಹೀಗೆ ಹಲವಾರು ಕ್ಷೇತ್ರಗಳಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗುವುದರಿಂದ ಮೇಧಾವಿಗಳೂ, ಉತ್ತಮ ವಾಗ್ಮಿಗಳು, ಸಂಸದೀಯ ಪಟುಗಳನ್ನು ಸಹಜವಾಗಿಯೇ ಒಳಗೊಂಡಿರುತ್ತದೆ. ಶಿಸ್ತು ಬದ್ಧ ನಡವಳಿಕೆಗಳು, ಸಲಹಾತ್ಮಕ ಟೀಕೆಗಳನ್ನೊಳಗೊಂಡ ಉನ್ನತ ಮಟ್ಟದ ಮತ್ತು ರಚನಾತ್ಮಕವಾದ ವಿಷಯಾಧಾರಿತ ಭಾಷಣಗಳಿಂದ ಹಿರಿಯರ ಮನೆ–ಚಿಂತಕರ ಚಾವಡಿ ಎಂಬ ಹೆಗ್ಗಳಿಕೆ ವಿಧಾನ ಪರಿಷತ್ತಿಗೆ ಸಂದಿರುತ್ತದೆ. ಅಂದಿನ ನಡವಳಿಗಳು ಯುವ ರಾಜಕಾರಣಿಗಳಿಗೆ ಮಾರ್ಗದರ್ಶನವಾಗಿದೆ.

ಬಸವಣ್ಣನವರು ಸಾಮಾಜಿಕವಾಗಿ ಕ್ರಾಂತಿಕಾರಕ ಬದಲಾವಣೆ ತಂದು ಅನುಭವ ಮಂಟಪವನ್ನು ಸ್ಥಾಪಿಸಿದರು. ಜಗತ್ತಿನ ಮೊದಲನೆ ಪ್ರಜಾಪ್ರಭುತ್ವ ಯುಗ 12ನೇ ಶತಮಾನದಲ್ಲೆ ಆಗಿತ್ತು. ಎಲ್ಲಾ ಧರ್ಮದ ಶರಣರು/ಕವಿಗಳು ಮತ್ತು ತತ್ವಜ್ಞಾನಿಗಳು ಸೇರುತ್ತಿದ್ದ ಒಂದು ಸಾಮಾಜಿಕ ಸುಧಾರಣೆಯ ಮತ್ತು ಧಾರ್ಮಿಕ ಸಂಸತ್ತು ಇದಾಗಿತ್ತು. ಇದರಲ್ಲಿ ಎಲ್ಲಾ ಜಾತಿಯ ಎಲ್ಲಾ ವೃತ್ತಿಯ ಸಾಮಾನ್ಯ ಜನರು ಭಾಗವಹಿಸಿ ತಮ್ಮ ಸಮಸ್ಯೆಗಳನ್ನು ಹಾಗೂ ಸಾಮಾಜಿಕ ದುಷ್ಟ ಆಚರಣೆ ಹಾಗೂ ಪಿಡುಗುಗಳ ಬಗ್ಗೆ ಚರ್ಚಿಸುತ್ತಿದ್ದರು.

ಅನುಭವ ಮಂಟಪದ ಪ್ರಥಮ ಅಧ್ಯಕ್ಷರಾಗಿದ್ದವರು ಅಲ್ಲಮ ಪ್ರಭುಗಳು. ಅಕ್ಕಮಹಾದೇವಿ ಅನುಭವ ಮಂಟಪಕ್ಕೆ ಬಂದಾಗ ಅಲ್ಲಮ ಪ್ರಭು ಅವರ ಜೊತೆ ಸಂವಾದ ನಡೆಸಿದರು. ಅನುಭವ ಮಂಟಪವನ್ನು ಮಹಾಮನೆ ಎಂದು ಸಹ ಕರೆಯಲಾಗುತ್ತದೆ. ಮಹಿಳಾ ಪ್ರಾನಿನಿಧ್ಯವನ್ನು ಹೊಂದಿದ ಮೊದಲ ವ್ಯವಸ್ಥೆ ಇದಾಗಿತ್ತು.

ಶಾಸನ ಸಭೆಗಳ ಪ್ರಮುಖವಾದ ಕರ್ತವ್ಯವೆಂದರೆ ಶಾಸನಗಳ ಸಾಧಕ–ಬಾಧಕಗಳ ಬಗ್ಗೆ ಚರ್ಚಿಸಿ ಉತ್ತಮ ಶಾಸನಗಳನ್ನು ರೂಪಿಸುವುದು. ಈ ದಿಸೆಯಲ್ಲಿ ವಿಧೇಯಕಗಳನ್ನು ಉತ್ತಮವಾದ ಚರ್ಚೆಗಳು ನಡೆಯಬೇಕು. ಅನುಭವಿಗಳು ಹಾಗೂ ವಿಷಯ ತಜ್ಞರುಗಳನ್ನೊಳಗೊಂಡಂತಹ ವಿಧಾನ ಪರಿಷತ್ತಿನಲ್ಲಿ ಅವರ ಅನುಭವದ ಆಧಾರದ ಮೇಲೆ ಹೆಚ್ಚು ಬೆಳಕು ಚೆಲ್ಲುವಂತಹ ಚರ್ಚೆಗಳು ಆಗಬೇಕು.

ಸಾಂವಿಧಾನಿಕ ವ್ಯವಸ್ಥೆಯಲ್ಲಿ ಸಭಾಪತಿ ಹಾಗೂ ಸಭಾಧ್ಯಕ್ಷರ ಹುದ್ದೆಗಳು ಸಂವಿಧಾನಿಕ ಹುದ್ದೆಗಳಾಗಿರುತ್ತದೆ. ಸದನವನ್ನು ಸಂವಿಧಾನದ ಚೌಕಟ್ಟಿನಲ್ಲಿ, ಭಾರತ ಸಂವಿಧಾನದ ಅನುಚ್ಛೇದ 208(i) ರ ಮೇರೆಗೆ ರೂಪಿಸಿಕೊಂಡಿರುವ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಗಳ ನಿಯಮಾವಳಿಗಳ ಅನ್ವಯ ಕಾರ್ಯಕಲಾಪಗಳನ್ನು ನಡೆಸಬೇಕಾಗಿರುತ್ತದೆ. ಇದಲ್ಲದೆ, Well Established Conventions/ತೀರ್ಪುಗಳನ್ನು ಆಧರಿಸಿ ಎದುರಾಗಬಹುದಾದ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಶಾಂತಿಯುತವಾಗಿ ಉತ್ತಮ ಗುಣಮಟ್ಟದ ಚರ್ಚೆಗಳಲ್ಲಿ ಎಲ್ಲಾ ವಿಷಯದ ಮೇಲೂ ಸದಸ್ಯರುಗಳು ಪಾಲ್ಗೊಳ್ಳುವಂತೆ ಅವಕಾಶವನ್ನು ಕಲ್ಪಿಸಿ ಪ್ರೇರೇಪಿಸುವುದು

ಪೀಠಾಸೀನಾಧಿಕಾರಿಗಳ ಕರ್ತವ್ಯ. ಪೀಠದ ಘನತೆ ಗೌರವಕ್ಕೆ ಯಾವುದೇ ಚ್ಯುತಿ ಬಾರದಂತೆ ಪಕ್ಷಾತೀತವಾಗಿ ಸದನವನ್ನು ನಡೆಸಿಕೊಂಡು ಹೋಗಬೇಕು.

ಈ ಕಾರಣಕ್ಕಾಗಿಯೇ ವಿಧಾನ ಪರಿಷತ್ತಿನ ಸಭಾಪತಿ ಹಾಗೂ ವಿಧಾನ ಸಭೆಯ ಸಭಾಧ್ಯಕ್ಷರ ಹುದ್ದೆಯನ್ನು ಅಲಂಕರಿಸುವವರು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬೇಕೆನ್ನುವುದು ನೈತಿಕತೆಯ ಸಿದ್ಧಾಂತವಾಗಿರುತ್ತದೆ.

ಆದರೆ ಇತ್ತೀಚಿನ ದಿನಗಳಲ್ಲಿ ರಾಜಕೀಯ ಪಕ್ಷಗಳ ತೀರ್ಮಾನ ಹಾಗೂ ರಾಜಕೀಯ ಮೇಲಾಟಗಳಿಗೆ ಈ ಸಾಂವಿಧಾನಿಕ ಹುದ್ದೆಗಳನ್ನು ಬಳಸಿಕೊಳ್ಳುತ್ತಿರುವುದು ವಿಷಾದನೀಯ. ಪಕ್ಷಕ್ಕಿಂತ ಹುದ್ದೆ ದೊಡ್ಡದು, ಹುದ್ದೆಗಿಂತ ಸಂವಿಧಾನ ದೊಡ್ಡದು. ಪೀಠದ ನಡೆ, ನುಡಿ ತೀರ್ಮಾನಗಳಿಂದ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯಬೇಕೇ ಹೊರತು ಪೀಠವೇ ಸಂವಿಧಾನಿಕ ಬಿಕ್ಕಟ್ಟನ್ನು ಸೃಷ್ಟಿಸುವಂತಾಗಬಾರದು.

ದಿನಾಂಕ: 24–03–2020ರಂದು ನಡೆದ ಅಧಿವೇಶನದಲ್ಲಿ ವಿಧಾನ ಸಭೆಯಿಂದ ಅಂಗೀಕೃತಗೊಂಡು ವಿಧಾನ ಪರಿಷತ್ತಿನ ಸಹಮತಿಗಾಗಿ ಬಂದಂತಹ ವಿಧೇಯಕಗಳನ್ನು ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸಿದಾಗ್ಯೂ ಸಹ, ಸರ್ಕಾರವು ವಿಧೇಯಕಗಳನ್ನು ಅಂಗೀಕಾರಕ್ಕಾಗಿ ತೆಗೆದುಕೊಳ್ಳಬೇಕೆಂದು ಪದೇ ಪದೇ ಪೀಠದ ಬಳಿ ಬಂದು ವಿನಂತಿಸಿದರೂ ಸಹ, ಸರ್ಕಾರದ ಮನವಿಗೆ ಕವಡೆ ಕಾಸಿನ ಕಿಮ್ಮತ್ತಿಲ್ಲದೆ ಸದನವನ್ನು ಅನಿರ್ಧಿಷ್ಟಾವಧಿ ಕಾಲಕ್ಕೆ ಮುಂದೂಡಲಾಯಿತು.

ಅದೇ ರೀತಿ ದಿನಾಂಕ:26–09–2021ರಂದು ರಾತ್ರಿ 11–45 ಗಂಟೆಗೆ ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕ, 2020ನ್ನು ಪರ್ಯಾಲೋಚನೆ ಹಾಗೂ ಅಂಗೀಕಾರಕ್ಕಾಗಿ ತೆಗೆದುಕೊಳ್ಳಲಾಯಿತು ಹಾಗೂ ಒಂದು 12–55ರವರೆಗೆ ಚರ್ಚೆ ನಡೆಯುತ್ತಿತ್ತು. ಇದ್ದಕ್ಕಿದ್ದ ಹಾಗೆ ಪೀಠಾಸೀನಾಧಿಕಾರಿಗಳು ಸದರಿ ವಿಧೇಯಕವನ್ನು ಸದನದಲ್ಲಿ ಅಂಗೀಕಾರಕ್ಕಾಗಿ ಮಂಡಿಸದೆ ಸದನವನ್ನು ಅನಿರ್ಧಾಷ್ಟಾವಧಿಗೆ ಮುಂದೂಡಲಾಯಿತು.

ಶಾಸನಗಳನ್ನು ರಚಿಸುವುದು ಶಾಸನ ಸಭೆಗಳ ಕರ್ತವ್ಯವಾಗಿದ್ದು, ಇಂತಹ ಕರ್ತವ್ಯಗಳನ್ನು ಪೂರ್ಣಗೊಳಿಸುವುದು ಪೀಠಾಸೀನಾಧಿಕಾರಿಗಳ ಜವಾಬ್ದಾರಿಯಾಗಿದ್ದು, ಪೀಠಾಸೀನಾಧಿಕಾರಿಗಳ ಕಾರ್ಯ ವಿಫಲತೆಗಾಗಿ ಅವಿಶ್ವಾಸ ನಿರ್ಣಯವನ್ನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 165ರ ಮೇರೆಗೆ ಸಭಾಪತಿಯ ಹುದ್ದೆಯಿಂದ ತೆಗೆದು ಹಾಕಲು ನೀಡಲಾಯಿತು. ಸದರಿ ಅವಿಶ್ವಾಸ ನಿರ್ಣಯವನ್ನು ನಿಯಮಾನುಸಾರ ಮಂಡಿಸದೆ ಸದನವನ್ನು ಅನಿರ್ಧಿಷ್ಟಾವಧಿಗೆ ಮುಂದೂಡಲಾಯಿತು.

ಪೀಠಾಸೀನಾಧಿಕಾರಿಗಳ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಯಾದಾಗ ಅಗ್ನಿಪರೀಕ್ಷೆಯನ್ನು ನಿಯಮಗಳ ಅನುಸಾರ ಸಂಸತ್ತು ಹಾಗೂ ವಿಧಾನ ಮಂಡಲದ ಸದನಗಳಲ್ಲಿ ಇಲ್ಲಿಯವರೆಗೂ ಪಾಲಿಸಿಕೊಂಡು ಬಂದಂತಹ ಸಂಪ್ರದಾಯಗಳನ್ನು ಅನುಸರಿಸುವ ಮೂಲಕ ಅತ್ಯಂತ ಗಾಂಭೀರ್ಯದಿಂದ ಸ್ಥಾನದ ಗೌರವಕ್ಕೆ ಚ್ಯುತಿಯಾಗದಂತೆ ಎದುರಿಸಿ ಪೀಠದ ಘನತೆ ಗಾಂಭೀರ್ಯವನ್ನು ಹಾಗೂ ಪಾವಿತ್ರ್ಯತೆಯನ್ನು ಎತ್ತಿಹಿಡಿಯುವುದರ ಮೂಲಕ ಸಂವಿಧಾನದ ಆಶೋತ್ತರವನ್ನು ಕಾಪಾಡಬೇಕಾಗಿರುತ್ತದೆ.

ಆದರೆ ಸರ್ಕಾರದ ಸೂಚನೆಯ ಮೇರೆಗೆ 15–12–2020ರಂದು ಬೆಳಿಗ್ಗೆ 11.00 ಗಂಟೆಗೆ ವಿಧಾನ ಪರಿಷತ್ತಿನ ಅಧಿವೇಶನವನ್ನು ಕರೆಯಲಾಯಿತು. ಅದೇ ದಿನ ವಿಧಾನ ಪರಿಷತ್ತಿನ ಇತಿಹಾಸದಲ್ಲಿ ಪ್ರಪ್ರಥಮ ಬಾರಿಗೆ ಯಾವುದು ಅಗಬಾರದಿತ್ತೋ ಅದೆಲ್ಲವೂ ಆಗಿ ಹೋಗಿದೆ. ಪೀಠದ ಮೇಲೆ ಸಂಬಂಧ ಪಡೆದವರು ಕುಳಿತುಕೊಳ್ಳುವುದು, ಉಪ ಸಭಾಪತಿಯವರನ್ನು ದೈಹಿಕವಾಗಿ ಎಳೆದೊಯ್ಯುವುದು, ಬಾಗಿಲುಗಳನ್ನು ಕಾಲಿನಿಂದ ಒದೆಯುವುದು, ಪೀಠವನ್ನು ಎಳೆದು ಮುರಿಯುವ ಪ್ರಯತ್ನ, ವಿಧಾನ ಪರಿಷತ್‌ನ ಹಿರಿಮೆಯ ಕಿರೀಟಕ್ಕೆ ಧಕ್ಕೆಯನ್ನುಂಟು ಮಾಡುವುದು. ಇದೆಲ್ಲವೂ ಈ ಕಾಲಘಟ್ಟದಲ್ಲಿ ಸದನದ ಸದಸ್ಯರಾದವರೆಲ್ಲರೂ ನಾಚಿ ತಲೆ ತಗ್ಗಿಸುವಂತಹ ನಾಚಿಗೇಡಿತನ, ಅತ್ಯಂತ ನೋವಿನ ಘಟನೆ.

ಭವ್ಯ ಇತಿಹಾಸವನ್ನು ಹೊಂದಿರುವ ವಿಧಾನ ಪರಿಷತ್ತಿಗೆ ಆಯ್ಕೆಯಾಗಿ ಬಂದಿರುವ ನಾವು ಸದನದ ಘನತೆ/ಗೌರವ/ಗಾಂಭೀರ್ಯಗಳನ್ನು ಮತ್ತಷ್ಟು ಹೆಚ್ಚಿಸಿ ಗತವೈಭವದ ಪರಂಪರೆಯನ್ನು ಮುನ್ನಡೆಸುವ ನಿಟ್ಟಿನಲ್ಲಿ ಸದನದಲ್ಲಿ ನಡೆದುಕೊಳ್ಳಬೇಕು, ವೈಚಾರಿಕ ಸಂಘರ್ಷದ ಚಿಂತನೆಯ ಕಿಡಿ ಹಾರಬೇಕೇ ಹೊರತು ದೈಹಿಕ ಸಂಘರ್ಷದ ಕಿಡಿಯಲ್ಲ ಎಂಬುದು ನನ್ನ ಅಭಿಮತವಾಗಿದೆ.

**ಲೇಖಕರು: ಆಯನೂರು ಮಂಜುನಾಥ, ಶಾಸಕರು**
**ಕರ್ನಾಟಕ ವಿಧಾನ ಪರಿಷತ್ತು.**

* * * * *

ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಕಾ.ಸೂ. 500 – ಪ್ರತಿಗಳು